ಜೊತೆಗಳಿಂದ ಎಂದರೆ ನಾಲ್ಕು ಶ್ಲೋಕ ರೂಪಗಳಿಂದ ಮತ್ತು ಪ್ರಾರ್ಥನಾ ರೂಪ ಶ್ಲೋಕವಂದರಿಂದಲೂ ಅರ್ಘ್ಯವನ್ನು ಸಮರ್ಪಿಸಿ ಪ್ರಾರ್ಥಿಸಿ ಶಾಸ್ತ್ರಾನುಸಾರವಾಗಿ ಗೋವು ಸುವರ್ಣ ವಸ್ತ್ರ, ಆನೆ ಹೆಣ್ಣಾನೆ ಹಸು ಯಳ್ಳು ಮೊದಲಾದ್ದನ್ನು ॥೧೨೩॥ ಕುಬೇರಗೆ ಸದೃಶನಾದ ಪೃಥ್ವೀಪತಿಯಾದ ಆರಾಯನು ಯೋಗ್ಯವಾಗಿ ಆಶ್ರಿತರಾದ ಬ್ರಾಹ್ಮಣರಿಗೋಸ್ಕರ ದಾನವನ್ನು ಕೊಟ್ಟನು ಮತ್ತೂ ಇತರ ಸಾಮಾನ್ಯ ಬ್ರಾಹ್ಮಣರಿಗೂ ಭೂರಿ ದಕ್ಷಿಣೆಯನ್ನು ಕೊಟ್ಟನು ॥ ೧೨೪ ॥ ಈ ರೀತಿಯಾಗಿ ಮತ್ತು ಸಂಗೀತ ವಾದ್ಯನೃತ್ಯ ಮೊದಲಾದ ಸೇವೆಗಳಿಂದ ಪುರಾಣ ಶ್ರವಣದಿಂದ ಸ್ತುತಿಸುವದರಿಂದ ಈ ಕ್ರಮವಾದ ಮಹಾ ಪೂಜೆಯಿಂದ ರಾತ್ರಿಯನ್ನು ದೇವರ ಸನ್ನಿಧಿಯಲ್ಲಿ ಕಳದನು. ಹಾಗೆ ಪ್ರಾತಃಕಾಲ ಬರುತ್ತಲೆ ॥೧೨೫॥ ನಿತ್ಯಕರ್ಮವನ್ನು ಮುಗಿಸಿ ಶ್ರೀ ದೇವರಿಗೆ ಮಹಾ ಪೂಜೆಯನ್ನು ಮಾಡಿ ಪುಷ್ಪಾಂಜಲಿ ಸಮಯದಲ್ಲಿ ಸುವರ್ಣ ಮಯವಾದ ಚಿತ್ತಾರದ ಬಳ್ಳಿಗಳಿಂದ ಕೂಡಿರುವ ರತ್ನಗಳಿಂದ ಸೇರಿರುವ ಹೊಳೆಯುತ್ತಿರುವ ಮನೋಹರವಾದ ಉತ್ತಮವಾದ ಕಲಶವನ್ನು ದೇವಸ್ಥಾನದ ಮೇಲೆ ಭಾಗ ಶಿಖರದಲ್ಲಿ ಸ್ಥಾಪಿಸಿದನು. ಈ ಕಲಶವನ್ನು ಸುವರ್ಣ ದಕ್ಷಿಣಾ ರೂಪವಾಗಿ ದೇವರ ಮುಂದುಗಡೆ ಭೂಮಿಯಲ್ಲಿ ಆ ಯತನದ ಪು

ವನೀಶ್ವರಃ ॥ ಪುರೋಭಾಗಯಿತ್ಯತ್ರ ದೇವಾಲಯಾಗ್ರಭಾಗಯಿತ್ಯ
ರ್ಥಃ ॥ ಬಹುಕೃತ್ವಾನಮಸ್ಕಾರಂ ಪ್ರಾರ್ಥನಾಮಕರೋತ್ಪ್ರಭುಃ
॥ ೧೨೭ ॥ ದೇವೇದಂತದಯೋಗ್ಯಂಹಿ ನಕೀಟೈಃಪಂಕಲ್ಪಿತಂ ॥ ಶಿ
ಪಕವರ್ಮಯಾದೀನಾಂ ಕೌಶಲಾರ್ಹಸ್ಯತೇವಿಭೋ ॥ ೧೨೮ ॥ ಇ
ತಿಸಂಪ್ರಾರ್ಥ್ಯಭಕ್ತ್ಯಾತು ರಾಜರಾಜೇನಧೀಮತ ॥ ದೇವಗಾರಸ್ಯಶಿ
ಖರೇ ಸ್ಥಾಪಿತಃಕಲಶಸ್ತದಾ ॥ ೧೨೯ ॥ ಸಂಸ್ಥಾಪ್ಯಕಲಶಂಚಾಗ್ರೇ
ಗತ್ವಾದೇವಾಂತಿಕಂಪುನಃ ॥ ಭಕ್ತ್ಯಾಸ್ತೋತುಂಮನಶ್ಚಕ್ರೆ ಕಲ
ಶೇಶಂವರಪ್ರದಂ ॥ ರಾಜಃ ॥ ೧೩೦ ॥ ದೇವದೇವಮಜಂಶಾಂತಮ
ನಂತಮಪರಾಜಿತಂ॥ ಭೀತೋಗಣಸದಾಕಾಂಕ್ಷಿನಮಾಮಿತ್ವಾಂಭವಾ

ರೋವೃತ್ತಿ ಗೋಸ್ಕರ ನೆಲದಲ್ಲಿ ಇಟ್ಟಿದ್ದಾನೆಂತ ಕೆಲವರು ಹೇಳುತ್ತಾರೆ. ಈ ರೀತಿ ಸೇವೆಯನ್ನು ಮಾಡಿ ಶಕ್ತನಾದ ಆ ರಾಯನು ಅನೇಕ ನಮಸ್ಕಾರಗಳಂ ಮಾಡಿ ಪ್ರಾರ್ಥಿಸುತ್ತಾನೆ॥೧೨೭॥ ಯಲೈ, ಮಯ ಮೊದಲಾದ ಶಿಲ್ಪಿಗಳ ಚಮತ್ಕಾರ ಕಾರ್ಯದ ಅನುಭವಾರ್ಹನಾದ ದೇವನೇ? ಈ ಸುವರ್ಣ ಸಮರ್ಪಣೆಯು ನಿನಗೇ ಯೋಗ್ಯವಾದದ್ದು ಮತ್ತೂ ಈ ಸಾದುಮಾನ್ಯದಿಂದ ಮಾಡಿರುವದಲ್ಲಾ. ಯಲೈ ಸ್ವಾಮಿಯೇ, ಇದನ್ನು ನಿನಗೆ ಸಮರ್ಪಿಸಿದೆನು ॥೧೨೮॥ ಅದರಿಂದ ಈಪ್ರಕಾರವಾಗಿ ಸಮಸ್ತ ರಾಯರಿಗೆ ಅರಸನಾದ ಬುದ್ಧಿಶಾಲಿಯಾದ ಆರಾಯನೂ ಪ್ರಾರ್ಥಿಸಿ ದೇವಸ್ಥಾನದ ಶಿಖರದಲ್ಲಿ ಆ ಕೆಲಸವನ್ನು ನೆಟ್ಟನು ॥೧೨೯॥ ಈ ರೀತಿಯಿಂದ ಮೇಲ್ಭಾಗದಲ್ಲಿ ಕಲಶವನ್ನು ಇಟ್ಟು ತಿರಗೂ ದೇವರ ಸನ್ನಿಧಿಗೆ ಬಂದು ಭಕ್ತಿಯಿಂದ ಶ್ರೀಕಲಶೇಶ್ವರ ಸ್ವಾಮಿಯನ್ನು ಕುರಿತು ಸ್ತುತಿಸುವದಕ್ಕೋಸ್ಕರ ಮನಃಸಮ್ಮಾಡಿದನೂ ಅದೆಂತೆನೆ ॥ ೧೩೦ ॥ ಯಲೈ ಪರಮಾತ್ಮನೇ ಸಂಸಾರ ಸಮುದ್ರದ ದೆಸೆಯಿಂದ ಉಂಟಾಗುವ ಜನನಮರಣಾದಿ ದುಃಖ ಪ್ರವಾಹ ಪರಂಪರೆಗಳಿಂದ ಭೀತನಾಗಿ ನಿತ್ಯಾನಂದಮಯವಾದ ಶಾಶ್ವತ ಸಿದ್ಧ ಪದವಿಯಾದ ನಿನ್ನ ಪರಿವಾರತ್ವವನ್ನು ನಾನು

ರ್ಣವಾತ್॥೧೩೧॥ಗುಣಪಾರಮದೃಷ್ಟ್ವಾತೇ ನಿಗಮೋಯೋನಿವರ್ತ
ತೇ॥ಪರಿಪದ್ಮಜಮುಖ್ಯಾಸ್ತು ಬಾಣಾದ್ಯಾಶ್ಚೈತಿಸುರಾಸ್ತಥಾ ॥೧೩೨॥
ಅಧಿಕೋಽಪ್ಯಪಕಾರೀತೇ ಗಾಣಾಪತ್ಯಮಗಾತತಃ ॥ ಶ್ರೀವರಾಹಃ ॥
॥ ೧೩೩॥ ಗತ್ವಾನರಾಃಕಲಶಜಾಂಗಲ ತುಂಗಭದ್ರಾಂಕೃತ್ವಾಪ್ರಿಯೇ
ಶಿವನಿಶಾದಿವಸೋಽಪವಾಸಂ ॥ ಜಪ್ತ್ವೈತದೀಶ್ವರಕೃತೇಽಶ್ರುತ ಬಂಧುಜ
ಪ್ತಂವಾಂಛ್ಯೇತ್ತದೀಶ್ವರಗಣತ್ವಮಸಂಶಯೋತ್ರ ॥ ೧೩೪ ॥ ಸ್ತು
ತ್ವೈವಂತಂಮಹಾದೇವಂ ಶ್ರುತಬಂಧುರ್ವಿಚಕ್ಷಣಃವಿಪ್ರಾಣಾಂಪಾ

ಬಯಸಿ ಶಾಂತನಾದ ಅಪಾರಮಹಿಮನಾದ ಅಬಾಧಿಕನಾದ ಸರ್ವೇಶ್ವರನಾದ ನಿನ್ನನ್ನು ನಮಸ್ಕರಿಸುವೆನು ॥೧೩೧॥ ಎಲೈ ದೇವನೇ, ಯಾವ ವೇದವು ನಿನ್ನ ನಿತ್ಯಾನಂದ ಬಾಧಿತಾನೇಕ ಗುಣಂಗಳನ್ನು ನೋಡಿ ಪಾರವಿಲ್ಲವೆಂದು ನಿಶ್ಚೈಸಿ ಹಿಂತಿರಿಗಿ ನಿನ್ನನ್ನು ಸ್ತುತಿಸುತ್ತಿರುವದೋ ಅಂಥಾ ನೀನು ಸಂಸಾರ ಸಮುದ್ರ ದೆಸೆಯಿಂದ ಭೀತನಾಗಿ ಶಿದ್ಧ ಪದವಿಯನ್ನು ಬಯಶಿ ನಮಸ್ಕರಿಸುವೆನು ॥ ೧೩೨ ॥ ಮಹಾವಿಷ್ಣು ಬ್ರಹ್ಮ ಮೊದಲಾದ ದೇವತೆಗಳೂ ಬಾಣಾಸುರ ಮೊದಲಾದ ದೈತ್ಯರು ಯಾವನಿಂ ಪರಿವಾರತ್ವವನ್ನು ಪಡೆದಿರುವರೋ ಸುಗುಣ ಭಾವದಲ್ಲಿರುವ ನಿನ್ನನ್ನು ಕುರಿತು ದ್ರೋಹವನ್ನು ಮಾಡಿದ ದಕ್ಷ ಪ್ರಜಾಪತಿಯೂ ಕೂಡ ದಯಾಪರನಾದ ಯಾವ ಪದವಿಯನ್ನು ಹೊಂದಿರುವರೋ ಅಂದನು. ಬಯಶಿ ನಮಸ್ಕರಿಸುವೆನೂ ॥೧೩೩॥ ಇಂತೆಂದು ಈ ಚರಿತ್ರೆಯನ್ನು ಭೂದೇವಿಗೋಸ್ಕರ ಹೇಳುತ್ತಿರುವ ಶ್ರೀವರಾಹಮೂರ್ತಿಯೂ ಈರೀತಿಯಾಗಿ ಹೇಳಿ ತಿರಿಗಿ ಹೇಳುತ್ತಾನೆ. ಎಲೊ ಪ್ರೀತಿ ವಿಷಯಳಾದ ದೇವಿಯೇ, ಯಾವನು ಕಲಶಕ್ಷೇತ್ರದ ಪರ್ವತದ ಸ್ಥಳದಲ್ಲಿ ಪ್ರವಾಹಿಸುತ್ತಿರುವ ತುಂಗಭದ್ರಾ ನದಿಯನ್ನು ಕುರಿತು ಹೋಗಿ ಸ್ನಾನಾದಿ ಕರ್ಮವನ್ನು ಮಾಡಿ ಶ್ರೀ ಕಲಶೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ಈ ಮಹಾ ಶಿವರಾತ್ರೆಯ ಉಪವಾಸವನ್ನು ಮಾಡಿ ಶೃತ ಬಂಧು ಹೇಳಿದ ಈ ಮೂರು ಮಂತ್ರಗಳನ್ನು ಜಪಸಿ ದೇವಕ್ತ ಸಮೂಹದಲ್ಲಿ ಯಾವ ಪದವಿಯನ್ನು ಬಯಸುವನೋ ಅದು ಶಿಕ್ಕುವುದು ಅನುಮಾನವಿಲ್ಲ ॥೧೩೪॥ ಬುದ್ಧಿಶಾಲಿಯಾದ ಆಶೃತಬಂಧುವು

ರಣಂಪೂರ್ವಕಂ ಕಾರಯಿತ್ವಾತುಷಡ್ರಸೈಃ ॥ ೧೩೫ ॥ ಅನ್ಯೈಶ್ಚ ವಿವಿಧೈಃಶಾಕ್ಯೈರಿಚ್ಛಾಭೋಜನವಸ್ತುಭಿಃ ॥ ಫಲೈಃಪನಸರಂಭಾದ್ಯೈ ಸ್ತಾಂಬೂಲೈರ್ಹಿಮವಾಲುಕೈಃ ॥೧೩೬॥ ಸಂತೋಷಯಿತ್ವಸಂಪೂರ್ಣಂ ದಕ್ಷಿಣಾಭಿಃಸುಧಾರ್ಮಿಕಃ ॥ ಅಕಾರಿಪಾರಣಂತೇನಪುತ್ರಮಿತ್ರಾದಿಬಾಂಧವೈಃ ॥೧೩೭॥ ದಶಾಯುತಮಿದಂರಾಜ್ಯಮದಿಶದ್ದೇವ ವೈಭವೇ ॥ ತದಾಜ್ಞೋದ್ವಹನೇಚ್ಛೈವವೈದಿಕಾನತುಪಾಲನೇ॥೧೩೮॥ ತತ್ರಾಧಿಕಾರ ಪುರುಷಂಸ್ಥಾಪ್ಯಯಾ ಯಾತ್ವಾಮಂದಿರಂ ॥ ತತಃಪ

ಶ್ರೀಪರಮೇಶ್ವರನು ಈರೀತಿಯಾಗಿ ಸ್ತುತಿಸಿ ಪೂಜೆಯನ್ನು ಮುಗಿಸಿ ಬ್ರಾಹ್ಮಣ ಶರ್ಕರಾದಿ ಷಡ್ರಸಾಂನಗಳಿಂದ ॥ ೧೩೫ ॥ ಬೇರೆ ಶಾಕಗಳಿಂದ ಮತ್ತು ಬೇಕಾದ ಯೋಗ್ಯ ಪದಾರ್ಥಗಳಿಂದ ರಸಬಾಳೆ ಹಂಣುಗಳು, ಹಲಶಿನ ಹಂಣು ಮೊದಲಾದ ಹಂಣುಗಳಿಂದ ಸಹ ಭೋಜನವನ್ನು ಮಾಡಿಸಿ ಆಮೇಲೆ ಪಚ್ಚಕರ್ಪೂರದ ತಾಂಬೂಲಗಳಿಂದ ॥೧೩೬॥ ಸದ್ಧರ್ಮದಲ್ಲಿಯೇ ಪ್ರವರ್ತಿಸುವ ಈ ರಾಯನು ದಕ್ಷಿಣೆ, ಉಡಗರೆ ವಸ್ತ್ರಾದಿಗಳಿಂದಲೂ ಸಂತೋಷಪಡಿಸಿ ಆ ಬ್ರಾಹ್ಮಣರನ್ನು ನಮಸ್ಕರಿಸಿ ಅವರ ಅಪ್ಪಣೆಯಿಂದ ಮಕ್ಕಳು, ಸ್ನೇಹಿತರು ಮೊದಲಾದ ಆಪ್ತರಿಂದ ಸಹಿತನಾದ ಆ ರಾಯನಿಂದ ಪಾರಣೆಯೂ ಮಾಡಲ್ಪಟ್ಟಿತು॥೧೩೭॥ ಅನಂತರ ಶ್ರೀದೇವರ ಸೇವೆಯು ಈದಿನ ಮೊದಲುಗೊಂಡು ಆಚಂದ್ರಾರ್ಕವಾಗಿ ನಡಿಯಬೇಕೆಂದೆಣಿಸಿ ಸುತ್ತಳತೆಯಲ್ಲಿ ಹದಿನೈದು ಹರದಾರಿವುಳ್ಳ ಹತ್ತುಸಾವಿರ ಮುದ್ರಿಕಾ ಕಂದಾಯವುಳ್ಳ ಈಗಲವೆಂಬ ಭೂಪ್ರದೇಶವನ್ನು ದೇವರ ಸೇವೆ (ರೂಪಾಯಿ) ಯು ನಡವಳಿಕೆ ವಿಷಯವಾಗಿ ಶ್ರೀದೇವರಿಗೋಸ್ಕರ ಕೊಟ್ಟನು. ಕೊಟ್ಟ ಭೂಮಿಯು ಆಡಳಿತ ನಡಿಯುವ ವಿಷಯದಲ್ಲಿ ಸೇವೆಯು ಸಾಂಗವಾಗಿ ನಡಿಸುವ ವಿಷಯದಲ್ಲಿ ಒಬ್ಬ ಅಧಿಕಾರಿಯನ್ನು ಗೊತ್ತುಮಾಡಿಟ್ಟನಂತರ ತನ್ನರಾಜಧಾನಿಯನ್ನು ಕುರಿತು ಪ್ರಯಾಣಮಾಡಿದನು ॥ ೧೩೮ ॥ ಆದಿನ ಮೊದಲುಗೊಂಡು ಎಲೌ ಭೂದೇವಿಯೇ, ಆ ಕ್ಷೇತ್ರಪೂರ್ವದಲ್ಲಿ ದೇವತೆಗಳು ಮಿತ್ರಾವರುಣ ಉದ್ದಿಶ್ಯ ಇಟ್ಟ ಕಲಶದಿಂದ

ರಂಮಹಾದೇವಿತತ್‌ಕ್ಷೇತ್ರಂಕಲಶಾಹ್ವಯಂ ॥೧೩೯॥ ಪ್ರಸಿದ್ಧಿಮಗಮದ್ಭೂಮೌಪುರೇದಂಶ್ರುತಬಂಧುನಾ॥ಪುರಾದೇವಾಸುರೇಯುದ್ಧೇತಪಾತಸ್ಯಮಹಾಜಸಃ॥೧೪೦॥ಯದ್ದದೌಭೂಷಣಂದಿವ್ಯಂಬಿಡೌಜಾಃಶ್ರುತಬಂಧವೇ ॥ ತದ್ರುತ್ನಬದ್ಧಕಲಶಂದುಷ್ಟ್ವಾಸರ್ವೇಮಹಾಜನಾಃ ॥೧೪೧॥ ಊಚುಸ್ತೇಕಲಶಕ್ಷೇತ್ರಮಿತಿಪ್ರೀತ್ಯಾತತಃಶ್ಶಿವೇ॥ಸುವರ್ಣಕಲಶಂಚಿತ್ರಂಲತಾವಲ್ಲೀ ಸಮನ್ವಿತಂ ॥೧೪೨॥ ದೇವಾಲಯಾಗ್ರಶಿಖರೇದತ್ತವಾನ್‌ತೇನಜಾಭವತು ॥ ಚಿತ್ರಹರೀನಾಮ್ನೈತಛೃತಬಂಧೋರ್ಗುಣಾಂಬುಧೇಃ ॥೧೪೩॥ ಚಿತಿರ್ವೈಚಿತ್ರಲತಯಾಹರಿಶಬ್ದಃಸು

ಪ್ರಸಿದ್ಧವಾಗಿರುವದು ಶ್ರುತಬಂಧು ಇಟ್ಟ ಕಲಶದಿಂದ ಆ ಕಲಶಕ್ಷೇತ್ರವೆಂದು ಸ್ವಪ್ನವಾಯಿತು ॥ ೧೩೯ ॥ ಹೀಗೆ ಪೂರ್ವದಲ್ಲಿ ಶ್ರುತಬಂಧುವಿನಿಂದ ಈ ವ್ಯಾಖ್ಯಾನವೂ ಪ್ರಸಿದ್ಧಿಯನ್ನು ಹೊಂದಿತು. ಹಿಂದೆ ದೇವಾಸುರ ಯುದ್ಧವು ನಡೆಯುವಾಗ್ಯೆ ದೇವೇಂದ್ರನು ತನ್ನ ಸಹಾಯಕ್ಕೋಸ್ಕರ ಈ ಶ್ರುತಬಂಧುವಂ ಕರೆದುಕೊಂಡು ಈತನಿಂದ ಜಯವನ್ನು ಹೊಂದಿ ಇವನಿಗೆ ಬಹುಮಾನವಾಗಿ ಕೊಟ್ಟಿರುವ ಶಿರೋಭೂಷಣವೆಂಬ (ಶಿರಪೆಷ್) ಆಭರಣವನ್ನು ದೇವರಿಗೋಸ್ಕರ ಸಮರ್ಪಿಸಿದ್ದರಿಂದಲೂ, ಸಮಸ್ತ ಜನರೂ ಆ ದೇವನನ್ನೂ ಕಲಶೇಶನೆಂತಲೂ ಆ ಕ್ಷೇತ್ರವೂ ಕಲಶವೆಂತಲೂ ಹೇಳುವರು ॥ ೧೪೧ ॥ ಎಲೋ ಪಾರ್ವತೀಯೆ, ಆಮೇಲೆ ಸ್ವರ್ಣಮಯವಾದ ಚಿತ್ತಾರದಿಂದ ಕೂಡಿರುವ ಕಲಶವನ್ನು ॥೧೪೨॥ ಈ ದೇವಸ್ಥಾನದ ಮೇಲುಗಡೆ ಇಟ್ಟನು. ಅದರಿಂದ ಈತನಿಗೆ ಚಿತ್ರಹರಿಯೆಂಬ ಹೆಸರು ಬಂದು ಇದೆ ॥ ೧೪೩ ॥ ಎಲೋ ಕಮಲಮುಖಿಯೇ, ನಾನಾಪ್ರಕಾರವಾದ ಚಿತ್ತಾರದಿಂದ ಬೇರೆಯುಂಡು ಉರುಟಾಗಿರುವದರಿಂದ ಹರಿಯೆಂದು ಮತ್ತೂ ಹರೀಯೆಂದು ಭಂಗಾರಕ್ಕೂ ಹೇಳುವರು ॥ ೧೪೪ ॥ ಈ ಪ್ರಕಾರವಾಗಿ ಮುಕ್ತಿಗೆ ಯೋಗ್ಯನಾದ ಆ ಶ್ರುತಬಂಧುವಿಗೆ ಇವನ ಪ್ರಾರ್ಥನೆಯಿಂದ ಭಕ್ತರ ಸಂಖ್ಯೆಯಲ್ಲಿ ಮುಖ್ಯತ್ವವೂ ಆಯಿತು. ಇದೂಕೂಡ ಮುಕ್ತಿಯೆ ಆಗಿರುವದು ॥ ೧೪೫ ॥ ಎಲೇ ಸರ್ವಮಂಗಳೆಯೆ, ಶ್ರೀಕಲಶೇಶ್ವರನಲ್ಲಿ

ವೃತ್ತಿತಃ ॥ ಹರಿಶಬ್ದಃಸುವರ್ಣೇಪಿವರ್ತತೇವನಜಾನನೇ ॥೧೪೪॥ ಕೈವಲ್ಯಾರ್ಹಸ್ಯತಸ್ಯಾಸೀಚ್ಛ್ರುತಬಂಧೋರ್ಮಹಾತ್ಮನಃ ॥ ಸ್ವರ್ಣಾಥ ಯಾಗಣಪದಮೇತದಪ್ಯಮೃತಂಖಲು॥೧೪೫॥ ತೃಣಮಾತ್ರಂಚಯೇ ಮರ್ತ್ಯಾಃಸ್ವರ್ಣಂಲಿಂಗೇಸಮರ್ಪಣಂ ॥ ಕುರ್ವಂತಿತೇಮಯಾಸಾ ಮ್ಯಂಕಿಂವರಂಸರ್ವಮಂಗಲೇ ॥೧೪೬॥ ಪೂರ್ವೈವಪೂಜಕೋಮೇ ಯಂಸದ್ಭಕ್ತ್ಯಾಂಬುಜಲೋಚನೇ ॥ ತಸ್ಮಾಚ್ಚಿತ್ರಹರಿರ್ದೇವೋಮ ಯಾಸಾಮ್ಯದ್ಯವಾದಿಕಃ ॥೧೪೭॥ (ವಾಚಿಕಃವಕ್ತವ್ಯ ಇತ್ಯರ್ಥಃ)॥ ಯೇತದ್ರಹಸ್ಯಂಗೌಪ್ಯಂತೇಪುಣ್ಯಂಗುರುಪದಪ್ರದಂ॥ಶೃಣ್ವಾತಾಂ ಪಠತಾಂನಿತ್ಯಂಮಹಾಪಾಪಪ್ರಣಾಶನಂ ॥೧೪೮॥ ನಾಸ್ತಿಕಾಯನವ ಕ್ತವ್ಯಮಸ್ಯೈಷಾಮವಿಪಶ್ಚಿತಾಂ ॥ ಕಾಂತೇಪ್ರೀತ್ಯಾಮಯೋ ಕ್ತಂತೇಸಭಾಯಾಂವರವರ್ಣಿನಃ ॥೧೪೯॥ ಶ್ರೀವರಾಹಃ ॥ ಯಿತ್ಯ

ಒಂದು ಹುಲ್ಲನಷ್ಟಾದರೂ ಸುವರ್ಣವನ್ನು ಯಾವ ಮನುಷ್ಯರು ಸಮರ್ಪಿಸುವರೋ, ಅಂಥ ಮನುಷ್ಯರು ನನ್ನಿಂದ ಸಮಾನತ್ವವನ್ನು ಹೊಂದುವರು. ಇದಕ್ಕಿಂತಲೂ ಶ್ರೇಷ್ಟವಾದದ್ದುಂಟೇ ॥ ೧೪೬ ॥ ಎಲೆ ಕಮಲಲೋಚನೆಯಾದ ಪಾರ್ವತಿಯೇ, ಈ ಚಿತ್ರಹರಿಯೂ ಪೂರ್ವದಿಂ ದಲೂ ನನ್ನ ಆರಾಧನೆಯಲ್ಲಿ ಆಸಕ್ತನಾಗಿದ್ದದ್ದರಿಂದಲೂ, ನನ್ನ ಸದ್ವಶ ತ್ವವೂ ಈ ವಳ್ಳಿ ಭಕ್ತಿಯಿಂದವನಿಗೆ ನಿಶ್ಚಯಿಸಲ್ಪಟ್ಟಿದೆ ॥ ೧೪೭ ॥ ಈಪ್ರಕಾರವಾದ ಈತನ ಚರಿತ್ರೆಯು ಬಹಳ ಗೋಪ್ಯವಾಗಿ ಪುಣ್ಯಕ ರವಾಗಿ ಶ್ರೇಷ್ಟಪದವಿಯನ್ನು ಕೊಡುವದಾಗಿರುವದನ್ನು ನಿನಗೋಸ್ಕರ ಹೇಳಿದೆನು. ಇವನ್ನು ಹೇಳುವವರಿಗೂ ಕೇಳುವವರಿಗೂ ನಿತ್ಯದಲ್ಲಿಯೂ ಮಹಾ ಪಾಪಗಳನ್ನು ನಾಶಿಸುವದು ॥೧೪೮॥ ಎಲೇ ಮನೋಹರಳೆ, ನಿನ್ನಲ್ಲಿ ಇರುವ ಪ್ರೀತಿಯಿಂದ ಶ್ರೇಷ್ಟರಿಂದ ಸ್ತುತಿಸಲು ಯೋಗ್ಯನಾದ ಇವನ ಚರಿತ್ರೆಯೂ ನಿನಗೋಸ್ಕರ ಹೇಳಲ್ಪಟ್ಟಿತು. ಇದು ನಾಸ್ತಿಕ ರಿಗೆ ಮತ್ತೂ ಪ್ರಾಜ್ಞರ (ಸಭೆಯಲ್ಲಿ)ಲ್ಲದಿರುವ ಇತರರಿಗೂ ಹೇಳತಕ್ಕ ದ್ದೇ ಅಲ್ಲಾ ॥ ೧೪೯ ॥ ಇಂತೆಂದು ಕೈಲಾಸಪತಿಯೂ ದೇವಿಗೋಸ್ಕರ

ಕ್ತ್ವಾಚಮಹಾದೇವಃ ಪಾರ್ವತೀಂಪ್ರಾಣವಲ್ಲಭಃ ॥ ಕಲಶಕ್ಷೇತ್ರ ಮಾಹಾತ್ಮ್ಯಂಪ್ರಸಂಗಾನುಪ್ರಸಂಗತಃ ॥೧೫೦॥ ತದೇತತ್ಕಥಿತಂ ದೇವೀಪುಣ್ಯಮಾಖ್ಯಾನಮದ್ಭುತಂ ॥ ಮಯಾವಿಶ್ವಂಭರಕ್ಷೇತ್ರಂ ಮಾರ್ಕಂಡೇಯಮತಃಪರಂ ... ... ॥೧೫೧॥

ಇತಿ ಶ್ರೀ ವರಾಹಪುರಾಣೇ ತುಂಗಭದ್ರಾಖಾಂಡೆ

ಶ್ರೀ ಕಲಶೇಶ್ವರ ಮಹಿಮಾನುವರ್ಣನಂ

ನಾಮತ್ರಿತೀಯೋಧ್ಯಾಯಃ.

ಶ್ರೀ ಕಲಶೇಶ್ವರಾರ್ಪಣಮಸ್ತು.

ಶ್ರೀ ಶ್ರೀ ಶ್ರೀ ಶ್ರೀ.

ಹೇಳಿದ ಚರಿತ್ರೆಯನ್ನು ಶ್ರೀ ವರಾಹಮೂರ್ತಿಯು ಭೂದೇವಿಗೋಸ್ಕರ ಹೇಳಿದನು. ಎಲೇ ಭೂದೇವಿಯೇ, ಶ್ರೀಪರಮೇಶ್ವರನು ಶ್ರೀದೇವಿ ಯನ್ನು ಕುರಿತು ಪ್ರಸ್ತಾಪನದಲ್ಲಿ ಈಪ್ರಕಾರವಾದ ಕಲಶಕ್ಷೇತ್ರದ ಮಹಿ ಮೆಯನ್ನು ಹೇಳಿದನು ॥ ೧೫೦ ॥ ಎಲೆ ಭೂದೇವಿಯೆ, ಈಪ್ರಕಾರ ಪುಣ್ಯವಂತರಲ್ಲಿ ಪ್ರಸಿದ್ಧವಾಗಿರುವ ಈ ಮಹಿಮೆಯು ಆಶ್ಚರ್ಯವಾದ ಪುಣ್ಯಪ್ರದವಾದದ್ದು-ಜಗದೀಶ್ವರನ ಸಾನಿಧ್ಯವಾದದ್ದು-ನಿನಗೋಸ್ಕರ ಹೇಳಲ್ಪಟ್ಟಿತು. ಮುಂದೆ ಇದು ಮುಗಿಯುತ್ತಲೆ ಖಾಂಡ್ಯವೆಂಬ ಮಾ ರ್ಕಂಡೇಯ ಕ್ಷೇತ್ರದ ಚರಿತ್ರೆಯನ್ನು ಹೇಳುವೆನು ॥ ೧೫೧ ॥

ಶ್ರೀಸ್ಕಂದಃ॥ ದೇವದೇವಮಹಾದೇವಸರ್ವಜ್ಞಜಗದೀಶ್ವರ। ವಾರಾಣಶೀಂಯತಶ್ಯೋಗಸ್ತ್ಯಃಕಿಮರ್ಥಂತ್ಯಕ್ತ್ವಾನ್ಮುನಿಃ ॥ ೧ ॥ ಶ್ರೀಮಹಾದೇವಃ ॥ ವಕ್ಷ್ಯಾಮಿಸರ್ವಂತದ್ವೃತ್ತಂಸಾವಧಾನಮನಾಃ ಶೃಣು । ಶ್ರೀಮತ್ಕಲ್ಯಾಣವಿಭವಮಗಸ್ತ್ಯಚರಿತಂಶುಭಂ ॥ ೨ ॥ ಗತೇಬಹುತಿಥೇಕಾಲೇಪೂಜಯನ್‌ಕಲಶೇಶ್ವರಂ । ಶ್ರುತ್ವೋತ್ಸವಮ ಗಸ್ತ್ಯಸ್ತುಕಾಶೀಕ್ಷೇತ್ರಂಗತೋಮುನಿಃ ॥ ೩ ॥ ತತ್ಪೂರ್ವಂಹಿಮ ವಾನದ್ರಿಃಪುತ್ರಾರ್ಥಮಕರೋತ್ತಪಃ । ಧ್ಯಾಯಂಭಗವತಃಪಾದಪ

ನಾಲ್ಕನೆಯ ಅಧ್ಯಾಯ ಪ್ರಾರಂಭಃ.

೪ನೇ ಅಧ್ಯಾಯದಲ್ಲಿ ಗಿರಿಜಾದೇವಿಯು ಪುತ್ರಿಯಾದುದೂ, ಕಲ್ಯಾಣೋತ್ಸವಾದಿ ಚರಿತ್ರೆಯೂ ಹೇಳಲ್ಪಡುವುದು-ಅದರಂತೆನೆ:—ಕುಮಾರ ಸ್ವಾಮಿಯು, ಎಲೈ ಸರ್ವಜ್ಞನಾದ ಸರ್ವೋತ್ತಮನಾದ ದೇವನೇ, ಯಾವಾಗಲೋ ಒಂದಾವರ್ತಿ ನೀನು ಹೇಳಿದ ಚರಿತ್ರೆಯಲ್ಲಿ ಅಗಸ್ತ್ಯನು ಶ್ರೀ ಕಾಶಿಗೆ ಹೋಗಿರುವುದಾಗಿ ಏನೋ ಒಂದು ಕಾರಣದಿಂದ ಕಾಶಿ ಯನ್ನು ಬಿಟ್ಟು ಬಂದನೆಂತ ಕೇಳಿದ್ದೆ. ಅಗಸ್ತ್ಯನು ಆ ಕ್ಷೇತ್ರವನ್ನು ಯಾಕೆ ಬಿಟ್ಟನು ॥ ೧ ॥ ಈರೀತಿ ಪ್ರಾರ್ಥಿಸಿಕೊಂಡ ಶ್ರೀಮಹಾದೇ ವನು ಪ್ರತ್ಯುತ್ತರವನ್ನು ಹೇಳುವನು, ಎಲೌ ಪುತ್ರನೇ, ಆ ಅಗಸ್ತ್ಯ ಮುನಿಯ ಚರಿತ್ರರೂಪವಾದ, ಸಂಪತ್ಪದವಾದ, ಕಲ್ಯಾಣೋತ್ಸವದ ಸಕಲ ವೃತ್ತಾಂತವನ್ನೂ ಹೇಳುತ್ತೇನೆ. ಸಮಾಧಾನ ಚಿತ್ತನಾಗಿ ಕೇಳು ॥೨॥ ಅಗಸ್ತ್ಯನು ಪೂರ್ವೋಕ್ತಪ್ರಕಾರವಾಗಿ ಈಶ್ವರಾರಾಧನೆ ಮಾಡಿಕೊಂಡು ಸುಖವಾಗಿ ಬಹುಕಾಲ ಇರುತ್ತಿರಲು ಒಂದಾನೊಂದು ಸಮಯದಲ್ಲಿ ಕಾಶೀಕ್ಷೇತ್ರದಲ್ಲಿ ಹನ್ನೆರಡುವರ್ಷಕ್ಕೊಂದಾವರ್ತಿ ನಡೆ ಯುವ ಕಲ್ಯಾಣೋತ್ಸವವನ್ನು ಕೇಳಿ ಆ ಕ್ಷೇತ್ರವನ್ನು ಕುರಿತುಹೋ ದನು ॥ ೩ ॥ ಅದಕ್ಕಿಂತಲೂ ಪೂರ್ವದಲ್ಲಿ ಹಿಮವಂತನು ಪುತ್ರಾಪೇಕ್ಷೆ ಯಿಂದ ಪರಮಾತ್ಮನ ಚರಣಕಮಲವನ್ನು ಧ್ಯಾನಿಸುತ್ತಾ ತಪಸ್ಸನ್ನು

ದ್ಯಂತತ್ಪರಮಾತ್ಮನಃ ॥ ೪ ॥ ಶ್ರೀಸದಾಶಿವಸನ್ಮೂರ್ತೆರ್ವೇದವೇದ್ಯಂಸುಖಪ್ರದಂ । ಸೋಮವಾರವ್ರತಂಚೈವತಥಾಪಕ್ಷಪ್ರದೋಷಕಂ ॥ ೫ ॥ ಕುರುವನ್ನಾರಪಾಯದ್ದೇವಮುಮಾಪತಿಮನಾಮಯಂ । ಏವಂವರ್ಷಸಹಸ್ರೇತುಸಂಪೂರ್ಣೆಶಂಕರಪ್ರಿಯಾ ॥ ೬ ॥ ಅನುಜ್ಞಾತಾಭಗವತಾತದಾಸಾಚಿಂತ್ಯಚಾತ್ಮನಃ । ದಕ್ಷೇಜನ್ಮಾಭಿಮಾನಂಚಭಗವನ್ನಿಂದಸಾದಿಕಂ ॥ ೭ ॥ ನಭವೇತ್ತದ್ಯಥಾತಾ್ರಪಿಸಾಧಯಿಷ್ಯೆತಥಾತ್ಮನಃ । ನಿಶ್ಚಿತ್ಯೈವಂಹಿಸಾದೇವೀಸಾಕ್ಷಾಜ್ಞಾನಸ್ವರೂಪಿಣೀ ॥ ೮ ॥ ಆಯಯೌಮೇನಕಾಗರ್ಭಮೃತೌಹಿಮವತಾಧೃತಂ । ವವೃಧೇಂತಃಸ್ಥಿತಾದೇವೀಜನನೀತೋಷಕಾರಿಣೀ ॥ ೯ ॥

ಮಾಡಿದನು ॥ ೪ ॥ ಯಾವಾಗ್ಯೂ ಮಂಗಲಸ್ವರೂಪನಾದ ಪರಮಾತ್ಮನ ಪ್ರೀತಿಕರವಾದ ಸಕಲ ವೇದಪ್ರಸಿದ್ಧವಾದ ಸೋಮವಾರ ವ್ರತ ಮತ್ತು ಪಕ್ಷಪ್ರದೋಷ ವ್ರತ ಇವುಗಳನ್ನು ಮಾಡುತ್ತಾ ತಪಸ್ಸನ್ನು ಮಾಡುತ್ತಿದ್ದನು ॥ ೫ ॥ ಈಪ್ರಕಾರವಾಗಿ ಹಿಮವತ್ಪರ್ವತನು ನಿರಾಮಯನಾದ ಉಮಾಪತಿಯಾದ ಪರಮಾತ್ಮನನ್ನು ಕುರಿತು ತಪಸ್ಸನ್ನು ಮಾಡುತ್ತಿದ್ದನು. ಈಪ್ರಕಾರವಾದ ತಪಸ್ಸು ಒಂದು ಸಹಸ್ರವರ್ಷ ಕಳೆಯುತ್ತಿರಲಿಕ್ಕಾಗಿ ಪರಮಾತ್ಮನ ಪ್ರೀತಿಗೆ ಪಾತ್ರಳಾದ ॥ ೬ ॥ ಆ ದೇವಿಯೂ ಈ ಹಿಮವತ್ಪರ್ವತನಲ್ಲಿ ಜನಿಸುಯೆಂತ ಆಜ್ಞಾಪ್ತಳಾದವಳಾಗಿ ಪೂರ್ವದಲ್ಲಿ ದಕ್ಷನಲ್ಲಿ ತನ್ನ ಉತ್ಪತ್ತಿಯನ್ನೂ ಮತ್ತು ಆತನು ದುರಭಿಮಾನದಿಂದ ಭಗವಂತನಲ್ಲಿ ಮಾಡಿರುವ ನಿಂದ್ಯಾದಿಗಳನ್ನೂ ಚಿಂತಿಸಿ ॥ ೭ ॥ ಪ್ರತ್ಯಕ್ಷಜ್ಞಾನರೂಪಳಾದ ಆ ದೇವಿಯು ಈ ಅವತಾರಸ್ಥಳದಲ್ಲಿಯೂ ಅಂಥಾ ದೋಷವ್ಯೂ ಹ್ಯಾಗೆ ಆಗದೆ ಹೋದಿತೋ ಹಾಗೆ ಸಾಧಿಸುವೆನೂ ಎಂತ ತನಗೆ ನಿಶ್ಚಯಿಸಿಕೊಂಡು ॥ ೮ ॥ ಹಿಮವತ್ಪರ್ವತನಿಂದ ರುತುಕಾಲದಲ್ಲಿ ಇಡಲ್ಪಟ್ಟ ಮೇನಕಾದೇವಿಯ ಗರ್ಭವನ್ನು ಪ್ರವೇಶಿಸಿದಳು. ತಾಯಿಯಾದ ಮೇನಕಾದೇವಿಗೆ ಸಂತೋಷವನ್ನು ಹೆಚ್ಚಿಸುತ್ತಲಿರುವ ಆ ದೇವಿಯು ಗರ್ಭದಲ್ಲಿಯೇ ಇರುವವಳಾಗಿ ದಿನದಿನದಲ್ಲಿಯೂ ಬೆಳೆಯುತ್ತಿದ್ದಳು ॥ ೯ ॥ ಅನಿಂದ್ಯರೂಪಳಾದ ಆ ದೇವಿಯು

ಜಾತಾಹಿಮವತಃಕ್ಷೇತ್ರೇದಶಮೆಮಾಸ್ಯನಿಂದಿತಾ । ತದಾದುಂದುಭಯೋರ್ನೇದುಃಪುಷ್ಪವೃಷ್ಟಿಶ್ಚಖಾಚ್ಚ್ಯುತಾ ॥ ೧೦ ॥ ಶುಭಂಬಭೂವಲೋಕಾನಂಸಂತುಷ್ಟಸಚರಾಚರಂ । ಸಾತ್ಮಾನಂದರ್ಶಯಾಮಾಸತದಾಪಿತ್ರೋಃಶುರೇಶ್ವರೀ ॥ ೧೧ ॥ ಹಿಮವಾನ್‌ಮೇನಾರದೇವ್ಯೋಸ್ತಟಿದ್ವರ್ಣಾಪುರಸ್ಥಿತಾ । ಶಾಮಲಾಕೋಮಲಾಕಾರಾತ್ರಿಸಂವತ್ಸರರೂಪಿಣೀ ॥ ೧೨ ॥ ಭೃಂಗಾಳಿಕಲ್ಪಚಿಕುರಾಂಪೂರ್ಣಚಂದ್ರನಿಭಾನನಾಂ ॥ ಅರ್ಧಚಂದ್ರಾಳಿಕಾಲೀಲಾರೇಚಿತಭ್ರೂಲತಾಯುತಾಂ ॥ ೧೩ ॥ ವಿತ್ರಸ್ತಹರಿಣಪ್ರಖ್ಯವಿಪುಲಾಯತಲೋಚನಾಂ । ವಿದ್ಯುದ್ವಲಯಸಂಕಾಶತಾಟಂಕಾಭರಣೋಜ್ವಲಾಂ ॥ ೧೪ ॥ ತಿಲ

ಹಿಮವತ್ಪರ್ವತನ ಪತ್ನಿಯ ಗರ್ಭದಲ್ಲಿ ಹತ್ತು ತಿಂಗಳು ಪರಿಯಂತರ ಬೆಳೆದು ಆ ತಿಂಗಳು ತುಂಬುವ ಸಮಯದಲ್ಲಿ ಪ್ರಾದುರ್ಭವಿಸಿದಳು. ಆ ಜನನ ಸಮಯದಲ್ಲಿ ದೇವದುಂದಭಿಗಳು ಮೊಳಗಿದವು. ಆಕಾಶದಿಂದ ಹೂವಿನ ಮಳೆ ಬಿದ್ದಿತು॥೧೦॥ಸಮಸ್ತ ಲೋಕಗಳಿಗೂ ಸಂತುಷ್ಟಿಯಾದ ಚರಾಚರತ್ಮಕವಾದ ಮಂಗಳವು ಆಯಿತು. ಆವಾಗ್ಯೆ ಸರ್ವೇಶ್ವರಿಯಾದ ಆ ದೇವಿಯೂ ತನ್ನ ತಂದೆತಾಯಿಗಳಿಗೆ ತನ್ನ ನಿಜವನ್ನು ತೋರಿಸಿದಳು ॥ ೧೧ ॥ ಅದೆಂತೆನೆ, ಹಿಮವತ್ಪರ್ವತ ಮೇನಾಕದೇವಿಯರ ಮುಂದುಗಡೆಯಲ್ಲಿ ಮಿಂಚಿನಂತೆ ಹೊಳೆಯುತ್ತಾ ನಿಂತಳು. ಮೂರು ವರ್ಷ ವಯಸ್ಸುಳ್ಳವಳಾಗಿ, ಶ್ಯಾಮಲವರ್ಣದ ಮೈಬಣ್ಣವುಳ್ಳವಳಾಗಿ ನಿಂತಳು ॥ ೧೨ ॥ ಇಂಥಾ ಮಗಳನ್ನು ತೊಡೆಯಮೇಲೆ ಕೂರಿಸಿಕೊಂಡಳು ॥ ಅದೆಂತೆನೆ-ಹಣೆಯ ಮೇಲ್ಭಾಗದಲ್ಲಿ ತುಂಬೆಗಳೋಪಾದಿಯಲ್ಲಿರುವ ಕೂದಲುಗಳುಳ್ಳ ಸಂಪೂರ್ಣಚಂದ್ರನಂತಿರುವ ಮುಖವುಳ್ಳ ಅರ್ಧಚಂದ್ರಾಕಾರವಾದ ಕಪ್ಪಾದ ಹುಬ್ಬುಗಳುಳ್ಳ ॥ ೧೩ ॥ ಹೆದರಿರುವ ಹರಿಣಿಮೃಗದ ದೃಷ್ಟಿಯಂತೆ ಅಗಲವಾಗಿಯೂ ಉದ್ದವಾಗಿಯೂ ಇರುವ ಕಣ್ಣುಗಳುಳ್ಳ ಮಿಂಚಿನಂತಿರುವ ವಾಲ್ಗಿ ಜೋಡಿನಿಂದ ಪ್ರಕಾಶಿಸುತ್ತಿರುವ ॥ ೧೪ ॥ ಎಳ್ಳೆ ಯಳ್ಳಿನ ಹೂವಿನಂತಿರುವ ಮೂಗುಳ್ಳ ಉರು

ಪುಷ್ಪಸಮಘ್ರಾಣಾಂವೃತ್ತದ್ವಿಜವಿಭೂಷಿತಾಂ । ವಿಶದಾಮೃತಸಂ
ಪೂರ್ಣಾರ್ಕಾಂಕುಮುಧಾಧರಶೋಭಿತಾಂ ॥ ೧೫ ॥ ಶಂಖಪೂಗಸಮ
ಚ್ಛಾಯಕಂಧರಾಮಂಜಭಾಷಿಣೀ ॥ ತೀಚಕಪ್ರತಿಸಂಕಾಶಮೇಚಕಾ
ಭಭುಜದ್ವಯಾಂ ॥ ೧೬ ॥ ಕಿಂಚಿದಂಕುರಿತಾಶ್ಚಾರ್ಯಕುಚತ್ರಯು
ಸಮನ್ವಿತಾಂ ॥ ಮಹಾದೇವವಿನಿರ್ದಗ್ಧಮನ್ಮಥಾಂಗಾಭಮಧ್ಯ
ಮಾಂ ॥೧೭॥ ಮದಬೃಂಹಿತಮಾತಂಗಕುಂಭಬಿಂಬನಿತಂಬಿನೀಂ ॥
ಕುಂಭೀಕರನಿಭಚ್ಛಾಯರಂಭಾಸ್ತಂಭಸಮೋರುಕಾಂ ॥೧೮॥ ಕಂದ
ರ್ಪಶರಧಿಪ್ರಖ್ಯಾಜಂಘಾಕಾಂಡಾಭಿಶೋಭಿನೀಂ ॥ ವಿಭಾತೋನ್ನಿದ್ರ
ಪದ್ಮಾಭವಿಜಯಾಂಘ್ರಿವಿರಾಜಿತಾಂ ॥ ೧೯ ॥ ದಿವ್ಯಾಂಬರಧರಾಂದಿ
ವ್ಯಗಂಧಪುಷ್ಪವಿಭೂಷಿತಾಂ॥ ಏವಮುಜ್ವಲವೇಷಾಂಸಾಲೀಲಯಾ

ಟಾಗಿರುವ ಹಲ್ಲುಗಳಿಂದ ಅಲಂಕೃತಳಾದ ಸ್ವಚ್ಛವಾದ ಅಮೃತರಸ
ದಿಂದ ತುಂಬಿರುವ ಕಮಲದ ದಳದಂತಿರುವ ತುಟಿಯಿಂದ ಶೋಭಿಸು
ತ್ತಿರುವ ॥ ೧೫ ॥ ಶಂಖದ ರಾಶಿಯ ಬಣ್ಣದಂತಿರುವ ಕುತ್ತಿಗೆಯುಳ್ಳ
ಮನೋಹರವಾದ ಮಾತುಗಳುಳ್ಳ ಸುಳ್ಳು ಬಿದರಿನಂತೆ ಕಪ್ಪುರುಟಾಗಿ
ರುವ ತೋಳುಗಳೆರಡುಳ್ಳ ॥ ೧೬ ॥ ಸ್ವಲ್ಪ ಮುಂದುಬ್ಬಿರುವ ಆಶ್ಚರ್ಯ
ಕರವಾಗಿ, ಮೂರು ಮೊಲೆಗಳಿಂದ ಯುಕ್ತಳಾಗಿರುವ ಶ್ರೀಪರಮೇಶ್ವರ
ನಿಂದ ದಹಿಸಲ್ಪಟ್ಟ ಮನ್ಮಥನಂತೆ ಸುಂದರವಾದ ಮಧ್ಯ ಪ್ರದೇಶವು
ಳ್ಳ ॥ ೧೭ ॥ ಮದೋನ್ಮತ್ತವಾದ ಆನೆಯ ನೆತ್ತಿಯ ಉರಟಗೆ ಸದೃಶ
ವಾದ ನಿತಂಬವುಳ್ಳ ಉರಟಾಗಿ ಮಧ್ಯ ವಕ್ರವಿಲ್ಲದಿರುವ ಬಾಳೆಯಗಿಡ
ದಂತಿರುವ ತೊಡಗಳುಳ್ಳ ॥ ೧೮ ॥ ಮನ್ಮಥನ ಬತ್ತಳಿಕೆಯಂತಿರುವ
ಕಾಲುಗಂಟುಗಳಿಂದ ಶೋಭಿಸುವ ಬೆಳಿಗ್ಯೆ ಅರಳಿರುವ ಕಮಲವನ್ನು
ತಿರಸ್ಕರಿಸುವಂತಿರುವ ಚರಣಗಳಿಂದ ಪ್ರಕಾಶಿಸುತ್ತಿರುವ ॥ ೧೯ ॥
ಉತ್ತಮವಾದ ವಸ್ತ್ರಗಳಿಂದಲೂ ಗಂಧಪುಷ್ಪಗಳಿಂದಲೂ ಶೋಭಿಸು
ತ್ತಿರುವ ಈ ಪ್ರಕಾರವಾಗಿ ಶೋಭಿಸುತ್ತಿರುವ ರೂಪವನ್ನು ಧರಿಸಿರುವ

ಪರಮೇಶ್ವರೀ ॥ ೨೦ ॥ ರಾಜ್ಞೋಹಿಮವತಃಕ್ಷೇತ್ರೇಆವಿರ್ಭೂತಾಸುರೇಶ್ವರೀ ॥ ತತ್ಪತ್ನೀಂಮೇನಕಾದೇವೀಂಸಮಾಲಿಂಗ್ಯಶುಚಿಸ್ಮಿತಾ ॥ ೨೧ ॥ ಸುಸ್ನಾತಾಮಂತಮಾರೋಪ್ಯಬಾಲಾಂಲೋಕವಿಮೋಹಿನೀಂ ॥ ಕುಚೇನೈಕೇನವಿಕ್ರತಾಂತಾಂವಿಲೋಕ್ಯಸುಕನ್ಯಕಾಂ ॥ ೨೨ ॥ ಹಿಮವಾನ್ಪರ್ವತಶ್ರೇಷ್ಠಸ್ಥದಾಖಿನ್ನಮನಾಹ್ಯಭೂತ್॥ಬ್ರಹ್ಮಾಂಗಭೂಃಸಮುನಿರಾಣ್ಣಾರದಃಸಮಗಾತ್ತದಾ।೨೩॥ ಅರ್ಘ್ಯಾದ್ಯೈಃಪೂಜಿತೋವರ್ಯಃಸೂಪವಿಷ್ಟೋವರಾಸ್ಯನೇ॥ ಪಪ್ರಚ್ಛಕುಶಲಂತಸ್ಯಪ್ರಸಾದಂಪುರಗಾತಿನಃ ॥ ೨೪ ॥ ಹಿಮಾವಾನ್ಪ್ರ

ಆ ಪರಮೇಶ್ವರಿಯೂ ॥ ೨೦ ॥ ಅರಸನಾದ ಹಿಮವತ್ಪರ್ವತನ ಪತ್ನಿಯಲ್ಲಿ ಪ್ರಾದುರ್ಭವಿಸಿದ ಆದೇವಿಯು ಆತನ ಪತ್ನಿಯಾದ ಮೇನಕಾದೇವಿಯನ್ನು ಮಂದಹಾಸಯುಕ್ತಳಾಗಿ ಆಲಿಂಗನವನ್ನು ಮಾಡಿನಿಂತಿದ್ದಳು ॥ ೨೧ ॥ ಆಕ್ಷಣದಲ್ಲಿಯೇ ಕೆಳದೀರಿಂದ ಪನ್ನೀರನ್ನು ತರಿಸಿ ಆಕೆಗೆ ಮಂಗಲಸ್ನಾನವನ್ನುಮಾಡಿಸಿ ಸರ್ವಾಲಂಕಾರ ಯುಕ್ತಳಾದ ಸರ್ವಮೋಹಿನಿಯಾದ ಆ ಮಗಳನ್ನು ಮೇನಕಾದೇವಿಯು ತೊಡೆಯಲ್ಲಿ ಕುಳ್ಳಿರಿಸಿಕೊಂಡಳು. ಆವಾಗ್ಯೆ ಜನಿಸಿದ ಮಗಳನ್ನು ನೋಡುವ ಕುತೂಹಲದಿಂದ ಅಲ್ಲಿಗೆ ಬಂದಿರುವ ಹಿಮವಂತನು ಹೆಚ್ಚಾಗಿರುವ ಒಂದು ಸ್ತನದಿಂದ ವಿಚಿತ್ರವಾಗಿರುವ ಮಗಳನ್ನು ನೋಡಿ ಮನಸ್ಸನ್ನು ಬಳಲಿಸಿಕೊಂಡನು. ಅಷ್ಟರಲ್ಲಿಯೇ ಅಲ್ಲಿಗೆ ಬ್ರಹ್ಮದೇವರ ಮಗನಾದ ಮುನಿಶ್ರೇಷ್ಠನಾದ ನಾರದರುಷಿಯು ಬಂದನು ॥ ೨೨ ॥ ೨೩ ॥ ಬಂದು ಮುನಿಯು ಪರ್ವತರಾಜನಿಂದ ಬಹುಮಾನಪೂರ್ವಕ ಅರ್ಘ್ಯಾದಿಗಳಿಂದ ಪೂಜಿಸಿಕೊಂಡವನಾಗಿ ಉತ್ತಮವಾದ ಪೀಠದಲ್ಲಿ ಕೂತುಕೊಂಡು ತ್ರಿಪುರಸಂಹಾರ ಮಾಡಿದ ಶ್ರೀಪರಮೇಶ್ವರ ಅನುಗ್ರಹರೂಪವಾದ ಕ್ಷೇಮವಾರ್ತೆಯನ್ನು ಕೇಳಿದನು॥೨೪॥ ಆಗ್ಯೆ ಹಿಮವಂತನು ಕೈಜೋಡಿಸಿಕೊಂಡು ಆತನ ಮುಂದುಗಡೆ ನಿಂತುಕೊಂಡು ಎಲೈ ಬ್ರಾಹ್ಮಣನೇ ನಿನ್ನ ದರ್ಶನವು ಯಾವಾಗ್ಯೆ ಆಯಿತೋ

ತ್ಯುವಾಚೈತ್ರನಂಕೃತಾಂಜಲಿರುಪಸ್ಥಿತಃ ॥ ಸರ್ವತ್ರಕುಶಲಂವಿಪ್ರದ
ರ್ಶನಂತೇಯದಾಭವೇತ್ ॥ ೨೫ ॥ ಶಂಭೋರನುಗ್ರಹೇಣೈವಹ್ಯಾ
ವಿರ್ಭೂತಾಮಿಮಾಂಮುನೇ ॥ ದೃಷ್ಟ್ವಾವದವಿಚಿತ್ರಾಂಗೀಂಕುಚ
ತ್ರಯಯುತಾಂಮುನೇ ॥ ೨೬ ॥ ಪ್ರತ್ಯುವಾಚಮುನಿರ್ವೀರಂಹಿ
ಮವಂತಂಪ್ರಸನ್ನಧೀಃ॥ ಈಯಂಸಾಕ್ಷಾದ್ಭಗವತೀಬ್ರಹ್ಮಾದಿಜನನೀತಿ
ವಾ ॥ ೨೭ ॥ ಪೂರ್ವಂದಾಕ್ಷಾಯಿಣೀಜಾತ್ರಾಸದಾಶಿವಕುಟುಂ
ಬಿನೀ । ಸೈಷಾತೆಪೂರ್ವಸುಕೃತಾತ್ಪ್ರದೋಷವ್ರತಚರ್ಯ
ಯಾ ॥ ೨೮ ॥ ಆವಿರ್ಭೂತಾಮಹಾಗೌರೀಪೂಜಯಾಸಾವರಂ
ಸದಾ ॥ ಇಷ್ಟಾರ್ಥದಾಯಿನೀತೇದ್ಯಸರ್ವೇಷಾಂಭಜತಾಮಪಿ ॥೨೯॥
ಭಕ್ತಿಹೀನಂಸ್ವಜನಕಂದೃಷ್ಟ್ವಾದಕ್ಷಂಸದಾಶಿವೆ। ರೋಧಾಯಾತ್ಮನಾ

ಆಗಲೇ ಸರ್ವತ್ರ ನನಗೆ ಕ್ಷೇಮವು ಸಿದ್ಧವಾಯಿತು ॥ ೨೫ ॥ ಎಲೈ ಮುನಿಯೇ ಪರಮಾತ್ಮನ ಅನುಗ್ರಹದಿಂದಲೇ ನನ್ನಲ್ಲಿ ಪ್ರಾತುರ್ಭವಿಸಿದ ಚಿತ್ರವಾದ ಅಂಗಗಳುಳ್ಳ ಮತ್ತು ಮೂರು ಸ್ಥನಗಳುಳ್ಳ ಈ ಮಗಳನ್ನು ನೋಡಿ ಇದರ ವೃತ್ತಾಂತವನ್ನು ಹೇಳು ॥ ೨೬ ॥ ಈಪ್ರಕಾರ ಪ್ರಶ್ನೆಮಾಡಿಸಿಕೊಂಡು ಸಂತುಷ್ಟಚಿತ್ತನಾದ ಆ ನಾರದಮುನಿಯು ಆ ಹಿಮವಂತನನ್ನು ಕುರಿತು ಹೇಳಿದನು. ಅದೆಂತೆನೆ, ಎಲೈ ಪರ್ವತಶ್ರೇಷ್ಟನೆ ಇವಳು ಬ್ರಹ್ಮಾದಿ ದೇವತೆಗಳಿಗೆ ತಾಯಿಯಾದ ಸಾಕ್ಷಾತ್ಪರಮೇಶ್ವರಿಯು ॥ ೨೭ ॥ ಮತ್ತು ಇವಳು ಪೂರ್ವದಲ್ಲಿ ದಕ್ಷಪ್ರಜಾಪತಿಯಲ್ಲಿ ದಾಕ್ಷಾಯಣಿಯಂತ ಹುಟ್ಟಿದಳು. ಅಂಥಾ ಇವಳೇ ನೀನು ಮಾಡಿದ ಪ್ರದೋಷವ್ರತದ ಮಹಿಮೆಯಿಂದ ಮತ್ತು ಪೂರ್ವಪುಣ್ಯದಿಂದಲೂ ॥ ೨೮ ॥ ನಿನ್ನಲ್ಲಿ ಪ್ರಾತುರ್ಭವಿಸಿದಳು. ಸ್ವರ್ಣಗೌರಿಯಾದ ಭಕ್ತರಿಗಿಷ್ಟಾರ್ಥಪ್ರದಳಾದ ನಿನಗೆ ಸಂಪೂರ್ಣವಾಗಿ ಅನುಗ್ರಹ ಮಾಡಿದ ಈ ದೇವಿಯನ್ನು ಯಾವಾಗಲೂ ಚೆನ್ನಾಗಿ ಪೂಜಿಸು ॥೨೯॥ ಎಲೈ ರಾಯನೇ ಈ ದೇವಿಯು ಪೂರ್ವಾವತಾರದಲ್ಲಿ ಪರಮಾತ್ಮನಲ್ಲಿ ವಿಶ್ವಾಸವಿಲ್ಲದಿರುವ ಜನಕನಾದ ದಕ್ಷನನ್ನು ನೋಡಿ ತನ್ನಿಂದತಾನೇ ಅಂತ

ತ್ಮಾನಮಾವಿರ್ಭೂತಾತವಾಂತಿಕೇ ॥ ೩೦ ॥ ಯಾವದಷ್ಟಾಬ್ಧಪ
ರ್ಯಂತಂವಸಂತೀಬಾಲಲೀಲಯಾ ॥ ತತಃಪ್ರವರ್ತತೇದೇವೀತಪಸೇ
ಕೃತನಿಶ್ಚಯಾ ॥ ೩೧ ॥ ತಪಸ್ಯಂತೀಂತುಯೋದೇವೋದೃಶ್ಯತೇಸವಿ
ರಾಟ್ಪ್ರಭುಃ ॥ ಭಗವಾನ್ಬ್ರಾಹ್ಮಣೋಭೂತ್ವಾಯದೈನಾಂಸಂವ
ದಿಷ್ಯತಿ ॥ ೩೨ ॥ ತದಾಸ್ಯಾಃಸುಕುಚೇರಾಜನ್ಮಧ್ಯಮೇಹಿಪತಿ
ಷ್ಯತಿ ॥ ಸಹಿದೇವೋಮಹಾದೇವಃಪತಿರಸ್ಯಾಭವಿಷ್ಯತಿ ॥ ೩೩ ॥
ಸ್ವಸ್ತಿವಾಚನಪೂರ್ವಂತೂಕುರುನಾಮಕ್ರಿಯಾಂವಿಭೋ ॥ ವಚಃ
ಶ್ರುತ್ವಾತುದೇವರ್ಷೇರ್ಹರ್ಷಾಬ್ಧಿರ್ವವೃಧೇತದಾ ॥ ೩೪ ॥ ಸರ್ವ
ಸನ್ನಾಹನೋಪೇತೋಹಿಮವಾನ್ಮುನಿನಾಸಹ । ಚಕಾರ ಜಾತಕರ್ಮಾಣಿ

ರ್ಥನಳಾಗಿ-ಭಗವದಿಚ್ಛೆಯಿಂದ ನಿನ್ನಲ್ಲಿ ಪ್ರಾದುರ್ಭವಿಸಿರುವಳು॥೩೦॥
ಈ ದೇವಿಯು ಎಂಟುವರ್ಷವು ಎಂದಿಗೆ ಆಗುವುದೋ ಅಷ್ಟುಪರ್ಯಂ
ತರ ನಿನ್ನ ಮನೆಯಲ್ಲಿ ಬಾಲಭಾವದಿಂದ ಇರುವಳು. ಅನಂತರ ತಪಸ್ಸಿ
ಗೋಸ್ಕರ ನಿಶ್ಚಯಯುಳ್ಳವಳಾಗಿ ತಪಸ್ಸಿಗೋಸ್ಕರ ಉದ್ಯೋಗಿ
ಸುವಳು ॥ ೩೧ ॥ ಹಾಗೆ ತಪಸ್ಸನ್ನು ಮಾಡುತ್ತಿರುವ ಈ ದೇವಿಗೆ ವಿರಾ
ಡ್ರೂಪನಾದ ಪರಮಾತ್ಮನು ಬ್ರಾಹ್ಮಣಾಕಾರದಿಂದ ಯಾವಾಗ ಕಾಣಿಸಿ
ಕೊಳ್ಳುತ್ತಾನೋ ಯಾವಾಗ್ಯೆ ಇವಳನ್ನು ಕುರಿತು ಮಾತನಾಡುವನೋ
ಆಗ್ಯೆ ಈ ದೇವಿಯ ನಡುವಿರುವ ಸ್ಥನವು ಬಿದ್ದುಹೋಗುವುದು. ಆ ಸ
ರ್ವೋತ್ತಮನೇ ಈಕೆಗೆ ಪತಿಯಾಗಲುಳ್ಳವನು ॥೩೨॥೩೩॥ ಎಲೈ ಭಗವ
ದ್ಭಕ್ತನೇ ಈಕ್ಷಣವೇ ಪುಣ್ಯಾಹಪೂರ್ವಕವಾದ ನಾಮಕರ್ಮೋತ್ಸವ
ವನ್ನು ಮಾಡು. ಈಪ್ರಕಾರವಾದ ನಾರದರ ಮಾತನ್ನು ಕೇಳಿದ ಹಿಮ
ವತ್ಪರ್ವತನ ಸಂತೋಷವೆಂಬ ಸಮುದ್ರವು ವೃದ್ಧಿಯನ್ನು ಹೊಂದಿ
ತು. ಆಗ ಸಮಸ್ತವಾದ ಸಾಮಗ್ರಿಯ ಸಹಿತನಾದ ಹಿಮವಂತನು
ನಾರದ ಮುಖಿಯಿಂದ ಕೂಡಿಕೊಂಡು ಈ ಮಗಳಿಗೆ ಜಾತಕರ್ಮವನ್ನು,
ನಾಮಕರಣೋತ್ಸವವನ್ನು ಸಹಾ ಮಾಡಿದನು ॥ ೩೪ ॥ ತನ್ನ ವಂಶ
ಕ್ಕೇನೆ ಸರ್ವಸಂಪತ್ತನ್ನು ಕೊಡುತ್ತಿರುವ ಈಮಗಳಿಗೆ ಗೌರಿ ಎಂತಲೂ

ನಾಮಚಾಸ್ಯಾಸ್ತದಾಕರೋತ್ತು ॥ ೩೫ ॥ ಗೌರೀಹೌಮಾವತೀತ್ಯೇ
ವಮಾತ್ಮಸಂಪತ್ಪ್ರದಾಯಿನೀ ॥ ಗೀತವಾದಿತ್ರನಿನದೈಃಸ್ವಸ್ತಿಮಂತ್ರ
ಯುತ್ತೈರ್ದ್ವಿಜೈಃ ॥ ೩೬ ॥ ನಾರೀನೀರಾಜನೈಶ್ಚೈವಸ್ತುವದ್ಭಿಃ
ಸೂತಮಾಗಧೈಃ ॥ ನಾಮೋತ್ಸವೇತದಾರಾಜಾಷಡ್ರಸೈರ್ಭೋಜ
ನೈರ್ದ್ವಿಜಾನ್ ॥ ೩೭ ॥ ಸಂತರ್ಪ್ಯಸಾದರಂಚಾದ್ರಿರಾಶೀರ್ವಾ
ದೇತತಃಕೃತೇ ॥ ಅನುಗ್ನಾತಸ್ತುಭುಬುದೇದಾರಬಂಧುಸಮನ್ವಿ
ತಃ ॥ ೩೮ ॥ ಅಥಪ್ರಣಮ್ಯದೇವರ್ಷಿಂಧನ್ಯೋಸ್ಮಿತಿಬ್ರುವನ್‌ಸ
ದಾ ॥ ಪುನಸ್ತಂಪೂಜಯಾಮಾಸಪೂಜಿತಸ್ತುಯಯೌಮುನಿಃ ॥
ಗತೇತುನಾರದೇಸೋಽಪಿಹಿಮವಾರ್ಬಂದುಭಿಃಸಹ ॥ ಕೃತಕೃತ್ಯಂತ
ದಾತ್ಮಾನಂಮೇನೇದೇವಪ್ರಸಾದತಃ ॥ ೪೦ ॥ ಲಾಲಯಾನೋದಿವಾ

ಹೌಮವತೀ ಎಂತಲೂ ಸ್ವಸ್ತಿವಾಚನೆಯನ್ನು ಮಾಡುತ್ತಲಿರುವ
ಬ್ರಾಹ್ಮಣರಿಂದ ಸಂಗೀತವಾದ್ಯ ಘೋಷಗಳಿಂದ ಸಹಿತವಾಗಿ ನಾಮ
ಕರಣವನ್ನು ಮಾಡಿದನು ॥ ೩೬ ॥ ಸುವಾಸಿನಿಯರ ಆರತಿಗಳಿಂದ
ಸೂತಪಾಠಕ ಹೊಗಳಿಕೆಯಿಂದ ಸಹಿತವಾಗಿ ನಾಮಕರ್ಮೋತ್ಸವವು
ನೆರವೇರಿದನಂತರ ಅರಸನಾದ ಹಿಮವಂತನು ಬ್ರಾಹ್ಮಣರನ್ನು ಆರು
ವಿಧ ರಸಗಳುಳ್ಳ ಭೋಜ್ಯಪದಾರ್ಥಗಳಿಂದ ॥ ೩೭ ॥ ಆದರ ಪೂರ್ವಕ
ವಾಗಿ ಸಂತರ್ಪಣೆಯನ್ನು ಮಾಡಿಸಿ ಆಮೇಲೆ ಆಶಿರ್ವಾದ ಮಂತ್ರಾ
ಕ್ಷತೆಯು ನೆರವೇರಿದನಂತರ ಅವರ ಅಪ್ಪಣೆಯನ್ನುಹೊಂದಿ ನೆಂಟರಿಷ್ಟ
ರಿಂದ ಸಹಿತನಾಗಿ ಭೋಜನವನ್ನು ಮಾಡಿದನು ॥ ೩೮ ॥ ಆಮೇಲೆ
ನಾಶದಮಹರ್ಷೀಶ್ವರರನ್ನು ಕುರಿತು ನಾನು ಯಾವಾಗಲೂ ಧನ್ಯನಾದೆ
ನೆಂದು ನಮಸ್ಕರಿಸಿ ಪೂಜಿಸಿದನು. ಹೀಗೆ ಮರ್ಯಾದೆಯನ್ನು ಮಾಡಿಸಿ
ಕೊಂಡ ನಾರದನು ಅಲ್ಲಿಂದ ತೆರಳಿದನು ॥ ೩೯ ॥ ಈ ಪ್ರಕಾರ ನಾರದ
ಮುನಿಯು ಪ್ರಯಾಣಿಸಿದನಂತರ ಬಂಧುಸಹಿತನಾದ ಹಿಮವಂತನು
ಶ್ರೀ ಭಗವದನುಗ್ರಹದೆಸೆಯಿಂದ ತನ್ನನ್ನು ಧನ್ಯನನ್ನಾಗಿ ತಿಳಿದು
ಕೊಂಡಿದ್ದನು ॥ ೪೦ ॥ ಆಮೇಲೆ ಅದ್ರಿರಾಜನು ಕೆಲವು ತಿಂಗಳು ಕಳೆ

ರಾತ್ರಾವದ್ರಿರಾಣ್ಮ್ರದಮಾಪಹಿ ॥ ಪ್ರಾಂಕಣೇರಿಂಕಣಂತೀಂತಾಮಾ ಲೋಕ್ಯಕಲಭಾಷಿಣೀಂ ॥ ೪೧ ॥ ಅಂಬಾಯಾಹೀತಿಪ್ರವದನಾಗಿರಿಜೇಮುಕ್ಕುಲೇಶ್ವರಿ ॥ ಏವಂಚಾಹರಹಃಕಾಲೋಗತಃಸಂವತ್ಸರಾಷ್ಟಕಃ ॥ ೪೨ ॥ ದಿನೇದಿನೇಸಾವವೃಧೇಶುಕ್ಲಪಕ್ಷಇವೋಡುರಾಟ್ ॥ ವಿಚಿಂನ್ವಂತೀದೇವಕಾರ್ಯಮಾತ್ರ್ಮಾವಿರ್ಭಾವಕಾರಣಂ ॥ ೪೩ ॥ ಪತ್ಯುಃಸಾಕ್ಷದ್ಭಗವತಃಕಾಂಕ್ಷಂತೀದರ್ಶನಂತಿವಾ ॥ ತಪಸೇಕೃತಸಂಕಲ್ಪಾಪಿತೃಭ್ಯಾಂವಾರಿತಾಪಿಚ ॥ ೪೪ ॥ ಯಯೌತದದ್ರಿಶಿಖರೇಪದ್ಮಸೌಗಂಧವಾಸಿತಂ ॥ ಸರಃಸ್ವಚ್ಛಜಲಂದೇವೀಬಹುಪುಷ್ಪಿತಪಾದ

ಯುತ್ತಲೇ ಮನೆಯಮುಂದಣ ಜಗಲಿಯಲ್ಲಿ ಗೆಜ್ಜೆಮೊದಗ ಮೊದಲಾದ ಆಭರಣಗಳನ್ನಿಟ್ಟುಕೊಂಡು ನೆಡಿಕೆಯನ್ನು ಕಲಿಯುತ್ತಿರುವ ಮಗಳನ್ನ ಆಡಿಸುತ್ತಾ ಸಂತೋಷವನ್ನು ಹೊಂದಿದನು ॥ ೪೧ ॥ ಅವಳಾಡುವ ಬಾಲಭಾಷೆಗಳನ್ನು ಕೇತುತ್ತಾ । ಹೇ ಅಮ್ಮಾ, ಹೇ ಗಿರಿಜೆ! ಹೇ ನನ್ನಕುಲದೇವಿಯೇ ಬಾ ಎಂದು ಹೇಳುತಿದ್ದನು । ಹೀಗೆ ಒಂದೊಂದು ದಿವಸದಂತೆ ಒಂದು ವರ್ಷವು ಕಳೆದಿತ್ತು ॥ ೪೨ ॥ ಈ ಪಾರ್ವತೀದೇವಿಯು ಹೀಗೆ ಪ್ರತಿನಿತ್ಯವೂ ಶುಕ್ಲಪಕ್ಷದ ಚಂದ್ರನಂತೆ ವೃದ್ಧಿಯನ್ನು ಹೊಂದಿದಳು । ಮತ್ತು ತಾನು ಭೂಲೋಕದಲ್ಲಿ ಆವಿರ್ಭವಿಸುವುದಕ್ಕೆ ಅವಶ್ಯಕಾರಣವಾದ ದೇವತೆಗಳ ಕಾರ್ಯವನ್ನು ಕೂಡಾ ಯೋಚಿಸಿಕೊಳ್ಳುತ್ತಿದ್ದಳು ॥ ೪೩ ॥ ಹೀಗೆ ಕೆಲವುವರ್ಷಗಳು ಸಂದು 7—8 ವರ್ಷಗಳು ಆಗುತ್ತಲೆ । ಆ ಮಂಗಲೆಯಾದ ಪಾರ್ವತಿಯು ತನ್ನ ಪತಿಯಾದ ಪರಮಾತ್ಮನ ಪ್ರತ್ಯಕ್ಷದರ್ಶನವನ್ನು ಬಯಸುವಳಾಗಿ ತಂದೆತಾಯಿಗಳಿಂದ । ಬೇಡಬೇಡವೆಂತ ಹೇಳಿಸಿಕೊಂಡವಳಾದಾಗ್ಯೂ ಕೇಳದೆ ತಪಸ್ಸನ್ನುಮಾಡುವದಕ್ಕೆ ಉದ್ಯೋಗಿಸಿದಳು ॥ ೪೪ ॥ ಹಾಗೆ ಆ ಗಿರಿಜಾದೇವಿಯು ಆ ಹಿಮವತ್ಪರ್ವತನ ಬೆಟ್ಟದರೂಪಿನ ತುದಿಯಲ್ಲಿ ಬಹಳವಾದ ಹುವ್ವುಗಳಿಂದ ಭರಿತವಾದ ಮರಗಿಡಗಳಿಂದ ಕೂಡಿರುವ ಕಮಲಪುಷ್ಪಗಳ ಪರಿಮಳವುಳ್ಳ ಸ್ವಚ್ಛವಾದ ಉದಕವುಳ್ಳ ಸರೋ

ಪಂ ॥೪೫॥ ನಾನಾಮೃಗವಿಹಂಗಾನಾಂನಿರ್ವೈರಾಣಾಂರುತೈರ್ವೃ
ತಂ ॥ ಗತ್ವಾತತ್ರಜಗನ್ಮಾತಾಸ್ನಾತ್ವಾಸಾವಿಧಿಪೂರ್ವಕಂ ॥ ೪೬ ॥
ವಸ್ತ್ರಾಲಂಕಾರಸಂಯುಕ್ತಾಮಂಗಲದ್ರವ್ಯಶೋಭಿತಾ ॥ ಸ್ಫಟಿಕಾ
ಯಾಂವಿಶಾಲಾಯಾಮಾಸ್ತೀರ್ಯ್ಯವಿರಜಾಸನಂ ॥ ೪೭ ॥ ತತ್ರೈ
ಕಾಗ್ರಮನಾಃಸ್ಥಿತ್ವಾದೇವೀಸರ್ವಾಂಗಶೋಭನಾ ॥ ಓಂಕಾರಾದಿಶ್ರು
ತಿಗಣಾವೇದ್ಯಂಬ್ರಹ್ಮಸನಾತನಂ ॥ ೪೮ ॥ ಮುರಾರಿಪದ್ಮಜೇಂ
ದ್ರಾದಿದೇವಸಂಘನಿಷೇವಿತಂ ॥ ಅನನ್ಯಂಕಾರಣಂಶಾಂತಮಾತ್ಮಕೈ
ವಲ್ಯರೂಪಿಣಂ ॥ ೪೯ ॥ ದಧ್ಯೌಸಾಪರಮಾತ್ಮಾನಂಶಂಕರಂ
ಚಂದ್ರಶೇಖರಂ ॥ ಏವಂಪಂಚಾಗ್ನಿಮಧ್ಯೇತುಧ್ಯಾಯಂತೀಸ್ವಪತಿಂ

ವರವನ್ನು ಕುರಿತು ನಡೆದಳು ॥ ೪೫ ॥ ಜಗಜ್ಜನನಿಯಾದ ಆ ಗಿರಿಜಾ ದೇವಿಯು ವೈರವಿಲ್ಲದಿರುವ ಅನೇಕತರಹ ಮೃಗಗಳು ಪಕ್ಷಿಗಳ ಧ್ವನಿಗಳಿಂದ ಕೂಡಿರುವ ಆ ಸರೋವರವನ್ನು ಹೊಗಿ ಸಂಕಲ್ಪ ಪೂರ್ವಕವಾಗಿ ಸ್ನಾನವಂಮಾಡಿದಳು ॥ ೪೬ ॥ ಬಿಳೀಪಟ್ಟೆ ಶೀರೆಯೂ ಕರ್ನಕುಂಡಲಾದಿಗಳೂ ಅರಿಶಿನ, ಕುಂಕುಮ ಮೊದಲಾದ ಮಂಗಲ ದ್ರವ್ಯಗಳಿಂದ ಅಲಂಕೃತಳಾಗಿ ಆ ಕೆರೆಯ ದಡದಲ್ಲಿ ವಿಸ್ತಾರವಾದ ಸ್ಫಟಿಕದ ಶಿಲೆಯಲ್ಲಿ ಶುದ್ಧವಾದ ಆಸನವನ್ನು ಹಾಸಿಕೊಂಡು ॥ ೪೭ ॥ ಸರ್ವಾಂಗಮಂಗಲೆಯಾದ ಆ ದೇವಿಯು ಆ ಆಸನದಲ್ಲಿ ದೃಢಮನಸ್ಕಳಾಗಿ ನಿಂತು ಪ್ರಣವವೇ ಮೊದಲಾದ ಸಮಸ್ತ ವೇದಗಳ ಸಮೂಹಗಳಿಂದ ಯಾವಾಗಲೂ ಸ್ತುತಿಯನ್ನು ಮಾಡಿಸಿಕೊಳ್ಳುತ್ತಿರುವ ಶಾಶ್ವತನಾದ ಪರಮಾತ್ಮನನ್ನು ॥ ೪೮ ॥ ಮಹಾವಿಷ್ಣು, ಬ್ರಹ್ಮ, ದೇವೇಂದ್ರ ಮತ್ತು ಪೂಜ್ಯರಾದ ಬ್ರಹ್ಮಋಷಿಗಳ ಸಮೂಹಗಳಿಂದ ಸೇವಿಸಿಕೊಳ್ಳುತ್ತಿರುವ, ಬೇರೆ ಕಾರಣಗಳಿಲ್ಲದಿರುವ, ಶಾಂತರೂಪನಾದ ತನಗೆ ತನ್ನಲ್ಲಿಯೇ ಆನಂದವುಳ್ಳ ॥ ೪೯ ॥ ಚಂದ್ರನನ್ನ ಧರಿಸಿರುವ, ಸುಖಸ್ವರೂಪನಾದ ಪರಮಾತ್ಮನನ್ನು ಆ ಪಾರ್ವತಿದೇವಿಯು ಧ್ಯಾನಿಸುತ್ತಿದ್ದಳು ॥ ಈಪ್ರಕಾರ ಮನಸ್ಸಿನಿಂದ ಪಂಚಾಗ್ನಿ ಮಧ್ಯದಲ್ಲಿ ತನ್ನ

ಹೃದಾ ॥ ೫೦ ॥ ಸಂವತ್ಸರಾತ್ಮಕಃಕಾಲೇಹ್ಯತೀಯಾಯಕ್ಷಣಾಇವ। ತ್ತ್ರಧ್ಯಾನತುಷ್ಟೋಭಗವಾನನಾದಿನಿಧನಶ್ಶಿವಃ ॥ ೫೧ ॥ ಆವಿರಾಸೀತ್ತ್ತದಾತಸ್ಯಾಆಶ್ರಮಸ್ಯಾತಿದೂರತಃ । ದಂಡಾಕ್ಷಮಾಲಹಸ್ತೋಸೌ । ತ್ರಿಪುಂಡ್ರಾಂಕಿತಮಸ್ತಕಃ ॥ ೫೨ ॥ ರುದ್ರಾಕ್ಷಮಾಲಾಲಂಕಾರಃ । ಕೌಪೀನಾಛಾದನೈರ್ವೃತಃ। ಐಜತ್ಕಾಮಸ್ತಕೇನಾಥಹ್ಯಾಜಗಾಮದ್ವಿಜಾಗ್ರಣೀಃ ॥ ೫೩ ॥ ಕೀರ್ತಯನ್‌ಶಿವನಾಮಾನಿ । ಸರ್ವೇಷಾಂಮಂಗಲಃಸ್ವಯಂ । ಆಗತಂಬ್ರಾಹ್ಮಣಶ್ರೇಷ್ಟಂ । ದೃಷ್ಟ್ವಾದ್ರಿತನಯಾತ್ತದಾ ॥ ೫೪ ॥ ಸಹಸೋತ್ಥಾಯಭಕ್ತ್ಯಾನಂ । ನನಾಮಶಿವಮಾನಸಾ ॥ ದತ್ವಾತುವಿಷ್ಟರಂದೇವೀ । ಪ್ರಕ್ಷಾಳ್ಯಚರಣೌತಥಾ ॥ ೫೫ ॥ ಉಪಹಾರಾದಿಭಿರ್ವಿಪ್ರಂ । ಸಂಪೂಜ್ಯೋವಾಚ

ಪ್ರಾಣಕಾಂತನನ್ನು ಧ್ಯಾನಿಸುತ್ತಿರುವ ಆ ಪಾರ್ವತೀದೇವಿಗೆ ॥ ೫೦ ॥ ಒಂದು ವರ್ಷವೆಂಬ ಕಾಲವು, ಒಂದು ಕ್ಷಣದಂತೆ ಕಳೆಯಿತು. ಜನನ ಮರಣಾದಿಗಳಿಲ್ಲದಿರುವ ಮಂಗಲಮೂರ್ತಿಯಾದ ಭಗವಂತನು ॥೫೧॥ ಆ ದೇವಿಯು ಆಶ್ರಮದ ಸ್ವಲ್ಪದೂರದಲ್ಲಿ ಜಲ್ಲನ್ನು (ಕೋಲನ್ನು) ಜಪಸರವನ್ನು ಕೈಯಲ್ಲಿ ಹಿಡಿದವನಾಗಿ ಹಣೆಯ ವಿಭೂತಿಯಿಂದ ತ್ರಿಪುಂಡ್ರವನ್ನು ಧರಿಸಿರುವ ॥ ೫೨ ॥ ರುದ್ರಾಕ್ಷಮಾಲೆಗಳಿಂದ ಅಲಂಕೃತನಾದ ಒಂದು ಕೌಪೀನವೂ ಒಂದು ಹೊದಿಯುವ ವಸ್ತ್ರಮಾತ್ರದಿಂದಿರುವ ನಡುಗುತ್ತಿರುವ ತಲೆಯುಳ್ಳ ವೃದ್ಧನಾದ ಬ್ರಾಹ್ಮಣಶ್ರೇಷ್ಠನಾಗಿ ಕಾಣಿಸಿಕೊಂಡು ಸಮೀಪಕ್ಕೆ ಬಂದನು ॥ ೫೩ ॥ ತಾನು ಸರ್ವರಿಗೆ ಮಂಗಲಪ್ರದನಾದರೂ ತಾನೂಕೂಡ ಶಿವಶಿವಾ ಯೆಂದು ಹೇಳುತ್ತಾ ಬಂದನು. ಆಗ್ಗೆ ಹಿಮವಂತನ ಮಗಳಾದ ಆ ಪಾರ್ವತೀದೇವಿಯು ಬಂದಿರುವ ಬ್ರಾಹ್ಮಣ ಶ್ರೇಷ್ಠನನ್ನು ನೋಡಿ ॥ ೫೪ ॥ ಬಹು ಜಾಗ್ರತೆಯಾಗಿ ಎದ್ದು ಪರಮಾತ್ಮನಲ್ಲಿಯೇ ಮನಸ್ಸುಳ್ಳವಳಾಗಿ ಈ ಬ್ರಾಹ್ಮಣನನ್ನು ಭಕ್ತಿಯಿಂದ ನಮಸ್ಕರಿಸಿದಳು. ಹಾಗೆಯೇ ದರ್ಭೆಯ ಆಸನವನ್ನು ಕೊಟ್ಟು ಆ ಬ್ರಾಹ್ಮಣನು ಕೂತುಕೊಂಡನಂತರ ಈ ದೇವಿಯು ಅವನ ಚರಣಗಳನ್ನು ತೊಳದು ॥ ೫೫ ॥ ಫಲಹಾರ ಪದಾರ್ಥಗಳಿಂದ

ಮಂಗಲಾ ॥ ಧನ್ಯಾತೇದರ್ಶನಾಬ್ರಹ್ಮನ್ಕುತ್ರತ್ಯೋಸಿವದಾಧು
ನಾ ॥ ೫೬ ॥ ಕಿಮಿಚ್ಛನ್ನಿಹಸಂಪ್ರಾಪ್ತೋವದಸರ್ವಂಮಮಾಗ್ರ
ತಃ।ಯಿತಿಸಂಪ್ರಶ್ನಸಂಹೃಷ್ಟೋದೇವೇಶೋದ್ವಿಜರೂಪಧೃಕ್॥೫೭॥
ವ್ರತಸ್ತಾಂ।ಪದ್ಮಪತ್ರಾಕ್ಷೀಮುವಾಚಪ್ರಹಸನ್ಪ್ರಭುಃ।ಕೈಲಾಸನಿಕ
ಟೇದೇವಿಸ್ವರ್ಗಂಗಾತೀರಶೋಭಿತೇ ॥ ೫೮ ॥ ಯೋಗಿಹೃತ್ಪಂಕ
ಜಾಖ್ಯೇಚ । ಪುರೇಶ್ರುತಿಗಣೇರಿತೇ । ಸರ್ವಸಂಪತ್ಸಮೃದ್ಧೇಚ
ರಾಜಾಭೂಚ್ಚಂದ್ರಶೇಖರಃ ॥ ೫೯ ॥ ತೇನಾಧ್ಯಯನಪಾಠಾಯ ।
ಸ್ಥಾಪಿತಃಕಲ್ಪಿತಾವಧಿಃ । ತೀರ್ಥಯಾತ್ರಾಪ್ರಸಂಗೇನ । ತವಾಂತಿಕ
ಮುಪಾಗತಃ ॥ ೬೦ ॥ ತ್ವಮತ್ರೈಕಾವರಾರೋಹೇಕಿಂಕರೋಷಿ

ಬ್ರಾಹ್ಮಣನನ್ನು ಪೂಜಿಸಿ ಮಂಗಲಳಾದ ಆ ದೇವಿಯು, ಎ ಬ್ರಾಹ್ಮಣನೇ ನಿನ್ನ ದರ್ಶನದಿಂದ ಧನ್ಯಳಾದೆನು. ಎಲ್ಲಿ ಹುಟ್ಟಿದ್ದು, ಎಲ್ಲಿ ಇರುವದು ಎಂಬ ಈ ಅಂಶಗಳನ್ನು ಈಗ ಹೇಳು ಎಂದು ಮಾತನಾಡಿದಳು ॥ ೫೬ ॥ ಎ ಬ್ರಾಹ್ಮಣನೇ, ನನ್ನನ್ನು ಬಯಸಿ ಇಲ್ಲಿಗೆ ಬಂದೆಯಾ ಆ ಎಲ್ಲವನ್ನೂ ನನ್ನ ಮುಂದೆ ಹೇಳು; ಈಪ್ರಕಾರ ದೇವಿಯಿಂದ ಕೇಳಿಸಿಕೊಂಡು ಬ್ರಾಹ್ಮಣರೂಪಿಯಾದ ಆ ದೇವೇಶ್ವರನಾದ ಪರಮಾತ್ಮನ ॥ ॥೫೭॥ ಕಮಲದಳದಂತಿರುವ ಕಣ್ಣುಗಳುಳ್ಳಂಥಾ ಮತ್ತು ನಿಯಮದಲ್ಲಿರುವ ಆ ದೇವಿಯನ್ನು ಕುರಿತು ಮಾತನಾಡಿದನು. ಅದೇನಂದರೆ ॥೫೮॥ ಕೈಲಾಸಪರ್ವತದ ಸಮೀಪದಲ್ಲಿರುವ ಭಾಗೀರಥಿನದಿಯ ದಡದಿಂದ ಪ್ರಾಶಿಸುತ್ತಿರುವ ಸರ್ವವೇದದಲ್ಲಿಯೂ ಪ್ರಸಿದ್ಧವಾಗಿ ಹೇಳಿರುವ ಸಕಲೈಶ್ವರ್ಯದಿಂದಲೂ ಕೂಡಿರುವ ಹೃತ್ಪಂಕಜವೆಂಬ ಪಟ್ಟಣದಲ್ಲಿ ಚಂದ್ರಶೇಖರನೆಂಬ ಅರಸನು ಇದ್ದಾನೆ ॥ ೫೯ ॥ ನಾನು ಆ ಅರಸನಿಂದ ಬ್ರಹ್ಮಚಾರಿಗಳಿಗೆ ಅಧ್ಯಯನ ಪಾಠವನ್ನು ಹೇಳಿಕೊಡುವದಕ್ಕೋಸ್ಕರ ಸಂಬಳವನ್ನು ಗೊತ್ತುಮಾಡಿಕೊಂಡು ನಿಲ್ಲಿಸಿಕೊಂಡವನಾಗಿದ್ದೇನೆ. ಹೀಗಿರುವ ನಾನು ತೀರ್ಥಯಾತ್ರೆಯನ್ನು ಮಾಡುವ ಕಾರಣದಿಂದ ಸಂಚರಿಸುತ್ತಾ ನಿನ್ನ ಸಮೀಪವನ್ನು ಕುರಿತು ಬಂದೆನು ॥ ೬೦ ॥

ಶುಚಿಸ್ಮಿತೆ॥ಕಾಶೀತ್ವಂದೇವದೇವಸ್ಯಪ್ರಿಯಾತ್ರಿಪುರಸುಂದರೀ ॥೬೧॥ ಅಥವಾಪದ್ಮಪತ್ರಾಕ್ಷೀವಿಷ್ಣುವಕ್ಷಸ್ಥಳಾಲಯಾ । ಅರುಂಧತೀವಾಹಿಣೀವಾಶಚೀವಾಸಿಸುಮಧ್ಯಮೇ ॥ ೬೨ ॥ ಕೋಮಲಂತೇವಪುಃಕಸ್ಮಾಛ್ರಮಯಿಷ್ಯಸ್ಯನಿಂದಿತೆ ॥ ವದಸ್ವಪ್ರಚ್ಛತೇಮೇದ್ಯರಹಸ್ಯಂಯದಿನೋಭವೇತ್ ॥ ೬೩ ॥ ಇಯಾಸುರಸ್ಮಿತಚ್ಛ್ರುತ್ವಾಯಥೇಷ್ಟಂಲೋಕವಂದಿತೇ ॥ ತಸ್ಯತದ್ವಚನಂಶ್ರುತ್ವಾಬ್ರಾಹ್ಮಣಸ್ಯೋಗ್ರತೇಜಸಃ ॥ ೬೪ ॥ ಉವಾಚಸತ್ಯಮತ್ರಸ್ತಾದೇವೀಸರ್ವಾಂಗಸುಂದರೀ ॥ ಶ್ರೀದೇವಿ ॥ ಹಿಮಾದ್ರಿತನಯಾಂಬ್ರಹ್ಮವಿದ್ಧಿಹೈಮವತೀತಿಮಾಂ ॥ ೬೫ ॥ ಸರ್ವೇಶ್ವರಪ್ರಸಾದಾರ್ಥಮಾಚರಂತಪಉತ್ತ

ಏ ಶ್ರೇಷ್ಠಳೇ, ಶುದ್ಧವಾದ ನಗೆವುಳ್ಳವಳೆ, ನೀನು ಒಬ್ಬಳೇ ಈ ಅಡವಿಯಲ್ಲಿ ಯಾಕೆ ಇದ್ದೀಯೆ? ಯಾವಾಕೆಯು ದೇವೇಶ್ವರನಾದ ಶ್ರೀಪರಮೇಶ್ವರನಿಗೆ ನೀನು ಪತ್ನಿಯಾದ ತ್ರಿಪುರಸುಂದರಿಯು ॥ ೬೧ ॥ ಹಾಗಿಲ್ಲದಿದ್ದರೆ ಶ್ರೀ ಮಹಾ ವಿಷ್ಣುವಿನ ವಕ್ಷಸ್ಥಳದಲ್ಲಿ ನೆಲಸಿರುವ ಕಮಲನೇತ್ರಯಾದ ಲಕ್ಷ್ಮೀದೇವಿಯು, ಅರುಂಧತೀದೇವಿಯು, ಸರಸ್ವತೀದೇವಿಯು ಏ ಸುಂದರವಾದ ಕಟಿವುಳ್ಳ ದೇವಿಯೇ ಶಚೀದೇವಿಯಾಗಿದ್ದೀಯೋ ॥ ೬೨ ॥ ಏ ದೋಷರಹಿತೆಯೇ, ಯಾವ ಕಾರಣದಿಂದ ಮೃದುವಾದ ನಿನ್ನ ಶರೀರವನ್ನು ಕಷ್ಟಪಡಿಸುತಿದ್ದಿ, ಕೇಳುತ್ತಿರುವ ನನಗೋಸ್ಕರ ಗುಟ್ಟಾಗಿರುವುದು ಅಲ್ಲದಿದ್ದರೆ ಹೇಳು ॥ ೬೩ ॥ ಏ ಲೋಕವಂದಿತೆಯಾದವಳೇ ನಾನು ಅದನ್ನು ಕೇಳಿಕೊಂಡು ನನ್ನ ಇಷ್ಟಾನುಸಾರ ಹೋಗುತ್ತೇನೆ. ಈಪ್ರಕಾರವಾದ ಸ್ಫೂರ್ತಿಯಾದ ತೇಜಸುಳ್ಳ ಆ ಬ್ರಾಹ್ಮಣನ ಮಾತನ್ನು ಕೇಳಿ ॥ ೬೪ ॥ ಯಾವ ಭೀತಿಯೂ ಇಲ್ಲದಿರುವ ಸರ್ವಾಂಗಸುಂದರಿಯಾದ ದೇವಿಯು ಸತ್ಯವನ್ನು ನುಡಿದಳು. ದೇವಿಯು ಹೇಳುತ್ತಾಳೆ. ಏ ಬ್ರಾಹ್ಮಣನೇ, ನಾನು ಹಿಮವಂತನ ಮಗಳಾದ ನನ್ನನ್ನು ಗಿರಿಜೆಯೆಂದು ತಿಳಿ ॥ ೬೫ ॥ ಸಮಸ್ತ ದೇವಸಮೂಹಗಳಿಂದ ಪೂಜಿಸಿಕೊಳ್ಳುತ್ತಿರುವ ಸರ್ವೇಶ್ವರನಾದ ಪರಮಾ

ಮಂ || ಭೂಯಾನ್ಮೇಭಗವಾನೀಶಃಪತಿಸ್ಸುರಗಣಾರ್ಚಿತಃ || ೬೬ ||
ಇತಿನಿಶ್ಚಿಂತ್ಯಮನಸಾತಪಃಕುರ್ವೇದ್ವಿಜೋತ್ತಮ || ಇತಿದೇವ್ಯಾವ
ಚಃಶ್ರುತ್ವಾಹರೋಬ್ರಾಹ್ಮಣರೂಪವಾನ್ || ೬೭ || ಸ್ಮಿತಂಕೃತ್ವಾ
ಪ್ರತ್ಯುವಾಚಕಾಮಾಕ್ಷೀಮಾತ್ಮನಃಪ್ರಿಯಾಂ || ೬೮ || ಚರ್ಮಾಂಬ
ರಂಚಶವಭಸ್ಮವಿಲೇಪನಂಚಭಿಕ್ಷಾಟನಂಚನಟನಂಚಪರೇತಭೂಮೌ||
ವೇತಾಳಸಂಹತಿಪರಿಗ್ರಹತಾಚಶಂಭೋಃ| ಶೋಭಾವಹಂತಿಗಿರಿಜೇತವ
ಸಾಹಚರ್ಯಾತ್ || ೬೯ || ಇತಿತದ್ವಚನಂಶ್ರುತ್ವಾಸರೋಷಾಪಿಚ

ತ್ಮನು ನನಗೆ ಪತಿಯು ಆಗಲೆಂಬ ಸಂಕಲ್ಪದಿಂದ ಆ ಪರಮೇಶ್ವ
ರನ ಅನುಗ್ರಹವನ್ನು ಸಂಪಾದಿಸುವುದಕ್ಕೋಸ್ಕರ ಈ ಉತ್ತಮವಾದ
ತಪಸ್ಸನ್ನು ಮಾಡುತ್ತಿದ್ದೇನೆ || ೬೬ || ಏ ಬ್ರಾಹ್ಮಣೋತ್ತಮನೇ
ಹೀಗೆ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು ತಪಸ್ಸನ್ನು ಮಾಡುವೆನು.
ಈಪ್ರಕಾರವಾದ ಗಿರಿಜಾದೇವಿಯ ಮಾತನ್ನು ಬ್ರಾಹ್ಮಣರೂಪನಾದ
ಸಕಲ ಪಾಪನಾಶಕರನಾದ ಆ ಪರಮಾತ್ಮನು ಕೇಳಿ || ೬೭ || ತನ್ನಲ್ಲಿ
ಪ್ರೀತಿಯುಳ್ಳ ಬಹು ಸುಂದರವಾದ ನೇತ್ರವುಳ್ಳ ಆ ದೇವಿಯನ್ನು ಕಂಡು
ನಗೆಯನ್ನು ಮಾಡಿ ತಿರುಗಿ ಮಾತನಾಡಿದನು || ೬೮ || ಏ ಗಿರಿಜಾ
ದೇವಿಯೇ ಆ ಪರಮೇಶ್ವರನಿಗೆ ಯಾವಾಗಲೂ ಚರ್ಮವೇ ವಸ್ತ್ರವು
ಕಾಮದಹನದ ಭಸ್ಮವೇ ಉದ್ಧೂಳನವು, ಶೋತ್ರಿಯರನ್ನು ಉತ್ತಮ
ಸ್ಥಿತಿಗೆ ತರುವುದಕ್ಕೋಸ್ಕರ ಅವರಲ್ಲಿಯೇ ಭಿಕ್ಷವು, ಮೃತ್ಯುಭೀತರಾದ
ಪ್ರಾಣಿಗಳಿಗೆ ಅಭಯವನ್ನು ಕೊಡುವುದಕ್ಕೇನೇ ಆ ಮರಣಸ್ಥಾನದಲ್ಲಿ
ನರ್ತನವು, ಇನ್ನಾವ ದೇವನಿಂದ ರಕ್ಷಿಸುವುದಕ್ಕೂ ಅಸಾಧ್ಯರಾಗಿಯೂ
ಅನಾಥರಾದ ಪ್ರಾಣಿಗಳೇ ಸೈನ್ಯವು ಹೀಗಿರುವ ಮತ್ತು ಕರ್ಮತದಿಂದ
ತತ್ಭಕ್ತಿ ಇಲ್ಲದೆ ತಿಳಿಯಲಸಾಧ್ಯಗಳಾದ ಆ ಮಹಿಮೆಗಳು ಹೀಗಿರುವ
ಸಹವಾಸದ ದೆಸೆಯಿಂದ ನಿನಗೆ ಹ್ಯಾಗೆ ಒಪ್ಪುವುವು || ೬೯ || ಈಪ್ರಕಾ
ರವಾದ ಆ ಬ್ರಾಹ್ಮಣನ ಮಾತನ್ನು ಕೇಳಿ ಸಿಟ್ಟುಬಂದಾಗ್ಯೂ ಸೈರಿಸಿ
ಮೃದುವಾದ ನುಡಿಯುಳ್ಳ, ಹ್ಯಾಗಾದರೂ ಆ ಪರಮಾತ್ಮನ ಸ್ಮರಣೆಯಿಂದ

ಶಾಂತವಾಕ್॥ವಿನಯಂಪ್ರತ್ಯುವಾಚೈನಂತಿವಾನಂದನಪಿಸ್ಮಿತ್ರಾ॥೨೦॥ ಸರ್ವೇಶ್ವರಮುದಾರಾಂಗಂಸ್ಮಿತವಕ್ತ್ರಂಜಗನ್ಮಯಂ ॥ ಕೋಟಿಕಂದರ್ಪಲಾವಣ್ಯಂಶುಕ್ಲಾಂಬರಧರಂಹರಂ ॥ ೨೧ ॥ ಸೂಪೂರ್ಣೈಃ ಕಾಂಚನೈರ್ದಿವ್ಯೈಃಕಟಿಸೂತ್ರಾಂಗುಳೀಯಕೈಃ ॥ ಆಪಾದಲಂಬಿಭಿಃ ಹಾರೈರ್ಮೌಕ್ತಿಕಾದ್ಯೈರ್ವಿರಾಜಿತಂ ॥ ೨೨ ॥ ಕಿರೀಟೇನಾರ್ಕವರ್ಣೇನಕುಂಡಲಾಭ್ಯಾಂಸುಶೋಭಿತಂ ॥ ಪದ್ಮಪತ್ರವಿಶಾಲಾಕ್ಷಂ ಯೋಗೀಧ್ಯೈಯಪಃಪಾಂಬುಜಂ ॥ ೨೩ ॥ ಬ್ರಹ್ಮಾದ್ಯೈಸ್ಸನಕಾದ್ಯೈಶ್ಚ ಪೂಜಿತಾಂಘ್ರಿಯುಗಂಶಿವಂ ॥ ನಿತ್ಯಂಧ್ಯಾಯಾಮಿವಿಪ್ರರ್ಷೆ ನಿಂದಸ್ವೈನಂನಮೇಗ್ರತಃ ॥ ೨೪ ॥ ಭಗವಂನಿಂದಕಾಃಪೂರ್ವಂ

ಸಂತೋಷಿತಳಾದ ಗರ್ವವಿಲ್ಲದಿರುವ ಆ ದೇವಿಯು ಇವನನ್ನು ಕುರಿತು ನೀತಿಯುಳ್ಳ ಮಾತನಾಡಿದಳು ॥ ೨೦ ॥ ಅದೇನಂದರೆ, ಎ ಬ್ರಾಹ್ಮಣನೇ ನಾನು ಯಾವಾಗಲೂ ಸರ್ವಸ್ವಾಮಿಯಾಗಿ ಶುಭಲಕ್ಷಣ ದೇಹವುಳ್ಳ, ನಗೆಮುಖವುಳ್ಳ ಜಗನ್ಮಯನಾದ ಕೋಟಿ ಮನ್ಮಥ ಸುಂದರನಾದ ಬಿಳೀ ವಸ್ತ್ರವನ್ನುಟ್ಟಿರುವ ಪಾಪನಾಶನನಾದ ॥ ೨೧ ॥ ಸ್ವರ್ಣಮಯಗಳಾದ ಕಡಗ, ಡಾಬು, ನ್ಯೆವಳ ಉಂಗುರಗಳು ಕಾಲಿನ ತುದಿಗೂ ಬಂದಿರುವ ಮುತ್ತಿನ ಪದಕ ಸರಗಳಿಂದ ಶೋಭಿತನಾದ ॥ ೨೨ ॥ ಸೂರ್ಯನಂತಿರುವ ಕಿರೀಟದಿಂದ ರತ್ನಮಯಗಳಾದ ಎರಡು ಕುಂಡಲಗಳಿಂದ ಶೋಭಿತನಾದ, ಕಮಲ ದಳದಂತೆ ವಿಶಾಲಗಳಾದ ಕಣ್ಣುಗಳುಳ್ಳ, ಯೋಗೀಶ್ವರರಿಂದ ಧ್ಯಾನಿಸಿಕೊಳ್ಳುತ್ತಿರುವ ಚರಣಪದ್ಮವುಳ್ಳ ॥ ೨೩ ॥ ಬ್ರಹ್ಮನೇ ಮೊದಲಾದ ದೇವರಿಂದ ಸನಕಋಷಿಯೇ ಮೊದಲಾದ ಋಷಿಗಳಿಂದ ಪೂಜಿತವಾದ ಪಾದಪದ್ಮವುಳ್ಳ ನಿತ್ಯಮಂಗಲ ರೂಪನಾದ ಆ ಪರಮಾತ್ಮನನ್ನು ಯಾವಾಗಲೂ ಧ್ಯಾನಿಸುವೆನು. ಇಂಥಾ ದೇವನನ್ನು ನನ್ನ ಮುಂದೆ ನಿಂದಿಸಬೇಡ ॥ ೨೪ ॥ ಎ ಬ್ರಾಹ್ಮಣನೇ, ಹಿಂದೆ ಭಗವಂತನನ್ನು ನಿಂದಿಸಿರುವ ದಕ್ಷಪ್ರಜಾಪತಿ, ಲಕ್ಷ್ಮೀದೇವಿ ಮಗನಾದ ಮನ್ಮಥ ಮೊದಲಾದವರು ನಾಶವನ್ನು ಹೊಂದಿ

ದಕ್ಷಲಕ್ಷ್ಮಿಸ್ತುತಾಪಯಃ ॥ ವಿನಾಶಂಗಮಿತಾವಿಪ್ರಶ್ರುತವಾನಸಿವೈದಿ
ಕೇ ॥ ೭೫ ॥ ಸ್ವಸ್ತಿತೇಸ್ತುವ್ರಜಸ್ವಾದ್ಯದಯಾಂಕೃತ್ವಾಮಯಿಪ್ರ
ಭೋ ॥ ಇತಿದೇವ್ಯಾವಚಃಶ್ರುತ್ವಾಪ್ರತ್ಯುವಾಚಸುರೇಶ್ವರೀಂ॥೭೬॥ಸು
ದೃಢಾಶಂಕರೇಭಕ್ತಿರ್ಜಗದೀಶೇಚಿದಾತ್ಮಕೇ ॥ ತಸ್ಮಾತ್ತೇಭಗವಾನ್ ದೇ
ವಃಪಾಣಿಗ್ರಹಣಮಾತನೋತು ॥೭೭॥ ಜಿಜ್ಞಾಸುನಾಭಕ್ತಿಭಾವಂ
ಮಯಾಪೃಷ್ಟಾಸಿಮಂಗಲೇ ॥ ಗಿರಿಜೇಮಂಗಲಂತೇಸ್ತುಯಾಸ್ಯಾಮ್ಯ
ದ್ಯೈವಮದ್ಗೃಹಂ ॥ ೭೮ ॥ ಬ್ರುವನ್ನೇವಂಮಹಾದೇವಸ್ತತ್ರೈ
ವೈನಾಮಲೋಕಯತ ॥ ಅಲೋಕನಾದ್ಭಾಷಣಾಚದೇವದೇವಸ್ಯಶೂ
ಲಿನಃ ॥ ೭೯ ॥ ಆಲೋಕ್ಯಪತಿತಂಸುಭ್ರೂರ್ಮಧ್ಯಮಸ್ತ್ವಕುಚಂ

ದರು. ಪೂರ್ವದಲ್ಲಿ ಈ ಕಥೆಯು ವೇದದಲ್ಲಿ ಇರುತ್ತದೆ. ಅದನ್ನು ನೀನು ಕೇಳಿಬಲ್ಲೆಯಾ ॥ ೭೫ ॥ ಎ ಯೋಗಿಯೆ, ನಿನಗೆ ಒಳ್ಳೆಯದಾಗಲಿ. ನನ್ನಲ್ಲಿ ಅನುಗ್ರಹವಿಟ್ಟು ಈಗಲೇ ಇಲ್ಲಿಂದ ಹೋಗು. ಈಪ್ರಕಾರವಾದ ಆ ಗಿರಿಜಾದೇವಿಯ ಮಾತನ್ನು ಕೇಳಿ ತಿರುಗಿ ಆದೇವಿಯೊಡನೆ ಮಾತನಾಡಿದನು ॥ ೭೬ ॥ ಎ ದೇವಿಯೇ, ನಿನಗೆ ಜ್ಞಾನಸ್ವರೂಪನಾದ, ಜಗತ್ಪತಿಯಾದ ಪರಮೇಶ್ವರನಲ್ಲಿ ಶಾಶ್ವತವಾದ ಭಕ್ತಿಯೂ ಇದೆ. ಆದಕಾರಣ ದೇಶಯಿಂದ ಆ ಭಗವಂತನು ನಿನ್ನನ್ನು ಪಾಣಿಗ್ರಹಣ ಮಾಡಲಿ ॥ ೭೭ ॥ ಎ ಮಂಗಲಸ್ವರೂಪಳಾದ ಗಿರಿಜೆಯೆ, ನಿನ್ನ ಭಕ್ತಿ ವಿಷಯವನ್ನು ತಿಳಿಯಲಿಚ್ಛೆಯುಳ್ಳ ನನ್ನಿಂದ ನೀನು ಕೇಳಿಸಿ ಕೊಂಡವಳಾದೆ, ನಿನಗೆ ಶುಭವು ಆಗಲಿ. ನಾನು ನನ್ನ ಮನೆಯನ್ನು ಕುರಿತು ಹೋಗುವೆನು ॥೭೮॥ ಹೀಗೆ ಹೇಳುತ್ತಾ ಆ ಮಹಾದೇವನು ಅಲ್ಲಿಯೇ ಆ ದೇವಿಯನ್ನು ಶುಭದೃಷ್ಟಿಯಿಂದ ನೋಡಿದನು. ದೇವೇಶ್ವರನಾದ ತ್ರಿಶೂಲಧಾರಿಯಾದ ಆ ದೇವನ ಸಂಭಾಷಣೆಯಿಂದ ನೋಡಿಸಿಕೊಳ್ಳುವದರಿಂದಲೂ ॥೭೯॥ ದೇವಿಗೆ ಇರುವ ಮೂರು ಸ್ಥನಗಳಲ್ಲಿ ನಾರದ ಋಷಿಯ ಮಾತಿನಂತೆ ಮಧ್ಯಮವಾದ ಸ್ಥನವು ಕೆಳಕ್ಕೆ ಬಿದ್ದು ಮಾಯವಾಯಿತು. ಇದನ್ನು ಕಂಡು ಬಹಳ ನಾಚಿಕೆಯುಳ್ಳವಳಾದಳು. ಪ್ರೀತಿ

ಶುಭಾ ॥ ಲಜ್ಜಯಾವನತ ಬಾಲಾಮನಸಾಪರಿಷಸ್ವಜೇ ॥ ೮೦ ॥ ತತ್ರೂರ್ವ ರ್ವಮೇವದೇವೇಶೋಹ್ಯಂತರ್ಧಾನಂಗತೋಹರಃ ॥ ಉಷ್ಣಾಂಶುಕಿರಣಕ್ಲಾದಪದ್ಮಿನೀವಶುಚಿಸ್ಮಿತಾ ॥ ೮೧ ॥ ಅಂಬಾಗತಾಥನಿಲಯಂಪವಂದೇಚರಣೌಪಿತುಃ ॥ ಜನನ್ಯೈಕಥಯಂತೀಸಾಪ್ರಸಾದಂಪರಮೇಶಿತುಃ ॥ ೮೨ ॥ ತತಃಉತ್ಥಾಯತರಸಾಚಾಲಿಂಗ್ಯೈನಾಂಸುರೇಶ್ವರೀಂ ॥ ಆನಂದಸಾಗರೇಮಗ್ನೌದಂಪತೀತೌಬಭೂವತುಃ ॥೮೩॥ ಆಶೀರ್ವಾದೈಃಪ್ರಪೂಜ್ಯೈನಾಂಲೇಭಾತೇಪರಮಾಂಮುದಂ ॥ ತತೋದೈವದಶಮೇವರ್ಷೇಸುನಕ್ಷತ್ರೇಸುಲಗ್ನಕೇ ॥ ೮೪ ॥ ಪ್ರದದೌಪರಮೇಶಾಯವೈಕುಂಠಾದ್ಯರ್ಚಿತಾಂಘ್ರಯೇ ॥ ವಿವಾಹಂವಿಧಿವದ್ರಾ

ಯುಳ್ಳ ಮನಸ್ಸಿನಿಂದ ಆಲಂಗಿಸಿದಳು. ತಾನು ದೂರದಲ್ಲಿಯೇ ನಿಂತಿದ್ದಳು ॥ ೮೦ ॥ ಅಷ್ಟರಲ್ಲಿಯೇ ಆ ಪರಮೇಶ್ವರನು ಅದೃಶ್ಯನಾದನು. ಇತ್ತಲು ಪಾರ್ವತೀದೇವಿಯು ಬೆಳಗಿನ ಬಿಸಿಲಿನಿಂದ ಅರಳಿರುವ ಕಮಲದಂತೆ ಮನಸ್ಸಿಗೆ ಹರ್ಷವುಳ್ಳವಳಾಗಿ ॥ ೮೧ ॥ ಅನಂತರ ತನ್ನ ತಂದೆಯ ಮನೆಗೆ ಬಂದು ಆತನ ಪಾದಗಳನ್ನು ಕುರಿತು ತಾಯಿಗೋಸ್ಕರ ಶ್ರೀಪರಮೇಶ್ವರನ ಅನುಗ್ರಹವನ್ನು ಹೇಳುವಂತವಳಾಗಿ ನಮಸ್ಕರಿಸಿದಳು ॥ ೮೨ ॥ ಹೀಗೆ ತಪಸ್ಸನ್ನು ಮಾಡಿ ಸುಖವಾಗಿ ಸಂತೋಷದಿಂದ ಬಂದು ನಮಸ್ಕಾರವನ್ನು ಮಾಡುವ ಆ ಮಗಳನ್ನು ನೋಡಿ ಆ ಕ್ಷಣ ಜಾಗ್ರತೆಯಿಂದ ತಂದೆ ತಾಯಿ ಇಬ್ಬರೂ ಮಗಳನ್ನು ಆಲಂಗಿಸಿ ಸಂತೋಷವೆಂಬ ಸಮುದ್ರದಲ್ಲಿ ಮುಗ್ನರಾದರು ॥೮೩॥ ಮತ್ತು ಆಕೆಯನ್ನು ಕುರಿತು ಆಶೀರ್ವಾದಗಳಿಂದ ಸಂತೋಷಪಡಿಸಿ ಪರಮಸಂತೋಷವನ್ನು ಪಡೆದರು. ಅನಂತರ ಅಗ್ಗ ಸಮಿಸಿರುವ ಹತ್ತನೆಯ ವರ್ಷದ ಶುಭ ನಕ್ಷತ್ರದಲ್ಲಿ ಶುಭಲಗ್ನದಲ್ಲಿ ॥ ೮೪ ॥ ಅರಸನಾದ ಹಿಮವಂತನು ತನ್ನ ಬಂಧುಗಳಿಂದ ಕೂಡಿಕೊಂಡು ವೈಕುಂಠನೇ ಮೊದಲಾದ ದೇವತೆಗಳಿಂದ ಪೂಜ್ಯವಾದ ಚರಣಕಮಲವುಳ್ಳ ಶ್ರೀಪರಮೇಶ್ವರನಿಗೋಸ್ಕರ ತನ್ನ ಮಗಳಾದ ಪಾರ್ವತಿದೇವಿಯನ್ನು ವಿವಾಹ

ಜಾಚಕಾರಾತ್ಮಜನೈಸ್ಸಹ ॥ ೮೫ ॥ ಗಮಯಾಮಾಸದೇವೇಶಂಪರಿ
ವಾರಗಣೈರ್ಯುತಂ ॥ ಅಥಾಸಹಮಹಾದೇವಃ ಕೈಲಾಸಮಗಮತ್ಪು
ರಂ ॥ ೮೬ ॥ ಸ್ತೂಯಮಾನೋಮುನಿಗಣೈರ್ಬ್ರಹ್ಮಾದ್ಯೈರ್ದೇ
ವಸಂಸದಿ ॥ ಪ್ರತಿನಂದ್ಯಸುರಾನ್ ಸರ್ವಾನ್ ಪ್ರೇಷಯಾಮಾಸಶಂ
ಕರಃ ॥ ೮೭ ॥ ತಯಾದೇವ್ಯಾಮಹಾದೇವಃಶ್ರಿಯಾವಿಷ್ಣುರಿವೇ
ಶ್ವರಃ ॥ ಆಸ್ತೇಕೈಲಾಸಭವನೇಸ್ವಾನಂದಾನುಭವಾತ್ಮವಾನ್ ॥೮೮॥
ಯ ಇದಂಗಿರಿಜಾದೇವ್ಯಾದಸ್ತಪಶ್ಚರ್ಯಾದಿಮಂಗಲಂ ॥ ವಿವಾ
ಹೋತ್ಸವಸಂಯುಕ್ತಂಶೃಣೋತಿಶ್ರಾವಯತ್ಯಪಿ ॥ ೮೯ ॥ ಸರ್ವ
ಪಾಪವಿನಿರ್ಮುಕ್ತಃಶಿವೇಹಿಪರಮಾತ್ಮನಿ ॥ ಭಕ್ತಿಮಾನ್ಭವಿತಾಸರ್ವ

ಮಾಡಿಕೊಟ್ಟನು ॥ ೮೫ ॥ ಹೀಗೆ ವಿವಾಹೋತ್ಸವವು ಅವಭೃತಪರಿಯಂತವಾಗಿ ಮುಗಿದನಂತರ ಹಿಮವಂತನು ಸಕಲ ಪರಿವಾರ ಸಮೇತನಾದ ಮತ್ತು ಮದವಣಗಿತ್ತಿಯಿಂದ ಸಹಿತನಾದ ಆ ದೇವೇಶನನ್ನು ಬಹುಮಾನಪೂರ್ವಕ ಕಳುಹಿಸಿ ಕೊಟ್ಟನು. ಆ ಪರಮೇಶ್ವರನು ಕೈಲಾಸವೆಂಬ ಪರ್ವತವನ್ನು ಪ್ರವೇಶ ಮಾಡಿದನು ॥೮೬॥ ಸಚ್ಚಿದಾನಂದನೂ ಸುಖಪ್ರದನೂ ಆದ ಆ ಪರಮೇಶ್ವರನು ತನ್ನ ದಿವ್ಯ ಮಂದಿರದಲ್ಲಿ ಸಿಂಹಾಸನಾರೂಢನಾಗಿ ಬ್ರಹ್ಮಾದಿ ದೇವರಿಂದಲೂ ಋಷಿಗಳ ಸಮೂಹದಿಂದಲೂ ಜಯಶಬ್ದ ನಮಃಶಬ್ದ ಪೂರ್ವಕವಾಗಿ ಸ್ತುತಿಸಿಕೊಳ್ಳುತ್ತಿದ್ದನು. ಅನಂತರ ಬಂದಿರುವ ಸಮಸ್ತ ದೇವತೆಗಳನ್ನೂ ಮುನೀಶ್ವರನನ್ನೂ ಕೂಡ ಬಹುಮಾನಪೂರ್ವಕವಾಗಿ ಸಂತೋಷಪಡಿಸಿ ಕಳುಹಿಸಿ ಕೊಟ್ಟನು॥೮೭॥ಆ ಪರಮೇಶ್ವರನು ಪ್ರಕಾಶಮಾನಳಾದ ಆ ದೇವಿಯಿಂದೊಡಗೂಡಿ ವೈಕುಂಠಭವನದಲ್ಲಿ ಶ್ರೀ ಲಕ್ಷ್ಮಿಯಿಂದೊಡಗೂಡಿ ಮಹಾವಿಷ್ಣು ವಿನೋದಾದಿಯಲ್ಲಿ ಕೈಲಾಸಪುರದ ಅರಮನೆಯಲ್ಲಿ ತನ್ನ ಸಂತೋಷದಿಂದಲೇ ಕೂಡಿದ ಸ್ವರೂಪವುಳ್ಳವನಾಗಿ ಇದ್ದಾನೆ ॥ ೮೮ ॥ ಯಾವ ಮನುಷ್ಯನು ಸ್ತ್ರೀ ಪಾರ್ವತೀದೇವಿಯು ತಪಸ್ಸನ್ನು ಮಾಡಿರುವುದು ಮೊದಲಾದ ಶುಭಕರವಾದ ಕಲ್ಯಾಣೋತ್ಸವದ ಈ ಚರಿತ್ರೆಯನ್ನು

ಸಂಪದ್ಯುಕ್ತಃಸುಖೀಭವೇತ್ ॥ ೯೦ ॥

ಇತಿಸ್ಕಂದಪುರಾಣೆ ತುಂಗಭದ್ರಾಖಂಡೆ ಚತುರ್ಥೋಧ್ಯಾಯಃ ॥

ಶ್ರೀ ॥ ಶ್ರೀ ॥ ಶ್ರೀ ॥ ಶ್ರೀ ॥

ಕೇಳುತ್ತಾನೋ ಹೇಳುತ್ತಾನೊ ॥ ೮೯ ॥ ಅಂಥವನು ಸಮಸ್ತ ಪಾಪಗಳಿಂದ ಬಿಡಿಸಿಕೊಂಡು ಪರಮಾತ್ಮನಲ್ಲಿ ಭಕ್ತಿಯುಳ್ಳವನಾಗಿ ಧನಾಧಿ ಸಂಪತ್ತುಳ್ಳವನಾಗಿ ಸುಖವಾಗಿರುವನು ॥ ೯೦ ॥

ಟೀಕಾಯಾಂ ಪ್ರಾಕೃತಾಖ್ಯಾಯಾಂರಾಮಂದ್ಯೈವಜ್ಞ
ಶರ್ಮಣಾ ಅಧ್ಯಾಯಾ ಭೂತ್ಸ್ವದೀಯಸ್ತು ರಚಿತಾಯಾಂ
ಮಯಾಭುನಾ ॥

ಶ್ರೀಸ್ಕಂದ ಉವಾಚ ॥ ತತಃಕಿಂಕೃತವಾನ್‌ದೇವಸ್ಯಮುನಿಃಕುಂಭಸಂಭವಃ ॥ ವದಸ್ವಮೇದಯಾಂಕೃತ್ವಾಸರ್ವಜ್ಞಜಗದೀಶ್ವರ॥೧॥ ಶ್ರೀಭಗವಾನ್ ॥ ಶೃಣುಪುತ್ರಪ್ರವಕ್ಷ್ಯಾಮಿಕಲಶೋದ್ಭವಚೇಷ್ಟಿತಂ ॥ ತತೋಗಸ್ತ್ಯೋಮದ್ವಿವಾಹಂ ದಿದೃಕ್ಷುರ್ಭಾರ್ಯಯಾಸಹಾ ॥ ೨ ॥ ವಾರಣಾಸೀಂಯಯೌವಿಪ್ರೋಬಹುಶಿಷ್ಯಸಮನ್ವಿತಃ ॥ ಯದಾಹಿ ದಕ್ಷಿಣಾಂಭೂಮಿಂತ್ಯಕ್ತ್ವಾಯಾತೇಮುನೀಶ್ವರೇ ॥ ೩ ॥ ನಿಮ್ನಿತಾ ಚೋತ್ತರಾಭೂಮಿರ್ದಕ್ಷಿಣಾ ಮಹದುನ್ನತಾ ॥ ಆಗತಾಃಶಿವ

೫ನೆಯ ಅಧ್ಯಾಯ ಪ್ರಾರಂಭ.

ಆಮೇಲೆ ಕುಮಾರಸ್ವಾಮಿಯು ಭಗವಂತನನ್ನು ಕುರಿತು ಕೇಳುತ್ತಾನೆ. ಏ ದೇವನೇ, ಜಗದೀಶ್ವರನೆ, ಸರ್ವಜ್ಞನೆ, ಆ ಕಲಶದಲ್ಲಿ ಹುಟ್ಟಿದ ಅಗಸ್ತ್ಯಮುನಿಯು ಶ್ರೀ. ಕಲಶೇಶ್ವರನನ್ನು ಪೂಜಿಸುತ್ತಾ ತಪಸ್ಸನ್ನುಮಾಡಿಕೊಂಡು ಸುಖವಾಗಿದ್ದನು ಎಂದು ೧ನೇ ಅಧ್ಯಾಯದಲ್ಲಿ ಕೇಳಿದೆಯಷ್ಟೆ. ಆ ಮುನಿಯು ಮತ್ತೇನನ್ನು ಮಾಡಿದನೊ ಅದನ್ನೂ ನನಗೋಸ್ಕರ ದಯಮಾಡಿ ಹೇಳು ॥ ೧ ॥ ಶ್ರೀ ಭಗವಂತನು ಹೇಳುತ್ತಾನೆ. ಏ ಮಗನೆ, ಅಗಸ್ತ್ಯನ ಚರಿತ್ರೆಯನ್ನು ಹೇಳುತ್ತೇನೆ ಕೇಳು. ಹೀಗಿರುವ ಅಗಸ್ತ್ಯಮುನಿಯು ಕಾಶೀಕ್ಷೇತ್ರದಲ್ಲಿ ವಿಶ್ವೇಶ್ವರ ದೇವರಿಗೆ ನಡೆಯುವ ನಿನ್ನ ಕಲ್ಯಾಣೋತ್ಸವವನ್ನು ನೋಡಲಿಚ್ಛೆಯಿಂದ ದೇವರ ಆಜ್ಞೆಯಿಂದ ತಾನು ವಿವಾಹವನ್ನು ಮಾಡಿಕೊಂಡ ಲೋಪಾಮುದ್ರೆಯೆಂಬ ಪತ್ನಿಯಿಂದ ಸಹಿತನಾಗಿ ಬಹು ಶಿಷ್ಯರಿಂದಲೂ ಕೂಡಿ ಈ ದಕ್ಷಿಣ ದೇಶವನ್ನು ಬಿಟ್ಟು ಕಾಶಿಕ್ಷೇತ್ರವನ್ನು ಕುರಿತು ಯಾವಾಗ್ಯೆ ಪ್ರಯಾಣಿಸಿದನೋ ಆಗ್ಯೆ ಈ ಋಷೀಶ್ವರನು ಪ್ರಯಾಣಿಸುತ್ತಿಲೆ ಉತ್ತರದೇಶವು ತಗ್ಗಿತು. ದಕ್ಷಿಣ ದೇಶವು ಎತ್ತರದಂತೆ ಆಯಿತು. ಆಗ್ಯೆ ಕಾಶೀಕ್ಷೇತ್ರದಲ್ಲಿ ಶ್ರೀ ಕಲ್ಯಾಣೋತ್ಸವವನ್ನು ನೋಡುವದಕ್ಕೆ ಬಂದಿರುವ ಸಮಸ್ತ ದೇವತೆ

ಕಲ್ಯಾಣಂದ್ರಷ್ಟುಕಾಮಾಃಸುರೇಶ್ವರಾಃ ॥ ೪ ॥ ಲಕ್ಷ್ಮ್ಯಾಸಹಾಮಹಾ
ವಿಷ್ಣುಃಸರಸ್ವತ್ಯಾಚತುರ್ಮುಖಃ ॥ ಸರ್ವೇಸ್ವಭಾರ್ಯ್ಯಾಯುಕ್ತಾ
ಕ್ತಾದೇವಾವ್ಯೈಮುನಿಭಿಃಸಹ ॥ ೫ ॥ ಚತುರ್ದಶಸುಲೋಕೇಷುಸ್ಥಿ
ತಾಃಸರ್ವೇಮಹಾಜನಾಃ ॥ ಸ್ಥಾವರಾಜಂಗಮಾಶ್ಚೈವಮೂರ್ತಿ
ಮಂತಃಸಮಾಗತಾಃ ॥ ೬ ॥ ದೃಷ್ಟ್ವಾತಪಾಭುವಂದೇವಾನಿಮ್ನಿ
ತಾಮುತ್ತರಾಂಬಹು ॥ ಬ್ರಹ್ಮಾದ್ಯಾದೇವತಾಃಸರ್ವೇಕಲ್ಯಾಣೇ
ಮಂಟಪೆಸ್ಥಿತಂ ॥ ೭ ॥ ಸ್ತುತ್ವಾಬಹುವಿಧೈಸ್ತೋತ್ರೈಃಪುರಸ್ಕೃ
ತ್ಯಹರಿಂಸುರಾಃ ॥ ಮಾಮೂಚುರ್ಭಗವನ್ದೇವನಿಮ್ನಿತಾಭೂರಿ
ಯಂಪ್ರಭೋ ॥ ೮ ॥ ದಕ್ಷಿಣೇಚೋನ್ನತಾಚಾಪಿಜಗತ್ಕ್ಷೇಮಂವಿಚಿಂ
ತಯ ॥ ಇತಿದೇವವಚಃಶ್ರುತ್ವಾಕಾರ್ಯಂಚಗುರುಲಾಘವಂ ॥ ೯ ॥
ನಿಶ್ಚಿತತ್ಯೋವಾಚಭೋದೇವಾಮಯೋಕ್ತಂಶೃಣುತಾದರಾತ್ ॥ ಪು

ಗಳು ॥ ೪ ॥ ಲಕ್ಷ್ಮೀದೇವಿಯಿಂದೊಡಗೂಡಿದ ಶ್ರೀಮಹಾವಿಷ್ಣುವು,
ಸರಸ್ವತೀದೇವಿಯುಂದೊಡಗೂಡಿದ ಬ್ರಹ್ಮದೇವನು, ಪತ್ನಿಗಳಿಂದ
ಕೂಡಿರುವ ಎಲ್ಲಾ ದೇವತೆಗಳು, ಋಷಿಗಳಿಂದ ಸಹಿತರಾಗಿ ॥ ೫ ॥
ಹದಿನಾಲ್ಕು ಲೋಕದಲ್ಲಿರುವ ಸಮಸ್ತ ಸತ್ಪುರುಷರು, ಆಕಾರವನ್ನು
ಧರಿಸಿರುವ ಚರಾಚರ ಪ್ರಾಣಿಗಳು ಸಹಾ ಆ ಕಾಶೀಕ್ಷೇತ್ರಕ್ಕೆ ಬಂದಿ
ದ್ದರು ॥ ೬ ॥ ಆ ಸಮಸ್ತರೂ ಹೀಗೆ ತಗ್ಗಾಗಿರುವ ಉತ್ತರ ಭೂಮಿಯು
ನ್ನುಕಂಡು ಬ್ರಹ್ಮನೇ ಮೊದಲಾದ ಸರ್ವ ದೇವತೆಗಳೂ ವಿವಾಹ
ಮಂಟಪದಲ್ಲಿ ಬಿಜಯಂಗೈದ ಶ್ರೀಪರಮೇಶ್ವರನನ್ನು ॥ ೭ ॥ ಬಹು
ಪ್ರಕಾರವಾಗಿ ಸ್ತುತಿಸಿ ಮಹಾವಿಷ್ಣುವನ್ನು ಮುಂದಿಟ್ಟುಕೊಂಡು
ನನ್ನನ್ನು ಕುರಿತು, ಎ ಭಗವಂತನಾದ, ದೇವನಾದ ಸ್ವಾಮಿಯೇ
ಈ ಭೂಮಿಯು ಬಹಳ ತಗ್ಗಿ ಹೋಗುತ್ತಿದೆ ॥ ೮ ॥ ದಕ್ಷಿಣಪ್ರಾಂತ್ಯ
ಎತ್ತರವಾಗುತ್ತಾಯಿಧೆ. ಆದ್ದರಿಂದ ಈ ಜಗತ್ತಿಗೆ ಹ್ಯಾಗೆ ಸುಖವಾ
ದೀತೊ ಹಾಗೆ ಆಲೋಚಿಸು. ಈಪ್ರಕಾರವಾದ ದೇವತೆಗಳ ಮಾತನ್ನು
ಕೇಳಿ ಕಾರ್ಯದ ಹೆಚ್ಚುಕಮ್ಮಿಯನ್ನು ಕೂಡ ಆಲೋಚಿಸಿ ॥ ೯ ॥

ರಾಹಿಕಲಶಕ್ಷೇತ್ರೇಜಾತಸ್ಯಚಮುನೇಸ್ತದಾ ॥ ೧೦ ॥ ತ್ರಿಲೋಕೀ
ಸಮತಾಭೂತ್ವಾಲೋಕೇತಿಷ್ಟಮಹಾಮತೇ ॥ ದದ್ಯಾಮಿತಂವರಂ
ತಸ್ಮೈಸಆಯಾತಿದಿದೃಕ್ಷಯಾ ॥ ೧೧ ॥ ಗತ್ವಾಪ್ರಾರ್ಥ್ಯಾರ್ಥಸದ್ಭ
ಕ್ತ್ಯಾಮಾರ್ಗಸ್ಥಂಮುನಿಸತ್ತಮಂ ॥ ಈಶ್ವರಸ್ಯವಚಃಶೃತ್ವಾಬ್ರಂ
ಹ್ಮಾದ್ಯಾವಿಷ್ಣುಪೂರ್ವಕಾಃ ॥ ೧೨ ॥ ಭಾರ್ಯಾಶಿಷ್ಯಸಮಾಯು
ಕ್ತಂಪ್ರೋಚುಃಸರ್ವೆಸುರೇಶ್ವರಾಃ॥ ತೇಷಾಂಮಧ್ಯೇಮಹಾವಿಷ್ಣುಃ
ಪ್ರೋವಾಚವಚನಂಮುದಾ ॥ ೧೩ ॥ ವಿಷ್ಣು ॥ ಭೋಭೋಗಸ್ತ್ಯ
ಮಹಾಪ್ರಾಜ್ಞಸರ್ವಶಾಸ್ತ್ರವಿಶಾರದ॥ ಲೋಕಾನಾಂಚಹಿತಾರ್ಥ

ನಿಶ್ಚೈಸಿ ಹೇಳಿದೇನು. ಎ ದೇವಶ್ರೇಷ್ಠರುಗಳಿರಾ! ನನ್ನಿಂದ ಹೇಳಲ್ಪಡುವ ಮಾತನ್ನು ಪ್ರೀತಿಯಿಂದ ಕೇಳಿ, ಹಿಂದೆ ದಕ್ಷಿಣ ದೇಶಸ್ಥವಾದ ಕಲಶಕ್ಷೇತ್ರದಲ್ಲಿ ಹುಟ್ಟಿರುವ ಅಗಸ್ತ್ಯಋಷಿಗೆ ಎ ಬುಧಿವಂಶನೆ, ಮೂರು ಲೋಕದ ಸಮಾನವಾದ ಭಾರವುಳ್ಳವನಾಗು ಎಂದು ಹೀಗೆ ವರವನ್ನು ಕೊಟ್ಟಿಯಿದ್ದೆ. ಈಗ ಆ ಋಷಿಯು ಇಲ್ಲಿಗೆ ಕಲ್ಯಾಣೋತ್ಸವವನ್ನು ನೋಡುವ ಇಚ್ಛೆಯಿಂದ ಬರುತ್ತಾನೆ ॥ ೧೧ ॥ ನೀವು ಸರ್ವರೂ ಅಲ್ಲಿಗೆಹೋಗಿ ಒಳ್ಳೇ ವಿಶ್ವಾಸದಿಂದ ಮಧ್ಯಮಾರ್ಗಸ್ಥನಾದ ಆ ಋಷಿಯನ್ನು ಹಿಂದಕ್ಕೆ ಹೋಗುವಂತೆ ಪ್ರಾರ್ಥಿಸಿ, ಹಾಗೆ ಹಿಂದಕ್ಕೆ ಅವನು ಹೋದರೆ ಕ್ಷೇಮವಾಗುವದು, ಎಂದು ಹೇಳಿದ ಶ್ರೀಪರಮಾತ್ಮನ ಮಾತನ್ನು ಮಹಾವಿಷ್ಣು ಮೊದಲುಗೊಂಡು ಬ್ರಹ್ಮಾದಿ ದೇವತೆಗಳೂ ಕೇಳಿ ॥ ೧೨ ॥ ಪತ್ನಿಯಾದ ಲೋಪಾಮುದ್ರಾದೇವಿಯಿಂದಲೂ ಶಿಷ್ಯರುಗಳಿಂದಲೂ ಕೂಡಿರುವ ಅಗಸ್ತ್ಯ ಋಷಿಯನ್ನು ಎಲ್ಲಾ ದೇವತೆಗಳು ಮಾತನಾಡಿಸಿದರು.. ಈ ದೇವತೆಗಳ ಮಧ್ಯದಲ್ಲಿರುವ ವೈಕುಂಠೇಶನು ಸಂತೋಷದಿಂದ ಅವನನ್ನು ಕುರಿತು ಮಾತನಾಡಿದನು ॥ ೧೩ ॥ ಅಹೋ ಸಮಸ್ತಶಾಸ್ತ್ರವನ್ನೂ ಚನ್ನಾಗಿ ತಿಳಿದಿರುವ ಎ ಪ್ರಾಜ್ಞನಾದ ಅಗಸ್ತ್ಯನೇ, ನೀನು ಸಮಸ್ತಲೋಕಗಳಿಗೆ ಹಿತವಾಗುವದಕ್ಕೋಸ್ಕರ ದಕ್ಷಿಣ ದೇಶದ ಭೂಮಿಯನ್ನು

ಯಾದಕ್ಷಿಣಾಂಥರಣೀಂವ್ರಜ ॥ ೧೪ ॥ ಇಯಮುತ್ತರತೋನಿ ಘ್ನಾಚೋನ್ನತಾವಕ್ಷಿಣೇಮುನೇ ॥ ಸಮೀಕರಣಶಕ್ತೋಸಿತಸ್ಮಾ ದ್ಯಾಹಿಮುನೀಶ್ವರ ॥ ೧೫ ॥ ಯಿತಿವಿಷ್ಣೋರ್ವಚಃಶೃತ್ವಾಕುಂಭ ಯೋನಿರ್ಮಹಾಮುನಿಃ ॥ ಉವಾಚವಚನಂಕಾಲೇಬಹುದುಃಖಸ ಮನ್ವಿತಃ ॥ ೧೬ ॥ ಲೋಕಾಃಸರ್ವೇಸಮಾಯಾತಾಶಿವಾಹೋತ್ಸ ವ ದರ್ಶನೇ॥ಕಥಂತ್ಯಕ್ತ್ವಾಗಮಿಷ್ಯಾಮಿದಕ್ಷಿಣಾಂಚದಿಶಂಹರೇ॥೧೭॥ ಮತ್ತೋವಿಘ್ನಾಭವಿಷ್ಯಂತಿಕಾಶೀಪುರನಿವಾಸಿನಾಂ ॥ ತದಿಂಗಿತ ಜ್ಞೋಭಗವಾನಾದಿದೇವಃಸತಾಂಗತಿಃ ॥ ೧೮ ॥ ಆವಿರಾಸೀಜಗದಾ ಧ

ಕುರಿತು ಹೋಗು ॥ ೧೪ ॥ ಏ ಸಮಸ್ತ ಮುನಿಗಳಿಗೆ ಶ್ರೇಷ್ಠನಾದ ಋಷಿಯೇ, ಈ ಭೂಮಿಯು ಉತ್ತರಕ್ಕೆ ತಗ್ಗಾಗಿಯೂ ದಕ್ಷಿಣಕ್ಕೆ ಬಹಳ ಎತ್ತರವಾಗಿಯೂ ಆಗುತ್ತಾಯಿದೆ. ಆದ್ದರಿಂದ, ನೀನು ಈಶ್ವ ರಾನುಗ್ರಹದಿಂದ ಇದನ್ನು ಸಮವಾಗಿ ಮಾಡುವ ಶಕ್ತಿಯುಳ್ಳವ ನಾಗಿದ್ದಿ. ಈ ಕಾರಣದೆಶೆಯಿಂದ ನೀನು ದಕ್ಷಿಣ ದೇಶಕ್ಕೆ ಹೋಗು, ಅಂದರೆ ದೇವರ ವರದಿಂದ ಈ ಮುನಿಯೂ ಆದರಿಂದ ಇವನು ದಕ್ಷಿ ಣಕ್ಕೆ ಹೋದರೆ ಭೂಮಿ ಸಮವಾಗುತ್ತದೆಯೆಂಬ ತಾತ್ಪರ್ಯವು ॥೧೫॥ ತಪಸ್ವಿಯಾದ ಕಲಶದಲ್ಲಿ ಹುಟ್ಟಿರುವ ಆ ಅಗಸ್ತ್ಯನು, ಈಪ್ರಕಾರ ವಾದ ಮಹಾ ವಿಷ್ಣುವಿನ ಮಾತನ್ನು ಕೇಳಿ ಬಹು ವ್ಯಸನವುಳ್ಳವನಾಗಿ ಆಕ್ಷಣದಲ್ಲಿಯೇ ಮಾತನಾಡಿದನು ॥ ೧೬ ॥ ಏ ಪಾಪನಾಶಕನಾದ ದೇವನೇ, ಶ್ರೀಕಲ್ಯಾಣೋತ್ಸವವನ್ನು ನೋಡುವದರ ವಿಷಯವಾಗಿ ಸಮಸ್ತ ಲೋಕದಲ್ಲಿರುವವರೂ ಬರುತ್ತಲಿಧಾರೆ. ಇಂಥಾದ್ದನ್ನು ಬಿಟ್ಟು ನಾನು ದಕ್ಷಿಣ ದೇಶವನ್ನು ಹೇಗೆ ಹೋಗಲಿ ॥ ೧೭ ॥ ನನ್ನ ದೆಶೆಯಿಂ ದಲೆ ವಿಘ್ನವಾಗುತ್ತಯೆ. ಕಾಶೀಪಟ್ಟಣದಲ್ಲಿರುವವರಿಗೆ ಹೀಗೆ ವ್ಯಸನ ಪರನಾದ ಅಗಸ್ತ್ಯಋಷಿಯು ಅಂತರಂಗವನ್ನು ಬಲಂಥಾ ಸಾಧುಗಳನ್ನು ಪಾಲಿಸುವ ಭಗವಂತಮೂರ್ತಿಯೂ ॥ ೧೮ ॥ ಲೋಕ ಜನನಿಯಾಗಿ ತನ್ನ ಪತ್ನಿಯಾದ, ದೇವಿಯಿಂದ ಸಹಿತನಾಗಿ ವೃಷಭಾರೂಢನಾಗಿ

ತ್ರ್ಯಸಹಿತೋವೃಷವಾಹನಃ ॥ ಶುಕ್ಲಾಂಬರಧರೋದೇವಃಕಿರೀಟಮ
ಕುಟೋಜ್ವಲಃ॥೧೯॥ ಹಾರನೂಪುರಶೋಭಾಢ್ಯಃಸ್ಮಿತವಕ್ತ್ರೋಜ
ಗನ್ಮಯಾಂ॥ಗೃಹೀತ್ವಾಪರಮಾತ್ಮಾಸೌಕರಾಬ್ಜೇನಮುನೇಃಕರಂ॥೨೦
ತದೋವಾಚಮಹಾದೇವಃತದ್ವಾಕ್ಯಪರಿತೋಷಿತಃ ॥ ಶೃಣುಪುತ್ರ
ಪದಾಮ್ಯದ್ಯತವಾನಂದಪ್ರದಂವಚಃ ॥ ೨೧ ॥ ಕ್ಷೇತ್ರಾಣಾಮ
ಷ್ಟಷಷ್ಟೀನಾಮುತ್ತಮಂಕಲಶಂವಿದುಃ॥ತತ್ಕ್ಷೇತ್ರಂಯಾಹಿವಿಪ್ರರ್ಷೆ
ಶಿಷ್ಯಭಾರ್ಯ್ಯಾಸಮಾನ್ವಿತಃ ॥ ೨೨ ॥ ಕಲಶೇಪರಿಪೂರ್ಣೋಹಂ
ಕಲಶೇಶ್ವರಸಂಜ್ಞಿತಃ ॥ ಮನುಷ್ಯಾಣಾಂತಥಾಬ್ದಂತುದೇವಾನಾಂ
ಚದಿನಂವಿದುಃ ॥ ೨೩ ॥ ಉತ್ಸವಂದರ್ಶಯಿಷ್ಯಾಮಿದೇವಾನಾಂಚ

ಬಿಳೀ ವಸ್ತ್ರವನ್ನುಟ್ಟುಕೊಂಡು ಹಿಂಮುಡಿ, ಕಿರೀಟದಿಂದ ಪ್ರಕಾಶಿ
ಸುತ್ತಲಿರುವ ॥ ೧೯ ॥ ಮುಕ್ತಾಹಾರ, ಚಿನ್ನದ ಕಡಗ, ಇವುಗಳ
ಅಲಂಕಾರಯುಕ್ತನಾಗಿ, ನಗೆಮುಖವುಳ್ಳವನಾಗಿ, ಅಲ್ಲಿಯೇ ಆವಿರ್ಭ
ವಿಸಿ, ತನ್ನ ಹಸ್ತಾಬ್ಜದಿಂದ ಅಗಸ್ತ್ಯಮುನಿಯು ಕೈಯನ್ನು ಹಿಡಿದು
ಕೊಂಡು, ಈ ಪರಮಾತ್ಮನು ಆ ಮುನಿಯು ಅಂತರಂಗ ಮಾತುಗ
ಳಂ ಕೇಳಿ ಸಂತುಷ್ಟನಾಗಿ ಮಾತನಾಡುತ್ತಾನೆ ॥ ೨೦ ॥ ಏ ಮಗನಂ
ತಿರುವ ಮುನಿಯೇ, ನಿನಗೆ ಸಂತೋಷವಾದ ಮಾತನ್ನು ಈಗ ಹೇಳು
ತ್ತೇನೆ ಕೇಳು ॥ ೨೧ ॥ ಭೂಲೋಕದಲ್ಲಿ ಶ್ರೇಷ್ಟಗಳಾದ ಅರವ
ತ್ತೆಂಟು ಮುಖ್ಯಕ್ಷೇತ್ರಗಳಿಗೆ ಉತ್ತಮವಾಗಿರುವದು ಕಲಶಕ್ಷೇತ್ರ
ವೇ ಎಂದು ಪ್ರಾಜ್ಞರು ತಿಳಿದಿರುತ್ತಾರೆ. ಆದ್ದರಿಂದ ಏ ಬ್ರಾಹ್ಮಣ
ಶ್ರೇಷ್ಟನೇ, ಆ ಕಲಶಕ್ಷೇತ್ರವನ್ನೇ ಕುರಿತು, ಶಿಷ್ಯರೊಡನೆ ಪತ್ನಿಸಹಿತನಾಗಿ
ಹೋಗು ॥ ೨೨ ॥ ಆ ಕಲಶಕ್ಷೇತ್ರದಲ್ಲಿ ನಾನು ಪೂರ್ಣಾಂಶದಿಂದ
ಕಲಶೇಶ್ವರನೆಂಬ ಸಂಜ್ಞೆಯಿಂದ ನೆಲಸಿದೇನೆ. ದೇವತೆಗಳಿಗೆ ಒಂದು
ದಿನವನ್ನು ಮನುಷ್ಯರಿಗೆ ವರ್ಷವೆಂತ ಹೇಳುತ್ತಾರೆ ॥ ೨೩ ॥ ನಿನಗೆ
ದೇವದಿನವಂತೆ ಪ್ರತಿ ದಿನವೂ ಕಲ್ಯಾಣೋತ್ಸವವನ್ನು ತೋರಿಸುವೆನು.
ಹೀಗೆ ವರವನ್ನು ಪಡೆದ ಆ ಮುನಿಯು ಪತ್ನಿಯಿಂದಲೂ ಶಿಷ್ಯರಿಂದಲೂ

ದಿನೇದಿನೇ ॥ ಕಥೇತಿಭಾರ್ಯಯಾಸಾರ್ಧಂಶಿಷ್ಯೈರ್ಬಹುಭಿರಾವೃತಃ ॥ ೨೪ ॥ ವಿಶ್ವೇಶ್ವರಪರಿಕ್ರಮ್ಯಕಲಶಕ್ಷೇತ್ರಮಾಗಮತ್ ॥ ಕದಾಚದಕ್ಷಿಣಾಭೂಮಿಃಸಮಮಾಸೀನ್ಮಹಾಮತೇ ॥ ೨೫ ॥ ದೇವೋಶತೋಗಣೈರ್ಯುಕ್ತಃಸರ್ವದೇವಸಮನ್ವಿತಃ ॥ ಗಣೇಶಸ್ಕಂದನಂದಾದ್ಯೈಃವೃಷಭೋಪರಿಸಂಸ್ಥಿತಃ ॥ ೨೬ ॥ ಭಕ್ತಾನುಕಂಪಯಾದೇವೋಕಲಶಂಗತವಾನಹಂ ॥ ಹಿಮವಾನಂಶತಶ್ಚಾದ್ರಿಭಿರ್ಧರೈಶ್ಚ ಸಮನ್ವಿತಃ ॥ ೨೭ ॥ ಮೇನಕ್ಯಾಭಾರ್ಯಯಾಸಾರ್ಧಂಕಲಶಂಚಯಯೌಮುದಾ ॥ ವಿಷ್ಣುಬ್ರಹ್ಮದಯೋದೇವಾಸನಕಾದ್ಯಾಮಹರ್ಷಯಃ ॥ ೨೮ ॥ ಮದಾಜ್ಞಯಾಂಶತೋಯಾತಾಃಪೂರ್ವಂತ

ಕೂಡಿ ॥ ೨೪ ॥ ಆ ವಿಶ್ವೇಶ್ವರ ಸ್ವಾಮಿಯನ್ನು ನಮಸ್ಕರಿಸಿ, ಕಲಶಕ್ಷೇತ್ರವನ್ನು ಕುರಿತು ಬಂದನು. ಆಗ್ಯೆ ದಕ್ಷಿಣ ಭೂಮಿಯು ತಗ್ಗಿ ಸಮವಾಯಿತು. ಏ ಬುದ್ಧಿಶಾಲಿಯಾದ ಕುಮಾರನೇ ಕೇಳು ಎಂದು ಕಥೆಯನ್ನು ಉಪದೇಶಿಸುವ ದೇವನು ಹೇಳಿದನು ॥ ೨೫ ॥ ಈ ಪ್ರಕಾರವಾಗಿ ಅಗಸ್ತ್ಯಮುನಿಯು ಕಲಶಕ್ಷೇತ್ರಕ್ಕೆ ಬರುತ್ತಲೇ ಅತ್ತಲಾಗಿ ವಿಶ್ವೇಶ್ವರ ಸ್ವಾಮಿಯೂ ತನ್ನ ಒಂದಂಶದಿಂದ ವೃಷಭಾರೋಹಣವನ್ನು ಮಾಡಿಕೊಂಡು ಪರಿವಾರ ಸಮಸ್ತ ದೇವತೆಗಳು, ಗಣಾಧ್ಯಕ್ಷ, ಕುಮಾರನು, ಯಂತ ಈ ಎಲ್ಲ ದೇವಾಂಶಗಳಿಂದಲೂ ಸಹಿತನಾಗಿ ಆ ವಿಶ್ವೇಶ್ವರ ಮೂರ್ತಿಯಾದ ನಾನು ಭಕ್ತರಲ್ಲಿರುವ ಕೃಪೆಯಿಂದ ಕಲಶಕ್ಷೇತ್ರವನ್ನು ಸೇರಿ ಆ ಕಲಶೇಶಲಿಂಗದಲ್ಲಿ ಐಕ್ಯನಾದೇನು ಯಂತ ಕಥೆಯನ್ನು ಕೇಳುತ್ತಿರುವ ಮಗನಿಗೆ ಹೇಳಿರುವದು ಹೀಗೆಯೇ. ಹಿಮವತ್ಪರ್ವತನು ತನ್ನ ಸಮಸ್ತ ಬಂಧುಗಳಿಂದ ಸಹಿತನಾಗಿ ಅಂಶದಿಂದ ಪತ್ನಿಯಾದ ಮೇನಕಾದೇವಿಯಿಂದಲೂ ಕೂಡಿ, ಕಲಶಕ್ಷೇತ್ರವನ್ನು ಕುರಿತು ಸಂತೋಷದಿಂದ ಬಂದನು. ಮಹಾವಿಷ್ಣು ಬ್ರಹ್ಮ ಮೊದಲಾದ ದೇವತೆಗಳು, ಸನಕಾದಿ ಋಷಿಗಳು ॥ ೨೮ ॥ ನನ್ನ ಅಪ್ಪಣೆಯಿಂದ ಅಂಶಾಂತದಿಂದ ಮೊದಲು ಅಲ್ಲಿ ಇದ್ದವರು, ಆದ್ದಾ

ತ್ರಿಸ್ಥಿತಾಃಕಪಿಃ॥ಕಲಶೇಪಶ್ಚಿಮೇಭಾಗೇಹಿಮವಾನ್ಸಮುಪಸ್ಥಿತಃ॥೨೯॥ ತಸ್ಯೈವಚೋತ್ತರೇಭಾಗೇಮೇರುಸ್ತಿಷ್ಠತಿಪರ್ವತಃ ॥ ಪೂರ್ವಾದಿ ಪಂತಸ್ತತ್ರಸರ್ವೇಚಧರಣೀಧರಾಃ ॥ ೩೦ ॥ ಬ್ರಹ್ಮಾದ್ಯಾಶ್ಚದೇವ ತಾಃಸರ್ವೇಪರ್ವತೇಷುವಸಂತಿಹಿ ॥ ಕಲಶೇದಕ್ಷಿಣೇಚೈವಮುತ್ತರೇ ಪಶ್ಚಿಮೇತಥಾ ॥ ೩೧ ॥ ಸ್ನಾನಧ್ಯಾನಸಮಾಧಿಸ್ಥಾ ಇಷ್ಟಸಿದ್ಧಿಂ ಚಲೇಭಿರೇ ॥ ಅಥಸರ್ವೇಮುನಿಗಣಾಬ್ರಹ್ಮೇಂದ್ರಾದ್ಯಾಃಸುರೇಶ್ವ ರಾಃ ॥ ೩೨ ॥ ಅಗಸ್ತ್ಯಮುನಿನಾಸಾರ್ಧಮಾಶ್ವಿನೇಪೌರ್ಣಿಮಾದಿ ನೇ ॥ ತುಂಗಭದ್ರಾಸಮುತ್ಪನ್ನಾದಿನೇಪುಣ್ಯತಮೇಸುತಾ ॥ ೩೩ ॥ ಪಶ್ಚಿಮಾಭಿಮುಖೀಯತ್ರತುಂಗಭದ್ರಾಶಿಭಪ್ರದಾ ॥ ಶ್ರೀರುದ್ರಪಾ ದೇತತ್ತೀರ್ಥೇಸ್ನಾತ್ವಾಶ್ರೀಕಲಶೇಶ್ವರಂ ॥ ೩೪ ॥ ಮಹಾಭಿಷೇಕ

ಗ್ಯೂ ಈ ಕಲಶಕ್ಷೇತ್ರಕ್ಕೆ ಬಂದರು. ಶ್ರೀ ಕಲಶೇಶ್ವರನ ಪಶ್ಚಿಮದಲ್ಲಿ ಹಿಮವಂತನು ವಸತಿ ಮಾಡಿದನು ॥ ೨೯ ॥ ಹಾಗೆ ಮಹಾ ಮೇರು ಪರ್ವತವು ಉತ್ತರಭಾಗಕ್ಕಿನಲ್ಲಿ ಇದ್ದನು. ಹೀಗೆ ಪೂರ್ವಾದಿ ದಿಕ್ಕುಗಳಲ್ಲಿ ಸಮಸ್ತ ಪರ್ವತಗಳೂ ವಾಸಮಾಡಿದವು ॥ ೩೦ ॥ ಬ್ರಹ್ಮಾದಿ ದೇವತೆಗಳು ಈ ಪರ್ವತಗಳಲ್ಲಿ ವಾಸಮಾಡಿ ಕಲಶಕ್ಷೇತ್ರನ ದಕ್ಷಿಣ ದಲ್ಲಿ, ಹಾಗೆ ಪಶ್ಚಿಮದಲ್ಲಿ, ಉತ್ತರದಲ್ಲಿ ಸಹಾ ಪುಣ್ಯತೀರ್ಥಗಳಲ್ಲಿ ಸ್ನಾನಾದಿಗಳನ್ನು ಮಾಡಿ ಅವ್ಮ ಇಷ್ಟಸಿದ್ಧಿಯನ್ನು ಹೊಂದಿ ಸುಖ ದಿಂದಾರೆ ॥ ೩೧ ॥ ಹೀಗೆ ಕೆಲವು ಕಾಲಗಳಾದ ನಂತರ ಸಮಸ್ತ ಋಷಿ ಗಳೂ ಬ್ರಹ್ಮಾದಿ ದೇವೇಶ್ವರರೂ ॥ ೩೨ ॥ ಅಗಸ್ತ್ಯಋಷಿಯಿಂದ ಕೂಡಿ ಆಶ್ವಿಜಮಾಸದ ಪೂರ್ಣಿಮೆಯದಿನ ತುಂಗಭದ್ರಾನದಿಯು ಶ್ರೀವರಾಹಮೂರ್ತಿಯ ಸರ್ವಾಂಗದಿಂದಲು ಉತ್ಪತ್ತಿಯಾಗಿದೆ. ಅಂಥಾ ಪುಣ್ಯವಾದ ದಿನದಲ್ಲಿ ಏ ಮಗನೇ ಕೇಳುಯೆಂತ ದೇವನು ಹೇಳುತ್ತಾನೆ ॥ ೩೩ ॥ ಮಂಗಲದಾಯಕವಾದ ತುಂಗಭದ್ರಾನದಿಯು ಎಲ್ಲಿ ಪಶ್ಚಿಮಾಭಿಮುಖವಾಗಿ ಪ್ರವಹಿಸುವದೋ ಅಂಥ ರುದ್ರಪಾದವೆಂಬ ರುದ್ರತೀರ್ಥದಲ್ಲಿ ಸ್ನಾನಮಾಡಿ, ಶ್ರೀಕಲಶೇಶ್ವರ ದೇವನನ್ನು ಕುರಿ ತು ॥ ೩೪ ॥ ಪಂಚಾಮೃತಶತ ರುದ್ರಾಭಿಷೇಕ, ಸಹಸ್ರನಾಮ, ಷಡ್ವ

ವಿಧಿನಾನೈವೇದ್ಯೈಃಷಡ್ರಸೈಃಶುಭೈಃ ॥ ಸಹಸ್ರನಾಮಭಿರ್ದೇವಂರಂಗಪೂಜಾದಿಭಿಸ್ತಥಾ ॥ ೩೫ ॥ ನೀರಾಜನೈಶ್ಚಸಂಪೂಜ್ಯಪಪ್ರುಸ್ತೀರ್ಥಂಪುರದ್ವಿಷಃ ॥ ಭುಕ್ತ್ವಾಪ್ರಸಾದಶೇಷಂತೇಬ್ರಹ್ಮಾದ್ಯಾಮುನಿಭಿಃಸಹಾ ॥ ೩೬ ॥ ದೇವಸ್ಯಪೂರ್ವಭಾಗೇಚಸುಖೋಪವಿಷ್ಟ್ವಾಮಹೌಜಸಃ ॥ ಮಂತ್ರಯಾಂಚಕ್ರಿರೇಸರ್ವೇವಿವಾಹಸಮಯಂಸುರಾಃ ॥ ೩೭ ॥ ತದಾವಿಚಾರಯಾಮಾಸಬ್ರಹ್ಮಾಲೋಕಪಿತಾಮಹಃ ॥ ಋತೂನಾಂಚೈವಸರ್ವೇಷಾಂಶರತ್ಕಾಲೋಮಹಾಗುಣಃ ॥ ೩೮ ॥ ತತ್ರಾಪಿಕಾರ್ತಿಕೇಮಾಸೇಶುಕ್ಲಪಕ್ಷೇಸುಶೋಭನೇ ॥ ಯದಾಚೈಕಾದಶೀಶುದ್ಧಾದಶಮೀರಹಿತಾತಿಥಿಃ ॥ ೩೯ ॥ ರಾತ್ರೌಚದ್ವಾದಶೀಯುಕ್ತಾಸ್ವೈವಗ್ರಾಹ್ಯಾಮಹೋತ್ಸವೇ ॥ ಯದಾಚೈಕಾದಶೀಪೂರ್ಣ

ಶಾನ್ನಾದಿ ನೈವೇದ್ಯ ರಂಗಪೂಜಾದಿಗಳಿಂದ ವಿಧಿಪ್ರಕಾರವಾಗಿ ಪೂಜಿಸಿ ॥ ೩೫ ॥ ಮಹಾನೀರಾಜನದಿಂದ ಸೇವಿಸಿ ಆಮೇಲೆ ತ್ರಿಪುರಸಂಹಾರಿಯಾದ ಪರಮೇಶ್ವರನ ಚರಣತೀರ್ಥವನ್ನು ಪ್ರಾಶನಮಾಡಿ ಸಮಸ್ತ ಋಷಿಗಳಿಂದ ಕೂಡಿದ ಬ್ರಹ್ಮಾದಿ ದೇವತೆಗಳು ಆ ನೈವೇದ್ಯ ಶೇಷವನ್ನು ಭೋಜನ ಮಾಡಿ ॥ ೩೬ ॥ ಸಮರ್ಥರಾದ ಇವರೆಲ್ಲರೂ ಆ ದೇವನ ಪೂರ್ವದಿಕ್ಕಾದ ಸ್ಥಳದಲ್ಲಿ ಸಭೆಯನ್ನು ಮಾಡಿ ಕೂತುಕೊಂಡು ಹಿಂದೆ ಹೇಳಿದ ಪಾರ್ವತೀದೇವಿಯ ಕಲ್ಯಾಣೋತ್ಸವದ ಕಾಲವನ್ನು ದೇವತೆಗಳು ಆಲೋಚಿಸಿದರು ॥ ೩೭ ॥ ಆಗ್ಯೆ ಸರ್ವಲೋಕೇಶ್ವರನಾದ, ಸಭಾಧ್ಯಕ್ಷನಾದ ಬ್ರಹ್ಮದೇವನು ಸರ್ವ ಋತುಗಳಿಗೂ ಶರತ್ಕಾಲವೇ ಮುಖ್ಯವಾದದ್ದು ಎಂತ ಆಲೋಚಿಸಿ ತಿಳಿಸಿದನು ॥ ೩೮ ॥ ಅದರಲ್ಲಿಯೂ ಕಾರ್ತೀಕಮಾಸದ ಮಂಗಲವಾದ ಶುಕ್ಲಪಕ್ಷದಲ್ಲಿ ಯಾವಾಗ್ಯೆ ದಶಮಿ [illegible] ಶುದ್ಧವಾದ ಏಕಾದಶಿಯೊ ॥ ೩೯ ॥ ರಾತ್ರಿ ದ್ವಾದಶಿ [illegible], ಅದನ್ನೆ ಈ ಮಹಾ ಉತ್ಸವದಲ್ಲಿ ಸ್ವೀಕರಿಸತಕ್ಕದ್ದು. ಏ ದೇವತೆಗಳಿರಾ ಯಾವಾಗ್ಯೆ ಏಕಾದಶಿಯು ಸಂಪೂರ್ಣವಾಗಿ ದ್ವಾದಶಿಯೂ ವೃದ್ಧಿ

ದ್ವಾದಶ್ಯಪಿಸುರಾಸ್ತಥಾ ॥೪೦॥ ರಾತ್ರೌತೃತೀಯಭಾಗೇಚದ್ವಾದಶೀಯುತ್ರದೃಶ್ಯತೇ ॥ ದ್ವಾವಿಂಶದ್ಘಟಿಕಾಯಾಂತುಸಂಮತಃಶಂಕರೋತ್ಸವಃ ॥ ೪೧ ॥ ವಿವಾಹಸ್ತುಮುನಿಃಶ್ರೇಷ್ಠಾಃಮಯಾನಿಶ್ಚಿತ್ಯದರ್ಶಿತಃ ॥ ಸಾಧುಸಾಧ್ವಿತಿತಂದೇವಂಬ್ರಹ್ಮಾಣಂಸ್ತುತಿಭಿಃಸುರಾಃ ॥ ೪೨ ॥ ಸಂಸ್ತುತ್ಯಮುನಯಃಸರ್ವೇನಿಶ್ಚಯಂಚಕ್ರಿರೇತಥಾ॥ ಅಥವಿಷ್ಣುರ್ಮಹಾತೇಜಾಭಗವಾನ್ಪುರುಷೋತ್ತಮಃ ॥ ೪೩ ॥ ಕನ್ಯಾಯಾನಿಶ್ಚಿತಾರ್ಥಸ್ಯಾಹ್ಯಬ್ರವೀದುತ್ತಮಾದಿನಂ ॥ ಇಯಂಹಿಪೂರ್ಣಿಮಾದೇವಾಃಶ್ರೇಷ್ಠಾಭಗವದರ್ಚನೇ ॥ ೪೪ ॥ ಅಸ್ಯಾಂತಿಥೌಮಹಾದೇವಂಸ್ನಾತ್ವಾಶ್ರೀರುದ್ರತೀರ್ಥಕೇ ॥ ಕಲಶೇಶಂಸಮಾಭ್ಯರ್ಚ್ಯಭಕ್ತಿಧ್ಯಾನಪುರಃಸರಂ ॥ ೪೫ ॥ ಕುರ್ವಂತಿಭೋಜನಂ

ಯಾಗಿಯೇ ಆಯಿತೋ ॥ ೪೦ ॥ ಆದಿನ ರಾತ್ರಿ, ಮೂರನೆ ಭಾಗದಲ್ಲಿ ದ್ವಾದಶಿಯು ಆ ದಿನದಲ್ಲಿ ಇರುತ್ತದೊ, ಇಪ್ಪತ್ತೆರಡು ಘಳಿಗೆ ಇರುವದೊ ಆ ಸಮಯವೇ ಶ್ರೀಪರಮೇಶ್ವರನ ಉತ್ಸವಕ್ಕೆ ಸಮ್ಮತವಾದದ್ದು ॥ ೪೧ ॥ ಏ ಋಷಿಶ್ರೇಷ್ಠರುಗಳಿರಾ, ಹೀಗೆ ವಿವಾಹೋತ್ಸವವು ನನ್ನಿಂದ ನಿರ್ಣಯಿಸಿ ತಿಳಿಸಲ್ಪಟ್ಟಿತು. ಹೀಗೆ ಹೇಳಿರುವ ಬ್ರಹ್ಮದೇವನ ಮಾತನ್ನು ಬಹು ಸ್ತೋತ್ರಗಳಿಂದ ದೇವತೆಗಳು ಮಹಾಪ್ರಸಾದವೆಂದು ವಂದಿಸಿದರು ॥ ೪೨ ॥ ಋಷಿಗಳು ಸ್ತುತಿಸಿ ಹಾಗೆಯೇ ನಿಶ್ಚಯವನ್ನು ಮಾಡಿದರು. ಹೀಗೆ ಕಲ್ಯಾಣೋತ್ಸವದ ದಿನವು ನಿರ್ಣಯವಾದ ಕೂಡ್ಲೆ ಆ ಸಭಾನಾಯಕನಾದ ಮಹಾ ಪರಾಕ್ರಮಶಾಲಿಯಾದ ಭಗವಂತನಾದ ಮಹಾವಿಷ್ಣುವು ॥ ೪೩ ॥ ಕನ್ಯಾನಿಶ್ಚಿತಾರ್ಥಕ್ಕೆ ಉತ್ತಮವಾದ ದಿನವನ್ನು ಗೊತ್ತುಮಾಡಿ ತಿಳಿಸಿದನು. ಏ ದೇವತೆಗಳಿರಾ, ಈ ದಿನದ ಪೌರ್ಣಮಾಸಿಯು ಈಶ್ವರಾರಾಧನೆಯ ವಿಷಯದಲ್ಲಿ ಶ್ರೇಷ್ಠವಾಗಿದೆಯಷ್ಟೆ ॥ ೪೪ ॥ ಈ ದಿನದಲ್ಲಿ ಯಾರು ರುದ್ರತೀರ್ಥದಲ್ಲಿ ಸ್ನಾನಮಾಡಿ ವಿಶ್ವಾಸ ಧ್ಯಾನ ಪೂರ್ವಕವಾಗಿ ಸರ್ವೋತ್ತಮನಾದ ಶ್ರೀ ಕಲಶೇಶ್ವರನನ್ನು ಪೂಜಿಸಿ ಪಾದತೀರ್ಥ

ಪಪುರತಃಸ್ತೀರ್ಥಸಂಯುತಂ ॥ ಪಿತರಸ್ತೃಪ್ತಿಮಾಪನ್ನಾಯುಜ್ಯಂ ತೇಮಯಿತಕ್ಷಣಾತ್ ॥ ೪೬ ॥ ಏನಸರ್ವಮಿದಂಸರ್ವಂಜಗದ್ವ್ಯಾಪ್ತಂಚರಾಚರಂ॥ಭಗವಾನಪಿವಿಶ್ವೇಶಸ್ತುಷ್ಯತ್ಯೇವಸದಾಶಿವಃ॥೪೭॥ ಯಾಂಶ್ರಾದ್ಧಕಾಲೇ ಶಿವಭುಕ್ತಶೇಷಂ ದದಾತಿಭಕ್ತ್ಯಾಪಿತೃದೇವತಾನಾಂ ॥ ತೇನೈವಪಿಂಡೇನತಿಲೈರ್ವಿಮಿಶ್ರಮಾಂಕಲ್ಪಕೋಟಿಃಪಿತರಃಸುತೃಪ್ತಾಃ ॥ ೪೮ ॥ ಏತದಾಶ್ವಿನದರ್ಶೇತುಸಂಪೂರ್ಣದಿವಸೇನಿಶಿ ॥ ಶೌನಕಾದ್ಯಾಸ್ತಥಾಯೂಯಮದ್ರಿಂಗಛತಸತ್ತಮಾ॥ ಯಾಚಧ್ವಂಗಿರಿಜಾದೇವೀಂಪರಸ್ಮೈಶಂಕರಾತ್ಮನೇ ॥ ಯುಷ್ಮದ್ವಾಗಮೃತಂಶ್ರುತ್ವಾಹಿಮವಾನ್ಯಂಪ್ರದಾಸ್ಯತಿ ॥ ೫೦ ॥ ಅಯಂಹಿನಿಶ್ಚಿ

ಸಹಿತವಾಗಿ ಆ ದೇವನ ಪೂರ್ವಭಾಗದಲ್ಲಿ ಭಜಿಸುತ್ತಾರೋ ಅಂಥಾವರ ಸಮಸ್ತ ಪಿತೃಗಳು ತೃಪ್ತಿಯನ್ನು ಹೊಂದಿ ನನ್ನಲ್ಲಿ ಆಕ್ಷಣದಲ್ಲಿ ಐಕ್ಯರಾಗುವರು ॥ ೪೬ ॥ ಯಾವಾತನಿಂದ ಸ್ಥಾವರಜಂಗಮವಾದ ಈ ಸಮಸ್ತ ಪ್ರಪಂಚವು ವ್ಯಾಪಿಸಿರುವದೊ ಅಂಥಾ ಜಗದೀಶ್ವರನಾದ ನಿತ್ಯಮಂಗಲನಾದ ಭಗವಂತನು ಸಂತುಷ್ಟನಾಗುವನು ॥ ೪೭ ॥ ಮತ್ತು ಯಾವ ಮನುಷ್ಯನು ತನ್ನ ಪಿತೃಗಳಿಗೆ ಮಾಡುವ ಶ್ರಾದ್ಧದಲ್ಲಿ ಭಕ್ತಿಯಿಂದ ಶ್ರೀಪರಮೇಶ್ವರನ ನೈವೇದ್ಯಶೇಷವನ್ನು ಪಿತೃದೇವತೆಗಳಿಗೆ ಕೊಡುವನೋ ಅವರಿಂದಲೇ ಮಾಡಿದ ಪಿಂಡದಿಂದ ತಿಲೋದಕಗಳಿಂದ ಆವನ ಪಿತೃಗಳು ಅನೇಕ ಕೋಟಿ ಕಲ್ಪಪರ್ಯಂತರ ತೃಪ್ತರಾಗಿರುವರು ॥ ೪೮ ॥ ಏ ದೇವೋತ್ತಮಗಳಿರಾ ! ನೀವು ಈ ಶೌನಕಾದಿ ಋಷಿಗಳು ಸಹಾ ಈ ಆಶ್ವೀಜಮಾಸದ ಸಂಪೂರ್ಣವಾದ ಅಮಾವಾಸ್ಯೆ ದಿನದ ರಾತ್ರಿಯಲ್ಲಿ ಹಿಮವಂತನ ಪರ್ವತರಾಜನನ್ನು ಕುರಿತು ಪ್ರಯಾಣಿಸಿ ॥ ೪೯ ॥ ಸರ್ವ ಸುಖದಾಯಕನಾದ, ಪರಮಾತ್ಮನಿಗೋಸ್ಕರ ಗಿರಿಜಾದೇವಿಯನ್ನು ಯಾಚಿಸಿ ಆ ಹಿಮವಂತನು ನಿಮ್ಮ ನಿರ್ಮಲವಾದ ಮಾತನ್ನು ಕೇಳಿ ಕೊಡುತ್ತಾನೆ ॥ ೫೦ ॥ ಹೀಗೆ ನನ್ನಿಂದ ನಿಶ್ಚಿತಾರ್ಥಕ್ಕೆ ಮುಹೂರ್ತವು, ಗೊ

ತಾರ್ಥಸ್ಯಾತ್‌ಮಯೋಕ್ತಃಸಮಯಃಶುಭಃ ॥ ಶುಭಂವಿಷ್ಣುವಚಃ ಶೃತ್ವಾನಾರದಾದ್ಯಾಮುನೀಶ್ವರಾಃ ॥ ೫೧ ॥ ಸಂಸ್ತುತ್ಯಬಹುಧಾ ದೇವಂಶಂಖಚಕ್ರಗದಾಧರಂ ॥ ಸ್ವಾಮಿನ್‌ತಥಾಕರಿಷ್ಯಾಮೋನಿಶ್ಚಿ ತಾರ್ಥಂಸುಮಂಗಲಂ ॥ ೫೨ ॥ ಏವಂಸಂಮಂತ್ರ್ಯತೇಸರ್ವೇಸ್ವ ಸ್ವಧಾಮಸುರೇಶ್ವರಾಃ ॥ ಯಯುಃಪ್ರಣಮ್ಯದೇವೇಶಂಕಲಶೇಶಂ ಮುನೀಶ್ವರಾಃ ॥ ೫೩ ॥ ಯಯಿದಂದೇವದೇವಸ್ಯನಿಶ್ಚಿತಾರ್ಥಪ್ರ ಶಂಸನಂ ॥ ಪಠೇತ್ತಸ್ಯಭವೇತಿತ್ಸಿದ್ಧಿಃಸರ್ವಸಾಂಸಂಪದಾಂಧೃವಂ ॥

ಇತೀ ಶ್ರೀಸ್ಕಂಧ ಪುರಾಣೆ ತುಂಗಭದ್ರಾಖಾಂಡೆ
ಪಂಚಮೋಧ್ಯಾಯಾಃ ॥

ತ್ತುಮಾಡಲ್ಪಟ್ಟಿಧೆ. ಇದು ಶುಭವಾಗಿರುವದು. ಹೀಗೆಂದು ಶ್ರೀಮಹಾ ವಿಷ್ಣುವಿನ ಶುಭವಾದ ಮಾತನ್ನು ನಾರದಾದಿ ಮುನೀಶ್ವರರು ಕೇಳಿ ॥ ೫೧ ॥ ಶಂಖಚಕ್ರಗದೆಗಳನ್ನು ಧರಿಸಿದ ಆ ದೇವನನ್ನು ಬಹು ಪ್ರಕಾರ ಸ್ತುತಿ ಏ ಸ್ವಾಮಿಯೇ ನಿನ್ನ ಅಪ್ಪಣೆಯಾದಂತೆ ಶುಭವಾದ ನಿಶ್ಚಿತಾರ್ಥವನ್ನು ಮಾಡುವೆವು ॥ ೫೨ ॥ ಈಪ್ರಕಾರ ವಾಗಿ ಸರ್ವ ದೇವತೆಗಳು, ಮುನಿಗಳು ಆಲೋಚಿಸಿ ತಮ್ಮ ತಮ್ಮ ಮಂದಿರವನ್ನು ಕುರಿತು, ಶ್ರೀ ಕಲಶೇಶನನ್ನು ನಮಸ್ಕರಿಸಿ, ಪ್ರಯಾ ಣಿಸಿದರು ॥ ೫೩ ॥ ಈ ಪ್ರಕಾರವಾದ ಸರ್ವದೇವೋತ್ತಮನಾದ ಶ್ರೀ ಕಲಶೇಶ್ವರ ಸ್ವಾಮಿಗೆ ಕನ್ಯಾ ನಿಶ್ಚಿತಾರ್ಥದ ಕಥೆಯನ್ನು, ಹೇಳುವ ನೊ ಅವನಿಗೆ ಜ್ಞಾನಾದಿ ಸಕಲ ಸಂಪತ್ತುಗಳ ಸಿದ್ಧಿಯೂ ಆಗುವದು ನಿಶ್ಚಯವು ॥ ೫೪ ॥

ಇಂತೀಪ್ರಕಾರವಾದ ಸ್ಕಂದ ಪುರಾಣದಲ್ಲಿರುವ ತುಂಗಭದ್ರಾ
ಖಂಡದಲ್ಲಿ ಶ್ರೀ ಕಲಶೇಶ್ವರ ಸ್ವಾಮಿಯವರ ವಿವಾಹೋತ್ಸವಕ್ಕೆ
ಕನ್ಯಾ ನಿಶ್ಚಿತಾರ್ಥದ ಸಂಗತಿಯನ್ನು ತಿಳಿಸಿರುವ
ಐದನೆಯ ಅಧ್ಯಾಯವು ಸಂಪೂರ್ಣ.

ಶ್ರೀಮಹಾದೇವಃ ॥ ಅಥಾತೆಮುನಯಃಪುತ್ರಶೌನಕಾದ್ಯಾಃ ಸುರೈಃಸಹಾ ॥ ದರ್ಶೆಸಮಾಗತೆತಸ್ಮಿಂನಾಶ್ವಿನೇಕೃಷ್ಣಪಕ್ಷಕೆ ॥ ೧ ॥ ಆಗತ್ಯಕಲಶೇಶಸ್ಯಮಂದಿರಂಬಂದಿಭಿರ್ನುತಂ ॥ ಸಂಸ್ತೂಯಜಯ ಶಬ್ದೇನದೇವದೇವಂತ್ರಿಲೋಚನಂ ॥ ೨ ॥ ತದಾಜ್ಞಯಾಸಮಾ ನೀಯಮಂಗಲದ್ರವ್ಯಮುತ್ತಮಂ ॥ ಪೂಗಪುಷ್ಪಂಚಕದಳೀನಾಳಿ ಕೇರಂಸಕುಂಕುಮಂ ॥ ೩ ॥ ಹಾರಿದ್ರಾಪಟ್ಟವಸ್ತ್ರಾದಿಮಂಗಲಾ ಭರಣೈಃಸಹಾ ॥ ದೇವಸ್ಯಪುರತಃಸ್ಥಾಪ್ಯಪ್ರಾರ್ಥ್ಯನೀರಾಜನೈಃಸ್ಥಿ ತಃ ॥ ೪ ॥ ಶಾಕುನೈಃಸ್ವಸ್ತಿಸೂಕ್ತೈಶ್ಚನಾನಾವಾದ್ಯರವೈಃಸಹಾ॥

ಆರನೆಯ ಅಧ್ಯಾಯ ಪ್ರಾರಂಭ.

ಇತ್ತಲಾ ಕೈಲಾಸಮಂದಿರದಲ್ಲಿ ಶ್ರೀಭಗವಂತನು ಮಗನಾದ ಕುಮಾರಸ್ವಾಮಿಗೆ ಈ ಮುಂದಿನ ಚರಿತ್ರೆಯನ್ನು ಹೇಳಲಾರಂಭಿಸಿ ದನು॥ ಎ ಮಗನೇ ಕೇಳು, ಆಮೇಲೆ ಶೌನಕಾದಿ ಋಷಿಗಳು ಸಮಸ್ತ ದೇವತೆಗಳಿಂದ ಸಹಿತರಾಗಿ ಆ ಆಶ್ವೀಜಮಾಸದ ಕೃಷ್ಣಪಕ್ಷವಾದ ಸಂಪೂರ್ಣವಾದ ಅಮಾವಾಸ್ಯೆಯ ದಿನದಲ್ಲಿ ॥ ೧ ॥ ಶ್ರೀ ಕಲಶೇಶ್ವರ ದೇವನ ಪಾಠಕರಿಂದ ಸ್ತುತಿಸುತ್ತಿರುವ ದೇವಾಲಯವನ್ನು ಕುರಿತು ಬಂದು ತ್ರಿಲೋಚನನಾದ ಶ್ರೀಕಲಶೇಶನನ್ನು ಜಯ! ಜಯ! ಭಗವಂತನೆ! ಎಂದು ಸ್ತುತಿಸಿ ॥೨॥ ಮುಂದೆ ನಡಿಯಬೇಕಾದ ಉತ್ಸವದ ಶುಭಕಾರ್ಯ ಗಳಿಗೋಸ್ಕರ ಆ ದೇವನ ಅಪ್ಪಣೆಯಿಂದ ಅರಿಶಿನ, ಕುಂಕುಮ, ಬಾಳೆ ಹಣ್ಣು, ತೆಂಗಿನಕಾಯಿ, ಅಡಿಕೆ, ಶಿಂಗಾರಾ ಪುಷ್ಪ, ಪಟ್ಟೇಶೀರೆ, ಬಂದೀ ಸರಿಗೆ ಮೊದಲಾದ ಆಭರಣಗಳು ಮುಂತಾದ ಮಂಗಲ ಸಾಹಿತ್ಯಗಳನ್ನು ತರಿಸಿ ಶ್ರೀ ಕಲಶೇಶ ದೇವನ ಮುಂದೆ ಇಟ್ಟು, ಮಂಗಳಾರ್ತಿಗಳಿಂದ ಪ್ರಾರ್ಥಿಸಿ, ಆಮೇಲೆ ॥೪॥ ಕನಿಕ್ರದಯೆಂಬ ಶಕುನಸೂಕ್ತಗಳಿಂದಲೂ ಸ್ವಸ್ತಿಸೂಕ್ತಗಳಿಂದಲೂ ಅನೇಕ ವಾದ್ಯಧ್ವನಿಗಳಿಂದಲೂ ಸಹಿತವಾಗಿ ಮಂಗಲಸ್ವರೂಪನಾದ ಶ್ರೀ ಕಲಶೇಶನಂ ಕುರಿತು ಪ್ರೀತಿಪೂರ್ವಕವಾಗಿ

ಮಂಗಲಾಭಿಮುಖಿಂದೇವಂತ್ರಿಃಪರಿಕ್ರಮ್ಯಸಾದರಂ ॥ ೫ ॥ ಪ್ರ
ಯಯುಃಶೋಭಿತಂವೇತ್ಮಹಿಮಾದ್ರೇರ್ಬಹುಮಂಗಲಂ ॥ ಪ್ರತ್ಯು
ದ್ಯಾತಾಹಿಮವತಾರಾಜ್ಞಾಬಂಧುಜನೈಸ್ಸಹ ॥ ೬ ॥ ವಿವಿಶೋಮು
ನಯೊದೇವಾಃಹಿಮಾದ್ರಿನಿಲಯಂಮುದಾ ॥ ನಾರೀನೀರಾಜನೋ
ಪೇತಮಾನಂದಭವನಂಯಥಾ॥೭॥ಸಂಪೂಜ್ಯಮುನಿಸಂಘಾಂಶ್ಚಮು
ರಾರಿಪ್ರಭೃತೀನಥ॥ಸ್ವಾಸ್ತೀರ್ಣೇಸ್ವಾಸನೇಸ್ವೇತಾನ್ನಿವೇಶ್ಯಾದ್ರಿಪತಿ
ರ್ಮುದಾ ॥೮॥ ಮಧುಪರ್ಕಾದಿಭಿಶ್ಚೈತ್ರಾ। ನ್ಬಹುಮಾನಪುರಃಸರಂ।
ವಾಚಾಸೂನೃತಯಾಂಚೈವಮಾಭಾಷ್ಯಹಾದ್ರಿರಾಟ್ಸದಾ ॥ ೯ ॥

ಮೂರುಪ್ರದಕ್ಷಿಣೆಯನ್ನು ಮಾಡಿ ॥೫॥ ಅಲಂಕಾರವಾದ ಮಂಗಲಕಾರ್ಯ
ಗಳಿಂದ ಕೂಡಿರುವ ಹಿಮವಂತನ ಅರಮನೆಯನ್ನು ಕುರಿತು ಪ್ರಯಾ
ಣಿಸಿದರು. ಈ ವಿಷಯವನ್ನು ತಿಳಿದಿರುವ ಹಿಮವಂತನೆಂಬ ಅರಸ
ನಿಂದಲೂ ಬಂದು ಜನಗಳಿಂದಲೂ ಆಗ್ಯೆ ಎದುರಾಗಿ ಬಂದು ಕಾಣಿಸಿ
ಕೊಳ್ಳಲ್ಪಟ್ಟರು ॥ ೬ ॥ ಆಮೇಲೆ ಸರ್ವ ದೇವತೆಗಳೂ ಋಷಿಗಳು ಆ
ಹಿಮವಂತನು ಮಾಡಿದ ಮರ್ಯಾದೆಯಿಂದಲೂ ಸಂತೋಷದಿಂದಲೂ
ಪರಮಾನಂದವೇ ಮನೆಯಾಗಿದೆಯೋ ಎಂಬಂತಿರುವ ಸುವಾಸನೀಯರ
ಆರ್ತಿಯ ಪ್ರಭೆಯಿಂದ ಕೂಡಿರುವ ಆ ಹಿಮವಂತನ ಮನೆಯನ್ನು ಪ್ರವೇ
ಶಮಾಡಿದರು ॥ ೭ ॥ ಪರ್ವತರಾಜನು ಸಿದ್ಧಮಾಡಿಸಿರುವ ಶುಭವಾದ
ಭದ್ರಾಸನಗಳಲ್ಲಿ ಬಂದ ಋಷಿಸಮೂಹಗಳನ್ನೂ ವೈಕುಂಠ ಮೊದ
ಲಾದ ದೇವಶ್ರೇಷ್ಠರನ್ನೂ ಕೂರಿಸಿ ಶಾಸ್ತ್ರಪ್ರಕಾರವಾಗಿ ಪೂಜಿಸಿ
ಸಂತೋಷದಿಂದಾ ॥ ೮ ॥ ಬಹುಮಾನಪೂರ್ವಕವಾಗಿ ಎಲ್ಲರನ್ನೂ
ಮಧುಪರ್ಕಾದಿಗಳಿಂದ ಆದರಿಸಿ ಆಮೇಲೆ ಪರ್ವತರಾಜನು ಮೃದು
ಮಧುರವಾದ ಮಾತಿನಿಂದ ಆಗ್ಯೆ ಆ ಮಹಾನುಭಾವರುಗಳನ್ನು ಕರೆದು
ಮಾತನಾಡಿದನು ॥ ೯ ॥ ಎ ದೇವಶ್ರೇಷ್ಠರುಗಳಿರಾ! ಎ ಶೌನಕಾದಿಮು
ನಿಶ್ರೇಷ್ಠರುಗಳಿರಾ ! ಸುಖಾಗಮನವೆ ? ಸಕಲ ಸಿದ್ಧಿಯನ್ನೂ ಕೊಡು
ತ್ತಲಿರುವ ನಿಮ್ಮ ಬರೋಣಿಕೆಯಿಂದ ಈಹೊತ್ತು ಸಕಲ ಗೃಹಕೃತ್ಯ

ಸ್ವಾಗತಂವಃಸ್ಸುರಶ್ರೇಷ್ಠಾಃಶೌನಕಾದ್ಯಾಮುನೀಶ್ವರಾಃ ॥ ಯು
ಷ್ಮದಾಗಮನೇನಾದ್ಯಸರ್ವಸಿದ್ಧಿವಿಧಾಯಿನಾ ॥ ೧೦ ॥ ಸಗೃಹಾಃ
ಪಾವಿತಾನೂನಂಸಂಜಾತಾಸರ್ವಸಿದ್ಧಯಃ ॥ ಕಿಮಾಗಮನಕಾರ್ಯಂ
ವೋವಾದ್ಯಶಾಮಪ್ಯಗೋಚರಾಃ ॥ ೧೧ ॥ ಧನ್ಯೋಸ್ಮಿಬಂಧುಭಿಃ
ಸಾರ್ಧಂಸದಾರಃಸಪರಿಶ್ವರಃ ॥ ಶಿಷ್ಯೋಸ್ಮಿಭವತಾಂಭೂತಭೋಗ
ಸ್ತ್ಯಾದ್ಯಾಃಸುರೇಶ್ವರಾಃ ॥ ೧೨ ॥ ಶೃತ್ವಾಹಿಮವತೋವಾಕ್ಯಂಬ
ಹುಮಾನಮಿತಂಸುರಾಃ ॥ ಮುನಿಯಃಪ್ರತಿಪೂಜ್ಯಾಥಸರ್ವೇಸಂ
ಮಂತ್ರ್ಯಶೌನಕಂ ॥ ೧೩ ॥ ವಾಚಯಾಮಾಸುರವ್ಯಗ್ರಂಶ್ರೌತ
ಸ್ಮಾರ್ತಾಗ್ರ್ಯಯಾಯಿನಂ ॥ ಅಥತೈರಭ್ಯನುಜ್ಞಾತೋಬಹ್ವೃಚಃತಾ
ನಕೋಮುದಾ ॥ ೧೪ ॥ ಪ್ರೀಣಾಯನ್ನವಭಾರತ್ಯಾಹಿಮವಂತ

ಸಹಿತರಾದ ನಾವೆಲ್ಲರೂ ಪರಿಶುದ್ಧರಾದೆವು. ನಮ್ಮ ಸಕಲೇಷ್ಟ ಸಿದ್ಧಿ
ಗಳು ಸಿದ್ಧಿಯಾದವು. ನನ್ನಂಥಾವರಿಗೂ ಕೂಡ ಅಗೋಚರರಾದ
ದೇವಋಷಿಗಳಿರಾ ತಮ್ಮ ಬರೋಣಿಕೆಯಾದ ಕಾರ್ಯವ್ಯಾವುದು
ಕರುಣಿಸಿ ||೧೧|| ಅಗಸ್ತ್ಯ ಮೊದಲಾದ ಋಷಿಗಳಿರಾ, ದೇವತೆಗಳಿರಾ,
ಬಂಧುಗಳಿಂದ ಸಹಿತವಾಗಿ ಪತ್ನಿಸಹಿತನಾದ ಪರಿವಾರ ಸಹಿತನಾದ
ನಾನು ಧನ್ಯನಾದೆನು. ನಿಮ್ಮಗಳಿಗೆ ಶಿಷ್ಯನಾಗಿದ್ದೇನೆ. ಆದ್ದರಿಂದ
ಆಗಮನ ವಿಷಯವನ್ನು ಅನುಗ್ರಹಿಸಬೇಕು. ದೇವತೆಗಳು, ಋಷಿ
ಗಳು ಈಪ್ರಕಾರವಾಗಿ ಬಹು ಮರ್ಯಾದಾಯುಕ್ತವಾದ ಆ ಪರ್ವತರಾ
ಜನ ಮಾತನ್ನು ಕೇಳಿ ತಿರುಗಿ ಬಹುಮಾನಿಸಿ ಆಮೇಲೆ ತಾವೆಲ್ಲರೂ
ಪ್ರತಿಸಂಭಾಷಣೆ ಶಕ್ತನನ್ನು ಆಲೋಚಿಸಿ ಶೌನಕ ಋಷೀಶ್ವರರನ್ನು||
||೧೩|| ಗಾಬರಿಯಲ್ಲಿದ್ದ ಮತ್ತು ಗೃಹ್ಯ ಕರ್ಮಗಳಲ್ಲಿಯು, ಶ್ರೌತಕರ್ಮ
ಗಳಲ್ಲಿಯು ಪ್ರವರ್ತಿಸುವವರಿಗೆಲ್ಲಾ ಶ್ರೇಷ್ಠನಾಗಿರುವ ಈ ಶೌನಕ
ನನ್ನು ಗೊತ್ತುಮಾಡಿಕೊಂಡು, ಮಾತನಾಡಿಸಿದರು. ಆಮೇಲೆ ಆದೇವ
ತೆಗಳಿಂದ, ಅಪ್ಪಣೆಯನ್ನು ಹೊಂದಿದ ಋಗ್ವೇದಾಧ್ಯಾಯಿಯಾದ ಆ
ಶೌನಕ ಮುನಿಯು ಸಂತೋಷದಿಂದ || ೧೪ || ಮಾತಿನಿಂದ ಸಂತೋ

ಮುವಾಚಹ ॥ ಅದ್ರಿರಾಟ್ಪರಿಪೂರ್ಣೋಽಸಿ । ಶ್ರಿಯಾಭಕ್ತ್ಯಾ ಮಹೇಶ್ವರೇ ॥ ೧೫ ॥ ಪುನಶ್ಚಪೂರ್ಯಮಾಣೋಽಸಿಧೂರ್ಜಟೇಃ ಕೃಪಯಾಧುನಾ ॥ ಸ್ವಸ್ತ್ಯಸ್ತುಪರ್ವತಶ್ರೇಷ್ಠಮಾಂಗಲ್ಯಂಮೇ ವಚಃಶೃಣು ॥ ೧೬ ॥ ಸೌಭಾಗ್ಯಸುಂದರೀಂದೇವೀಂಜಾತಾಂ ತ್ವಯಿಸುರೇಶ್ವರೀಂ ॥ ಅನನ್ಯಭರ್ತೃಸಾಕ್ಷಾದಾದಿಶಕ್ತಿಂಚಿದಾತ್ಮಿಕಾಂ ॥ ೧೭ ॥ ಮಂಗಲಾಂವರಣಾವ್ಯೈವದೇವಾಯಶಶಿಮೌಳಯೆ॥ ಆಗತಾಮುನಯಸ್ಸರ್ವೇಬ್ರಹ್ಮಾದ್ಯಾಃಶಂಭುನೇರಿತಾಃ ॥ ೧೮ ॥ ಬಂಧುದಾರಯುತೋಽರಾಜನ್ಜಾನಿಷೇಪುರಘಾತಿನಂ ॥ ಕುಬೇರವರದಂಪಂಚಬಾಣಾಂಗಪರಿಮರ್ದಿನಂ ॥ ೧೯ ॥ ಕೈಲಾಸನಗರೇರಮ್ಯೇ

ಷವನ್ನುಂಟುಮಾಡುವನಾಗಿ ಪರ್ವತರಾಜನಂ ಕುರಿತು ಮಾತನಾಡಿದನು. ಎಲೈ ಪರ್ವತರಾಜನೆ, ನೀನು ಶ್ರೀ ಭಗವಂತನಲ್ಲಿ ಆಸ್ತಿಕಭಕ್ತಿರೂಪವಾದ ಸಂಪತ್ತಿನಿಂದ ಶ್ರೀಮಂತನೇ ಆಗಿದ್ದಿ ॥ ೧೫ ॥ ಎಲೈ ಪರ್ವತಶ್ರೇಷ್ಠನಾದ ಹಿಮವಂತನೆ, ಮತ್ತು ಈಗ ಕೆಂಜಡೆಯನ್ನು ಧರಿಸಿದ ಭಗವಂತನ ಕೃಪೆಯಿಂದ ವೃದ್ಧಿಯನ್ನು ಹೊಂದುವನಾಗಿದ್ದೀಯೇ ನಿನಗೆ ಮಂಗಳವಾಗಲಿ, ನನ್ನ ಶುಭವಾದ ಮಾತನ್ನು ಕೇಳು॥೧೬॥ ಸಕಲ ಸಂಪತ್ತಿನಿಂದ ಸೌಂಧರ್ಯಶಾಲಿಯಾಗಿಯು, ಪ್ರಕಾಶಮಾನಳಾಗಿಯು, ಪ್ರತ್ಯಕ್ಷಜ್ಞಾನಸ್ವರೂಪಳಾಗಿಯು, ಸಮಸ್ತ ದೇವತೆಗಳಿಗೆ ಪಡತಿಯಾಗಿಯು, ನಿನ್ನಲ್ಲಿ ಹುಟ್ಟಿ ಅವಿವಾಹಿತಳಾದ, ಮಂಗಲೆಯಾದ ಈ ನಿನ್ನ ಮಗಳನ್ನು ಚಂದ್ರಶೇಖರನಾದ ಪರಮೇಶ್ವರನಿಗೋಸ್ಕರ ಕೇಳಿ ನಿಶ್ಚೈಯಿಸುವುದಕ್ಕೋಸ್ಕರ ಆ ಪರಮಾತ್ಮನಿಂದ ಪ್ರೇರಿತರಾಗಿ ಬ್ರಹ್ಮಾದಿ ದೇವತೆಗಳೂ ಸಮಸ್ತ ಋಷಿಗಳೂ ಬಂದಿರುವೆವು ॥ ೧೭ ॥ ಎಲೈ ಅರಸನೆ, ಬಂಧುಗಳು ಪತ್ನಿಸಹಿತನಾದ ನೀನು ತ್ರಿಪುರಸಂಹಾರವನ್ನು ಮಾಡಿದಂಥಾ ಕುಬೇರನಿಗೆ ಅಷ್ಟೈಶ್ವರ್ಯವನ್ನು ಕೊಟ್ಟಂತೆ ಮನ್ಮಥ ಧ್ವಂಸಿಯಾದ, ಅಪಾರಮಹಿಮನಾದ ಆ ಭಗವಂತನನ್ನು ಬಲ್ಲವನಾಗಿದ್ದೀ ॥ ೧೮ ॥ ರಮಣೀಯವಾದ ದೇವಋಷಿಗಳ ಸಮೂಹಗಳಿಂದ

ದೇವರ್ಷಿಗಣಸೇವಿತೆ ॥ ರತ್ನಸ್ತಂಭವಿತಾನಾದ್ಯೆರ್ಮುಕ್ತಾದಾಮಮ ನೋಹರೆ ॥ ೨೦ ॥ ಸಾರೂಪ್ಯೈರ್ದ್ವಾರಪಾಲೈಶ್ಚಸ್ವರ್ಣವೇತ್ರವಿ ರಾಜಿತೈಃ ॥ ಚತುರ್ಭಿರ್ವಜ್ರಮಾಣಿಕ್ಯಖಚಿತೈಃಸುಖವಾಟಕೈಃ॥೨೧॥ ಶುದ್ಧಸ್ಫಟಿಕಸೋಪಾನಪರಂಪರವಿರಾಜಿತೈಃ ॥ ಶೋಭಿತೇದೇವಭವನೇ ದೇವೇಶಾದ್ಯೈರ್ನುತೇಸದಾ ॥ ೨೨ ॥ ರತ್ನಸಿಂಹಾಸನೇದಿವ್ಯೆಸಾಮ ಸಂಗೀತಶೋಭಿತೆ ॥ ನಂದೀಶಾದ್ಯೈಸ್ತೂಯಮಾನೇಭೃಂಗಿನಾಟ್ಯ ಸುಶೋಭಿತೆ ॥ ೨೩ ॥ ಆನಂದಸುಂದರಃಸಾಕ್ಷಾದಾದಿದೇವಃಸತಾಂ ಗತಿಃ ॥ ಸ್ವರ್ಣನೂಪುರಶೋಭಾಢ್ಯಪಾದಪದ್ಮವಿರಾಜಿತಃ ॥ ೨೪ ॥ ಸಜ್ಜಾನೂರುಸೆಮಾಸಕ್ತಪೀತಾಂಬರಸುಶೋಭಿತಃ ॥ ನಾನಾರತ್ನೈಃ

ಸೇವಿತವಾದ ನವರತ್ನಮಯಗಳಾದ ಕಂಭಗಳು, ಮೇಲುಕಟ್ಟುಗಳು ಮೊದಲಾದ್ದರಿಂದ ಮುತ್ತಿನ ಸರಗಳಿಂದ ಮನೋಹರವಾದ ಕೈಲಾಸದ ಲ್ಲಿರುವ ಪಟ್ಟಣದಲ್ಲಿ ॥ ೨೦ ॥ ಪೂರ್ವಪುಣ್ಯದಿಂದ ತನ್ನ ಆಹಾರವನ್ನು ಹೊಂದಿರುವ ಚಿನ್ನದ ಕಟ್ಟೆಗೆ ಕೋಲನ್ನು ಹಿಡಿದಿರುವ ದ್ವಾರಪಾಲಕ ರುಗಳಿಂದ ವಜ್ರಮಾಣಿಕ್ಯಮಯಗಳಾದ ನಾಲ್ಕು ದಿಕ್ಕಿನ ಬಾಗಲುಗ ಳಿಂದಲೂ ॥ ೨೧ ॥ ಮತ್ತು ಅಚ್ಛಸ್ಫಟಿಕದ ಮೆಟ್ಟಲುಗಳ ಸಾಲುಗ ಳಿಂದ ಪ್ರಜ್ವಲಿಸುವ ಪ್ರದೇಶಗಳಿಂದ ಯಾವಾಗಲೂ ದೇವೇಂದ್ರ ಮೊದಲಾದ ದೇವತೆಗಳಿಂದ ಸ್ತುತಿಸುತ್ತಿರುವ ಬಹುವಿಧ ಅಲಂಕಾರಗ ಳಿಂದ ಅಲಂಕೃತವಾದ ಪರಮೇಶ್ವರನ ರಾಜಧಾನಿಯಲ್ಲಿ ॥ ೨೨ ॥ ನಂದಿ ಕೇಶ ಮೊದಲಾದ ಪಾಠಕರುಗಳಿಂದ ಹೊಗಳಿಸಿಕೊಳ್ಳುತ್ತಿರುವ, ಭೃಂಗಿ ಯನಾಟ್ಯದಿಂದ ಬಹು ಅಲಂಕೃತವಾದ ಋಷಿಗಳ ಸಾಮವೇದ ಸ್ತುತಿ ಗಳಿಂದ ಸ್ತೋತ್ರಮಾಡಿಸಿಕೊಳ್ಳುತ್ತಿರುವ ದಿವ್ಯ ಸಿಂಹಾಸನದಲ್ಲಿ ॥೨೩॥ ಪ್ರತ್ಯಕ್ಷವಾಗಿ ಆನಂದವೆಂಬ ಸೌಂದರ್ಯವಾದ ವಿಗ್ರಹವುಳ್ಳ ಮುಕ್ತ ರಿಗೂ ಒಡೆಯನಾದ ಚಿನ್ನದ ಕಾಲುಗಡಗಗಳಿಂದ ಅಲಂಕೃತವಾದ ಚರಣಕಮಲಗಳಿಂದ ಪ್ರಕಾಶಮಾನನಾದ ॥ ೨೪ ॥ ಮೊಳಕಾಲು ತೊಡೆಗಳಲ್ಲಿ ವ್ಯಾಪಿಸಿರುವ ಅರಸಿನ ವರ್ಣವಾದ ಪಟ್ಟೆಯ ವಸ್ತ್ರದಿಂದ

ಶ್ಚ ಖಚಿತಃಸ್ವರ್ಣಕಾಂಚ್ಯಾಮಹೇಶ್ವರಃ ॥ ೨೫ ॥ ಮುಕ್ತಾಹಾರ ಶುಶೋಭಾಢ್ಯಾವಕ್ಷಸ್ಥಳವಿರಾಜಿತಃ॥ ಶ್ರೀಕಂಟಶೋಭಿತಾಂಸೇಸುವರ್ಣಶುಕ್ಲಾಂಬರಾವೃತಃ ॥ ೨೬ ॥ ಸುವೃತ್ತಪೀನದೋರ್ದಂಡಚತುರ್ಭಿಃಶೋಭಿತಂಶಿವಃ ॥ ವರದೇನಾಭಯೇನೈವಕುರಾತೀನಮೃಗೇಣಹಿ ॥ ೨೭ ॥ ಕಟಕೈರಂಗುಲೀರ್ಭಿಶ್ಚ ಸ್ವರ್ಣರತ್ನಾಂಗದೈವೃತಃ ॥ ಸುಕಪೋಲಪರಿಶ್ಲಾಘ್ಯರತ್ನಕುಂಡಲಶೋಭಿತಃ ॥ ೨೮ ॥ ಬಿಂಬೋಷ್ಠರಕ್ತಿಮಾಸಕ್ತದಂತಜ್ಯೋತ್ಸ್ನಾವಿರಾಜಿತಃ॥ ಚಂದ್ರಾರ್ಕಾಹವನೀಯಾಖ್ಯಾಪದ್ಮಪತ್ರವಿಶಾಲದೃಕ್ ॥ ೨೯ ॥ ಅನಂಗಧನುಷಪ್ರಖ್ಯಭ್ರೂಲಿತಾಶೋಭಿತಾನನಃ ॥ ತ್ರಿಪುಂಡ್ರವಿಲಸತ್ಫಾಲ

ಶೋಭಿತನಾದ ಅನೇಕ ವಿಧಗಳಾದ ರತ್ನಗಳಿಂದ ಕೆತ್ತಿರುವ ಭಂಗಾರದ ಡಾಬುಉಳ್ಳ ಶ್ರೀ ಪರಮಾತ್ಮನು ॥ ೨೫ ॥ ಮುತ್ತಿನ ಕಂಠೀಸರ, ಪದಕಗಳಿಂದ ಕೂಡಿರುವ ಎದೆಯಿಂದ ಶೋಭಿತನಾಗಿ ಇಂದ್ರನೀಲದಂತೆ ಹೊಳೆಯುತ್ತಿರುವ ಕುತ್ತಿಗೆಯು ಸಮೀಪದ ಹೆಗಲಿನಲ್ಲಿ ಜರಿಬಂದಿರುವ ಅಂಚುಗಳುಳ್ಳ ಬಿಳೀ ವಸ್ತ್ರದಿಂದ ಕೂಡಿರುವವನಾಗಿ ॥೨೬॥ ಚೆನ್ನಾಗಿ ಇರಲು ಪುಷ್ಟಿಯಾದ ನಾಲ್ಕು ಕೈಗಳಿಂದ ಶೋಭಿತನಾದ ಮಂಗಲಮಯನಾಗಿ, ಇಷ್ಟಾರ್ಥಪ್ರದವಾದ ಮತ್ತು ಅಭಯವನ್ನು ಕೊಡುವ ಕೊಡಲಿಯನ್ನು ಧರಿಸಿರುವ, ಮೃಗರೂಪವಾದ ಮೂಲಬ್ರಂಹ್ಮಾಸ್ತ್ರವನ್ನು ಹಿಡಿದಿರುವ ಚತುರ್ಬಾಹುಗಳಿಂದ ವಿರಾಜಿಸುವನಾಗಿ ಮತ್ತು ಕಾಲುಕಡಗಗಳಿಂದಲೂ, ಕೈಕಡಗಗಳಿಂದಲೂ ಉಂಗುರಗಳಿಂದ ರತ್ನಖಚಿತಗಳಾದ ಚಿನ್ನದ ಭುಜಕೀರ್ತಿಗಳಿಂದಲೂ ಯುಕ್ತನಾಗಿ ಬಹು ಮೃದುವಾದ ಹೊಳೆಯುತ್ತಿರುವ ಕೆನ್ನೆಯಲ್ಲಿ ನೆಳಲು ಆಗುತ್ತಿರುವ ವಜ್ರಾದಿ ಮಣಿಮಯಗಳಾದ ಕುಂಡಲಗಳಿಂದ ಶೋಭಿಸುವವನಾಗಿ ॥ ತೊಂಡೆಯ ಹಣ್ಣಿನಂತಿರುವ ತುಟಿಯ ಕೆಂಪಿನಿಂದ ಕೂಡಿದ ಹಲ್ಲುಗಳ ಬೆಳಕುಗಳಿಂದ ಪ್ರಕಾಶಿಸುತ್ತಿರುವ ಚಂದ್ರ ಸೂರ್ಯ ಆಹವನೀಯಗಳೆಂಬಕಮಲದಳಗಳಂತಿರುವ ವಿಸ್ತಾರಗಳಾದ ಕಣ್ಣುಗಳುಳ್ಳ ॥ ೨೯ ॥

ಶ್ಚಂದ್ರಾರ್ಧಕೃತಭೂಷಣಃ॥ಧೂಸರೈರ್ಮಂಜುಲೈಃಕೇಶೈಸ್ಸ್ವರ್ಗಂಗಾ
ಬಿಂದುಮೌಕ್ತಿಕೈಃ॥ ಸ್ವರ್ಣದೀಸದೃಶೈಃಸ್ವರ್ಣಪದ್ಮಛಾಯಾನಿಭಾನ
ನಃ ॥ ೩೧ ॥ ಉದ್ಯದಾದಿತ್ಯಸಂಕಾಶೋವಜ್ರವೈಢೂರ್ಯಶೋಭಿನಾ॥
ಮಸ್ತಕಸ್ಥೇನಮಹತಾಕಿರೀಟೇನಪ್ರಕಾಶಿತಃ ॥ ೩೨ ॥ ಸ್ವಭಕ್ತೇನ
ಕುಬೇರೇಣಸನಕಾದ್ಯೈರ್ಮಹರ್ಷಿಭಿಃ॥ ಮುರಾರಿಪ್ರಮುಖೈರ್ದೇವೈ
ರಸ್ಮದಾದ್ಯೈರ್ಮುನೀಶ್ವರೈಃ ॥ ೩೩ ॥ ಸೇವ್ಯಮಾನೋಮಹಾದೇ
ವಃಕರುಣಾವಾರಿಧಿಃಶಿವಃ॥ಸ್ಮಿತಜ್ಯೋತ್ಸ್ನಾಸಮಾಹ್ಲಾದದೇವಾನೀ
ಕಾಬ್ಜಸಂತತಿಃ ॥ ೩೪ ॥ ಸರ್ವೋತ್ತಮಸ್ಸಭಗವಾನ್‌ಜಗತಾಂಮಂಗ

ಮನ್ಮಥನ ಬಿಲ್ಲಿನಂತೆ ದೀರ್ಘವಾದ ಹುಬ್ಬುಗಳ ವಿಸ್ತಾರದಿಂದ ಅಲಂಕೃ
ತವಾದ ಮುಖವುಳ್ಳ ವಿಭೂತಿಯಿಂದ ರಚಿಸಿರುವ ತ್ರಿಪುಂಡ್ರದಿಂದ ಪ್ರಕಾ
ಶಿಸುವ ಹಣೆಯ ಮೇಲ್ಭಾಗದಲ್ಲಿ ಅರ್ಧಚಂದ್ರನೆಂಬ ಆಭರಣವುಳ್ಳ॥೩೦॥
ಸಾಧಾರಣ ಕೆಂಪಾದ ಹೊಗೆಯ ಬಣ್ಣಗಳಾದ, ಮನೋಹರಗಳಾದ
ಮುತ್ತಿನ ಮಣಿಯಂತಿರುವ ಗಂಗೆಯ ಹನಿಗಳಿಂದ ಅಲಂಕೃತಗಳಾದ
ತಲೆಯ ಕೂದಲುಗಳಿಂದ ಚಿನ್ನದ ತುಂಬಿಗಳಂತಿರುವುಗಳಿಂದ ಕೂಡಿ
ರುವ ಚಿನ್ನದ ಕಮಲದಂತಿರುವ ಮುಖವುಳ್ಳ ॥ ೩೧ ॥ ಉದಯಿಸುತ್ತಿ
ರುವ ಸೂರ್ಯನಂತಿರುವ, ವಜ್ರವೈಢೂರ್ಯಮಣಿಗಳಿಂದ ಶೋಭಿ
ಸುವ ತಲೆಯುಳ್ಳ ಶ್ರೇಷ್ಠವಾದ ಕಿರೀಟದಿಂದ ಪ್ರಕಾಶಿಸುತ್ತಿರುವ॥೩೨॥
ತನ್ನ ಸೇವಕನಾದ ಕುಬೇರನಿಂದ, ಸನಕಾದಿ ಋಷಿಗಳಿಂದ, ಮುರಾ
ಸುರಗೆ ಶತ್ರುವಾದ ಮಹಾವಿಷ್ಣು ಮೊದಲಾದ ದೇವತೆಗಳಿಂದ, ನಾವು
ಮೊದಲಾದ ಮುನೀಶ್ವರರಿಂದ ॥ ೩೩ ॥ ಸೇವೆಮಾಡಿಸಿಕೊಳ್ಳುತ್ತಿರುವ
ದಯದಿಂದ ಸಮುದ್ರದಂತಿರುವ, ಮಂಗಲದಾಯಕನಾದ ಮುಗುಳು
ನಗೆಯೆಂಬ ಬೆಳದಿಂಗಳಿಂದ ಅರಳಿಸುತ್ತಿರುವ ದೇವತೆಗಳ ಸಮೂಹಗ
ಳೆಂಬ ನೈದಿಲೆಗಳ ಸಾಲುಗಳುಳ್ಳಂತ ದೇವತೆಗಳಲ್ಲಿ ತಾನೇ ಶ್ರೇಷ್ಠನೆನಿಸಿ
ರುವ ॥ ೩೪ ॥ ಜಗತ್ತುಗಳಿಗೂ ಮಂಗಲಸ್ವರೂಪನಾದ ಸರ್ವೋತ್ತ
ಮನಾದ ಸರ್ವಜ್ಞನಾದ ಆ ಪರಮಾತ್ಮನು ಆತ್ಮನಲ್ಲಿ ವಿಶ್ವಾಸವೇ

ಲಂಶಿವಃ ॥ ಸ್ವಭಕ್ತಿಜ್ಞಾನಕರುಣೇಂಮೋಕ್ಷ್ಯಾಖ್ಯಾಮಾದಿಶನ್ಪ್ರ
ಭುಃ ॥ ೩೫ ॥ ಸ್ವಾರಾಮಃಪೂರ್ಣಕಾಮೋಽಸೌಸರ್ವಜ್ಞಃಸಕಲೇ
ಶ್ವರಃ ॥ ಯಃಕೈಲಾಸನಗರೇಸ್ವಾನಂದಾನುಭಾವವಾತ್ಮವಾನ್ ॥೩೬॥
ಏವಮತ್ರ್ಯೈಯುವಸತೀಽಸಂಪೂರ್ಣಃಕಲಶೇಶ್ವರಃ ॥ ತುಂಗಭದ್ರಾತಟೆ
ರಾಜನ್‌ದೇವರ್ಷಿಗಣಸೇವಿತೆ ॥ ೩೭ ॥ ರಾಜನ್ವಯಂಮುನಿಗ
ಣಾಬ್ರಹ್ಮಾದ್ಯಾಅಪಿದೇವತಾಃ ॥ ತದಾಜ್ಞಾಂಶಿರಸಾಧೃತ್ವಾವರ
ಣಾಯಸಮಾಗತಾಃ ॥ ೩೮ ॥ ದಾರಬಂಧುಗಣೈರ್ಯುಕ್ತೋಹಿಮ
ವಾನ್‌ಕಿಂವದಿಷ್ಯಸಿ ॥ ದೇವದೇವಸ್ಯತಸ್ಯೇದಂಶ್ರಾವಿತಂತೇಸುವಿಸ್ತ
ರಂ ॥ ೩೯ ॥ ಇದಂಸತ್ಸನಕಾದ್ಯೈಶ್ಚಬ್ರಹ್ಮಾದ್ಯೈರರ್ಥಿತೋಽದ್ರಿರಾ
ಟ್ ॥ ಪ್ರತ್ಯಬ್ರವೀನ್ಮುನಿಶ್ರೇಷ್ಠಾನ್‌ಕೃತಾಂಜಲಿರುಪಸ್ಥಿತಃ ॥ ೪೦ ॥

ಕಾರಣವಾದ ಮೋಕ್ಷವೆಂದು ಪ್ರಸಿದ್ಧವಾದ ಭಕ್ತಿಯನ್ನು ಉಪದೇಶಿ
ಸಿರುವವನಾಗಿ ॥ ೩೫ ॥ ಮತ್ತು ತನ್ನಲ್ಲಿಯೇ ಸಂತೋಷವುಳ್ಳ, ಪರಿಪೂ
ರ್ಣಗಳಾದ ಸಕಲಾಶಯಗಳುಳ್ಳ, ಸಕಲವನ್ನೂ ಬಲ್ಲವನಾದ, ಸರ್ವಕ್ಕೂ
ಒಡೆಯನಾದ, ಕೈಲಾಸಪಟ್ಟಣದಲ್ಲಿ ತನ್ನ ಸಕಲಾನಂದವೇ ಪರಿಪೂರ್ಣ
ನಾದ ಯಾವ ಪರಮಾತ್ಮನು ॥೩೬॥ ಎಲೈ ಅರಸನೆ, ಹ್ಯಾಗೆ ಆ ಮಹಾ
ಕೈಲಾಸನಗರದಲ್ಲಿರುವನೋ ಹಾಗೆ ದೇವತೆಗಳಿಂದಲೂ ಋಷಿಗಳಿಂದಲೂ
ಸೇವಿತವಾದ ತುಂಗಭದ್ರಾನದಿಯ ದಡದಲ್ಲಿಸಾನ್ನಿಧ್ಯವಾಗಿರುತ್ತಾನೆ॥೩೭॥
ಎಲೈ ಅರಸನೆ, ಬ್ರಹ್ಮಾದಿ ದೇವತೆಗಳೂ ಮುನಿಗಳಾದ ನಮ್ಮ ಸಮೂಹ
ಗಳೂ ಆ ಪರಮಾತ್ಮನ ಆಜ್ಞೆಯನ್ನು ಒಪ್ಪಿಕೊಂಡು ನಿನ್ನ ಕನ್ಯಾ
ನಿಶ್ಚಿತಾರ್ಥಕ್ಕೋಸ್ಕರ ಬಂದಿರುವೆವು ॥ ೩೮ ॥ ಪತ್ನಿಯು ಬಂಧುಗಳ
ಗುಂಪುಗಳಿಂದ ಸಹಿತರಾಗಿ ಹಿಮವಂತನೇ ಸರ್ವೋತ್ತಮನಾದ ಆ ಭಗ
ವಂತನ ಆಜ್ಞಾರಸವನ್ನು ನಿನಗೆ ಸಾಂಗವಾಗಿ ತಿಳಿಸಿದೆವು, ಏನನ್ನು
ಹೇಳುತ್ತಿ ॥೩೯॥ ಈಪ್ರಕಾರವಾಗಿ ಬ್ರಹ್ಮಾದಿ ದೇವತೆಗಳಿಂದಲೂ ಶೌನ
ಕಾದಿ ಋಷಿಗಳಿಂದಲೂ ಕೇಳಿಸಿಕೊಂಡ ಪರ್ವತರಾಜನು ಆ ದೇವಋಷಿ
ಗಳನ್ನು ಎದ್ದು ನಮಸ್ಕರಿಸಿದವನಾಗಿ ಪ್ರತ್ಯುತ್ತರವನ್ನು ಹೇಳಿದನು ॥೪೦॥

ಭೋಭೋಃಶೌನಕಭೋಗಸ್ತ್ಯಮುರಾರೇಪದ್ಮಸಂಭವ ॥ ಸೇವಕೋಭವತಾಮದ್ಯಧನ್ಯಆಗಮನಾದಿಹ ॥ ೪೧ ॥ ವರಣೇನಕೃತಾರ್ಥೋಸ್ಮಿಭೂಧರೋಪಿಸುರೇಶ್ವರಾಃ ॥ ಕಃಪ್ರತ್ಯಾಖ್ಯಾಯತೇಲೋಕೇ।ಯುಷ್ಮಾಭಿರ್ವರಣಂಕೃತಂ ॥ ೪೨ ॥ ಆವಿರ್ಭೂತಾಂಮಯಿಮುನೇವಾಸ್ಯೇಪುತ್ರೀಮನಿಂದಿತಾಂ ॥ ದೇವಾಯಮಹತೇದೇವಾಭವದ್ವ್ಯಾಖ್ಯಾನುಸಾರತಃ ॥೪೩॥ ಸಂದೇಹೋನಾಸ್ತಿವಿಪ್ರರ್ಷೆತ್ರಿರ್ದದಾಮ್ಯಪ್ಯಸಂಶಯಂ ॥ ಏವಮುಕ್ತ್ವಾತತೋರಾಜಃಪ್ರತ್ಯಥಾಯಸಸಾಧರಂ ॥ ೪೪ ॥ ಪೂಜಯಾಮಾಸಪೂಜ್ಯಾಂಸ್ತಾಂವಸ್ತ್ರಾಲಂಕಾರಭೂಷಣೈಃ ॥ ಸುಧೂಪೈರ್ವಗಂಧಪುಷ್ಪಾದ್ಯೈಃ । ಶಿವಭಕ್ತಿ

ಅದಂತೆನೆ, ಅಹೋ! ಶೌನಕನೆಯೇ ಅಗಸ್ತ್ಯನೆಯೇ ಮಹಾವಿಷ್ಣುವೆಯೇ, ಬ್ರಹ್ಮನೇ ನಾನು ನಿಮ್ಮಗಳಿಗೇನೆ ವಶವಾಗಿಧೇನೆ. ತಮ್ಮಗಳ ಬರೋಣಕೆ ಮಾತ್ರದಿಂದಲೇ ಧನ್ಯನಾಗಿಧೇನೆ ॥ ೪೧ ॥ ಓದೇವ ಶ್ರೇಷ್ಠರುಗಳಿರಾ। ತಮ್ಮ ಕೇಳೋಣಕೆಯಿಂದ ಮತ್ತು ಕೃತಕೃತ್ಯನೂ ಆದೆನು. ಲೋಕದಲ್ಲಿ ತಮ್ಮ ಕೇಳೋಣತೆಯನ್ನು ಕುರಿತು ಯಾವಾತನಾದರೂ ನಿನಗೆ ತಿರುಗಿ ಹೇಳ್ಯಾನೆ ॥ ೪೨ ॥ ಏ ಮುನೀಶ್ವರನೇ ಏ ದೇವತೆಗಳಿರಾ! ನನ್ನಲ್ಲಿ ಕರುಣದಿಂದ ಅವತರಿಸಿರುವ, ದೋಷವಿಲ್ಲದಿರುವ ನನ್ನ ಮಗಳಾದ ಗಿರಿಜಾದೇವಿಯನ್ನು ಸಮಸ್ತ ದೇವತೆಗಳಲ್ಲಿಯೂ ಮಹನೀಯನಾದ ಆ ಪರಮಾತ್ಮನಿಗೋಸ್ಕರ ತಮ್ಮಗಳ ಕನ್ಯಾವರಣಾನುಸಾರವಾಗಿಯೂ ಕೊಡುವೆನು ॥ ೪೩ ॥ ಏ ಬ್ರಾಹ್ಮಣಶ್ರೇಷ್ಠನೆ, ಧೃಹ್ಯಸೂತ್ರಾನುಸಾರವಾಗಿ ಕನ್ಯೆಯನ್ನು ಕೊಡುತ್ತೇನೆಂದು ಮೂರಾವೃತ್ತಿ ಹೇಳುವೆನು ; ಅಂತರಂಗದ ಸಂದೇಹವೂ ಬಾಹ್ಯದ ಅನುಮಾನವೂ ಇಲ್ಲ. ಈ ಪ್ರಕಾರವಾಗಿ ಪ್ರೀತಿಪೂರ್ವಕವಾಗಿ ಹೇಳಿ ಎದ್ದವನಾಗಿ ॥ ೪೪ ॥ ಭಗವದ್ಭಕ್ತಿಪೂರ್ವಕವಾಗಿ ಪೂಜ್ಯರಾದ ಆ ದೇವತೆಗಳನ್ನೂ ಋಷಿಗಳನ್ನೂ ಒಳ್ಳೆಧೂಪಗಳಿಂದಲೂ ಗಂಧ ಹೂ ಮೊದಲಾದ್ದರಿಂದಲೂ, ಧೋತ್ರ, ಪೀತಾಂಬರ, ಉಂಗರ, ಕಿರೀಟ, ಹಾರಾಧ್ಯಾ

ಪುರಸ್ಸರಂ ॥ ೪೫ ॥ ಏವಂಸಂಪೂಜಿತಾದೇವಾ । ಮುನಿಭಿ
ಶ್ಚಾರ್ಥಶಂಕರಂ ॥ ಯಿಯಾಸವಸ್ಸಮಾಭಾಷ್ಯಪ್ರೋಚುರದ್ರಿಂಮು
ನೀಶ್ವರಾಃ ॥ ೪೬ ॥ ವಿವಾಹದಿವಸಂಲಗ್ನಂತಸ್ಯಂಪ್ರತ್ಯವದ
ನ್ದ್ವಿಜಾಃ ॥ ಕಾರ್ತಿಕಸ್ಯಸಿತೇಪಕ್ಷೇಯದಾಚೈಕಾದಶೀತಿಥಿಃ ॥೪೭॥
ದ್ವಾದಶೀಸಂಯುತಾರಾತ್ರೌ । ದ್ವಾವಿಂಶದ್ಘಟಿಕಾತ್ಮಿಕೇ ॥ ಕನ್ಯಾಲ
ಗ್ನೇಮಹೇಶಸ್ಯಾವಿವಾಹೋವಿಹಿತಃಸುರೈಃ ॥ ೪೮ ॥ ಸ್ವಸ್ತಿಪ್ರಾ
ಪ್ನುಹಿಭೋರಾಜನ್ । ತುಷ್ಟಾಸ್ತ್ವತ್ಸೇವಯಾವಯಂ ॥ ಯಾ
ಸ್ಯಾಮಸ್ತಂಮಹೇಶಾನಮಿತ್ಯುಕ್ತ್ವಾಪ್ರಯಯುಃಸುರಾಃ ॥ ೪೯ ॥
ಸೇವ್ಯಮಾನಂಸುರಪತಿಪ್ರಮುಖೈರ್ಮಂಗಲೋತ್ಸವೈಃ ॥ ವಿವಾ

ಭರಣಗಳಿಂದಲೂ ಪೂಜಿಸಿದನು॥೪೫॥ಈಪ್ರಕಾರವಾಗಿ ಋಷಿಗಳಿಂದ ಸಹಿತರಾದ ದೇವತೆಗಳು ಪೂಜಿಸಿಕೊಂಡರು. ಆಮೇಲೆ ಪರಮೇಶ್ವರನನ್ನು ಕುರಿತು ಹೋಗಲಪೇಕ್ಷಿತರಾದ ಮುನಿಗಳು ಹಿಮವಂತನನ್ನು ಕರೆದು ಮಾತನಾಡಿದರು ॥ ೪೬ ॥ ಅದೇನೆಂದರೆ, ವೇದಾಧ್ಯಯನ ಶಾಲಿಗಳಾದ ಹರ್ಷಯುಕ್ತರಾದ ಆ ಬ್ರಾಹ್ಮಣರು ಹಿಮವಂತನಿಂದ ಲಗ್ನ, ತಿಥಿ, ಮಾಸಾದಿಗಳು ಯಾವಾಗ್ಯೆ ಶುಭವಾಗಿ ಬರುವುವೆಂದು ಹೇಳಿಸಿಕೊಂಡವರಾಗಿ ವಿವಾಹದ ದಿನ ಮುಹೂರ್ತವನ್ನು ಹೇಳಿದರು. ಅದೇನಂದರೆ, ಕಾರ್ತೀಕಮಾಸದ ಶುಕ್ಲಪಕ್ಷದಲ್ಲಿ ಏಕಾದಶಿ ದಿವಸವೂ ॥೪೭॥ ರಾತ್ರಿಯಲ್ಲಿ ದ್ವಾದಶಿ ತಿಥಿಯಿಂದ ಕೂಡಿರುತ್ತದೆಯೋ ಆ ದಿವಸವೂ ರಾತ್ರಿ ಇಪ್ಪತ್ತೆರಡುಘಳಿಗೆಗೆ ಬರುವ ಕನ್ಯಾಲಗ್ನದಲ್ಲಿ ಶ್ರೀಪರಮೇಶ್ವರನಿಗೆ ವಿವಾಹೋತ್ಸವವು ದೇವತೆಗಳಿಂದ ಗೊತ್ತುಮಾಡಲ್ಪಟ್ಟಿದೆ ॥ ೪೮ ॥ ಎಲೈ ಅರಸನೇ, ಮಂಗಲವನ್ನು ಹೊಂದು; ನಿನ್ನ ಉಪಚಾರದಿಂದ ಸಂತುಷ್ಟರಾಗಿದ್ದೇವೆ ; ಶ್ರೀ ಭಗವಂತನನ್ನು ಕುರಿತು ಹೋಗುವೆವು ಎಂದು ದೇವತೆಗಳು ಹೇಳಿ ಪ್ರಯಾಣಿಸಿದರು ॥ ೪೯ ॥ ಕೆಲಶಕ್ಷೇತ್ರದಲ್ಲಿರುವ ದಿವ್ಯಮಂದಿರದಲ್ಲಿ ಪಾಣಿಗ್ರಹಣೋತ್ಸವಕ್ಕಾಗಿ ಸಿದ್ಧವಾದ ರಮಣೀಯವಾದ ರತ್ನಮಂಟಪದಲ್ಲಿರುವ ಸಿಂಹಾಸನದಲ್ಲಿ ಇಂದ್ರಾದಿದೇವತೆಗಳಿಂದ ಮಾಡುತ್ತಿರುವ ಮಂಗಲೋತ್ಸವಗಳಿಂದ ಸೇವಿಸಿಕೊಳ್ಳುತ್ತಿ

ಹಾಂಗಕ್ಕೃತೇರಮ್ಯೆ ಮಂಟಪೇಸಂಸ್ಥಿತಂವಿಭುಂ ॥ ೫೦ ॥ ತೇತದ್ವಿಗ್ಣಾಪಯಾಮಾಸುಃ ಶಿವಾಯಪರಮಾತ್ಮನೇ ॥ ಸಂತುಷ್ಟಮನಸಾತೇನಮಾನಿತಾಸ್ತ್ರಭೂಣಾಸುರಾಃ ॥ ೫೧ ॥ ಆಜ್ಞಾಪ್ಯಶಿವಾಯುಯುರ್ದೇವಾಪ್ರಣಮ್ಯಾಪರಮವ್ಯಯಂ ॥ ಬ್ರಹ್ಮಾದ್ಯಾಸ್ಸಕಲಾಸ್ತುಷ್ಟಾಸ್ಸ್ವಂ । ಧಾಮಮುದಾನ್ವಿತಾಃ ॥ ೫೨ ॥ ಯಯಿದಂದೇವದೇವಸ್ಯಕನ್ಯಾವರಣಮುತ್ತಮಂ ॥ ಶೃಣೋತಿಶ್ರದ್ಧಯಾಯುಕ್ತೋ ವರಾಃಸಿಧ್ಯಂತಿಚಾರ್ಥಿತಾಃ ॥ ... ॥ ೫೩ ॥

ಇತೀ ಶ್ರೀಸ್ಕಾಂದಪುರಾಣೆ ತುಂಗಭದ್ರಾಖಂಡೇ
ಶ್ರೀಕಲಶೇಶ್ವರ ಕನ್ಯಾವರಣಕಥನಂ
ನಾಮಷಷ್ಠೋಧ್ಯಾಯಃ॥ ಶ್ರೀ ಶ್ರೀ

ರುವ ಸರ್ವೋತ್ತಮನಾದ ಸನ್ನಿಹಿತನಾದ ಪರಮಾತ್ಮನನ್ನು ಕುರಿತು ಬಂದರು ॥ ೫೦ ॥ ಬಂದಂಥ ದೇವತೆಗಳು ಮಂಗಲಮೂರ್ತಿಯಾದ ಆ ಪರಮಾತ್ಮನಿಗೋಸ್ಕರ ಕನ್ಯಾ ನಿಶ್ಚಿತಾರ್ಥದ ಸಕಲ ವೃತ್ತಾಂತವನ್ನು ತಿಳಿಸಿದರು. ಅದನ್ನು ಕೇಳಿ ಸಂತುಷ್ಟನಾದ ಭಗವಂತನಿಂದ ಆ ದೇವತೆಗಳು ಮಾನಿತರಾದರು ॥ ೫೧ ॥ ಆಮೇಲೆ ಸಂತುಷ್ಟರಾದ ಬ್ರಹ್ಮಾದಿ ಸಮಸ್ತ ದೇವತೆಗಳೂ ಶಾಶ್ವತನಾದ ಸಕಲರ ಪಾಪವನ್ನು ಪರಿಹರಿಸುತ್ತಲಿರುವ ಭಗವಂತನನ್ನು ನಮಸ್ಕರಿಸಿ ತಮ್ಮತಮ್ಮ ಸ್ಥಾನಗಳನ್ನು ಕುರಿತು ಸಂತೋಷದಿಂದ ಪ್ರಯಾಣಿಸಿದರು ॥ ೫೨ ॥ ಯಾವಾತನು ದೇವತೆಗಳಲ್ಲಿ ಶ್ರೇಷ್ಠನಾದ ಪರಮೇಶ್ವರನ ಉತ್ತಮವಾದ ಈ ಕನ್ಯಾವರಣೆಯನ್ನು ಭಕ್ತಿಯಿಂದ ಕೂಡಿದವನಾಗಿ ಕೇಳುವನೋ ಅವನ ಸಕಲಗಳಾದ ಈ ಇಷ್ಟಾರ್ಥಗಳು ಸಿದ್ಧಿಸುವುವು ॥ ೫೩ ॥

ಈಪ್ರಕಾರದ ಸ್ಕಾಂದಪುರಾಣದಲ್ಲಿ ತುಂಗಭದ್ರಾ ಖಂಡದಲ್ಲಿ
ಕಲಶೇಶ್ವರ ಸ್ವಾಮಿಯುವರಿಗೋಸ್ಕರ ಮಾಡಿದ ಕನ್ಯಾವರಣೆಯ
ಕಥೆಯನ್ನು ಹೇಳಿರುವ ಆರನೆಯ ಅಧ್ಯಾಯ ಸಮಾಪ್ತಿಃ
ಶ್ರೀ ಶ್ರೀ

ಶ್ರೀಮಹಾದೇವಃ ॥ ಇದ್ಧಂವಿವಾಹದಿವಸೆನಿಶ್ಚಿತೇವರಣೇಸುರೈಃ ॥ ಸಿಂಹಾಸನಗತನಶಂಭೂರಾಜ್ಞಾಪಯುರತಂದ್ರಿತಃ ॥೧॥ ಸಿದ್ಧಿಬುದ್ಧಿಯುತಃಪುತ್ರಗಣನಾಥಸುರೇಶ್ವರಾನ್ । ಆಹ್ವಾನಾರ್ಥಂ ವ್ರಜಸ್ವಾದ್ಯಶ್ವೇತಛತ್ರಾದಿಭಿರ್ಯುತಃ ॥ ೨ ॥ ಸ್ವರ್ಣವೇತ್ರಧರೈರ್ಬಂದಿಗಣಸ್ತವಯುತಃಸ್ವಯಂ ॥ ಆದೌಚತುರ್ಮುಖಂಗಚ್ಛಸರಸ್ವತ್ಯಾಸಮನ್ವಿತಂ ॥ ೩ ॥ ಮರೀಚಿಪ್ರಮುಖೈಃಪುತ್ರೈರನ್ವಿತಂತಮಿಹಾನಯ॥ ಅಥವೈಕುಂತನಗರಂಗತ್ವಾಲಕ್ಷ್ಮ್ಯಾವಿರಾಜಿತಂ ॥೪॥

೭ನೇ ಅಧ್ಯಾಯ ಪ್ರಾರಂಭ

ಶ್ರೀಭಗವಂತನು ಕುಮಾರಸ್ವಾಮಿಯನ್ನು ಕುರಿತು ತನ್ನ ಚರಿತ್ರೆಯನ್ನು ಹೇಳುತ್ತಿಹನು. ಈ ಪ್ರಕಾರವಾಗಿ ನಿಶ್ಚಿತಾರ್ಥವೂ ವಿವಾಹದ ದಿವಸವೂ ದೇವತೆಗಳಿಂದ ನಿರ್ಣಯಿಸುತ್ತಿರಲಾಗಿ ಸಿಹ್ಮಾಸನದಲ್ಲಿ ನಿರ್ವ್ಯಸನೀಯುವಾದ ಭಕ್ತಿಜ್ಞಾನಾದಿ ಸುಖಪ್ರದನಾದ ಶ್ರೀ ಪರಮೇಶ್ವರನ ಮಗನಾದ ಗಣರತಿಯುನ್ನು ಭಕ್ತನಾದ ಅಗಸ್ತ್ಯನಿಗೆ ಕೊಟ್ಟ ಆ ವರಪ್ರದಾನದ ಕಲ್ಯಾಣೋತ್ಸವವು ನೆರವೇರಿಸುವುದಕ್ಕೋಸ್ಕರ ಆಜ್ಞಾಪಿಸಿದನು ॥ ೧ ॥ ಅದೇನೆಂದರೆ, ಎ ಸಿದ್ಧಿಬುದ್ಧಿಯರಿಂದ ಕೂಡಿರುವ ಮತ್ತು ಸಕಲಸೇನೆಗಳ ಒಡೆಯನಾದ ಮಗನೆ, ದೇವತೆಗಳನ್ನು ಕರೆಯುವುದಕ್ಕೋಸ್ಕರ ಶ್ವೇತಛತ್ರಿ ಮೊದಲಾದ ಮರ್ಯಾದೆಗಳಿಂದ ಕೂಡಿದವನಾಗಿ ಈಗಲೇ ಹೋಗು ॥ ೨ ॥ ಚಿನ್ನದ ಚಿತ್ತದಕೋಲುಗಳನ್ನು ಧರಿಸಿರುವ ಮಾಗದರುಗಳಿಂದಲೂ ಪಾಠಕರ ಸ್ತುತಿಗಳಿಂದಲೂ ನೀನು ಕೂಡಿದವನಾಗಿ ಪ್ರಥಮದಲ್ಲಿ ವಾಗ್ದೇವಿಯಿಂದ ಕೂಡಿರುವ ನಾಲ್ಕು ಮುಖಗಳುಳ್ಳ ಬ್ರಹ್ಮದೇವನಲ್ಲಿಗೆ ಹೋಗು ॥ ೩ ॥ ಮರೀಚಿ ಎಂಬ ಋಷಿಯು ಮೊದಲಾದ ಮಕ್ಕಳುಗಳಿಂದ ಕೂಡಿರುವ ಆ ದೇವನನ್ನು ಕರದುತಾ. ಆಮೇಲೆ ವೈಕುಂಠಪುರವನ್ನು ಕುರಿತುಹೋಗಿ ಲಕ್ಷ್ಮೀದೇವಿಯಿಂದ ಶೋಭಿತನಾದ ॥ ೪ ॥ ನಾಲ್ಕು ಕೈಯುಳ್ಳ ಗಂಭೀ

ಚತುರ್ಭುಜಮುದಾರಾಂಗಂಪರಿವಾರಯುತಾಹಹಿ॥ ಇಂದ್ರೇಂದ್ರಾ
ಣಿಮುಖಾಂಲ್ಲೋಕಪಾಲಾಂಸ್ತ್ವಾನ್ಸುರಪುಂಗವಾನ್ ॥ ೫ ॥ ಪರಿ
ವಾರಯುತಾನ್ಯತ್ರವಾಚಸ್ಪತಿಮುಖಾನ್ದ್ವಿಜಾನ್ ॥ ಶ್ರೌತಸ್ಮಾರ್ತ
ಪ್ರವರ್ತಕಾಂಶ್ಚ ಗೌತಮಾದಿಮುನೀನಪಿ ॥ ೬ ॥ ಅನ್ಯಾನಪಿಸುರಾ
ನ್ನೃತ್ಯದೇವಗಂಧರ್ವರಾಕ್ಷಸಾನ್ ॥ ವಚಸಾಬಹುಮಾನೇನಾಪ್ರಸಾದ
ಕುಸುಮಾಕ್ಷತಾನ್ ॥ ತೇಭ್ಯೋದತ್ವಾವ್ರಜಸ್ವಾತ್ರಬಹುಕಾರ್ಯಾಣಿ
ಸಂತಿಹಿ ॥ ೭ ॥ ಆಜ್ಞಪ್ತ ಏವಂಪ್ರಭುಣಾನಮಸ್ಕೃತ್ಯಾಸವಿಘ್ನ
ರಾಟ್॥ಪರಿವಾರಯುತೋದೇವೋಯಯಾವಾಪ್ತ ನಕರ್ಮಣೇ॥೮॥
ಶ್ರೇಷ್ಠಾಂಚತುರ್ಮುಖಸ್ಯಾಪೌರಾಜಧಾನೀಂಸುರೈರ್ಯುತಾಂ ॥

ರವಾದ ಅವಯವಗಳುಳ್ಳ, ಪರಿವಾರದಿಂದ ಕೂಡಿರುವ ಶ್ರೀಮಹಾವಿಷ್ಣು
ವನ್ನು ಮತ್ತು ದೇವೇಂದ್ರ ಶಚೀದೇವಿ ಮೊದಲಾದ ಲೋಕಪಾಲಕ
ರುಗಳಾದ ದೇವಶ್ರೇಷ್ಠರುಗಳನ್ನು ॥೫॥ ಎ ಮಗನೇ, ಸೇವಕ ಸಮೂ
ಹಗಳಿಂದ ಕೂಡಿರುವ ಬೃಹಸ್ಪತ್ಯಾಚಾರ್ಯರೇ ಮುಖ್ಯರಾಗಿರುವ
ಬ್ರಾಹ್ಮಣರನ್ನು ಅಗ್ನಿಹೋತ್ರೋಪಾಸನಾದಿ ಸತ್ಕರ್ಮಗಳನ್ನು ಮಾಡಿ
ಕೊಂಡಿರುವ ಗೌತಮಾದಿ ಮುನೀಶ್ವರರನ್ನು ॥ ೬ ॥ ಎ ಮಗುವೇ,
ಇನ್ನು ಉಳಿದ ದೇವತೆಗಳೆಲ್ಲರನ್ನು, ದೇವಗಂಧರ್ವರನ್ನು, ರಾಕ್ಷಸರನ್ನು
ಕೂಡ ಮರ್ಯಾದಪೂರ್ವಕವಾದ ಮಾತಿನಿಂದ ಸಂಭಾಷಣೆಯಂ
ಮಾಡಿ ಪ್ರಸಾದ ಪುಷ್ಪ ಮಂಗಳಾಕ್ಷತೆಗಳನ್ನು ಅವರಿಗೋಸ್ಕರ ಕೊಟ್ಟು
ಬರುವಂತೆ ತಿಳಿಸಿ ಇಲ್ಲಿಗೆ ನೀನು ಜಾಗ್ರತೆಯಾಗಿ ಬರಬೇಕು. ಅನೇಕ
ಕಾರ್ಯಗಳು ಇದ್ದಾವೆ ॥ ೭ ॥ ಈಪ್ರಕಾರವಾಗಿ ಸ್ವಾಮಿಯಿಂದ
ಆಜ್ಞಾಪಿಸಿಕೊಂಡ ಆ ಗಣಪತಿ ದೇವನು ನಮಸ್ಕರಿಸಿ ದೇವಋಷಿಗಳ
ಕರೆಯುವದಕ್ಕೋಸ್ಕರ ತನ್ನ ಪರಿವಾರಸಹಿತನಾಗಿ ಪ್ರಯಾಣಿಸಿದನು ॥೮॥
ಹೀಗೆ ಪ್ರಯಾಣವಂ ಮಾಡಿದ ಗಣಪತಿದೇವನು ಮೊದಲು ಚತುರ್ಮುಖ
ನಾದ ಬ್ರಹ್ಮದೇವನ ಸರ್ವಶ್ರೇಷ್ಠನಾದ ಪುಣ್ಯವಂತರಾದ ಅರಸುಗಳು
ಸೇರಿರುವಂಥ ದೇವತೆಗಳಿಂದ ಕೂಡಿರುವ ಗಂಧರ್ವರುಗಳಿಂದಲೂ

ಸೇವ್ಯಮಾನಂ ದೇವರ್ಷಿಭಿಃ ಸತ್ಯಾಂ ಗಂಧರ್ವೋರಗಕಿನ್ನರೈಃ ॥ ೯ ॥ ಗಂಧರ್ವಗಾನಸಹಿತಾಂ ಗಣಾಂ ವೇದಘೋಷಪ್ರಪೂರಿತಾಂ ॥ ನಾನಾವಾದ್ಯರವೈರ್ಯುಕ್ತಾಂ ಸೂತಮಾಗಧಬಂಧಿಭಿಃ ॥ ೧೦ ॥ ಅರೂಢಾ ಭೂರ್ಗಣೇಶೋಸೌ ಸರ್ವಾಲಂಕಾರಮಂಡಿತಃ ॥ ಮೂರ್ಧ್ನಿದ್ವಿರ್ಮಂಗಲ್ಯೈಃ ತೂರ್ಯನಿನಾದೈಃ ಪ್ರತಿಬೃಂಹಯತ್ ॥೧೧॥ ಸಮಂಗಲಾಕ್ಷತಕರೋಜಗಾಮ ಬ್ರಾಹ್ಮೀಂ ಸಭಾಂ ॥ ಉದ್ಯದಾಜಿತ್ಯಸಂಕಾಶಂ ದೇವಂ ದೃಷ್ಟ್ವಾ ವಿನಾಯಕಂ ॥ ೧೨ ॥ ಪ್ರತ್ಯುಜ್ಜಗಾಮ ಸಹಸಾ ಮುನಿಭಿಶ್ಚಾತ್ಮಭೂಃ ಸಹಾ ॥ ಆನಂದಯಿತ್ವಾ ತದ್ಧಸ್ತಂ ಗೃಹೀತ್ವಾ ಗಾತ್ ಸ್ವಕಾಂ ಸಭಾಂ ॥ ೧೩ ॥ ಸಿಂಹಾಸನೇ ಪ್ರವೇಶ್ಯ...ನಂ

ಉರಗರು ಕಿನ್ನರರುಗಳಿಂದಲೂ ದೇವಋಷಿಗಳಿಂದಲೂ ಸೇವಿಸುತ್ತಿರುವ ಮತ್ತು ಗಂಧರ್ವರ ಗಾಯನಗಳಿಂದಲೂ ವೇದಘೋಷಗಳಿಂದಲೂ ಗಂಭೀರವಾಗಿ ತುಂಬಿರುವ ಅನೇಕ ಪ್ರಕಾರವಾದ ವಾದ್ಯಧ್ವನಿಗಳಿಂದ ಪುರಾಣಿಕರು ವಂಶದ ಗುರುತಿನಂತೆ ಹೊಗಳುವವನು; ಸ್ತುತಿಪಾಠಕರುಗಳಿಂದ ಕೂಡಿರುವ ಸಭೆಯನ್ನು ಮೂಷಿಕಾರೂಢನಾದ ಈ ಗಣಪತಿ ದೇವನು ತನ್ನ ಕಡೆಯಾದ ಮಂಗಲವಾದ್ಯಧ್ವನಿಗಳಿಂದ ಪ್ರತಿಶಬ್ದವನ್ನುಂಟುಮಾಡಿದವನಾಗಿ ॥ ೯ ॥ ॥ ೧೦ ॥ ೧೧ ॥ ಕೈಯಲ್ಲಿ ಮಂಗಲಾಕ್ಷತೆ ಪಾತ್ರೆಯುಳ್ಳವನಾಗಿ ಬ್ರಹ್ಮದೇವನ ಸಭೆಯನ್ನು ಕುರಿತು ಹೋದನು. ಆಮೇಲೆ ಬ್ರಹ್ಮದೇವನು ಉದಯಾಚಲದಲ್ಲಿ ಪ್ರಕಾಶಿಸುವ ಸೂರ್ಯದೇವನಂತಿರುವ ಶ್ರೀಗಣಪತಿದೇವನು ದೂರದಲ್ಲಿ ಬರುತ್ತಿರುವುದನ್ನು ಕಂಡು ॥ ೧೨ ॥ ಮಹರ್ಷಿಗಳಿಂದ ಕೂಡಿರುವ ಪರಮಾತ್ಮ ತತ್ವದಲ್ಲಿ ಅವತರಿಸಿದ ಆ ಬ್ರಹ್ಮದೇವನು ಆ ಗಣಪತಿದೇವನನ್ನು ಇದಿರುಗೊಂಡು, ಒಳ್ಳೇ ಮಾತುಗಳಿಂದ ಸಂತೋಷಪಡಿಸಿ, ಆ ದೇವನ ಕೈಯನ್ನು ಹಿಡಿದುಕೊಂಡು ತನ್ನ ಸಭೆಯನ್ನು ಕುರಿತು ಬಂದನು ॥೧೩॥ ಆಮೇಲೆ ಸೃಷ್ಟಿಕರ್ತನಾದ ಬ್ರಹ್ಮದೇವನು ಮಹಾಗಣಪತಿಯನ್ನು ಸಿಂಹಾಸನದಲ್ಲಿ ಕೂರಿಸಿ, ದಿವ್ಯ ವಸ್ತ್ರಾದಿಗಳಿಂದ ಕೂಡಿರುವ ಆಭರಣಾ

ಧುಪರ್ಕಾದಿಭಿರ್ಮುದಾ ॥ ಸಾಂಬರೈರ್ಭೂಷಣಾದ್ಯೈಶ್ಚ ಧಾತಾಸಂ
ಪೂಜ್ಯಸಾದರಂ ॥ ೧೪ ॥ ಸ್ವಾಗತಂವಿಘ್ನರಾಜಾದ್ಯಪರಿವಾರಯು
ತಾದ್ಭುತ॥ಧನ್ಯೋಽಸ್ಮಿದರ್ಶನಾದದ್ಯಸಸುರೈರ್ಮುನಿಭಿಃಪ್ರಭೋ ॥೧೫॥
ಏವಂಸಮ್ಮಾನಿತೋಽದೇವಃ ಪ್ರತ್ಯನಂದಚ್ಚತುರ್ಮುಖಂ ॥ ಮಂಗ
ಳಾಕ್ಷತಹಸ್ತಸ್ಸಉತ್ತಸ್ಥಾವೃಷಿಮಧ್ಯತಃ ॥೧೬॥ ಉವಾಚಭಾರತೀ
ಯುಕ್ತಂದೇವಂವಿಘ್ನೇಶ್ವರಃಸ್ವಯಂ ॥ ಆಯಾಹಿಭಗವನ್ ಬ್ರಹ್ಮ
ನ್ನಾಜ್ಞಯಾಪರಮೇಶಿತುಃ॥ವಿವಾಹೋಭವಿತಾಮಾತುರಿತಏಕಾದಶೀ
ದಿನೇ ॥೧೭॥ ಏತೈರ್ಮುನೀವರ್ಯೈದೇವ್ಯಾಭಾರತ್ಯಾಸಹವಿಶ್ವಸೃಕ್ ॥
ಇತ್ಯುಕ್ತ್ವಾಪ್ರದದೌತಸ್ಮೈ ಪ್ರಸಾದಕುಸುಮಾಕ್ಷತಾನ್ ॥ ೧೮ ॥

ದಿಗಳಿಂದ ಪ್ರೀತಿಪೂರ್ವಕವಾಗಿ ಪೂಜಿಸಿ, ಎಲೈ ವಿಘ್ನರಾಜನೇ ಪರಿವಾರ ಯುಕ್ತನಾದ ನಿನಗೋಸ್ಕರ ನಮಸ್ಕಾರವು. ಎಲೈ ಪ್ರಭುವೇ ನಿನ್ನನ್ನು ನೋಡೋಣಿಕೆಯಿಂದ, ದೇವತೆಗಳಿಂದ ಶೋಭಿಸುವ ಋಷಿಗಳಿಂದ ಸಹಿತನಾದ ನಾನು ಧನ್ಯನಾದೆನು ಎಂದು ಹೇಳಿದನು ॥೧೪॥೧೫॥ ಈ ಪ್ರಕಾರವಾಗಿ ಪೂಜಿತನಾದ ಈ ಗಣಪತಿಯು ಆ ಚತುರ್ಮುಖದೇವನನ್ನು ಕುರಿತು ಸಂತೋಷಿಸಿ, ಮಂಗಲಾಕ್ಷತೆಯುಕ್ತನಾದ ಕೈಯುಳ್ಳವನಾಗಿ ಋಷಿಗಳ ಸಭಾ ಮಧ್ಯದಲ್ಲಿ ಇದ್ದನು ॥ ೧೬ ॥ ಆಮೇಲೆ ಆ ಗಣಪತಿ ದೇವನು ತಾನೇ ಶಾರದಾದೇವಿಯಿಂದ ಕೂಡಿರುವ ಬ್ರಹ್ಮದೇವನನ್ನು ಕುರಿತು ಎಲೈ ಭಗವಂತನಾದ ಬ್ರಹ್ಮದೇವನೇ ಪೂರ್ವದಲ್ಲಿ ದಾಕ್ಷಾಯಣಿಯಾಗಿ ನನ್ನ ತಾಯಿಯಾಗಿ ಈಗ ಗಿರಿಜಾದೇವಿಯಾದ ಆ ಜಗನ್ಮಾತೆಗೆ ಈ ಶುದ್ಧ ಏಕಾದಶೀದಿನದಲ್ಲಿ ವಿವಾಹೋತ್ಸವವು ಆಗುವುದು. ಆದಕ್ಕೋಸ್ಕರ ಶ್ರೀಪರಮೇಶ್ವರನ ಅಪ್ಪಣೆಯಿಂದ ನೀನು ಬರಬೇಕು॥೧೭॥ ಎಲೈ ಜಗತ್ತನ್ನು ಸೃಷ್ಟಿಸುವ ದೇವನೆ ಈ ಋಷಿಶ್ರೇಷ್ಠರುಗಳಿಂದಲೂ ಮತ್ತು ಭಾರತೀದೇವಿಯಿಂದಲೂ, ಸಹಿತನಾಗಿ ಬರಬೇಕು. ಇಂತೀಪ್ರಕಾರವಾಗಿ ಹೇಳಿ ಶ್ರೀಮುಡಿ ಮಂಗಲಾಕ್ಷತ ಪ್ರಸಾದಗಳನ್ನು ಕೊಟ್ಟನು ॥ ೧೮ ॥ ಆಗ ಬ್ರಹ್ಮದೇವನು ತನ್ನ ಪೀಠದಿಂದ ಎದ್ದು ಪ್ರೀತಿಯು

ತದೋತ್ಥಾಯಾಸನಾದ್ಬ್ರಹ್ಮಾಕರಾಭ್ಯಾಂಜಗೃಹೇಮುದಾ॥ ದತ್ವಾ
ಸುರಮುನಿಭ್ಯಸ್ತತ್ಪ್ರಸಾದಕುಸುಮಾಕ್ಷತಾನ್ ॥ ೧೯ ॥ ಪ್ರಸಾದಂ
ಭಾರತೀಯುಕ್ತೋಧಾರಯಾಮಾಸ ಸಮಸ್ತಕೇ॥ಪ್ರತ್ಯುವಾಚಗಣಾ
ಧ್ಯಕ್ಷಂದಾತಾವಾಣೀಸಮನ್ವಿತಃ ॥ ೨೦ ॥ ಏತೈರ್ಮುನಿವರೈಸ್ಸಾ
ರ್ಧಮಾಯಾಸ್ಯೇಪ್ರಭುಣೋದಿತಃ ॥ಕೃತಾರ್ಥೋಸ್ಮಿಪ್ರಸಾದೇನವಚ
ಸಾಮೃದುನಾತವ ॥ ೨೧ ॥ ಅಥಪ್ರಯಾಸ್ಯನ್ವಿಘ್ನೇಶೋಬ್ರಹ್ಮಾ
ಣಂಮುನಿಭಿಃಸಹ ॥ ಹರ್ಷಯನ್ಸೂಕ್ತವಚಸಾಯಯೌವೈಕುಂಠ
ಮಂದಿರಂ ॥ ೨೨ ॥ ದೃಷ್ಟ್ವಾವೈಕುಂಠನಗರೀಂದೂರತಃಶಂಕರಾ
ತ್ಮಜಃ॥ವಾದಿತ್ರಾನ್ಸ್ವಾದಯಾಮಾಸಹರ್ಷಯನ್ನಿವತಾಂಪುರೀಂ॥೨೩॥
ಶ್ರುತ್ವಾಮಂಗಲತುರ್ಯಾಣಿಶಂಕರಾಣೀಶ್ರಿಯಾಸಹ ॥ ಭಗವಾನ್ನಾದ

ಕ್ತನಾಗಿ ಎರಡು ಕೈಗಳಿಂದಲೂ ತೆಗದುಕೊಂಡನು. ಆ ಪ್ರಸಾದ ಪುಷ್ಪಾ
ಕ್ಷತೆಗಳನ್ನು ಋಷಿಗಳಿಗೂ ದೇವತೆಗಳಿಗೂ ಸಹ ಕೊಟ್ಟು ಭಾರತೀದೇವಿ
ಯಿಂದ ಸಹಿತನಾದ ತಾನೂ ಶಿರಸ್ಸಿನಲ್ಲಿ ಧರಿಸಿಕೊಂಡನು. ವಾಗ್ದೇವಿ
ಯಿಂದ ಸಹಿತನಾದ ಆಬ್ರಹ್ಮದೇವನು ಶ್ರೀಗಣಪತಿದೇವನನ್ನು ಕುರಿತು
ಮಾತನಾಡಿದನು ॥ ೧೯ ॥ ೨೦ ॥ ಎಲೈ ದೇವನೇ ಒಡೆಯನಾದ ಶ್ರೀಪರ
ಮಾತ್ಮನ ಅಪ್ಪಣೆಯಿಂದ ಪ್ರೇರಿತನಾದ ನಾನು ಈ ಮುನಿಶ್ರೇಷ್ಠರಿಂದ
ಕೂಡಿಕೊಂಡುಬರುವೆನು. ಮತ್ತು ನಿನ್ನ ಪ್ರಸಾದದಿಂದಲೂ ಮಧುರವಾದ
ಮಾತಿನಿಂದಲೂ ಕೃತಕೃತ್ಯನಾಗಿರುವೆನು ॥೨೧॥ ಆಮೇಲೆ ಪ್ರಯಾಣಾ
ಭಿಮುಖನಾದ ಶ್ರೀ ವಿಘ್ನೇಶ್ವರನು ಋಷಿಗಳಿಂದ ಸಹಿತನಾದ ಬ್ರಹ್ಮ
ದೇವನನ್ನು ಮೃದುವಾದ ನುಡಿಯಿಂದ ಸಂತೋಷಪಡಿಸುವವನಾಗಿ
ವೈಕುಂಠಪುರಿಯನ್ನು ಕುರಿತುಹೋದನು ॥ ೨೨ ॥ ಶ್ರೀಪರಮೇಶ್ವರನ
ಮಗನಾದ ಗಣಪತಿಯು ವೈಕುಂಠಪುರಿಯನ್ನು ದೂರದಲ್ಲಿ ನೋಡಿ ಆ
ಪುರಿಯನ್ನು ಸಂತೋಷಪಡಿಸುವವನಂತೆ ತನ್ನ ವಾದ್ಯಘೋಷಗಳನ್ನುಂ
ಟುಮಾಡಿಸಿದನು ॥೨೩॥ ಲಕ್ಷ್ಮೀದೇವಿಯಿಂದ ಕೂಡಿರುವ ಶ್ರೀಭಗವಂ
ತನು ಗಣಪತಿದೇವನ ಮಂಗಲವಾದ ವಾದ್ಯಗಳನ್ನು ಕೇಳಿ ಹರ್ಷಯು

ಯಾಮಾಸ ಸ್ವತೂರ್ಯಾಣಿ (ಶಂಕರಾಣಿ) ಪ್ರಹರ್ಷಿತಃ ॥೨೪॥ ಶ್ರು
ತ್ವಾಯಾಂತಂಗಣಾಧ್ಯಕ್ಷಂವೈಕುಂಠಾಧಿಪತಿಃಶ್ರಿಯಾ॥ ಪ್ರೀತ್ಯಾಪ್ರತಿ
ಯಯೌದೇವಸ್ಸೋಮಭೂಷಣಸಂಭವಂ ॥ ೨೫ ॥ ತಾವತ್ಸಮಾ
ಗತಸ್ಸಾಕ್ಷಾತ್ಸಿದ್ಧಿಬುದ್ಧಿಸಮನ್ವಿತಃ ಪಾರ್ಶ್ವದ್ವಯೇವೀಜಿತಾಭ್ಯಾಂ
ಚಾಮರಾಭ್ಯಾಂವಿನಾಯಕಃ ॥ ೨೬ ॥ ಆನಂದಾಬ್ಧಿಗತೋವಿಷ್ಣು
ದೃಷ್ಟ್ವಾದಾಕ್ಷಾಯಣೀಸುತೌ॥ದ್ರಾಕ್ಷಾಖರ್ಜೂರಕದಳೀನಾಳಿಕೇರೈಃ
ಪ್ರತೋಷ್ಯತಂ ॥ ೨೭ ॥ ಕರಂಕರೇಣಸಂಗೃಹ್ಯಚಾನಯಾಮಾ
ಸಮಂದಿರಂ ॥ ಸರ್ವರ್ತುಸಂಪದಾಯುಕ್ತಂನುತಂಬ್ರಹ್ಮಾದಿಭಿಸ್ಸು
ರೈಃ ॥೨೮॥ ವೇದಾಂತಜ್ಞಾನತತ್ವಜ್ಞಂದೇವರ್ಷಿಗಣಸೇವಿತಂ॥

ಕ್ತನಾಗಿ ತನ್ನ **ಕಡೆಯ** ವಾದ್ಯಗಳ ಘೋಷಗಳೊಂದಿಗೆ ॥ ೨೪ ॥
ವೈಕುಂಠನಾಯಕನಾದ ಆ ದೇವನು ಬರುತ್ತಲಿರುವ ಗಣಪತಿದೇವನ
ನ್ನು ತಿಳಿದು ಲಕ್ಷ್ಮೀದೇವಿಯಿಂದ ಒಡಗೂಡಿ ಆ ಚಂದ್ರಮೌಳಿಯ ಮಗ
ನನ್ನು ಪ್ರೀತಿಯಿಂದ ಎದುರುಗೊಂಡನು ॥ ೨೫॥ ಅಷ್ಟರಲ್ಲಿ ಸಿದ್ಧಿಬುದ್ಧ್ಯಾ
ದಿ ದೇವಿಯರಿಂದ ಸಹಿತನಾದ ಆ ಗಣಪತಿದೇವನು ಪ್ರತ್ಯಕ್ಷನಾಗಿ
ಎಡಬಲದ ಚಾಮರಗಳಿಂದ ಬಂದನು ॥೨೬॥ ಆಮಹಾವಿಷ್ಣುವುದಾಕ್ಷಾ
ಯಣಿಯ ಮಗನನ್ನು ನೋಡಿ ಸಂತೋಷ ಸಮುದ್ರಗತನಾಗಿ ದ್ರಾಕ್ಷೆಖ
ರ್ಜೂರ, ರಸಬಾಳೆಹಣ್ಣುಗಳಿಂದ ಆ ದೇವನನ್ನು ಸಂತೋಷಪಡಿಸಿ॥೨೭॥
ಆತನ ಕೈಯನ್ನು ತನ್ನ ಕೈಯಿಂದ ಹಿಡಿದುಕೊಂಡು ತನ್ನ ಮನೆಯನ್ನು
ಕುರಿತು ಕರೆತಂದನು. ಮನೆಯು ಹೇಗಿತ್ತೆಂದರೆ, ಸಮಸ್ತ ಋತು
ಗಳಲ್ಲಿ ಐಶ್ವರ್ಯದಿಂದ ಕೂಡಿರುವ ಬ್ರಹ್ಮಾದಿ ದೇವತೆಗಳಿಂದ ಸ್ತೋತ್ರ
ಮಾಡಿಸಿಕೊಳ್ಳುತ್ತಿರುವ ॥ ೨೮ ॥ ವೇದಾಂತದಲ್ಲಿ ತಿಳಿಯುವ ಪರ
ಮಾರ್ಥವನ್ನು ಬಲ್ಲಂಥ ದೇವಋಷಿಗಳ ಸಮೂಹದಿಂದ ಸೇವಿತ
ವಾದ ಮಾತ್ಸರ್ಯವಿಲ್ಲದಿರುವ ಪಾಪರಹಿತವಾದ, ಚಾಮರಗಳಿಂದಲೂ
ಬೀಸಣಿಗೆಗಳಿಂದಲೂ ಕೂಡಿರುವ, ನವರತ್ನಮಯಗಳಾದ ಚಿತ್ರಗಳಿಂದ
ಪ್ರಕಾಶವಾಗಿರುವ, ಉತ್ತಮವಾದ ಧೂಪಗಳ ಸುವಾಸನಾಯುಕ್ತವಾದ,

ಗತೇರ್ಷ್ಯ೯೦ಪಾಪರಹಿತಂತದ್ವಿಷ್ಣೋಃಪರಮಂಪದಂ ॥ ಚಾಮರ
ವ್ಯಜನೋಪೇತಂರತ್ನಸ್ತಂಭವಿರಾಜಿತಂ ॥ ೨೯ ॥ ಸುಧೂಪದೀ
ಪಿತಂರಮ್ಯಂಮುಕ್ತಾದಾಮವಿರಾಜಿತಂ॥ಮಹಾಸಿಂಹಾಸನೋಪೇತಂ
ಸುವಿತಾನ್ಯೈರಲಂಕೃತಂ ॥ ೩೦ ॥ ಪ್ರವೇಶಯಾಮಾಸಮುಮಾಪು
ತ್ರಂಶೂಲಭೃತೋಹರಿಃ ॥ ಸುವರ್ಣರತ್ನಖಚಿತಆಸನೇಸೋತ್ತರಚ್ಛ
ದೇ॥೩೧॥ ಉಪವೇಶ್ಯಾರ್ಘ್ಯಪಾದ್ಯಾದ್ಯೈರರ್ಹಯಾನಾಸಸಾದರಂ॥
ಲಡ್ಡುಕೈಃಶರ್ಕರೋಪೇತೈರ್ಘೃತಾಕ್ತೈರಿಕ್ಷುದಂಡಕೈಃ ॥ ೩೨ ॥
ಸಂತೋಷ್ಯಪಿಕಟಂವಿಷ್ಣುರ್ವೇದೋಕ್ತವಿಧಿಪೂರ್ವಕಂ ॥ ಸ್ವಾ
ಗತಂದೇವದೇವೇಶಹ್ಯಾಶ್ಚರ್ಯೋಭವದಾಗಮಃ ॥೩೩॥ದರ್ಶನಾತ್ತೇ
ಗಣಾಧ್ಯಕ್ಷಶ್ರಿಯಾಯುಕ್ತಸ್ಯಮೇಸದಾ ॥ ಸಿದ್ಧಯಃಸಿದ್ಧಿಮಗಮನ್
ಭವತ್ಸಂಭಾಷಣಾದಿಹ ॥ ೩೪ ॥ ವೈಕುಂಠಸ್ಸಪರೀವಾರಃಕೃ

ರಮಣೀಯವಾದ ಮುತ್ತಿನ ಸರಗಳಿಂದ ಪ್ರಕಾಶಿಸುವ ಶ್ರೇಷ್ಠವಾದ ಸಿಂಹಾಸನಗಳಿಂದಲೂ ಮೇಲುಕಟ್ಟುಗಳಿಂದಲೂ ಅಲಂಕೃತವಾಗಿರುವ ತನ್ನ ಅರಮನೆಯನ್ನು ॥೨೯॥೩೦॥ ಪಾಪನಾಶಕನಾದ ಮಹಾವಿಷ್ಣುವು ತ್ರಿಶೂಲಧಾರಿಯಾದ ಭಗವಂತನ ಮಗನನ್ನು ಪ್ರವೇಶಮಾಡಿಸಿ ತವಾಸಿಗೆಯುಳ್ಳ ಭಂಗಾರ ರತ್ನಮಯವಾದ ಸಿಂಹಾಸನದಲ್ಲಿ ॥ ೩೧ ॥ ಕುಳ್ಳಿರಿಸಿ ಪಾದ್ಯಾದಿಗಳಿಂದ ತುಪ್ಪ, ಸಕ್ಕರೆ ಗೂಡಿರುವ ಲಾಡುಗಳಿಂದ ಕಬ್ಬಿನ ಹೋಳುಗಳಿಂದ ॥ ೩೨ ॥ ಮಹಾವಿಷ್ಣುವು ಗಣಪತಿಯನ್ನು ಸಂತೋಷಪಡಿಸಿ ಹೇಳುತ್ತಾನೆ. ಎಲೈ ದೇವನೇ ನಿನಗೆ ಸ್ವಾಗತವೋ ನಮಗೋಸ್ಕರವೋ ನಿನ್ನ ಬರೋಣವು ಬಹಳ ಆಶ್ಚರ್ಯಕರವಾಗಿದೆ॥೩೩॥ ಎಲೈ ಪರಿಪೂರ್ಣನಾದ ಗಣಪತಿದೇವನೆ ನಿನ್ನನ್ನು ನೋಡೋಣದರ ದಸೆಯಿಂದ ಲಕ್ಷ್ಮೀಯುಕ್ತನಾದ ನನ್ನ ಸಕಲ ಕಾರ್ಯಗಳೂ, ಸಿದ್ಧಿಯನ್ನು ಹೊಂದಿದವು. ನಿನ್ನ ಸ್ಮರಣೆಯನ್ನು ಮಾಡುವವನಿಗೇ ಕಾರ್ಯಸಿದ್ಧಿಯಾಗುವಲ್ಲಿ ಸಂದರ್ಶನ ಸಂಭಾಷಣಾದಿಗಳನ್ನು ಮಾಡೋಣದರ ದೆಸೆಯಿಂದ ಹೊಂದಲು ಸಂದೇಹವೇಯಿಲ್ಲ ॥೩೪॥ ವೈಕುಂಠನೂ ಮತ್ತು

ತಾರ್ಥೋಽಸ್ಮೀತಿಚಾಬ್ರವೀತ್॥ ಪ್ರೀತಃಪ್ರೇಷಣ್ಣಾಪ್ರೂಜಯುಚ್ಚ ವಿಘ್ನೆ ರಾಣ್ಮಧುಸೂದನಂ ॥ ೩೫ ॥ ಪ್ರತ್ಯುವಾಚಹರೇಭೂರ್ಮಕ್ ಭುಣಾಹಂಸಪರಿತಃ ॥ ತದಾಗಮನಸಿದ್ಧ್ಯರ್ಥಮಾಹ್ವಾನಾರ್ಥಂ ಪುರದ್ವಿಷಾ ॥ ೩೬ ॥ ಇತ್ಯುಕ್ತ್ವಾಸತತೋತ್ಥಾಯತ್ರಿಯಾಯುಂ ಕ್ತಾಯವಿಷ್ಣವೇ ॥ ಪ್ರದದೌಸ್ವರ್ಣಪಾತ್ರಸ್ಥಂಪ್ರಸಾದಂಮಂಗ ಲಾಕ್ಷತಂ ॥ ೩೭ ॥ ನತಸ್ಸ್ವಮೂರ್ಧ್ನಾ ಜಗ್ರಾಹಕರಾಭ್ಯಾಂಭಗ ವಾನ್ ಹರಿಃ ॥ ಧೃತ್ವಾಶಿರಸಿತತ್ಪೂರ್ವಂಶಿಷ್ಟಂಲಕ್ಷ್ಮ್ಯೈನ್ಯವೇದ ಯತ್ ॥ ೩೮ ॥ ಮುನಿಭ್ಯಃಸನಕಾದಿಭ್ಯೋವೈಷ್ಣವೇಭ್ಯೋಯ ಥಾರ್ಹಣಃ॥ಸ್ವಾನಂದಪರಿಪೂರ್ಣೋಪಿಶಿವಾನಂದರಸಾನುಗಃ॥೩೯॥

ನಾನೂ ನನ್ನ ಪರಿವಾರದೊಡನೆ ಕೃತಾರ್ಥರಾದೆವೆಂದು ಶ್ರೀ ಮಹಾ ವಿಷ್ಣುವು ಹೇಳಿದನು. ಅನಂತರ ಶ್ರೀವಿಘ್ನೇಶ್ವರನು ವಿಷ್ಣುವಿನಿಂದ ರಚಿಸಲ್ಪಟ್ಟ ಆರಾಧನೆಯಿಂದಲೂ ಆತನ ಪ್ರೀತಿಯಿಂದಲೂ ಸಂತುಷ್ಟ ನಾಗಿ ಮಧುವೆಂಬ ದೈತ್ಯನನ್ನು ಸಂಹಾರಮಾಡಿದ ವಿಷ್ಣುವನ್ನು ಕುರಿತು ಹೀಗೆ ಉತ್ತರಹೇಳಿದನು ॥೩೫॥ ಎಲೈ ಅಪಾರಮಹಿಮನಾದ ಪಾಪಪರಿಹಾರಕನಾದ ವಿಷ್ಣುವೇ ತ್ರಿಪುರಸಂಹಾರಕನಾದ ಲೋಕಾಧ್ಯ ಕ್ಷನಾದ ಶ್ರೀ ಪರಮೇಶ್ವರನಿಂದ ನಿನ್ನ ಬರುವಿಕೆಯ ನಿಮಿತ್ತವಾಗಿ ನಿನ್ನನ್ನು ಕರೆಯಲು ಆಜ್ಞಾಪ್ತನಾಗಿ ಬಂದಿದ್ದೇನೆ ॥ ೩೬ ॥ ಈ ಪ್ರ ಕಾರವಾಗಿ ಹೇಳಿ ಆ ಗಣಪತಿಯೂ ಲಕ್ಷ್ಮೀಸಹಿತನಾದ ವಿಷ್ಣುವಿಗೆ ತಾನು ಭಂಗಾರದ ಪಾತ್ರೆಯಲ್ಲಿ ತಂದಿದ್ದ ಮಂಗಲಾಕ್ಷತೆಯುಕ್ತವಾದ ಶ್ರೀದೇವರ ಪ್ರಸಾದವನ್ನು ಕೊಟ್ಟನು ॥ ೩೭ ॥ ಅನಂತರ ಭಗವಂತ ನಾದ ಹರಿಯು ತಲೆಬಾಗಿಸಿ ಎರಡು ಕೈಗಳಿಂದಲೂ ತೆಗೆದುಕೊಂಡು ಮೊದಲು ತಾನು ಧರಿಸಿ ಆಮೇಲೆ ಲಕ್ಷ್ಮೀದೇವಿಗೂ ಸಹ ಕೊಟ್ಟ ನು ॥ ೩೮ ॥ ಹಾಗೆ ಸನಕಾದಿಮುನಿಗಳಿಗೋಸ್ಕರ ಯೋಗ್ಯತಾನು ಸಾರವಾಗಿ ವೈಷ್ಣವರಿಗೋಸ್ಕರಲೂ ಮತ್ತು ತಾನು ಆನಂದದಿಂದತುಂಬಿ ರುವನಾದರೂ ಶಿವಾನಂದದ ಮಹಿಮಾತಿಶಯವನ್ನು ತಿಳಿದು ಅನು ಭವಿಸಿದನು ॥ ೩೯ ॥ ಆಗ ಗಣಪತಿದೇವನು ಎಲೈ ಮಹಾವಿಷ್ಣುವೇ!

ತದೋಚೇಗಣಪೋವಿಷ್ಣೋ(ಸತ್ರೀಕಃಸಪರಿಚ್ಛದಃ॥ಏಭಿಃಸುರಗಣೈಃ ಸಾರ್ಧವಾಯಾತಿಮುನಿಭಿಃಸ್ತ್ರ್ವಷಾ ॥೪೦॥ ನಮಸ್ತೇಸ್ತುಸುರ ಶ್ರೇಷ್ಠಯಾಸ್ಯಇಂದ್ರಾದಿದಿಕ್ಪತೀನ್ ॥ ಇತ್ಯುಕ್ತ್ವಾಪ್ರಯಯೌ ದೇವೋಗಣೇಶಃಸಪರಿಚ್ಛದಃ ॥ ೪೧ ॥ ಪುರೋಪವನಪರ್ಯಂತಂ ಪ್ರತಿಯಾತಸ್ತುವಿಷ್ಣುನಾ ॥ ತತಇಂದ್ರಸ್ಯಭವನಂದೃಷ್ಟ್ವಾದೃಷ್ಟಿ ಮನೋಹರಂ ॥ ೪೨ ॥ ಹರ್ಷಯುಕ್ತತೂರ್ಯನಿನದೈರ್ಮಂಗಲೈಃ ಪಟಹಸ್ವನೈಃ । ಝಣನ್ನೂಪುರಸನ್ನಾದೈಃಸಾಮಸಂಗೀತಶೋಭಿ ತೈಃ ॥೪೩॥ಶ್ರುತ್ವಾತತಮುಖಃಶಬ್ದಂಮಾಂಗಲ್ಯಂಸಾಪ್ಸರೋಗಣಃ॥ ವಾಚಸ್ಪತಿಜಯಂತಾಭ್ಯಾಂಸತೂರ್ಯೈರ್ದುಂದುಭಿಸ್ವನೈಃ ॥ ೪೪ ॥

ಈ ದೇವತೆಗಳಿಂದಲೂ ಋಷಿಗಳಿಂದಲೂ ಕೂಡಿಕೊಂಡು ಲಕ್ಷ್ಮೀ ದೇವಿಯಿಂದ ಸಹಿತನಾಗಿ ಪರಿವಾರದೊಡನೆ ಬಿಜಯಮಾಡುಎಂದು ಹೇಳಿ ದನು ॥ ೪೦ ॥ ಆಮೇಲೆ ಎಲೈ ಸರ್ವದೇವಶ್ರೇಷ್ಠನೇ ನಿನಗೋಸ್ಕರ ನಮಸ್ಕಾರವು ಇಂದ್ರಾದಿ ದಿಕ್ಪತಿಗಳ ಸಮೀಪವನ್ನು ಕುರಿತು ಹೋಗು ವೆನು. ಇಂತೀಪ್ರಕಾರ ಗಣಪತಿದೇವನು ಹೇಳಿ ಪರಿವಾರದಿಂದೊಡಗೂಡಿ ನಡೆದನು॥ ಊರ ಮುಂಭಾಗದ ಉದ್ಯಾನವನ ಪರ್ಯಂತವಾಗಿ ಮಹಾ ವಿಷ್ಣುವಿನಿಂದ ಕಳುಹಿಸಿಕೊಂಡನಾಗಿ ಆಮೇಲೆ ನೋಡುವುದಕ್ಕೆ ಹರ್ಷ ಕರವಾದ ಇಂದ್ರನ ಅಮರಾವತೀ ಪಟ್ಟಣವನ್ನು ನೋಡಿ ॥೪೨॥ತೂರ್ಯಗ ಳ ಧ್ವನಿಗಳಿಂದ ಮಂಗಲತರಗಳಾದ ಹಳಗ ಮೊದಲಾದ ವಾದ್ಯಧ್ವನಿಗ ಳಿಂದ ಝಣಝಣರೆನ್ನುವ ಕಾಲುಕಡಗಗಳ ಶಬ್ದಗಳಿಂದ ಸಾಮವೇದ ಮತ್ತು ಸಂಗೀತದಿಂದ ಅಲಂಕೃತವಾದ ಧ್ವನಿಗಳಿಂದ ಸಂತೋಷಪಡಿ ಸುವವನಾಗಿ ಬಂದನು ॥ ೪೩ ॥ ಆಮೇಲೆ ಅಪ್ಸರ ಸಮೂಹದಿಂದ ಕೂಡಿರುವ ದೇವೇಂದ್ರನು ಈ ಮಂಗಲವಾದ್ಯ ಶಬ್ದಗಳನ್ನು ಕೇಳಿ ಬೃಹಸ್ಪತಿ ದೇವಜಯಂತರಿಂದ ಕೂಡಿ ವಾದ್ಯಧ್ವನಿಗಳಿಂದ ಸಹಿತಗಳಾದ ದೇವದುಂದುಭಿ ಶಬ್ದಗಳಿಂದ ॥ ೪೪ ॥ ಮತ್ತು ಅರ್ಘ್ಯಪಾದ್ಯಾದಿಸಂ ಭಾರಯುಕ್ತನಾದ, ದೇವಶ್ರೇಷ್ಠನಾದ ಇಂದ್ರದೇವನನ್ನು ವೇದಪಾರಂ

ಸಾರ್ಘ್ಯಪಾದ್ಯಾದಿಸಂಭಾರೈರ್ಮುನಿಭಿಃಶ್ರುತಿಪಾರಗೈಃ॥ ಕರಾಂಜ
ಲಿಪುಟೈರ್ನಾಸೌಯಯೌಪ್ರತಿಸುರೇಶ್ವರಃ ॥ ೪೫ ॥ ದೈವಾತ್ತಿಥಿಃಕಾ
ರ್ತಿಕೀಸ್ಯಾಚ್ಚತುರ್ಥೀಶುಕ್ಲಪಕ್ಷಗಾ॥ ನಿತ್ಯಂಕರೋತ್ಯಸಾವಿಂದ್ರೋ
ಚತುರ್ಥೀವ್ರತಮುತ್ತಮಂ ॥೪೬॥ ತದರ್ಥಂಪೂರ್ವಮಾಹೂತಾ
ವೃತ್ರಘ್ನಾಸಕಲಾಮರಾಃ ॥ ಯಯುರೇತೇಗಣಾಧ್ಯಕ್ಷಂಸರ್ವೇಮಂ
ಗಲಪಾಣಯಃ॥೪೭॥ ದೇವಧಾನೀಪುರೋದ್ಯಾನೇಕಲ್ಪದ್ರುಕುಸುಮೈ
ರ್ವೃತೇ॥ ಮತ್ತಬರ್ಹಿನಟಾಟೋಪೇಶೋಭನೇಮಂದಮಾರುತೇ ॥
ತಾವದಾಯಾದ್ಗಣಾಧ್ಯಕ್ಷೋಯಾವದಾಯಾಂತಿದೇವತಾಃ ॥ ಸೂರ್ಯ
ಕೋಟಿಪ್ರತೀಕಾಶಂಸಿಂದೂರಾರುಣವಿಗ್ರಹಂ ॥ ೪೯ ॥ ಜ್ವಲತ್ಕಿ

ಗತರಾದ ಮುನಿಗಳಿಂದ ಮುಗಿದಿರುವ ಕೈಯಿಂದಲೂ ಎದುರಾಗಿ ಬಂದನು॥೪೫॥ ಈ ದೇವೇಂದ್ರನು ಯಾವಾಗಲೂ ಶುಕ್ಲಪಕ್ಷ ಚೌತಿಯ ದಿನ, ದೂರ್ವಾಗಣಪತಿ ವ್ರತವನ್ನು ಮಾಡುವ ಪದ್ಧತಿಯಿತ್ತು. ದೈವಯೋಗದಿಂದ ಆದಿನ ಕಾರ್ತಿಕ ಶುದ್ಧ ಚತುರ್ಥೀ ತಿಥಿಯಾಗಿತ್ತು ॥ ॥೪೬॥ಈ ವ್ರತನೆವದಿಂದ ಉತ್ಸವಕ್ಕೋಸ್ಕರ ದೇವೇಂದ್ರನಿಂದ ಸಮಸ್ತ ದೇವತೆಗಳೂ ಕರೆಯಿಸಲ್ಪಟ್ಟಿದ್ದರು. ಈಗ ಬಂದಿರುವ ಸಮಸ್ತ ದೇವತೆಗಳೂ ದೇವೇಂದ್ರನೊಡನೆ ಉಪಾಯನವು ಕೈಯಲ್ಲುಳ್ಳವರಾಗಿ ಆ ಗಣಪತಿದೇವನನ್ನು ಎದುರುಗೊಳ್ಳುವದಕ್ಕೆ ಬಂದರು ॥೪೭॥ ಈಪ್ರಕಾರವಾಗಿ ಅಮರಾವತೀಪುರದ ಮುಂದುಗಡೆಯಲ್ಲಿರುವ ಕಲ್ಪವೃಕ್ಷಗಳಿಂದ ಕೂಡಿರುವ ಪುಷ್ಪಗಳಾದ ನವಿಲುಗಳ ನಾಟ್ಯಗಳ ಉತ್ಸವವುಳ್ಳ, ಮಂಗಲಕರವಾದ, ಪರಿಮಳವಾದ, ಮೃದುವಾದ ಗಾಳಿಯ ಸಂಚಾರವುಳ್ಳ, ನಂದನವೆಂಬ ಉದ್ಯಾನವನದಲ್ಲಿ ಎಷ್ಟುಹೊತ್ತಿಗೆ ದೇವತೆಗಳು ಅಲ್ಲಿಗೆ ಬರುವರೋ ಅಷ್ಟರಲ್ಲಿಯೇ ಗಣಪತಿದೇವನೂ ಬಂದನು. ಹೀಗೆ ಬಂದಿರುವ ಕೋಟಿಸೂರ್ಯ ಪ್ರಕಾಶವುಳ್ಳ ಚಂದ್ರದ ಬಣ್ಣದಂತೆ ಕೆಂಪಾದ ಶರೀರವುಳ್ಳ ॥ ೪೮ ॥ ೪೯ ॥ ಪ್ರಜ್ವಲಿಸುತ್ತಿರುವ ಕಿರೀಟ ಭುಜಕುಂಡಲಗಳು ಮೊದಲಾದ ಆಭರಣಗಳಿಂದ ಭೂಷಿತನಾದ, ಪಾಶವೆಂಬ ರಜ್ಜು

ರೀಟಕೇಯೂರಕುಂಡಲಾದ್ಯೈರಲಂಕೃತಂ॥ ಪಾಶಾಂಕುಶಧರಂಶುಂಡಾವೋದಕಂವಿಘ್ನನಾಯಕಂ ॥ ೫೦ ॥ ದೃಷ್ಟ್ವಾಪ್ರಣೇಮಿರೇಭೂಮೌಸಾಷ್ಟಾಂಗಂಮುನಿಭಿಸ್ಸಹ ॥ ಇಂದ್ರಾದ್ಯಾಸ್ಸಕಲಾದೇವಾಭಕ್ತ್ಯಾಧ್ಯಾನಪುರಸ್ಸರಂ ॥ ೫೧ ॥ ಸ್ವಸ್ತಿದೇವೇತಿಮುನಯಸ್ಸ್ವಾಗತಂದೇವಸಂತತಿಃ॥ ದೃಷ್ಟ್ವೋಚುಃಕ್ಕಾಕೃತೈತಾಸ್ತೇಷುಪ್ರತ್ಯಕ್ಷಸಿದ್ಧಿದಾಯಕಂ ॥ ೫೨ ॥ ತಾನುವಾಚೇಶಪುತ್ರೋಸೌವಾಚಸ್ಪತಿಮುಖಾನ್ಸುರಾನ್॥ ನಿರಾಮಯಾಸ್ಥಹೇದೇವಾಗುರುಮಂತ್ರಸುಮಂತ್ರಿತಾಃ॥ ಕಶ್ಯಪಾಂಗಿರಸಃಪುತ್ರವಿಶ್ವಾಮಿತ್ರಾಥಗೌತಮ॥ಯೂಯಂಸತಿಸ್ಥಮುನಯಃಕುಶಲಾಸ್ಸಾಗ್ನಿಹೋತ್ರಿಣಃ॥೫೪॥ ಇತ್ಥಮಿಂದ್ರಾಯ

ಅಂಕುಶವೆಂಬ ಈಟಿಯನ್ನು ಧರಿಸಿರುವ, ಸುಂಡಲ ತುದಿಯಲ್ಲಿ ತುಪ್ಪದಲ್ಲಿ ಕರಿದ ಕರಿಗಡುಬುಳ್ಳ ಶ್ರೀ ಗಣಪತಿದೇವನನ್ನು ॥ ೫೦ ॥ ಇಂದ್ರ ಮೊದಲಾದ ಸಮಸ್ತ ದೇವತೆಗಳೂ ಮುನಿಗಳಿಂದ ಸಹಿತರಾಗಿ ಭಕ್ತಿಯಿಂದ ಧ್ಯಾನಪೂರ್ವಕವಾಗಿ ಭೂಮಿಯಲ್ಲಿ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿದರು ॥ ೫೧ ॥ ಮತ್ತು ಆ ದೇವತೆಗಳು, ಪ್ರತ್ಯಕ್ಷನಾಗಿ ಸಕಲ ಸಿದ್ಧಿಗಳನ್ನೂ ಕರುಣಿಸುವ ಗಣಪತಿದೇವನನ್ನು ನೋಡಿ ಮುನಿಗಳು ನಿನಗೆ ಮಂಗಲವಾಗಲೆಂದೂ ನಮಸ್ಕಾರವೆಂದೂ ಹೇಳಲು, ದೇವತೆಗಳು ಸ್ತುತಿಸಿ ಧನ್ಯರಾದರು ॥ ೫೨ ॥ ಶ್ರೀ ಪರಮೇಶ್ವರನ ಮಗನಾದ ಗಣಪತಿದೇವನು ಬೃಹಸ್ಪತಿ ಮೊದಲಾದ ಋಷಿಗಳನ್ನೂ ದೇವತೆಗಳನ್ನೂ ಕುರಿತು ಎಲೈ ಕಶ್ಯಪನೆ, ಆಂಗೀರಸನ ಮಗನಾದ ಬೃಹಸ್ಪತಿಯೇ, ಗೌತಮನಿಂದ ಕೂಡಿರುವ ವಿಶ್ವಾಮಿತ್ರನೇ ಓ ಸಮಸ್ತ ದೇವತೆಗಳಿರಾ ನೀವು ಸೇವಕರಿಂದ ಸಹಿತರಾಗಿಯೂ ಅಗ್ನಿಹೋತ್ರಗಳಿಂದ ಕೂಡಿದವರಾಗಿಯೂ ಬೃಹಸ್ಪತಿದೇವನ ಆಲೋಚನೆಯಿಂದ ನಡೆಯಿಸಲ್ಪಟ್ಟ ಕಾರ್ಯವುಳ್ಳವರಾಗಿ ಸುಖಿಗಳಾಗಿರುವಿರಾ? ಎಂದು ಅವರುಗಳನ್ನು ಕುರಿತು ಪ್ರಶ್ನೆ ಮಾಡಿದನು ॥೫೩॥೫೪॥ ಇಂದ್ರಾದಿಗಳು ಈ ಪ್ರಕಾರವಾಗಿ ಆ ಅಮೃತಮಯವಾದ ಮಾತನ್ನು ಕೇಳಿ, ಎಲೈ ದೇವನೇ, ದಯಾಶಾಲಿ

ಯಶ್ರುತ್ವಾಸಾನಂದಸ್ತದ್ವಚೋಽಮೃತಂ॥ ಸುಖಿನಃಕೃಪಯಾಸರ್ವೇ ತವದೇಯುದಯಾನಿಧೇ ॥ ೫೫ ॥ ಆಯಾಹಿನಗರೀಂದೇವ ಸ್ವಾಂತ್ವತ್ಸೇವಾಭಿಮುಖೀಂವಿಭೋ ॥ ಇತ್ಯುಕ್ತ್ವಾತ್ವಪ್ಸರೀಯುಸಾಮಾತ್ಯಶ್ರಿಯಯಾತಂಶಿಷೇವಿರೇ ॥ ೫೬ ॥ ಅಥಪಾರ್ಶ್ವಸ್ಥಿತೈರ್ದೇವೈಃ ಸ್ತುವದ್ಭಿರ್ಮುನಿಭಿಃಸಹ ॥ ದೇವಧಾನೀಂವಿಶನ್ರಾಜಉದಯಾಸ್ಥ ಇವಾಂಶುಮಾನ್ ॥ ೫೭ ॥ ಅಯಾಂತಂಶಂಕರಂದೃಷ್ಟ್ವಾಮಂಡಿತಾ ದೇವಯೋಷಿತಃ ॥ ಮಾರ್ಗೇನೀರಾಜಯಂತ್ಯೇನಂಘೃತಕರ್ಪೂರರ ದೀಪಕೈಃ॥೫೮॥ ಪಶ್ಯನ್ನಿಂದುಕ್ಷ್ವಿಷಾದೃಷ್ಟ್ವಾಶ್ರೇಣೀರ್ಭೂತಗ್ಯಹಾನಪಿ ॥ ಪ್ರಯಯಾಸಂಸ್ತುತೋದೇವೋಹರ್ಮ್ಯಾರೂಢಾಂಗನಾಗಣಾಃ ॥ ೫೯ ॥ ಕರಾಂಜಲಿಪುಟೇನೇಂದ್ರೋಜಯೇಕೃತ್ವಾಪ್ರಿಯಾ

ಯಾದ ನಿನ್ನ ಅನುಗ್ರಹದಿಂದ ನಾವು ಸುಖಿಗಳಾಗಿದ್ದೇವೆ ॥ ೫೫ ॥ ಮತ್ತು ಎಲೈ ಸ್ವಾಮಿಯೆ, ನಿನ್ನ ಸೇವೆಗೆ ಸಿದ್ಧವಾದ ಈ ಪಟ್ಟಣವನ್ನು ಕುರಿತು ಬಿಜಮಾಡು ಎಂದು ಪ್ರಾರ್ಥಿಸುತ್ತೇವೆ. ತನ್ನ ಮಹದೈಶ್ವರ್ಯ ದಿಂದ ಪ್ರವೇಶಿಸುತ್ತಿರುವ ಆ ಗಣಪತಿದೇವನನ್ನು ಸೇವಿಸುತ್ತ ಬಂದರು ॥ ೫೬ ॥ ಆಮೇಲೆ ಉಭಯ ಪಾರ್ಶ್ವದಲ್ಲಿಯೂ ಸೇವಿಸುತ್ತಿರುವ ದೇವತೆಗಳಿಂದಲೂ ಋಷಿಗಳಿಂದ ಸಹಿತನಾಗಿ ದೇವರಾಜಧಾನಿಯನ್ನು ಪ್ರವೇಶಿಸುತ್ತಿರುವ ಆಗಣಪತಿದೇವನು ಉದಯಾಚಲದಲ್ಲಿರುವ ಸೂರ್ಯನಂತೆ ಪ್ರಕಾಶಿಸಿದನು ॥ ೫೭ ॥ ಹೀಗೆ ರಾಜಬೀದಿಯಲ್ಲಿ ಬರುವಾಗ ಅಲಂಕೃತರಾದ ದೇವಸ್ತ್ರೀಯರುಗಳು ಜಗದೀಶನ ಮಗನಾದ ಗಣಪತಿದೇವನನ್ನು ದಾರಿಯಲ್ಲಿ ನೋಡಿ ತುಪ್ಪ ಕರ್ಪೂರ ಮೊದಲಾದ ದೀಪಗಳಿಂದ ಆರತಿಯನ್ನು ಎತ್ತಿದರು ॥ ೫೮ ॥ ಹೀಗೆ ಅನೇಕ ಪ್ರಕಾರವಾಗಿ ಸ್ತುತಿಗೊಳ್ಳುವ ಆ ದೇವನು ಉಪ್ಪರಿಗೆಗಳನ್ನು ಹತ್ತಿಕೊಂಡಿರುವ ದೇವಸ್ತ್ರೀಸಮೂಹಗಳನ್ನೂ ಇಂದ್ರದೇವನ ಸಂಪತ್ತಿನಿಂದ ಮೆರೆಯುತ್ತಿರುವ ಸಾಲಾಗಿರುವ ಮನೆಗಳನ್ನೂ ನೋಡುತ್ತ ಬಿಜಯಂಗೈದನು ॥ ೫೯ ॥ ಆಗ ದೇವೇಂದ್ರನು ಕೈಮುಗಿದುಕೊಂಡವರಿಂದ ಜಯ

ವೃತಾಂ ॥ ಪ್ರವೇಶಯಾಮಾಸತದಾರಾಜಧಾನೀಂಮನೋರಮಾಂ॥
ಪ್ರವೇಶ್ಯದೇವಂವರದಂರತ್ನಪೀಠೇಸುಶೋಭಿತೇ ॥ ತಥಾಸಂಭೃತಸಂ
ಭಾರಶ್ಶುಚೀಶಚ್ಯಾಸಮನ್ವಿತಃ ॥ ೬೧ ॥ ಪುರೋಹಿತೇನಗುರುಣಾ
ಪೂಜಾಂಚಕ್ರೇಸಮನ್ವಿತಃ ॥ ಷೋಡಶ್ಯಉಪಚಾರೈಶ್ಚಸಪುಷ್ಪಾಂ
ಚರಚಂದನೈಃ ॥೬೨॥ ಅಪೂಪಲಡ್ಡುಖರ್ಜೂರಶಷ್ಕುರ್ಲೀಕ್ಷುರಸಾ
ದಿಭಿಃ॥ಪುರಿಕಾಶರ್ಕರಾಸಕ್ತೈರ್ಮೋದಕೈರ್ವಿಟಂವಿಭುಂ ॥ ೬೩ ॥
ನಾಳಿಕೇರಾದಿತಾಂಬೂಲೈಸ್ತಥಾನೀರಾಜನಾದಿಭಿಃ ॥ ದಕ್ಷಿಣಾಸ್ವರ್ಣ
ಪುಷ್ಪೈಸ್ತಂಪ್ರಾರ್ಥಯನ್ನಿದಮಬ್ರವೀತ್ ॥ ೬೪ ॥ ಸರ್ವಜ್ಞೋ
ಭಗವನ್ದೇವಪ್ರಸೀದಕರುಣಾನಿಧೇ ॥ ಪಾಹ್ಯಸ್ಮಾನ್ದುರಿತಾದಿಭ್ಯಃ

ವೆಂದು ಸ್ತುತಿಸಿ ಆಶ್ಚರ್ಯಯುಕ್ತವಾದ ತನ್ನ ರಮಣೀಯವಾದ ಅರಮನೆಯನ್ನು ಪ್ರವೇಶ ಮಾಡಿಸಿದನು ॥ ೬೦ ॥ ಹೀಗೆ ಪ್ರವೇಶಮಾಡಿಸಿ ರತ್ನಮಯವಾದ ಶುಭವಾದ ಪೀಠದಲ್ಲಿ ಇಷ್ಟಾರ್ಥದಾಯಕನಾದ ಆ ದೇವನನ್ನು ಕುಳ್ಳಿರಿಸಿ ಆಮೇಲೆ ಶುಚಿಯಾಗಿ ಶಚೀದೇವಿಯಿಂದ ಸಹಿತನಾದ ದೇವೇಂದ್ರನು ಸಕಲ ಸಂಭಾರಯುಕ್ತನಾಗಿ ॥ ೬೧ ॥ ಸಮಾಧಾನಚಿತ್ತನಾಗಿ ಪುರೋಹಿತನಾದ ಬೃಹಸ್ಪತಿದೇವನಿಂದ ಹೇಳಲ್ಪಟ್ಟಪ್ರಕಾರವಾಗಿ ಪುಷ್ಪಗಳು ಉತ್ತಮವಾದ ವಸ್ತ್ರಾಭರಣಗಳು ಸುಗಂಧ ಮೊದಲಾದವುಗಳಿಂದ ಪೂಜೆಯನ್ನು ಮಾಡಿದನು ॥ ೬೨ ॥ ಹೋಳಿಗೆ, ಲಾಡು, ಉತ್ತುತ್ತೆ, ಚಕ್ಕುಲಿ, ಕಬ್ಬಿನ ರಸಾದಿಗಳಿಂದಲೂ ಸಕ್ಕರೆ ಕೂಡಿರುವ ಕರಿಗಡುಬುಗಳಿಂದಲೂ ಪಾಪರಹಿತನಾದ ಸ್ವಾಮಿಯನ್ನು ॥೬೩॥ ಹಣ್ಣು ಕಾಯಿ ತಾಂಬೂಲ ಮೊದಲಾದವುಗಳಿಂದಲೂ ನೀರಾಜನಾದಿಗಳಿಂದಲೂ ದಕ್ಷಿಣ ಸುವರ್ಣ ಮಂತ್ರಪುಷ್ಪಗಳಿಂದಲೂ ಪೂಜಿಸಿ ಪ್ರಾರ್ಥಿಸುವನಾಗಿ ಈ ಮುಂದೆ ಹೇಳುವಂತೆ ಅವನನ್ನು ಕುರಿತು ಹೇಳಿಕೊಂಡನು ॥ ೬೪ ॥ ಅದೇನೆಂದರೆ ಎಲೈ ಸರ್ವವನ್ನೂ ಬಲ್ಲ ಆರುವಿಧವಾದ ಐಶ್ವರ್ಯವುಳ್ಳ ದಯಾಸಮುದ್ರನಾದ ಈಶಪುತ್ರನಾದ ದೇವನೇ ಕಷ್ಟ ಮೊದಲಾದುದರ ದೆಸೆಯಿಂದ ನಮ್ಮನ್ನು ರಕ್ಷಿಸು. ನಿನ್ನಲ್ಲಿ

ಸ್ವಭಕ್ತಿಂದೇಹಿಶಾಂಕರ ॥ ೬೫ ॥ ಇತೀಡಿತೋ ಗಣಾಧ್ಯಕ್ಷ ಸ್ತಥೇತ್ಯುಕ್ತ್ವಾಸುರೇಶ್ವರಂ ॥ ಪ್ರಹರ್ಷಯನ್ಮುನಿವರಾನ್ ಪ್ರೋವಾಚೇಂದ್ರಾದಿದೇವತಾಃ ॥ ೬೬ ॥ ಶೃಣುಧ್ವಂಕಲಶೇಶಸ್ಯ ಶಾಸನಂಪರಮಾತ್ಮನಃ ॥ ಸೃಷ್ಟಿಲೀಲಾವಿನೋದಾರ್ಥಂಭವದ್ಭಿಃ ಪ್ರಾರ್ಥಿತಃಪುರಃ॥೬೭॥ ಪಾಣಿಗ್ರಹೋತ್ಸವೋದೇವ್ಯಾಇತಏಕಾದಶೀ ದಿನೇ॥ಇಂದ್ರಾದ್ಯಸಕಲಾಯೂಯಮೇಭಿರ್ಮುನಿವರೈಸ್ಸಹ ॥೬೮॥ ಆಗಚ್ಛಧ್ವಂಸಪತ್ನೀಕಾಃಪರಿವಾರಜನೈಶ್ವೃತಾಃ ॥ ತದರ್ಥಮುಪದಿ ಷ್ಟೋಯಂಪ್ರಸಾದೋಮಂಗಲಾಕ್ಷತಃ॥೬೯॥ಗೃಹ್ಯತಾಂಭೋಮುನಿ ಶ್ರೇಷ್ಠಾಸ್ತದ್ದೈವಂಶೂಲಪಾಣಿನಃ॥ಬೃವನ್ನೇವಂಗಣದೌದೇವಃಪ್ರಸಾದ

ಭಕ್ತಿಯನ್ನು ಕೊಡು ॥ ೬೫ ॥ ಈಪ್ರಕಾರ ಪ್ರಾರ್ಥಿತನಾದ ಗಣಪ ತಿದೇವನು ಹಾಗಾಗಲಿ ಎಂದು ವರವನ್ನು ಕೊಟ್ಟು, ಸಂತೋಷಪಡಿ ಸುವವನಾಗಿ ಮುನಿಶ್ರೇಷ್ಠರನ್ನೂ ಇಂದ್ರಾದಿ ದೇವತೆಗಳನ್ನೂ ಕುರಿತು ಮಾತನಾಡಿದನು ॥ ೬೬ ॥ ಎಲೈ ದೇವಋಷಿಗಳಿರಾ, ಪಾಲನೆ ಎಂಬ ವಿಲಾಸೋತ್ಸವಕ್ಕಾಗಿ ಶ್ರೀಪರಮಾತ್ಮನಾದ ಶ್ರೀ ಕಲಶೇಶ್ವರ ಸ್ವಾಮಿಯ ಅಪ್ಪಣೆಯನ್ನು ಕೇಳಿ. ಅದೇನಂದರೆ, ಹಿಂದೆ ದಕ್ಷ ಪ್ರಜಾಪತಿಯಲ್ಲಿ ಅವ ತರಿಸಿದ ದೇವಿಯು ಶರೀರವನ್ನು ತಿರಸ್ಕರಿಸಿದನಂತರ ತುಂಟನಾದ ತಾರ ಕಾಸುರನ ಬಾಧೆಯನ್ನು ಪರಿಹರಿಸಿಕೊಳ್ಳುವುದಕ್ಕಾಗಿ ನಿಮ್ಮಿಂದ ಶ್ರೀದೇ ವಿ ಪ್ರಾರ್ಥಿಸಲ್ಪಟ್ಟದ್ದಕ್ಕಾಗಿ ಆ ದೇವಿಯು ಹಿಮವತ್ಪರ್ವತನಲ್ಲಿ ಅವ ತರಿಸಿರುವುದರಿಂದ ಆ ಗಿರಿಜಾದೇವಿಯ ವಿವಾಹೋತ್ಸವವು ಈಗಿನ ಏಕಾದಶೀ ದಿನದಲ್ಲಿ ಆಗುವುದು. ಇಂದ್ರಾದಿ ಸಮಸ್ತ ದೇವತೆಗಳಾದ ನೀವು ಈ ಋಷಿಶ್ರೇಷ್ಠರುಗಳಿಂದ ಸಹಿತರಾಗಿ ॥ ೬೭ ॥ ೬೮ ॥ ಪತ್ನೀ ಪರಿವಾರಗಳಿಂದ ಸಹಿತರಾಗಿ ಬನ್ನಿ. ಅದಕ್ಕೋಸ್ಕರ ಈ ಪ್ರಸಾದ ಮಂ ಗಲಾಕ್ಷತೆಯು ಕಳುಹಿಸಲ್ಪಟ್ಟಿದೆ ॥೬೯॥ ಎಲೈ ದೇವತೆಗಳಿಂದ ಸಹಿತ ರಾದ ಮುನಿಗಳಿರಾ, ತೆಗೆದುಕೊಳ್ಳೋಣವಾಗಲಿ. ಹೀಗೆ ಹೇಳುವ ಗಣ

ಕುಸುಮಾಕ್ಷತಾನ್॥೭೦॥ ನತೇನಮೂರ್ಧ್ನಾಜಗ್ರಾಹದೇವೇಂದ್ರೋ
ಗುರುಣಾಸಹಗೃಹೀತ್ವಾತಾನ್ಗುರುರ್ಹಸ್ತೇಮಹೇಂದ್ರಾದಿಭ್ಯಏವಚ॥
ತದಾತೇಭ್ಯೋಭ್ಯಮುನಿಭ್ಯಶ್ಚದೇವೀಭ್ಯಃಪ್ರದದೌಮುದಾ॥ ಸ್ವಯಂ
ದಧೌಪ್ರಸಾದಂಚತತಃಸರ್ವೇಸುರೇಶ್ವರಾಃ ॥೭೧ ॥ ಆಯಾಸ್ಯಾಮ
ಇತೀಂದ್ರಾದ್ಯಾ ಅಬ್ರುವನ್ಗಣನಾಯಕಂ ॥ ಸ್ವಸ್ತ್ಯಸ್ತುಯಾಸ್ಯ
ಇತ್ಯುಕ್ತ್ವಾವಿರಾಟ್ಕಾರ್ಯ್ಯಾಯುಸೋಜ್ವಲಃ ॥ ೭೩ ॥ ಜಯೇ
ತಿದೈವತೈರುಕ್ತೋಯಯೌಶ್ರೀಕಲಶೇಶ್ವರಂ ॥ ವಿಜ್ಞಾಪ್ಯಪರಮೇ
ಶಾಯಚಾಹ್ವಾನಾದಿಸುರಾಗಮಂ॥೭೪ ॥ ಉತ್ತರದ್ವಾರಮಗಮಂ
ಭಂಭುನಾಪ್ರತಿನಂದಿತಃ॥ ಇತ್ಥಮಾಹ್ವಾನಕರ್ಮ್ಯೇವಗಣೇಶಚರಿತಂ

ಪತಿದೇವನು ತ್ರಿಶೂಲಧರನಾದ ಪರಮೇಶ್ವರನ ಪ್ರಸಾದ ಮಂತ್ರಾ
ಕ್ಷತೆಗಳನ್ನು ಕೊಟ್ಟನು ॥ ೭೦ ॥ ಬೃಹಸ್ಪತ್ಯಾಚಾರ್ಯನಿಂದ ಕೂಡಿದ
ದೇವೇಂದ್ರನು ವಿನಯಪೂರ್ವಕವಾಗಿ ಎರಡು ಕೈಗಳಿಂದಲೂ ತೆಗೆ
ದುಕೊಂಡನು. ಆ ಪ್ರಸಾದಾಕ್ಷತೆಗಳನ್ನು ಬೃಹಸ್ಪತ್ಯಾಚಾರ್ಯನು
ಕೈಯಲ್ಲಿ ತೆಗೆದುಕೊಂಡು ಸಪತ್ನೀಕರಾದ ಋಷಿಗಳಿಗೋಸ್ಕರ ಆ
ಮೇಲೆ ಇಂದ್ರಾದಿ ದೇವತೆಗಳಿಗೋಸ್ಕರ ಇಂದ್ರಾಣಿ ಮೊದಲಾದ ದೇವಿ
ಗಳಿಗೋಸ್ಕರ ಕೊಟ್ಟನು. ತಾನು ಕೂಡ ಪ್ರಸಾದವನ್ನು ಧರಿಸಿದನು.
ಆಮೇಲೆ ಸಮಸ್ತ ದೇವತೆಗಳೂ ॥೭೧॥ ೭೨ ॥ ಇಂದ್ರಾದಿಗಳೂ ಬರು
ವೆವು ಎಂದು ಗಣಪತಿದೇವನನ್ನು ಕುರಿತು ಹೇಳಿದರು. ಪರಮಾತ್ಮ ರೂ
ಪನಾದ ಆ ಗಣಪತಿದೇವನು ನಿಮಗೆ ಮಂಗಲವಾಗಲಿ ಹೋಗುವೆನು
ಎಂದು ಹೇಳಿ ವಾದ್ಯಸ್ವರಗಳಿಂದ ಹರ್ಷಿತನಾಗಿ ॥ ೭೩ ॥ ದೇವತೆಗ
ಳಿಂದ ಜಯಜಯ ಎನ್ನಿಸಿಕೊಂಡ ಆ ಗಣಪತಿದೇವನು ಶ್ರೀಕಲಶೇ
ಶ್ವರ ಸ್ವಾಮಿಯ ಬಳಿಗೆ ಹೋದನು. ಈಪ್ರಕಾರ ಬಂದು ಶ್ರೀಪರ
ಮಾತ್ಮನಿಗೋಸ್ಕರ ತಾನು ನಡೆಯಿಸಿದ ಕರೆಯೋಣವನ್ನೂ ದೇವತೆ
ಗಳು ಬರುವ ಅಂಶವನ್ನೂ ವಿಜ್ಞಾಪಿಸಿ ॥ ೭೪ ॥ ಆಮೇಲೆ ಭಗವಂತ
ನಿಂದ ಸಂತೋಷಪಡಿಸಿಕೊಂಡ ಗಣಪತಿದೇವನು ಶ್ರೀ ಕಲಶೇಶ್ವರ ಸ್ವಾ

ಮಹತ್ ॥ ೭೫ ॥ ಪಠೇದ್ಯಶ್ಶೃಣುಯಾಚ್ಚಾಪಿಸರ್ವಾಭೀಷ್ಟಮವಾಪ್ನುಯಾತ್ ॥ ... ॥ ೭೬ ॥

ಇತಿ ಶ್ರೀಸ್ಕಂದಪುರಾಣೇ ತುಂಗಭದ್ರಾಖಂಡೇ ಕಲಶೇಶ್ವರ ಮಾಹಾತ್ಮ್ಯೇ ದೇವಾಹ್ವಾನನ್ನಾಮ ಸಪ್ತಮೋಽಧ್ಯಾಯಃ ಶ್ರೀ ಶ್ರೀ.

ಮಿಯುವರ ಉತ್ತರದಿಕ್ಕಿನಲ್ಲಿರುವ ತನ್ನ ಸ್ಥಾನವನ್ನು ಹೊಂದಿದನು. ಈಪ್ರಕಾರವಾದ ದೇವತೆಗಳ ಕರೆಯೋಣವೆಂಬ ಶ್ರೀಗಣಪತಿದೇವನ ಮಹತ್ವಾದ ಚರಿತ್ರೆಯನ್ನು ॥ ೭೫ ॥ ಯಾವನು ಕೇಳುತ್ತಾನೋ ಹೇಳುತ್ತಾನೋ ಅವನು ಸಕಲ ಅಭೀಷ್ಟಗಳನ್ನು ಹೊಂದುವನು. ಈ ಪ್ರಕಾರ ಸ್ಕಂದಪುರಾಣದಲ್ಲಿ ತುಂಗಭದ್ರಾಖಂಡದಲ್ಲಿ ಹೇಳಿರುವ ಶ್ರೀ ಕಲಶೇಶ್ವರ ದೇವರ ಮಹಿಮೆಯಲ್ಲಿ ದೇವತೆಗಳ ಕರೆಯೋಣವೆಂಬ ಏಳನೆಯ ಅಧ್ಯಾಯವು ಸಮಾಪ್ತಿಯಾಯಿತು. ॥ ೭೬ ॥

ಶ್ರೀ ಶ್ರೀ ಶ್ರೀ ಶ್ರೀ.

ಶ್ರೀಸೂತಃ ॥ ಆಹೂತೇಷ್ವಥದೇವೇಷು ಕಲಶೇಶೋಧನಾದಿ ಪಂ। ಪ್ರೋವಾಚಾನಯಸಂಭಾರಾನುತ್ಸವಾರ್ಹಾನ್ಸಮಗ್ರತಃ॥೧॥ ಹರಿದ್ರಾಕುಂಕುಮಾದೀನಿಮಂಗಲಾನಿಧನೇಶ್ವರ ॥ ಶಾಲಿಗೋಧೂಮಚಣಕಮುದ್ಗಮಾಷಾದಿಕಾನ್‌ಬಹೂನ್ ॥ ೨ ॥ ಶರ್ಕರಾನಾಳಿಕೇರಾಣಿಪೂಗನಾಗದಳಾನಿಚ॥ಆಹರಸ್ವವಿವಾಹಾರ್ಥಂಸಂಭಾರಾನ್ ಸಕಲಾನಿಹ॥೩॥ ಪಶ್ಚಿಮೇಚೋತ್ತರೇಭಾಗೇತುಂಗಭದ್ರಾಸರಿತ್ತಟೇ॥ ಮುರಾರಿಪದ್ಮಜೇಂದ್ರೇಭ್ಯಃಕುರುಷ್ವಪಟಮಂಟಪಂ॥ ೪ ॥ ಪಯಃಫೇನನಿಭಾಶ್ಶಯ್ಯಾಃಮುಕ್ತಾದಾಮವಿಭೂಷಿತಾಃ ॥ ಸೋತ್ತರಚ್ಛದತಾಂಬೂಲವಿತಾನಾದ್ಯೈರಲಂಕೃತಾಃ ॥ ೫ ॥ ಸಿಂಹಾಸನಾನಿಚಾ

---

೮ ನೆಯ ಅಧ್ಯಾಯ ಪ್ರಾರಂಭ.

ಇತ್ತಲಾ ಶೌನಕಾದಿ ಋಷೀಶ್ವರರಿಗೋಸ್ಕರ ಸೂತಪುರಾಣೀಕನು ಹೇಳುತ್ತಾನೆ. ಅದೇನಂದರೆ ಹೀಗೆ ದೇವತೆಗಳನ್ನು ಕರೆಯುತ್ತಿರಲಿಕ್ಕಾಗಿ ಆಮೇಲೆ ಶ್ರೀ ಕಲಶೇಶ್ವರ ಸ್ವಾಮಿಯು ಸಮೀಪದಲ್ಲಿ ಸಿದ್ಧನಾಗಿರುವ ಕುಬೇರನನ್ನು ಕರೆದು, ಎಲೋ ಧನೇಶ್ವರನೇ, ಕಲ್ಯಾಣಕ್ಕೆ ಯೋಗ್ಯಗಳಾದ ಅರಿಸಿನ ಕುಂಕುಮ ಮೊದಲಾದ ಬಹು ದಿನಸುಗಳನ್ನೂ ಸಣ್ಣಕ್ಕಿ ಗೋಧಿ ಕಡಲೆ ಹೆಸರು ಉದ್ದು ಮುಂತಾದ ಸಕಲ ಜಿನಸುಗಳನ್ನೂ ಸಕ್ಕರೆ ತೆಂಗಿನಕಾಯಿ ಹಸನಾದ ಅಡಕೆಎಲೆ ಮೊದಲಾದ ಸಕಲ ಪದಾರ್ಥಗಳನ್ನೂ ವಿವಾಹೋತ್ಸವಕ್ಕೋಸ್ಕರ ಈಗಲೇ ತರಿಸು ಎಂದು ಹೇಳಿದನು॥೧॥೨॥೩॥ ಮತ್ತು ಪಶ್ಚಿಮದಿಕ್ಕಿನಲ್ಲಿ ಉತ್ತರದಲ್ಲಿ ಈ ತುಂಗಭದ್ರೆಯ ದಡದಲ್ಲಿಯೇ ಶ್ರೀ ಮಹಾವಿಷ್ಣು ಬ್ರಹ್ಮದೇವ ದೇವೇಂದ್ರರುಗಳಿಗೋಸ್ಕರ ವಸ್ತ್ರದ ಮಂಟಪಗಳನ್ನು ಮಾಡಿಸು ॥ ೪ ॥ ಆ ಮಂಟಪಗಳಲ್ಲಿ ಹಾಲಿನ ನೊರೆಯಂತೆ ಬಿಳುಪಾದ ಮುತ್ತಿನ ಸರಗಳ ತೋರಣದಿಂದ ಅಲಂಕೃತಗಳಾದ ಮೇಲು ಹೊದಿಕೆಗಳಿಂದ ತಾಂಬೂಲಗಳು ಮೇಲು ಕಟ್ಟುಗಳು ಮೊದಲಾದ್ದರಿಂದಲಂಕೃತಗಳಾದ ಹಾಸಿಗೆಗಳನ್ನೂ ॥೫॥ ಹಾಗೆ ಬಿಳೀ ಛತ್ರಗಳಿಂದ ಕೂಡಿರುವ ಸುಂದರಗಳಾದ

ರೋಣಿಶ್ವೇಚ್ಛತ್ರಯುತಾನಿಚ ॥ ತಥಾಫಲೋಪಹಾರಾಣಿಸ್ವಾದೂ
ಕಯುತಾನಿಚ ॥ ೬ ॥ ಭಾಜನಾನಿಸುವರ್ಣಾನಿಭೃತ್ಯಾನಾಮಾಸನಾ
ನಿಚ । ಯಥಾರ್ಹತಃಸ್ಸುಖಂಸರ್ವೇನಿವಸಂತಿಸುರೇಶ್ವರಾಃ ॥ ೭ ॥
ಪೃಥಕ್ಪೃಥಕ್ತಥಾವತ್ಸಕ್ರಿಯಂತಾಂಮಂದಿರಾಣಿಚ ॥ ಅಲಂಚಕ
ರ್ಥಕಾಲ್ಯಾಣೀಂಪುರೀಂಭದ್ರಾತಟೇಸ್ಥಿತಾಂ॥ ೮ ॥ ಕಲಶಾಖ್ಯಾಮಿ
ಮಾಮದ್ಯದೇವರ್ಷಿಮನುಜೈರ್ವೃತಾಂ ॥ ತಥೈವಮುನಿಮುಖ್ಯಾ
ನಾಂಸದಾರಾಣಾಂಸವಿಸ್ತರಂ ॥ ೯ ॥ ಅಗ್ನಿಹೋತ್ರಾರ್ಚನವಿಧೌ
ಸುವಿಚಿತ್ರಂಯಥಾತಥಾ ॥ ಕಾರಯಿತ್ವೈವಮದ್ಯತ್ವಂಸದಾಮನ್ನಿ
ಕಟೇವಸ ॥ ೧೦ ॥ ಏವಂಸಂಭೃತಸಂಭಾರೋನಿರೀಕ್ಷನ್ಕಾರ್ಯ
ಮಂತರಂ॥ ಅಂತರಾಯೋವಿವಾಹಸ್ಯನಭವೇದ್ಯತ್ತಥಾಕುರು॥೧೧॥

ಸಿಂಹಾಸನಗಳೂ ಶುಚಿಯಾದ ಉದಕಗಳಿಂದ ಯುಕ್ತಗಳಾದ ಫಲ
ಗಳು ಆಹಾರ ಪದಾರ್ಥಗಳು ॥ ೬ ॥ ಇಂಥವುಗಳಿಂದ ತುಂಬಿರುವ
ಪಾತ್ರೆಗಳನ್ನೂ ಮತ್ತು ಸೇವಕರ ಆಸನಗಳನ್ನೂ ಬಂದಿರುವ ದೇವ
ಶ್ರೇಷ್ಠರೂ ತಮ್ಮ ತಮ್ಮ ವಿಭವಾನುಸಾರವಾಗಿ ಸರ್ವರೂ ಹೇಗೆ
ಸುಖವಾಗಿ ವಾಸಮಾಡುವರೋ ಹಾಗೆ ॥ ೭ ॥ ಎಲೋ ಮಗುವೇ,
ಪ್ರತ್ಯೇಕಪ್ರತ್ಯೇಕವಾಗಿ ಬಿಡಾರದ ಮನೆಗಳು ಮಾಡಿಸಲ್ಪಡಲಿ. ತುಂಗಭ
ದ್ರಾತೀರದಲ್ಲಿರುವ ಕಲ್ಯಾಣಪಟ್ಟಣವೆಂಬ ಕಲಶಕ್ಷೇತ್ರವೆಂದು ಪ್ರಸಿದ್ಧ
ವಾದ ದೇವತೆಗಳೂ ಋಷಿಗಳೂ ಮನುಷ್ಯರುಗಳಿಂದ ಮಾಡಿರುವ ಈ
ಊರನ್ನು ಅಲಂಕಾರ ಮಾಡು. ಹಾಗೆಯೇ ಬರುವ ಮಹಾನುಭಾವ
ರಾದ ಕುಟುಂಬ ಸಮೇತರಾದ ಮಹರ್ಷಿಗಳಿಗೆ ಅಗ್ನಿಹೋತ್ರ ದೇವ
ತಾರ್ಚನೆ ಮುಂತಾದ ಶ್ರೌತಸ್ಮಾರ್ತಕರ್ಮಾನುಷ್ಠಾನಗಳಿಗೆ ಅನು
ಕೂಲವಾಗುವಂತೆ ಈಗಲೇ ಬಿಡಾರಗಳನ್ನು ಮಾಡಿಸಿಯೇ ನನ್ನಸಮೀ
ಪದಲ್ಲಿ ಸಿದ್ಧನಾಗಿರಬೇಕು ॥ ೮ ॥ ೯ ॥ ೧೦ ॥ ಈಪ್ರಕಾರ ಸಕಲಸನ್ನಾ
ಹಗಳನ್ನು ಸಿದ್ಧಮಾಡಿಕೊಂಡು ಆಗತಕ್ಕ ಇತರವಾದ ಕೆಲಸಗಳನ್ನು
ನಿರೀಕ್ಷಿಸುತ್ತ ವಿವಾಹಕ್ಕೆ ವಿಘ್ನವಾಗದಂತೆ ನಿರ್ವಹಿಸುತ್ತಾ ಇರು॥೧೧॥

ಅಥಕುಂಭೋದ್ಭವಂವಿಪ್ರಮಾಭಾಷ್ಯಾಹಸುರೇಶ್ವರಃ॥ಕುಂಭಯೋ ನೇವ್ರಜಸ್ವಾಧ್ಯಲೋಪಾಮುದ್ರಾಸಮನ್ವಿತಃ ॥ ೧೨ ॥ ಯಾಜ್ಞವ ಲ್ಕ್ಯಾದಿವಿಪ್ರರ್ಷೀನ್ಪ್ರಸಾದಕುಸುಮಾಕ್ಷತೈಃ ॥ ಮಂಗಲ್ಯೈರನು ಮಂತ್ರ್ಯೈತಾನ್ಸದಾರಾನಾಸಯಸ್ವಹ ॥ ೧೩ ॥ ಇತ್ಯುಕ್ತಸ್ತಂಪ್ರ ಣಮ್ಯೈವಸದಾರಃಪ್ರಯಯೌಮುನೀನ್ ॥ ಯಾಜ್ಞವಲ್ಕ್ಯಮಥಾ ತ್ರಿಂಚಸರ್ವಜ್ಞಂಬಾದರಾಯಣಂ ॥ ೧೪ ॥ ಉದ್ದಾಲಕಂಶೌನ ಕಂಚಗೌತಮಂಗಾಧಿನಸ್ಸುತಂ ॥ ಗರ್ಗಂದುರ್ವಾಸಸಂಚೈವಶಿಷ್ಟಾ ನನ್ಯಮುನೀಶ್ವರಾನ್ ॥೧೫॥ ತೇಷಾಂಪ್ರತ್ಯೇಕಮಕರೋದಾಶ್ರಮಂ ಮಂಗಲಾನ್ವಿತಂ ॥ ಪೂಜಿತಃಪ್ರತಿಪೂಜ್ಯೈತಾನ್ಪ್ರೋವಾಚಸತ

ಆಮೇಲೆ ದೇವೇಶನು ಕಲಶಸಂಭವನಾದ ಅಗಸ್ತ್ಯನನ್ನು ಕರೆದು ಹೇಳಿದನು. ಅದೇನಂದರೆ, ಎಲೈ ಕಲಶೋದ್ಭವನಾದ ಮುನಿಯೇ ನಿನ್ನ ಪತ್ನಿಯಾದ ಲೋಪಾಮುದ್ರೆಯಿಂದ ಕೂಡಿದ ನೀನುಹೋಗು॥೧೨॥ ಯಾಜ್ಞವಲ್ಕ್ಯಾದಿ ಬ್ರಹ್ಮಋಷಿಗಳನ್ನು ಮಂಗಲಕರಗಳಾದ ಪ್ರಸಾದ ಮಂತ್ರಾಕ್ಷತೆ ಪುಷ್ಪಗಳಿಂದ ಆದರಿಸಿ ಸಪತ್ನೀಕರಾದ ಅವರುಗಳನ್ನು ಕರತರಬೇಕು॥೧೩॥ಈಪ್ರಕಾರ ಆಜ್ಞಾಪಿಸಿಕೊಂಡ ಅಗಸ್ತ್ಯನು ಆ ಕಲ ಶೇಶ್ವರದೇವನನ್ನು ನಮಸ್ಕರಿಸಿ ಪತ್ನೀಸಹಿತನಾಗಿ ಮುನಿಗಳ ಬಳಿಗೆ ನಡೆದನು. ಯಾಜ್ಞವಲ್ಕ್ಯನನ್ನು ಹಾಗೆ ಅತ್ರಿಯನ್ನು ಸರ್ವವ ನ್ನೂ ತಿಳಿದ ಬದರಿಕಾಶ್ರಮವು ಮನೆಯಾಗಿರುವ ವೇದವ್ಯಾಸನನ್ನು ॥೧೪॥ಉದ್ದಾಳಕನನ್ನು, ಶೌನಕನನ್ನು, ಗೌತಮನನ್ನು, ಗಾಧಿಯ ಮ ಗನಾದ ವಿಶ್ವಾಮಿತ್ರನನ್ನು, ಗಾರ್ಗ್ಯನನ್ನು, ದುರ್ವಾಸನನ್ನು, ಇನ್ನೂ ಇರುವ ಸಮಸ್ತ ಋಷೀಶ್ವರರನ್ನು ॥ ೧೫ ॥ ಕರೆಯಲು ಆ ಎಲ್ಲಾ ಋಷಿಗಳ ಪ್ರತ್ಯೇಕ ಪ್ರತ್ಯೇಕ ಶುಚಿಯಾದ ಮನೆಯನ್ನು ಕುರಿತು ಹೋದನು. ಅವರವರಿಂದ ಮರ್ಯಾದೆಯನ್ನು ಹೊಂದಿ ತಪೋನಿಷ್ಠ ನಾದ ಅಗಸ್ತ್ಯನು ತಿರುಗಿ ಅವರುಗಳನ್ನು ಕುರಿತು ಮರ್ಯಾದೆಯನ್ನು ಮಾಡಿ ಈ ಋಷಿಗಳನ್ನು ಕುರಿತು ಮಾತನಾಡಿದನು. ಎಲೈ ಋಷಿ

ಪೋನಿಧಿಃ॥೧೬॥ ವಿವಾಹಃಕಲಶೇಶಸ್ಯಭವಿತ್ಯೈಕಾದಶೀದಿನೇ॥ದ್ವಾದಶೀ ಸಂಯುತೇರಾತ್ರೌದ್ವಾವಿಂಶದ್ಘಟಿಕಾತ್ಮಕೇ ॥೧೭॥ ಕನ್ಯಾಲಗ್ನೇದ್ವಿ ಜಾತಾಯಾಃ ಪಾಣಿಗ್ರಹಮಹೋತ್ಸವಃ॥ಯೂಯಮಾಯಾತಮುನ ಯಃಶಿಷ್ಯದಾರಸಮನ್ವಿತಾಃ ॥೧೮॥ ಇತ್ಯುಕ್ತ್ವಾಪ್ರದದೌತೇಭ್ಯಃಪ್ರ ಸಾದಕುಸಮಾಕ್ಷತಾನ್॥ ಶಾಲೀಯಕುಂಕುಮಾಕ್ತಾಂಶ್ಚಗೃಣ್ಹೀಯು ಸ್ತೇತದಾದರಾತ್॥೧೯॥ದಧುಸ್ತದ್ಭಕ್ತಿಸಹಿತಂಮಸ್ತಕೇಮುನಿಪುಂಗ ವಾಃ॥ಆಯಾಸ್ಯಾಮಇತಿಹ್ಯೇತೇಪ್ರೋಚುಸ್ತಂಕುಂಭಸಂಭವಂ॥೨೦॥ ಸ್ವಸ್ತೀತ್ಯುಕ್ತ್ವಾಯಯೌವಿಪ್ರೋಕಲಶೇಶಂಸುರೇಶ್ವರಂ॥ವಿಜ್ಞಾಪ ಯಮಾಸಮುನಿರಾಹ್ವಾನಗಮನಾದಿಕಂ ॥ ೨೧ ॥ ಪ್ರಣಮ್ಯಸುಸ್ಥಿ ತಃಪಾರ್ಶ್ವೇಶಂಕರೇಣಾಭಿನಂದಿತಃ ॥ ಚಿಕೀರ್ಷುರುತ್ಸವಂಶಂಭೋ

ಗಳಿರಾ, ಶ್ರೀ ಕಲಶೇಶ್ವರನಿಗೆ ಪರ್ವತರಾಜನ ಕುಮಾರಿಯಾದ ಪಾರ್ವ ತೀದೇವಿಯ ವಿವಾಹೋತ್ಸವವು ರಾತ್ರಿಯ ಮೂರನೆ ಯಾಮದಲ್ಲಿ ದ್ವಾದಶಿ ಸೇರಿರುವ ಏಕಾದಶಿದಿನದಲ್ಲಿ ರಾತ್ರಿ ೨೨ ಘಳಿಗೆಯ ಕನ್ಯಾಲ ಗ್ನದಲ್ಲಿ ಆಗುವುದು. ನೀವು ಶಿಷ್ಯರು ಪತ್ನಿಗಳು ಸಹಿತರಾಗಿ ದಯ ಮಾಡಿಸಬೇಕು ॥ ೧೬ ॥ ೧೭ ॥ ೧೮ ॥ ಈಪ್ರಕಾರ ಹೇಳಿ ಪ್ರಸಾದ ಕುಂಕುಮ ಕೂಡಿರುವ ಸಂಣಕ್ಕಿಯ ಅಕ್ಷತೆಗಳನ್ನು ಆ ಋಷಿಗಳಿ ಗೋಸ್ಕರ ಕೊಟ್ಟನು. ಅವರು ಭಕ್ತಿಪೂರ್ವಕವಾಗಿ ತೆಗೆದುಕೊಂ ಡರು ॥ ೧೯ ॥ ಆ ಋಷಿಶ್ರೇಷ್ಠರು ಭಕ್ತಿಸಹಿತವಾಗಿ ತಲೆಯಲ್ಲಿ ಆ ಪ್ರಸಾದ ಮಂತ್ರಾಕ್ಷತೆಗಳನ್ನು ಧರಿಸಿದರು. ಆಮೇಲೆ ಈ ಋಷಿ ಗಳು ಕುಂಭೋದ್ಭವನಾದ ಅಗಸ್ತ್ಯನನ್ನು ಕುರಿತು ಬರುವೆವು ಎಂದು ಹೇಳಿದರು ॥ ೨೦ ॥ ಆಮೇಲೆ ಅಗಸ್ತ್ಯನು ಸರ್ವರಿಗೂ ನಮಸ್ಕಾರ ವೆಂದು ಹೇಳಿ ಶ್ರೀ ಕಲಶೇಶ್ವರನ ಬಳಿಗೆ ಕುರಿತುಹೋದನು. ದೇವ ನನ್ನು ಕುರಿತು ಈ ಅಗಸ್ತ್ಯಮುನಿಯು ತಾನು ಕರೆದ ವಿಷಯ ವನ್ನೂ ಅವರು ಒಪ್ಪಿಬರುವ ವಿಷಯವನ್ನೂ ಕೂಡಾ ತಿಳಿಸಿದನು ॥೨೧॥

ಶ್ಚಿಂತಯನ್ನಷ್ಟಮೋಮುದಾ || ೨೨ || ವಿಜ್ಞಾಪ್ಯಯಕಲಶೇಶಸ್ಯ ರಾಜರಾಜೋಧನೇಶ್ವರಃ || ಸ್ವಾಮಿನ್ಕರೋಮಿತತ್ಸರ್ವಂಯದಾಜ್ಞಾಪ್ತಂಸುರೇಶ್ವರ || ೨೩ || ಅನುಗ್ರಹೇಣಸಕಲಂಸಿದ್ಧಂಸನ್ನಿಹಿತಂವಿಭೋ|| ದೇವೋಪಕಾರ್ಯಾಸ್ಸಕಲಮುನೀನಾಮಪ್ಯಸಾಮಯಾಃ|| ಸರ್ವಸನ್ನಾಹಸಂಯುಕ್ತಾಃಪ್ರತಿಹಾರಪುರಸ್ಸರಾಃ || ಅಸನಾಸ್ತರಣೋಪೇತ್ರಾಸ್ಸೌವರ್ಣಕಲಶಾನ್ವಿತಾಃ || ೨೫ || ಇದಂವಿಜ್ಞಾಪ್ಯದೇವೇಶಂನಮಸ್ಕೃತ್ಯಸಮಾಮತಃ|| ತಕ್ಸ್ಥಾಕರಾಂಜಲಿಪುಟೋಭಕ್ತಿನಮ್ರೋಧನಾದಿಪಃ || ೨೬ || ಕುಬೇರಕುಂಭಯೋನಿಭ್ಯಾಂಗಣೇಶಾದಿಭಿರನ್ವಿತಃ || ಕೋಟಿಕಂದರ್ಪಲಾವಣ್ಯೋಯುವಾಸುಂದರವಿ

ಈಪ್ರಕಾರ ತಿಳಿಸಿದ ಆ ಪರಮಾತ್ಮನಿಂದ ಸಂತೋಷಗೊಂಡ ಶ್ರೀ ಪರಮೇಶ್ವರನಿಗೆ ಈ ಉತ್ಸವವನ್ನು ಮಾಡಲಪೇಕ್ಷಿಸುವ ಅಗಸ್ತ್ಯನು ಬರುವ ಅಷ್ಟಮಿಾದಿನವನ್ನು ಧ್ಯಾನಿಸುತ್ತಾ ಸಮಿಾಪದಲ್ಲಿ ಇರುತ್ತಿದ್ದನು || ೨೨ || ಇತ್ತಲಾಗಿ ಅರಸರಿಗೆಲ್ಲ ಅರಸನಾದ ಕುಬೇರನು ಕಲಶೇಶ್ವರನ ಅಪ್ಪಣೆಯಿಂದ ಎಲೈ ಸ್ವಾಮಿಯೇ ನಿನ್ನಿಂದ ಯಾವದು ಅಪ್ಪಣೆಯಾಗಿತ್ತೊ ಅದನ್ನೆಲ್ಲ ಮಾಡಿದೆನು. ನಿನ್ನ ಕೃಪೆಯಿಂದ ಸಕಲವೂ ಸಿದ್ಧವಾಗಿದೆ. ಎಲೈ ಸಾರ್ವಭೌಮನೇ ದೇವತೆಗಳ ಬಿಡಾರಗಳು ಋಷಿಗಳಿಗೆ ಆರೋಗ್ಯಕರಗಳಾದ ಮನೆಗಳು ಮತ್ತು ಸಕಲ ಸಾಹಿತ್ಯಗಳಿಂದ ಬೇಕಾದ ಜನಗಳಿಂದ ಕೂಡಿರುವವುಗಳಾಗಿ ತಿವಾಸಿಗೆ ದಿಂಬುಗಳಿಂದ ಭಂಗಾರದ ಕಲಶಗಳಿಂದ ಕೂಡಿದವುಗಳಾಗಿ ಸಿದ್ಧಗಳಾಗಿವೆ ||೨೩|| || ೨೪ || ೨೫ || ಈಪ್ರಕಾರವಾಗಿ ದೇವೇಶ್ವರನನ್ನು ಕುರಿತು ತಿಳಿಸಿ ಆ ಕುಬೇರನು ಭಕ್ತಿಯಿಂದ ಬಗ್ಗಿದ ತಲೆಯುಳ್ಳವನಾಗಿ ಕೈ ಜೋಡಿಸಿಕೊಂಡು ಎದುರಿನಲ್ಲಿರುತ್ತಿದ್ದನು || ೨೬ || ಆಮೇಲೆ ಈ ಕುಬೇರ ಅಗಸ್ತ್ಯ ಋಷಿಗಳಿಂದ ಗಣಪತಿ ಕುಮಾರಸ್ವಾಮಿ ಮೊದಲಾದ ಪರಿವಾರಗಳಿಂದ ಕೂಡಿರುವ ಕೋಟಿ ಮನ್ಮಥನಂತೆ ಸುಂದರನಾದ ಯೌವನ

ಗ್ರಹಃ ॥ ೨೭ ॥ ಶುಕ್ಲಾಂಬರಧರೋದೇವೋಕಿರೀಟಮಕುಟೋಜ್ವ ಲಃ ॥ ವರದಾಭಯಹಸ್ತಾಭ್ಯಾಂಕುಠಾರೇಣಮೃಗೇಣಚ ॥ ೨೮ ॥ ಚತುರ್ಭುಜಃಶಶಾಂಕಾರ್ಧಶೇಖರಸ್ತ್ರ್ಯಂಬಕಃಶಿವಃ ॥ ಹಾರನೂಪು ರಕೇಯೂರೋನಂದಿಭೃಂಗಿನಿಷೇವಿತಃ ॥ ೨೯ ॥ ತುಂಗಭದ್ರಾತಟೇ ರಮ್ಯೇಕ್ಷೇತ್ರೇಕಲ್ಯಾಣಪತ್ತನೇ ॥ ಸಿಂಹಾಸನಸ್ಥೋಭಗವಾನ್ ಕಲಶೇ ಶಃಸುರೇಶ್ವರಃ ॥ ೩೦ ॥ ಶೋಭಿತೇದೇವಭವನೇಋಗ್ಯಜುಸ್ಸಾಮ ಪೂರಿತೇ॥ಮಾಂಗಲ್ಯೇತೂರ್ಯನಿನದೇರೇಜೇಶ್ರೀಕಲಶೇಶ್ವರಃ ॥೩೧॥ ಯಇದಂಕಲಶೇಶಸ್ಯವಿವಾಹಾರಂಭಣಂಶುಭಂ ॥ ಪಠೇತ್ಸಿಧ್ಯಂತಿ

ಸ್ಥನಾದ ರಮಣೀಯವು ೂರ್ತಿಯುಳ್ಳ॥೨೭॥ ಶುಕ್ಲವಾದ ವಸ್ತ್ರಗಳನ್ನು ಧರಿಸಿರುವ ಪ್ರಕಾಶಮಾನನಾದ ಕಿರೀಟಮಕುಟಗಳಿಂದ ಜಾಜ್ವಲ್ಯಮಾ ನನಾದ ಇಷ್ಟಾರ್ಥ ಕೊಡುವುದೊಂದು, ಭೀತಿಯನ್ನು ಪರಿಹರಿಸುವು ದೊಂದು,ಕೊಡಲಿಯನ್ನು ಹಿಡಿದಿರುವುದೊಂದು,ಮೃಗಾಯುಧವನ್ನುಧರಿ ಸಿರುವುದೊಂದು ಇಂತ ನಾಲ್ಕು ಕೈಗಳುಳ್ಳಂಥ ಅರ್ಧಚಂದ್ರನನ್ನು ಹಣೆ ಯ ಮೇಲ್ಭಾಗದಲ್ಲಿ ಧರಿಸಿಕೊಂಡಿರುವ ಮೂರು ಕಣ್ಣುಗಳುಳ್ಳ ಮಂಗ ಲಸ್ವರೂಪನಾದ ಮುತ್ತಿನಹಾರ ಕಾಲಕಡಗ ಭುಜಕೀರ್ತಿಗಳಿಂದ ಅಲಂಕೃತನಾದ ನಂದಿಕೇಶ್ವರ ಭೃಂಗಿಗಳಿಂದ ಸೇವಿತನಾದ ॥೨೮॥೨೯॥ ಭಗವಂತನಾದ ಶ್ರೀ ಕಲಶೇಶ್ವರ ಸ್ವಾಮಿಯು ಮನೋಹರ... ತುಂಗಭದ್ರಾನದಿಯ ದಡದಲ್ಲಿರುವ ಕಲ್ಯಾಣಪಟ್ಟಣವೆಂಬ ಕ್ಷೇತ್ರ ದಲ್ಲಿ ಶೋಭಿತನಾದ ಋಗ್ವೇದ ಯಜುರ್ವೇದ ಸಾಮವೇದ ಪಠಗ ಳಿಂದ ತುಂಬಿರುವ ಮಂಗಲವಾದ್ಯ ಧ್ವನಿಗಳುಳ್ಳ ತನ್ನ ಆಸ್ಥಾನದಲ್ಲಿ ಪ್ರಕಾಶಿಸುತ್ತಲಿದ್ದನು ॥ ೩೦ ॥ ೩೧ ॥ ಎಂದು ಇತ್ತಲಾ ಸೂತಪುರಾಣಿ ಕನು ನೈಮಿಷಾರಣ್ಯವಾಸಿಗಳನ್ನು ಕುರಿತು ಎಲೈ ಋಷೀಶ್ವರರುಗಳಿರಾ ಲೋಕದಲ್ಲಿ ಯಾವನು ಕಲಶೇಶ್ವರ ಸ್ವಾಮಿಯ ವಿವಾಹೋತ್ಸವದ ಪ್ರಾರಂಭಸೂಚಕವಾದ ಈ ಚರಿತ್ರೆಯನ್ನು ಹೇಳುವನೋ, ಕೇಳು

ಸಕಲಾಸ್ತಸ್ಯಾರಂಭಾಃಸುಖಪ್ರದಾಃ॥ ... ॥೩೨॥

ಇತಿ ಶ್ರೀ ಸ್ಕಂದಪುರಾಣೇ ಕಲಶೇಶ್ವರ ವಿವಾಹೋತ್ಸವಾ
ರಂಭಣಂನಾಮ ಅಷ್ಟಮೋಽಧ್ಯಾಯಃ ॥
ಶ್ರೀ ಶ್ರೀ ಶ್ರೀ ಶ್ರೀ.

ವನೋ ಅವನ ಸಕಲ ಮನೋರಥಗಳು ಸುಖದಾಯಕಗಳಾಗಿ ಸಿದ್ಧಿಸು ವುವು, ಎಂದುಹೇಳಿದನು ॥ ...... ॥ ೩೨ ॥

ರುದ್ರಪಾದಾ ಗ್ರಹಾರಸ್ಥ ರಾಮಜೋಯಿಸ ಶರ್ಮಣಃ।ಟೀಕಾಯಾಂ
ಕನ್ನಡಾಖ್ಯಾಯಾಂ ಪೂರ್ಣೋಽಧ್ಯಾಯೋಽಧುನಾಷ್ಟಮಃ॥ ಶ್ರೀಃ ॥

॥ ಶ್ರೀ ಸೂತಃ॥ ಅಥಾಯಯುಶ್ಚ ತೇಸರ್ವೇದೇವಾವೈಮುನಿ
ಭಿಸ್ಸಹ ॥ ಸ್ವಸ್ವಶಕ್ತಿಸಮಾಯುಕ್ತಾಃಪರಿವಾರಪುರಸ್ಸರಾಃ ॥ ೧ ॥
ಚತುರ್ಭಿರ್ಮಕುಟೈರ್ಯುಕ್ತ್ಶ್ಚತುರ್ದೋರ್ದಂಡಮಂಡಿತಃ ॥
ಹಂಸವಾಹಸಮಾರೂಢೋಭಾರತ್ಯಾಸಹಿತೋವಿಭುಃ ॥ ೨ ॥ ತಪ
ಸ್ವ್ಯಪಿಚತುರ್ವಕ್ತ್ರಃಸ್ವರ್ಣರತ್ನಾದ್ಯಲಂಕೃತಃ ॥ ವಿವಾಹೋ
ತ್ಸವಸನ್ನಾಹಆಯಯೌಕಲಶೇಶ್ವರಂ ॥ ೩ ॥ ಮರೀಚಿಮುಖ್ಯೈ
ರ್ಮುನಿಭಿಸ್ಸನಕಾದ್ಯೈಸಮನ್ವಿತಃ ॥ ಸ್ತುವನ್ನಾಮ್ನಾಮಹಾದೇವ
ಮಾಶಂತ್ರಿಪುರಘಾತಿನಂ॥ ೪॥ಶಂಖಚಕ್ರಗದಾಪಾಣಿಃಪೀತವಾಸಾಜಗ

೯ನೆಯ ಅಧ್ಯಾಯ ಪ್ರಾರಂಭ.

ಶ್ರೀ ಕಲಶೇಶ್ವರಾಯನಮಃ ॥ ಅತ್ತಲಾ ಸೂತಪೌರಾಣಿಕನು
ನೈಮಿಶಾರಣ್ಯವಾಸಿಗಳಾದ ಋಷಿಗಳನ್ನು ಕುರಿತು ಹೇಳುವನು॥ ಅನಂ
ತರ ಸಮಸ್ತ ದೇವತೆಗಳೂ ತಮ್ಮ ತಮ್ಮ ದೇವಿಯರಿಂದ ಕೂಡಿದವ
ರಾಗಿ, ಪರಿವಾರಯುಕ್ತರಾಗಿ ಋಷಿಗಳಿಂದ ಸಹಿತರಾಗಿ ಬಂದರು ॥೧॥
ನಾಲ್ಕು ಕಿರೀಟಗಳಿಂದ ಕೂಡಿರುವ, ನಾಲ್ಕು ಭುಜಗಳಿಂದ ಅಲಂಕೃತ
ನಾದ ಬ್ರಹ್ಮದೇವನು ಸರಸ್ವತೀದೇವೀಸಹಿತನಾಗಿ ಹಂಸವಾಹನನಾಗಿ
ಬಿಜಯಮಾಡಿದನು ॥ ೨ ॥ ಈ ಬ್ರಹ್ಮದೇವನು ಯಾವಾಗಲೂ ಅಗ್ನಿ
ಹೋತ್ರಾದಿ ಕರ್ಮವು ತಪಸ್ಸು ಎಂಬಿವುಗಳಲ್ಲಿ ಆಸಕ್ತನಾದರೂ ॥
ನಾಲ್ಕು ಮುಖಗಳಿಂದಲೂ ಭಂಗಾರದಿಂದಲೂ, ನವರತ್ನಗಳಿಂದಲೂ
ಅಲಂಕೃತನಾಗಿ ವಿವಾಹದ ಸಂಭ್ರಮಕ್ಕೆ ಅನುಕೂಲವಾದರೀತಿಯಿಂದ
ಶ್ರೀ ಕಲಶೇಶ್ವರನ ಬಳಿಗೆ ಬಂದನು ॥ ೩ ॥ ಮತ್ತು ಮರೀಚಿ ಮೊದ
ಲಾದ ಮುನಿಗಳಿಂದಲೂ ಸನಕಾದಿ ಯೋಗಿಗಳಿಂದಲೂ ಕೂಡಿದವನಾಗಿ
ತ್ರಿಪುರಸಂಹಾರಕನಾದ ಪರಮೇಶ್ವರನನ್ನು ಕುರಿತು ಮಹಾದೇವನ
ನಾಮಾವಳಿಯಿಂದ ಸ್ತುತಿಸುವವನಾಗಿ ಬಂದನು ॥ ೪ ॥ ಕೈಯಲ್ಲಿ
ಶಂಖಚಕ್ರ ಗದೆಗಳುಳ್ಳ ಪೀತಾಂಬರಧಾರಿಯಾದ ಜಗತ್ತಿಗೆ ಒಡೆಯ

ತ್ಪತಿಃ ॥ ಹಾರನೂಪುರಶೋಭಾಢ್ಯಃಕಿರೀಟಕಟಕೋಜ್ವಲಃ ॥ ೫ ॥ ಆರೂಢಗರುಡಸ್ಸಾಕ್ಷಾತ್‌ಶ್ರಿಯಾದೇವ್ಯಾಜ್ವಲದ್ವಪುಃ॥ ಸನಂದನಾದಿಭಿಃಪಾರ್ಶ್ವೇಸಂಸ್ತುತೋಮಧುಸೂದನಃ ॥ ೬ ॥ ತ್ರಿಯಂಬಕಾಖ್ಯಸನ್ಮಂತ್ರಜಪಧ್ಯಾನಪರಾಯಣಃ ॥ ಕಲ್ಯಾಣಸಮ್ಮುಖಂದೇವಂವೈಕುಂಠಾದಾಯಯೌಹರಿಃ ॥ ೭ ॥ ಶಚ್ಯಾನ್ವಿತಃಸುರಶ್ರೇಷ್ಠೋಗುರುಪುತ್ರಸಮನ್ವಿತಃ ॥ ಐರಾವತಂಸಮಾರುಹ್ಯಸರ್ವಾಲಂಕಾರಮಂಡಿತಃ ॥ ೮ ॥ ದೇವೋದ್ಯಾನಸಮುತ್ಥಾನಿಕುಸುಮಾನಿಫಲಾನಿಚ ॥ ಸಂಗೃಹ್ಯರತ್ನವಸ್ತೂನಿಭಗವತ್ಪ್ರೀತಯೇಮುದಾ ॥ ಗಂಧರ್ವೈಃ

ನಾದ ಮುತ್ತಿನ ಹಾರ ಕಡಗಗಳ ಕಾಂತಿಯಿಂದ ಕೂಡಿರುವ ಕಿರೀಟ ಕಡಗಗಳಿಂದ ಪ್ರಜ್ವಲಿಸುತ್ತಿರುವ ಗರುಡಾರೂಢನಾದ ಸಾಕ್ಷಾತ್ ಲಕ್ಷ್ಮೀದೇವಿಯಿಂದ ಶೋಭಿಸುವ ಶರೀರವುಳ್ಳ ಸುನಂದನೆಂಬವನೆ ಮೊದಲಾದ ಪಾತಕರುಗಳಿಂದ ಎಡಬಲ ಭಾಗಗಳಲ್ಲಿ ಹೊಗಳಿಸಿಕೊಳ್ಳುವ ತ್ರಿಯಂಬಕವೆಂಬ ಮಂತ್ರ ರಾಜನನ್ನು ಜಪಿಸುತ್ತ ಪರಮಾತ್ಮನ ಸ್ಮರಣೆಯಲ್ಲಿ ಆಸಕ್ತನಾದ ಮಧುವೆಂಬ ದೈತ್ಯನನ್ನು ಕೊಂದ ಶ್ರೀಹರಿಯು ಕಲ್ಯಾಣೋತ್ಸವಕ್ಕೆ ಸಿದ್ಧನಾದ ಶಿವನನ್ನು ಕುರಿತು ವೈಕುಂಠಲೋಕದಿಂದ ಬಂದನು ॥ ೫ ॥ ೬ ॥ ೭ ॥ ಶಚೀದೇವಿಯಿಂದ ಕೂಡಿರುವ ಇಂದ್ರನು ಐರಾವತವೆಂಬ ಆನೆಯನ್ನು ಹತ್ತಿಕೊಂಡು ಸಮಸ್ತವಾದ ಅಲಂಕಾರಶೋಭಿತನಾದ ಗುರುವಾದ ಬೃಹಸ್ಪತಿದೇವನ ಮಗನಾದ ಜಯಂತರಿಂದ ಕೂಡಿರುವ ದೇವೇಂದ್ರನು ನಂದನವನದಲ್ಲಿ ಹುಟ್ಟಿದ ಪುಷ್ಪಫಲಗಳನ್ನೂ ಮತ್ತು ಉತ್ತಮವಾದ ರತ್ನಪದಾರ್ಥಗಳನ್ನೂ ಭಗವಂತನ ಪ್ರೀತಿಗೋಸ್ಕರ ತೆಗೆದುಕೊಂಡು ಗಂಧರ್ವರು ಕಿನ್ನರರುಗಳಿಂದ ರಂಭೆ ಮೊದಲಾದ ಅಪ್ಸರ ಸ್ತ್ರೀಯರುಗಳಿಂದ ಕೂಡಿ ಯಜ್ಞೇಶ್ವರ ಮೊದಲಾದ ದಿಕ್ಪಾಲಕರಿಂದ ಕೂಡಿದವನಾಗಿ ಮತ್ತು ಜಪಧ್ಯಾನದಲ್ಲಿ ಆಸಕ್ತರಾದ ನಾರದಾದಿ ಮುನಿಶ್ರೇಷ್ಠರಿಂದ ಸಹಿತನಾಗಿ ಜಯಜಯ ಶ್ರೀ ಕಲಶೇಶಎಂದು ಸ್ತುತಿಸುವವನಾಗಿ ಶ್ರೀ ಕಲಶೇಶ್ವರ

ಕಿನ್ನರೈಸ್ಸಾರ್ಧಂರಂಭಾದ್ಯಪ್ಸರಸಾಂಗಣೈಃ ॥ ಆಶಾಪಾಲೈಸ್ತಥಾನ್ಯೈಶ್ಚಹುತಭುತ್ಪ್ರಮುಖೈರ್ಯುತಃ ॥ ೧೦ ॥ ಜಯಶಬ್ದೈಃಸ್ತುವನ್ನೀಶಂಕಲಶೇಶಂಸಮಾಯಯೌ॥ ನಾರದಾದ್ಯೈರ್ಮುನಿವರೈರ್ಜಪಧ್ಯಾನಪರಾಯಣೈಃ ॥ ೧೧ ॥ ಯಾಜ್ಞವಲ್ಕ್ಯೇನಮುನಿನಾಗೌತಮಾದ್ಯೈಸ್ಸಮನ್ವಿತಃ ॥ ತ್ರಿಪುಂಡ್ರವಿಲಸತ್ಫಾಲರುದ್ರಾಕ್ಷಾಲಂಕೃತೋಮುನಿಃ ॥ ೧೨ ॥ ಅಶ್ವಲಾಯನಬೋಧಾಯನಶೌನಕಾದ್ಯೈರ್ಮುನೀಶ್ವರೈಃ ॥ ವ್ಯಾಸಸ್ಸಶಿಷ್ಯೋಭಗವಾನ್ಪ್ರಾಪಶ್ರೀಕಲಶೇಶ್ವರಂ ॥ ೧೩ ॥ ಅಥಾನ್ಯೇಮುನಯಸ್ಸರ್ವೇದೇವಗಂಧರ್ವಕಿನ್ನರಾಃ ॥ ಸರ್ವೇಸಮಾಯಯುಸ್ತತ್ರಯತ್ರಾಸೌಭಗವಾಂಛಿವಃ ॥ ೧೪ ॥ ಕಾಶ್ಯಪಾದಾನವಾಸ್ಸರ್ವೇಪಿಶಾಚಪತಗೋರಗಾಃ ॥ ದಿದೃಕ್ಷವಃಸಮಾಜಗ್ಮುರುತ್ಸವಂತನ್ಮಹೇಶಿತುಃ ॥ ೧೫ ॥ ಆಸಂಕುಲೈಃಸುರಗಣೈರನ್ವಿತೌಸುರವರ್ತ್ಮನಿ ॥ ಅಜಾಚ್ಯುತೌತಹಿಪ್ರಮುಖಾವೀಯತುಃಕಲ

ನನ್ನು ಕುರಿತು ಬಂದನು ॥೮॥೯॥೧೦॥೧೧॥ ಯಾಜ್ಞವಲ್ಕ್ಯನಿಂದ ಗೌತಮ ಮೊದಲಾದವರಿಂದ ಆಶ್ವಲಾಯನ ಬೋಧಾಯನ ಶೌನಕಾದಿ ಮುನೀಶ್ವರರಿಂದ ಸಹಿತನಾದ ತ್ರಿಪುಂಡ್ರದಿಂದ ಪ್ರಕಾಶಿಸುವ ಫಣೆಯುಳ್ಳ ರುದ್ರಾಕ್ಷಮಾಲೆಗಳಿಂದ ಅಲಂಕೃತನಾದ ಶಿಷ್ಯರುಗಳಿಂದ ಕೂಡಿರುವ ಭಗವತ್ಸ್ವರೂಪನಾದ ವೇದವ್ಯಾಸ ಋಷೀಶ್ವರನು ಶ್ರೀ ಕಲಶೇಶ್ವರನನ್ನು ಕುರಿತು ಬಂದನು ॥ ೧೨ ॥ ೧೩ ॥ ಹಾಗೆಯೇ ಅಲ್ಲಿ ಷಡ್ಗುಣೈಶ್ವರ್ಯನಾದ ಮಂಗಲಸ್ವರೂಪನಾದ ಪರಮೇಶ್ವರನು ಇರುವ ಸ್ಥಳಕ್ಕೆ ಉಳಿದ ಸಮಸ್ತ ಋಷಿಗಳೂ ದೇವಗಂಧರ್ವಕಿನ್ನರರೂ ಬಂದರು. ಮತ್ತು ಇತರರಾದ ಭಗವದ್ಭಕ್ತರೂ ಬಂದರು || ೧೪ || ಮತ್ತು ಕಶ್ಯಪಕುಲೋತ್ಪನ್ನರಾದ ಸಮಸ್ತ ದಾನವರೂ ಪಿಶಾಚರೂ ಪಕ್ಷಿಗಳೂ ಸರ್ಪಗಳೂ ಶ್ರೀ ಪರಮೇಶ್ವರನ ಉತ್ಸವವನ್ನು ನೋಡಲಪೇಕ್ಷಿತರಾದವರೆಲ್ಲರೂ ಬಂದರು || ೧೫ || ಹೀಗೆ ಬರುತ್ತಿರುವ ದೇವಸಮೂಹಗಳಿಂದ ಕೂಡಿರುವ ಬ್ರಹ್ಮದೇವ ಮಹಾವಿಷ್ಣುಗಳು ದೇವಮಾರ್ಗದಲ್ಲಿ

ಶೇಶ್ವರಂ ॥ ೧೬ ॥ ದೇವಥಾನೀಪುರದ್ವಾರಿಸ್ಫುರಂತಂನಂದಿಕೇಶ್ವ
ರಂ ॥ ಗಣೇಶಮುತ್ತರದ್ವಾರೇಸ್ಥಿತಮೂಚತುರಂತಿಕೇ ॥ ೧೭ ॥
ವಿಜ್ಞಾಪ್ಯತಾಂವಿಭುರ್ದೇವಾವಾಂಹಿಪರಮಾತ್ಮನಃಧೃತ್ವಾತದ್ವ
ಚನಂದೇವೌಪ್ರಾಪ್ತೌಶ್ರೀಕಲಶೇಶ್ವರಂ ॥೧೮॥ ನತ್ವಾವಿಭುಂಪ್ರೋ
ಚತುಸ್ತೌಕೃತಾಂಜಲಿಪುಟೌಮುದಾ ॥ ಭಗವನ್ಪುಣಸರ್ವಜ್ಞಾ
ಪಂಕಜಾಕ್ಷಚತುರ್ಮುಖೌ॥೧೯॥ ಶ್ರೀಭಾರತೀಸಮೇತೌತೌಸೇಂದ್ರೌ
ಪಾಣಿಗ್ರಹೋತ್ಸವಂ ॥ ನಿರ್ವರ್ತಯಿತುಮಾಯಾತೌದೇವರ್ಷಿಗಣ
ಸಂಯುತೌ॥ ೨೦ ॥ ಇತಿಪುತ್ರವಚಶ್ಶ್ರುತ್ವಾಪ್ರೀತ್ಯಾಸೌಕಲಶೇಶ್ವ
ರಃ ॥ ಪ್ರವೇಶಯುತಮದ್ಯೈವಸಾದರಂಸುರಪೂಜಿತೌ ॥ ೨೧ ॥

ಸೇರಿ ಪ್ರಮುಖರಾಗಿ ಶ್ರೀ ಕಲಶೇಶ್ವರನನ್ನು ಕುರಿತು ಬಂದರು ॥೧೬॥ ಈಪ್ರಕಾರ ಬಂದಿರುವ ಬ್ರಹ್ಮವಿಷ್ಣುಗಳು ಆ ಕಲ್ಯಾಣಪಟ್ಟಣದಲ್ಲಿರುವ ಭಗವನ್ಮಂದಿರದ ಬಾಗಿಲಲ್ಲಿ ಬಲಗಡೆಯಲ್ಲಿರುವ ನಂದಿಕೇಶ್ವರನನ್ನೂ ಉತ್ತರಬಾಗಿಲಲ್ಲಿರುವ ಗಜಾಕಾರನಾದ ಗಣಪತಿದೇವನನ್ನೂ ಕುರಿತು ಮಾತನಾಡಿದರು ॥ ೧೭ ॥ ಅದೇನೆಂದರೆ ಎಲೈ ನಂದಿಕೇಶ ಗಣೇಶ್ವರರೇ, ಶ್ರೀವರಮಾತ್ಮನಿಗೋಸ್ಕರ ಬಂದಿರುವ ನಮ್ಮನ್ನು ಅರಿಕೆಮಾಡಿ ಅಂದರು. ಈಪ್ರಕಾರ ಕೇಳಿದ ಅವರಿಬ್ಬರ ಮಾತನ್ನು ಈ ನಂದೀಕೇಶ ಗಣೇಶ್ವರರು ಕೇಳಿ ಶ್ರೀ ಕಲಶೇಶ್ವರನ ಬಳಿಗೆ ಹೋಗಿ ॥ ೧೮ ॥ ಒಡೆಯನನ್ನು ನಮಸ್ಕರಿಸಿ ಕೈಕಟ್ಟಿಕೊಂಡು ಸಂತೋಷದಿಂದ ಹೇಳಿದರು. ಎಲೈ ಭಗವಂತನಾದ ಸರ್ವಜ್ಞನೆ ಪುಂಡರೀಕಾಕ್ಷ ಚತುರ್ಮುಖರು ಲಕ್ಷ್ಮೀ ದೇವಿ ಸರಸ್ವತೀದೇವೀಸಮೇತರಾಗಿ ಮತ್ತು ಇಂದ್ರ ಮೊದಲಾದ ದೇವ ಸಮೂಹದಿಂದಲೂ ದೇವಋಷಿಗಳಿಂದಲೂ ಕೂಡಿರುವವರಾಗಿ ನಿನ್ನ ವಿವಾಹೋತ್ಸವವನ್ನು ನೆರವೇರಿಸುವುದಕ್ಕೋಸ್ಕರ ಬಂದಿದ್ದಾರೆ ॥೧೯॥ ॥ ೨೦ ॥ ಈ ಕಲಶೇಶ್ವರ ಸ್ವಾಮಿಯು ಹೀಗೆಂದ ಮಕ್ಕಳ ಮಾತನ್ನು ಕೇಳಿ ಸಂತೋಷದಿಂದ ಎಲೋ ಮಕ್ಕಳಿರಾ, ದೇವಪೂಜ್ಯರಾದ ಆವ ರನ್ನು ಕರೆತನ್ನಿ ಎಂದು ಕರುಣಿಸಿದನು ॥ ೨೧ ॥ ಆಮೇಲೆ ನಂದಿಕೇಶ್ವ

ತತೋನಂದೀಶ್ವರೋವಿಷ್ಣುಂಗಣೇಶಸ್ತು ಚತುರ್ಮುಖಂ ॥ ಗಮ
ಯಾಮಾಸತುರ್ದೇವೌರಾಜಧಾನೀಂಪುರದ್ವಿಷಃ ॥ ೨೨ ॥ ಗೋವಿಂ
ದೋಭಾರತೀನಾಥೋಮಹೇಂದ್ರೋಮುನಿಪುಂಗವಃ ॥ ಸರ್ವದೇ
ವಾಸ್ಸಪತ್ನೀಕಾನೇಮುರ್ಮಂಗಲಪಾಣಯಃ ॥ ೨೩ ॥ ತಥಾದೈತ್ಯೇ
ಯನಿಚಯಾಃಕರಾಳವದನಾದ್ಭುತಃ ॥ ಸಸೈನಿಕಾಸ್ಸದಾರಾಶ್ಚ ಶು
ಕ್ರಾಚಾರ್ಯಪುರಸ್ಸರಾಃ ॥೨೪॥ ಜಯೇತ್ಯುಕ್ತ್ವಾಮಹಾದೇವಂ
ಪ್ರಣೇಮುರಸುರಾಃಪ್ರಭುಂ ॥ ತತಉತ್ಥಾಯಭಗವಾನ್ಪದ್ಮಜಂಬಾ
ದರಾಯಣಂ ॥ ೨೫ ॥ ಗೌತಮಾದೀನ್ನಮಸ್ಕೃತ್ಯಚಾಶ್ಲಿಷ್ಯ
ಕಮಲಾಪತಿಂ ॥ ಆಸನೇಷುಯಥಾನ್ಯಾಯಮುಪವೇಶ್ಯಮುನೀ

ರನು ಶ್ರೀಮಹಾ ವಿಷ್ಣುವನ್ನೂ ಗಣಪತಿಯು ಬ್ರಹ್ಮದೇವನನ್ನೂ ಹೀಗೆ ಇವರಿಬ್ಬರೂ ಅವರಿಬ್ಬರನ್ನು ಕರೆತಂದು ತ್ರಿಪುರಸಂಹಾರಿಯಾದ ಪರಮೇಶ್ವರನ ರಾಜಧಾನಿಯನ್ನು ಪ್ರವೇಶ ಮಾಡಿಸಿದರು ॥೨೨॥ ಹೀಗೆ ಒಳಗೆ ಪ್ರವೇಶ ಮಾಡಿದ ವೇದಸ್ತುತ್ಯನಾದ ಮಹಾ ವಿಷ್ಣುವೂ ಭಾರತೀ ಪತಿಯಾದ ಬ್ರಹ್ಮದೇವನೂ ದೇವೇಂದ್ರನೂ ಮುನಿಶ್ರೇಷ್ಠರೂ ಸಮಸ್ತ ದೇವತೆಗಳೂ ತಮ್ಮ ಪತ್ನೀಸಮೇತರಾಗಿ ಕೈಗಾಣಿಕೆಗೆ ಯೋಗ್ಯವಾದ ಶುಭಕರವಸ್ತುಗಳನ್ನು ಕೈಯಲ್ಲಿ ಹಿಡಿದಿರುವವರಾಗಿ ನಮಸ್ಕಾರವನ್ನು ಒಪ್ಪಿಸಿದರು॥೨೩॥ ಹಾಗೆಯೇ ಶುಕ್ರಾಚಾರ್ಯ ಪ್ರಮುಖರಾದ ತಮ್ಮ ಸೇನಾಸಮೇತರಾದ ಪತ್ನೀಯುಕ್ತರಾದ ದಿತಿದೇವಿಯ ಮಕ್ಕಳಾದ ದಾನವರ ಗುಂಪುಗಳೂ॥೨೪॥ ಎಲೈ ಪರಮಾತ್ಮನೇ ಸರ್ವೋತ್ಕೃಷ್ಟನಾ ಗಿದ್ದೀಯೆ ಎಂದು ಸ್ತುತಿಸುತ್ತ ವಂದಿಸಿದರು. ಭಗವಂತನಾದ ಶ್ರೀ ಕಲ ಶೇಶ್ವರನು ಆನಂತರ ಎದ್ದು ಸ್ವಾಮಿಯು ನ್ನೂ ಬ್ರಹ್ಮದೇವನನ್ನೂ ವೇದ ವ್ಯಾಸಖುಷಿಯನ್ನೂ ಗೌತಮಾದಿಖುಷಿಗಳನ್ನೂ ನಮಸ್ಕರಿಸಿ ಲಕ್ಷ್ಮೀ ಪತಿಯನ್ನು ಆಲಿಂಗಿಸಿ ಮರ್ಯಾದಾನುಸಾರವಾಗಿ ಖುಷಿಗಳನ್ನೂ ದೇವತೆಗಳನ್ನೂ ಪೀಠವಲ್ಲಿ ಕೂಡಿಸಿ ॥ ೨೬ ॥ ಕೈಲಾಸಕ್ಕೆ ಒಡೆಯನಾದ ದೇವನು ಮತ್ತು ಬಲಿಚಕ್ರವರ್ತಿ ಮೊದಲಾದ ದೈತ್ಯರನ್ನು ಕೂಡ

ಶ್ವರಾನ್ ॥ ೨೬ ॥ ಅರ್ಚಯಾಮಾಸಗಿರಿಶೋವೈರೋಚನಿಮುಖಾಂಸ್ತಥಾ ॥ ಪ್ರೀತ್ಯೋವಾಚಪ್ರಭುರ್ದೇವಾಂಶ್ಚತುರ್ಮುಖಮುಖಾಂಸ್ತದಾ ॥ ೨೭ ॥ ಸ್ವಾಗತಂಪುಂಡರೀಕಾಕ್ಷಬ್ರಹ್ಮಹೇಬಾದರಾಯಣ । ಶಚೀಜಾನೇಬಲೇದೈತ್ಯವಾಕ್ಪತೇಭಾರ್ಗವೋತ್ತಮ॥ ॥ ೨೮ ॥ ಯುಷ್ಮದಾಗಮನಾದ್ದೇವ । ಪ್ರೀತೋಸ್ಮಿಮಧುಸೂದನ ಸಮಂತ್ರ್ಯತಾಂವಿವಾಹಸ್ತುಕುಂಭಜೇನಯಥೋಚ್ಯತೇ ॥ ೨೯ ॥ ಕಲಶೇಶಇತಿಹ್ಯತ್ರತುಂಗಭದ್ರಾತಟೇಶುಭೇ ॥ ಆವಿರ್ಭೂತೋಸ್ಮ್ಯಹೋಬ್ರಹ್ಮನ್ನಗಸ್ತ್ಯಮುನಿಪೂಜಿತಃ ॥೩೦॥ ಅಂಶತೋದ್ರಿಸ್ಸಮಾಯಾತಃಪರಿಪೂರ್ಣಾಂಸುತಾಂಸ್ವಕಾಂ ॥ ದಾತುಮತ್ರಪ್ರವೃತ್ತೋಮೇಶಾಸನೇನಸುರೇಶ್ವರಾಃ ॥ ೩೧ ॥ ಪ್ರತಿಸಂವತ್ಸರೇವಿಷ್ಣೋವಿ

ಬಹುಮಾನ ಮಾಡಿದನು. ಮತ್ತು ಪ್ರೀತಿಯಿಂದ ಪ್ರಭುವಾದ ಕಲಶೇಶ್ವರನು ಆಗ ಬ್ರಹ್ಮದೇವ ಮೊದಲಾದ ಸಮಸ್ತರನ್ನೂ ಕುರಿತು ಮಾತನಾಡಿದನು ॥ ೨೭ ॥ ಎಲೈ ಕಮಲಾಕ್ಷನೇ, ಎಲೈ ಬ್ರಹ್ಮದೇವನೆ, ಎಲೈ ವ್ಯಾಸಋಷೀಶ್ವರನೆ, ಎಲೈ ಶಚೀಪತಿಯೆ, ಎಲೈ ದೈತ್ಯನಾದ ಬಲಿಯೆ, ಎಲೈ ಬೃಹಸ್ಪತ್ಯಾಚಾರ್ಯನೇ, ಎಲೈ ಭೃಗುಕುಲೋತ್ತಮನಾದ ಶುಕ್ರಾಚಾರ್ಯನೇ ॥ ೨೮ ॥ ಎಲೈ ದೇವತೆಗಳಿರಾ ನಿಮ್ಮಗಳ ಬರುವಿಕೆಯುಡೆಸೆಯಿಂದ ನಾನು ಪ್ರೀತಿಯುಳ್ಳವನಾಗಿದ್ದೇನೆ. ಎಲೋ ಮಧುದೈತ್ಯಸಂಹಾರಿಯಾದ ಹರಿಯೇ ಈ ಕಲಶೋದ್ಭವನಾದ ಅಗಸ್ತ್ಯನಿಂದ ಹೇಗೆ ಹೇಳಲ್ಪಡುವುದೋ ಹಾಗೆ ವಿವಾಹೋತ್ಸವವು ಆಲೋಚಿಸಲ್ಪಡಲಿ ॥ ೨೯ ॥ ಎಲೈ ಬ್ರಹ್ಮದೇವನೆ ಶುಚಿಯಾದ ಈ ತುಂಗಭದ್ರಾನದೀತೀರದಲ್ಲಿ ಅಗಸ್ತ್ಯ ಋಷಿಯಿಂದ ಪೂಜಿತನಾಗಿ, ಕಲಶೇಶನೆಂದು ನಾನು ಪ್ರಾದುರ್ಭವಿಸಿರುವೆನು ॥ ೩೦ ॥ ಎಲೈ ದೇವತೆಗಳಿರಾ ನನ್ನ ಅಪ್ಪಣೆಯಿಂದ ಅಂಶಾಂಶವಾಗಿ ಇಲ್ಲಿ ಬಂದಿರುವ ಹಿಮವಂತನು ಸರ್ವ ಶುಭಲಕ್ಷಣಗಳಿಂದ ಪೂರ್ಣಳಾದ ತನ್ನ ಮಗಳನ್ನು ನನಗೋಸ್ಕರ ಕೊಡುವುದಕ್ಕೆ ಉದ್ಯುಕ್ತನಾಗಿದ್ದಾನೆ ॥ ೩೧ ॥ ನಾನು ಅಗಸ್ತ್ಯನಿಗೆ ಕೊಟ್ಟ

ವಾಹೋಭವಿತಾಯಥಾ । ಮಂಟಪೋಯತ್ರಕರ್ತವ್ಯಸ್ತಥಾಸರ್ವೈ
ರ್ವಿಚಿಂತ್ಯತಾಂ ॥೩೨॥ ಇತಿದೇವವಚಶ್ಶ್ರುತ್ವಾತದಾವಿಷ್ಣುಸ್ಸುರೇ
ಶ್ವರಃ॥ ಉವಾಚದೇವಾನ್ಸಮುನೀನ್ಹಸ್ತಮುದ್ಧೃತ್ಯಸರ್ವಶಃ ॥೩೩॥
ಅತ್ರೈವದೇವನಿಕಟೇಪಾಣಿಗ್ರಹಮಹೋತ್ಸವಃ। ಭವಿತವ್ಯೋಮಯಾ
ದೃಷ್ಟೋವಿಧಿರೇಷಮುನೀಶ್ವರಾಃ ॥ ೩೪ ॥ ವಯಂಹಿತತ್ರಯಾಸ್ಯಾ
ಮೋಯತ್ರಾದ್ರಿರ್ಬಂಧುಸಂಯುತಃ ॥ ಚಾಮರವ್ಯಜನಾದೀನಿಸಾ
ಮ್ರಾಜ್ಯಶ್ರೀಣಿಸರ್ವಶಃ ॥ ೩೫ ॥ ಪುರತೋಯಾಂತುಸಕಲಂಯಾ
ನಂಮಂಗಲಸಂಯುತಂ ॥ ಅಭ್ಯಗಚ್ಛಾಮಹೇಸರ್ವೇಬ್ರಹ್ಮೇಂದ್ರ
ಮುನಿಪುಂಗವಾಃ ॥ ೩೬ ॥ ಆನಾಯ್ಯಪರ್ವತಶ್ರೇಷ್ಠಂದಾರಪುತ್ರೀ
ಸಮನ್ವಿತಂ ॥ ಸಬಂಧುಂಸಾನುಗಂದೇವಾಃಕುರ್ವೀಉತ್ಸವಮಾದ

ವರದಂತೆ ಈ ವಿವಾಹೋತ್ಸವವು ಪ್ರತಿ ವರ್ಷದಲ್ಲಿ ನಡೆಯುವಂತೆ ಹೇ
ಗೋ ವಿವಾಹದ ಮಂಟಪವನ್ನು ಎಲ್ಲಿ ಮಾಡಬೇಕೋ ಹಾಗೆ ಸರ್ವರಿಂ
ದಲೂ ಆಲೋಚಿಸಲ್ಪಡಲಿ ॥ ೩೨ ॥ ಈಪ್ರಕಾರ ದೇವನ ಮಾತನ್ನು
ಸುರಶ್ರೇಷ್ಠನಾದ ಮಹಾ ವಿಷ್ಣುವು ಕೇಳಿ ಕೈಯನ್ನು ಎತ್ತಿಕೊಂಡು
ಸಮಸ್ತ ಮುನಿಗಳಿಂದ ಕೂಡಿರುವ ದೇವತೆಗಳನ್ನು ಕುರಿತು ಮಾತ
ನಾಡಿದನು ॥ ೩೩ ॥ ಎಲೈ ಋಷಿಶ್ರೇಷ್ಠರುಗಳಿರಾ ಭಗವಂತನ ಸನ್ನಿ
ಧಿಯಾದ ಇಲ್ಲಿಯೇ ವಿವಾಹ ಮಹೋತ್ಸವವೂ ಆಗತಕ್ಕದ್ದು ನನ್ನಿಂದ
ನಿಶ್ಚೈಸಲ್ಪಟ್ಟ ವಿಧಿಯು ಇದು ॥ ೩೪ ॥ ಎಲ್ಲಿ ಪರ್ವತರಾಜನು ಬಂಧು
ಸಮೇತನಾಗಿರುವನೋ ಅಲ್ಲಿಗೆ ನಾವು ಹೋಗೋಣ. ಸಕಲಸಾಮ್ರಾ
ಜ್ಯಚಿಹ್ನೆಗಳಾದ ಚಾಮರ ಬೀಸಣಿಗೆಗಳು ಮುಂತಾದುವು ಮುಂದೆಹೋ
ಗಲಿ ॥ ೩೫ ॥ ಸಮಸ್ತ ಮಂಗಲವಸ್ತುಸಹಿತವಾದ ಪಲ್ಲಕ್ಕಿಯೂ
ಮುಂದೆ ನಡೆಯಲಿ ಎಲೈ ಬ್ರಹ್ಮದೇವ, ದೇವೇಂದ್ರ, ಋಷಿಶ್ರೇಷ್ಠರು
ಗಳಿರಾ ನಾವು ಸರ್ವರೂ ಈಗಲೇ ಹೊರಡೋಣ ॥ ೩೬ ॥ ಎಲೋ
ದೇವತೆಗಳಿರಾ ಬಂಧುಗಳಿಂದ ಕೂಡಿರುವ ಪರಿಚಾರಕಸಹಿತನಾದ ಪತ್ನೀ
ಪುತ್ರಸಹಿತನಾದ ಪರ್ವತರಾಯನನ್ನು ಇಲ್ಲಿ ಕರತರಿಸಿ ಉಲ್ಲಾಸದ ದೆಸೆ

ರಾತ್ ॥ ೩೭ ॥ ಇಯಮೇಕಾದಶೀ ವಿಪ್ರಾಃ ದ್ವಾದಶ್ಯಾನಿಶಿಸಂಯು ತಾ ॥ ಅಸ್ಯಾಂರಾತ್ರೌ ಮಹಾದೇವೇ ಪಾಣಿಗ್ರಹಮಹೋತ್ಸವಃ ॥೩೮॥ ದ್ವಾವಿಂಶದ್ಘಟಿಕಾಕಾಲೇ ಕನ್ಯಾಲಗ್ನೇ ಸುಖೋದಯೇ ॥ ಕರ್ತವ್ಯ ಸ್ತುನಸಂದೇಹಶ್ಚ ರಧ್ವಂಮುನಿಭಿಸ್ಸಹ ॥ ೩೯ ॥ ಜಾತೇಮಹೋ ತ್ಸವೇಬ್ರಹ್ಮನ್ ದೇವೀಸಾದ್ವಾದಶೀದಿನೇ ॥ ನಿಶೀಥೇಮೇನಕಾಪು ತ್ರೀಚಾಜ್ಞಾಪ್ತಾ ಯಾತುಮಂದಿರಂ ॥ ೪೦ ॥ ಯಥಾಲೋಕಾನಜಾ ನಂತಿಕ್ರಿಯತಾಂತತ್ತಥಾಸುರೈಃ ॥ ವಾಮಾಂಗಸ್ಥಿತಯಾದೇವ್ಯಾಚಿ ಚ್ಛಕ್ತ್ಯಾ ಭಗವಾನ್ಶಿವಃ ॥ ೪೧ ॥ ಕರೋತ್ವವಭೃತಂದೇವೋಶಿಷ್ಟೋ ತ್ಸವಸಮನ್ವಿತಂ ॥ ಪುನರೇವಂಕರಿಷ್ಯಾಮೋದೇವ್ಯಾಃಪಾಣಿಗ್ರಹೋ

ಯಿಂದ ಉತ್ಸವವನ್ನು ಮಾಡುವ ॥ ೩೭ ॥ ಎಲೈ ವೇದಾಧ್ಯಯನಶಾಲಿ ಗಳಾದ ಮುನಿಗಳಿರಾ ಈತಿಥಿಯು ಏಕಾದಶಿಯಾಗಿ ರಾತ್ರಿಯಲ್ಲಿ ದ್ವಾದ ಶಿಯನ್ನು ಕೂಡಿರುವುದು. ಈ ರಾತ್ರಿಯಲ್ಲಿ ಶ್ರೀದೇವರಿಗೆ ಪಾಣಿಗ್ರಹ ಣೋತ್ಸವವು ೨೨ ಘಳಿಗೆಯ ಕಾಲವಾದ ಸುಖಪ್ರದವಾದ ಕನ್ಯಾಲಗ್ನ ದಲ್ಲಿ ಮುನಿಶ್ರೇಷ್ಠರುಗಳಿಂದ ಅನುಮಾನವಿಲ್ಲದೆ ಮಾಡತಕ್ಕದ್ದಾಗಿದೆ. ಆದಕ್ಕಾಗಿ ಜಾಗ್ರತರಾಗಿ ॥ ೩೮ ॥ ೩೯ ॥ ಎಲೈ ಬ್ರಹ್ಮದೇವನೇ, ಈ ಪ್ರಕಾರ ಮಹೋತ್ಸವವು ನೆರವೇರುತ್ತಿರಲಿಕ್ಕಾಗಿ ಎರಡನೆಯ ದಿನವಾದ ದ್ವಾದಶೀದಿನದಲ್ಲಿ ಅರ್ಧರಾತ್ರಿಯಲ್ಲಿ ಪರಮಾತ್ಮನ ಆಜ್ಞೆಯನ್ನು ಪಡೆದ ಮೇನಕಿದೇವಿಯ ಮಗಳಾದ ಗಿರಿಜಾದೇವಿಯು ತಂದೆಯ ಮನೆಯ ನ್ನು ಕುರಿತು ಹೋಗಲಿ ॥ ೪೦ ॥ ಈಕಾರ್ಯವನ್ನು ಪ್ರಾಕೃತಜನರು ಹೇಗೆ ತಿಳಿಯದಿರುವರೋ ಹಾಗೆ ದೇವತೆಗಳಿಂದ ಮಾಡಲ್ಪಡಲಿ. ಭಗ ವಂತನಾದ ಶ್ರೀ ಕಲಶೇಶ್ವರನು ತನ್ನ ವಿಗ್ರಹದ ಎಡಭಾಗದಲ್ಲಿ ನೆಲೆಗೊಂ ಡಿರುವ ಜ್ಞಾನಶಕ್ತಿದೇವಿಯಿಂದ ಉಳಿದ ಉತ್ಸವಕಾರ್ಯಸಹಿತವಾದ ಅವ ಭೃತವೆಂಬ ನಾಕಬಲಿಯ ಉತ್ಸವವನ್ನು ಮಾಡಲಿ. ಹೀಗಾದರೆ ತಿರುಗಿ ಉತ್ಸವಕ್ಕೆ ಕಾರಣವಾಗುವುದರಿಂದ ಶ್ರೀದೇವಿಯ ಪಾಣಿಗ್ರಹಣೋ ತ್ಸವವನ್ನು ಹೀಗೆಯೇ ಮಾಡುವ ॥ ೪೧ ॥ ೪೨ ॥ ಯಾವಾಗ

ತ್ಸವಂ ॥ ೪೨ ॥ ಯದಾಸಂವತ್ಸರಃಪೂರ್ಣಸ್ತದಾಯಾಮೋಹಿ ಮಾಲಯಂ।ಏವಂಕೃತೇಮುನಿಶ್ರೇಷ್ಠಾಃದೇವಾನಾಂಚದಿನೇದಿನೇ ॥ ॥ ೪೩ ॥ ಭವೇದ್ವಿವಾಹೋಘಟಜನೋಚೇದ್ಬ್ರೂತಮುನೀಶ್ವರಾಃ॥ ಇತ್ಥಂತೇದೇವದೇವಸ್ಯವಚಃಶ್ರುತ್ವಾಸುರೇಶ್ವರಾಃ ॥೪೪॥ ಪ್ರತ್ಯೂಚುರ್ಮುನಿಭಿಸ್ಸಾರ್ಧಂಭಗವನ್ಮತಕೋವಿದಾಃ ॥ ದೇವಾಊಚುಃ ಯದಾತ್ಥಪುಂಡರೀಕಾಕ್ಷತತ್ತಥೈವನಚಾನ್ಯಥಾ ॥ ೪೫ ॥ ಆಜ್ಞಾಭಗವತಃಶಂಭೋಸ್ತ್ವನ್ಮುಖಾಬ್ಜವಿನಿಸ್ಸೃತಾ ॥ ಏತತ್ತವವಚಃಕೃಷ್ಣಸರ್ವೇಷಾಂಸಮ್ಮತಂಹಿತಂ ॥ ೪೬ ॥ ಈಶ್ವರೇಂಗಿತಸದ್ಭಾವಂ ಪ್ರತಿಬ್ರೂಯಾತ್ಕತಶ್ಚಕಃ । ಇತ್ಥಂಮುನಿವಚಃಶ್ರುತ್ವಾಜಂಭೋದೈತ್ಯೇಶ್ವರೋಬಲಿಃ ॥ ೪೭ ॥ ಪ್ರತ್ಯೂಚತುರ್ಮುನಿವರಮಗ

ಸಂವತ್ಸರವು ಪೂರೈಸುವುದೊ ಆಗ್ಯ ಪುನಃ ಹಿಮವತ್ಪರ್ವತ ರಾಜನನ್ನು ಕುರಿತು ಹೇಳುವ. ಎಲೈ ಮುನಿಶ್ರೇಷ್ಠರುಗಳಿರಾ ಹೀಗಾದರೆ ದೇವತೆಗಳ ಪ್ರತಿದಿನದಲ್ಲಿಯೂ ॥ ೪೩ ॥ ವಿವಾಹೋತ್ಸವವು ಆಗುವದು. ಎ ಅಗಸ್ತ್ಯನೆ ಹಾಗಲ್ಲದಿದ್ದರೆ ಋಷೀಶ್ವರರಾದ ನೀವು ಹೇಳಿ ಈಪ್ರಕಾರವಾಗಿ ಆ ಮಹಾವಿಷ್ಣುವಿನ ಮಾತನ್ನು ಆ ದೇವತೆಗಳು ಕೇಳಿ ॥ ೪೪ ॥ ಭಗವಂತನ ಅಭಿಪ್ರಾಯ ಬಲ್ಲವರಾಗಿ ಮುನಿಗಳಿಂದ ಸಹಿತರಾಗಿ ತಿರುಗಿ ಮಾತನಾಡುವರು. ಎಲೈ ಕಮಲಾಕ್ಷನೆ ನೀನು ಯಾವುದನ್ನು ಆಡಿದೆಯೊ ಅದು ಹಾಗೆಯೇಸರಿ ಬೇರೆ ಆಗತಕ್ಕದ್ದಲ್ಲ ॥ ೪೫ ॥ ಭಗವಂತನಾದ ಶ್ರೀ ಕಲಶೇಶ್ವರನ ಅಪ್ಪಣೆಯು ನಿನ್ನ ಮುಖಕಮಲದದೆಸೆಯಿಂದ ಹೊರಟರುತ್ತದೆ. ಎಲೈ ಶ್ರೀಕೃಷ್ಣನೆ ನಿನ್ನ ಈ ಮಾತು ಸರ್ವರಿಗೂ ಸಮ್ಮತವೂ ಹಿತವೂ ಆಗಿರುವುದು ॥ ೪೬ ॥ ಜಗದೀಶ್ವರನ ಅಭಿಪ್ರಾಯವನ್ನು ತಿಳಿದಿರುವ ನಿನ್ನ ಮಾತಿಗೆ ಯಾವನು ಪ್ರತಿ ಆಡುವನು. ಈಪ್ರಕಾರವಾದ ಋಷಿಗಳ ಮಾತನ್ನು ಕೇಳಿ ಜಂಭಾಸುರನು ದೈತ್ಯರಿಗೆ ಒಡೆಯನಾದ ಬಲಿಯೂ ॥ ೪೭ ॥ ಐಶ್ವರ್ಯಯುಕ್ತರಾಗಿ ಮುನಿಶ್ರೇಷ್ಠರಾದ ಅಗಸ್ತ್ಯರನ್ನು ಕುರಿತು ಹೇಳಿದರು. ಎಲೈ ಮುನಿಶ್ರೇಷ್ಠನಾದ ಅಗಸ್ತ್ಯಋಷಿ

ಸ್ತ್ರ್ಯಂಸಂಪದಾನ್ವಿತೌ॥ ಬಲಿಜಂಭಾಊಚತುಃ ॥ ಭೊಭೋಗಸ್ತ್ಯ ಮುನಿಶ್ರೇಷ್ಠವಯಂಸರ್ವೇಪುರದ್ವಿಷಃ ॥೪೮॥ ಪಾದಸೇವಾರತಾನಿ ಸತ್ಯಂಕೃಪಯಾಸಂಪದಾನ್ವಿತಾಃ ॥ ದೇವೇನಸಹಯಾಸ್ಯಾಮೋಯು ಷ್ಮಾಭಿರ್ಹಿಮಪರ್ವತಂ ॥ ೪೯ ॥ ಸಂಪೂರ್ಣವಿಭವೇನೈವಕುರ್ಮಃ ಪಾಣಿಗ್ರಹೋತ್ಸವಂ ॥ ಪೌರಜಾನಪದಾನಾಂಹಿರಾಜ್ಞೋಹಿಮವ ತೋಮುನೇ ॥ ೫೦ ॥ ದಾರಾಣಾಂಬಂಧುಭೃತ್ಯಾನಾಂಜಾಯ ತೇನಯನೋತ್ಸವಃ । ಸರ್ವಸಂಭಾರನಿಚಯಾರತ್ನಸೌವರ್ಣಮು ದ್ರಿಕಾಃ ॥ ೫೧ ॥ ನೇತುಂಶಕ್ತಾವಯಂವಿಪ್ರಬ್ರವೀತಶ್ರೀಮಹೋ ತ್ಸವಂ । ಮಂಗಲಾಭಿಮುಖೀಸಾಕ್ಷಾದುಮಾಸ್ತಿಪಿತುರಂತಿಕೇ॥೫೨॥ ವಿವಾಹೋಭವಿತಾತತ್ರತದ್ಬಂಧೂನಾಂಸುಖಪ್ರದಃ ॥ ಆವಯೋರ್ಮ ತಮೇವಂಹಿಭಾರ್ಗವಾಚಾರ್ಯಸಮ್ಮತಂ ॥ ೫೩ ॥ ಇತ್ಥಂದೈತ್ಯಪ

ಷೀಶ್ವರನೆ ನಾವು ಸರ್ವರೂ ನಿತ್ಯದಲ್ಲಿಯೂ ತ್ರಿಪುರಘಾತಿಯಾದ ಶ್ರೀಪರ ಮೇಶ್ವರನ ಚರಣಸೇವಕರು ॥ ೪೮ ॥ ಆ ಅನುಗ್ರಹದಿಂದ ಸಕಲ ಸಂಪದ್ಯುಕ್ತರಾಗಿದ್ದೇವೆ. ಶ್ರೀ ಕಲಶೇಶ್ವರನಿಂದ ಕೂಡಿ ಪರ್ವತರಾಜ ನನ್ನು ಕುರಿತು ನಿಮ್ಮಗಳಿಂದ ಸಹಿತರಾಗಿ ಹೋಗುವ. ॥೪೯ ॥ ಪರಿಪೂ ರ್ಣವಾದ ವಿಭವದಿಂದ ವಿವಾಹೋತ್ಸವವನ್ನು ಮಾಡುವ. ಆ ಊರ ಜನಗಳಿಗೆ ಹಿಮವತ್ಪರ್ವತರಾಜನಿಗೆ ಎಲೈ ಅಗಸ್ತ್ಯಮುಷಿಯೆ ॥ ೫೦ ॥ ಆತನ ಪತ್ನೀರುಗಳಿಗೆ ಬಂಧುಗಳು ಸೇವಕರುಗಳಿಗೆ ಸಹ ಕಣ್ಣಾರ್ಥಿ ಯೂ ಆಗುತ್ತದೆ. ಕಸಲ ಸಾಹಿತ್ಯಗಳ ಸಮೂಹಗಳನ್ನೂ ರತ್ನಗಳೂ ಸುವರ್ಣಮಯಗಳಾದ ಆಭರಣಗಳನ್ನೂ ಸಿದ್ಧಪಡಿಸು ॥೫೧॥ ಆದ್ದರಿಂದ ಈ ವಿವಾಹವು ಅವರ ಬಾಂಧವರಿಗೆಸುಖಪ್ರದವಾದದ್ದಾಗಿ ಅಲ್ಲಿಯೇ ಆಗು ವುದು ಯುಕ್ತವಾಗಿದೆ. ಶುಕ್ರಾಚಾರ್ಯರ ಅಭಿಪ್ರಾಯಾನುಸಾರವಾ ಗಿಯೂ ನಮ್ಮ ಅಭಿಪ್ರಾಯವೂ ಇದು ॥ ೫೨ ॥ ೫೩ ॥ ಋಷಿಶ್ರೇಷ್ಠ ನಾದ ವೇದವ್ಯಾಸ ಋಷೀಶ್ವರನು ಈಪ್ರಕಾರದ ಬಲಿಚಕ್ರವರ್ತಿಯು

ತೇಶ್ಶ್ರುತ್ವಾಜಭಸ್ಯಾಪಿವಚೋಮುನಿಃ।ಪ್ರತ್ಯುವಾಚಸುರಶ್ರೇಷ್ಠೋ ಭಗವಾನ್‌ಬಾದರಾಯಣಃ ॥೫೪॥ ಸರ್ವೇಷಾಮಿಂಗಿತಂಜ್ಞಾತ್ವಾ ಕುಂಭಯೋನಿಪುರಸ್ಸರಃ॥ ಬಾದರಾಯಣಉವಾಚ॥ ಭೋಭೋವೈ ರೋಚನೇಜಂಭಶ್ರೂಯತಾಂತಚ್ಛಸಾದರಂ ॥ ೫೫ ॥ ಅಯಂಶ್ರೀ ಕಲಶೇಶಸ್ತುಯದಾಹಭಗವಾನ್ಪುರಾ।ತದಭಿಪ್ರಾಯಸಹಿತೋಹರಿರೂ ಚೇಸಭಾಸದಃ ॥ ೫೬ ॥ ಸರ್ವೇತದೇವಿತಿಬ್ರೂಯುರ್ದೇವಾ ಶ್ಚಮುನಿಭಿಸ್ಸಹ। ಯೂಯಂತದನುಮೋದಧ್ವಂಭಕ್ತಾಃಸರ್ವೇಥಮ ಹೇಶ್ವರೆ ॥ ೫೭ ॥ ಅದ್ಯೈವಸರ್ವೇಯಾಸ್ಯಾಮೋಹಿಮಾದ್ರಿಂಕೌ ತುಕಾನ್ವಿತಂ॥ಇತ್ಥಂವ್ಯಾಸವಚಶ್ಶ್ರುತ್ವಾಸರ್ವೇತೇದೇವದಾನವಾಃ॥ ॥೫೮॥ ಸಂತುಷ್ಟಮನಸಸ್ಸರ್ವೇಶಿವಾಜ್ಞಾಂಪ್ರಾಪ್ಯಯಯುರ್ಮುದಾ ।

ಮತ್ತು ಜಂಭನ ಮಾತನ್ನು ಕೇಳಿ ಆ ದೈತ್ಯಶ್ರೇಷ್ಠರನ್ನು ಕುರಿತು ಸರ್ವಸಭಾಸದರ ಅಭಿಪ್ರಾಯವನ್ನು ಬಲ್ಲವನಾಗಿ ಅಗಸ್ತ್ಯನಿಂದ ಕೂಡಿ ಮಾತನಾಡಿದನು.ಭಾಪುರೆ,ಬಲಿಚಕ್ರವರ್ತಿಯೆ,ಜಂಭನೆ,ಈ ವಿಷಯವನ್ನು ಪ್ರೀತಿಪೂರ್ವಕವಾಗಿ ಕೇಳೋಣವಾಗಲಿ ॥ ೫೪ ॥೫೫॥ ಷಡ್ಗುಣೈಶ್ವರ್ಯ ಯುಕ್ತನಾದ ಈ ಕಲಶೇಶ್ವರನು ಮೊದಲು ಯಾವುದನ್ನು ಹೇಳಿದನೊ ಆ ಅರ್ಥವನ್ನು ಅನುಸರಿಸಿಯೇ ಸಭಾಸ್ತರರನ್ನು ಕುರಿತು ಶ್ರೀಹರಿಯು ಹೇಳಿರುವನು ॥ ೫೬ ॥ ಸಮಸ್ತ ಋಷಿಗಳಿಂದ ಕೂಡಿರುವ ದೇವತೆ ಗಳು ಆ ಮಾತನ್ನು ಒಪ್ಪಿರುವ ಶ್ರೀ ಭಗವಂತನಲ್ಲಿ ಸರ್ವರೂ ಭಕ್ತರೇ ಆಗಿರುವರಷ್ಟೆ. ಆದ್ದರಿಂದ ನೀವು ಅವನ್ನೆ ಅನುಮೋದಿಸಿ॥೫೭॥ಸರ್ವರೂ ಈಗಲೇ ಮಾಂಗಲ್ಯದ ಗುರುತುಗಳಿಂದ ಕೂಡಿರುವ ಪರ್ವತರಾಜನನ್ನು ಕುರಿತು ಹೋಗುವ. ಹೀಗೆ ಸರ್ವಸಮ್ಮತವಾದ ವೇದವ್ಯಾಸರೇ ಹೇಳಿ ರುವುದನ್ನು ಕೇಳಿದ ಆಸಮಸ್ತ ದೇವದಾನವರು ॥ ೫೮ ॥ ಸಂತೋ ಷಮನಸ್ಕರಾದ ಸರ್ವರೂ ಭಗವಂತನಿಂದಲೂ ಆಜ್ಞಪ್ತರಾಗಿ ಸಂ ತೋಷದಿಂದ ದಿಬ್ಬಣ ಹೊರಟರು.ಯಾವನು ಸರ್ವೋತ್ತಮನಾದ ಶ್ರೀ

ಯಃಇದಂದೇವದೇವಸ್ಯವಿವಾಹೋತ್ಸವಸಮ್ಮಿತಂ॥ ಪಠೇದ್ವಾಶೃಣು
ಯಾದ್ವಾಪಿವೇದವಿದ್ಭಿಸ್ಸಮಂತತಃ॥ ... ॥೫೯॥

ಇತಿ ಶ್ರೀ ಕಲಶೇಶ್ವರ ಮಾಹಾತ್ಮ್ಯೇ ವಿವಾಹಮಂಟಪ ಪ್ರವೇಶ
ನಿರ್ಣಯೋನಾಮ ನವಮೋಧ್ಯಾಯಃ ॥

ಕಲಶೇಶ್ವರಸ್ವಾಮಿಯ ವಿವಾಹೋತ್ಸವದ ಸಮೇತ ಈ ಚರಿತ್ರವನ್ನು ಪಠಿಸುವನೋ ಅಥವಾ ಕೇಳುವನೊ ಅವನು ವೇದಜ್ಞರುಗಳಿಂದ ಸಮ್ಮತಿಸಿದ ಫಲವನ್ನು ಇಲ್ಲಿಯೂ ಪರಲೋಕದಲ್ಲಿಯೂ ಅನುಭವಿಸುವನು ॥ .... ॥೫೯॥

ಈಪ್ರಕಾರವಾಗಿ ಸ್ಕಂದಪುರಾಣದ ತುಂಗಭದ್ರಾಖಂಡದಲ್ಲಿ ಹೇಳಿರುವ
ಶ್ರೀ ಕಲಶೇಶ್ವರ ಸ್ವಾಮಿಯವರ ಮಹಿಮೆಯಲ್ಲಿ ವಿವಾಹಮಂಟಪ
ಸ್ಥಾನ ನಿರ್ಣಯವು ಸಮಾಪ್ತಿ ಯಾಯಿತು.

ಟೀಕಾಯಾಂ ಕನ್ನಡಾಖ್ಯಾಯಾಂ ರಾಮಜೋಯಿಸ ಶರ್ಮಣಾ
ಅಧ್ಯಾಯೋನವಮಃ ಪೂರ್ಣಃರಚಿತೋಯಂ ಮಯಾಧುನಾ ॥

ಅಥತೇಮುನಯಸ್ಸರ್ವೇವಿಷ್ಣುಬ್ರಹ್ಮಾದಯಸ್ಸುರಾಃ॥ ವೈರೋಚನಿಮುಖಾದೈತ್ಯಾಃಪ್ರಣಮ್ಯಕಲಶೇಶ್ವರಂ ॥೧॥ ಗಣೇಶನಂದಿಸಹಿತಂಯಯಾನಂಪ್ರಸ್ಥಾಪ್ಯಮಂಗಲಂ ॥ ಸೂಕ್ತನಾಕೇನಸಹಿತಂತೂರ್ಯಘೋಷಪುರಸ್ಸರಂ॥೨॥ ನೃತ್ಯದ್ಭಿರಪ್ಸರಸ್ಸಂಘೈಃಶ್ವೇತಚ್ಛತ್ರೈಶ್ಚಸ್ಸಚಾಮರೈಃ ॥ ಸ್ತುವದ್ಭಿರ್ವಂದಿಭಿಸ್ಸ್ವರ್ಣವೇತ್ರಧರೈಸ್ಸುರೈಃ॥೩॥ಪ್ರಹರ್ಷಿತಾಯಯುಸ್ಸರ್ವೇಗಜಾಶ್ವರಥಪತ್ತಿಭಿಃ॥ಸ್ವಸ್ವವಾಹನಮಾರುಹ್ಯದೇವಾದೈತ್ಯಾಸ್ಸಮೋಗಿಮಿತಃ ॥೪॥ ಹಾರೈಃಕಿರೀಟಮುಕುಟೈಃಸ್ವರ್ಣವರ್ಣಾಂಬರೈರ್ಯುತಾಃ॥ರಣದ್ಭಿರ್ನೂಪುರೈಸ್ಸರ್ವೇರೇಜಿರೇಭಾಸ್ಕರಾಇವ ॥ ೫ ॥ ಗಂಧರ್ವೈರ್ಗಾಯನಪರೈರ್ನಾ

ಇತ್ತಲಾ ಸೂತಪೌರಾಣಿಕನು ಶೌನಕಾದಿ ಮುನೀಶ್ವರರಿಗೀಶ್ವರ ಆ ಮೇಲಿನ ಚರಿತ್ರವನ್ನು ಹೇಳಲಾರಂಭಿಸಿದನು. ಕೇಳೈ ಶೌನಕಾದಿ ಋಷಿಗಳಿರಾ ಆಮೇಲೆ ಸಮಸ್ತ ಋಷಿಗಳೂ ಮಹಾವಿಷ್ಣು ಬ್ರಹ್ಮಾದಿ ದೇವತೆಗಳೂ ಬಲಿ ಮುಖ್ಯರಾದ ದೈತ್ಯ ಪ್ರಭುಗಳೂ ಶ್ರೀ ಕಲಶೇಶ್ವರ ಸ್ವಾಮಿಯನ್ನು ನಮಸ್ಕರಿಸಿ ॥೧॥ ಗಣೇಶ, ನಂದೀಶರ ಸಹಿತರಾಗಿ ಮಂಗಲವಸ್ತು ಸಹಿತವಾದ ಪಲ್ಲಕ್ಕಿಯನ್ನು ಹೊರಡಿಸಿ ಮಂಗಲ ಸೂಕ್ತ ಪಠನಗಳಿಂದ ಸಹಿತವಾಗಿ, ವಾದ್ಯಘೋಷಪೂರ್ವಕವಾಗಿ ॥೨॥ ನರ್ತನಮಾಡುತ್ತಿರುವ ಅಪ್ಸರಸ್ತ್ರೀಗಳಿಂದಲೂ ಚಾಮರಗಳಿಂದಲೂ ಶ್ವೇತಛತ್ರಗಳಿಂದಲೂ ಸ್ತುತಿಸುತ್ತಿರುವ ಸ್ತುತಿಪಾಠಕರುಗಳಿಂದಲೂ ಚಿನ್ನದ ಕಟ್ಟಿಗೆ ದಂಡಧರಿಸಿರುವ ದೇವತೆಗಳಿಂದಲೂ ॥೩॥ ಕೂಡಿರುವ ದೇವತೆಗಳು, ದೈತ್ಯರು ತಮ್ಮ ತಮ್ಮ ಪತ್ನಿಯರ ಸಮೇತರಾಗಿ ತಮ್ಮ ತಮ್ಮ ವಾಹನಗಳನ್ನೂ, ಇತರ ದೇವತೆಗಳು ಆನೆ, ಕುದುರೆ, ತೇರು, ಮುಂತಾದ್ದನ್ನೂ ಹತ್ತಿಕೊಂಡು ಸಂತೋಷಿತರಾಗಿ ನಡೆದರು ॥ ೪ ॥ ಈಪ್ರಕಾರ ದಿಬ್ಬಣ ಬರುತ್ತಿರುವ ಸರ್ವರೂ ಮುತ್ತಿನಪದಕ ಸರಗಳಿಂದಲೂ ಕಿರೀಟ ಮಕುಟಗಳಿಂದಲೂ ಪಲತೆರದ ಉಡಿಗೆಗಳಿಂದಲೂ ಧ್ವನಿಮಾಡುತ್ತಿರುವ ಕಾಲುಕಡಗಗಳಿಂದಲೂ ಸೂರ್ಯನೋಪಾದಿಯಲ್ಲಿ ಪ್ರಕಾಶಿಸುತ್ತಿದ್ದರು ॥ ೫ ॥ ಗಾನಾಸಕ್ತರಾದ ಗಂಧರ್ವರುಗಳಿಂದಲೂ

ರೀನೀರಾಜನ್ಯೈರ್ಯುರ್ಗತಾಃ ॥ ವಿಕಸದ್ವದನಾಸ್ಸರ್ವೇರೇಜಿರೇದೇವತಾಗ ಣಾಃ ॥ ೬ ॥ ಭೃಂಗ್ಯಟ್ಟಹಸನೋಪೇತನಂದಿಕೇಶಪುರಸ್ಸರಾಃ॥ಹಿಮ ವದ್ರಾಜಭವನನಿಕಟಂಪ್ರತಿಪೇದಿರೇ ॥ ಮಂಗಲ್ಯೈಸ್ತೂರ್ಯನಿನದೈಃ ಪಟಹೈಃಕಹಳಸ್ವನೈಃ॥ ಗಾಯದ್ಭಿರಪ್ಸರಸ್ಸಂಘೈರಾಗತಾನ್ಸುರಪುಂ ಗವಾನ್ ॥ ೮ ॥ ಶ್ರುತ್ವಾಪ್ರತಿಯಯೌಚಾದ್ರಿರಾಜೋಬಂಧುಜ ನೈರ್ಯುತಃ ॥ ಯೋಷಿನ್ನೀರಾಜನೈಶ್ಚೈವಕುಸುಮೈರ್ಮಂಗಲಾ ಕ್ಷತೈಃ ॥ ೯ ॥ ಮಹಾರ್ಹಮಣಿಮಾಣಿಕ್ಯಶ್ವೇತಛತ್ರೈಸ್ಸಚಾಮರೈಃ॥ ವಾದ್ಯಘೋಷೇಣಸಹಿತಃಪ್ರತಿಪೇದೇಸುರೇಶ್ವರಾನ್ ॥೧೦॥ ಕುಂಭ ಯೋನಿಮುಖಾಂಶ್ಚೈವಲಕ್ಷ್ಮೀಪತಿಮುಖಾನ್ಸುರಾನ್॥ವಾಚಾಸೂ ನೃತಯಾದೈತ್ಯಾರ್ಗಹರ್ಷಯಾಮಾಸಪರ್ವತಃ ॥ ೧೧ ॥ ಯಥಾವಿ ಧಿಯಾಥಾಯೋಗಂಬಹುಮಾನಸಮನ್ವಿತಂ ॥ ಪ್ರವೇಶ್ಯರಾಜಭವ

ಸುವಾಸನೆಗಳ ಆರತಿಗಳಿಂದಲೂ ಕೂಡಿರುವ ದೇವತೆಗಳು ಸರ್ವರೂ ಹಸನ್ಮುಖರಾಗಿ ವಿರಾಜಿಸಿದರು ॥ ೬ ॥ ಭೃಂಗಿರಿಟನೆಂಬ ಸೇನಾಪತಿಯು ಗದ್ದಲದಿಂದ ಕೂಡಿರುವ ನಂದಿಕೇಶ್ವರ ಮುಖ್ಯರಾದ ಸರ್ವರೂ ಹಿಮ ವತ್ಪರ್ವತನ ರಾಜಮಂದಿರದ ಸಮೀಪಕ್ಕೆ ಬಂದು ಸೇರಿದರು ॥ ೭ ॥ ಅವನು ಮಂಗಲವಾದ್ಯ ಧ್ವನಿಗಳಿಂದಲೂ ಉತ್ತಮ ಪುಷ್ಪಗಳಿಂದಲೂ ಮಂಗಲಾಕ್ಷತೆಯಿಂದಲೂ ಕೂಡಿದವನಾಗಿ ಎದುರಾಗಿ ಬಂದನು ॥೯॥ ಮತ್ತು ಥಳಥಳಾಯಮಾನವಾದ ರತ್ನಮುತ್ತುಗಳುಳ್ಳ ಶ್ವೇತಛತ್ರ, ಚಾಮರ ವಾದ್ಯಧ್ವನಿಗಳಿಂದ ಕೂಡಿದವನಾಗಿ ದೇವಶ್ರೇಷ್ಠರ ಬಳಿಗೆ ಬಂದು ಸೇರಿದನು ॥ ೧೦ ॥ ಆಮೇಲೆ ಅಗಸ್ತ್ಯ ಮೊದಲಾದ ಋಷಿಗ ಳನ್ನೂ ಶ್ರೀ ಲಕ್ಷ್ಮೀಪತಿಯಾದ ಮಹಾ ವಿಷ್ಣು ಮೊದಲಾದ ದೇವತೆಗ ಳನ್ನೂ ದೈತ್ಯರನ್ನೂ ನಮಸ್ಕರಿಸಿ ಮೃದುವಾದ ಮಾತಿನಿಂದ ಪೂಜಿಸಿ ದನು ॥ ೧೧ ॥ ಕ್ರಮಾನುಸಾರವಾಗಿ ನ್ಯಾಯವನ್ನನುಸರಿಸಿ ಬಹು ಮರ್ಯಾದಾಪೂರ್ವಕವಾಗಿ, ರಾಜಮಂದಿರವನ್ನು ಪ್ರವೇಶಿಸಿ ಮಧು

ನಂಮಧುಪರ್ಕಾದಿಭಿರ್ಮುದಾ ॥ ೧೨ ॥ ಪೂಜ್ಯಾಸ್ತಾನ್ಪೂಜಯಾಮಾಸಮುನಿಶ್ರೇಷ್ಠಾಸ್ಸುರಾನಪಿ ॥ ಮಹತ್ಸುರತ್ನಪೀಠೇಷುಸೂಪವಿಷ್ಟಾಂಸ್ತಥಾದ್ರಿರಾಟ್ ॥ ೧೩ ॥ ಪೂಜಿತಾಪರ್ವತೇನಾಥಊಚುರದ್ರಿಂಮುನೀಶ್ವರಾಃ । ಹೇರಾಜನ್ಗಿರಿಜಾದೇವ್ಯಾಃಪಾಣಿಗ್ರಹಮಹೋತ್ಸವಃ ॥ ೧೪ ॥ ಪ್ರಾಂಕಣೇಮಂಟಪೇರಮ್ಯೇಕಲಶೇಶಸ್ಯಸನ್ನಿಧೌ ॥ ಭವೇದಿತಿಸುರೈರದ್ಯಾಮುನಿಭಿರ್ನಿಶ್ಚಯಃಕೃತಃ॥ ॥೧೫॥ ಬ್ರವೀಷಿಕಿನ್ನುಹಿಮವಾನ್ಯತಿಷ್ಯಾಮಸ್ತ್ವೇಚ್ಛಯಾ । ಇತ್ಯಗಸ್ತ್ಯವಚಶ್ಶ್ರುತ್ವಾಕೃತಾಂಜಲಿರಥಾಬ್ರವೀತ್ ॥೧೬॥ ವಿಪ್ರಶ್ರೀಕಲಶೇಶಸ್ಯಯಥಾಜ್ಞಾಭವತಾಮಪಿ ॥ ಭೂಯಾದಥನಸಂದೇಹಃ ಕರಿಷ್ಯಾಮ್ಯನುಶಾಸನಂ ॥ ೧೭ ॥ ಇತ್ಥಂವಚೋಹಿಮವತಃಶ್ರು

ಪರ್ಕಾದಿ ಪೂಜೆಗಳಿಂದ ಸಂತೋಷದೊಡನೆ ॥ ೧೨ ॥ ಪರ್ವತರಾಜನು ಉತ್ತಮಗಳಾದ ರತ್ನಪೀಠಗಳಲ್ಲಿ ಸುಖವಾಗಿ ಕುಳಿತಿರುವ, ಪೂಜೆಗೆ ಯೋಗ್ಯರಾದ ಋಷೀಶ್ವರರನ್ನೂ ದೇವತೆಗಳನ್ನೂ ಕೂಡ ಪೂಜಿಸಿದನು ॥ ೧೩ ॥ ಅನಂತರದಲ್ಲಿ ಪರ್ವತರಾಜನಿಂದ ಪೂಜಿತರಾದ ಋಷೀಶ್ವರರು ಹೇಳಿದರು-ಎಲೈ ಅರಸನೇ, ಗಿರಿಜಾದೇವಿಯ ವಿವಾಹೋತ್ಸವವು ವರನಾದ ಶ್ರೀ ಕಲಶೇಶ್ವರನ ಸನ್ನಿಧಿಯ ಮುಂದುಗಡೆಯ ರಮಣೀಯವಾದ ಮಂಟಪದಲ್ಲಿ ಆಗುವಹಾಗೆ ಈ ದೇವತೆಗಳಿಂದಲೂ ಮುನಿಗಳಿಂದಲೂ ನಿರ್ಣಯಿಸಲ್ಪಟ್ಟಿದೆ ॥ ೧೪ ॥ ೧೫ ॥ ಎಲೈ ಹಿಮವಂತನೇ ! ನೀನು ಯಾವಪ್ರಕಾರ ಹೇಳುತ್ತೀಯೋ ಹಾಗೆ ಉದ್ಯೋಗಿಸುತ್ತೇವೆ. ಈ ಪ್ರಕಾರವಾದ ಅಗಸ್ತ್ಯಋಷಿಯ ಮಾತನ್ನು ಕೇಳಿ ಅನಂತರದಲ್ಲಿ ಕೈಮುಗಿದುಕೊಂಡು ಹಿಮವಂತನು ಹೇಳಿದನು ॥೧೬॥ ಎಲೆ ಬ್ರಹ್ಮರ್ಷಿಯೇ, ಶ್ರೀ ಕಲಶೇಶ್ವರನ ಮತ್ತು ತಮ್ಮಗಳ ಆಜ್ಞೆಯು ಹೇಗೋಹಾಗೆಯೇ ಆಗಲಿ. ಅದಕ್ಕೆ ಯಾವ ಸಂದೇಹವೂ ಇಲ್ಲ. ನಿಮ್ಮ ಅಪ್ಪಣೆಯನ್ನನುಸರಿಸುವೆನು॥೧೭॥ಈಪ್ರಕಾರ ಹೇಳಿದ ಪರ್ವತರಾಜನ ಮಾತನ್ನು ಬ್ರಹ್ಮಾದಿ ದೇವತೆಗಳೂ ಋಷಿಗಳೂ ಕೇಳಿ ಶಾಭಾಸು !

ತ್ವಾಬ್ರಹ್ಮರ್ಷಯಸ್ಸುರಾಃ ॥ ಋಷಯಸ್ತುಷ್ಟುವುರ್ದೈತ್ಯಾಃಸಾಧು ಸಾಧ್ವಿತಿಶಂಸಿನಃ ॥ ೧೮ ॥ ಅಥದೇವಗುರುಸ್ಸಾಕ್ಷಾಚ್ಛುಕ್ರಾಚಾರ್ಯೇಣಸಂಯುತಃ ॥ ಊಚಾಚಕರ್ಕಟಕಂರಾತ್ರಾವದ್ಯಲಗ್ನಂಶುಭಾನ್ವಿತಂ ॥ ೧೯ ॥ ಅಸ್ಮಿನ್ನೇವಮುಹೂರ್ತೇತುಸಾದೇವೀಮಂಗಲಾನ್ವಿತಾ ॥ ರತ್ನಪೀತಾಂಬರಧರಾಹಾರನೂಪುರಶೋಭಿತಾ ॥ ೨೦ ॥ ದಿವ್ಯಾಲಂಕಾರಸಂಯುಕ್ತಾಮಂಡಿತಾಮಂಗಲಾಕ್ಷತೈಃ ॥ ಪಿತೃಭ್ಯಾಂಬಾಂಧವೈಸ್ಸಾರ್ಧಂಯಯಾಸವಾರೋಹಕಾಲಂತವಾ ॥ ೨೧ ॥ ಹರಿದ್ರಾಕುಂಕುಮಾದೀನಿದಧ್ಯಕ್ಷತಫಲಾನಿಚ ॥ ನೀರಾಜನಾನಿವಸ್ತ್ರಾಣಿಸುವರ್ಣಕಲಶಾನಪಿ ॥ ೨೨ ॥ ದಿವ್ಯಾಂಬರಾಣಿರತ್ನಾನಿವೈವಾಹ್ಯಾನಿಚಸರ್ವಶಃ॥ ಗೃಹೀತ್ವಾಲಂಕೃತಾಸ್ಸರ್ವಾಸ್ಸ್ತ್ರಿಯೋಯಾಂತುಸಭರ್ತೃಕಾಃ॥೨೩॥ ತ್ವರಧ್ವಮೃಷಯಸ್ಸರ್ವೇದೇವಾಶ್ಚಾದಿ

ಶಾಭಾನು! ಎಂದು ಸಂತೋಷಚಿತ್ತರಾಗಿ ಹೊಗಳಿದರು ॥ ೧೮ ॥ ಆ ಸಮಯದಲ್ಲಿ ಶುಕ್ರಾಚಾರ್ಯನಿಂದ ಕೂಡಿದ ಬೃಹಸ್ಪತ್ಯಾಚಾರ್ಯನು ಈದಿನ ರಾತ್ರಿ ಕರ್ಕಟಕ ಲಗ್ನವು ಉತ್ತಮವಾಗಿರುವುದು ಎಂದು ತಾನಾಗಿ ಹೇಳಿದನು॥೧೯॥ ಈ ಕ್ಷಣವೇ ಆ ಗಿರಿಜಾದೇವಿಯು ಮಂಗಲ ದ್ರವ್ಯ ಭೂಷಿತಳಾಗಿ, ರತ್ನಾಭರಣ, ಪೀತಾಂಬರಗಳನ್ನು ಧರಿಸಿದವಳಾಗಿ, ಮುತ್ತಿನ ಹಾರಗಳಿಂದಲೂ ಕಡಗಗಳಿಂದಲೂ ಅಲಂಕೃತಳಾಗಿ॥೨೦॥ ಉತ್ತಮವಾದ ಅಲಂಕಾರದಿಂದ ಕೂಡಿದವಳಾಗಿ, ಮಂಗಲಾಕ್ಷತೆಗಳಿಂದ ಭೂಷಿತೆಯಾಗಿ, ತಂದೆ ತಾಯಿಗಳಿಂದಲೂ ಬಂಧುಗಳಿಂದಲೂ ಕೂಡಿದವಳಾಗಿ, ಸರ್ವಮಂಗಲೆಯಾಗಿ ಪಲ್ಲಕ್ಕಿಯನ್ನು ಹತ್ತಲಿ॥೨೧॥ ಪತಿಯುಕ್ತರಾದ ಸುವಾಸಿನೀ ಸ್ತ್ರೀಯರು ಅರಿಶಿನ, ಕುಂಕುಮ, ಮಂತ್ರಾಕ್ಷತೆಗಳೂ ಆರತಿ ಪದಾರ್ಥಗಳೂ ಭಂಗಾರದ ಕಲಶಗಳೂ ಸೀರೆ ಕುಪ್ಪಸಗಳೂ ವಿವಾಹ ಯೋಗ್ಯಗಳಾದ ರತ್ನಗಳೂ ಮೊದಲಾದ ಎಲ್ಲಾ ವಸ್ತುಗಳನ್ನೂ ತೆಗೆದುಕೊಂಡು ಅಲಂಕೃತರಾಗಿ ಎಲ್ಲರೂ ಹೊರಡಲಿ ॥ ೨೨ ॥ ॥೨೩॥ ಎಲೈ ಋಷಿಗಳಿರಾ! ದೇವತೆಗಳಿರಾ! ಭೃತ್ಯರುಗಳಿರಾ! ನೀವು

ತಿನಂದನಾಃ ॥ ಇತಿವಾಚಸ್ಪತೇರ್ವಾಕ್ಯಂಶ್ರುತ್ವಾಚೋಶನಸಸ್ಸು
ರಾಃ ॥ ೨೪ ॥ ರಾಜಾನಂತ್ವರಯಾಞ್ಚಕ್ರುರ್ಯ್ಯಾನಾದೀನ್ಯಪಿಸರ್ವ
ಶಃ॥ ತದಾಕಮಠನಿರ್ಹ್ರಾದೋಮಂಗಲತೂರ್ಯ್ಯನಿಸ್ಸ್ವನಃ ॥೨೫॥
ಜಜ್ಞೇದುಂದುಭಿನಾದಶ್ಚಮೃದಂಗಪಟಹಸ್ವನಃ ॥ ತತೋಽಪ್ರಜಾ
ಮಲಂಚಕ್ರೇಲೋಪಾಮುದ್ರಾತ್ವರುಂಧತೀ ॥ ೨೬ ॥ ವಾಗ್ದೇವೀ
ಕಮಲಾಸಾಕ್ಷಾದಿಂದ್ರಾಣೀಕೌತುಕಾನ್ವಿತಾಃ ॥ ಮುನಿಪತ್ನ್ಯಸ್ತಥಾ
ಚಾನ್ಯಾಃಪ್ರತ್ಯೇಕಂಕುಸುಮಾಕ್ಷತೈಃ ॥ ೨೭ ॥ ದಧ್ಯಕ್ಷತೈರ್ನಾರಿ
ಕೇಳೈರಂಭಾಪೂಗಫಲೈರ್ದಳೈಃ॥ ಹರಿದ್ರಾಕುಂಕುಮೈರ್ದ್ರವ್ಯೈರಂ
ಜನೇನಸುರೇಶ್ವರೀಂ ॥ ೨೮ ॥ ಮಂಗಲಾಂಚಕ್ರಿರೇಸರ್ವಾಆಶೀರ್ಭಿ
ರಪಿಯೋಷಿತಃ ॥ ಶೋಭನಂಸ್ವಸ್ತಿವಚನಂಮುನಯಃಪ್ರೋಚುರಂ
ತಿಕೇ ॥ ೨೯ ॥ ತದಾತಜ್ಜನಿಮೇವಸ್ವರ್ಣವರ್ಣಾಂಬರೇಣತಾಂ॥

ಸರ್ವರೂ ಜಾಗ್ರತೆಪಡಿಸಿ. ಈ ಪ್ರಕಾರವಾದ ಶುಕ್ರಾಚಾರ್ಯನಿಂದ ಸಹಿತನಾದ ಬೃಹಸ್ಪತ್ಯಾಚಾರ್ಯನ ಮಾತಂ ಕೇಳಿ ||೨೪|| ಸರ್ವರೂ ಪರ್ವತರಾಜನಿಗೆ ತಿಳಿಸಿ, ಪಲ್ಲಕ್ಕಿಯು ಆನೆ ಮುಂತಾದವುಗಳನ್ನು ಜಾಗ್ರತೆಪಡಿಸಿದರು. ಆಗ ಕೊಂಬುಗಳ ಶಬ್ದವೂ ಮಂಗಲವಾದ್ಯಸ್ವರವೂ || ೨೫ || ಭೇರೀಶಬ್ದವೂ ಮದ್ದಲೆ ಕಹಳೆಗಳ ಶಬ್ದವೂ ಉಂಟಾಯಿತು. ಆಗ ಲೋಪಾಮುದ್ರೆಯೂ ಅರುಂಧತಿಯೂ || ೨೬ || ಸರಸ್ವತೀ ದೇವಿಯೂ ಲಕ್ಷ್ಮೀದೇವಿಯೂ ಶಚೀದೇವಿಯೂ ತಾವೇ ಉತ್ಸವ ಯೋಗ್ಯವಾದ ಅಲಂಕಾರಮಾಡಿದವರಾಗಿ ಉಳಿದ ಋಷಿ ಪತ್ನಿಗಳು ಪ್ರತ್ಯೇಕವಾಗಿ ಹುವ್ವು ಅಕ್ಷತೆಗಳಿಂದ ಅಲಂಕರಿಸಿದರು||೨೭||ಹಾಗೆ ಮಂತ್ರಾಕ್ಷತೆ, ತೆಂಗಿನಕಾಯಿ, ಬಾಳೆಹಣ್ಣು, ಉಂಡಿಕೆ, ವೀಳಯದೆಲೆ ಮೊಸರು ಅರಿಸಿನ, ಕುಂಕುಮ ಮೊದಲಾದ ಮಂಗಲದ್ರವ್ಯಗಳಿಂದ ಕಣ್ಣು ಕಾಡಿಗೆಯಿಂದ ಸರ್ವೇಶ್ವರಿಯನ್ನು || ೨೮ || ಸಮಸ್ತ ಸ್ತ್ರೀಯರೂ ಮಂಗಳವನ್ನು ಮಾಡಿದರು ಮತ್ತು ಹರಶಿದರು. ಆಗ ಮುನಿಗಳು ಶುಭವಾದ ಸ್ವಸ್ತಿ ವಚನವನ್ನು ಮುಂದುಗಡೆಯಲ್ಲಿ ಹೇಳಿದರು || ೨೯

ಉತ್ತರೀಯೈರ್ಣಕುಸುಮೈಃಕುಂಕುಮೈಸ್ಸಾಭಿನಂದ್ಯಚ ॥ ೩೦ ॥
ಆಶಿಷೋಯುಯುಜುಸ್ಸರ್ವೇತತ್ಪಿತ್ರಾಸ್ಸಹಿತಾದ್ವಿಜಾಃ॥ಅಥಸರ್ವೇ
ಮುನಿವರ್ಯೈಃಸದೇವೈರ್ಬಾದರಾಯಣಃ॥೩೧॥ಉವಾಚಸ್ವಸ್ತಿಗಿರಿಜೇ
ಯಾನಮಾರೋಹಮಂಗಲಂ॥ಸಖೀಕರೇಪಾಣಿಪದ್ಮಂಸಂಸ್ಥಾಪ್ಯಜಗ
ದಂಬಿಕೆ ॥೩೨॥ ವ್ಯಾಸಸ್ಯೇತಿವಚಶ್ಶ್ರುತ್ವಾಸಾದೇವೀಹರ್ಷಸಂಯು
ತಾ ॥ ಪ್ರಣಾಮಪಿತುಃಪಾದೌಮಾತುಸ್ತಾಸಾಂಸುಯೋಷಿ
ತಾಂ ॥ ೩೩ ॥ ತತ್ಪೂರ್ವಮೇವಗಿರೀಶಂಮನಸಾಪ್ರಣಿಪತ್ಯಚ॥ ಸ್ವ
ಪಾಣಿಪಲ್ಲವಂಹಸ್ತೇಸಖ್ಯಾಸ್ಸಂಸ್ಥಾಪ್ಯಮಂಗಲಾ ॥ ೩೪ ॥ ಆಯಾ
ತಾಶನಕೈರ್ದೇವೀಯಾನಮಾರುರುಹೇದ್ವಿಜಾ ॥ ತದಾಜಯೇತ್ಯ

ಆಗ ಆ ದೇವಿಯು ತಾಯಿಯಾದ ಮೇನಕಾದೇವಿಯೂ ಆ ಗಿರಿಜಾದೇವಿಯನ್ನು ಚಿನ್ನದ ಜರತಾರಿಯಿರುವ ವಸ್ತ್ರದ ಉತ್ತರಿಗೆಯಿಂದಲೂ ಹುವ್ವಿನಸರಗಳಿಂದಲೂ ಅರಿಸಿನ, ಕುಂಕುಮದಿಂದಲೂ ಅಲಂಕರಿಸಿ॥೩೦॥ ಆಕೆಯೂ ಆದೇವಿಯು ತಂದೆಯಾದ ಪರ್ವತರಾಜನಿಂದ ಸಹಿತರಾಗಿ ಸಮಸ್ತ ಬ್ರಾಹ್ಮಣರೂ ಆಶೀರ್ವಾದಗಳನ್ನು ಮಾಡಿದರು. ಆಮೇಲೆ ದೇವತೆಗಳಿಂದ ಕೂಡಿರುವ ಋಷಿಗಳಿಂದ ಸಹಿತನಾದ ವೇದವ್ಯಾಸಋಷಿಯು ಎಲೈ ಜಗತ್ತಿಗೆ ತಾಯಿಯಾದ ಗಿರಿಜಾದೇವಿಯೇ. ಪರಿಚಾರಕ ಸ್ತ್ರೀಯ ಕೈಯಲ್ಲಿ ನಿನ್ನ ಕರಕಮಲವನ್ನಿಟ್ಟುಕೊಂಡು ಪಲ್ಲಕ್ಕಿಯನ್ನು ಹತ್ತು ಶುಭವಾಗಲಿ ಎಂದು ಹೇಳಿದನು ॥ ೩೧ ॥ ೩೨ ॥ ಆ ಗಿರಿಜಾದೇವಿಯೂ, ಹೀಗೆ ನುಡಿವವ್ಯಾಸಋಷೀಶ್ವರನ ಮಾತನ್ನು ಕೇಳಿ ತಂದೆ ತಾಯಿ ಮತ್ತು ಅಲ್ಲಿ ಇರುವ ಋಷಿಪತ್ನಿಯರ ಚರಣಗಳಿಗೆ ನಮಸ್ಕರಿಸಿದಳು ॥ ೩೩ ॥ ಮಂಗಲಸ್ವರೂಪಳಾದ ಆ ದೇವಿಯು ಇದಕ್ಕೆ ಮೊದಲೆ ಭಗವಂತನಾದ ಶ್ರೀಪರಮೇಶ್ವರನನ್ನು ಮನಸ್ಸಿನಲ್ಲಿ ನಮಸ್ಕರಿಸಿಕೊಂಡು ತನ್ನ ಕರಪದ್ಮವನ್ನು ಸಖಿಯ ಕೈಯಲ್ಲಿಟ್ಟುಕೊಂಡು ॥ ॥ ೩೪ ॥ ಮೆಲ್ಲಗೆ ನಡೆದುಬಂದು ಆ ಗಿರಿಜಾದೇವಿಯೂ ಪಲ್ಲಕ್ಕಿಯನ್ನು ಹತ್ತಿದಳು. ಆಗ ಭೂಲೋಕದಲ್ಲಿರುವ ದೇವತೆಗಳಿಂದ ಜಯ

ಭಿಹಿತಂದೆವೈರ್ಭೂರ್ಲೋಕಸಂಸ್ಥಿತೈಃ ॥ ೩೫ ॥ ವಾದಿತ್ರಾಣಾಂಸು ಘೋಷೈಶ್ಚ ಭೇರಿದುಂದುಭಿನಿಸ್ವನೈಃ ॥ ಪೂರಯಾಮಾಸವಿದಿಶಃ ದಿಶಶ್ಚೈವಸುರ್ನೈರಿತಃ ॥ ೩೬ ॥ ಸ್ವರ್ಣವೇತ್ರಧರಾಸ್ತತ್ರಚಾಮ ರೈರ್ವ್ಯಜನೈರ್ಯುತಾಃ ॥ ಶರದುದ್ಯಚ್ಛಶಾಂಕಾಭಶ್ವೇತಛತ್ರಧರಾ ಸ್ತಥಾ ॥೩೭॥ ಪಾರ್ಶ್ವಯೋರ್ದೇವಗಂಧರ್ವಾಃ ಶ್ರೇಣೀಭೂತಾಸ್ಸಹ ಸ್ರಶಃ ॥ ಸ್ತುವಂತಃಪ್ರಯಯುಸ್ಸರ್ವೇಹರ್ಷಿತಾಸ್ತೂರ್ಯನಿಸ್ವನೈಃ॥ ॥ ೩೮ ॥ ಸ್ವರ್ಣವೇತ್ರಧರೋಗ್ರೇಚನಂದಿಕೇಶೋಯಯೌಮು ದಾ । ದೇವ್ಯಾದಕ್ಷಿಣಪಾರ್ಶ್ವೇಚಗಣನಾಥೋವಿರಾಜತೇ ॥ ೩೯ ॥ ಸೌಮಂಗಲ್ಯಾಸ್ಸಪವಿಮಾಪೇತುರೇಜರೇದೇವಯೋಷಿತಃ॥ ಸಂಸ್ಥಿತಾಃ ಪಶ್ಚಿಮೇದೇವ್ಯಾಜನನ್ಯಾಬಂಧುಯೋಷಿತಃ ॥ ೪೦ ॥ ಏವಮಾನ್ಯಂ

ಜಯವೆಂದು ಸ್ತುತಿಸಲ್ಪಟ್ಟಿತು ॥ ೩೫ ॥ ಆ ಸಮಯದಲ್ಲಿ ದೇವತೆಗ ಳಿಂದ ಧ್ವನಿಮಾಡಿಸಲ್ಪಟ್ಟ ಭೇರಿ ನಗಾರಿಗಳ ಶಬ್ದಗಳಿಂದ ಕೂಡಿರುವ ವಾದ್ಯಗಳ ಧ್ವನಿಯು, ಎಂಟು ದಿಕ್ಕುಗಳನ್ನು ವ್ಯಾಪಿಸಿತು ॥ ೩೬ ॥ ಆ ಮುಂದುಗಡೆಯಲ್ಲಿ ಚಿನ್ನದ ಬೆತ್ತವನ್ನು ಹಿಡದಿರುವ, ಚಾಮರ ಬೀ ಸಣಿಗೆಗಳಿಂದ ಸಹಿತವಾದ ಮತ್ತು ಶರತ್ಕಾಲದಲ್ಲಿ ಉದಯಿಸಿದ ಚಂದ್ರ ನಂತಿರುವ ಶ್ವೇತಛತ್ರಗಳನ್ನು ಧರಿಸಿರುವ ದೇವತೆಗಳೂ ॥ ೩೭ ॥ ಗಂಧರ್ವರೂ ಎಡಬಲ ಭಾಗಗಳಲ್ಲಿ ಸಾಲಾಗಿರುವವರಾಗಿ, ವಾದ್ಯ ಧ್ವ ನಿಗಳಿಂದ ಹರ್ಷಿತರಾಗಿ, ಅನೇಕ ಪ್ರಕಾರವಾಗಿ ಹೊಗಳುವಂಥವರಾಗಿ ಸಂತೋಷಿತರಾಗಿ ನಡೆದರು ॥ ೩೮ ॥ ಹೀಗೆ ಹೋಗುವಾಗ ಶ್ರೀದೇವಿ ಯ ಬಲಗಡೆಯಲ್ಲಿ ಗಣಪತಿದೇವರೂ ಎಡಗಡೆಯಲ್ಲಿ ನಂದಿಕೇಶ್ವರನೂ ಚಿನ್ನದ ಬೆತ್ತವನ್ನು ಹಿಡಿದವರಾಗಿ ಪ್ರಕಾಶಿಸುತ್ತ ನಡೆದರು ॥ ೩೯ ॥ ಆದೇವಿಯ ಪಲ್ಲಕ್ಕಿಯ ಸಮೀಪದಲ್ಲಿ ಮಂಗಲಸ್ವರೂಪೆಯರಾದ ದೇವತಾ ಸ್ತ್ರೀಯರೂ ಹಿಂದುಗಡೆಯಲ್ಲಿ ತಾಯಿಯಾದ ಮೇನಕಾದೇವಿ ಯಿಂದ ಸಹಿತರಾದ ಬಂಧು ಸ್ತ್ರೀಯರೂ ಪ್ರಕಾಶಿಸುತ್ತಿದ್ದರು॥೪೦॥ಹೀಗೆ ಪ್ರಯಾಣಮಾಡುವ ಸಮಯದಲ್ಲಿ ಬಂಧು ಬಾಂಧವರಿಂದ ಸಹಿತನಾದ

ಧುಸಹಿತೋಮಾಧವೋಭಾರತೀಪತಿಃ ॥ ಸಹಸ್ರಾಕ್ಷಸ್ಸುರಾಸ್ಸರ್ವೇಜ
ಯೇತಿಯುಯುರಾದರಾತ್ ॥ ೪೧ ॥ ನಾರದಸ್ತುಂಬುರಶ್ಚೈವ
ವೀಣಾಗಾನಪರೌಮುನೀ ॥ ಬ್ರಹ್ಮರ್ಷಯಶ್ಶೌನಕಾದ್ಯಾವೇದಘೋ
ಷಾನ್ಸಮೂಚಿರೇ ॥ ೪೨ ॥ ಇತ್ಥಂವಿಭವಸಂಯುಕ್ತೋಹಿಮವಾ
ನ್ಬಾಂಧವೈಸ್ಸಹ ॥ ಆಜಗಾಮಪುರದ್ವಾರಂಯಾತ್ರಾಸೌಕಲಶೇಶ್ವ
ರಃ ॥೪೩॥ ತತೋಮಂಗಲಘೋಷಾಶ್ಚಶ್ರುತ್ವಾಯಕ್ಷಾಧಿಪಾದ್ವಿಭುಃ
ಉವಾಚಹೇಧನಾಧ್ಯಕ್ಷಪ್ರಯಾಹಿಮುನಿಭಿಸ್ಸುರೈಃ ॥ ೪೪ ॥ ವಿವಾ
ಹಮಂಗಲೈರ್ಯುಕ್ತೋಸಂಮಾನ್ಯತಾನ್ಸಮಾನಯ ॥ ತಚ್ಛ್ರು
ತ್ವಾಪ್ರಣಿಪತ್ಯೈವರಾಜರಾಜಸ್ಸ್ವಲಂಕೃತಃ ॥ ೪೫ ॥ ನಾಗವೇಣೀ
ಧರಾಭಿಶ್ಚಕಲಶಾಕ್ಷತದರ್ಪಣಾನ್॥ದಧತೀಭಿರ್ಯುತೋರೇಜೇತಾರಾ

ಪರ್ವತರಾಜನೂ ಲಕ್ಷ್ಮೀಪತಿಯಾದ ಶ್ರೀಮಹಾವಿಷ್ಣುವೂ ಶಾರದಾಪತಿ
ಯಾದ ಬ್ರಹ್ಮದೇವನೂ ದೇವೇಂದ್ರನೂ ಸಮಸ್ತ ದೇವತೆಗಳೂ ಜಯ
ಜಯವೆನ್ನುತ್ತ ನಡೆದರು ॥ ೪೧ ॥ ನಾರದರೂ, ತುಂಬುರರೂ ಕೂಡ
ಬ್ರಹ್ಮರ್ಷಿಗಳಾದ ಶೌನಕಾದಿಗಳು, ವೇದಧ್ವನಿಗಳಿಂದ ಸ್ತುತಿಸಿದ
ರು ॥ ೪೨ ॥ ಈಪ್ರಕಾರವಾಗಿ ಪರ್ವತರಾಜನು ಬಾಂಧವರಿಂದ ಕೂಡಿ
ದಿಬ್ಬಣದಲ್ಲಿ ವಿಭವಯುಕ್ತನಾಗಿ ಎಲ್ಲಿ ಶ್ರೀ ಕಲಶೇಶ್ವರಸ್ವಾಮಿ ಇರು
ವನೋ ಆ ದೇವಧಾನಿಯ ಹೆಬ್ಬಾಗಿಲಿಗೆ ಬಂದನು ॥೪೩॥ ಆ ಕ್ಷಣ ಭಗ
ವಂತನು ಮಂಗಲಕರಗಳಾದ ವಾದ್ಯ ಶಬ್ದಗಳನ್ನು ಕೇಳಿ ಯಕ್ಷರುಗಳಿಗೆ
ಅಧಿಪತಿಯಾದ ಕುಬೇರನನ್ನು ಕುರಿತು ಎಲೈ ಧನಾಧಿಪತಿಯೇ, ದೇವತೆ
ಗಳಿಂದಲೂ ಋಷಿಗಳಿಂದಲೂ ಕೂಡಿ ದಿಬ್ಬಣವನ್ನು ಎದುರುಗೊಳ್ಳುವು
ದಕ್ಕೆ ಹೊರಡು॥೪೪॥ವಿವಾಹದ ಶುಭವಸ್ತುಗಳಿಂದ ಕೂಡಿದವನಾಗಿ ಆದಿ
ಬ್ಬಣದಲ್ಲಿರುವವರನ್ನು ಕಂಡು ಮರ್ಯಾದೆಯಿಂದ ಕರೆದುಕೊಂಡುಬಾ
ಎಂದು ಹೇಳಿದನು. ರಾಜರಿಗೆಲ್ಲ ರಾಜನಾದ ಕುಬೇರನು ಆಮಾತನ್ನು
ಕೇಳಿ ದೇವನಿಗೆ ನಮಸ್ಕರಿಸಿ, ಸರ್ವಾಲಂಕಾರಯುಕ್ತನಾಗಿ ॥ ೪೫ ॥
ಕನ್ನಡಿ ಕಲಶ ಅಕ್ಷತೆಗಳನ್ನು ಧರಿಸಿರುವ ಹಾವಿನಂತೆ ಉದ್ದವಾದ ಜಡೆ

ಭಿರಿವಚಂದ್ರಮಾಃ ॥ ೪೬ ॥ ವೃತೋದೇವೈರ್ಮುನೀಂದ್ರೈಶ್ಚ ಥ ಸಾಧ್ಯಕ್ಷೋಯುಯೌಮುದಾ॥ ತತೋದೇವಸಮೂಹಸ್ಥಾಂಶರಚ್ಚಂ ದ್ರನಿಭಾನನಾಂ ॥೪೭॥ ದೃಷ್ಟ್ವಾದೇವೀಂಜಯೇತ್ಯುಕ್ತ್ವಾನನಾ ಮಶಿರಸಾಭುವಿ ॥ ತಥೈವಮುನಿಮುಖ್ಯಾಂಶ್ಚ ಬ್ರಹ್ಮವಿಷ್ಣು ಮು ಖಾನ್ಸುರಾನ್ ॥ ೪೮ ॥ ಸ್ವಸ್ತೀತ್ಯುಕ್ತ್ವಾನಮಶ್ಚಕ್ರೇಸಾದರಂ ಸುರಸಂಸದಿ॥ಸ್ವಾಗತಂಪರ್ವತಶ್ರೇಷ್ಠ ಸದಾರಸುಖಮಾಗತಃ ॥೪೯॥ ಇತಿಸಂಮಾನಿತಾಸ್ತೇನಸರ್ವೇಮುಮುದಿರೇಸುರಾಃ । ತತಃಕುಬೇರ ಮಹಿಷೀಚಿತ್ರಾದೇವೀತ್ವರಾನ್ವಿತಾ ॥ ೫೦ ॥ ಸ್ತ್ರೀಭಿಃಪರಿವೃತಾಹ ರ್ಷಂಕುಂಕುಮೈಃಕುಸುಮಾಕ್ಷತೈಃ ॥ ಅನರ್ಚ್ಯಗಿರಿಜಾಂಪಶ್ಚಾದ್ರ

ಗಳೆಲ್ಲ ಸ್ತ್ರೀಯರುಗಳಿಂದ ಕೂಡಿದವನಾಗಿ, ನಕ್ಷತ್ರಗಳಿಂದ ಕೂಡಿರುವ ಚಂದ್ರನಂತೆ ಕಾಣಿಸಿಕೊಂಡನು॥೪೬॥ಇಂಥಾ ಕುಬೇರನು ದೇವತೆಗಳಿಂದ ಲೂ ಮುನಿಗಳಿಂದಲೂಸಹಿತನಾಗಿ ಸಂತೋಷದಿಂದ ನಡೆದನು. ಆಮೇ ಲೆ ದೇವಸಮೂಹದ ಮಧ್ಯದಲ್ಲಿರುವ ಶರತ್ಕಾಲದ ಚಂದ್ರನಿಗೆ ಸದೃಶವಾದ ಮುಖವುಳ್ಳ॥೪೭॥ಆಗಿರಿಜಾದೇವಿಯುನ್ನು ಕಂಡು ಜಯುಜಯುವೆಂದು ಸ್ತು ತಿಸಿ ನಮಸ್ಕಾರವನ್ನು ಮಾಡಿದನು. ಹಾಗೆಯೇ ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳನ್ನೂ ಮುನಿಶ್ರೇಷ್ಠರನ್ನೂ ನಮಸ್ಕರಿಸಿದನು॥೪೮॥ ಮಂಗಲವೇಯೆಂದು ಹೇಳಿ ಪ್ರೀತಿಪೂರ್ವಕವಾಗಿ ದೇವಸಭೆಯಲ್ಲಿ ನಮಸ್ಕರಿಸಿದನು. ಅದು ಹೇಗೆಂದರೆ, ಎಲೈ ಪರ್ವತರಾಜನೆ, ಪತ್ನೀಸ ಮೇತನಾಗಿ ಸುಖವಾಗಿ ಬಂದೆಯಾ, ಮಂಗಲವೇ ॥ ೪೯ ॥ ಈಪ್ರಕಾರ ವಾಗಿ ಕುಬೇರನಿಂದ ಮಾನಿತರಾದ ಸಮಸ್ತ ದೇವತೆಗಳೂ ಸಂತೋ ಷಿಸಿದರು. ಆಮೇಲೆ ಕುಬೇರನ ಪತ್ನಿಯಾದ ಚಿತ್ರಾದೇವಿಯೂ ಜಾಗ್ರತೆಯುಳ್ಳವಳಾಗಿ ॥ ೫೦ ॥ ಸುವಾಸಿನಿಯರಿಂದ ಕೂಡಿಕೊಂಡು ಸಂತೋಷದಿಂದ, ಅರಿಸಿನ, ಕುಂಕುಮ, ಅಕ್ಷತೆ, ಹೂಗಳಿಂದ, ಮೊ ದಲು ಗಿರಿಜಾದೇವಿಯುನ್ನೂ, ಆಮೇಲೆ ಲಕ್ಷ್ಮೀದೇವಿಯುನ್ನೂ ಸರ

ಮಾಂವಾಣೀಮರುಂಧತೀಂ ॥ ೫೧ ॥ ಮೇನಕಾಮಿತರಾಸ್ಸರ್ವಾ
ಮಾನಯಾಮಾಸಸಾದರಂ॥ತತೋಲಾಜಾಕ್ಷತೈಃಪುಷ್ಪೈರುಭಯೋ
ರ್ವರ್ಗಯೋಸ್ಥಿತಾಃ ॥ ೫೨ । ಮುದಾಸಿಷಿಚಿರೇಸರ್ವೇಪರಸ್ಪರ
ಕುತೂಹಲಾಃ ॥ ತತಃಪ್ರಣೇದಿರೇತೂರ್ಯಸ್ವನಾಸ್ಸಂಗೀತಶೋಭಿ
ತಾಃ ॥ ೫೩ ॥ ಮುನೀನಾಂವೇದಘೋಷೇಣಯುಯುಜಾತೇಉಭಾ
ವಪಿ ॥ ತತಸ್ಸರ್ವೇಸುರಗಣಾಃಸದಾರಾಮುನಯಶ್ಶುಭಾಂ ॥೫೪॥
ಪಾಣಿಗ್ರಹೋತ್ಸವಕೃತಾಂಸಭಾಂವಿವಿಶಿರೇಮುದಾ॥ ಸೂಪವಿಷ್ಟಾ
ಮಹೇಶೇನಆಸ್ವಾನೀತಾಸ್ವಾಸನೇಷುಚ॥೫೫॥ ಸನ್ನಿವೇಶ್ಯಾದ್ರಿಜಾಂ
ದೇವೀಂಶೋಭಿತೇರತ್ನಮಂಟಪೇ॥ ಪಾಣಿಗ್ರಹೋತ್ಸವಂಕರ್ತುಮು
ದ್ಯುಕ್ತಾಮುನಯಸ್ಸುರಾಃ ॥ ೫೬ ॥ ತತಃಪುರಂದರಶ್ಶಂಭುಂಪ್ರ
ಣಿಪತ್ಯವಚೋಽಬ್ರವೀತ್ ॥ ಸ್ವಸ್ತಿದೇವಸಮಾಗಚ್ಛವಿಶ್ವಕರ್ಮವಿನಿ

ಸ್ವತೀದೇವಿಯನ್ನೂ, ಅರುಂಧತೀದೇವಿಯನ್ನೂ ಪೂಜಿಸಿದಳು ॥೫೧॥
ಆಮೇಲೆ ಮೇನಕಾದೇವಿಯನ್ನೂ ಉಳಿದ ಸಮಸ್ತ ಸುವಾಸಿನಿಯ
ರನ್ನೂ ಕುರಿತು ಪ್ರೀತಿಪೂರ್ವಕವಾಗಿ ಮನ್ನಿಸಿದಳು. ಅನಂತರ ಅವಳ
ಎರಡುಕಡೆಯಲ್ಲಿರುವ॥೫೨॥ ಸರ್ವರೂ ಸಂತೋಷದಿಂದ ಅನ್ಯೋನ್ಯಾನಂ
ದಯುಕ್ತರಾಗಿ ಅಕ್ಷತೆಗಳಿಂದಲೂ ಪುಷ್ಪಗಳಿಂದಲೂ ಎರಚಿದರು.
ಆಮೇಲೆ ಸಂಗೀತಶೋಭಿತಗಳಾದ ವಾದ್ಯಧ್ವನಿಗಳು ಮೊಳಗಿದವು॥೫೩॥
ಋಷಿಗಳ ವೇದಧ್ವನಿಯಿಂದ ಎರಡುಕಡೆಯವರೂ ಕೂಡಿದರು. ಆ
ಮೇಲೆ ಸಮಸ್ತ ದೇವಸಮೂಹಗಳೂ ಋಷಿಗಳೂ ಶೋಭನವಾದ॥೫೪॥
ವಿವಾಹೋತ್ಸವಕ್ಕೆ ಸಿದ್ಧವಾದ ಸಭೆಯನ್ನು ಪ್ರೇಮದಿಂದ ಪ್ರವೇಶಿಸಿದರು.
ಶ್ರೀ ಭಗವಂತನಿಂದ ಕರಸಿಕೊಂಡವರಾಗಿ ಉತ್ತಮವಾದ ಪೀಠಗಳಲ್ಲಿ
ಕುಳ್ಳಿರಿಸಲ್ಪಟ್ಟರು ॥ ೫೫ ॥ ಅಲಂಕೃತವಾದ ಮಣಿಮಯ ಮಂಟಪ
ದಲ್ಲಿ ಶ್ರೀಗಿರಿಜಾದೇವಿಯನ್ನು ಪ್ರವೇಶಿಸಿ ಋಷಿಗಳೂ ದೇವತೆಗಳೂ ವಿವಾ
ಹೋತ್ಸವವನ್ನು ಮಾಡಲು ಪ್ರಾರಂಭಿಸಿದರು ॥ ೫೬ ॥ ಆನಂತರ ದೇವೇಂ

ರ್ಮಿತಂ ॥ ೫೭ ॥ ವಿವಾಹಮಂಟಪಂರಮ್ಯಂಸ್ವರ್ಣಾಸನಸಮ
ನ್ವಿತಂ ॥ ತಥಾಗಸ್ತ್ಯಾದಿಮುನಿಭಿಃಪ್ರಾರ್ಥಿತಃಕಲಶೇಶ್ವರಃ ॥೫೮॥
ಸಹಸ್ರಾಕ್ಷಕರೇದೇವೋಮುದ್ರಿಕಾಂಗುಲಿಶೋಭಿತಂ ॥ ನಿಧಾಯ
ಪಾಣಿಕಮಲಂನೂಪುರಾದ್ಯೈರಲಂಕೃತಃ ॥ ೫೯ ॥ ತತೋ
ಧನಪತಿರ್ದೇವಮುಕ್ತಾಹಾರೈಸ್ಸುಶೋಭನೈಃ ॥ ಕುಂಡಲಾಭ್ಯಾಂ
ಸುರೂಪಾಭ್ಯಾಂಕಿರೀಟೇನಾರ್ಕವರ್ಚಸಾ ॥ ೬೦ ॥ ಸೋಪ್ಯುಪ
ಹ್ಯೈವದೇವೇಶಮಲಂಚಕ್ರೇತ್ವರಾನ್ವಿತಃ ॥ ಕೇಯೂರಕಾಂಚ್ಯಾಭರ
ಣ್ಯೈಸ್ಸಕಲೈರ್ನೂಪುರಾದಿಭಿಃ ॥ ೬೧ ॥ ವೈವಾಹ್ಯೈಶ್ಚಂದ್ರಕಲಯಾ
ಸಂಯುತಃಕಲಶೇಶ್ವರಃ ॥ ತ್ಯಕ್ತ್ವೋದಯಾಚಲಂಭಾನುರ್ಯಥಾ
ಭಾಸಾಸಮಾಯಯೌ ॥ ೬೨ ॥ ತಥಾಸಿಂಹಾಸನಂತ್ಯಕ್ತ್ವಾ

ದ್ರನು ಶ್ರೀ ಭಗವಂತನನ್ನು ನಮಸ್ಕರಿಸಿ ಈ ಮಾತನ್ನು ಹೇಳಿದನು-ಎಲೈ ದೇವನೇ ಮಂಗಲವು ಆಗಲಿ. ವಿಶ್ವಕರ್ಮನಿಂದ ರಚಿತವಾದ ॥ ೫೭ ॥ ಸ್ವರ್ಣಪೀಠದಿಂದ ಕೂಡಿದ ರಮ್ಯವಾದ ವಿವಾಹಮಂಟಪವನ್ನು ಕುರಿತು ದಯಮಾಡು. ಹಾಗೆ ಅಗಸ್ತ್ಯ ಮೊದಲಾದ ಋಷಿಗಳಿಂದ ಪ್ರಾರ್ಥಿಸಿ ಕೊಂಡ ಶ್ರೀ ಕಲಶೇಶ್ವರನು ॥ ೫೮ ॥ ದೇವೇಂದ್ರನ ಕೈಯಲ್ಲಿ ಮುದ್ರೆ ಉಂಗುರದಿಂದ ಶೋಭಿಸುವ ತನ್ನ ಕರಪದ್ಮವನ್ನು ಇಟ್ಟು ಕೊಂಡು ಕಟಕಾದಿಗಳಿಂದ ಅಲಂಕೃತನಾದನು ॥ ೫೯ ॥ ಆಕ್ಷಣವೆ ಕುಬೇರನು ರಮಣೀಯಗಳಾದ ಮುತ್ತಿನಸರಗಳಿಂದಲೂ ಉತ್ತಮಗ ಳಾದ ಕುಂಡಲಗಳಿಂದಲೂ ಸೂರ್ಯನಂತಿರುವ ಕಿರೀಟದಿಂದಲೂ॥೬೦॥ ಮುಂಡಾಸಿನಿಂದ ಸಹಿತವಾಗಿಯೇ ಜಾಗ್ರತನಾಗಿ ಭುಜಕೀರ್ತಿಗಳಿಂದ ಲೂ ಡಾಬು ಮೊದಲಾದ ಆಭರಣಗಳಿಂದಲೂ ಪಾದಕಟಕಾದಿಗಳಿಂದಲೂ ಅಲಂಕರಿಸಿದನು ॥೬೧॥ ವಿವಾಹಕ್ಕೆ ಯೋಗ್ಯಗಳಾದನೇಪಥ್ಯಗಳಿಂದಲೂ ಚಂದ್ರಾರ್ಧದಿಂದಲೂ ಅಲಂಕೃತನಾದ ಶ್ರೀಕಲಶೇಶ್ವರನು ಸೂರ್ಯ ದೇವನು ಉದಯಾದ್ರಿಯನ್ನು ಬಿಟ್ಟು ಪ್ರಭೆಯಿಂದ ಹೇಗೆ ಬರುವ ನೋ ॥ ೬೨ ॥ ಹಾಗೆ ಕೂತಿರುವ ಸಿಂಹಾಸನವನ್ನು ಬಿಟ್ಟು ಶ್ರೀ ಕಲಶೇ

ಹ್ಮಾಯಯಯೌಕಲಶೇಶ್ವರಃ ॥ ಮುನಯಃಸ್ವಸ್ತಿವಚನಮೂಚುರ್ದೇವಪುರಸ್ಸರಾಃ ॥ ೬೩ ॥ ಜಯೇತಿಸಕಲಾದೇವಾಃಪುರತೋನಂದಿಕೇಶ್ವರಃ॥ಸ್ವರ್ಣವೇತ್ರಧರಸ್ತೂರ್ಣಂಪೀಥೀವೀಥೀತಿಚಾಬ್ರವೀತ್॥೬೪॥ ನೃತ್ಯದ್ಭಿರಪ್ಸರೋಭಿಶ್ಚಭೃಂಗೀನಾಟ್ಯೇನಸಾದರಂ॥ ದಕ್ಷಿಣೇಭಾರತೀನಾಥೋವಾಮೇವಿಷ್ಣುಸ್ಸುರೇಶ್ವರಃ॥೬೫॥ ಇತ್ಥಂಲೀಲಾವಿನೋದೇನವಿವಾಹೋತ್ಸವಶೋಭಿತಃ ॥ ಮಂಟಪಂಸ್ವರ್ಣರಚಿತಂರತ್ನಪೀಠಾನ್ವಿತಂಪಭುಃ ॥ ೬೬ ॥ ಪಿವೇಶಮುನಿನಿರ್ದಿಷ್ಟಮಾರ್ಗೇಣಸಮಹೇಶ್ವರಃ ॥ ಉಪವಿಶ್ಯಾಸನೇಶುಭ್ರೇರೇಜೇದೇವಸಭಾಪತಿಃ ॥೬೭॥ ತದಾವ್ಯಾಸಃಸಮುತ್ಥಾಯವಿಷ್ಣುಬ್ರಹ್ಮಾದಿಜೋದಿತಃ ॥ ಶಿಷ್ಯೇಣಯಾಜ್ಞವಲ್ಕ್ಯೇನಗೌತಮಾದಿಭಿರನ್ವಿತಃ ॥೬೮॥ ಪ್ರವಿಶ್ಯಮಂಟ

ಶ್ವರನು ತೆರಳಿದನು. ದೇವತೆಗಳೇ ಮೊದಲಾದ ಋಷಿಗಳು ಆಗ ಸ್ವಸ್ತಿವಾಚನೆಯನ್ನು ಹೇಳಿದರು॥೬೩॥ಸಮಸ್ತ ದೇವತೆಗಳಿಗೂ ಜಯವೆಂದು ಮುಂದುಗಡೆಯಲ್ಲಿ ಚಿನ್ನದ ಬೆತವನ್ನು ಹಿಡಿದ ನಂದಿಕೇಶ್ವರನು ವರಾಕನ್ನು ಹೇಳುತ್ತ ಮಾರ್ಗವನ್ನು ಬಿಡಿಸುತ್ತ ನಡದನು ॥ ೬೪ ॥ ಹೀಗೆ ಶ್ರೀಭಗವಂತನು ಬರುವಾಗ ನಾಟ್ಯಮಾಡುವ ಅಪ್ಸರಸ್ತ್ರೀಯರುಗಳಿಂದ ಭೃಂಗಿಯು ಪ್ರೀತಿಪೂರ್ವಕವಾಗಿ ನಟಿಸಿದನು. ಬಲಭಾಗದಲ್ಲಿ ಬ್ರಹ್ಮದೇವನೂ ಎಡಭಾಗದಲ್ಲಿ ಸುರೇಶನಾದ ವಿಷ್ಣುವೂ ಇದ್ದರು. ॥ ೬೫ ॥ ಈಪ್ರಕಾರವಾದ ವಿಲಾಸದಿಂದ ವಿವಾಹೋತ್ಸವಗಳಿಂದ ಶೋಭಿತನಾದ ಶ್ರೀಭಗವಂತನು ಮಣಿಪೀಠಗಳಿಂದ ಕೂಡಿದ ವಿವಾಹಮಂಟಪವನ್ನು ॥ ೬೬ ॥ ಋಷಿಗಳು ತೋರಿಸಿದ ಮಾರ್ಗದಿಂದ ಪ್ರವೇಶಿಸಿದನು. ಶ್ರೀ ಕಲಶೇಶ್ವರನು ಶುಭ್ರವಾದ ಆ ಪೀಠದಲ್ಲಿ ಸರ್ವ ದೇವಸಭಾಪತಿಯಾಗಿ ಕೂತುಕೊಂಡು ಪ್ರಕಾಶಿಸಿದನು. ಆಗ್ಯೆ ಶ್ರೀ ಮಹಾವಿಷ್ಣುವು, ಬ್ರಹ್ಮದೇವರಿಂದ ಪ್ರೇರಿತನಾದ ವೇದವ್ಯಾಸ ಮಹರ್ಷೀಶ್ವರನು ॥೬೭॥ ಶಿಷ್ಯನಾದ ಯಾಜ್ಞವಲ್ಕ್ಯನಿಂದಲೂ ಗೌತಮ ಋಷಿಗಳಿಂದ ಕೂಡಿದವನಾಗಿ ಮಂಟಪವನ್ನು ಪ್ರವೇಶ ಮಾಡಿ ಶ್ರೀ ಕಲಶೇಶ್ವರನಿಗೆ ವೇದೋಕ್ತವಾದ ॥ ೬೮ ॥ ಪುಣ್ಯಾಹನಾಂದೀಸಹಿತವಾದ

ಪಂಶಂಭೋರ್ವೈವಾಹ್ಯಂಶ್ರುತಿಚೋದಿತಂ ॥ ಕರ್ತುಂಪ್ರಚಕ್ರಮೇಹ
ರ್ಷಂನಾಂದೀಪುಣ್ಯಾಹಸಂಯುತಂ ॥ ೬೯ ॥ ಲೋಪಾಮುದ್ರಾ
ನ್ವಿತೋಗಸ್ತ್ಯಃಕಲಶೇಶಂಸಮಾಶ್ರಿತಃ ॥ ಹಿಮವಾನ್ಪರ್ವತಶ್ರೇ
ಷ್ಠಂಮೇನಕಾಭಾರ್ಯಯಾಸಹಾ ॥ ೭೦ ॥ ಸಬಂಧುರಗಮ
ತ್ತತ್ರಯತ್ರದೇವೋಮಹೇಶ್ವರಃ ॥ ಪುರೋಹಿತಮುವಾಚಾಥಗಾಲ
ವಂಮುನಿಪುಂಗವಂ ॥ ೭೧ ॥ ಕುರುಕಲ್ಯಾಣವಿಭವಂಯಥೋಕ್ತ
ಮೃಷಿಭಿರ್ಮುನೇ॥ ತಥೇತ್ಯುಕ್ತ್ವಾಸ್ವರ್ಣಕುಂಭಂಮಂತ್ರಪೂತಜ
ಲಾನ್ವಿತಂ ॥ ೭೨ ॥ ಸರತ್ನಪಲ್ಲವಯುತಂಕುಸುಮಾಕ್ಷತಸಂ
ಯುತಂ ॥ ಮಂತ್ರಜ್ಞೋಮಂತ್ರಯಾಮಾಸದರ್ಭಪಾಣಿರುದಾರ
ಧೀಃ ॥ ೭೩ ॥ ತಥಾವ್ಯಾಸೋಪಿಭಗವಾನ್ಗಂಧಪುಷ್ಪಾಕ್ಷತಾದಿಭಿಃ॥

ವಿವಾಹಕಾರ್ಯವನ್ನು ಹರುಷವದಿಸೆಯಿಂದ ಮಾಡಲಾರಂಭಿಸಿದನು.
ಆಗ ಲೋಪಾಮುದ್ರೆಯಿಂದ ಕೂಡಿದ ಅಗಸ್ತ್ಯನು ಶ್ರೀ ಕಲಶೇಶನನ್ನು
ಆಶ್ರಯಿಸಿಕೊಂಡು ವರಪಕ್ಷದವನಾಗಿದ್ದನು ॥ ೬೯ ॥ ಹಿಮವಂತನೆಂಬ
ಪರ್ವತರಾಜನು ಪತ್ನಿಯಾದ ಮೇನಕಾದೇವಿಯಿಂದ ಕೂಡಿ ಬಂಧುಸ
ಹಿತನಾಗಿ ಎಲ್ಲಿ ಶ್ರೀ ಕಲಶೇಶ್ವರನು ಸನ್ನಿಹಿತನಾಗಿದ್ದನೋ ಅಲ್ಲಿಗೆ
ಬಂದನು ॥ ೭೦ ॥ ಆಮೇಲೆ ತನ್ನ ಪುರೋಹಿತನಾದ ಮುನಿಶ್ರೇಷ್ಠ
ನಾದ ಗಾಲವನನ್ನು ಕುರಿತು ಎಲೈ ಋಷಿಯೆ, ಮುನಿಗಳಿಂದ ಹೇಗೆ
ಹೇಳಲ್ಪಟ್ಟದೆಯೋ ಹಾಗೆ ವಿವಾಹದ ವೈಭವವನ್ನು ಮಾಡು ಎಂದನು ॥
॥ ೭೧ ॥ ಹಾಗೆಯೆ ಆಗಲಿ ಎಂದು ಮಂತ್ರಗಳಿಂದ ಪೂತವಾದ ನೀರಿನಿಂದ
ತುಂಬಿದ ಪಂಚರತ್ನಗಳಿಂದ ಕೂಡಿದ, ಪಂಚಪಲ್ಲವಗಳಿಂದ ಸಹಿತವಾದ
ಪುಷ್ಪಾಕ್ಷತೆಗಳಿಂದ ಯುಕ್ತವಾದ ಸುವರ್ಣಕಲಶವನ್ನು ॥೭೨ ॥ ಮಂ
ತ್ರಗಳನ್ನು ಬಲ್ಲ ಗಾಲವನು ದರ್ಭೆ ಪವಿತ್ರವು ಕೈಯಲ್ಲಿರುವವನಾಗಿ
ಅಭಿಮಂತ್ರಿಸಿದನು. ಹಾಗೆಯೇ ವೇದವ್ಯಾಸಋಷಿಯೂ ಕೂಡ ಗಂಧ
ಪುಷ್ಪಾಕ್ಷತೆಗಳಿಂದಲೂ ॥ ೭೩ ॥ ರಂಗವಲ್ಲಿ ಮೊದಲಾದ ಪಂಚಣಿಗೆಗ
ಳಿಂದಲೂ ಹೋಮಕುಂಡವನ್ನು ಸಂಸ್ಕರಿಸಿ ಸುವರ್ಣಮಯವಾದ
ಪಾದ್ಯಾರ್ಘ್ಯ ಪಾತ್ರಗಳಿಂದಲೂ ಮಧುಪರ್ಕದ್ರವ್ಯಗಳಿಂದಲೂ ಕೂಡಿ

ರಂಗವಲ್ಯಾದಿಭಿಃಪಂಚವರ್ಣೈಸ್ಸಂಸ್ಕೃತ್ಯವೇದಿಕಾಂ ॥ ೨೪ ॥ ಪಾದಾರ್ಘ್ಯಪಾತ್ರೈಃಸೌವರ್ಣೈರ್ಮಧುಪರ್ಕಾನ್ವಿತೈಸ್ತದಾ ॥ ಲಾಜಪೂರ್ಣೈಸ್ತಥಾಪಾತ್ರೈರಕ್ಷತೈರಪಿಸಂಸ್ಕೃತೈಃ ॥ ೨೫ ॥ ಅಂಕುರಾಢ್ಯೈಶ್ಶರಾವೈಶ್ಚಧೂಪಪಾತ್ರೈಸ್ಸಧೂಪಕೈಃ॥ ನೀರಾಜನೀಯಸಂಭಾರೈಃಸಕಲೈರನ್ವಿತೋಮುನಿಃ ॥ ೨೬ ॥ ಮಾಂಗಲ್ಯದೇವತಾಪೂಜಾದ್ರವ್ಯೈಃಸೌವರ್ಣಕೈಸ್ಸಹ ॥ ಪುಣ್ಯಾಹಂವಾಚಯಿತ್ವಾಥನಾಂದೀಶ್ರಾದ್ಧಂಸಮಾಕೃತಃ ॥ ೨೭ ॥ ಕೃತ್ವೇವಗಣಯಾಂಚಕ್ರೇಹಿಮವಚ್ಛೋದಿತೋಮುನಿಃ॥ ದ್ರವ್ಯಾಣಿಪಾಂಬಹಾರ್ಣಿಸಂಪ್ರದಾಯಾನುಸಾರತಃ ॥ ೨೮ ॥ ಗಣಯಿತ್ವಾರ್ಪಯಾಮಾಸಗಾಲವಃಶಂಭವೇಮುದಾ ॥ ತತಸ್ತುಮಧುಪರ್ಕೇಣವಿಧಿನಾಕಲಶೇಶ್ವರೇ ॥ ೨೯ ॥ ದತ್ವಾವಿಷ್ಟರಂಪಾದಪದ್ಮೇಪ್ರಕ್ಷಾಳ್ಯವಾರಿಣಾ॥ ದಧ್ರೇದ್ರಿಃಶಿರಸಾ

ರುವ ದ್ರವ್ಯಗಳಿಂದ ಆಗಲಿ ॥೨೪॥ ಅರಳು ತುಂಬಿದ ಕಲಸಿದ ಅಕ್ಷತೆಗಳ ಪಾತ್ರೆಗಳಿಂದಲೂ ಅಂಕುರಗಳನ್ನಿಟ್ಟಿರುವ ಶ್ರಾವೆಗಳಿಂದಲೂ ಧೂಪಯುಕ್ತಗಳಾದ ಧೂಪಾರ್ತಿಗಳಿಂದಲೂ ॥ ೨೫ ॥ ಸಮಸ್ತಗಳಾದ ಆರ್ತಿಯ ಸಂಭಾರಗಳಿಂದಲೂ ಮಂಗಲದ್ರವ್ಯ ಪೂಜಾದ್ರವ್ಯಗಳುಳ್ಳ ಸುವರ್ಣಪಾತ್ರೆಗಳಿಂದಲೂ ಕೂಡಿಕೊಂಡು ವ್ಯಾಸಋಷೀಶ್ವರನು ॥ ೨೬ ॥ ಬ್ರಾಹ್ಮಣರಿಂದ ಪುಣ್ಯಾಹವಾಚನೆಯನ್ನು ಹೇಳಿಸಿ ಮಾತೃಕಾಪೂಜೆಯಿಂದ ಸಹಿತವಾದ ನಾಂದೀಕರ್ಮವನ್ನು ಮಾಡಿ ಆಗಲೇ ಪರ್ವತರಾಜನಿಂದ ಪ್ರೇರಿತನಾದ ವೇದವ್ಯಾಸನು, ಗಾಲವನು ಪೂರ್ವಸಂಪ್ರದಾಯಪ್ರಕಾರ ಬಳಿವಳಿಯ ದ್ರವ್ಯಗಳನ್ನು ಕೂಗಿ ಒಕ್ಕಣಿಸಿದನು. ಹೀಗೆ ಒಕ್ಕಣಿಸಿ ಸಂತೋಷದಿಂದ ಶ್ರೀ ಕಲಶೇಶ್ವರನಿಗೋಸ್ಕರ ಸಮರ್ಪಿಸಿದನು ॥ ॥ ೨೭ ॥ ೨೮ ॥ ಆಮೇಲೆ ಮಧುಪರ್ಕವೆಂಬ ವಿಧಿಯಿಂದ ಶ್ರೀ ಕಲಶೇಶ್ವರಸ್ವಾಮಿಗೆ ವಿಷ್ಟರವನ್ನು ಕೊಟ್ಟು ಶ್ರೀ ಪಾದಪದ್ಮಗಳನ್ನು ಪಾದ್ಯೋದಕದಿಂದ ತೊಳೆದು ॥ ೨೯ ॥ ಆ ಚರಣಕಮಲಾಂಚಿತವಾದ ತೀರ್ಥವನ್ನು ಪರ್ವತರಾಜನು ಶಿರಸ್ಸಿನಿಂದ ಧರಿಸಿದನು. ಆಗ ತನ್ನ

ತೀರ್ಥಂತತ್ಪಾದಕಮಲಾಚಿತಂ ॥ ೮೦ ॥ ಪೂತಾತ್ಮಾನಂತದಾ ಮೇನೇದಾರಬಂಧುಗಣಾನ್ವಿತಂ ॥ ಅರ್ಘ್ಯಾದ್ಯೈರಥಸಂಪೂಜ್ಯದತ್ವಾಗಾಂಶಂಭವೇದ್ರಿರಾಟ್ ॥ ೮೧ ॥ ಅಖಿಲೈರುಪಚಾರೈಶ್ಚಭಕ್ತಿಯುಕ್ತೇನಚೇತಸಾ॥ ಸಂಪೂಜ್ಯಾಭರಣೈರನ್ಯೈರ್ನೀರಾಜ್ಯಬಹುದೀಪಕೈಃ ॥೮೨॥ ಪರಮಾತ್ಮನ್ಪ್ರಸೀದೇಶನಮಶ್ಚಕ್ರೇಪುನಃಪುನಃ ॥ ಮಧುಪರ್ಕಂಸಮಾಪ್ಯೈವಂಮುನಯಸ್ತ್ವರಾನ್ವಿತಾಃ ॥ ೮೩ ॥ ಕನ್ಯಾಂಚವರಯಾಮಾಸುಶ್ಚತ್ವಾರಃಪಿತೃಪಂಚಮಾಃ ॥ ಹರಿದ್ರಾಮೂಲಪೂಗೈಶ್ಚನಾಗವಲ್ಲ್ಯಕ್ಷತಾದಿಭಿಃ ॥ ೮೪ ॥ ತತೋಽಷ್ಟದಳಪದ್ಮೇಚಶಾಲೀತಂಡುಲಪೂರಿತೇ ॥ ಸಂಸ್ಥಾಪ್ಯದಂಪತೀದೇವೌಶಿವೌ

ಪತ್ನೀಬಾಂಧವ ಸಹಿತನಾದ ತನ್ನನ್ನು ಪರಿಶುದ್ಧನಾದೆನೆಂದು ತಿಳಿದನು ॥ ೮೦ ॥ ಅನಂತರ ಪರ್ವತರಾಜನು ಅರ್ಘ್ಯಾದಿಗಳಿಂದ ಪೂಜಿಸಿ ಶ್ರೀ ಕಲಶೇಶ್ವರ ಸ್ವಾಮಿಗೋಸ್ಕರ ಗೋವನ್ನು ಕೊಟ್ಟು ಭಕ್ತಿಪೂರ್ವಕವಾದ ಮನಸ್ಸಿನಿಂದಲೂ ಸರ್ವೋಪಚಾರಗಳಿಂದಲೂ ಸಕಲಾಭರಣಗಳಿಂದಲೂ ಪೂಜಿಸಿ ವಿಧವಿಧಗಳಾದ ಆರ್ತಿಗಳಿಂದ ಸೇವಿಸಿ ॥ ೮೧ ॥ ಎಲೈ ಪರಮಾತ್ಮನೆ ಪ್ರಸನ್ನನಾಗು ಎಂದು ಅಡಿಗಡಿಗೆ ನಮಸ್ಕರಿಸಿದನು. ಈಪ್ರಕಾರವಾಗಿ ಋಷಿಗಳು ಮಧುಪರ್ಕಪೂಜೆಯನ್ನು ಮುಗಿಸಿ ಜಾಗ್ರತರಾಗಿ॥೮೨॥ ಆಮೇಲೆ ಅರಿಸಿನದ ಬೇರುಗಳಿಂದಲೂ ಉಂಡಡಿಕೆಗಳಿಂದಲೂ ಎಲೆಗಳಿಂದಲೂ ಅಕ್ಷತೆ ಮೊದಲಾದ ದ್ರವ್ಯಗಳಿಂದಲೂ ಕನ್ಯೆಯನ್ನುವರಿಸುವುದು ಎಂಬ ಕನ್ಯಾವರಣೆಯನ್ನು ವಧುವಿನ ತಂದೆಯೊಡನೆ ಐದುಮಂದಿ ಬ್ರಾಹ್ಮಣರು ಮಾಡಿದರು ॥ ೮೩ ॥ ಮತ್ತೆ ವ್ಯಾಸಋಷಿಯು ಸಣ್ಣಕ್ಕಿಗಳಿಂದ ತುಂಬಿದ ಅಷ್ಟದಳ ಪದ್ಮಗಳಲ್ಲಿ ಮಂಗಲಸ್ವರೂಪರಾದ ಅರ್ಧಚಂದ್ರನಿಂದ ಭೂಷಿತರಾದ ಶ್ರೀಪಾರ್ವತೀಪರಮೇಶ್ವರರನ್ನು, ಅಂತರಪಟದ ಮಧ್ಯೇ ನಿಲ್ಲಿಸಿ ॥ ೮೪ ॥ ಆಗ ಜೋಯಿಸನಾದ ಬೃಹಸ್ಪತ್ಯಾಚಾರ್ಯನನ್ನೂ ಶುಕ್ರಾಚಾರ್ಯನನ್ನೂ ಕುರಿತು ಪ್ರೇಮದಿಂದ ಸೂಚಿಸಿದನು. ಆಕ್ಷಣವೇ ವೇದಪಾರಂಗತರಾದ ಈ ಇಬ್ಬರು ಜೋ

ಶ್ರೀಚಂದ್ರಶೇಖರೌ ॥ ೮೫ ॥ ವ್ಯಾಸಃಸದಾಹದೈವಜ್ಞಂಗುರುಂಚೋಶನಸಂಮುದಾ ॥ ಅಥೋತ್ಥಿತೌಸಂಭ್ರಮೇಣದೈವಜ್ಞೌಶ್ರುತಿಪಾರಗೌ ॥ ೮೬ ॥ ವಾಚಸ್ಪತಿಃಕವಿಶ್ಚೋಭೌಮಂಗಲಾಯಮಹೇಶಿತುಃ ॥ ಕದಳೀನಾಳಿಕೇರಾದ್ಯೈಃಕೃತಾಂಜಲಿಪುಟೌತದಾ ॥ ೮೭ ॥ ಮಧುರಂಸುಸ್ವರೇಣೋಭಾವೂಚತುರ್ಮಂಗಲಾಷ್ಟಕಂ॥ ಸರ್ವೋಪನಿಷದಾಂಸಾರರವೇದಾರ್ಥಪರಿಬೃಂಹಿತಂ ॥ ೮೮ ॥ ಶ್ರೀಮತ್ಕಲ್ಯಾಣಪತಯೇಭದ್ರಾತೀರನಿವಾಸಿನೇ॥ ಮಹತೇಪರಮೇಶಾಯಕಲಶೇಶಾಯಮಂಗಲಂ ॥ ೮೯ ॥ ಕುಂಭಜಸ್ತುತಿಹರ್ಷೀಸಲಿಂಗರೂಪಾ

ಯಿಸರು ಜಾಗ್ರತೆಯಿಂದ ಎದ್ದರು ॥ ೮೫ ॥ ಬೃಹಸ್ಪತ್ಯಾಚಾರ್ಯರು, ಶುಕ್ರಾಚಾರ್ಯರು, ಶ್ರೀ ಕಲಶೇಶ್ವರನಿಗೆ ಮಂಗಲವಾಗುವುದಕ್ಕೋಸ್ಕರ ತೆಂಗಿನಕಾಯಿ, ಬಾಳೆಹಣ್ಣು ಮೊದಲಾದ ದ್ರವ್ಯಗಳಿಂದ ಆಗ ಕರಾಂಜಲಿಬದ್ಧರಾಗಿ ॥ ೮೬ ॥ ಇಬ್ಬರೂ ಮಧುರವಾಗಿ ಒಳ್ಳೆ ಧ್ವನಿಯಿಂದ ವೇದಗಳ ಅರ್ಥಸಹಿತವಾದ ಉಪನಿಷತ್ತುಗಳ ಸಾರವಾದ ಮಂಗಲಾಷ್ಟಕವನ್ನು ಹೇಳಿದರು ॥೮೭॥ ಆ ಮಂಗಲಾಷ್ಟಕಸ್ವರೂಪವನ್ನು ಹೇಳುವವನು ಶುಭಗಳಾದ ಮಂಗಲಕರ್ಮಗಳಿಗೆ ಅಧಿಪತಿಯಾದ ತುಂಗಭದ್ರಾನದಿಯ ದಡದಲ್ಲಿ ನೆಲಸಿರುವ ಸರ್ವೋತ್ತಮನಾದ ಶ್ರೀ ಕಲಶೇಶ್ವರನಿಗೋಸ್ಕರ ಮಂಗಲವು ಆಗಲಿಯೆಂದು ಹರಸುತ್ತ ಎಚ್ಚರಿಕೆಗೋಸ್ಕರ ಸುಮುಹುರ್ತಃ ಸಾವಧಾನಯೆಂದು ಜೋಯಿಸರು ಹೇಳುತ್ತಲೆ ಆ ಕಾರ್ಯಾಧ್ಯಕ್ಷರೆಲ್ಲರೂ ಸುಲಗ್ನಂ ಸಾವಧಾನವೆಂದು ಒಪ್ಪಿದರು ॥ ೮೮ ॥ ಅಗಸ್ತ್ಯಮುನಿಯು ಸ್ತೋತ್ರದಿಂದುಂಟಾದ ಪ್ರೇಮದಿಂದ ಲಿಂಗರೂಪನಾಗಿ ಆವಿರ್ಭವಿಸಿದ ಸರ್ವರಿಗೂ ಜ್ಞಾನಾದಿ ಸೌಖ್ಯವನ್ನು ಕೊಡುವ ಸಾಮಾನ್ಯ ಸಮಭೂಮಿಯಲ್ಲಿರುವ ಕೈಲಾಸಪರ್ವತದಲ್ಲಿ ವಸತಿಯಾದ ಶ್ರೀ ಕಲಶೇಶ್ವರನಿಗೋಸ್ಕರ ಮಂಗಲವು ಆಗಲಿ ॥ ೮೯ ॥ ಶರದೃತುವಿನಲ್ಲಿ ನಡೆಯುತಕ್ಕ ವಿವಾಹೋತ್ಸವದ ಕಾಲದಲ್ಲಿ ಪತ್ನೀಸಹಿತನಾದ ಮಗನಾದ ಆ ವಿಘ್ನೇಶ್ವರನೆಂಬ

ಯಶಂಭವೇ॥ಭೂಕೈಲಾಸನಿವಾಸಾಯಕಲಶೇಶಾಯಮಂಗಲಂ॥೯೦॥ ಶರದ್ವಿವಾಹಸಮಯೇಸವಾರಂವಿಕಟಂಸ್ಮಿತಂ॥ ಸಂತೋಷಯಿತ್ವಾ ರಭತೇಕಲಶೇಶಾಯಮಂಗಲಂ ॥ ೯೧ ॥ ಬೋಧಯಿತ್ರೇಮುನೀಕ್ ದೇವೀನಿಶ್ಚಿತಾರ್ಥಯಶಂಭವೇ ॥ ಸಂಮಂತ್ರಾದ್ರಿಗರಾಪ್ರೀತಾಕಲಶೇ ಶಾಯಮಂಗಲಂ ॥ ೯೨ ॥ ಗುರುನಿರ್ದಿಷ್ಟಸಮಯೇದೇವಜಾ ಪಾಣಿಪಂಕಜಂ ॥ ಸಾಂಗುಷ್ಠಂಪ್ರಾಗ್ಗೃಹೀತ್ರೇಚಕಲಶೇಶಾಯ ಮಂಗಲಂ ॥ ೯೩ ॥ ಸರ್ವಮಂಗಲಯಾದೇವ್ಯಾಸಹಭದ್ರಾಸನಾಸಿ ನೇ ॥ ನೀರಾಜಿತಾಯಮುನಿಭಿಃಕಲಶೇಶಾಯಮಂಗಲಂ ॥ ೯೪ ॥ ವ್ಯಾಸಾದಿಭಿಃಸಂಸ್ತುತಾಯಹ್ಯಾಶೀರ್ಭಿಃಪರಮಾತ್ಮನೇ ॥ ವಿರಾಜ

ದೇವನನ್ನು ಅಷ್ಟದ್ರವ್ಯ ಪಂಚಕಜ್ಜಾಯಾದಿಗಳಿಂದ ಸಂತೋಷಪಡಿಸಿ ಕಾರ್ಯವನ್ನು ಪ್ರಾರಂಭಿಸಿದ ಶ್ರೀ ಕಲಶೇಶ್ವರನಿಗೋಸ್ಕರ ಮಂಗಲವು ಆಗಲಿ ॥ ೯೦ ॥ ಶ್ರೀಗಿರಿಜಾದೇವಿಯು ನಿಶ್ಚಿತಾರ್ಥಕ್ಕೋಸ್ಕರ ಶೌನಕಾ ದಿಮುನಿಗಳನ್ನು ಪ್ರೇರಿಸಿದ ಅದಕ್ಕನುಕೂಲಿಸಿದ ಪರ್ವತರಾಜನ ಮಾತಿ ನಿಂದ ಪ್ರಸನ್ನನಾದ ಶ್ರೀ ಕಲಶೇಶ್ವರನಿಗೋಸ್ಕರ ಮಂಗಲವು ಆಗ ಲಿ ॥ ೯೧ ॥ ಜೋಯಿಸರಾದ ಬೃಹಸ್ಪತ್ಯಾಚಾರ್ಯರು ಗೊತ್ತುಮಾ ಡಿದ ಮುಹೂರ್ತದಲ್ಲಿ ಅಥವಾ ಕನ್ಯಾಜನಕನು ನಿಶ್ಚಯಿಸಿದ ಕಾಲದಲ್ಲಿ ಮೇನಕಾದೇವಿಯ ಮಗಳಾದ ಪಾರ್ವತೀದೇವಿಯ ಪಾದಕಮಲವನ್ನು ಅಂಗುಷ್ಠದಿಂದ ಸಹಿತವಾದುದನ್ನು ಹಿಡದ ಶ್ರೀ ಕಲಶೇಶ್ವರನಿಗೆಮಂಗ ಲವು ಆಗಲಿ ॥ ೯೨ ॥ ಮಂಗಲಗೌರಿಯಾದ ಆ ದೇವಿಯಿಂದ ಸಹಿತ ನಾಗಿ ಹಸಮಣೆಯಲ್ಲಿ ಕುಳಿತಿರುವ ಮತ್ತು ಆಗ ಮುನಿಪತ್ನಿಗಳಿಂದ ಆರ್ತಿಯನ್ನು ಎತ್ತಿಸಿಕೊಳ್ಳುತ್ತಿರುವ ಶ್ರೀ ಕಲಶೇಶ್ವರನಿಗೆ ಮಂಗ ಲವು ಆಗಲಿ ॥ ೯೩ ॥ ಆ ಸಮಯದಲ್ಲಿ ವೇದವ್ಯಾಸ ಮೊದಲಾದ ಋಷಿ ಗಳಿಂದ ಆಶೀರ್ವಾದಗಳಿಂದ ಸ್ತುತಿಸಿಕೊಳ್ಳುತ್ತಿರುವ ಪರಮಾತ್ಮನಾಗಿ ಪರಮೇಶ್ವರನಾ ಪ್ರಕಾಶಿಸುತ್ತಿರುವ ಶ್ರೀ ಕಲಶೇಶ್ವರನಿಗೆ ಮಂಗಲವು ಆಗಲಿ ॥ ೯೪ ॥ ಸರ್ವಮಂಗಲಸ್ವರೂಪನಾದ ಮಹಾದೇವನಾದ ಭಜಿ

ಕ್ಷೇಮಂಕರಾಯಕಲಶೇಶಾಯಮಂಗಲಂ ॥ ೯೫ ॥ ಶಿವಭಕ್ತಿಪ್ರ
ದಂಚೈವಮಂಗಲಾಷ್ಟಕಮುತ್ತಮಂ ॥ ಪ್ರಾತಃಪಠೇತ್ಸದಾಸಾ
ಯಂತಸ್ಮೈಪ್ರೀತಸ್ಸುರೇಶ್ವರಃ ॥ ೯೬ ॥ ಸ್ವಪಾದಕಮಲಾಸ
ಕ್ತಭಕ್ತಿಮಿಷ್ಟಾರ್ಥದಾಯಿನೀಂ ॥ ದತ್ವಾಶ್ರೀಕಲಶೇಶೋಸೌಪರಿ
ಪಾತ್ಯನಿಶಂವಿಭುಃ ॥ ೯೭ ॥ ತತಃಶ್ರೀಗಿರಿಜಾದೇವೀಕರಪಂಕಜಲ
ಗ್ನಯಾ ॥ ಅಲಂಚಕ್ರೇಮಹಾದೇವಂಶ್ರೀಮತ್ಪಂಕಜಸುಸ್ರಜಾ ॥
॥ ೯೮ ॥ ವಿದ್ಯುತ್ಪ್ರಕಾಶಯಾದೇವಃರೇಜೇಶ್ರೀಕಲಶೇಶ್ವರಃ ॥
ಉದಯಾದ್ರಿಸ್ಥಿತಇವಪೂರ್ಣೇಂದುಃಪೂರ್ಣಿಮಾದಿನೇ ॥ ೯೯ ॥
ತದಾದುಂದುಭಯೋನೇದುಃಪುಷ್ಪವರ್ಷೋ ಮಹಾನಭೂತ್ ॥

ಸುವರಿಗೆ ಯಾವಾಗಲೂ ಶುಭವನ್ನೇ ಕೊಡುತ್ತಿರುವ ಕಲ್ಯಾಣವತ್ತನ
ವಾಸಿಯಾದ ಕಲಶಕ್ಷೇತ್ರಕ್ಕೆ ಒಡೆಯನಾದ ಶ್ರೀ ಕಲಶೇಶ್ವರನಿಗೆ ಮಂ
ಗಲವು ಆಗಲಿ ॥ ೯೫ ॥ ಈಪ್ರಕಾರವಾದ ಭಗವದ್ಭಕ್ತಿಯನ್ನು
ಕೊಡುವ ಉತ್ತಮವಾದ ಈ ಮಂಗಲಾಷ್ಟಕವನ್ನು ಯಾವನು
ಪ್ರಾತಃ ಸಾಯಂಕಾಲದಲ್ಲಿ ಯಾವಾಗಲೂ ಹೇಳುವನೋ ಅವನಿ
ಗೋಸ್ಕರ ಸಮಸ್ತ ದೇವತೆಗಳಿಗೂ ಶ್ರೇಷ್ಠನಾದ ಶ್ರೀ ಪರಮೇಶ್ವ
ರನು ಪ್ರೀತನಾಗುವನು ॥ ೯೬ ॥ ಮತ್ತು ತನ್ನ ಚರಣಕಮಲದಲ್ಲಿ
ವ್ಯಾಪಿಸಿದ ಇಷ್ಟಾರ್ಥದಾಯಕವಾದ ಭಕ್ತಿಯನ್ನು ಕೊಟ್ಟು ಸರ್ವ
ಸಮರ್ಥನಾದ ಶ್ರೀ ಕಲಶೇಶ್ವರನು ಯಾವಾಗಲೂ ರಕ್ಷಿಸುವನು॥೯೭॥
ಆಮೇಲೆ ಶ್ರೀಗಿರಿಜಾದೇವಿಯೂ ತನ್ನ ಕರಪದ್ಮದಲ್ಲಿರುವ ಕಮಲದ
ಹೂವಿನ ಹಾರದಿಂದ ಶ್ರೀ ಕಲಶೇಶ್ವರನನ್ನು ಅಲಂಕರಿಸಿದಳು. ಎಂ
ದರೆ ಮಾಲೆಹಾಕಿದಳು ॥ ೯೮ ॥ ಮಿಂಚಿನಂತೆ ಹೊಳೆಯುತ್ತಿರುವ ಆ
ಹೂವಿನ ಹಾರದಿಂದ ಶ್ರೀ ಕಲಶೇಶ್ವರನು ಪೂರ್ಣಮಾಸಿಯಲ್ಲಿ ಉದ
ಯಾಚಲದಲ್ಲಿರುವ ಚಂದ್ರನಂತೆ ಪ್ರಕಾಶಿಸಿದನು ॥ ೯೯ ॥ ಆಕ್ಷಣದಲ್ಲಿ
ದೇವದುಂದುಭಿಗಳು ಮೊಳಗಿದವು. ಮಹತ್ತಾದ ಪುಷ್ಪವೃಷ್ಟಿಯೂ
ಬಿದ್ದಿತು. ಸಂತುಷ್ಟರಾದ ಸರ್ವದೇವತೆಗಳೂ ಸಾಮವೇದಗಳಿಂದ

ಸಾಮಸಂಗೀತನುತಿಭಿರ್ನೇಮುರ್ದೇವಾಃಪ್ರಹರ್ಷಿತಾಃ ॥ ೧೦೦ ॥ ಅಥೋತ್ಥಿತಸ್ತುಹಿಮವಾನ್ಮೇನಯಾಸಹಿತಸ್ಸ್ವಯಂ ॥ ದಾತುಮಿಚ್ಛನ್ಸುತಾಂತನ್ವೀಮಿದಮಾಹಮಹೇಶ್ವರಂ ॥ ೧೦೧ ॥ ಪರಮಾತ್ಮನ್ ಗೃಹಾಣೇಮಾಂಸರ್ವಾಲಂಕಾರಸುಂದರೀಂ ॥ ಮಂಗಲಾಂಮಂಗಲೋಪೇತಾಂತ್ವತ್ಪಾದಾಸಕ್ತಮಾನಸಾಂ ॥ ೧೦೨ ॥ ಇತಿದತ್ವಾ ಸುತಾಂಸಾಧ್ವೀಂಮಂತ್ರೋದಕಪುರಃಸರಂ ॥ ಪ್ರಯಾಹಿಗಿರಿಜೇದೇವಮಿತಿಪ್ರಾಹತದಾದ್ರಿರಾಟ್ ॥ ೧೦೩ ॥ ತದಾದುಂದುಭಯೋನೇದುಃಪುಷ್ಪವೃಷ್ಟಿಸ್ತದಾಭವತ್ ॥ ಸಾಧುಸಾಧ್ವಿತಿದೇವಾನಾಮೃಷೀಣಾಂವದತಾಂತದಾ ॥ ೧೦೪ ॥ ಅಥಸತ್ಯವತೀಪುತ್ರೋಮುನಿಭಿರ್ವ

ಲೂ ಸಂಗೀತಗಳಿಂದಲೂ ಸ್ತೋತ್ರ ಮಾಡುತ್ತ ನಮಸ್ಕರಿಸಿದರು॥೧೦೦॥ ಆಮೇಲೆ ಪರ್ವತರಾಜನು ಮೇನಕಾದೇವಿಯಿಂದ ಸಹಿತನಾಗಿ ತಾನೇ ಎದ್ದು ಶೋಭನಾಂಗಿಯಾದ ತನ್ನ ಮಗಳನ್ನು ಧಾರೆಎರದು ಕೊಡಲು ಅಪೇಕ್ಷಿತನಾಗಿ ಶ್ರೀ ಕಲಶೇಶ್ವರನನ್ನು ಕುರಿತು ಈ ಮುಂದೆ ಹೇಳಿರುವಂತೆ ಹೇಳಿದನು ॥ ೧೦೧ ॥ ಎಲೈ ಪರಮಾತ್ಮನೇ ನಿನ್ನ ಚರಣದಲ್ಲಿ ಆಸಕ್ತವಾದ ಮನಸ್ಸುಳ್ಳ ಸಮಸ್ತಗಳಾದ ಅಲಂಕಾರಗಳಿಂದ ಕೂಡಿದ ಸರ್ವಸುಂದರಿಯಾದ ಸರ್ವಮಂಗಲಗಳಿಂದ ಕೂಡಿರುವ ಮಂಗಲಸ್ವರೂಪಳಾದ ಈ ನನ್ನ ಮಗಳನ್ನು ಪರಿಗ್ರಹಿಸು ॥ ೧೦೨ ॥ ಹೀಗೆ ಹೇಳಿ ಪತಿವ್ರತೆಯಾದ ತನ್ನ ಮಗಳನ್ನು ವಂಶಾವಳಿ ಪ್ರವರೋಚ್ಚಾರಣ ಪೂರ್ವಕವಾಗಿ ಉದಕ ಕುಸುಮಾಕ್ಷತೆಗಳಿಂದ ಧಾರೆಯನ್ನೆರದುಕೊಟ್ಟು, ಪರ್ವತರಾಜನು ಎಲೈ ಪಾರ್ವತಿಯೇ ಶ್ರೀ ಕಲಶೇಶ್ವರ ಸ್ವಾಮಿಯನ್ನು ಅನುಸರಿಸಿ ಇರು ಎಂದು ಆಕ್ಷಣನೇ ಹೇಳಿದನು ॥ ೧೦೩ ॥ ಆಗಲೂ ಭೇರಿಗಳು ಧ್ವನಿಮಾಡಿದವು. ಆಕಾಶದ ದೆಸೆಯಿಂದ ಪುಷ್ಪವೃಷ್ಟಿಯಾಯಿತು. ಶಾಭಾಸು ಪರ್ವತರಾಜನೆ! ಶಾಭಾಸು ಪರ್ವತರಾಜನೆ !! ಶಾಭಾಸು !!! ಎಂದು ದೇವತೆಗಳು ಮತ್ತು ಋಷಿಗಳ ವಾಕ್ಯಗಳುಂಟಾದವು ॥ ೧೦೪ ॥ ಆಮೇಲೆ ಸತ್ಯವತಿಯ ಮಗನಾದ ವೇದ

ಯಸಾಧಿಕೈಃ ॥ ಸದಾರೈರ್ವೇದಪೂರ್ಣೈಶ್ಚ ಪೂಗಪುಷ್ಪಾಕ್ಷತಾನ್ವಿ
ತೈಃ ॥ ೧೦೫ ॥ ಶಿವಯೋಃಪಾಣಿಕಮಲಂನವನೀತೇನಚಾಂಚಿತಂ।
ಕೃತ್ವಾವಕಾರಯಾಮಾಸಚಾಕ್ಷತಾರೋಪಣಂಶುಭಂ ॥ ೧೦೬ ॥
ಸೇನಾನಿಜನಕೋಭೂತ್ವಾಭವತಾರಕನಾಶಕೃತ್ ॥ ಭಕ್ತಾನ್ಸ್ವಸ್ತಿ
ಮತಃಕೃತ್ವಾವಿಶ್ವಂಪಾಹಿಸುರೇಶ್ವರ ॥ ೧೦೭ ॥ ಇತ್ಯಕ್ಷತಾನ್ಸಮಾ
ರೋಪ್ಯಕೌತುಕಂಸೂತ್ರಮಾಪ್ಯಧಾತ್ ॥ ವೇದೋಕ್ತವಿಧಿನಾವಿ
ಪ್ರೋದ್ವೈಧೀಕೃತ್ಯಸುಮಂಗಲಂ ॥ ೧೦೮ ॥ ಹರಿದ್ರಕುಂಕುಮೋ
ಪೇತಂಕಂಠಾಲಂಕಾರಸಂಯುತಂ ॥ ಸಪೀಠೇಸ್ವರ್ಣಪಾತ್ರೇಚಸಂ
ಸ್ಥಾಪ್ಯಮುನಿಸತ್ತಮಃ ॥ ೧೦೯ ॥ ಆನಾಯ್ಯದಂಪತೀದೇವಾವುಪ

ವ್ಯಾಸ ಋಷೀಶ್ವರನು ಹಿರಿಯರಾದ ಪತ್ನೀಸಹಿತರಾದ ಋಷಿಗಳಿಂದ ಕೂಡಿಕೊಂಡು ವೇದಮಂತ್ರಪೂರ್ಣಗಳಾದ ಪುಷ್ಪಾಕ್ಷತೆಗಳಿಂದ ಯುಕ್ತಗಳಾದ ಹರಿದ್ರಾಕ್ಷತೆಗಳಿಂದ ॥ ೧೦೫ ॥ ಶ್ರೀ ಪಾರ್ವತೀಪರಮೇಶ್ವರರ ಕರಪದ್ಮಗಳಿಗೆ ಬೆಣ್ಣೆಯನ್ನು ಹಚ್ಚಿ ಶುಭವಾದ ಅಕ್ಷತಾರೋಪಣೆಯನ್ನು ಮಾಡಿಸಿದನು ॥ ೧೦೬ ॥ ಎಲೈ ದೇವೇಶನೇ ಅಕ್ಷತಾರೋಪಣದ ಕ್ರಮದಿಂದ ದೇವಸೇನೆಗೆ ನಾಯಕನಾಗುವ ಕುಮಾರಸ್ವಾಮಿಯು ತಂದೆಯಾಗಿ ಆ ಮಗನ ದೆಸೆಯಿಂದ ತಾರಕನೆಂಬ ದೈತ್ಯನನ್ನು ಶಿಕ್ಷಿಸು. ಹಾಗೂ ಸೇವಕರನ್ನು ಕ್ಷೇಮಿಗಳನ್ನು ಮಾಡಿ ಜಗತ್ತನ್ನು ರಕ್ಷಿಸು ॥ ೧೦೭ ॥ ಈಪ್ರಕಾರವಾಗಿ ಹೇಳಿ ಆರ್ದ್ರಾಕ್ಷತೆಗಳ ಸಮರ್ಪಣೆಯನ್ನು ಮಾಡಿ ಕಂಕಣಸೂತ್ರವನ್ನು ದಂಪತಿಗಳಿಗೆ ಸುತ್ತಲೂ ಆವರಿಸಿದನು. ಸೂತ್ರಾನುಸಾರವಾಗಿ ಶುಭವಾದ ದಾರವನ್ನು ಎರಡು ಭಾಗವನ್ನು ಮಾಡಿ ಋಷಿಶ್ರೇಷ್ಠನಾದ ವೇದವ್ಯಾಸ ಋಷಿಯು ॥ ೧೦೮ ॥ ಅರಿಸಿನ, ಕುಂಕುಮಗಳಿಂದ ಯುಕ್ತವಾಗಿ ಮಂಗಲಾಭರಣದಿಂದ ಕೂಡಿರುವದನ್ನು ಮಾಡಿ ಪೀಠಸಹಿತವಾದ ಚಿನ್ನದ ಪಾತ್ರೆಯಲ್ಲಿಟ್ಟು ॥ ೧೦೯ ॥ ದಂಪತಿಗಳಾದ ಆ ದೇವರಿಬ್ಬರನ್ನೂ ಶುಭವಾದ ಹಸೆಮಣೆಯಲ್ಲಿ ಕುಳ್ಳಿರಿಸಿ ಇಷ್ಟಾರ್ಥದಾ

ವೇಶ್ಯಾಸನೇಶುಭೇ॥ ಪೂಜಯಾಮಾಸವರದಂನವೋಢಾಸಂಯುತಂ ಶಿವಂ ॥ ೧೧೦ ॥ ಬಬಂಧತುಃ ಥಮುಪಾಕೌತುಕಂಕೌತುಕಾನ್ವಿತಂ॥ ವಿಶ್ವೇತ್ರಾತ್ರಿತಿಮಂತ್ರಾದ್ಯೈರ್ದಂಪತೀಸ್ನೇಹಮಾನಸೌ ॥ ೧೧೧ ॥ ವಿಶ್ವೇಶ್ವರಸ್ತತಃಸೂತ್ರಂಸ್ವರ್ಣರತ್ನವಿರಾಜಿತಂ ॥ ಕಂಠೇಬಬಂಧಗಿರಿಜೇಮಮಪ್ರಾಣೇಶ್ವರೀಭವ ॥ ೧೧೨ ॥ ತತಃಪುರೋಧಾಮುನಿಭಿರಾಶೀರ್ವಾದಮಹೋತ್ಸವಂ ॥ ಚಕ್ರೇಹರ್ಷಾನ್ವಿತಃಶಂಭೋರ್ಗೀತವಾದಿತ್ರನಿಸ್ವನೈಃ ॥ ೧೧೩ ॥ ತತಃಸತ್ಯವತೀಸೂನುರ್ವೇದ್ಯಾಮಗ್ನಿಂಯಥಾವಿಧಿ ॥ ಸಂಸ್ಥಾಪ್ಯಲಾಜೈರಜುಹೋಚ್ಛ್ರುತಿಚೋದಿತಯಾಮುನಿಃ॥ ೧೧೪ ॥ ಮಧ್ಯೇಸಪ್ತಪದಂಕೃತ್ವಾವೃದ್ಧಾಸ್ತೇಶೌನ

ಯುಕನಾದ ಮದವಣಗಿತ್ತಿಯಿಂದ ಕೂಡಿ ಶ್ರೀ ಕಲಶೇಶ್ವರನನ್ನು ಮಂಗಲದೇವತಾ ಪೂಜೆಯನ್ನು ಮಾಡಿಸಿದನು ॥ ೧೧೦ ॥ ಅನಂತರ ಸ್ನೇಹಯುಕ್ತವಾದ ಮನಸ್ಸುಳ್ಳ ಆ ದಂಪತಿಗಳು ಸಂತೋಷದಿಂದ ವಿಶ್ವತ್ರಾತೆಯೆಂಬ ಮಂತ್ರ ಮೊದಲಾದವುಗಳಿಂದ ಜಗತ್ತನ್ನು ರಕ್ಷಿಸುವುದೇ ಮುಖ್ಯ ಕಾರ್ಯವೆಂದು ಆಲೋಚಿಸಿದ ಈ ಇಬ್ಬರೂ ಕಂಕಣವನ್ನು ಕಟ್ಟಿಕೊಂಡರು ॥ ೧೧೧ ॥ ಆಮೇಲೆ ಸಕಲ ಜಗದೀಶ್ವರನು ಸುವರ್ಣರತ್ನಗಳಿಂದ ಪ್ರಕಾಶಿಸಿರುವ ಮಂಗಲಾಭರಣವನ್ನು ದೇವಿಯು ಕಂಠದಲ್ಲಿ ನನ್ನ ಪ್ರಾಣಗಳ ಆಶ್ರಯಳಾಗಿರು ಎಂದು ಕಟ್ಟಿದನು ॥ ೧೧೨ ॥ ಆಗ ಪುರೋಹಿತರೂ ಋಷಿಗಳೂ ಆಯುರ್ವಾಕ್ಯಗಳಿಂದ ಸಂಗೀತವಾದ್ಯಗಳಿಂದ ಶ್ರೀ ಕಲಶೇಶ್ವರನಿಗೆ ಆಶೀರ್ವಾದವೆಂಬ ಉತ್ಸವವನ್ನು ಸಂತೋಷದಿಂದ ಮಾಡಿದರು ॥ ೧೧೩ ॥ ಅನಂತರ ಸತ್ಯವತಿಯ ಮಗನಾದ ವೇದವ್ಯಾಸನು ವಿಧಿಪ್ರಕಾರವಾಗಿ ವೇದಿಕೆಯಲ್ಲಿ ಯಜ್ಞೇಶ್ವರನನ್ನು ಸ್ಥಾಪಿಸಿ ವೇದೋಕ್ತಕ್ರಮದಿಂದ ಅರಳುಗಳಿಂದ ಹೋಮವನ್ನು ಮಾಡಿಸಿದನು ॥ ೧೧೪ ॥ ಈ ಹೋಮ ಮಧ್ಯದಲ್ಲಿಯೇ ಸಪ್ತಪದವೆಂಬ ಕರ್ಮವನ್ನು ನೆರವೇರಿಸಿ ಮುದುಕರಾದ ಆ ಶೌನಕಾದಿ ಋಷಿಗಳು ಅಲ್ಲಿಟ್ಟ ಕಲಶದಲ್ಲಿರುವ ತೀರ್ಥೋದಕ

ಕಾದಯಃ ॥ ಕುಂಭಸಂಸ್ಥೈಸ್ತೀರ್ಥಜಲೈಃಶಿವೌನಿಷಚಿರೇಮುದಾ ॥
॥ ೧೧೫ ॥ ಅರುಂಧತ್ಯಾದಿಕಾಃಸೌಮ್ಯಮುನಿಪತ್ನೀರ್ನಿರೀಕ್ಷ್ಯಚ ॥
ಭದ್ರಾಸನೇವಿರಾಜೇತೇದೇವಿದೇವೌಸುರೇಶ್ವರೌ॥ ೧೧೬ ॥ ಹರ್ಷಾ
ಲಂಕಾರಸಹಿತೌವಾಣೀಲಕ್ಷ್ಮ್ಯಾಸಮನ್ವಿತಾ ॥ ರತ್ನಾರ್ತಿಕ್ಯೇನಗಿರಿಶೌ
ನೀರಾಜಯತಿಸಾದರಂ ॥ ೧೧೭ ॥ ಗೀತವಾದಿತ್ರನಿನದೈಃಸಾಮ್ನಾ
ಸ್ತುತಿಭಿರೇವಚ ॥ ಪದ್ಮಾಕ್ಷೀಶಾರದಾದೇವೀಮಂದಹಾಸವಿಲಾಸಿನೀ॥
॥ ೧೧೮ ॥ ಜಯಮಂಗಲಯೋಪೇತಶ್ರೀಕುಂಭೇಶಮಹೇಶ್ವರ ॥
ಜಯಶ್ರೀಗಿರಿಜೇದೇವಿಚಂದ್ರಮೌಳೀಶ್ವರಪ್ರಿಯೇ ॥ ೧೧೯ ॥
ಜಯಮೃತ್ಯುಂಜಯೇಶಾನಪರಮಾತ್ಮನ್ಚಿದಾತ್ಮಕ ॥ ಜಯಶ್ರೀಲಲಿ
ತೇದೇವಿಜಯಸರ್ವಾಂಗಸುಂದರಿ ॥ ೧೨೦ ॥ ಇತ್ಯನೇಕಸ್ತವೇನೇ

ಕಗಳಿಂದ ಪ್ರೇಮದಿಂದ ಆ ಪರಮೇಶ್ವರರನ್ನು ಅಭಿಷೇಚಿಸಿದನು ॥೧೧೫॥
ಆಮೇಲೆ ಅರುಂಧತಿ ಮೊದಲಾದ ಋಷಿಪತ್ನಿಯರನ್ನು ದರ್ಶನ ಮಾಡಿ
ಹಸೆಮಣೆಯಲ್ಲಿ ಬಿಜಯಿಸಿರುವ ಶ್ರೀ ಪಾರ್ವತೀಪರಮೇಶ್ವರರು
ಪ್ರಕಾಶಿಸುತ್ತಿದ್ದರು ॥ ೧೧೬ ॥ ಆಗ ಸಂತೋಷಾಲಂಕಾರಗಳಿಂದ
ಕೂಡಿದ ಸರಸ್ವತೀದೇವಿಯು ಲಕ್ಷ್ಮೀದೇವಿಯಿಂದ ಸಹಿತಳಾಗಿ,
ಪ್ರೀತಿಪೂರ್ವಕವಾಗಿ ಮಣಿಮಯವಾದ ಆರ್ತಿಯಿಂದ ಶ್ರೀ ಉಮಾ
ಮಹೇಶ್ವರರನ್ನು ಕುರಿತು ಸೇವಿಸಿದಳು ॥ ೧೧೭ ॥ ಸಂಗೀತವಾದ್ಯಧ್ವ
ನಿಗಳಿಂದ ಸಾಮವೇದಸ್ತುತಿಗಳಿಂದ ಹಸನ್ಮುಖರಾದ ಲಕ್ಷ್ಮೀದೇವಿ,
ಶಾರದಾದೇವಿಯರು ಆರ್ತಿಹಾಡುಗಳನ್ನು ಪಾಡಿದರು ॥೧೧೮॥ ಜಯ
ಮಂಗಲೆಯಾದ ಪಾರ್ವತೀದೇವಿಯಿಂದ ಸಹಿತನಾದ ಕಲಶೇಶನೆ! ಎಲೈ
ಮಹೇಶ್ವರನೇ ! ಜಯ. ಶ್ರೀಗಿರಿಜಾದೇವಿಯೇ !! ಚಂದ್ರಮೌಳೀಶ್ವರನ
ಪತ್ನಿಯೇ!!! ಜಯ॥೧೧೯॥ಜಯ ಎಲೈ ಮೃತ್ಯುಂಜಯನೇ! ಎಲೈ ಈಶ್ವ
ರನೇ ಎಲೈ ಪರಮಾತ್ಮನೆ! ಎಲೈ ಜ್ಞಾನಸ್ವರೂಪನೇ! ಜಯ ಜಯವೆಂದು
ಪಾಡಿದರು. ಮತ್ತು ಎಲೈ ಲಲಿತಾದೇವಿಯೇ ಜಯ; ಎಲೈಸರ್ವಾಂಗಸುಂ
ದರಿಯೇ ಜಯ ॥ ೧೨೦ ॥ ಯಾವಾಗ ಈಪ್ರಕಾರವಾಗಿ ಅನೇಕ ವಿಧ

ಶೌಯದಾನೀರಾಜಯತ್ಯಸೌ ॥ ತದಾಡುಂದುಭಯೋನೇದುಃಸಂಗೀ
ತೈಃಸ್ತೋತ್ರಪಾಠಕೈಃ ॥ ೧೨೧ ॥ ಸ್ವರ್ಣವೇತ್ರಧರಾದೇವಾನಂ
ದೀಶಪ್ರಮುಖಾಸ್ತಥಾ ॥ ಜಯಲೋಕೇಶವಿಶ್ವಾತ್ಮನ್ಪಾಹಿಲೋಕಾನಿ
ಮಾನ್ಪ್ರಭೋ ॥೧೨೨॥ ಭಗವದ್ಭಕ್ತಿನಿರತಾನ್ ತ್ವಂಸಾಧಾನಿತಿಸಾ
ದರಂ॥ಕೃತಾಂಜಲಿಪುಟಾಃಸರ್ವೇಪ್ರಣೇಮುರತಿಹರ್ಷಿತಾಃ ॥೧೨೩॥
ಯಾಜ್ಞವಲ್ಕ್ಯಾದಯಃಸರ್ವೇಮುನಯಃಸಾಗ್ನಿಹೋತ್ರಿಣಃ॥ಆಶೀ
ರ್ವಾದಸ್ತವೇನೇಶಂಮೋದಿರೇಶಾಂತಚೇತಸಃ ॥ ೧೨೪ ॥ ಸ್ವರ್ಣಾಂ
ಬರಾಣಿಶುಭ್ರಾಣಿರತ್ನಾನ್ಯಾಭರಣಾನಿಚ॥ ಅರ್ಪಯಾಮಾಸುರಥತೇ
ವೈಕುಂಠಾದ್ಯಾಃಪ್ರಹರ್ಷಿತಾಃ ॥ ೧೨೫ ॥ ತತಃಸಂಗೀತನಿನದೈಃ
ನೃತ್ಯಂತ್ಯೈರಪ್ಸರೋಗಣೈಃ॥ಸ್ತುವದ್ಭಿರ್ದೇವಸಂಘೈಶ್ಚರೇಜೇಶ್ರೀಕಲ

ವಾದ ಸ್ತುತಿಯಿಂದ ಶ್ರೀ ಪಾರ್ವತೀವರಮಹೇಶ್ವರರನ್ನು ಕುರಿತು ಆಶೀರ್ವಾದವನ್ನು ಎತ್ತಿದಳು. ಆಗ ದೇವದುಂದುಭಿಗಳು ಮೊಳಗಿದವು. ಸಂಗೀತ ಸ್ತೋತ್ರಪಾಠಗಳಿಂದ ಸ್ತುತಿಸಿದರು ॥ ೧೨೧ ॥ ಹಾಗೆಯೇ ಚಿನ್ನದ ಬೆತ್ತವನ್ನು ಹಿಡಿದ ನಂದಿಕೇಶ ಮುಖ್ಯರಾದ ದೇವತೆಗಳು ಲೋಕೇಶ್ವರನೆ! ಜಗದ್ವ್ಯಾಪಕನೇ! ಎಲೈಸ್ವಾಮಿಯೇ! ಈ ಲೋಕಗಳನ್ನು ರಕ್ಷಿಸು ॥ ೧೨೨ ॥ ಭಗವದ್ಭಕ್ತಿಯುಕ್ತರಾದವರಿಗೆ ನೀನೆ ಒಡೆಯನಾಗಿರು. ಸರ್ವರನ್ನೂ ರಕ್ಷಿಸು ಎಂದು ಪ್ರೀತಿಪೂರ್ವಕವಾಗಿ, ಅಂಜಲಿಬದ್ಧರಾಗಿ ಸರ್ವರೂ ಸಂತೋಷಿತರಾಗಿ ಸ್ತುತಿಸುತ್ತ ನಮಸ್ಕರಿಸಿದರು ॥ ೧೨೩ ॥ ಅಗ್ನಿಹೋತ್ರಿಗಳಾದ ಸಮಾಹಿತ, ಮನಸ್ಕರಾದ ಯಾಜ್ಞವಲ್ಕ್ಯಾದಿ ಮುನಿಗಳು ಆಶೀರ್ವಾದವೆಂಬ ಸ್ತುತಿಯಿಂದ ಶ್ರೀ ಪರಮಾತ್ಮನನ್ನು ಸಂತೋಷಗೊಳಿಸಿದರು ॥೧೨೪॥ ಅನಂತರ ಶ್ರೀ ಮಹಾವಿಷ್ಣು ಮೊದಲಾದ ದೇವಶ್ರೇಷ್ಠರು ಜರತಾರಿ ಪೀತಾಂಬರದ ಜೊತೆಗಳನ್ನೂ, ಥಳಥಳಾಯಮಾನಗಳಾದ ರತ್ನಾಭರಣಗಳನ್ನೂ, ಪ್ರೀತರಾಗಿ ಪಾರಿಬರ್ಹವೆಂಬ ಉಡುಗೊರೆಯನ್ನೂ ಒಪ್ಪಿಸಿದರು ॥೧೨೫॥ ಆ ಕಾಲದಲ್ಲಿ ಸಂಗೀತ ಶಬ್ದಗಳಿಂದ ನರ್ತಿಸುವ ಅಪ್ಸರಸ್ಸಮೂಹಗಳಿಂದ

ಶೇಶ್ವರಃ॥೧೨೬॥ ಪಾಣಿಗ್ರಹೋತ್ಸವೇಚೇತ್ಥಂಜಾಯಮಾನೇದಿವಾಕರಃ॥ಉದಯಾದ್ರೌಸಮುದಿತಃತತೋದ್ರಷ್ಟುಂಮಹೋತ್ಸವಂ೧೨೭॥ ಭಾನುಮಂತಂತದಾದೃಷ್ಟ್ವಾಮುನಯಃಸಕಲಾಮರಾಃ ॥ ಸ್ನಾತ್ವಾಚಾವಶ್ಯಕಂಕೃತ್ವಾಕಲಶೇಶಂಪ್ರಪೇದಿರೆ ॥ ೧೨೮ ॥ ಆತ್ಮಾನಂಜಹುಯಾಂಚಕ್ರುರ್ಬಾದರಾಯಣಪೂರ್ವಕಾಃ ॥ ಅರುಂಧತ್ಯಾದಯಸ್ಸರ್ವ್ವಾದಂಪತ್ಯೋಶ್ಚಪರಸ್ಪರಂ॥೧೨೯॥ಹರಿದ್ರಾಕುಂಕುಮಾಭ್ಯಾಂಚಚಕ್ರುರಭ್ಯರ್ಚನಂಶುಭಂ॥ಶೋಭತೇದಂಪತೀತೇನಸೂರ್ಯಾಚಂದ್ರಮಸಾವಿವ ॥ ೧೩೦ ॥ ಅಥವಹ್ನಿಂಸಮಾಹೂಯತುರಾಷಾಡಿದಮಬ್ರ

ಸ್ತುತಿಸುತ್ತಿರುವ ದೇವಸಮೂಹಗಳಿಂದ ಕೂಡಿದ ಶ್ರೀ ಕಲಶೇಶ್ವರ ಸ್ವಾಮಿಯೂ ಪ್ರಕಾಶಿಸುತ್ತಿದ್ದನು ॥ ೧೨೬ ॥ ಈಪ್ರಕಾರವಾಗಿ ವಿವಾಹೋತ್ಸವವು ವಿನೋದದಿಂದ ನೆರವೇರಿಸುತ್ತಿರುವಷ್ಟರಲ್ಲಿಯೇ ಈ ಮಹೋತ್ಸವವನ್ನು ನೋಡುವವನಾದ ಸೂರ್ಯದೇವನು ಉದಯಾಚಲವನ್ನು ಆಶ್ರಯಿಸಿದನು ॥ ೧೨೭ ॥ ಪ್ರಕಾಶಿಸಿದ ಸೂರ್ಯದೇವನನ್ನು ನೋಡಿ ಆಗ ಸಮಸ್ತ ಋಷಿಗಳೂ ದೇವತೆಗಳೂ ಅಪ್ಪಣೆಯನ್ನು ಪಡೆದು ಸ್ನಾನಾದಿಗಳಿಗೆ ಹೋಗಿ ಅವಶ್ಯವಾದ ಅನುಷ್ಠಾನಗಳನ್ನು ಮಾಡಿಕೊಂಡು ಶ್ರೀ ಕಲಶೇಶನ ಸನ್ನಿಧಿಯನ್ನು ಕುರಿತು ಪುನಃ ಬಂದರು ॥ ೧೨೮ ॥ ಬದರೀವನದಲ್ಲಿರುವ ವ್ಯಾಸಋಷಿಯೇ ಮೊದಲಾದ ಋಷಿಗಳು ಶ್ರೀ ಕಲಶೇಶ್ವರನನ್ನೂ ಆ ಪರಮಾತ್ಮನ ಮೂರ್ತ್ಯಂಶನಾದ ಆ ವಿಘ್ನೇಶ್ವರನನ್ನೂ ಸೂರ್ಯನನ್ನೂ ನಮಿಸಿದರು. ಅರುಂಧತಿ ಮೊದಲಾದ ಸುವಾಸಿನಿಯರು ಆ ಪಾರ್ವತೀಪರಮೇಶ್ವರರಿಗೆ ಅನ್ಯೋನ್ಯವಾಗಿ ॥೧೨೯॥ ಅರಿಸಿನ, ಕುಂಕುಮಗಳಿಂದ ಶುಭವಾದ ಅರಿಸಿನೆಣ್ಣೆಯ ಪೂಜೆಯನ್ನು ಮಾಡಿಸಿದರು. ಆ ಪೂಜೆಯಾದಮೊಡನೆ ಆ ದಂಪತಿಗಳಿಬ್ಬರೂ ಸೂರ್ಯಚಂದ್ರರಂತೆ ಪ್ರಕಾಶಿಸುತ್ತಿದ್ದರು ॥ ೧೩೦ ॥ ಆಮೇಲೆ ದೇವೇಂದ್ರನು ಅಗ್ನಿಯನ್ನು ಕರೆದು ಎಲೈ ಪಾವಕನೇ, ವರುಣನಿಂದ ಸಹಿತನಾದ ನಿನ್ನಿಂದ ಸ್ವಯಂ

ವೀಶ್॥ ಶೀಘ್ರಂತುಪಚ್ಯತಾಂಪಾಕೋವರುಣೇನಸಹತ್ವಯಾ॥೧೩೧॥
ಮುನೀಂದ್ರಾಣಾಂಸುರೇಂದ್ರಾಣಾಂಸ್ವಾದುಃಸ್ವಾದುಯಥಾತಥಾ ॥
ಓಮಿತ್ಯುಕ್ತ್ವಾವಾಯುನಾಪಿಸಂಯುತಃಸಜಲಾಧಿಪಃ ॥ ೧೩೨ ॥
ನಿಮಿಷೇಣೈವತತ್ಪಾಕಂಪಾಚಯಾಮಾಸಪಾವಕಃ ॥ ಷಡ್ರಸಂವ್ಯಂಜ
ನೋಪೇತಂಮಂಡಿಕಾಲಡ್ಡುಕಾದಿಭಿಃ ॥ ೧೩೩ ॥ ತತಸ್ತೌದಂಪತೀ
ದೇವೌವೈವಾಹ್ಯೇರತ್ನಮಂಟಪೇ ॥ ಏಕಾಸನಗತೌಸರ್ವೈರ್ವಿಭವೈರ
ನ್ವಿತೌಮುದಾ ॥೧೩೪॥ ಮುನಿಪತ್ನ್ಯಸ್ತದೋತ್ಥಾಯದೇವಯೋಃ
ಪುರತಃಶುಭೇ ॥ ಸ್ವರ್ಣಪಾತ್ರೇಚಸಂಸ್ಥಾಪ್ಯಚಕ್ರಿರೇಪರಿವೇಷಣಂ ॥
॥ ೧೩೫ ॥ ತತಃಸರ್ವೇಸಮಾಗತ್ಯಮುನಯಃಸಕಲಾಮರಾಃ॥ಭೋ
ಜ್ಯಂನಿವೇದಯಾಮಾಸಷಡ್ರಸಾನ್ನಂಸಲಡ್ಡುಕಂ ॥ ೧೩೬ ॥ ಶಿವಾ

ಪಾಕವರ್ಗವು ಜಾಗ್ರತೆಯಾಗಿ ॥ ೧೩೧ ॥ ಋಷಿಶ್ರೇಷ್ಠರಿಗೂ ದೇವೇಶ್ವ
ರರಿಗೂ ಹೇಗೆ ರುಚಿಸುವುದೋ ಹಾಗೆ ಮಾಡಲ್ಪಡಲಿಯೆಂದು ಹೇಳಿ
ದನು. ಅದನ್ನು ಒಪ್ಪಿಕೊಂಡು ವಾಯುವಿನಿಂದ ಕೂಡಿದ ವರುಣ
ಸಹಿತನಾದ ಪಾವಕನು ॥೧೩೨॥ ನಿಮಿಷಮಾತ್ರದಲ್ಲಿ ಲಾಡು, ಮಂಡಿಗೆ
ಮೊದಲಾದ ಭಕ್ಷ್ಯಭರಿತವಾದ ಆ ಪಾಕವನ್ನು ಷಡ್ರಸ ಸಹಿತವಾಗಿ
ಮಾಡಿದನು ॥ ೧೩೩ ॥ ಅನಂತರ ಆ ಪಾರ್ವತೀಪರಮೇಶ್ವರರಾದ
ಮದವಣಿಗರಿಬ್ಬರೂ ಮದುವೆಯ ರತ್ನಮಯವಾದ ಮಂಟಪದಲ್ಲಿ
ಸಕಲ ವಿಭವಗಳಿಂದ ಕೂಡಿದವರಾಗಿ ಸಂತೋಷದಿಂದ ಹಸೆಮಣೆ
ಯಲ್ಲಿ ಕುಳಿತರು ॥ ೧೩೪ ॥ ಆಗ ಋಷಿಗಳ ಪತ್ನಿಯರು ಎದ್ದು
ಅವರಿಬ್ಬರ ಮುಂದುಗಡೆಯಲ್ಲಿ ಸುವರ್ಣದ ಭೋಜನ ಪಾತ್ರೆಗಳ
ನ್ನು ಇಟ್ಟು ಪಾತ್ರಾಭಿಘಾರ ಮೊದಲಾಗಿ ಬಡಿಸಿದರು ॥ ೧೩೫ ॥
ಆಕ್ಷಣ ಸಕಲ ಋಷಿಗಳೂ ದೇವತೆಗಳೂ ಅಲ್ಲಿಗೆ ಬಂದು ಭೋಜನಕ್ಕೆ
ಯೋಗ್ಯವಾದ ಲಾಡುಗಳಿಂದ ಕೂಡಿದ ಆರುವಿಧವಾದ ರುಚಿಗಳುಳ್ಳ
ನೈವೇದ್ಯವನ್ನು ಸಮರ್ಪಿಸಿದರು ॥ ೧೩೬ ॥ ಅನಂತರ ಶ್ರೀ ಕಲಶೇಶ್ವ
ರನ ಅಪ್ಪಣೆಯಿಂದ ಋಷಿಗಳಿಂದ ಸಹಿತರಾದ ಸಮಸ್ತ ದೇವತೆಗಳೂ

ಜ್ಞಾಯಹಾತತಃಸರ್ವೆದೇವಾಮುನಿವರ್ಯೈಸ್ಸಹ ॥ ದೇವಸ್ಯದಕ್ಷಿಣೇಭಾಗೇಸೂಪವಿಷ್ಟಾಃಕೃತಾಸನಾಃ ॥ ೧೩೭ ॥ ವಾಮೇಚದೈತ್ಯಪತಯೋವೈರೋಚನಮುಖಾಸ್ಸುರಾಃ॥ಉಪವಿಷ್ಟೇಷುದೇವೇಷುಮುನೀಂದ್ರೇಷ್ವಸುರೇಷ್ವಪಿ ॥ ೧೩೮ ॥ ಮರುತಃಪರಿವೇಷ್ಟಾರಃಸದೇವಾಸುರಸಂಮತಾಃ ॥ ಭೋಜ್ಯಂಚತುರ್ವಿಧಂಸ್ವಾದುಷಡ್ರಸವ್ಯಂಜನಾನ್ವಿತಂ ॥ ೧೩೯ ॥ ಪರ್ಪಲಾದ್ಯೈರ್ಲಡ್ಡುಕೈಶ್ಚದ್ರಾಕ್ಷಾಶರ್ಕರಪೂರಿತೈಃ॥ ಸಘೃತೈರ್ವ್ಯಂಜನೈಃಸರ್ವೈಸ್ತೋಷಯಾಮಾಸುರಾದರಾತ್॥ ॥ ೧೪೦ ॥ ಭುಕ್ತವತ್ಸುಚಸರ್ವೇಷುಭೋಜ್ಯೈರ್ದಾರ್ವೈರ್ಮನೋಹರೈಃ ॥ ಉತ್ಥಾನಶಬ್ದಮಕರೋನ್ನಂದೀಶಃಸುಸ್ವರಂತದಾ॥೧೪೧॥ ತದೋತ್ಥಿತಾನ್ಮುನಿವರಾದೇವಾದೈತ್ಯಗಣೇಶ್ವರಾಃ॥ ಆಚಾಂತಃಶುಚ

ಭಗವಂತನ ದಕ್ಷಿಣ ಭಾಗದಲ್ಲಿ ಪೀಠಸ್ಥರಾಗಿ ಕುಳಿತುಕೊಂಡರು ॥ ೧೩೭ ॥ ಎಡಭಾಗದಲ್ಲಿ ಬಲಿಚಕ್ರವರ್ತಿ ಮೊದಲಾದ ದೈತ್ಯೇಶ್ವರರು ಕುಳಿತುಕೊಂಡರು. ಹೀಗೆ ದೇವತೆಗಳು, ಋಷಿಗಳು, ದೈತ್ಯರು, ಪ್ರತ್ಯೇಕಪ್ರತ್ಯೇಕ ಪಙ್ಕ್ತಿಯಾಗಿ ಕುಳಿತುಕೊಂಡಿರಲು ॥ ೧೩೮ ॥ ದೇವತೆಗಳು, ದೈತ್ಯರು ಇವರಿಬ್ಬರಿಗೂ ಸಮ್ಮತವಾದ ಮರುದ್ಗಣ ದೇವತೆಗಳು ಲೇಹ್ಯಮೊದಲಾಗಿ ನಾಲ್ಕುತರವಾದ ರುಚಿಯಾದ ಷಡ್ರಸಭರಿತವಾದ ಭಕ್ಷ್ಯಗಳಿಂದ ಕೂಡಿದ ಹವಿಸ್ಸನ್ನು ಬಡಿಸಿದರು ॥ ೧೩೯ ॥ ಹಪ್ಪಳ ಮೊದಲಾದುವು ದ್ರಾಕ್ಷೆ ಸಕ್ಕರೆಗಳಿಂದ ಪೂರಿತಗಳಾದ ಲಾಡುಗಳು ತುಪ್ಪದಲ್ಲಿ ಕರಿದ ಇತರ ಭಕ್ಷ್ಯಗಳು ಇವುಗಳಿಂದ ಪ್ರೀತಿಯಾಗಿಯೂ ಆದರಣೆಯಾಗಿಯೂ ಭೋಜನಕ್ಕೆ ಕೂತವರನ್ನು ಸಂತೋಷಪಡಿಸಿದರು ॥೧೪೦ ॥ಈ ಪ್ರಕಾರವಾಗಿ ಸಕಲರೂ ಉತ್ತಮವಾದ ಪದಾರ್ಥಗಳಿಂದ ಭೋಜನವನ್ನು ಮಾಡುತ್ತಿರಲು ಏಳುವ ಸಮಯದಲ್ಲಿ ನಂದೀಶನು ಸುಸ್ವರವುಳ್ಳ ವಾದ್ಯಧ್ವನಿಯನ್ನು ಮಾಡಿದರು ॥ ೧೪೧ ॥ ಆಗ ಮುನೀಶ್ವರರೂ, ದೇವತೆಗಳೂ, ದೈತ್ಯಾಧಿಪರೂ ಎದ್ದರು. ಕರ ಶುದ್ಧಿಯನ್ನು ಮಾಡಿಕೊಂಡು ಆಚಮನವನ್ನು ಮಾಡಿ ಸರ್ವರೂ ಸರ್ವಾ

ಯಃಸರ್ವೇಸರ್ವಾಲಂಕಾರಮಂಡಿತಾಃ ॥೧೪೨॥ ಕಲಶೇಶಸ್ಯದೇವಸ್ಯಸಭಾಂಸರ್ವಾಂಗಶೋಭನಾಂ॥ ಉಪವಿಷ್ಟಾಃಪ್ರವಿಶ್ಯೈವಮೋದಿತಾಃಸರ್ವಸಂಪದಾ॥ ೧೪೩ ॥ ಕಸ್ತೂರಿಕರ್ಪೂರಾದ್ಯೈಶ್ಚಗಂಧತೈಲೈಃಸಚೂರ್ಣಕೈಃ ॥ ರಂಜಿತೈಃಪೂಗಶಕಲೈರ್ನಾಗವಲ್ಲೀದಳೈಶ್ಶುಭ್ರೈಃ ॥ ೧೪೪ ॥ ಸಚೂರ್ಣೈರ್ಮಾನಿತಾಃಸರ್ವೇಬಾದರಾಯಣಪೂರ್ವಕಂ ॥ ಕಲಶೇಶಾಜ್ಞಯಾತತ್ರರಾಜರಾಜೇನಧೀಮತಾ ॥೧೪೫॥ ನಾರದಸ್ತ್ವಥಸಂಗೀತಂತುಂಬುರೇಣಸಮನ್ವಿತಃ ॥ ಮಹತೀಂಗಾಪಯಾಮಾಸಸ್ವಾಂವೀಣಾಂಮಧುರಸ್ವನಾಂ ॥ ೧೪೬ ॥ ಊರ್ವಶೀಮೇನಕಾಚೈವಚಿತ್ರಸೇನಾದಿಭಿರ್ವೃತೇ॥ನೃತ್ಯಸೇವಾಂಚಕ್ರತುಸ್ತೇಪಶ್ಯತಾಂಸುಮನೋಹರಂ ॥ ೧೪೭ ॥ ಏವಂವಿಭವಸಂಯು

ಭರಣಭೂಷಿತರಾಗಿ ॥ ೧೪೨ ॥ ಶ್ರೀ ಕಲಶೇಶ್ವರನ ಸರ್ವ ಸೌಖ್ಯಕರವಾದ ಸಭೆಯನ್ನು ಸೇರಿ ಕುಶಲರಾಗಿ ಅಲ್ಲಿರುವ ಸಕಲಸಂಪತ್ತುಗಳಿಂದ ಸಂತೋಷಪಟ್ಟರು ॥ ೧೪೩ ॥ ಅಲ್ಲಿ ಶ್ರೀ ಕಲಶೇಶ್ವರಸ್ವಾಮಿಯ ಅಪ್ಪಣೆಯಾದ ರಾಜಶ್ರೇಷ್ಠನಾದ ಬುದ್ಧಿಶಾಲಿಯಾದ ಕುಬೇರನಿಂದ ವೇದವ್ಯಾಸ ಮುಖ್ಯರಾದ ಸರ್ವರೂ ಪಚ್ಚ ಕರ್ಪೂರ, ಕಸ್ತೂರಿ ಮೊದಲಾದ ಪರಿಮಳದ್ರವ್ಯಗಳಿಂದ ಗಂಧದ ಎಣ್ಣೆ, ಬುಕ್ಕಿ ಹಿಟ್ಟುಗಳಿಂದ, ಸ್ವಾದುಗಳಾದ ಬಣ್ಣದ ಅಡಕೆಗಳಿಂದ, ಎಳೆದಾದ ಬಿಳಿದಾದ ಎಲೆಗಳಿಂದ, ವೀಳ್ಯದ ಪುಡಿಗಳಿಂದ, ಶ್ರೇಷ್ಠಾನುಕ್ರಮವಾಗಿ ಪೂಜಿತರಾದರು ॥ ೧೪೪ ॥ ೧೪೫ ॥ ಆಗ ನಾರದಮುನಿಯು ತುಂಬುರನಿಂದ ಕೂಡಿ ತನ್ನ ಉತ್ತಮ ಸ್ವರಯುಕ್ತವಾದ ಮಹತಿಯೆಂಬ ವೀಣೆಯನ್ನು ನುಡಿಸಿದನು ॥ ೧೪೬ ॥ ಅನಂತರ ಊರ್ವಶಿ, ಮೇನಕೆ ಚಿತ್ರಸೇನ ಮೊದಲಾದವರಿಂದ ಸರಿಗಮಸಹಿತವಾದ ರಾಗದಿಂದ ಕೂಡಿಕೊಂಡು ನೋಡುವವರಿಗೆ ಸಂತೋಷಕರವಾದ ನರ್ತನಸೇವೆಯನ್ನು ಒಪ್ಪಿಸಿದರು ॥ ೧೪೭ ॥ ಈಪ್ರಕಾರವಾದ ಸಕಲ ಸಾಮ್ರಾಜ್ಯ ಸಂಪತ್ತು

ಕ್ತೈರ್ವಿವಾಹಜನಿತೋತ್ಸವೈಃ ॥ ಬ್ರಹ್ಮಾದ್ಯಾಃಸಕಲಾದೇವಾಹ
ರ್ಷಯುಕ್ತಾಃಪ್ರರೇಜಿರೇ ॥೧೪೮॥ ಯಇದಂಶು ್ರಣುಯಾನ್ನಿತ್ಯಂ
ಪಾಣಿಗ್ರಹಮಹೋತ್ಸವಂ ॥ ಅಪುತ್ರೋಲಭತೇಪುತ್ರಾನ್ನಿರ್ಧನೋ
ಧನಮಾಪ್ನುಯಾತ್ ॥೧೪೯॥ ರೋಗೀಮುಚ್ಯೇತರೋಗೇಭ್ಯೋಜಿ
ಜ್ಞಾಸುಜ್ಞಾನಮಾಪ್ನುಯಾತ್ ॥ ಶ್ರೋತಾರಃಶಾಂಭವೀಂಭಕ್ತಿ
ಮಚಲಾಮಾಪ್ನುಯುರ್ಧ್ರುವಂ ॥ ೧೫೦ ॥ ಪಿತರಸ್ತಸ್ಯತೃಪ್ಯಂ
ತಿಮುಚ್ಯತೇಚಋಣತ್ರಯಾತ್ ॥ ಇಷ್ಟಾರ್ಥಮನುಭೂಯೇಹ

ಗಳುಳ್ಳ ವಿವಾಹೋತ್ಸವದಲ್ಲಿ ಉಂಟಾದ ಉತ್ಸವಗಳಿಂದ ಬ್ರಹ್ಮಾದಿ ಸಮಸ್ತ ದೇವತೆಗಳೂ ಆನಂದಯುಕ್ತರಾಗಿ ಶ್ರೀ ಕಲಶೇಶ್ವರ ಸ್ವಾಮಿಯ ಸಭೆಯಲ್ಲಿ ಪ್ರಕಾಶಿಸುತ್ತಿದ್ದರು ॥ ೧೪೮ ॥ ಸೂತಪೌರಾಣಿಕನು ಸರ್ವರಿಗೂ ತಿಳಿಸಿದ ಈ ಪ್ರಕಾರವಾದ ಈ ಗಿರಿಜಾದೇವಿಯ ವಿವಾಹೋತ್ಸವದ ಈ ಪುಣ್ಯ ಚರಿತ್ರೆಯನ್ನು ಯಾವನು ಲೋಕದಲ್ಲಿ ನಿತ್ಯವೂ ಕೇಳುವನೋ ಅವನು ಪುತ್ರರಿಲ್ಲದವನಾದರೆ ಪುತ್ರರನ್ನು ಪಡೆಯುವನು. ದ್ರವ್ಯವನ್ನು ಬಯಸಿದವನಾದರೆ ದ್ರವ್ಯವನ್ನು ಹೊಂದುವನು. ರೋಗಿಯಾದರೆ ರೋಗಗಳ ದೆಸೆಯಿಂದ ಬಿಡಿಸಿಕೊಳ್ಳುವನು. ಜ್ಞಾನವನ್ನು ಬಯಸುವನಾದರೆ ಸುಜ್ಞಾನವನ್ನು ಪಡೆಯುವನು. ವಿಶ್ವಾಸದಿಂದ ಯಾವಾಗಲೂ ಯಾರು ಕೇಳುವರೋ ಅವರು ಶ್ರೀ ಭಗವಂತನಲ್ಲಿ ಚಂಚಲವಿಲ್ಲದಿರುವ ಭಕ್ತಿಯನ್ನು ಹೊಂದುವರು. ಕೇಳುವವನ ಸಮಸ್ತ ಪಿತೃಗಳೂ ತೃಪ್ತಿಯನ್ನು ಪಡಿಯುವರು. ಋಣತ್ರಯದ ದೆಸೆಯಿಂದ ಬಿಡಿಸಿಕೊಳ್ಳುವನು. ಇಲ್ಲಿ ಸಕಲವಾದ ಇಷ್ಟಾರ್ಥಗಳನ್ನು ಅನುಭವಿಸಿ ಶರೀರಾಂತ್ಯದಲ್ಲಿ ಶ್ರೀಭಗವಂತನ ಪರಮಾನಂದ ಭರಿತವಾದ ಸರ್ವೋತ್ತಮವಾದ ಲೋಕವನ್ನು ಹೊಂದುವನು ॥ ೧೪೯ ॥ ೧೫೦ ॥ ೧೫೧ ॥

ಚಾಂತೇಶಿವಪದಂವ್ರಜೇತ್ ॥ ... ॥ ೧೫೧ ॥

ಇತಿ ಶ್ರೀ ಸ್ಕಂದಪುರಾಣೇ ಶ್ರೀ ಕಲಶೇಶ್ವರ ವಿವಾಹ ಮಹೋತ್ಸವ ಕಥನಂ ನಾಮದಶಮೋಽಧ್ಯಾಯಃ ॥

ಈ ಪ್ರಕಾರವಾಗಿ ಸ್ಕಂದಪುರಾಣದಲ್ಲಿ ತುಂಗಭದ್ರಾಖಂಡದಲ್ಲಿ ಹೇಳಿರುವ ಶ್ರೀ ಕಲಶೇಶ್ವರ ಸ್ವಾಮಿಯವರ ಮಹಿಮೆಯಲ್ಲಿ ಶ್ರೀ ಗಿರಿಜಾ ಕಲ್ಯಾಣೋತ್ಸವದ ಕಥನವು ಸಮಾಪ್ತಿಯಾಯಿತು.

ಹತ್ತನೆ ಅಧ್ಯಾಯವು ಸಂಪೂರ್ಣವಾದುದು.

ಟೀಕಾಯಾಂ ಕನ್ನಡಾಖ್ಯಾಯಾಂ ರಾಮದ್ವೈವಜ್ಞ ಕರ್ಮಣಾಂ ।
ಪೂರ್ಣೋಽಭೂದ್ದಶಮೋಽಧ್ಯಾಯಃ ಕಲಶೇಶಧಿಯಾಮುದಾ ॥

ಶ್ರೀ॥ ಶ್ರೀ॥ ಶ್ರೀ ॥

ಶ್ರೀಸೂತಃ ॥ ದ್ವಾದಶ್ಯಾಮಥಸಾಯಾಹ್ನೇಪ್ರದೋಷಸಮ ಯೇಶಿವಂ॥ ವೈವಾಹ್ಯವಿಧಿನಾಸರ್ವೇಸಮಭ್ಯರ್ಚನ್‌ಮುನೀಶ್ವರಾಃ॥ ॥ ೧ ॥ ಪ್ರಚಕ್ರುರುತ್ಸವಂಸಾಗ್ರಂಪೂರ್ವೋಕ್ತವಿಭವೈರಪಿ॥ ಹಿಮ ವಾನ್‌ಬಂಧುಸಹಿತೋಸ್ವರಾಜ್ಯವಿಭವೈರ್ಯುತಃ ॥ ೨ ॥ ಆಪೃಚ್ಛ್ಯ ಸಕಲಾರ್ದೇವಾನ್‌ಪ್ರಣಮ್ಯಮುನಿಪುಂಗವಾನ್ ॥ ದಾರಭೃತ್ಯಾನ್ವಿ ತೋರಾಜಾಪುರೋಹಿತಪುರಸ್ಸರಃ ॥ ೩ ॥ ಕಲಶೇಶಂನಮಸ್ಕೃತ್ವಾ ಬಹುಮಾನಯುತಸ್ತಥಾ ॥ ಮಾಂಗಲ್ಯೈರ್ವಾದ್ಯಘೋಷೈಶ್ಚ ಜಗಾ ಮನಿಲಯಂಸ್ವಕಂ ॥ ೪ ॥ ಅಂತಃಸ್ಥಮಂದಿರೇದೇವೀರತ್ನಪರ್ಯಂಕ ಸಂಸ್ಥಿತಂ ॥ ಕೋಟಿಕಂದರ್ಪಲಾವಣ್ಯಂಸುಸ್ಮಿತಂಚಂದ್ರಶೇಖರಂ॥

೧೧ನೆಯ ಅಧ್ಯಾಯವು.

ಸೂತಪೌರಾಣಿಕನು ಶೌನಕಾದಿ ಋಷಿಗಳನ್ನು ಕುರಿತು ಹೇಳು ತ್ತಾನೆ. ಈ ಪ್ರಕಾರವಾದ ಉತ್ಸವವು ನೆರವೇರಿದನಂತರ ಆ ದ್ವಾದಶಿ ಯಲ್ಲಿ ಸಾಯಾಹ್ನವಾದ ಪ್ರದೋಷಕಾಲದಲ್ಲಿ ಸಮಸ್ತ ಋಷೀಶ್ವರರೂ ಮದುವೆಯ ಕಟ್ಟಳೆಯಿಂದ ಶ್ರೀ ದಂಪತಿಯರನ್ನು ಚೆನ್ನಾಗಿ ಪೂಜಿ ಸಿ ॥೧॥ ಹಿಂದೆ ಹೇಳಿದ ಸಕಲ ವಿಭವಗಳಿಂದ ಉತ್ಸವವನ್ನು ಸಂಪೂ ರ್ಣವಾಗಿ ಮಾಡಿದರು. ಅನಂತರ ಬಾಂಧವರಿಂದ ಕೂಡಿದ ಪರ್ವತರಾಜನು ತನ್ನ ಸಕಲ ರಾಜಮರ್ಯಾದೆಯೊಡನೆ ॥೨॥ ಸಮಸ್ತ ದೇವೇಶ್ವರರನ್ನೂ ಕುರಿತು ಮೃದುಭಾಷಣೆಯನ್ನು ಮಾಡಿ, ಈಶ್ವರನನ್ನು ನಮಸ್ಕರಿಸಿ ಪುರೋಹಿತರೇ ಮುಖ್ಯವಾಗಿ ಪತ್ನಿಯಿಂದಲೂ ಭೃತ್ಯರಿಂದಲೂ ಒಡ ಗೂಡಿದವನಾಗಿ ॥೩॥ ಶ್ರೀ ಕಲಶೇಶ್ವರನನ್ನು ನಮಸ್ಕರಿಸಿ ಆ ಭಗವಂತ ನಿಂದ ಪ್ರೀತಿಪೂರ್ವಕವಾದ ಮರ್ಯಾದೆಯನ್ನು ಪಡೆದವನಾಗಿ, ಮಂಗ ಲಗಳಾದ ವಾದ್ಯಧ್ವನಿಗಳೊಡನೆ ತನ್ನ ಅರಮನೆಯನ್ನು ಕುರಿತು ತೆರಳಿದನು. ॥ ೪ ॥ ಇತ್ತಲಾ ಶ್ರೀ ಪಾರ್ವತೀದೇವಿಯು ಮಣಿಮ ಯಮಂಟಪ ಮಧ್ಯದಲ್ಲಿರುವ ನವರತ್ನಗಳ ಮಂಚದಲ್ಲಿ ಕುಳಿತಿರುವ

॥ ೫ ॥ ಹಾರನೂಪುರಶೋಭಾಢ್ಯಂಕಿರೀಟಮಕುಟೋಜ್ವಲಂ॥ ಸೇವ್ಯೇಸಹಚರಸ್ತ್ರೀಭಿರನ್ವಿತಾಲಲಿತಾಶಿವಂ ॥ ೬ ॥ ನಿಜಾರುಣಪ್ರಭಾಪೂರಮಜ್ಜದ್ಬ್ರಹ್ಮಾಂಡಮಂಡಲಾ ॥ ಚಂಪಕಾಶೋಕಪುನ್ನಾಗಸೌಗಂಧಿಕಲಸತ್ಕಚಾ ॥೭॥ ಕುರುವಿಂದಮಣಿಶ್ರೇಣೀಲಸತ್ಕೋಟೀರಮಂಡಿತಾ॥ ಅಷ್ಟಮೀಚಂದ್ರವಿಭ್ರಾಜದಳಿಕಸ್ಥಳಶೋಭಿತಾ ॥೮॥ ಮುಖಚಂದ್ರಕಳಂಕಾಭಮೃಗನಾಭಿವಿಶೇಷಕಾ ॥ ವದನಸ್ಮರಮಾಂ

ನಾದ ಕೋಟಿ ಮನ್ಮಥರ ಸುಂದರನಾದ, ಚಂದ್ರಾರ್ಧಭೂಷಣನಾದ, ಮಂದಹಾಸಮಂಡಿತನಾದ ॥೫॥ ಮುತ್ತಿನಹಾರಗಳ ಮತ್ತು ಕಡಗಗಳ ಕಾಂತಿಯಿಂದ ಮಂಡಿತನಾದ, ಕಿರೀಟ ಮಕುಟಗಳಿಂದ ಪ್ರಜ್ವಲಿಸುತ್ತಿರುವ ಶ್ರೀಕಲಶೇಶ್ವರಸ್ವಾಮಿಯನ್ನು ಅನೇಕ ಪರಿಚಾರಕ ಸ್ತ್ರೀಯರುಗಳಿಂದ ಕೂಡಿ ಶ್ಲಾಘ್ಯವಾದ, ಮೃದುಸ್ವಭಾವವುಳ್ಳ, ಸರ್ವಮಂಗಲಸ್ವರೂಪಳಾದ ಆದೇವಿಯೂ ಇಷ್ಟಾನುಗುಣವಾಗಿ ಸೇವಿಸಿದಳು ॥೬॥ (ಈ ಮುಂದಿರುವ ಇಪ್ಪತ್ತು ಶ್ಲೋಕಗಳ ತಾತ್ಪರ್ಯವು ಕೇವಲ ಆಧ್ಯಾತ್ಮ ಪರಗಳಾಗಿ ಯೂಶೃಂಗಾರ ರಸಭರಿತಗಳಾಗಿಯೂ ಇರುವುದರಿಂದ ಪಾಠಕರಿಗೆ ಸುಲಭ ಬೋಧನಗಳಾಗುವ ಮಟ್ಟಿಗೆ ಸಂಕ್ಷೇಪವಾಗಿ ಬರೆಯುವೆನು. ಮಹನೀಯರೆಲ್ಲರೂ ಪ್ರೀತಿಯಿಟ್ಟು ಪಠಿಸಲಿ.) ಅನಾದಿಶಕ್ತಿಯಾದ ಶ್ರೀ ಪಾರ್ವತೀದೇವಿಯೂ ತನ್ನ ಸಹಜಗಳಾದ ಜೀವಾಂತರಗಳೆಂಬ ಬೆಳಕುಗಳಲ್ಲಿ ತೇಲಾಡುವ ಅನೇಕ ಬ್ರಹ್ಮಾಂಡಗಳ ಪಟಲಗಳುಳ್ಳ ಅನೇಕ ವಿಧಗಳಾದ ಕರ್ಮಗಳ ಫಲಗಳೆಂಬ ಸಂಪಗೆ, ಅಶೋಕ, ಪುನ್ನಾಗ, ಸುಗಂಧಿ ಪುಷ್ಪಗಳಿಂದ ಪರಿಮಳಿಸುವ ಕೇಶಪಾಶವುಳ್ಳ ॥ ೭ ॥ ಮತ್ತು ಕಮಲ ಮುತ್ತು ಮೊದಲಾದ ರತ್ನಗಳ ಸರಗಳೆಂಬ ಉಪನಿಷತ್ತುಗಳಿಂದ ವ್ಯಾಪ್ತವಾದ, ಮಸ್ತಕಾಗ್ರದಿಂದ ಅಲಂಕೃತಳಾದ ಅಣಿಮಾದ್ಯೈಶ್ವರ್ಯಗಳೆಂಬ ಪಕ್ಷಾರ್ಧದಲ್ಲಿರುವವನಂತಿರುವ, ಅರ್ಧಚಂದ್ರನಿಂದ ಶೋಭಿಸುವ ಮುಂಗುರುಳುಗಳುಳ್ಳಂಥವಳಾಗಿ ॥೮॥ ವೇದೋಕ್ತ ಕರ್ಮಫಲಗಳೆಂಬ ಮುಖವೆಂಬ ಚಂದ್ರ

ಗಲ್ಯಗೃಹತೋರಣಚುಲ್ಲಿಕಾ ॥ ೯ ॥ ವಕ್ತ್ರಲಕ್ಷ್ಮೀಪರೀವಾಹಚಲನ್ಮೀನಾಭಲೋಚನಾ ॥ ನವಚಂಪಕಪುಷ್ಪಾಭನಾಸಾದಂಡವಿರಾಜಿತಾ ॥ ೧೦ ॥ ತಾರಾಕಾಂತಿತಿರಸ್ಕಾರಿನಾಸಾಭರಣಭೂಷಿತಾ ॥ ಕದಂಬಮಂಜರೀಕ್ಲೃಪ್ತಕರ್ಣಪೂರವಿರಾಜಿತಾ ॥ ೧೧ ॥ ತಾಟಂಕಯುಗಳೀಭೂತತಪನೋಡುಪಮಂಡಲಾ ॥ ಪದ್ಮರಾಗಶಿಲಾದರ್ಶಪರಿಭಾವಿಕಪೋಲಭೂಃ ॥ ೧೨ ॥ ನವವಿದ್ರುಮಬಿಂಬಶ್ರೀನ್ಯಕ್ಕಾರಿದಶನಚ್ಛದಾ ॥ ಶುದ್ಧವಿದ್ಯಾಂಕುರಾಕಾರದ್ವಿಜಪಙ್ಕ್ತಿದ್ವಯೋಜ್ಜ್ವಲಾ ॥೧೩॥ ಕರ್ಪೂರವೀಟಿಕಾಮೋದಸಮಾಕರ್ಷದಿಗಂತರಾ । ನಿಜಸಲ್ಲಾಪಮಾಧುರ್ಯವಿನಿರ್ಭರ್ತ್ಸಿತಚಂದ್ರಿಕಾ ॥ ೧೪ ॥ ಮಂದಸ್ಮಿತ

ನಲ್ಲಿರುವ ಕಳಂಕದಂತಿರುವ, ಕಸ್ತೂರಿ ತಿಲಕವುಳ್ಳ ಮತ್ತು ಮುಖವೆಂಬ ಮನ್ಮಥನ ಮನೆಗೆ ಮಾಯಾ ವಿಲಾಸವಾದ ಹುಬ್ಬುಗಳೆಂಬ ಮಣಿಮಯ ತೋರಣವುಳ್ಳ ॥೯॥ ಮುಖದ ಶೋಭಾಪ್ರವಾಹದಲ್ಲಿ ಚಲಿಸುವ ಮೀನಿನ ನೇತ್ರದಂತೆ ನೇತ್ರವುಳ್ಳ ಹೊಸದಾಗಿ ಅರಳುತ್ತಿರುವ ಸಂಪಿಗೆಹುವ್ವಿನಂತಿರುವ ಮೂಗಿನಿಂದ ಪ್ರಕಾಶಿಸುತ್ತಿರುವ॥೧೦॥ ಅಂಥ ಮೂಗಿನಲ್ಲಿ ನಕ್ಷತ್ರದ ಕಾಂತಿಯನ್ನು ತಿರಸ್ಕರಿಸುವ ಮೂಗುತಿ ಮುಖರಗಳಿಂದ ಶೋಭಿತಳಾದ, ಕದಂಬ ಪುಷ್ಪಗಳ ಗೊಂಚಲುಗಳಿಂದ ಸಹಿತಮಾದ ಮುತ್ತಿನ ಕೊಪ್ಪಿನಿಂದ ಶೋಭಿಸುತ್ತಿರುವ ॥೧೧॥ ಓಲೆಗಳ ಜೋಡಾಗಿರುವ ಸೂರ್ಯಚಂದ್ರಮಂಡಲಗಳುಳ್ಳ ಪದ್ಮರಾಗವೆಂಬ ರತ್ನದ ಕನ್ನಡಿಯ ಬೆಳಕನ್ನು ನಿಂದಿಸುವ ಕೆನ್ನೆಗಳುಳ್ಳ ॥೧೨॥ ಹೊಸದಾದ ಕೆಂಪು ರತ್ನದ ಆಕಾರದ ಸಂಪತ್ತನ್ನು ಹಿಯ್ಯಾಳಿಸುವ ತುಟಿಯುಳ್ಳ, ಪರಿಶುದ್ಧ ಸ್ವರವರ್ಣಶೋಭಿತವಾದ ವೇದಗಳ ಮೊಳಕೆಗಳಂತಿರುವ ಎರಡುಸಾಲು ದಂತಗಳಿಂದ ಪ್ರಜ್ವಲಿಸುತ್ತಿರುವ ॥೧೩॥ ಪಚ್ಚಕರ್ಪೂರ ಪರಿಮಳದ ವ್ಯಾಪನೆಯಿಂದ ತುಂಬಿರುವ ಸಮಸ್ತ ದಿಕ್ಕುಗಳುಳ್ಳ ಮತ್ತು ತನ್ನ ಮೃದುಭಾಷಣೆಯ ಮಾಧುರ್ಯದಿಂದ ಬೆಳದಿಂಗಳನ್ನು ಹೆದರಿಸುವವಳೋವಾದಿಯಲ್ಲಿರುವ ॥೧೪॥ ಮತ್ತು ಮುಗಳು

ಪ್ರಭಾಪೂರಮಜ್ಜತ್ಕಾಮೇಶಮಾನಸಾ ॥ ಅನಾಕಲಿತಸಾದೃಶ್ಯಚ
ಬುಕಶ್ರೀವಿರಾಜಿತಾ ॥ ೧೫ ॥ ಕಾಮೇಶಬದ್ಧಮಾಂಗಲ್ಯಸೂತ್ರ
ಶೋಭಿತಕಂಧರಾ ॥ ಕನಕಾಂಗದಕೇಯೂರಕಮನೀಯಭುಜಾನ್ವಿ
ತಾ ॥ ೧೬ ॥ ರತ್ನಗ್ರೈವೇಯಚಿಂತಾಕಲೋಲಮುಕ್ತಾಫಲಾನ್ವಿ
ತಾ ॥ ಕಾಮೇಶ್ವರಪ್ರೇಮರತ್ನಮಣಿಪ್ರತಿಪಣಸ್ತನೀ ॥ ೧೭ ॥
ನಾಭ್ಯಾಲವಾಲರೋಮಾಳಿಲತಾಫಲಕುಚದ್ವಯಾ ॥ ಲಕ್ಷ್ಯರೋಮ
ಲತಾಧಾರತಾಸಮುನ್ನೇಯಮಧ್ಯಮಾ ॥ ೧೮ ॥ ಸ್ತನಭಾರದ
ಳನ್ಮಧ್ಯಪಟ್ಟಬದ್ಧವಳಿತ್ರಯಾ ॥ ಅರುಣಾರುಣಕೌಸುಂಭವಸ್ತ್ರ
ಭಾಸ್ವತ್ಕಟೀತಟೀ ॥ ೧೯ ॥ ರತ್ನಕಿಂಕಿಣಿಕಾರಮ್ಯರಶನಾದಾಮ

ನಗೆಯ ಕಾಂತಿಯಿಂದ ಸಂಪೂರ್ಣವಾಗಿ ವ್ಯಾಪಿಸಿದ, ಭಕ್ತರ ಸಕ
ಲಾಭೀಷ್ಟಪ್ರದನಾದ ಭಗವಂತನ ಮನಸ್ಸು ಉಳ್ಳ ದೃಷ್ಟಾಂತವನ್ನು
ತೋರಿಸುವ, ವಸ್ತುವೇ ಇಲ್ಲದಿರುವ ಗಲ್ಲದಕಾಂತಿಯಿಂದ ಪ್ರಕಾಶಿಸು
ತ್ತಿರುವ ॥೧೫॥ ಇಷ್ಟಾರ್ಥದಾಯಕನಾದ ಪರಮಾತ್ಮನಿಂದ ಶೋಭಿ
ಸುವ ಕಂಠವುಳ್ಳ ಸುವರ್ಣದ ಭುಜಕೀರ್ತಿಗಳು ತೋಳಬಂದಿಗ
ಳಿಂದ ಅಲಂಕೃತಗಳಾದ ಬಾಹುಗಳ ಜೋಡಿನಿಂದ ಸಹಿತಳಾದ ॥೧೬॥
ಮಣಿಮಯವಾದ ಕುತ್ತಿಗೆಯ ಚಿಂತಾಕಿನಲ್ಲಿ ಜೋಲಾಡುವ ಮುತ್ತು
ಗಳುಳ್ಳ, ಶ್ರೀ ಭಗವಂತನಲ್ಲಿರುವ ಭಕ್ತಿಪೂರ್ವಕವಾದ ಪ್ರೀತಿಯೆಂಬ
ಮಣಿಗಳೆಂಬಂತೆ ತೋರುತ್ತಿರುವ ಸ್ತನದ್ವಯವುಳ್ಳ ॥ ೧೭ ॥ ನಾಭಿ
ಪ್ರದೇಶವೆಂಬ ಕಟಿಯಲ್ಲಿ ಹುಟ್ಟಿದ ನುಣುಪಾದ ರೋಮಗಳ
ಸಾಲೆಂಬ ಬಳ್ಳಿಯಲ್ಲಿ ಸ್ತನದ್ವಯವೆಂಬ ಫಲಗಳು ಕಾಣುತ್ತಿರುವ
ರೋಮಗಳ ಬಳ್ಳಿಗೆ ಆಧಾರವಾದ ಅವುಗಳನ್ನು ಮೇಲಕ್ಕೆ ಎತ್ತುವಂ
ತಿರುವ ಕಟಿ ಪ್ರದೇಶವುಳ್ಳ॥೧೮॥ಸ್ತನಗಳ ಭಾರದಿಂದಲೇ ಬಗ್ಗಿದೆಯೋ
ಯೆಂಬಂತಿರುವ ಮಧ್ಯಪ್ರದೇಶದಲ್ಲಿ ಪಟ್ಟೆಯಿಂದ ಕಟ್ಟಲ್ಪಟ್ಟ ಕುಕ್ಷಿಯ
ಮೂರು ಗೆರೆಯುಳ್ಳ ಅರುಣನಂತೆ ಕೆಂಪಾದ ಕುಸುಬೆಯ ಬಣ್ಣ
ವುಳ್ಳ, ಪಟ್ಟೆಯ ಸೀರೆಯಿಂದ ಪ್ರಕಾಶಿಸುತ್ತಿರುವ ಕಟಿಯುಳ್ಳ ॥೧೯॥

ಭೂಷಿತಾ ॥ ಕಾಮೇಶಜ್ಞಾತಸೌಭಾಗ್ಯಮಾರ್ದವೋರುದ್ವಯಾನ್ವಿತಾ ॥ ೨೦ ॥ ಮಾಣಿಕ್ಯಮುಕುಟಾಕಾರಜಾನುದ್ವಯವಿರಾಜಿತಾ ॥ ಇಂದ್ರಗೋಪಪರಿಕ್ಷಿಪ್ತಸ್ಮರತೂಣಾಭಜಂಘಿಕಾ ॥ ೨೧ ॥ ಗೂಢಗುಲ್ಫಾಕೂರ್ಮಪೃಷ್ಠಜಯಿಷ್ಣುಪ್ರಪದಾನ್ವಿತಾ ॥ ಶಿಂಜಾನಮಣಿಮಂಜೀರಮಂಡಿತಶ್ರೀಪದಾಂಬುಜಾ ॥ ೨೨ ॥ ಮರಾಳೀಮಂದಗಮನಾಮಹಾಲಾವಣ್ಯಶೇವಧಿಃ ॥ ನಖದೀಧಿತಿಸಂಛನ್ನನಮಜ್ಜನತಮೋಗುಣಾ ॥ ೨೩ ॥ ಪದದ್ವಯಪ್ರಭಾಪೂರನಿರಾಕೃತಸರೋರುಹಾ ॥ ಸರ್ವಾರುಣಾನವದ್ಯಾಂಗೀಸರ್ವಾಭರಣಭೂಷಿತಾ ॥ ೨೪ ॥ ಶಿವಕಾಮೇಶ್ವರಾಂಕಸ್ಥಾಶಿವಸ್ವಾಧೀನವಲ್ಲಭಾ ॥

ಮಣಿಗಳಿಂದ ಕಿಣಿಕಿಣಿಯೆಂದು ಧ್ವನಿಯಾಗುವ ಸುಂದರವಾದ ಪಟ್ಟಿಯ ಸರಗಳಿಂದ ಅಲಂಕೃತಳಾದ (ಅಜಾಮೇಕಾಮಿತಿಜಾಷಮಾಣ) ಎಂಬ ವೇದಾರ್ಥದಂತೆ ಸರ್ವಪ್ರದನಾದ ಪರಮಾತ್ಮನಿಂದ ತಿಳಿಯಲ್ಪಟ್ಟ ಮೃದುಗಳಾದ ಊರುಪ್ರದೇಶಗಳುಳ್ಳ ॥ ೨೦ ॥ ರತ್ನಮಯಗಳಾದ ಮಕುಟಗಳಂತೆ ಉರುಟಾದ ಮೊಳಕಾಲುಗಳಿಂದ, ಶೋಭಿಸುತ್ತಿರುವ ಇಂದ್ರಗೋಪಕ್ಕೆ ಸದೃಶಗಳಾದ ಮನ್ಮಥನ ಬತ್ತಳಿಕೆಯಂತಿರುವ ಜಘನವುಳ್ಳ ॥ ೨೧ ॥ ಮುಚ್ಚಿರುವ ಗಂಟುಗಳುಳ್ಳ ಕೂರ್ಮದ ಬೆನ್ನಿನ ಭಾಗದಂತಿರುವ ಜಯಶೀಲವಾದ ಮಡುಗಳುಳ್ಳ ಧ್ವನಿಯಾಗುತ್ತಿದ್ದ ಕಾಲಿನಲ್ಲಿರುವ ಕಡಗಗಳ ಮಣಿಗಳಿಂದುಂಟಾದ ಮನೋಹರ ಶಬ್ದಗಳನ್ನು ಹೊಂದಿರುವ, ಶ್ರೀಚರಣಯುಗ್ಮವುಳ್ಳ ॥ ೨೨ ॥ ರಾಜಹಂಸಿಯಂತೆ ಮೆತ್ತನೆ ನಡಿಗೆಯುಳ್ಳ ಮಹಾಸೌಂದರ್ಯಕ್ಕೆ ಆಶ್ರಯಳಾದ ಪಾದದ ಉಗರುಗಳ ಬೆಳಕುಗಳಿಂದ ಪರಿಹರಿಸಲ್ಪಟ್ಟ, ಸೇವಕರ ಅಜ್ಞಾನವುಳ್ಳ ॥ ೨೩ ॥ ಇಂಥ ಚರಣಯುಗ್ಮದ ಕಾಂತಿಗಳ ಪೂರಣದಿಂದ ತಿರಸ್ಕೃತವಾದ ಕಮಲವುಳ್ಳ, ಸರ್ವಾಂಗವೂ ಸ್ವರ್ಣದಂತಿರುವ ಶ್ರೀಭಗವದ್ದರ್ಶನಾಹ್ಲಾದ ಉಳ್ಳ ಸಕಲಾಲಂಕಾರಗಳಿಂದ ಭೂಷಿತಳಾದ ॥ ೨೪ ॥ ಸರ್ವಮಂಗಳೆಯು ಸಾರ್ವಭೌಮನಾದ ಶ್ರೀ ಪರಮೇ

ಇತ್ಥಂಸಹಸ್ರನಾಮೋಕ್ತವಿಭವೈರನ್ವಿತಾಶಿವಾ ॥೨೫॥ ಸರ್ವಾಂ
ತಃಕರಣೈರ್ದೇವಂಮೋದಯಾಮಾಸಪಾರ್ವತೀ ॥ ನಿತ್ಯಾನಂದೋ
ಪಿಭಗವಾನ್ಮೋದತೇಪರಿಪೂರ್ಣಯಾ ॥ ೨೬ ॥ ಅಥದೇವಪದದ್ವಂ
ದ್ವಕಮಲಂಪ್ರಣನಾಮಸಾ ॥ ಇಂಗಿತಜ್ಞಃಪ್ರಿಯಾಂಪ್ರಾಹಯಾಹಿ
ತ್ವಂಪಿತುರಂತಿಕಂ ॥ ೨೭ ॥ ತ್ವನ್ಮೂರ್ತಿಮಯ್ಯಾಚಿಚ್ಛಕ್ತ್ಯಾತಿ
ಷ್ಠಕ್ಕುರ್ಯಾಂಮಹೋತ್ಸವಂ ॥ ಇತ್ಥಂಗಚ್ಛಸಿದ್ಧೇವಿಚಾ
ಬ್ದೇಚಾಬ್ದೇಮಹೋತ್ಸವಃ ॥ ೨೮ ॥ ಭವಿಷ್ಯತಿನಸಂದೇಹೊಹ್ಯಗ
ಸ್ತ್ಯಸ್ತುತಿಪೂರಿತಃ ॥ ಶಂಭುನೇತ್ಥಂಸಮಾದಿಷ್ಟಾನಿಶೀಥೇಪರಮೇ


ಶ್ವರನ ತೊಡೆಯಲ್ಲಿ ನೆಲೆಗೊಂಡಿರುವ ಅಲ್ಲಿಯೇ ಇರುವಳಾದರೂ ಆ ಸರ್ವಜ್ಞನಾದ ಭಗವಂತನ ಅಧೀನಳಾಗಿಯೂ ಪ್ರೀತಿಪಾತ್ರಳಾಗಿಯೂ ಇರುವ ಶ್ರೀಗಿರಿಜಾದೇವಿಯು ಹೀಗೆ ಸಹಸ್ರನಾಮಗಳಲ್ಲಿ ಸ್ತುತಿಸಿರುವ ಸಮಸ್ತ ವಿಭವ ಭರಿತಳಾದವಳಾಗಿ ॥ ೨೫ ॥ ಪರ್ವತರಾಜನ ಪುತ್ರಿಯಾಗಿ ಶ್ರೀ ಭಗವಂತನನ್ನು ಸರ್ವಾಂತಃಕರಣಗಳಿಂದಲೂ ಒಲಿಸಿಕೊಂಡಳು. ಶ್ರೀ ಭಗವಂತನು ತಾನು ಸ್ವಾನಂದಪೂರ್ಣನಾದಾಗ್ಯೂ ಸಂಪೂರ್ಣಳಾದ ಈ ಗಿರಿಜಾದೇವಿಯಿಂದ ಸಂತೋಷಿಸಿದನು ॥೨೬॥ ಈಪ್ರಕಾರವಾಗಿ ಭಗವತ್ಸೇವೆಯನ್ನು ನೆರವೇರಿಸಿ ಆ ಮೇಲೆ ಆ ಗಿರಿಜಾದೇವಿಯು ಶ್ರೀಚರಣಕಮಲವನ್ನು ನಮಸ್ಕರಿಸಿದಳು. ಆಗ್ಯೆ ಪೂರ್ವೋಕ್ತವಾದ ಇವಳ ಅಭಿಪ್ರಾಯವನ್ನು ಬಲ್ಲ ಶ್ರೀ ಪರಮೇಶ್ವರನು ಎಲೈ ಪಾರ್ವತಿಯೇ, ನಿನ್ನ ತಂದೆಯ ಸಮೀಪವನ್ನು ಕುರಿತು ಈಗಲೇ ಪ್ರಯಾಣಮಾಡು ॥೨೭॥ ನಿನ್ನ ಅಂಶಮಯಳಾದ ಜ್ಞಾನಶಕ್ತಿಯಿಂದ ಉಳಿದ ಉತ್ಸವವನ್ನು ನೆರವೇರಿಸಿಕೊಳ್ಳುವೆನು. ಈ ಪ್ರಕಾರವಾಗಿ ನೀನು ಹೋಗುವಳಾದರೆ ಕರ್ಮ ಸಂಪೂರ್ಣವಾಗದೆ ಇರುವದರಿಂದ ಪ್ರತಿ ಸಂವತ್ಸರದಲ್ಲಿಯೂ ಈ ಉತ್ಸವವು ॥ ೨೮ ॥ ಅಗಸ್ತ್ಯಮುನೀಶ್ವರನ ಪ್ರಾರ್ಥನೆಯನ್ನು ಪೂರೈಸುವುದಾಗುತ್ತದೆ. ಸಮಸ್ತರಿಗೂ ಹಿತವನ್ನೇ ಬಯಸುವ ಆ ಪರಮಾತ್ಮನಿಂದ ಹೀಗೆ ಆಜ್ಞಾಪಿಸಿಕೊಂಡ ಸರ್ವೇಶ್ವರಿ

ಶ್ವರೀ ॥ ಸ್ವವಾಹಂಸಿಂಹಮಾರುಹ್ಯಕೈಶ್ಚಿದ್ದೇವೈಸ್ಸಮನ್ವಿತಾ॥ಯ
ಥಾಲೋಕಾನಜಾನಂತಿಜಗಾಮಪಿತುರಂತಿಕಂ ॥೩೦॥ ಆರ್ತಿಂಗತಾಂ
ತತಸ್ತಾಂಚಪಿತರೌಬಾಂಧವೈಸ್ಸಹ ॥ ಶ್ರಮಾಪನಾಯೈಸ್ತೈಸ್ತೈಸ್ಸರ್ವೈ
ರುಪಚಾರೈಃಪ್ರತಸ್ಥತುಃ ॥ ೩೧ ॥ ಸಾದೇವೀಪರಮಾತ್ಮಾನಂಧ್ಯಾ
ಯಂತೀಮನಸಾಸದಾ ॥ ಸರ್ವೈಸ್ಸಮ್ಮಾನಿತಾದೇವೀಹ್ಯವಸತ್ಪಿತು
ರಂತಿಕೇ ॥ ... ... ॥ ೩೨ ॥

ಇತಿ ಶ್ರೀ ಸ್ಕಂದಪುರಾಣೇ ಕಲಶೇಶ್ವರ ವಿವಾಹ ವರ್ಣನಂ ನಾಮ
ಏಕಾದಶೋಽಧ್ಯಾಯಃ ॥ ೧೧ ॥
ಶ್ರೀ ಶ್ರೀ ಶ್ರೀ ಶ್ರೀ.

ಯಾದ ಶ್ರೀ ಗಿರಿಜಾದೇವಿಯು ಆ ಅರ್ಧರಾತ್ರಿ ಸಮಯದಲ್ಲಿ ॥ ೨೯ ॥
ತನ್ನ ವಾಹನವಾದ ಸಿಂಹವನ್ನು ಹತ್ತಿಕೊಂಡು ಕೆಲವು ಪರಿಚಾರಕ
ದೇವತೆಗಳಿಂದ ಕೂಡಿಕೊಂಡವಳಾಗಿ ಪ್ರಾಪಂಚಿಕರಾದ ಜನರು ತಿಳಿ
ಯದಿರುವ ಹಾಗೆ ತಂದೆಯ ಸಮೀಪವನ್ನು ಕುರಿತು ತೆರಳಿದಳು ॥೩೦॥
ಈ ಪ್ರಕಾರ ಭಗವಂತನ ಅಭಿಪ್ರಾಯಾನುಸಾರವಾಗಿ ತಂದೆಯು ಮನೆ
ಯನ್ನು ಕುರಿತುಬಂದ ಶ್ರೀ ದೇವಿಯನ್ನು ತಂದೆ ತಾಯಿಗಳು ಬಂಧು
ಗಳಿಂದ ಸಹಿತರಾಗಿ ಆಯಾಸವನ್ನು ಹೋಗಲಾಡಿಸುವ ಸಮಸ್ತವಾದ
ಆದರಣೆಗಳಿಂದ ಆದರಿಸಿದರು ॥ ೩೧ ॥ ಸರ್ವಕಾಲದಲ್ಲಿಯೂ ಮನಸ್ಸಿ
ನಿಂದ ಆ ಗಿರಿಜಾದೇವಿಯು ಶ್ರೀ ಭಗವಂತನನ್ನು ಸ್ಮರಿಸುವವಳಾಗಿ,
ಅಲ್ಲಿರುವ ಸರ್ವರಿಂದಲೂ ಪೂಜ್ಯಳಾಗಿ ತಂದೆಯ ಸಮೀಪದಲ್ಲಿ ಸುಖವಾಗಿ
ವಾಸಮಾಡಿಕೊಂಡಿದ್ದಳು ॥ ...... ॥ ೩೨ ॥

ಈ ಪ್ರಕಾರವಾಗಿ ಸ್ಕಂದಪುರಾಣದಲ್ಲಿ ತುಂಗಭದ್ರಾ ಖಂಡದಲ್ಲಿ
ಹೇಳಿರುವ ಕಲಶೇಶ್ವರ ಸ್ವಾಮಿಯವರ ಮಹಿಮೆಯಲ್ಲಿ
ಶ್ರೀ ಗಿರಿಜಾ ಕಲ್ಯಾಣೋತ್ಸವದ ಕಥನವು
ಸಮಾಪ್ತಿಯಾಯಿತು ॥ ಶ್ರೀ ಶ್ರೀ.



ಶ್ರೀ ಕಲಶೇಶ್ವರ ಸ್ವಾಮಿ ರಥೋತ್ಸವ

ಶ್ರೀಸೂತಃ॥ತತಃಪ್ರಭಾತೇದೇವೇಶಃಸರ್ವಜ್ಞೋಽಪಿಚಕುಂಭ
ಜಃ ॥ ಪ್ರಾಹಬ್ರಹ್ಮಾದಿಕಾನ್‌ದೇವಾನ್‌ನವೋಢಾಕ್ಯನುಚಾದ್ರಿಜಾ ॥
॥ ೧ ॥ ಜಾನನ್ನಪಿನಜಾನೇಽಹಮಿತಿಜಿಜ್ಞಾಸಿತಸ್ಸುರಾನ್ ॥ ಉವಾ
ಚಗಿರಿಶಂವಿಷ್ಣುಃಸ್ಮಯನ್ನಿವಸವಿಸ್ಮಯಃ ॥ ೨ ॥ ವ್ಯಗ್ರಾಹಿಭಗವ
ನ್ದೇವೀನಿಕಟಸ್ಥೋಽವಿಚಾರ್ಯತಾಂ ॥ ಬಿಂದುಮಾಧವಇತ್ಯತ್ರಮ
ಮಾಂಶೋಽವರ್ತತೇಕೃತೀ ॥ ೩ ॥ ಸಆಹೂಯವಿಚಾರ್ಯೋಽಹಿತವಾ
ಜ್ಞಾತಯಥಾತಥಾ ॥ ತಥೇತಿಕಲಶೇಶೋಽಸೌಕಾಲಮಂಕಸ್ಥಿತಂವಿ
ಭುಃ ॥ ಪ್ರೋವಾಚೋತ್ತರಮಾರ್ಗಸ್ಥಂಬಿಂದುಮಾಧವಮಾನ

೧೨ನೆಯ ಅಧ್ಯಾಯ ಪ್ರಾರಂಭ.

ಆ ಬಳಿಕ ಸೂತ ಪೌರಾಣಿಕನು ಶೌನಕಾದಿ ಋಷಿಗಳನ್ನು ಕುರಿತು ಮುಂದಿನ ಚರಿತ್ರವನ್ನು ಹೇಳುವನು. ಹಾಗೆ ಬೆಳಗಾಗುತ್ತಲೆ ಸರ್ವ ದೇವತೆಗಳಿಗೆ ಒಡೆಯನಾದ ಶ್ರೀಕಲಶೇಶ್ವರನು ಸರ್ವವನ್ನೂ ಬಲ್ಲವನಾದಾಗ್ಯೂ ತಿಳಿಯದಿರುವನಂತೆ ಬ್ರಹ್ಮಾದಿದೇವತೆಗಳನ್ನು ಕುರಿತು ಹೊಸ ಮದವಣಿಗಿತ್ತಿಯಾದ ಪಾರ್ವತಿಯು ಇಲ್ಲೆಲ್ಲಿಯೂ ಕಾಣುವುದಿಲ್ಲ. ಏನಿದು ಆಶ್ಚರ್ಯವೆಂದು ಕೇಳಿದನು ॥ ೧ ॥ ಬಲ್ಲವನಾದಾಗ್ಯೂ ನಾನು ತಿಳಿಯದ ಇರುವೆನು ಎಂಬ ಆ ದೇವತೆಗಳನ್ನು ವಿಚಾರಿಸಿದನು. ಆಗ ವೈಕುಂಠೇಶನು ವಿಸ್ಮಯ ವಿಲ್ಲದವನಾದಾಗ್ಯೂ ಆಶ್ಚರ್ಯಪಡುವನಂತೆ ನಟಿಸಿ, ಶ್ರೀ ಕಲಶೇಶ್ವರನನ್ನು ಕುರಿತು ಹೇಳಿದನು ॥ ೨ ॥ ಭಗವಂತನೇ ಶ್ರೀ ಗಿರಿಜಾದೇವಿಯು ಹುಡುಕಿಸಿಕೊಳ್ಳತಕ್ಕವಳು ಅದಕ್ಕಾಗಿ ಸಮೀಪದಲ್ಲಿರುವ ಚಮತ್ಕಾರಿಯಾದ, ಮತ್ತು, ನನ್ನ ಅಂಶಭೂತನಾದ ಬಿಂದುಮಾಧವ ದೇವನು ಇದ್ದಾನೆ. ಇಲ್ಲಿಗೆ ಕರೆಯಿಸಿ ವಿಚಾರಿಸಿಕೊಳ್ಳತಕ್ಕವನು. ಆಮೇಲೆ ನಿನ್ನ ಅಪ್ಪಣೆ ಹೇಗೋ ಹಾಗೆ ಆಗಲಿ ಎಂದನು ॥ ೩ ॥ ಹಾಗಾಗಲಿ ಎಂದು ಶ್ರೀ ಕಲಶೇಶ್ವರನು ಕಾರ್ಯನಿರ್ವಾಹಕನಾಗಿ, ತನ್ನ ಪಾರ್ಶ್ವದಲ್ಲಿರುವ

ಯ ॥ ೪ ॥ ತಥೇತ್ಯುಕ್ತ್ವಾಪ್ರಣಮ್ಯೇಶಂಕಲಶೇಶಂಸಕಾಲರಾಟ್॥
ಪ್ರಯಯೌಮಾಧವಂದೇವಂದೃಷ್ಟ್ವಾತಂಪ್ರಾಹಸಸ್ಮಿತಂ ॥ ೫ ॥
ದಿದೃಕ್ಷುಸ್ತ್ವಾಂಪ್ರಭುರ್ದೇವಸಮಾಗಚ್ಛಾಜ್ಞಯಾಹರೇ ॥ ತಥೇ
ತ್ಯುಕ್ತ್ವಾಮಾಧವಸ್ತುಕಲಶೇಶಂಸಮಾಯಯೌ ॥ ೬ ॥ ಬ್ರಹ್ಮಾ
ದಿದೇವತಾಮಧ್ಯೇಸ್ಫುರಂತಂಕಲಶೇಶ್ವರಂ ॥ ನತ್ವೋವಾಚಮಹಾ
ದೇವಕಿಮಹಂಕರವಾಣಿಭೋ॥ ೭ ॥ ತದಾಸಧೂರ್ಜಟಿರ್ದೇವೋಭೀ
ಷಯನ್ನಿವಮಾಧವಂ ॥ ಪ್ರೋವಾಚವಿಷ್ಣೋಗಿರಿಜಾಕ್ವಗತಾವೇತ್ಸಿ
ತತ್ವತಃ ॥ ೮ ॥ ಯದಿಸತ್ಯಂಸಭಾಮಧ್ಯೇಮಮಾಗ್ರೇಬ್ರೂಹಿನಿಶ್ಚ
ಯಂ ॥ ತದೋವಾಚಹರಿರ್ದೇವಂಸಾದರಂವಿಸ್ಮಯನ್ನಿವ ॥ ೯ ॥

ಕಾಲನೆಂಬ ದೇವನನ್ನು ಕುರಿತು ಉತ್ತರದಿಕ್ಕಿನ ದಾರಿಯಲ್ಲಿರುವ
ಬಿಂದುಮಾಧವ ದೇವನನ್ನು ಕರೆದುಕೊಂಡು ಬಾಯೆಂದನು ॥ ೪ ॥
ಅಪ್ಪಣೆಯೆಂದು ಕಾಲರಾಜೇಶನು ಶ್ರೀ ಕಲಶೇಶ್ವರನನ್ನು ನಮಸ್ಕರಿಸಿ
ಬಿಂದುಮಾಧವನನ್ನು ಕುರಿತು ಹೋದನು. ಅಲ್ಲಿ ಆ ಬಿಂದುಮಾಧವ
ದೇವನನ್ನು ಕಂಡು ನಸುನಗುತ್ತ ಹೇಳಿದನು ॥೫॥ ಎಲೈ ಹರಿಯೆ, ಎಲೈ
ದೇವನೆ, ನಮ್ಮ ಒಡೆಯನು ನಿನ್ನನ್ನು ನೋಡಲಪೇಕ್ಷಿತನಾಗಿದ್ದಾನೆ.
ಅವನ ಅಪ್ಪಣೆಯಿಂದ ಬರಬೇಕು ಎಂದನು. ಹಾಗಾಗಲಿ ಎಂದು ಶ್ರೀ
ಕಲಶೇಶ್ವರನನ್ನು ಕುರಿತು ಬಂದನು ॥ ೬ ॥ ಬಂದ ಬಿಂದುಮಾಧವನು
ಬ್ರಹ್ಮಾದಿ ದೇವ ಸಭಾ ಮಧ್ಯದಲ್ಲಿ ಪ್ರಕಾಶಿಸುವ ಶ್ರೀ ಕಲಶೇಶ್ವರನನ್ನು
ನಮಸ್ಕರಿಸಿ ಎಲೈ ಭಗವಂತನೆ ನಾನು ಏನು ಮಾಡಲಿ, ಅಪ್ಪಣೆಯಾಗಲಿ
ಎಂದು ಕೇಳಿದನು ॥ ೭ ॥ ಆಗ ಹೊಂಬಣ್ಣವಾದ ಜಡೆಯುಳ್ಳ ಆ ಪರ
ಮೇಶ್ವರನು ಬಿಂದುಮಾಧವದೇವನನ್ನು ಹೆದರಿಸುವನಂತೆ ಮದನಣಿಗಿ
ತ್ರಿಯಾದ ಪಾರ್ವತಿದೇವಿಯು ಎಲ್ಲಿ ಹೋದಳು? ನೀನು ಯಥಾರ್ಥ
ವಾಗಿ ಬಲ್ಲೆಯಾ ಎಂದು ಕೇಳಿದನು ॥ ೮ ॥ ಏನಾದರೂ ತಿಳಿದಿದ್ದರೆ ಈ
ಸಭಾ ಮಧ್ಯೆ ನನ್ನ ಮುಂದೆ ನಿಶ್ಚಯವಾಗಿ ಹೇಳು-ಆಗ ಆ ಬಿಂದು
ಮಾಧವನು, ಆಶ್ಚರ್ಯಹೊರತಾಗಿ ವಿನಯವಾಗಿ ಶ್ರೀ ಕಲಶೇಶ್ವರನನ್ನು
ಕುರಿತು ॥ ೯ ॥ ಎಲೈ ಭಗವಂತನಾದ ದೇವನೆ, ಆ ದೇವಿಯು ಎಲ್ಲಿ

ನಜಾನೇಭಗವನ್‌ದೇವೀಂಕ್ವಗತೇತಿಸುರೇಶ್ವರ ॥ ಮಯಾದ್ಯಕಿಂನುಕ
ರ್ತವ್ಯಂತದ್ಬ್ರೂಹಿತ್ರಿಪುರಾಂತಕ ॥ ೧೦ ॥ ಭ್ರೂಕುಟೀಚೋದಿ
ತೋಬ್ರಹ್ಮಾಪ್ರಾಹತಂಬಿಂದುಮಾಧವಂ ॥ ಶತಕ್ರತುಮುಖಾನ್
ದೇವಾನ್ಮಹರ್ಷೀನಪಿಸಾದರಂ ॥ ೧೧ ॥ ಬಿಂದುಮಾಧವದೇವೋ
ಯಂಪ್ರತಿಯಾತುಸ್ವಮಂದಿರಂ॥ವಯಂಸರ್ವೇಶ್ವಸಹೋಷಿತ್ವಾಶ್ವಃ
ಕುರ್ಮೋವಭೃಥಂಸುರಾಃ ॥ ೧೨ ॥ ತತ್ಪರೇದ್ಯುಃಪೂರ್ಣಿಮಾ
ಯಾಂಭವಿಷ್ಯೇತ್ರಿಪುರೋತ್ಸವೇ ॥ ಪ್ರಚರಿಷ್ಯಾಮಸರ್ವತ್ರಮೃಗ
ಯಂತೋದ್ರಿಜಾಂಸುರಾಃ ॥ ೧೩ ॥ ಇತಿಬ್ರಹ್ಮವಚಶ್ಶ್ರುತ್ವಾಪ್ರೋ
ಚುಃಸರ್ವೇತದೋಮಿತಿ ॥ ಬಿಂದುಮಾಧವದೇವಸ್ತುಯಯೌಸ್ವನಿ
ಲಯಂವಿಭುಃ ॥ ೧೪ ॥ ಅಥಸ್ವೈರಗತಿರ್ವಿಪ್ರೋನಾರದಃಪ್ರಯ

ಹೋದಳು ಎಂದು ನಾನು ಅರಿಯೆನು. ದೇವತೆಗಳಿಗೆ ಒಡೆಯನಾದ ತ್ರಿಪುರಸಂಹರಿಸಿದ ದೇವನೇ, ನಾನು ಈಗ ಏನು ಮಾಡತಕ್ಕದ್ದು, ಅಪ್ಪಣೆಯಾಗಲಿ ॥ ೧೦ ॥ ಹೀಗೆ ಹೇಳಿದ ಬಿಂದುಮಾಧವನ ಮಾತನ್ನು ಕೇಳಿ ಅಂತರಂಗದಲ್ಲಿ ಮಂದಹಾಸವುಳ್ಳ ಶ್ರೀಕಲಶೇಶ್ವರನ ಹುಬ್ಬಿನ ಸನ್ನೆಯಿಂದ ಪ್ರೇರಿತನಾದ ಬ್ರಹ್ಮದೇವನು ಆ ಬಿಂದುಮಾಧವನನ್ನು, ಅಲ್ಲಿದ್ದ ದೇವೇಂದ್ರ ಮೊದಲಾದ ದೇವತೆಗಳನ್ನು ಪ್ರೀತಿಪೂರ್ವಕವಾಗಿ ಋಷಿಗಳನ್ನು ಕುರಿತು ಹೇಳಿದನು॥ ೧೧ ॥ ಈ ಬಿಂದುಮಾಧವದೇವನು ತನ್ನ ಮನೆಯನ್ನು ಕುರಿತು ಹೋಗಲಿ ನಾವು ಸರ್ವರೂ ಕೂಡಿಯಿದ್ದು ಶುಭವಾದ ನಾಳೆಯ ದಿನ ಅವಭೃಥವನ್ನು ಮಾಡಿಕೊಂಡು ॥೧೨॥ ಎಲೈ ದೇವತೆಗಳಿರಾ ಅದರ ಮಾರನೆಯಾದ ಪೂರ್ಣಿಮಾದಿನದಲ್ಲಿ ಆಗುತ್ತಿರುವ ತ್ರಿಪುರೋತ್ಸವದಲ್ಲಿ ಶ್ರೀಗಿರಿಜಾ ದೇವಿಯನ್ನು ಹುಡುಕುವವರಾಗಿ ಸಂಚಾರಮಾಡುವ ॥೧೩॥ ಸರ್ವರೂ ಬ್ರಹ್ಮದೇವನ ಈ ಪ್ರಕಾರವಾದ ಮಾತನ್ನು ಕೇಳಿ ಅದು ಆಹಾಗಾಗಲಿ ಎಂದು ಒಪ್ಪಿಗೆಯನ್ನು ಹೇಳಿದರು. ತತ್ವಧಾರಣ ಸಮರ್ಥನಾದ ಬಿಂದುಮಾಧವಸ್ವಾಮಿಯು ತನ್ನ ಸ್ಥಾನವನ್ನು ಕುರಿತು ತೆರಳಿದನು ॥ ೧೪ ॥ ಆ ಮೇಲೆ, ಈ

ಯಯೌಶಿವಂ॥ಕೀರ್ತಯನ್‌ಶಿವನಾಮಾನಿಪ್ರಣಮ್ಯಕಲಶೇಶ್ವರಂ ॥೧೫॥ ಚತುರ್ದಶ್ಯಾಂತತೋದೇವಾಹ್ನೈವಾಹ್ಯವಿಧಿನಾಶಿವಂ ॥ ಮುನಿಪತ್ನೀಭಿರಭ್ಯರ್ಚ್ಯಭಾರತೀಪ್ರಮುಖಾದಿಭಿಃ ॥ ೧೬ ॥ ಹರಿದ್ರಕುಂಕುಮೈಃಪುಷ್ಪೈಃಗಂಧತೈಲಾದಿಭಿರ್ವಿಭುಂ॥ಚಕ್ರುಃಶ್ರಾಂತ್ಯಚಾನ್ವಿತಂದೇವಂಗೀತವಾದಿತ್ರನಿಸ್ವನೈಃ ॥ ೧೭ ॥ ಕೃತ್ವಾಸ್ವಸ್ತ್ಯಯನೇಷ್ಟಿಂಚವಿಭವೈಃಸಕಲೈರಪಿ ॥ ಪ್ರಣೇಮುಃಸಕಲಾದೇವಾಮಾಂಗಲ್ಯಾವಭೃಥಾಯತೆ ॥ ೧೮ ॥ ತಥೇತಿಪ್ರಯಯೌದೇವೋಗಣೇಶಾದ್ಯೈಸ್ಸುರೇಶ್ವರೈಃ ॥ ನೃತ್ಯದ್ಭಿರಪ್ಸರಸ್ಸಂಘೈಃಸ್ತುತಿಸಂಗೀತಹರ್ಷಿತೈಃ ॥ ೧೯ ॥

ಪ್ರಕಾರವಾದ ಮಹೋತ್ಸವವನ್ನು ನೋಡಿ ಸಂತೋಷಿತನಾದ ಸ್ವೇಚ್ಛಾಗತಿಯಾದ ನಾರದ ಋಷಿಯು ಶ್ರೀ ಕಲಶೇಶ್ವರನನ್ನು ನಮಸ್ಕರಿಸಿ ಭಗವಂತನ ನಾಮಗಳನ್ನು ಕೀರ್ತನೆ ಮಾಡುತ್ತ ಪ್ರಯಾಣಮಾಡಿದನು॥೧೫॥ ಅನಂತರ ಚತುರ್ದಶಿಯ ದಿವಸದಲ್ಲಿ ದೇವತೆಗಳು ವಿವಾಹಸಂಬಂಧವಾದ ಅರಿಸಿನ ಎಣ್ಣೆ ಎಂಬ ನೆವದಿಂದ ಮಂಗಲಸ್ವರೂಪನಾದ ಸರ್ವಪಾಲಕನಾದ, ಜ್ಞಾನಶಕ್ತಿಯೆಂಬ ಪತ್ನೀಸಮೇತನಾದ ಶ್ರೀ ಕಲಶೇಶ್ವರ ಸ್ವಾಮಿಯನ್ನು ಶಾರದೆ ಮೊದಲಾದ ದೇವಸ್ತ್ರೀಯರು, ಋಷಿಗಳ ಪತ್ನಿಯರುಗಳಿಂದ ಅರಿಸಿನ, ಕುಂಕುಮ, ಹೂಗಳು, ಗಂಧಎಣ್ಣೆ, ಮೊದಲಾದುದರಿಂದ ಸಂಗೀತವಾದ್ಯ ಧ್ವನಿಗಳೊಡನೆ, ಪೂಜಿಸಿ ಮಂಗಲಪ್ರಯಾಣದ ಸ್ವಸ್ತ್ಯಯನೇಷ್ಟಿಯನ್ನು ಸಮಸ್ತ ವಿಭವದಿಂದ ನಡೆಯಿಸಿ ಆ ಸರ್ವದೇವತೆಗಳೂ ಮಂಗಲವಾದ ಅವಭೃಥಕ್ಕೋಸ್ಕರ ಶ್ರೀ ಕಲಶೇಶ್ವರಸ್ವಾಮಿಯನ್ನು ನಮಸ್ಕಾರ ಪೂರ್ವಕ ಪ್ರಾರ್ಥಿಸಿದರು ॥೧೬॥ ॥೧೭॥ ॥೧೮॥ ಹಾಗಾಗಲಿ ಎಂದು ಶ್ರೀ ಕಲಶೇಶ್ವರ ಸ್ವಾಮಿಯು ಗಣಪತಿ ಮೊದಲಾದ ದೇವೇಶ್ವರರುಗಳಿಂದ, ಸ್ತೋತ್ರಸಂಗೀತಗಳಿಂದ ಸಂತೋಷಿತರಾಗಿ ನರ್ತನ ಮಾಡುತ್ತಲಿರುವ, ಅಪ್ಸರಸ್ಸುಗಳ ಸಮೂಹದಿಂದ ಪ್ರಯಾಣ ಮಾಡಿದನು ॥೧೯॥ ಮತ್ತು ಮುಂದುಗಡೆಯಲ್ಲಿ ಕುಣಿಯುತ್ತಲಿರುವ ಭೃಂಗಿಯ ನಾಟ್ಯದಿಂದ ಭೇರಿ, ಮೃದಂಗ, ಕಹಳೆ, ತಾಳಗ, ಮೊದಲಾದ ವಾದ್ಯ ಧ್ವನಿಗಳೊಡನೆ, ಮುನಿಗಳಿಂದ ಮಾಡುತ್ತಲಿರುವ ಸ್ವಸ್ತ್ಯಯನನ್ನು

ಪುರತೋಭೃಂಗಿಸಾಟ್ಯೇನಮುನಿಭಿಃಕೃತಸಂಸ್ತವೈಃ ॥ ಭೇರೀಮೃದಂಗಕಳಹಳಾಪಟಹಸ್ವನಪೂರಿತೈಃ ॥ ೨೦ ॥ ವಾದಿತ್ರಘೋಷೈರ್ದೇವೇಶೋರೇಜೇಸೌಚಂದ್ರಶೇಖರಃ ॥ ಇತ್ಥಂವಿಭವತಶ್ಶಂಭೂರುದ್ರತೀರ್ಥಾಖ್ಯಮುತ್ತಮಂ ॥ ೨೧ ॥ ಪಶ್ಚಿಮಾಭಿಮುಖೀಭದ್ರಾಯತ್ರಪ್ರವಹತೇನದೀ ॥ ಯಯೌತತ್ರಮಹಾದೇವೋದೇವಾಸುರಮುನೀಶ್ವರೈಃ ॥ ೨೨ ॥ ವ್ಯಾಸಸ್ತದಾವಾರುಣೇಷ್ಟಿಂಚಕ್ರೇವಭೃತಲಕ್ಷಣಾಂ॥ ಸ್ನಾಪಯಾಮಾಸಗಿರಿಶಂಮಂಗಲೈಸ್ತೀರ್ಥವಾರಿಭಿಃ ॥೨೩॥ ಅಭಿಷಿಕ್ತೇಮಹಾದೇವೇಮುನಿಭಿರ್ದೇವತಾಗಣಾಃ ॥ ಸ್ನಾತುಮಾರೇಭಿರೇಸರ್ವೇಸದಾರಾಹರ್ಷಸಂಯುತಾಃ ॥ ೨೪ ॥ ಆನ್ಯೋನ್ಯಂ

ತಿಗಳಿಂದ ಪ್ರಯಾಣಮಾಡಿದನು ॥೨೦॥ ಈಪ್ರಕಾರವಾಗಿ ವಾದ್ಯಧ್ವನಿಗಳೊಡನೆ ದೇವೇಶ್ವರನಾದ ಚಂದ್ರನು ಕಿರೀಟದಲ್ಲಿ ಹೊಳೆಯುತ್ತಿರುವ ಈ ಕಲಶೇಶ್ವರನು ಪ್ರಕಾಶಿಸುತ್ತಿದ್ದನು. ಹೀಗೆ ಸಕಲ ವಿಭವಗಳಿಂದ ಈ ಪರಮೇಶ್ವರನು ಉತ್ತಮವಾದ ಮತ್ತು ಎಲ್ಲಿ ತುಂಗಭದ್ರೆಯು ಪಶ್ಚಿಮಮುಖವಾಗಿ ಪ್ರವಹಿಸುವದೊ ಅಲ್ಲಿರುವ ರುದ್ರತೀರ್ಥವನ್ನು ಕುರಿತು ದೇವತೆಗಳೂ ದೈತ್ಯರೂ ಮುನಿಗಳೂ ಇವರಿಂದೊಡಗೂಡಿದವನಾಗಿ ತೆರಳಿದನು ॥ ೨೧ ॥ ಆಗ ವ್ಯಾಸಋಷೀಶ್ವರನು ಅವಭೃಥವೇ ಗುರುತಾಗಿರುವ ವಾರುಣೇಷ್ಟಿಯೆಂಬ ಕರ್ಮವಂ ನೆರವೇರಿಸಿ ಶುಭಗಳಾದ ತೀರ್ಥೋದಕಗಳಿಂದ ಕೈಲಾಸಕ್ಕೆ ಒಡೆಯನಾದ ಪರಮಾತ್ಮನನ್ನು ಸ್ನಾನ ಮಾಡಿಸಿದನು ॥ ೨೨ ॥ ೨೩ ॥ ಹೀಗೆ ಶ್ರೀ ಕಲಶೇಶ್ವರನಿಗೆ ಅವಭೃಥವು ನೆಡೆದ ನಂತರ ಋಷಿಗಳೊಡನೆ ಪತ್ನಿಸಹಿತರಾದ ಸಂತೋಷಿತರಾದ ಸಮಸ್ತ ದೇವತೆಗಳೂ ಸ್ನಾನ ಮಾಡುವುದಕ್ಕೆ ಉದ್ಯೋಗಿಸಿದರು ॥ ೨೪ ॥ ಆ ಬಳಿಕ ಸಂತುಷ್ಟರಾದ ಪತ್ನೀಯರುಗಳು ಗಂಡಂದಿರನ್ನು ಕುರಿತು ಪ್ರೇಮದಿಂದ ಕಾಶ್ಮೀರ ಕುಂಕುಮದ ಓಕುಳಿಯಿಂದ ಪರಸ್ಪರವಾಗಿ ಸುರಿಯುತ್ತ ಆಡಿದರು. ಹೀಗೆ ಮದುವೆಯ ಓಕುಳಿಯ ದಿನದಲ್ಲಿ ನಡೆಯಬೇಕಾದ ಕಟ್ಟಳೆಯಿಂದಲೇ ಸ್ನಾನವನ್ನು

ಸಿಷಿಚುಃಪತೆಯ್ಯೇಮುದಾಭತ್ಯಾನ್ಪ್ರಹರ್ಷಿತಾಃ ॥ ತತಃಕಲ್ಯಾಣ
ವಿಧಿವತ್ಸ್ನಾತ್ವಾಸ್ತ್ರೀರ್ಥೇಮನೋಹರೇ ॥ ೨೫ ॥ ಭವಾಂಗಸಂ
ಗಿನಿಶುಭೇಕಾಲಕಲ್ಮಷಹಾರಿಣಿ ॥ ಉತ್ತೀರ್ಯಸಕಲಾದೇವಾಸ್ತತೋಭ
ಗವತಾಸಹ ॥ ೨೬ ॥ ಧೃತಪೀತಾಂಬರಾಃಸರ್ವೇಭಸ್ಮನಾಸತ್ರಿಪುಂ
ಡ್ರಕಾಃ ॥ ಸ್ವರ್ಣಸಾರೇಣಖಚಿತದ್ವೀಪಿಚಿನ್ಹಸಿತಾಂಬರೈ ॥ ೨೭ ॥
ಕಿರೀಟಮಕುಟಾದ್ಯೈಶ್ಚಸ್ತಂಕೋಟಿಕಂದರ್ಪಸುಂದರಂ ॥ ಅಲಂಪ್ರ
ಚಕ್ರಿರೇದೇವಂಪುಷ್ಪಹಾರೈರ್ಮನೋಹರೈಃ ॥ ೨೮ ॥ ಸಂಪೂಜ್ಯ
ಚಾರ್ಪಯಾಮಾಸುರ್ನೈವೇದ್ಯಂಷಡ್ರಸಾನ್ವಿತಂ ॥ ತಾಂಬೂಲಂ
ತತತೋದತ್ವಾನೀರಾಜ್ಯಬಹುದೀಪಕೈಃ ॥ ೨೯ ॥ ಪಙ್ಕ್ತ್ಯಾವಿವಿಶಿ
ರೇಸರ್ವೇಭ್ಯವಹಾರಕೃತಾದರಾಃ ॥ ಶಾಲ್ಯನ್ನಾಂಪೂಪಸಹಿತಂಘೃ
ತಾಕ್ತಂವ್ಯಂಜನಾನ್ವಿತಂ ॥ ೩೦ ॥ ಭುಕ್ತಾಸರ್ವೇಯಥಾನ್ಯಾಯಂ

ಮಾಡಿದರು ॥ ೨೫ ॥ ಸರ್ವಕಾರಣನಾದ ಶ್ರೀ ಕಲಶೇಶ್ವರನ ಶರೀರಸ್ಪ
ರ್ಶವಾದುದರಿಂದಲೇ ಮೃತ್ಯುನಾಶಕರವಾದ ಮಂಗಲಕರವಾದ ತೀರ್ಥ
ದಲ್ಲಿ ಹೀಗೆ ಸ್ನಾನ ಮಾಡಿ ಆ ಪರಮಾತ್ಮನಿಂದ ಸಹಿತವಾಗಿ ಮೇಲಕ್ಕೆ
ಸಮಸ್ತ ದೇವತೆಗಳೂ ಹತ್ತಿ ॥ ೨೬ ॥ ಕೆಲವರು ಹಳದಿ ವಸ್ತ್ರಗಳ
ನ್ನೂ ಕೆಲವರು ಚಿನ್ನದ ಜರತಾರಿಯಿಂದ ಹುಲಿಗಳ ಆಕಾರದ ಅಂಚು
ಗಳು ಕಂಬಿಗಳುಳ್ಳ ಬೆಳ್ಳಿ ವಸ್ತ್ರಗಳನ್ನೂ ಹೀಗೆ ಸರ್ವರೂ ಧರಿಸಿದವ
ರಾಗಿ ಭಸ್ಮದಿಂದ ತ್ರಿಪುಂಡ್ರಾಲಂಕೃತರಾದರು ॥ ೨೭ ॥ ಆ ಬಳಿಕ ದೇವ
ತೆಗಳು ಕೋಟಿ ಮನ್ಮಥನಂತೆ ಸುಂದರನಾದ ಆ ಕಲಶೇಶ್ವರನನ್ನು ಕಿರೀ
ಟಮಕುಟಾದಿ ಆಭರಣಗಳಿಂದ ರಮಣೀಯಗಳಾದ ಹೂವಿನ ಹಾರಗ
ಳಿಂದ ಅಲಂಕರಿಸಿದರು ॥ ೨೮ ॥ ಹೀಗೆ ಪೂಜಿಸಿ ಷಡ್ರಸಭರಿತವಾದ
ನೈವೇದ್ಯವನ್ನೂ ಅನಂತರ ತಾಂಬೂಲವನ್ನೂ ಸಮರ್ಪಿಸಿದರು. ಹಾಗೆ
ಬಹುಪ್ರಕಾರಗಳಾದ ಆರತಿಗಳನ್ನು ಎತ್ತಿ ॥ ೨೯ ॥ ತಾವೆಲ್ಲರೂ
ಭೋಜನದಲ್ಲಿ ಪ್ರೀತಿಯುಳ್ಳವರಾಗಿ ಪಙ್ಕ್ತಿಯಲ್ಲಿ ಸೇರಿದರು. ತುಪ್ಪ
ದಿಂದ ಕರಿದ ಚಿರೋಟಿ ಲಾಡು ಮೊದಲಾದ ಭಕ್ಷ್ಯಗಳಿಂದ ಸಹಿತವಾದ
ಘಟ್ಟಿ ತೊವ್ವೆಯಿಂದಲೂ ಕೂಡಿದ ಸಣ್ಣಕ್ಕಿಯ ಅನ್ನವನ್ನು ॥ ೩೦ ॥

ತ್ರಿಪ್ತಾ ಆಸನ್ ಸುರೇಶ್ವರಾಃ ॥ ಗಂತುಂಪ್ರಚಕ್ರಿರೇದೇವಂಯಾನಮಾರೋಪ್ಯಶಂಕರಂ ॥ ೩೧ ॥ ಯಯುರ್ದೇವಾಲಯಂಸರ್ವೇಮುನಯೋವಿಭವೈಸ್ಸಹ ॥ ತತಃಶ್ರೀಕಲಶೇಶೋಽಸೌಸಿಂಹಾಸನಗತಃಶಿವ ॥ ॥ ೩೨ ॥ ಉದಯಾದ್ರಿಸಮಾರೂಢಭಾಸ್ಕರಪ್ರಭಯಾಬಭೌ ॥ ಬ್ರಹ್ಮಾದ್ಯಾಃಸಕಲಾದೇವಾಃಸೇವಿರೇಗಿರಿಜಾಪತಿಂ ॥ ೩೩ ॥ ಅಥೋಪವಿಷ್ಟಾಸ್ಸದಸಿಶಿವಾರಾಧನತತ್ಪರಾಃ ॥ ಸಲ್ಲಪಂತೋಬಹುವಿಧಂ ಬ್ರಹ್ಮಾದ್ಯಾಃಪೂಜನಂಶಿವೇ ॥ ೩೪ ॥ ಅಥಾಬ್ರವೀದಗಸ್ತ್ಯೋತ್ರ ವಿಧಿದಾಗಮಚೋದಿತಃ ॥ ರಥೋತ್ಸವೋಮಹೇಶಸ್ಯಪ್ರೀತಿದಸ್ಸುತರಾಮಿತಿ॥ ೩೫ ॥ ತಚ್ಛ್ರುತ್ವಾಪದ್ಮಯೋನಿಸ್ತುಪ್ರತ್ಯಾಹಭದವದ್ಧಿಯಾ॥ಮಾಘಮಾಸೇಯದಾದರ್ಾಸ್ತಿಶಿವದಾರುದ್ರದೇವತಾ ॥ ೩೬ ॥ ರಥೋತ್ಸವಂತದಾನೀಂತುಕುರ್ಮಏವಶಿವಾದರಂ ॥ ಲೋಕಭೀ

ಋಷಿಗಳೂ ದೇವತೆಗಳೂ ದೈತ್ಯರೂ ಎಂಬ ನ್ಯಾಯದಿಂದ ಸರ್ವರೂ ಭೋಜನ ಮಾಡಿ ಅನಂತರ ಶ್ರೀ ಕಲಶೇಶ್ವರನನ್ನು ಪಲ್ಲಕ್ಕಿಯಲ್ಲಿ ಆರೋಹಣ ಮಾಡಿಸಿ ಪ್ರಯಾಣಕ್ಕೆ ಉದ್ಯೋಗಿಸಿದರು ॥ ೩೧ ॥ ಸರ್ವ ದೇವತೆಗಳೂ ಋಷಿಗಳೂ ಸಕಲ ವಿಭವಗಳೊಡನೆ ದೇವಸ್ಥಾನದ ಆಸ್ಥಾನವನ್ನು ಸೇರಿದರು. ಆ ಬಳಿಕ ಸಿಂಹಾಸನಾರೂಢನಾದ ಶ್ರೀ ಕಲಶೇಶ್ವರನು ॥ ೩೨ ॥ ಉದಯಾಚಲದಲ್ಲಿರುವ ಸೂರ್ಯನಂತೆ ಪ್ರಭೆಯಿಂದ ಪ್ರಕಾಶಿಸುತ್ತಿದ್ದನು. ಬ್ರಹ್ಮಾದಿ ಸರ್ವ ದೇವತೆಗಳು ಗಿರಿಜಾಪತಿಯಾದ ಶ್ರೀ ಕಲಶೇಶ್ವರನನ್ನು ಸೇವಿಸುತ್ತ ಆನಂದಭರಿತರಾಗಿರುತ್ತಿದ್ದರು ॥ ೩೩ ॥ ಅನಂತರ ಶಿವಪೂಜೆಯಲ್ಲಿ ನಟ್ಟಿರುವ ಮನಸ್ಸುಳ್ಳ ಬ್ರಹ್ಮಾದಿ ದೇವತೆಗಳು ಶಿವಪೂಜಾಪ್ರಕಾರವನ್ನು ಮಾತನಾಡುತ್ತಿದ್ದರು ॥ ೩೪ ॥ ಆಗ ಆಗಸ್ತ್ಯರು ಈಶ್ವರನಿಗೆ ಅತ್ಯಂತ ಇಷ್ಟವಾದುದು ರಥೋತ್ಸವವೆಂಬ ಸೇವೆಯು ಒಂದು ಆಗಮಶಾಸ್ತ್ರ ಪ್ರಕಾರ ಇದೆ ಯಾವದು? ॥ ೩೫ ॥ ಅದನ್ನು ಕೇಳಿ ಬ್ರಹ್ಮನು ಶ್ರೀ ಕಲಶೇಶ್ವರನನ್ನು ಧ್ಯಾನಿಸುತ್ತ ಹೀಗೆ ಹೇಳಿದನು ಏನೆಂದರೆ ॥ ೩೬ ॥ ಬರುವ ಮಾಘಮಾಸ

ತಿಹರಂರಮ್ಯಂದೇಶಶಾಂತಿಕರಂಪರಂ ॥ ೩೭ ॥ ಸುತರಾಂಕಲಶೇಶ ಸ್ತು ಯೇನತುಷ್ಟೋಭವೇನ್ಮನೇ॥ ಏತದ್ವಚನಮಾಕರ್ಣ್ಯಸಾಧುಸಾ ಧ್ವಿತಿಭಾಷಿಣಃ ॥ ೩೮ ॥ ಪ್ರತಿಸಂವತ್ಸರಂಮಾಘೇಕರಿಷ್ಯಾಮೋ ರಥೋತ್ಸವಂ॥ಕಲಶೇಶಸ್ಯವಿಭವೈಃಇತ್ಥಂಸರ್ವೇಸುರಾಸುರಾಃ ॥೩೯॥ ಮಹರ್ಷಯೋಪಿಚಕ್ರುಸ್ತೇನಿಶ್ಚಯಂತುತದಾಮುದಾ॥ ಯಇದಂ ಶೃಣುಯಾನ್ನಿತ್ಯಂಶಿವಸ್ಯಾವಭೃಥೋತ್ಸವಂ॥ ಭಗವತ್ಯಚಲಾಭಕ್ತಿ ರ್ಜಾಯತೇನಾತ್ರಸಂಶಯಃ ॥ ... ॥ ೪೦ ॥

ಇತಿ ಶ್ರೀ ಸ್ಕಂದಪುರಾಣೇ ವಿವಾಹೋತ್ಸವ ಅವಭೃತೋತ್ಸವ
ನಿರೂಪಣೋನಾಮ ದ್ವಾದಶೋಧ್ಯಾಯಃ

ದಲ್ಲಿ ರುದ್ರದೇವತೆಯಾದ ಆದ್ರ್ರಾ ನಕ್ಷತ್ರದ ದಿನದಲ್ಲಿ ಕಲಶೇಶ್ವರನಿಗೆ ಪ್ರೀತಿಕರವಾದ ರಥೋತ್ಸವವನ್ನು ಮಾಡೋಣವು ರಥೋತ್ಸವವು ಲೋಕ ಕಷ್ಟವನ್ನು ಪರಿಹರಿಸುವುದಾಗಿಯೂ ಮನೋಹರವಾಗಿಯೂ ದೇಶಕ್ಕೆ ಕ್ಷೇಮಶಾಂತಿ ರೂಪಕವಾಗಿಯೂ ಇದೆ. ಇದರಿಂದ ಕಲಶೇಶ್ವ ರನು ಹೆಚ್ಚು ಸಂತೋಷಪಟ್ಟಾನು ಎಂದು ಬ್ರಹ್ಮನು ಹೇಳಿದನು. ಇವನ್ನು ಕೇಳಿ ಎಲ್ಲರೂ ಶಾಭಾಸ್ ಎನ್ನುತ್ತ ಪ್ರತಿಮಾಘವೂ ದೇವರಿಗೆ ಮಾಘಮಾಸ ಆದ್ರ್ರಾನಕ್ಷತ್ರದಲ್ಲಿ ರಥೋತ್ಸವನನ್ನು ಮಾಡೋಣವೆಂದು ದೇವಾಸುರರೂ ಋಷಿಗಳೂ ಸಹ ಸಂತೋಷದಿಂದ ನಿಶ್ಚಯಮಾಡಿದರು. ಯಾವನು ಶ್ರೀ ಕಲಶೇಶ್ವರನ ಅವಭೃಥೋತ್ಸವದ ಚರಿತ್ರವನ್ನು ಕೇಳು ವನೋ ಅಂಥವನಿಗೆ ಶ್ರೀಪರಮಾತ್ಮನಲ್ಲಿ ಶಾಶ್ವತವಾದ ಭಕ್ತಿಯು ಅನು ಮಾನವಿಲ್ಲದೆ ಆಗುವದು॥ ...... ॥ ೪೦ ॥

ಈ ಪ್ರಕಾರವಾಗಿ ಸ್ಕಂದಪುರಾಣದ ತುಂಗಭದ್ರಾ ಖಂಡದಲ್ಲಿ
ಹೇಳಿರುವ ಶ್ರೀ ಕಲಶೇಶ್ವರಸ್ವಾಮಿಯ ಮಹಿಮೆಯಲ್ಲಿ
ಕಲ್ಯಾಣೋತ್ಸವದ ಅವಭೃಥೋತ್ಸವ ಚರಿತ್ರವೆಂಬ
೧೨ನೆಯ ಅಧ್ಯಾಯವು ಸಂಪೂರ್ಣವು.

ಶ್ರೀಸೂತಃ॥ ತತಃಪರೇದ್ಯುಸ್ತೇಸರ್ವೇದೇವಾಃಶ್ರೀತ್ರಿಪುರೋ
ತ್ಸವಂ ॥ ಕರ್ತುಮಭ್ಯಾಗಮಂತೀರ್ಥಂವಶಿಷ್ಠಾಶ್ರಮಶೋಭಿತಂ ॥
॥೧॥ ಮುನಿರುವಾಚ ॥ ಯಥಾಹಿಭಗವಾನೀಶೋಜಘಾನತ್ರಿಪುರಂ
ಮುನೇ॥ತದ್ವದಸ್ವಾನುಪೂರ್ವೇಣಶ್ರೋತುಕಾಮಾಃತಥಾವಿಮಾಂ॥
॥ ೨ ॥ ಶ್ರೀಸೂತಃ ॥ ಶೃಣುಧ್ವಮೃಷಯಸ್ಸರ್ವೇಧೂರ್ಜಟೇ
ರ್ವಿಭವಂಪರಂ ॥ ದೇವಾನಾಮಸುರಾಣಾಂಚಪರಸ್ಪರಜಗೀಷ
ಯಾ ॥ ೩ ॥ ಬಭೂವಪ್ರಥಮೋವಿಪ್ರಾಸ್ಸಂಗ್ರಾಮಸ್ತಾರಕಾಮ
ಯಃ ॥ ನಿರ್ಜಿತಾಶ್ಚತತೋದೈತ್ಯಾದೈವತೈರಿತಿನಶ್ಶ್ರುತಃ ॥ ೪ ॥
ನಿರ್ಜಿತೇಷುಚದೈತ್ಯೇಷುತಾರಕಸ್ಯಸುತಾಸ್ತ್ರಯಃ ॥ ತಾರಾಕ್ಷಃಕ

---

೧೩ ನೆಯ ಅಧ್ಯಾಯ ಪ್ರಾರಂಭ.

ಆ ಬಳಿಕ ಸೂತಪೌರಾಣಿಕನು ಶೌನಕಾದಿ ಋಷಿಗಳನ್ನು ಕುರಿತು ಹೇಳುತ್ತಾನೆ. ಎಲೈ ಋಷಿಗಳಿರಾ, ಆ ಮಾರನೆ ದಿನದಲ್ಲಿ ಅಲ್ಲಿರುವ ಸಮಸ್ತ ದೇವತೆಗಳೂ ಉತ್ತಮವಾದ ತ್ರಿಪುರೋತ್ಸವವನ್ನು ಮಾಡಲೋಸುಗ ವಸಿಷ್ಠಾಶ್ರಮದಿಂದ ಶೋಭಿಸುತ್ತಿರುವ ತೀರ್ಥವನ್ನು ಕುರಿತು ಬಂದರು ॥ ೧ ॥ ಎಂಬ ಸೂತಪೌರಾಣಿಕನ ಮಾತನ್ನು ಕೇಳಿ ಆಶ್ಚರ್ಯವಟ್ಟು ಋಷಿಗಳಲ್ಲಿ ಮುಖ್ಯನು ಕೇಳುತ್ತಾನೆ. ಎಲೈ ಸೂತಮಹರ್ಷಿಯೇ, ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀ ಪರಮೇಶ್ವರನು ತ್ರಿಪುರವನ್ನು ಹೇಗೆ ಸಂಹರಿಸಿದನು. ಆ ಪ್ರಖ್ಯಾತವಾದ ಈ ಕಥೆಯನ್ನು ನಾವು ಕೇಳಲಪೇಕ್ಷಿತರಾಗಿದ್ದೇವೆ. ಪೂರ್ವ ವೃತ್ತಾಂತದೊಡನೆ ಅದನ್ನು ಹೇಳು ॥ ೨ ॥ ಸೂತಪುರಾಣಿಕನು ಎಲೈ ಮಹರ್ಷಿಗಳಿರಾ ಕೆಂಜಡೆಗಳುಳ್ಳ ಪರಮಾತ್ಮನ ಪರಮ ಪಾವನವಾದ ಚರಿತ್ರವನ್ನು ಕೇಳಿ ಪೂರ್ವದಲ್ಲಿ ದೇವತೆಗಳಿಗೂ ರಾಕ್ಷಸರಿಗೂ ಅನ್ಯೋನ್ಯ ಜಯಾಭಿಲಾಷೆಯೊಡನೆ ॥ ೩ ॥ ಮೊದಲು ತಾರಕಾಮಯವೆಂಬ ಯುದ್ಧವು ನಡೆದಿತ್ತು. ಅದರಲ್ಲಿ ದೇವತೆಗಳಿಂದ ದೈತ್ಯರು ಜಯಿಸಲ್ಪಟ್ಟರು ಎಂದು ನಮಗೆ ವಾರ್ತೆಯಿತ್ತು ॥ ೪ ॥ ದೈತ್ಯರು

ಮಲಾಕ್ಷಶ್ಚ ವಿದ್ಯುನ್ಮಾಲೀದ್ವಿಜೇಶ್ವರಃ ॥ ೫ ॥ ತಪಉಗ್ರಂಸಮಾಸ್ಥಾಯನಿಯಮೇಪರಮೇಸ್ಥಿತಾಃ ॥ ತಪಸಾಕರ್ಷಯಾಮಾಸುರ್ದೇಹಾನ್ಸ್ವಾನ್ತಪಸಾಂನಿಧೇಃ ॥ ೬ ॥ ಧರ್ಮೇಣತಪಸಾಚೈವನಿಯಮೇನಸಮಾಧಿನಾ ॥ ತೇಷಾಂಪಿತಾಮಹಃಪ್ರೀತೋವರದಃಪ್ರದದೌವರಂ ॥ ೭ ॥ ಅವಧ್ಯತ್ವಂಚತೇದೈತ್ಯಾಃಸರ್ವಭೂತಸ್ಯಸರ್ವದಾ ॥ ಸಹಿತಾವರಯಾಮಾಸುಃಸರ್ವಲೋಕಪಿತಾಮಹಂ ॥ ೮ ॥ ತಾನಬ್ರವೀತ್ತದಾದೇವೋಲೋಕಾನಾಂಪ್ರಭುರೀಶ್ವರಃ ॥ ನಾಸ್ತಿಸರ್ವಾಮರತ್ವಂವೈನಿವರ್ತಧ್ವಮಿತೋಸುರಾಃ ॥ ೯ ॥ ಅನ್ಯಂವರಂವೃಣೀಧ್ವಂವೈಯಾದೃಶಂಸಂಪ್ರರೋಚತೇ ॥ ತತಸ್ತೇಸಹಿತಾಸ್ಸರ್ವೇಸಂ

ಪರಾಜಿತರಾಗಲು ಅವರಲ್ಲಿ ತಾರಕನೆಂಬ ರಾಕ್ಷಸನ ಮಕ್ಕಳು ಮೂರು ಮಂದಿಗಳು ಎಲೈ ವಿಪ್ರೋತ್ತಮನೇ, ಕೇಳು ತಾರಕಾಕ್ಷನೂ ಕಮಲಾಕ್ಷನೂ ವಿದ್ಯುನ್ಮಾಲಿಯೂ॥೫॥ ಕಠಿನವಾದ ತಪಸ್ಸನ್ನು ಆಶ್ರಯಿಸಿಕೊಂಡು ಉತ್ತಮವಾದ ನಿಯಮದಲ್ಲಿ ಇದ್ದವರಾಗಿ ತಮ್ಮ ಶರೀರಗಳನ್ನು ತಪಸ್ಸಿನಿಂದ ಕೃಶವಾಗಿ ಮಾಡಿಕೊಂಡರು ॥ ೬ ॥ ಎಲೈ ತಪೋನಿಧಿಯೇ ಕೇಳು-ಹೀಗೆ ಆ ರಾಕ್ಷಸರ ಧರ್ಮದಿಂದಲೂ ತಪಸ್ಸಿನಿಂದಲೂ ವ್ರತನಿಯಮದಿಂದಲೂ ಧ್ಯಾನದಿಂದಲೂ ಸಂತುಷ್ಟನಾದ ಬ್ರಹ್ಮದೇವನು ವರವನ್ನು ಕೊಟ್ಟನು॥೭॥ಎಲೈ ತಪೋನಿಷ್ಠನೇ ಕೇಳು ಬ್ರಹ್ಮದೇವನು ಹೀಗೆಂದ ಕೂಡಲೆ ಆ ದೈತ್ಯರು ಸೇರಿಕೊಂಡು ಲೋಕೇಶ್ವರನಾದ ಬ್ರಹ್ಮದೇವನನ್ನು ಕುರಿತು ಸಮಸ್ತ ಪ್ರಾಣಿಗೂ ಯಾವಾಗಲೂ ಕೊಲ್ಲಲಶಕ್ಯತ್ವವನ್ನು ಕೇಳಿಕೊಂಡರು ॥೮॥ ಆಗ ಸರ್ವ ಪ್ರಪಂಚಗಳಿಗೆ ಒಡೆಯನಾದ ಪರಮೈಶ್ವರ್ಯಪ್ರದನಾದ ಬ್ರಹ್ಮದೇವನು ಆ ರಾಕ್ಷಸರನ್ನು ಕುರಿತು ಸರ್ವಕ್ಕೂ ಅವಧ್ಯತ್ವವನ್ನು ಕೊಡತಕ್ಕದ್ದು ಇಲ್ಲ. ಎಲೈ ರಾಕ್ಷಸರುಗಳಿರಾ, ಈ ಆಶೆಯು ದೆಸೆಯಿಂದ ವಿಮುಖರಾಗಿ॥ ೯ ॥ ಇದು ಹೊರತು ಇನ್ನಾವುದಾದರೂ ಒಂದನ್ನಾಲೋಚಿಸಿ ಕೇಳಿ. ಹೀಗೆ ಹೇಳಿದ ನಂತರ ಅವರೆಲ್ಲರೂ ಸೇರಿಕೊಂಡು ಪ್ರತಿಕ್ಷಣವೂ ದೇವನನ್ನು

ಪ್ರಧಾರ್ಯಸಕೃತ್ಪ್ರಭುಂ ॥ ೧೦ ॥ ಸರ್ವಲೋಕೇಶ್ವರಂವಾಕ್ಯಂ ಪ್ರಣಮ್ಯೇದಮಥಾಬ್ರುವನ್ ॥ ಅಸ್ಮಭ್ಯಂತ್ವಂವರಂದೇವಸಂಪ್ರಯಚ್ಛಪಿತಾಮಹ ॥ ೧೧ ॥ ವಯಂಪುರಾಣಿತ್ರೀಣ್ಯೇವಸಮಾಸ್ಥಾಯಮಹೀಮಿಮಾಂ॥ ವಿಚರಿಷ್ಯಾಮಲೋಕೇಸ್ಮಿನ್ತ್ವತ್ಪ್ರಸಾದಪುರಸ್ಕೃತಾಃ ॥ ೧೨ ॥ ತತೋವರ್ಷಸಹಸ್ರೇಷುಸಮೇಷ್ಯಾಮಃಪರಸ್ಪರಂ ॥ ಏಕೀಭಾವಂಗಮಿಷ್ಯಂತಿಪುರಾಣ್ಯೇತಾನಿಚಾನಘ ॥ ೧೩ ॥ ಸಮಾಗತಾನಿಚೈತಾನಿಯೋಹನ್ಯಾದ್ಭಗವಂಸ್ತದಾ ॥ ಏಕೇಷುಣಾದೇವವರಃಸನೋಮೃತ್ಯುರ್ಭವಿಷ್ಯತಿ ॥೧೪॥ ಏವಮಸ್ತ್ವಿತಿತಾನ್ ದೇವಃಪ್ರತ್ಯುಕ್ತ್ವಾಪ್ರಾವಿಶದ್ದಿವಂ ॥ ತೇತುಲಬ್ಧವರಾಃಪ್ರೀತಾಃ ಸಂಪ್ರಧಾರ್ಯಪರಸ್ಪರಂ ॥ ೧೫ ॥ ಪುರತ್ರಯವಿಸೃಷ್ಟ್ಯರ್ಥಂ

ಕೇಳುತ್ತ ॥ ೧೦ ॥ ಸಮಸ್ತ ಲೋಕಸ್ವಾಮಿಯಾದ ದೇವನನ್ನು ನಮಸ್ಕಾರ ಮಾಡಿ ಈ ಮುಂದೆ ಕೇಳುವ ಮಾತನ್ನು ಹೇಳಿದರು. ಎಲೈ ದೇವನೇ, ಪಿತಾಮಹನೇ ನಮಗೋಸ್ಕರ ನೀನು ಇಷ್ಟಾರ್ಥವನ್ನು ಕೊಡುವವನಾಗು ॥ ೧೧ ॥ ನಾವು ಮೂರು ಪಟ್ಟಣಗಳನ್ನು ಮಾಡಿ ಅವರಲ್ಲಿ ಇದ್ದುಕೊಂಡು ಈ ಭೂಮಿಯಲ್ಲಿ ನಿನ್ನ ಅನುಗ್ರಹದ ದೆಸೆಯಿಂದ ಪೂಜ್ಯರಾಗಿ ಈ ಲೋಕದಲ್ಲಿ ಸಂಚಾರಮಾಡಿಕೊಂಡಿರುವೆವು ॥ ೧೨ ॥ ಎಲೈ ಪಾಪರಹಿತನಾದ ದೇವನೇ, ಆ ಮೇಲೆ ಒಂದು ಸಾವಿರ ವರುಷದ ನಂತರದಲ್ಲಿ ಪ್ರತ್ಯೇಕರಾಗಿದ್ದವರು ಕೂಡುವೆವು. ಆಗ ಈ ಮೂರು ಪಟ್ಟಣಗಳೂ ಒಂದಾದ ಪಟ್ಟಣದಂತೆ ಕೂಡುತ್ತವೆ॥೧೩॥ ಎಲೈ ಭಗವಂತನೇ, ಆ ಕಾಲದಲ್ಲಿ ಈ ಪಟ್ಟಣಗಳನ್ನು ದೇವಶ್ರೇಷ್ಠನಾದ ಯಾವಾತನು ಒಂದೇ ಬಾಣದಿಂದ ನಾಶಪಡಿಸುವನೋ ಅಂಥವನೇ ನಮಗೆ ಶತ್ರುವಾಗಗಲಿ ಎಂದು ಕೇಳಿಕೊಂಡರು ॥೧೪॥ ಹಾಗೆಯೇ ಆಗಲಿಯೆಂದು ಬ್ರಹ್ಮದೇವನು ಆ ರಾಕ್ಷಸರನ್ನು ಕುರಿತು ಹೇಳಿ ಸತ್ಯಲೋಕಕ್ಕೆ ತೆರಳಿದನು. ಇತ್ತಲಾ ದೈತ್ಯರು ಹೊಂದಲ್ಪಟ್ಟ ವರವುಳ್ಳವರಾಗಿ, ಸಂತೋಷಿತರಾಗಿ ಅನ್ಯೋನ್ಯವಾಗಿ ಆಲೋಚಿಸಿ ॥ ೧೫ ॥ ಈ ಮೂರು ಪಟ್ಟಣಗಳ ನಿರ್ಮಾ

ಮಯಂವವ್ರುರ್ಮಹಾಸುರಂ॥ ವಿಶ್ವಕರ್ಮಾಣಮಜರಂದೈತ್ಯದಾನ
ವಪೂಜಿತಂ ॥ ೧೬ ॥ ತತೋಮಯಃಸ್ವತಪಸಾಚಕ್ರೇಧೀಮಾನ್ಪು
ರಾಣಿಚ ॥ ತ್ರೀಣಿಕಾಂಚನಮೇಕಂವೈರೌಪ್ಯಂಕಾರ್ಷ್ಣಾಯಸಂತ
ಥಾ ॥ ೧೭ ॥ ಕಾಂಚನಂದಿವಿತತ್ರಾಸೀದಂತರಿಕ್ಷೇಚರಾಜತಂ ॥ ಆ
ಯಸಂಚಾಭವದ್ಭೂಮೌಚಕ್ರುಸ್ತೈರಾಕ್ಷಸರ್ಷಭಾಃ ॥ ೧೮ ॥
ಏಕೈಕಂಯೋಜನಶತಂವಿಸ್ತಾರಾಯಾಮತಸ್ಸಮಂ ॥ ಗೃಹಾ
ಟ್ಟಾಲಕಸಂಯುಕ್ತಂಬಹುಪ್ರಾಕಾರತೋರಣಂ ॥ ೧೯ ॥ ಗೃಹ
ಪ್ರವರಸಂಬಂಧಂಸಸಂಬಂಧಮಹಾಪಥಂ ॥ ಪ್ರಾಸಾದೈರ್ವಿವಿಧೈ
ಶ್ಚಾಪಿದ್ವಾರೈಶ್ಚೈವೋಪಸಂಯುತಂ ॥ ೨೦ ॥ ಪುರೇಷುಚಾಭ
ವನ್ವೈಪ್ರರಾಜಾನೋವೈಪೃಥಕ್ಪೃಥಕ್ ॥ ಕಾಂಚನಂತಾರಕಾಕ್ಷ

ಣಕ್ಕೋಸ್ಕರ ಶಿಲ್ಪಿ ಕೆಲಸದಲ್ಲಿ ಬುದ್ಧಿವಂತನಾದಂಥ ದೈತ್ಯದಾನವರಿಂದ ಯಾವಾಗಲೂ ಮರ್ಯಾದೆಯನ್ನು ಹೊಂದಿದ ಮಯನನ್ನು ಕರಿಸಿಕೊಂಡು ಈ ಅಂಶವನ್ನು ತಿಳಿಸಿದರು ॥ ೧೬ ॥ ಆ ಬಳಿಕ ಬುದ್ಧಿಶಾಲಿಯಾದ ಆ ಮಯನು ತನ್ನ ಬುದ್ಧಿಕುಶಲತೆಯಿಂದ ಆಲೋಚಿಸಿ ಚಿನ್ನದ ಪಟ್ಟಣ, ಬೆಳ್ಳಿಯ ಪಟ್ಟಣ, ಉಕ್ಕಿನ ಪಟ್ಟಣ ಈರೀತಿ ಮೂರು ಪಟ್ಟಣಗಳನ್ನು ಮಾಡಿದನು ॥ ೧೭ ॥ ಈ ಪಟ್ಟಣಗಳಲ್ಲಿ ಸ್ವರ್ಗಸ್ಥಳದಲ್ಲಿ ಚಿನ್ನದ ಪಟ್ಟಣವೂ ಮಧ್ಯಂತರಿಕ್ಷದಲ್ಲಿ ಬೆಳ್ಳಿಯ ಪಟ್ಟಣವೂ ಭೂಮಿಯ ಸಮೀಪದಲ್ಲಿ ಉಕ್ಕಿನ ಪಟ್ಟಣವೂ ಹೀಗೆ ಸಂಚರಿಸಿಕೊಂಡಿರುವಹಾಗೆ ಆ ರಾಕ್ಷಸರಿಗೆ ಮಾಡಿಕೊಟ್ಟನು ॥ ೧೮ ॥ ಒಂದೊಂದು ಪಟ್ಟಣವೂ ನೂರು ನೂರು ಗಾವುದ ಅಗಲವೂ ಉದ್ದವೂ ಇರುವಂತೆ ಸಮವಾಗಿ ಬಹಳ ಪ್ರಾಕಾರಗಳೂ ಹೆಬ್ಬಾಗಿಲುಗಳೂ ಮಹಡಿಗಳೂ ಉಳ್ಳ ಮನೆಗಳಿಂದ ನಿಬಿಡವಾಗಿ ಗಚ್ಚು ಮಾಡಿದ ಬೀದಿಗಳುಳ್ಳ ಪಟ್ಟಣಗಳನ್ನು ಶೋಭಾಯಮಾನವಾಗಿ ತೋರುವಂತೆ ಮಾಡಿದನು ॥ ೧೯ ॥ ೨೦ ॥ ಎಲೈ ಬ್ರಾಹ್ಮಣನೇ, ಈ ಪಟ್ಟಣಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಅರಸರುಗಳಾದರು,

ಸ್ಯಚಿತ್ರಮಾಸೀನ್ಮಹಾತ್ಮನಃ ॥ ೨೧ ॥ ರಾಜತಂಕಮಲಾಕ್ಷಸ್ಯವಿದ್ಯುನ್ಮಾಲಿನಆಯಸಂ ॥ ತ್ರಯಸ್ತೇದೈತ್ಯರಾಜಾನಸ್ತ್ರೀನ್ಲೋಕಾನಸ್ತ್ವತೇಜಸಾ ॥ ೨೨ ॥ ಆಕ್ರಮ್ಯತಸ್ಥುರೂಚುಶ್ಚ ಕಶ್ಚನಾಮಪ್ರಜಾಪತಿರಿ ॥ ತೇಷಾಂದಾನವಮುಖ್ಯಾನಾಂಪ್ರಯುತಾನ್ಯರ್ಬುದಾನಿಚ ॥ ॥ ೨೩ ॥ ಕೋಟ್ಯಶ್ಚಾಪ್ರತಿವೀರಾಣಾಂಸಮಾಜಗ್ಮುಃಸ್ತತಸ್ತತಃ ॥ ಮಾಂಸಾಶಿನಃಸುತೃಪ್ತಾಶ್ಚಸುರೈರ್ವಿನಿಕೃತಾಃಪುರಾ । ॥೨೪॥ಮಹದೈಶ್ವರ್ಯಮಿಚ್ಛಂತಸ್ತ್ರಿಪುರಂದುರ್ಗಮಾಶ್ರಿತಾಃ ॥ ಸರ್ವೇಷಾಂಚಪುನಶ್ಚೈಷಾಸರ್ವಯೋಗವರೋಮಯಃ ॥ ೨೫ ॥ ತಮಾಶ್ರಿತ್ಯಹಿತೇಸರ್ವೇವರ್ತಂತೇಹ್ಯಕುತೋಭಯಾಃ॥ಯೋಪಿಯಂ

ಮಹಾತ್ಮನಾದ ರೌರಕಾಕ್ಷನಿಗೆ ಬಹು ವಿಚಿತ್ರವಾದ ಚಿನ್ನದ ಪಟ್ಟಣವೂ॥೨೧॥ ಕಮಲಾಕ್ಷನಿಗೆ ಬೆಳ್ಳಿಯಪಟ್ಟಣವೂ ವಿದ್ಯುನ್ಮಾಲಿಗೆ ಉಕ್ಕಿನ ಪಟ್ಟಣವೂ ಸೇರಿರಲು ಮೂವರಾದ ದೈತ್ಯ ರಾಜರುಗಳು ಮೂರು ಲೋಕಗಳನ್ನು ಅಸ್ವಗಳ ಪರಾಕ್ರಮದಿಂದ ॥೨೨॥ ಸ್ವಾಧೀನಪಡಿಸಿಕೊಂಡು ಇದ್ದರು ; ಮತ್ತು ಆ ಐಶ್ವರ್ಯಮತ್ತರಾಗಿ ಬ್ರಹ್ಮನೆಂದರೆ ಯಾರೋ ಎಂದು ಹೇಳಿಕೊಳ್ಳುತ್ತ ಇದ್ದರು. ಅಂಥ ಪ್ರಬಲರಾದ ರಾಕ್ಷಸ ಮುಖ್ಯರುಗಳಿಗೆ ಇಪ್ಪತ್ತು ಸಾವಿರ ಅರ್ಬುದ ಸಂಖ್ಯೆಯುಳ್ಳ ರಾಕ್ಷಸರು ಬಂದು ಸೇರಿದರು. ಮತ್ತು ಅತಿಬಲಶಾಲಿಗಳಾದ ರಾಕ್ಷಸರುಗಳ ಕೋಟಿ ಸಂಖ್ಯೆಗಳು ಆ ಮೇಲೆ ಆ ಮೇಲೆ ಬಂದು ಸೇರುತ್ತಿದ್ದರು. ಪೂರ್ವದಲ್ಲಿ ದೇವತೆಗಳಿಂದ ತಿರಸ್ಕೃತರಾಗಿ ಮಾಂಸಹಾರಿಗಳಿಂದ ತೃಪ್ತಿಯನ್ನು ಹೊಂದಿರುವವರಾಗಿದ್ದು॥೨೩॥೨೪|| ಅಪಾರ ಐಶ್ವರ್ಯವನ್ನು ಬಯಸುವವರಾಗಿ ತ್ರಿಪುರವೆಂಬ ದುರ್ಗವನ್ನು ಆಶ್ರಯಿಸಿದರು. ಹೀಗೆ ಬಂದಿರುವವರಿಗೆ ಅಲ್ಲಿ ಇರುವವರಿಗೂ ಸಹ ಈ ಮಯನು ಸಕಲೋಪಾಯಗಳಿಂದಲೂ ಇಷ್ಟಸಾಧಕನಾಗಿದ್ದನು ॥೨೫॥ ಆ ಮಯನು, ತ್ರಿಪುರವಾಸಿಗಳಾದ ಸರ್ವರೂ ನಿರ್ಭೀತರಾಗಿ ಇದ್ದರು. ಹೀಗಿರುವಾಗ ಆ ತ್ರಿ ಪುರವನ್ನು ಆಶ್ರಯಿಸಿದ ಯಾವಾತನು ಮನಸ್ಸಿನಿಂದ ಏನೇನು ಬಯಸು

ಮನಸಾಕಾಮಂದಧ್ಯೌತ್ರಿಪುರಸಂಶ್ರಯಃ ॥೨೬॥ ತಸ್ಮೈಕಾಮಂಮಯಸ್ತಂತಂವಿದಧೇಮಾಯಯಾತದಾ ॥ ತಾರಕಾಕ್ಷಸುತೋವೀರೋಹರಿರ್ನಾಮಮಹಾಬಲಃ ॥ ೨೭ ॥ ತಪಸ್ತೇಪೇಪರಮಕಂಯೇನಾತುಷ್ಯತ್ಪಿತಾಮಹಃ॥ಸಂತುಷ್ಟಮಶ್ರೃಣೋದ್ದೇವಂವಾಪೀಭವತುನಃಪುರೇ ॥ ೨೮ ॥ ಶಸ್ತ್ರೈರ್ವಿನಿಹತಾಯತ್ರಕ್ಷಿಪ್ತಾಸ್ಸ್ಯುರ್ಬಲವತ್ತರಾಃ ॥ ಸತುಲಬ್ಧ್ವಾವರಂವೀರಸ್ತಾರಕಾಕ್ಷಸುತೋಹರಿಃ ॥೨೯॥ ಸಸೃಜೇತತ್ರವಾಪೀಂತಾಂಮೃತಾನಾಂಜೀವನೀಂಪ್ರಭೋ ॥ ಯೇನರೂಪೇಣದೈತ್ಯಸ್ತುಯೇನವೇಷೇಣಚೈವಹಿ ॥ ೩೦ ॥ ಮೃತಸ್ತಸ್ಯಾಂಪರಿಕ್ಷಿಪ್ತಸ್ತಾದೃಶೇನೈವಜಜ್ಞಿವಾನ್ ॥ ತಾಂಪ್ರಾಪ್ಯತೇಪು

ವನೊ ॥ ೨೬ ॥ ಮಯನು ಅಂಥವನಿಗೋಸ್ಕರ ಆಯಾ ಇಷ್ಟಾರ್ಥವನ್ನು ತನ್ನ ಮಾಯೆಯಿಂದ ಸಿದ್ಧಪಡಿಸುತ್ತಿದ್ದನು. ಚಿನ್ನದ ಪುರಾಧೀಶನಾದ ರಾಕ್ಷಸನಿಗೆ ಹರಿಯೆಂಬ ಮಹಾ ಬಲಿಷ್ಠನಾದ ಮಗನಾದನು ॥ ೨೭ ॥ ಆ ಹರಿಯು ಬ್ರಹ್ಮದೇವನು ಯಾವದರಿಂದ ಸಂತುಷ್ಟನಾಗುವನೊ ಅಂಥಾ ಉತ್ತಮವಾದ ತಪಸ್ಸನ್ನು ಮಾಡಿದನು. ಇಂಥಾ ತಪಸ್ಸಿನಿಂದ ಸಂತುಷ್ಟನಾಗಿ ಬಂದಿರುವ ಬ್ರಹ್ಮದೇವನನ್ನು ಕುರಿತು ನಮ್ಮ ಪಟ್ಟಣದಲ್ಲಿ ಒಂದು ಭಾವಿ ಆಗುವಂತೆ ಅನುಗ್ರಹಿಸಬೇಕು॥೨೮॥ ಆ ಭಾವಿಯಲ್ಲಿ ಅಸ್ತ್ರಗಳಿಂದ ಸತ್ತವರನ್ನು ಹಾಕಿದರೆ ಆ ಕ್ಷಣವೇ ಸಜೀವರಾಗಿ ಬಲಿಷ್ಠರಾಗಬೇಕು ಎಂದು ವರವನ್ನು ಬೇಡಲು, ಬ್ರಹ್ಮದೇವನು ಹಾಗೆಯೇ ಆಗಲಿಯೆಂಬ ವರವನ್ನು ರಾಕ್ಷಸನ ಮಗನಾದ ಹರಿಗೆ ಕೊಟ್ಟನು ॥ ೨೯ ॥ ಎಲೈ ಜ್ಞಾನಸಂಪನ್ನನಾದ ಮುನಿಯೆ ಕೇಳು ಎಂದು ಸೂತಪೌರಾಣಿಕನು ಹೇಳಿದನು. ಆ ತ್ರಿಪುರದಲ್ಲಿ ಮೃತರಾದವರನ್ನು ಬದುಕಿಸುವ ಭಾವಿಯನ್ನು ನಿರ್ಮಿಸಿಕೊಂಡನು. ದೈತ್ಯನಾದವನು ಯಾವ ರೂಪದಿಂದ ಯಾವ ವೇಷದಿಂದಲೆ ॥೩೦॥ ಮೃತಪಟ್ಟರೂ ಅವನನ್ನು ಆ ಭಾವಿಯಲ್ಲಿ ಹಾಕಿದಲ್ಲಿ ಅದೇ ಪ್ರಕಾರವಾಗಿ ಹುಟ್ಟುವನು. ಇಂತಹ ಭಾವಿಯನ್ನು ಕೂಡ ಸಂಪಾದಿಸಿ ಆ ದೈತ್ಯರು

ನಸ್ತ್ರಾಂಸ್ತ್ರೀಲೋಕಾನ್ಸರ್ವಾನ್ಸಬಾಧಿರೇ ॥ ೩೧ ॥ ಮಹಸಾತಪ ಸಾಸಿದ್ಧಾಃಸುರಾಣಾಂಭಯವರ್ಧನಾಃ ॥ ನತೇಷಾಮಭವದ್ವಿಪ್ರಕ್ಷ ಯೋಯುದ್ಧೇಕದಾಚನ ॥ ೩೨ ॥ ತತಸ್ತೇಲೋಭಮೋಹಾಭ್ಯಾ ಮಭಿಭೂತಾವಿಚೇತಸಃ ॥ ನಿಹ್ರೀಕಾಃಸಂಸ್ಥಿತಾಃಸರ್ವೇಸ್ಥಾಪಿತಾಃಸ ಮಲೂಲುಪನ್ ॥ ೩೩ ॥ ವಿದ್ರಾವ್ಯಸಗಣಾಂದೇವಾಂಸ್ತತ್ರತತ್ರತ ದಾತದಾ ॥ ವಿಚೇರುಃಸ್ವೇನಕಾಮೇನವರದಾನೇನದರ್ಪಿತಾಃ ॥೩೪॥ ದೇವೋದ್ಯಾನಾನಿಸರ್ವಾಣಿಪ್ರಿಯಾಣಿಚದಿವೌಕಸಾಂ ॥ ಋಷೀಣಾ ಮಾಶ್ರಮಾನ್ಪುಣ್ಯಗ್ರಾಮಾಂಜನಪದಾಂಸ್ತಥಾ ॥ ೩೫ ॥ ವ್ಯನಾ ಶಯಂತಮರ್ಯಾದಾಂದಾನವಾದುಷ್ಟಚಾರಿಣಃ ॥ ಪೀಡ್ಯಮಾನೇ

ಸಮಸ್ತ ಲೋಕಗಳನ್ನೂ ಬಾಧಿಸುತ್ತಿದ್ದರು॥೩೧॥ ಸೂತಪೌರಾಣಿಕನು ಎಲೈ ಬ್ರಾಹ್ಮಣನೇ ಕೇಳು, ಈ ಪ್ರಕಾರರಾದ ಆ ದೈತ್ಯರು ಉತ್ತಮ ವಾದ ಆ ತಪಸ್ಸಿನಿಂದ ಸಿದ್ಧರಾಗಿ ದೇವತೆಗಳಿಗೆ ಭೀತಿಯನ್ನು ಹೆಚ್ಚಿಸು ತ್ತಿದ್ದರು. ಯುದ್ಧದಲ್ಲಿ ಅವರುಗಳಿಗೆ ಒಂದು ದಿನವಾದರೂ ಕ್ಷಯವಾ ಗದೆಯಿತ್ತು ॥ ೩೨ ॥ ಆ ಮೇಲೆ ಆಸೆಯಿಂದಲೂ ಅಜ್ಞಾನದಿಂದಲೂ ವ್ಯಾಪಿಸಿಕೊಂಡು ಕೆಡುಕಾದ ಮನಸ್ಸುಳ್ಳವರಾಗಿ ಸ್ಥಿರರಾದ, ನಾಚಿಕೆಯಿ ಲ್ಲದವರಾದ, ಆ ತ್ರಿಪುರದಲ್ಲಿ ನೆಲೆಗೊಂಡ ಸಮಸ್ತ ದೈತ್ಯರೂ ಎಲ್ಲವನ್ನೂ ನಾಶಿಸುವದಕ್ಕೆ ತೊಡಗಿದರು ॥ ೩೩ ॥ ಮತ್ತು ವರಪ್ರದಾನಬಲದಿಂದ ಗರ್ವಿತರಾದ ಆ ದೈತ್ಯರು ಅಲ್ಲಲ್ಲಿ ಆಗಾಗ ಸಮಸ್ತ ಪರಿವಾರದೇವತೆಗ ಳನ್ನು ಓಡಿಸಿ ಸ್ವೇಚ್ಛಾವಿಹಾರದಿಂದ ಸಂಚರಿಸುತ್ತಿದ್ದರು ॥ ೩೪ ॥ ಮತ್ತು ದೇವತೆಗಳಿಗೆ ಪ್ರೀತಿಕರಗಳಾದ, ಸಮಸ್ತ ದಿವ್ಯಗಳಾದ ಹೂವು ಗಳ ಹಣ್ಣುಗಳ ತೋಟಗಳನ್ನೂ ಪವಿತ್ರವಾದ ಮುನಿಗಳ ಮನೆಗಳನ್ನೂ ರಮಣೀಯವಾದ ಊರುಗಳನ್ನೂ ದುಷ್ಟಸ್ವಭಾವರಾದ ಆ ದೈತ್ಯರು ಹಾಗೆಯೆ ಯೂಪಸ್ತಂಬ, ಮುಂದಿನ ಕಟ್ಟೆ ಮೊದಲಾದ ಮರ್ಯಾದೆಯ ಗುರುತುಗಳನ್ನು ಸಹ ನಾಶಪಡಿಸಿದರು. ಹೀಗೆ ಲೋಕಗಳನ್ನು ಪೀ ಡಿಸುತ್ತಿರಲಾಗಿ ಆಮೇಲೆ ದೇವೇಂದ್ರನು ಮರುದ್ಗಣಗಳಿಂದ ಕೂಡಿ

ಷುಲೋಕೇಷುತತಃಶಕ್ರೋಮರ್ವ್ವೃತಃ ||೩೬|| ಪುರಾಣ್ಯಾಯೋಧಯಾಂಚಕ್ರೇವಜ್ರಪಾತೈಃಸಮಂತತಃ || ಸಾಶಕತ್ತ್ವಾನ್ಯಭೇದ್ಯಾನಿಯದಾಭೇತ್ತುಂಪುರಂದರಃ || ೩೭ || ಪುರಾಣಿವರದತ್ತಾನಿಧಾತ್ರಾತೇಸ್ಮೈಮಹಾಂತಿಚ || ತದಾಭೀತಃಸುರಪತಿರ್ಮುಕ್ತ್ವಾತಾನಿಪುರಾಣ್ಯಥ || ೩೮ || ತೈರೇವವಿಬುಧೈಃಸಾರ್ಧಂಪಿತಾಮಹಮರಿಂದಮಃ || ಜಗಾಮಾಥತದಾಖ್ಯಾತುಂವಿಪ್ರಕಾರಂಸುರೇತರೈಃ ||೩೯|| ತೇತತ್ರಸರ್ವಮಾಖ್ಯಾಯಶಿರೋಭಿಃಸಂಪ್ರಣಮ್ಯಚ| | ವಧೋಪಾಯಮಪೃಚ್ಛಂಶ್ಚ ಭಗವಂತಂಪಿತಾಮಹಂ || ೪೦ || ಶ್ರುತ್ವಾತದ್ಭಗವಾಂದೇವೋದೇವಾನಿದಮುವಾಚಹ || ಮಮಾಪಿಸೋಪರಾಧ್ನೋತಿಯೋಯುಷ್ಮಾಕಮಸೌಸಕೃತ್ || ೪೧ || ಅಸುರಾಹಿದುರಾತ್ಮಾ

ದವನಾಗಿ || ೩೫ || || ೩೬ || ವಜ್ರಾಯುಧದ ಪೆಟ್ಟುಗಳಿಂದ ಆ ತ್ರಿಪುರಗಳನ್ನು ಹೊಡೆದನು. ಆದರೂ ತಾನು ಶತ್ರುಗಳ ಪಟ್ಟಣಗಳನ್ನು ತಿಳಿದವನಾದರೂ ಅಸಾಧ್ಯಗಳಾದ ಆ ಪುರಗಳನ್ನು ಭೇದಿಸುವುದಕ್ಕೆ ಸಾಧ್ಯವಾಗದೆ ಹೋಯಿತು || ೩೭ || ಆಗ ಬ್ರಹ್ಮದೇವರ ವರಪ್ರದಾನ ಪ್ರಬಲವಾಗಿರುವದನ್ನು ತಿಳಿದು ಆ ಕ್ಷಣವೇ ದೇವೇಂದ್ರನು ಭೀತನಾಗಿ ಆ ಪುರಗಳನ್ನು ಬಿಟ್ಟನು || ೩೮ || ಆ ಮೇಲೆ ಮರುದ್ಗಣಗಳು ಮೊದಲಾದ ದೇವತೆಗಳಿಂದ ಕೂಡಿದವನಾಗಿ ಆ ಶತ್ರುಗಳನ್ನು ನಿಗ್ರಹಿಸುವ ಅಭಿಲಾಷೆಯಿಂದ ಬ್ರಹ್ಮದೇವರನ್ನು ಕುರಿತು ದೈತ್ಯರುಗಳು ಮಾಡಿದ ಉಪದ್ರವಗಳನ್ನು ಹೇಳುವುದಕ್ಕೋಸ್ಕರ ಸತ್ಯಲೋಕಕ್ಕೆ ಹೋದರು || ೩೯ || ಆ ಇಂದ್ರಾದಿ ದೇವತೆಗಳು ಬ್ರಹ್ಮದೇವರಿಗೆ ಶಿರಸ್ಸುಗಳಿಂದ ನಮಸ್ಕರಿಸಿ ಸಕಲ ವೃತ್ತಾಂತವನ್ನೂ ಹೇಳಿಕೊಂಡು ಆ ದೈತ್ಯರುಗಳನ್ನು ಸಂಹರಿಸುವ ಉಪಾಯವನ್ನು ಕೇಳಿಕೊಂಡರು ||೪೦|| ಭಗವಂತನಾದ ಬ್ರಹ್ಮದೇವನು ದೇವತೆಗಳನ್ನು ಕುರಿತು ಯಾವ ದೈತ್ಯರು ನಿಮ್ಮನ್ನು ಬಾಧಿಸುವರೊ ಅವರು ನನ್ನನ್ನೂ ಕೂಡ ಬಾಧಿಸುತ್ತಾರೆ ಎಂದು ಅಪ್ಪಣೆಯನ್ನು ಕೊಟ್ಟನು || ೪೧ ||

ನಃಸರ್ವ್ವಏವಸುರದ್ವಿಷಃ॥ಅಪರಾಧ್ಯಂತಿಸತತಂಯೋಯುಷ್ಮಾನ್ಪೀಡಯಾಂತ್ಯತ ॥ ೪೨ ॥ ಅಹಂಹಿತುಲ್ಯಃಸರ್ವೇಷಾಂಭೂತಾನಾಂನಾತ್ರಸಂಶಯಃ ॥ ಅಧಾರ್ಮಿಕಾಸ್ತುಹಂತವ್ಯಾಯಿತಿಮೇವ್ರತಮಾಹಿತಂ ॥ ೪೩ ॥ ಯೇಕೇಷುಣಾವಿಭೇದ್ಯಾನಿತಾನಿದುರ್ಗಾಣಿನಾನ್ಯತಾ ॥ ನಚಸ್ಥಾಣುಮೃತೇಶಶ್ಯೋಭೇತ್ತುಮೇಕೇಷುನಾಪರಃ ॥೪೪॥ ತೇಯೂಯಂಸ್ಥಾಣುಮೀಶಾನಂಜಿಷ್ಣುಮಕ್ಲಿಷ್ಟಕಾರಿಣಂ॥ ಯೋದ್ಧಾರಂವೃಣುತಾದಿತ್ಯಾಃಸತಾನ್ಹಂತಾಸುರೇತರಾನ್॥೪೫॥ ಇತಿತಸ್ಯವಚಶ್ರುತ್ವಾದೇವಾಃಶಕ್ರಪುರೋಗಮಾಃ ॥ ಬ್ರಹ್ಮಾಣಮಗ್ರತಃಕೃತ್ವಾವೃಷಾಂಕಂಶರಣಂಯಯುಃ ॥ ೪೬ ॥ ತಪೋನಿಯಮಮಾಸ್ಥಾಯಗೃಣಂತೋಬ್ರಹ್ಮಶಾಶ್ವತಂ ॥ ಋಷಿಭಿಃಸಹಧರ್ಮಜ್ಞಾಂಭ

ದೈತ್ಯರು ಸ್ವಭಾವ ದುಷ್ಟರಾದವರು, ದೇವದ್ವೇಷಿಗಳು ॥೪೨॥ ನಾನು ಸರ್ವ ಜೀವಿಗಳಿಗೂ ಸಮಸ್ವಭಾವನಾಗಿದ್ದರೂ ಸದ್ಧರ್ಮರಹಿತರಾದವರನ್ನು ನಾಶಪಡಿಸಬೇಕೆಂಬುದು ನನಗೂ ಅಭಿಪ್ರಾಯವಿದೆ ॥೪೩॥ ಆದರೆ, ಈ ಬಗೆ ಒಂದು ರಹಸ್ಯವಿದೆ ಕೇಳಿ. ಅಗಾಧವಾದ ಮೂರು ಪಟ್ಟಣಗಳನ್ನೂ ಒಂದೇ ಕಡೆಗೆ ಸೇರಿಸಿ ಆಗ ಒಂದೇ ಬಾಣದಿಂದ ಕೊಲ್ಲಬೇಕಾಗಿದೆ. ಬೇರೆ ಯಾವ ಪ್ರಕಾರದಿಂದಲೂ ನಾಶಪಡಿಸಲು ಸಾಧ್ಯವಿಲ್ಲ. ಇದನ್ನು ನಾಶಪಡಿಸಲು ಶಾಶ್ವತನಾದ ಶ್ರೀ ಪರಮೇಶ್ವರನೇ ಹೊರತು ಬೇರೆ ಯಾರೂ ಒಂದು ಬಾಣದಿಂದ ಕೊಲ್ಲಲು ಶಕ್ತರಲ್ಲ ॥೪೪॥ ಆದುದರಿಂದ ಈಗ ನೀವು ನಾಶಪಡಿಸುವುದಕ್ಕೆ ಶಕ್ತನಾದ, ಪರಮೈಶ್ವರ್ಯಪ್ರದನಾದ, ಶಾಶ್ವತ ಪರಬ್ರಹ್ಮನಾದ, ಮಹಾರಥಿಕನಾದ ಶ್ರೀ ಪರಮೇಶ್ವರನನ್ನು ಪ್ರಾರ್ಥಿಸಿಕೊಳ್ಳಿರಿ ಎಂದು ಅದಿತಿಯ ಮಕ್ಕಳಾದ ದೇವತೆಗಳಿಗೆ ಅಪ್ಪಣೆ ಕೊಟ್ಟನು ॥೪೫॥ ದೇವೇಂದ್ರನೇ ಮೊದಲಾದ ದೇವತೆಗಳು ಈ ಪ್ರಕಾರವಾಗಿ ಬ್ರಹ್ಮದೇವನ ಅಪ್ಪಣೆಯನ್ನು ಕೇಳಿ ಬ್ರಹ್ಮದೇವನನ್ನು ಮುಂದಿಟ್ಟುಕೊಂಡು ವೃಷಧ್ವಜನಾದ ಆ ಪರಮಾತ್ಮನನ್ನು ಕುರಿತು ಶೈಲಶಿಖರಕ್ಕೆ ಸ್ಮರಿಸುತ್ತ ಹೋದರು ॥ ೪೬ ॥ ಸಕಲ ಧರ್ಮವನ್ನೂ

ವಂಸರ್ವಾತ್ಮನಾಗತಾಃ ॥೪೭॥ ತುಷ್ಟುವುರ್ವಾಗ್ಭಿರುಗ್ರಾಭಿರ್ಭಯೋಷ್ವಭಯದಂಸುರಾಃ॥ ಸರ್ವಾತ್ಮನಾಂಮಹಾತ್ಮಾನಂಯೇನಾಪ್ತಂಸರ್ವಮಾತ್ಮನಾ ॥೪೮॥ ತಪೋವಿಶೇಷೈರ್ವಿವಿಧೈರ್ಯೋಗಂಯೋವೇತ್ತಿಚಾತ್ಮನಃ॥ ಯಃಸಾಂಖ್ಯಮಾತ್ಮನೋವೇತ್ತಿಯಸ್ಯಚಾತ್ಮಾವಶೇಸದಾ ॥ ೪೯ ॥ ತಂತೇದದೃಶುರೀಶಾನಂತೇಜೋರಾಶಿಮುಮಾಪತಿಂ ॥ ಅನನ್ಯಸದೃಶಂಲೋಕೇಭಗವಂತಮಕಲ್ಮಷಂ ॥ ೫೦ ॥ ಏಕಂಚಭಗವಂತಂತೇನಾನಾರೂಪಮಕಲ್ಪಯನ್ ॥ ಆತ್ಮನಃಪ್ರತಿರೂಪಾಣಿರೂಪಾಣ್ಯಥಮಹಾತ್ಮನಿ ॥ ೫೧ ॥ ಪರಸ್ಪರಸ್ಯಚಾಪಶ್ಯನ್ಸ

ಬಲ್ಲ ಆ ದೇವತೆಗಳು ಮಹರ್ಷಿಗಳಿಂದೊಡಗೂಡಿ ವೇದಮಂತ್ರಗಳನ್ನು ಜಪಿಸುತ್ತ ಹೋದರು ॥ ೪೭ ॥ ಮತ್ತು ಆ ದೇವತೆಗಳು ಈ ಸಮಸ್ತವೂ ಯಾವಾತನ ಸ್ವರೂಪದಿಂದಲೇ ವ್ಯಾಪಿಸಿಕೊಂಡಿಧೆಯೋ ಮತ್ತು ಸಕಲ ಪ್ರಾಣಿಗಳ ಭೀತಿಗಳಲ್ಲಿ ಅಭಯವನ್ನು ಯಾರು ಕೊಡುವರೋ ಸರ್ವಾಂತರ್ಯಾಮಿಯಾದ ಅಂತಹ ಮಹಾತ್ಮನಾದ ಪರಮಾತ್ಮನನ್ನು ಶೀಘ್ರ ಫಲಪ್ರಾಪ್ತಿಗಳಾಗುವ ಮಂತ್ರಗಳಿಂದ ಸ್ತುತಿಸಿದರು ॥ ೪೮ ॥ ನಾನಾ ಪ್ರಕಾರವಾದ ತಪಸ್ಸಿನ ಅತಿಶಯಗಳಿಂದ ತನ್ನ ಯೋಗವನ್ನು ತಿಳಿದಿರುವನೋ ಯಾವಾತನು ತನ್ನ ಸಾಂಖ್ಯವೆಂಬ ಶಾಸ್ತ್ರವನ್ನು ತಿಳಿದಿರುವನೊ ಯಾವಾತನಿಗೆ ಸಕಲವೂ ಸ್ವಾಧೀನವಾಗಿಯೇ ಇರುವದೊ ॥ ೪೯ ॥ ಅಂಥಾವನಿಗೆ ಸರ್ವನಿಯಾಮನಾದ ಪ್ರಕಾಶಸಮೂಹನಾದ ಶ್ರೀ ಗೌರೀದೇವಿಗೆ ಪತಿಯಾದ ಲೋಕದಲ್ಲಿ ಸಾದೃಶ್ಯವೇ ಇಲ್ಲದಿರುವ ನಿಷ್ಪಾಪನಾದ ಷಡ್ಗುಣೈಶ್ವರ್ಯಸಂಪನ್ನನಾದ, ಅಂತಹ ಪರಾಪರ ವಸ್ತುವು ಸ್ತುತಿಸುತ್ತಿದ್ದ ಆ ದೇವತೆಗಳ ಮುಂದುಗಡೆ ಆವಿರ್ಭೂತನಾದನು ॥೫೦॥ ಮತ್ತು ಆ ದೇವತೆಗಳು ತ್ರಿಕಾಲಜ್ಞಾನಿಯಾದ ಪರಮೇಶ್ವರನನ್ನು ಆತನ ಮಹಿಮೆಯಿಂದ ಅನೇಕ ರೂಪಗಳನ್ನಾಗಿ ಆಲೋಚಿಸುತ್ತ ತಮ್ಮಲ್ಲಿ ಆ ಪರಮೇಶ್ವರನ ರೂಪಗಳನ್ನೂ ಆ ಮಹಾತ್ಮನಲ್ಲಿ ತಮ್ಮ ರೂಪುಗಳನ್ನೂ ಕಂಡರು ॥ ೫೧ ॥ ಸಮಸ್ತ ದೇವತೆಗಳೂ ಹೀಗೆ

ರ್ವೇಽಪರಮವಿಸ್ಮಿತಾಃ ॥ ಸರ್ವಭೂತಮಯಂದೃಷ್ಟ್ವಾತಮಜಂಜಗತಃಪತಿಂ ॥ ೫೨ ॥ ದೇವಾಬ್ರಹ್ಮರ್ಷಯಶ್ಚೈವಶಿರೋಭಿರ್ಧರಣೀಂಗತಾಃ ॥ ತಾನ್ಸ್ವಸ್ತಿವಾದೇನಾಭ್ಯರ್ಚ್ಯಸಮುತ್ಥಾಪ್ಯಚಶಂಕರಃ ॥ ॥ ೫೩ ॥ ಬ್ರೂತಬ್ರೂತೇತಿಭಗವಾನ್ ಸ್ಮಯಮಾನೋಽಭ್ಯಭಾಷತ ॥ ತ್ರ್ಯಂಬಕೇಣಾಭ್ಯನುಜ್ಞಾತಸ್ತತಸ್ತೇಽಸ್ವಸ್ಥಚೇತಸಃ ॥ ೫೪ ॥ ನಮೋನಮೋನಮಸ್ತೇಽಸ್ತುಪ್ರಭೋಇತ್ಯಬ್ರುವನ್ವಚಃ॥ ನಮೋದೇವಾದಿದೇವಾಯಧನ್ವಿನೇವನಮಾಲಿನೇ ॥೫೫॥ ಪ್ರಜಾಪತಿಮುಖೇಜ್ಯಾಯಪ್ರಜಾಪತಿಭಿರೀಡ್ಯತೇ ॥ ನಮಸ್ತುತಾಯಸ್ತುತ್ಯಾಯಸ್ತೂಯಮಾನಾಯಚ ಭವೇ ॥ ೫೫॥ ವಿಲೋಹಿತಾಯರುದ್ರಾಯನೀಲಗ್ರೀವಾ

ಸರ್ವಪ್ರಾಣಿಮಯನಾದ, ಜಗತ್ತಿಗೆ ಈಶ್ವರನಾದ ದೇವರನ್ನು ಕಂಡು ಆಶ್ಚರ್ಯಯುಕ್ತರಾಗಿ ॥ ೫೨ ॥ ದೇವತೆಗಳು, ಬ್ರಹ್ಮಋಷಿಗಳು ಭೂಮಿಯಲ್ಲಿ ಶಿರಸ್ಸಿನಿಂದ ನಮಸ್ಕಾರ ಮಾಡಿದರು. ಆ ಸಮಯದಲ್ಲಿ ಆ ಪರಮಾತ್ಮನು ದೇವತೆಗಳನ್ನು ಮೃದುವಾದ ಮಾತಿನಿಂದ ಸನ್ಮಾನಿಸಿದನು ॥ ೫೩ ॥ ಅನಂತರ ಆ ಪರಮಾತ್ಮನು ಭಯಭ್ರಾಂತರಾದ ದೇವತೆಗಳನ್ನು ಕುರಿತು ಅಭಯರೂಪವಾದ ಮಂದಹಾಸಯುಕ್ತನಾಗಿ ನಿಮ್ಮ ಭಯವನ್ನು ಹೇಳಿರೆಂದು ಮಾತನಾಡಿದನು. ಈ ಪ್ರಕಾರ ಆ ತ್ರಿಯಂಬಕಸ್ವಾಮಿಯಿಂದ ಆಜ್ಞಾಪಿಸಿಕೊಂಡ ದೇವತೆಗಳು ಸ್ವಸ್ಥಚಿತ್ತರಾಗಿ ॥ ೫೪ ॥ ಎಲೈ ಸರ್ವ ಸಮರ್ಥನಾದ ಪರಮಾತ್ಮನೆ ನಿನಗೋಸ್ಕರ ನಮೋನಮೋನಮಃ ಸಮಸ್ತ ದೇವತೆಗಳಿಗೂ ಆದಿ ದೇವನಾದ ಧನುರ್ಧರನಾದ, ವನಮಾಲಾಧರನಾದ ನಿನಗೋಸ್ಕರ ನಮಸ್ಕಾರವು ಮತ್ತು ಸ್ತುತಿರೂಪನಾದ, ಸ್ತುತಿಸಿಕೊಳ್ಳುವವನಾದ, ಸ್ತುತಿಸಿಕೊಳ್ಳುವದಕ್ಕೆ ಯೋಗ್ಯನಾದ, ಸುಖಪ್ರದನಾದ, ಮಿಶ್ರ ರಕ್ತವರ್ಣನಾದ, ದುರಿತಹರನಾದ, ನೀಲದ ಮಣಿಯಂತೆ ಇರುವ ಕಂಠವುಳ್ಳ, ತ್ರಿಶೂಲಧರನಾದ ನಿನಗೋಸ್ಕರ ನಮಸ್ಕಾರವು ॥ ೫೫ ॥ ೫೬ ॥ ವ್ಯರ್ಥವಲ್ಲದಿರುವವನಾದ, ಮೃಗಾಕ್ಷನಾದ, ಉತ್ತಮನಾದ, ಆಯುಧಗಳಿಂದ ಯುದ್ಧ

ಯಶೂಲಿನೇ ॥ ೫೬ ॥ ಅಮೋಘಾಯಮೃಗಾಕ್ಷಾಯಪ್ರವರಾ
ಯುಧಯೋಧಿನೇ ॥ ಅರ್ಹಾಯಚೈವಶುದ್ಧಾಯಕ್ಷಯಾಯಕ್ರಥನಾ
ಯಚ ॥ ೫೭ ॥ ದುರ್ವಾರಣಾಯಪ್ರೌಢಾಯಬ್ರಹ್ಮಣೇಬ್ರಹ್ಮಚಾರಿ
ಣೇ॥ಈಶಾನಾಯಾಪ್ರಮೇಯಾಯನಿಯಂತ್ರೇಚರ್ಮವಾಸಸೇ ॥೫೮॥
ತಪೋರಕ್ಷಾಯಪಿಂಗಾಯವ್ರತಿನೇಕೃತ್ತಿವಾಸಸೇ॥ ಕುಮಾರಪಿತ್ರೇಽ
ತ್ಯಕ್ಷಾಯಪ್ರವರಾಯುಧಪಾಣಯೇ ॥ ೫೯ ॥ ಪ್ರಸನ್ನಾರ್ತಿವಿನಾ
ಶಾಯಬ್ರಹ್ಮದ್ವಿಟ್ಸಂಘಘಾತಿನೇ ॥ ವನಸ್ಪತೀನಾಂಪತಯೇನಾರೀ
ಣಾಂಪತಯೇನಮಃ ॥ ೬೦ ॥ ಗವಾಂಚಪತಯೇನಿತ್ಯಂಯಜ್ಞಾ
ನಾಂಪತಯೇನಮಃ ॥ ನಮೋಽಸ್ತುತೇಸುಸೈನ್ಯಾಯತ್ರ್ಯಂಬಕಾಯಾ
ಮಿತೌಜಸೇ ॥ ೬೧ ॥ ಮನೋವಾಕ್ಕರ್ಮಭಿರ್ದೇವತ್ವಂಪ್ರಸನ್ನಾ

ಮಾಡುವನಾದ, ಪೂಜ್ಯನಾದ, ಪರಿಶುದ್ಧನಾದ, ನಾಶರಹಿತನಾದ, ಕ್ರಥ
ನನಾದ ನಿನಗೋಸ್ಕರ ನಮಸ್ಕಾರವು ॥ ೫೭ ॥ ಯಾರಿಂದಲೂ
ಹಿಮ್ಮೆಟ್ಟಿಸಲಸಾಧ್ಯನಾದ, ಪ್ರೌಢರೂಪನಾದ, ಪರಬ್ರಹ್ಮನಾದ, ವೈದಿಕ
ಧರ್ಮವನ್ನು ಆಚರಿಸುತ್ತಿರುವ ಜ್ಞಾನಾದಿ ಮಹದೈಶ್ವರ್ಯ ರೂಪ
ನಾದ, ಅಪ್ರಮೇಯನಾದ, ಸರ್ವನಿಯಾಮಕನಾದ, ಮೃದುವಾದ ಕೃ
ಷ್ಣಾಜಿನ ವಸ್ತ್ರಧಾರಿಯಾದ ॥೫೮॥ ಲೋಕಮಂಗಲವಾದ ತಪಸ್ಸನ್ನು
ಮಾಡುವ ಪಿಂಗಲವರ್ಣನಾದ, ನಿಯಮಪರನಾದ, ವ್ಯಾಘ್ರಾಜಿನಧಾರಿ
ಯಾದ, ಕುಮಾರಸ್ವಾಮಿಯ ತಂದೆಯಾದ, ಮೂರು ಕಣ್ಣುಳ್ಳ, ಉತ್ತ
ಮವಾದ ಆಯುಧವು ಕೈಯ್ಯಲ್ಲಿರುವ ॥೫೯॥ ಶರಣಾಗತರಾಗಿ ಬಂದವರ
ಕಷ್ಟವನ್ನು ಪರಿಹರಿಸುವ, ಸಾಧುಹಿಂಸಕರ ಗುಂಪನ್ನೇ ನಾಶಿಸುತ್ತಿರುವ,
ಸಕಲೌಷಧಿಗಳನ್ನೂ ರಕ್ಷಿಸುವ, ಪಾತಿವ್ರತ್ಯ ಪ್ರದತ್ವದಿಂದ ಸ್ತ್ರೀಯ
ರನ್ನು ರಕ್ಷಿಸುವ ನಿನಗೋಸ್ಕರ ನಮಸ್ಕಾರವು ॥ ೬೦ ॥ ವೇದವಾಕ್ಯ
ಗಳಿಗೆ ಆಶ್ರಯನಾದ, ನಿತ್ಯದಲ್ಲಿಯೂ ಯಜನಾದಿ ಸತ್ಕರ್ಮಗಳಿಗೆ ಪತಿ
ಯಾದ ನಿನಗೋಸ್ಕರ ನಮಸ್ಕಾರವು. ಎಲೈ ದೇವನೇ ಅಪರಮಿತ
ಸೇನಾಯುಕ್ತನಾದ, ಮೂರು ವಿಧವಾದ ಶಕ್ತಿಸಹಿತನಾದ ಅಪಾರಮಹಿ
ಮನಾದ ನಿನಗೋಸ್ಕರ ನಮಸ್ಕಾರವು॥೬೧॥ಎಲೈ ದೇದೀಪ್ಯಮಾನನಾದ

ನ್ಭಜಸ್ವನಃ ॥ ತತಃಪ್ರಸನ್ನೋಭಗವಾನ್ ಸ್ವಾಗತೇನಾಭಿನಂದ್ಯಚ ॥
ಪ್ರೋವಾಚವ್ಯೇತುವಸ್ತ್ರಾಸೋಬ್ರೂತಕಿಂಕರವಾಣಿವಃ ॥ ೬೧ ॥

ಇತಿ ಶ್ರೀಸ್ಕಂದಪುರಾಣೇ ಶ್ರೀ ಕಲಶೇಶ್ವರ ಮಹಿಮಾನುವರ್ಣನಂ
ತ್ರಿಪುರೋಪಾಖ್ಯಾನಂ ನಾಮತ್ರಯೋ ದಶಾಧ್ಯಾಯಃ

ಪರಮಾತ್ಮನೇ ಮನೋವಾಕ್ಕಾಯಂಗಳಿಂದ ನಿನ್ನ ಶರಣವನ್ನೈದಿದೆವು. ನಮ್ಮನ್ನು ಅನುಗ್ರಹಕ್ಕೆ ಪಾತ್ರರನ್ನಾಗಿ ಸ್ವೀಕರಿಸು. ಹೀಗೆ ಪ್ರಾರ್ಥಿಸಿ ವಂದಿಸುತ್ತಿರುವ ದೇವತೆಗಳ ನಮಸ್ಕಾರದಿಂದ ಸಂತೋಷಿಸಿ ಶ್ರೀ ಪರಮೇಶ್ವರನು ॥೬೦॥ ನಿಮ್ಮ ಭಯವು ಹೋಗಲಿ, ನಾನು ನಿಮಗೋಸ್ಕರ ಏನು ಮಾಡಬೇಕು ಎಂದು ಅಪ್ಪಣೆಯನ್ನು ಕೊಟ್ಟನು॥೬೧॥

ಈ ಪ್ರಕಾರ ಸ್ಕಂದಪುರಾಣ ತುಂಗಭದ್ರಾ ಖಂಡದಲ್ಲಿ ಹೇಳಿರುವ
ಶ್ರೀ ಕಲಶೇಶ್ವರ ಸ್ವಾಮಿಯವರ ಮಹಿಮೆಯಲ್ಲಿ ಪ್ರಸಂಗವಾಗಿ
ಬಂದ ತ್ರಿಪುರಾಖ್ಯಾನವೆಂಬ ಹದಿಮೂರನೆಯ ಅಧ್ಯಾಯವು
ಸಂಪೂರ್ಣವಾದುದು.

ಶ್ರೀಸೂತ ಉವಾಚ ॥ ಉವಾಚಪಿತೃದೇವರ್ಷಿಸಂಘೇಭ್ಯೋಭ
ಯೋದತ್ತೋಮಹಾತ್ಮನಾ ॥ ಸತ್ಕೃತ್ಯಶಂಕರಂಪ್ರಾಹಬ್ರಹ್ಮಾಲೋಕ
ಹಿತಂವಚಃ ॥೧॥ ತವಾತಿಸರ್ಗಾದ್ದೇವೇಶಪ್ರಜಾಪತ್ಯಮಿದಂಪದಂ।
ಮಯಾಧಿಷ್ಠಿತಾದತ್ತೋದಾನವೇಭ್ಯೋಮಹಾನ್ವರಃ॥೨॥ ತಾನತಿ
ಕ್ರಾಂತಮರ್ಯಾದಾನ್ನಾನ್ಯಸ್ಸಂಹರ್ತುಮರ್ಹತಿ ॥ ತ್ವಾಮೃತೇಭೂ
ತಭವ್ಯೇಶತ್ವಂಹ್ಯೇಷಾಂಪ್ರತ್ಯರಿರ್ವಧೇ ॥ ೩ ॥ ಸತ್ವಂದೇವಪ್ರ
ಪನ್ನಾನಾಂಯಾಚತಾಂಚದಿವೌಕಸಾಂ ॥ ಕುರುಪ್ರಸಾದಂದೇವೇಶ
ದಾನವಾನ್ಜಹಿಶಂಕರ ॥ ೪ ॥ ತ್ವತ್ಪ್ರಸಾದಾಜ್ಜಗತ್ಸರ್ವಂಸುಖಮಾ

೧೪ನೆಯ ಅಧ್ಯಾಯ ಪ್ರಾರಂಭ.

ಶ್ರೀ ಸೂತಪೌರಾಣಿಕನು ಶೌನಕಾದಿ ಋಷಿಗಳನ್ನು ಕುರಿತು ಹೇಳುತ್ತಾನೆ. ಕೇಳಿರೈ ಶೌನಕಾದಿ ಋಷಿಗಳಿರಾ! ಈ ಪ್ರಕಾರ ಆ ಪರಮಾತ್ಮನಿಂದ ಪಿತೃಗಳೂ ದೇವತೆಗಳೂ ಋಷಿಗಳೂ ಇವರುಗಳಿಗೋಸ್ಕರ ಅಭಯವಂ ಕರುಣಿಸುತ್ತಿರಲಾಗಿ ಈ ಮಧ್ಯದಲ್ಲಿರುವ ಬ್ರಹ್ಮದೇವನು ಜ್ಞಾನಾದಿ ಸುಖಪ್ರದನಾದ ಶ್ರೀ ಪರಮೇಶ್ವರನನ್ನು ಬಹುಮಾನಿಸಿ ಲೋಕೋಪಕಾರವಾದ ಮಾತನ್ನು ಆಡಿದನು. ॥ ೧ ॥ ಎಲೈ ದೇವೇಶನೆ, ನಿನ್ನ ಅಪ್ಪಣೆ ದೆಸೆಯಿಂದ ಸೃಷ್ಟಿಯು ಪದವಿಯನ್ನು ಆಳುತ್ತಿರುವ ನನ್ನಿಂದ ದಾನವರಿಗೋಸ್ಕರ ಮಹತ್ತಾದ ವರವು ಕೊಡಲ್ಪಟ್ಟಿತು ॥೨॥ ಎಲೈ ದೇವನೆ, ಹುಟ್ಟಿರುವ, ಹುಟ್ಟುವ ಸಮಸ್ತಕ್ಕೂ ಈಶನಾದ ನಿನ್ನನ್ನು ಹೊರತಾಗಿ ಸನ್ಮಾರ್ಗ ವಿರೋಧಿಗಳಾದ ವರಗರ್ವಿತರಾದ ಆ ದಾನವರನ್ನು ಕೊಲ್ಲುವವನಕ್ಕೆ ಇನ್ನೊಬ್ಬನೂ ಶಕ್ತನಿಲ್ಲ. ಇವರುಗಳಿಗೆ ನೀನೇ ಕೊಲ್ಲುವುದರಲ್ಲಿ ಶತ್ರುವು ಆಗಿದ್ದೀಯೆ ॥೩॥ ಎಲೈ ದೇವಸ್ವಾಮಿಯೆ, ಅಂಥ ನೀನು ಮರೆಬಿದ್ದು ಬೇಡಿಕೊಳ್ಳುತ್ತಿರುವ ದೇವತೆಗಳಿಗೆ ಅನುಗ್ರಹವನ್ನು ಮಾಡು. ಎಲೈ ಸುಖದಾಯಕನಾದ ದೇವನೆ! ಆ ದಾನವರನ್ನು ಜಯಿಸು. ॥ ೪ ॥ ಎಲೈ ಸನ್ಮಾನ ಪ್ರದ

ಪ್ನೋತಿಮಾನದ ॥ ಶರಣ್ಯಸ್ತ್ವಂಹಿಲೋಕೇಶತೇವಯಂಶರಣಂಗ ತಾಃ ॥ ೫ ॥ ಸ್ಥಾಣುಃ ॥ ಹಂತವ್ಯಾಃಶತ್ರವಸರ್ವೇಯುಷ್ಮಾಕಮಿತಿ ಮೇಮತಿಃ ॥ ತತೋಬ್ರವೀನ್ಮಹಾದೇವೋಧನುರ್ಬಾಣಧರೋಹ್ಯ ಹಂ ॥ ೬ ॥ ಹನಿಷ್ಯಾಮಿರಥೇನಾಜೌತಾನ್ರಿಪೂನ್ವೋದಿವೌಕಸಃ॥ ತೇಯೂಯಂಮೇರಥಂಚೈವಧನುರ್ಬಾಣಂತಥೈವಚ ॥ ೭ ॥ ಪಶ್ಯ ಧ್ವಂತಾನ್ರಿಪೂನ್ದೈತ್ಯಾನ್ಪಾತಯಾಮಿಮಹೀತಳೇ॥ ದೇವಾ ಊ ಚುಃ ॥ ಮೂರ್ತಿಂಸರ್ವಾಂಸಮಾದಾಯತ್ರೈಲೋಕ್ಯಸ್ಯತತಸ್ತ ತಃ ॥ ೮ ॥ ರಥಂತೇಕಲ್ಪಯಿಷ್ಯಾಮೋದೇವೇಶ್ವರಸುವರ್ಚಸಂ ॥

ನಾದ ದೇವನೆ, ಸಮಸ್ತವಾದ ಈ ಪ್ರಪಂಚವೂ ನಿನ್ನ ಅನುಗ್ರಹದ ಬೆಸೆ ಯಿಂದ ಸುಖವನ್ನು ಹೊಂದುತ್ತಲಿವೆ. ಎಲೈ ಲೋಕಸ್ವಾಮಿಯೆ, ನೀನು ಆಶ್ರಯಾರ್ಹನಾಗಿರುವುದರಿಂದಲೇ ಅಂಥ ನಾವೂ ನಿನ್ನ ಆಶ್ರಯು ವನ್ನು ಸೇರಿದೆವು ಎನಲು ॥ ೫ ॥ ಆಗ ಶಾಶ್ವತನಾದ ಶ್ರೀ ಪರಮೇ ಶ್ವರನು ಆ ದೇವತೆಗಳನ್ನು ಕುರಿತು ನಿಮ್ಮ ಶತ್ರುಗಳಾದವರೆ ಲ್ಲರೂ ಕೊಲ್ಲಿಸಿಕೊಳ್ಳತಕ್ಕವರೇ ಸರಿಯೆಂದು ನನ್ನ ಬುದ್ಧಿಯು. ಎಲೈ ಸ್ವರ್ಗವಾಸಿಗಳಾದ ದೇವತೆಗಳಿರಾ ಎಂದು ಹೇಳಿ ಆ ದೇವತೆಗಳನ್ನು ಕುರಿತು ಶ್ರೀ ಮಹಾದೇವನು ನಾನು ಬಿಲ್ಲನ್ನೂ ಅಂಬುಗಳನ್ನೂ ಧರಿಸಿ ದವನಾಗಿ ॥ ೬ ॥ ರಥದೊಡನೆ ನಿಮ್ಮ ಶತ್ರುಗಳಾದ ಆ ದೈತ್ಯರನ್ನು ಯುದ್ಧದಲ್ಲಿ ಕೊಲ್ಲುವೆನು. ಆದ್ದರಿಂದ ನೀವು ನನಗೆ ಅನುಕೂ ಲವಾದ ರಥವನ್ನೂ ಧನುಸ್ಸನ್ನೂ ಬಾಣವನ್ನೂ ಕೂಡ ॥ ೭ ॥ ನೋಡಿ ಸಿದ್ಧಪಡಿಸಿ. ನೀವು ಅಪೇಕ್ಷಿಸುವದರೆ ಈಗಲೇ ಆ ದೈತ್ಯರನ್ನು ಭೂಮಿಯಲ್ಲಿ ಕೆಡಹುತ್ತಲಿದ್ದೇನೆ. ಹೀಗೆಂದ ಶ್ರೀ ಭಗವಂತನ ಮಾತನ್ನು ಕೇಳಿ ದೇವತೆಗಳು ಪುನಃ ಪ್ರಾರ್ಥಿಸುತ್ತಾರೆ. ಎಲೈ ದೇವೇಶ್ವರನೆ, ಮೂರು ಲೋಕಗಳ ಆಯಾ ಮುಖ್ಯ ವಸ್ತುಗಳ ಸಕಲಸಾರಗಳನ್ನೂ ತೆಗೆದು ನಿನಗೆ ॥ ೮ ॥ ನಮ್ಮ ಬುದ್ಧಿಯಿಂದಲೂ ಮತ್ತು ವಿಶ್ವಕರ್ಮನಿಂ ದಲೂ ಶುಭವಾದ ಮತ್ತು ಉತ್ತಮವಾದ ಬಹುಪ್ರಕಾಶವಾದ ರಥವನ್ನು

ತಸ್ಯೈವಬುಧಶ್ರ್ಯಾವಿಹಿತಂವಿಶ್ವಕರ್ಮಕೃತಂಶುಭಂ ॥ ೯ ॥ ತತೋವಿಬುಧಶಾರ್ದೂಲಾಸ್ತಂರಥಂಸಮಕಲ್ಪಯನ್ ॥ ವಿಷ್ಣುಂಸೋಮಂಹುತಾಶಂಚತಸ್ಯೇಷುಂಸಮಕಲ್ಪಯನ್ ॥ ೧೦ ॥ ಶೃಂಗಮಗ್ನಿರ್ಬಭೂವಾಸ್ಯಭಲ್ಲಃಸೋಮಃಪ್ರಕೀರ್ತಿತಃ ॥ ಕುಟ್ಮಲಶ್ಚಾಭವದ್ವಿಷ್ಣುಸ್ತಸ್ಮಿನ್ನಿಷುವರೇತದಾ ॥ ೧೧ ॥ ರಥಂವಸುಂಧರಾಂದೇವೀಂವಿಶಾಲಪುರಮಾಲಿನೀಂ॥ ಸಪರ್ವತವನದ್ವೀಪಾಂಚಕ್ರುರ್ಭೂತಧರಾಂತದಾ॥ ೧೨ ॥ ಋಗ್ವೇದಶ್ಚಯಜುರ್ವೇದಸ್ಸಾಮವೇದೋಥರ್ವಣಃ ॥ ರಥಸ್ಯಕಲ್ಪಿತಾಸ್ತಸ್ಯಶಂಭೋರ್ವಾಹಾವರಾಹಯಾಃ॥ ಮಂದರಃಪರ್ವತಶ್ಚಾಕ್ಷಂಜಂಘಾತಸ್ಯಮಹಾನದೀ ॥ ದಿಶಶ್ಚಪ್ರಾದಿಶಶ್ಚೈವಪರಿವಾರೋರಥಸ್ಯತು ॥ ೧೩ ॥ ಈಶಾನಕ್ಷತ್ರವಂಶಾಶ್ಚಯುಗಳ

ಮಾಡಿಸಿ ಒಪ್ಪಿಸುತ್ತೇವೆ॥೯॥ಹೀಗೆ ಹೇಳಿದಅಪ್ಪಣೆಯನ್ನು ಹೊಂದಿ ತಮ್ಮಸ್ಥಳವನ್ನು ಸೇರಿಕೊಂಡು ದೇವಶ್ರೇಷ್ಠರೆಲ್ಲರೂ ರಥವನ್ನು ಮಾಡಲಾರಂಭಿಸಿ, ಮೊದಲು ಒಂದೇ ಬಾಣದಿಂದ ಆ ಮೂರು ಪಟ್ಟಣಗಳನ್ನೂ ನಾಶಮಾಡಬೇಕಾದುದರಿಂದ, ಬಾಣವನ್ನು ವಿಷ್ಣು, ಸೋಮ, ಯಜ್ಞೇಶ್ವರರೆಂಬ ದೇವತೆಗಳ ಮುಖ್ಯಾಂಶಗಳಿಂದ ಮಾಡಿದರು॥೧೦॥ ಮತ್ತು ಆ ಬಾಣದ ತುದಿಯಲ್ಲಿ ಅಗ್ನಿಯೂ ಮಧ್ಯಭಾಗದಲ್ಲಿ ಚಂದ್ರನೂ ಮೊಗ್ಗೆ ಅಥವಾ ಮೊನೆಯಲ್ಲಿ ವಿಷ್ಣುವೂ ಆಗಿದ್ದರು ॥ ೧೧ ॥ ಆಗ ಪರ್ವತ ವನದ್ವೀಪ ಯುಕ್ತವಾಗಿ, ವಿಶಾಲವಾದ ಸಕಲ ಭೂತಯುಕ್ತವಾದ ಭೂಮಂಡಲವನ್ನು ರಥವನ್ನಾಗಿಯೂ ಆ ರಥಕ್ಕೆ ಮಂದರಪರ್ವತವನ್ನು ಅಚ್ಚನ್ನಾಗಿಯೂ ಅದಕ್ಕೆ ಮಹಾನದಿಯನ್ನು ಪೆಟ್ಟಿಗೆಸಂಧಿಯನ್ನಾಗಿಯೂ ದಿಕ್ಕುಗಳು ವಿದಿಕ್ಕುಗಳನ್ನು ರಥದ ಪರಿವಾರವಾಗಿಯೂ ॥ ಈಶ್ವರನ ಆ ರಥಕ್ಕೆ ನಾಲ್ಕು ವೇದಗಳನ್ನು ಶ್ರೇಷ್ಠವಾದ ಕುದುರೆಗಳನ್ನಾಗಿಯೂ ಮಾಡಿ ಕಟ್ಟಿದರು ॥೧೩॥ ನಕ್ಷತ್ರಮಾಲಿಕೆಯು ಮೂಕಿಯಾಗಿಯೂ ಕೃತಯುಗವು ನೊಗವಾಗಿಯೂ ಆಯಿತು. ಮಾಸ

ಕೃತಯುಗೋಽಭವತ್ ॥ ಕೂಬರಸ್ತು ರಥಸ್ಯಾಸೀದ್ವಾಸುಕಿರ್ಭುಜಗೋತ್ತಮಃ ॥ ೧೪ ॥ ಅವಸ್ಕರಮಧಿಷ್ಠಾನೇ ಹಿಮವಾನ್ವಿಂಧ್ಯಪರ್ವತಃ॥ಉದಯಾಸ್ತಾವಧಿಷ್ಠಾನೇ ಗಿರೀ ಚಕ್ರುಃ ಸುರೋತ್ತಮಾಃ ॥೧೫॥ ಸಮುದ್ರಮಕ್ಷಮಸೃಜನ ದಾನವಾಲಯಮುತ್ತಮಂ ॥ ಸಪ್ತರ್ಷಿಮಂಡಲಂಚೈವ ರಥಸ್ಯಾಸೀತ್ಪರಿಷ್ಕರಃ ॥ ೧೬ ॥ ಗಂಗಾಸರಸ್ವತೀ ಸಿಂಧುರ್ಧುರಮಾಕಾಶಮೇವಚ ॥ ಉಪಸ್ಕಾರೋ ರಥಸ್ಯಾಸನ್ನಾಪಃ ಸರ್ವಾಶ್ಚ ನಿಮ್ನಗಾಃ ॥ ೧೭ ॥ ಅಹೋರಾತ್ರಃ ಕಲಾಶ್ಚೈವ ಕಾಷ್ಠಾಶ್ಚ ಋತವಸ್ತಥಾ ॥ ಅನುಕರ್ಷಂಗ್ರಹಾದೀಪ್ತಾ ವರೂಥಂಚಾಪಿ ತಾರಕಾಃ ॥ ೧೮ ॥ ಧರ್ಮಾರ್ಥಕಾಮಸಂಯುಕ್ತಂ ತ್ರಿವರ್ಗಂ ಚಾಪಿಬಂಧುರಂ ॥ ಓಷಧೀರ್ವೀರುಧಶ್ಚೈವ ಘಂಟಾಃ ಪುಷ್ಪಫಲೋಪಮಾಃ ॥ ೧೯ ॥ ಸೂರ್ಯಾಚಂದ್ರಮಸೌ ಕೃತ್ವಾ ಚಕ್ರೇ ರಥವರೋತ್ತ

ಕಿಯೂ ನೊಗದ ಹಗ್ಗವಾಯಿತು ॥ ೧೪ ॥ ಹಿಮವಂತವಿಂಧ್ಯಪರ್ವತಗಳು ಪಾರ್ಶ್ವದ ಹಲಗೆಗಳು, ಉದಯಾಸ್ತ ಪರ್ವತಗಳೂ ಉಪವೇಶನ ಪೀಠಗಳೂ ಆಗುವಂತೆ ದೇವಶ್ರೇಷ್ಠರು ಮಾಡಿಸಿದರು ॥೧೫॥ ದಾನವರ ಮನೆಯಾಗಿದ್ದ ಸಮುದ್ರವನ್ನು ಅಚ್ಚುಮರವನ್ನಾಗಿ ಮಾಡಿದರು. ಸಪ್ತಋಷಿಮಂಡಲವು ರಥಕ್ಕೆ ರಕ್ಷಾಸ್ಥಾನವಾಯಿತು. ಗಂಗೆ, ಸರಸ್ವತಿ ಸಿಂಧು ನದಿಗಳನ್ನು ರಥದ ಪಟ್ಟಿಗಳನ್ನಾಗಿಯೂ ಆಕಾಶವನ್ನು ಧುರವನ್ನಾಗಿಯೂ ಇತರ ಸರ್ವನದಿಗಳನ್ನು ಪಾರ್ಶ್ವವರ್ಣಗಳನ್ನಾಗಿಯೂ, ಮಾಡಿದರು ॥೧೭॥ ಹಗಲು, ರಾತ್ರಿಯು, ಕಲೆಗಳು, ಘಳಿಗೆಗಳು, ಋತುಗಳು ರಥಕ್ಕೆ ಮೇಲುಕಟ್ಟುಗಳಾಗಿಯೂ ಇನ್ನು ಕೆಲವು ನಕ್ಷತ್ರಗ್ರಹರುಗಳು ಮೇಲ್ಭಾಗದ ಆವರಣಗಳಾಗಿಯೂ॥೧೮॥ ಧರ್ಮ, ಕಾಮ, ಅರ್ಥಗಳನ್ನು ಮುಕ್ಷೂರಿಯನ್ನಾಗಿಯೂ ಪುಷ್ಪ ಫಲಸಹಿತಗಳಾದ ಲತೆಗಳನ್ನು ಸಣ್ಣ ಘಂಟೆಗಳನ್ನಾಗಿಯೂ॥೧೯॥ ಸೂರ್ಯಚಂದ್ರರನ್ನು ಆ ರಥದ ಘಾಲಿಗಳನ್ನಾಗಿಯೂ ಮತ್ತು ಮಹೋನ್ನತವಾದ ಆ ರಥದಲ್ಲಿ

ಮೇ ॥ ಪಕ್ಷೌಪೂರ್ವಾಪರೌತತ್ರಕೃತೇರಾತ್ರ್ಯಹನೀಶುಭೇ ॥ ೨೦ ॥ ದಶನಾಗವರಾನೀಷಾಂಧೃತರಾಷ್ಟ್ರಮುಖಾಂಸ್ತದಾ ॥ ಯೋಕ್ತ್ರಾಣಿಚಕ್ರುಸ್ಸರ್ಗಾಂಶ್ಚನಿಶ್ವಸಂತೋಮಹೋರಗಾನ್ ॥ ೨೧ ॥ ದ್ಯಾಂಯುಗಂ ಯುಗಚರ್ಮಾಣಿಸಂವರ್ತಕಬಲಾಹಕಾನ್ ॥ ಕಾಲಪೃಷ್ಠೋಥನಹುಷಃಕರ್ಕೋಟಕಧನಂಜಯೌ ॥ ೨೨ ॥ ಇತರೇಚಾಭವನ್ನಾಗಾಹಯಾನಾಂವಾಲಬಂಧನಾಃ ॥ ದಿಶಶ್ಚಪ್ರದಿಶಶ್ಚೈವರಶ್ಮಯೋರಥವಾಜಿನಾಂ ॥ ೨೩ ॥ ಸಂಧ್ಯಾಂಧೃತಿಂಚಮೇಧಾಂಚಸ್ಥಿತಿಂಸನ್ನತಿಮೇವಚ ॥ ಗ್ರಹನಕ್ಷತ್ರತಾರಾಭಿಶ್ಚಂಮರ್ತತ್ರನಭಸ್ಥಳಂ ॥ ೨೪ ॥ ಸುರಾಂಬುಪ್ರೇತವಿತ್ತಾನಾಂಪತೀನ್ಲೋಕೇಶ್ವರಾನ್ಹಯಾನ್ ॥ ಸಿನೀವಾಲೀಮನುಮತಿಂಕುಹುಂರಾ

ಅಹೋರಾತ್ರಿಗಳನ್ನು ಪೂರ್ವಾಪರ ಪಕ್ಷಗಳನ್ನಾಗಿಯೂ ಮಾಡಿದರು. ॥ ೨೦ ॥ ಆಗ ಧೃತರಾಷ್ಟ್ರನೆಂಬುದೇ ಮೊದಲಾದ ಹತ್ತು ಸರ್ಪ ಶ್ರೇಷ್ಠರನ್ನು ರಥದ ಹಗ್ಗಗಳನ್ನಾಗಿಯೂ ಮತ್ತು ಅವುಗಳನ್ನು ಕಟ್ಟುವುದಕ್ಕೆ ಭೋರ್ಗರೆಯುತ್ತಿರುವ ಕೆಲವು ಸರ್ಪಗಳನ್ನು ಮುಂದಿನಹಗ್ಗಗಳನ್ನಾಗಿಯೂ॥೨೧॥ ಆಕಾಶ ದೇವತೆಯನ್ನು ನೊಗವನ್ನಾಗಿಯೂ ಸಂವರ್ತಕ ಬಲಾಹಕಗಳೆಂಬ ಮೇಘಗಳನ್ನು ನೊಗದ ಚರ್ಮಗಳನ್ನಾಗಿಯೂ, ಕಾಲಪೃಷ್ಠ, ನಹುಷ, ಕಾರ್ಕೋಟಕ, ಧನಂಜಯ ಮೊದಲಾದ ಇತರ ಸರ್ಪೋತ್ತಮರು ಕುದುರೆಗಳ ಬಾಲಬಂಧನಗಳಾದರು. ದಿಕ್ಕುಗಳು, ವಿದಿಕ್ಕುಗಳು ಕೂಡ ಆ ರಥಾಶ್ವಗಳ ಹಗ್ಗಗಳಾದವು॥ ॥೨೨॥೨೩॥ ಸಂಧ್ಯೆಯನ್ನೂ, ಧೃತಿಯನ್ನೂ, ಮೇಧೆಯನ್ನೂ, ಸ್ಥಿತಿಯನ್ನೂ, ಸಂಗತಿಯನ್ನೂ, ಗ್ರಹಗಳು, ನಕ್ಷತ್ರಗಳು, ಇತರ ತಾರೆಗಳಿಂದ ಸಹಿತವಾಗಿ ಆಕಾಶದಂತಿರುವ ರಥದ ಚರ್ಮವನ್ನಾಗಿ ಮಾಡಿದರು ॥೨೪॥ ದೇವತೆಗಳಿಗೆ, ನೀರಿಗೆ, ಪ್ರೇತಗಳಿಗೆ, ಧನಗಳಿಗೆ, ಅಧೀಶ್ವರರಾದ ದೇವೇಂದ್ರ, ವರುಣ, ಯಮ, ಕುಬೇರರನ್ನು ಆ ರಥದ, ಮುಂದೆ ಸೇನಾಶ್ವಗಳನ್ನಾಗಿ ಸಿನೀವಾಲಿಯನ್ನು ಅನುಮತಿಯನ್ನು ಕುಹುವನ್ನು

ಕಾಂಚಸುವ್ರತಾಂ ॥ ೨೫ ॥ ಯೋಕ್ತ್ರಾಣಿಚಕ್ರವಾಹಾನಾಂ ಲೋಹಕಾಂಸ್ತ್ರಕಂಟಕಾನ್ ॥ ಧರ್ಮಃಸತ್ಯಂತತೋರ್ಥಶ್ಚವಿಹಿತಾಸ್ತತ್ರರಶ್ಮಯಃ ॥ ೨೬ ॥ ಅಧಿಷ್ಠಾನಂಮನಶ್ಚಾಸೀತ್ಪ್ರರಿಗೇಥ್ಯಾಸರಸ್ವತೀ ॥ ನಾನಾವರ್ಣಾಶ್ಚಚಿತ್ರಾಶ್ಚಪತ್ರಾಕಾಃಪವನೇರಿತಾಃ ॥೨೭॥ ವಿದ್ಯುದಿಂದ್ರಧನುರ್ನದ್ಧಂರಥಂದಿವ್ಯಂವ್ಯದೀಪಯನ್॥ ವಷಟ್ಕಾರಃಪ್ರತೋದೋಭೂದ್ಗಾಯತ್ರೀಶೀರ್ಷಬಂಧನಾ ॥೨೮॥ ಯೋಯಜ್ಞೇವಿಹಿತಃಪೂರ್ವಮೀಶಾನಸ್ಯಮಹಾತ್ಮನಃ ॥ ಸಂವತ್ಸರೋಧನುಸ್ತದ್ವೈಸಾವಿತ್ರೀಜ್ಯಾಮಹಾಸ್ವನಾ ॥ ೨೯ ॥ ದಿವ್ಯಂಚಕವಚಂತಸ್ಯಮಹಾರ್ಹಂರತ್ನಭೂಷಿತಂ ॥ ಅಭೇದ್ಯಂವಿರಜಸ್ಕಂವೈಕಾಲಚಕ್ರಪರಿಷ್ಕೃತಂ ॥ ೩೦ ॥ ಧ್ವಜಯಷ್ಟಿರಭೂನ್ಮೇರುಃಶ್ರೀ

ರಾಶಿಯನ್ನು ಸುವ್ರತೆಯನ್ನು ವಾಹನಗಳಿಗೆ ಕಡಿವಾಣವಾಗಿಯೂ ಕೋಲು ಕಬ್ಬಿಣದ ಮೊಳೆಗಳನ್ನಾಗಿಯೂ ಮಾಡಿದರು. ಆ ಕುದುರೆಗಳಿಗೆ ಧರ್ಮವು, ಸತ್ಯವು, ಧನವು ಕಡಿವಾಣದ ಹಗ್ಗಗಳಾಗಿ ಮಾಡಲ್ಪಟ್ಟವು ॥ ೨೫ ॥ ೨೬ ॥ ಆ ರಥಕ್ಕೆ ಮನಸ್ಸು ಅಧಿಷ್ಠಾನಸ್ಥಾನವಾಯಿತು. ಸರಸ್ವತಿಯು ರಥದ ಸೋಪಾನವು ಮತ್ತು ನಾನಾವರ್ಣಗಳಾದ ಚಿತ್ರಗಳಾದ ಗಾಳಿಯಿಂದ ಅಲುಗಿಸಲ್ಪಟ್ಟ ಪತಾಕಗಳು ॥ ೨೭ ॥ ಮಿಂಚು ಇಂದ್ರನ ಧನುಸ್ಸಿನಿಂದ ವ್ಯಾಪ್ತವಾಗಿ ಪ್ರಕಾಶಿಸುವ ಆ ರಥವನ್ನು ಬೆಳಗಿದವು. ವಷಟ್ಕಾರವು ಬಾರಕೋಲಾಯಿತು. ಗಾಯತ್ರಿಯು ಶಿರೋಬಂಧನದ ಹಗ್ಗವಾದಳು ॥ ೨೮ ॥ ಆ ರಥಕ್ಕೆ, ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದಗಳು, ಚಂದ್ರನಂತೆ ಬಿಳಿಯವರ್ಣವುಳ್ಳ ಮನೋವೇಗವುಳ್ಳ ಅಶ್ವಗಳಾದವು ॥ ೨೯ ॥ ಸರ್ವನಿಯಾಮಕನಾದ ಮಹಾತ್ಮನಾದ ಆ ಪರಮಾತ್ಮನಿಗೆ ಪೂರ್ವದಲ್ಲಿ ಯಾಗದಲ್ಲಿ ಗೊತ್ತಾದ ಸಂವತ್ಸರವು ಧನುಸ್ಸು. ಅದಕ್ಕೆ ಸಾವಿತ್ರಿಯೇ ಮಹಾಸ್ವರವುಳ್ಳ ಹೆದೆಯಾದಳು ॥ ೩೦ ॥ ಮತ್ತು ಮಹಾಕಾಲಚಕ್ರವು ರತ್ನಭೂಷಿತ

ಮೇರುಶ್ಚ ಸಾಕಪರ್ವತಃ ॥ ಪತಾಕಾಃ ಶ್ಚಾ ಭವನ್ಮೇಘಾಸ್ತಡಿದ್ಭಿಃ ಸಮಲಂಕೃತಾಃ ॥ ೩೧ ॥ ರೇಜುರಧ್ವರ್ಯುಮಧ್ಯಸ್ಥಾ ಜ್ವಲಂತ ಇವ ಪಾವಕಾಃ ॥ ಕ್ಲಪ್ತಂ ತು ತಂ ರಥಂ ದೃಷ್ಟ್ವಾ ವಿಸ್ಮಿತಾ ದೇವತಾಸ್ತದಾ ॥ ॥ ೩೨ ॥ ಸರ್ವಲೋಕಸ್ಯ ತೇಜಾಂಸಿ ದೃಷ್ಟ್ವೈಕಸ್ಥಾನಿ ಹೇ ದ್ವಿಜಾಃ ॥ ಯುಕ್ತಂ ನಿವೇದಯಾಮಾಸುರ್ದೇವಾಸ್ತಸ್ಮೈ ಮಹಾತ್ಮನೇ ॥ ೩೩ ॥ ಏವಂ ತಸ್ಮಿನ್ ಮುನಿಶ್ರೇಷ್ಠಾ ಕಲ್ಪಿತೇ ರಥಸತ್ತಮೇ ॥ ದೇವೈರ್ಮಹರ್ಷಿಶಾರ್ದೂಲ ದ್ವಿಷತಾಮಭಿಮರ್ದನೇ ॥ ೩೪ ॥ ಸ್ವಾನ್ಯಾಯುಧಾನಿ ಮುಖ್ಯಾನಿ ನ್ಯದಧಾಚ್ಛಂಕರೋ ರಥೇ ॥ ಧ್ವಜಯಷ್ಟಿಂ ವಿಯತ್ಕೃತ್ವಾ ಸ್ಥಾಪಯಾಮಾಸ ಗೋವೃಷಂ ॥೩೫॥ ಬ್ರಹ್ಮದಂಡಃ ಕಾಲದಂಡೋ

ವಾದ ಇತರರಿಂದ ಭೇದಿಸಲಸಾಧ್ಯವಾದ ಕವಚವು ಆಯಿತು. ಮೇರು ಪರ್ವತವು, ಮೈನಾಕಪರ್ವತವು ಧ್ವಜಸ್ತಂಭಗಳಾದವು. ಮಿಂಚುಗಳಿಂದ ಕೂಡಿದ ಮೇಘಗಳು ಅಧ್ವರ್ಯುಗಳ ಮಧ್ಯದಲ್ಲಿ ಪ್ರಕಾಶಿಸುವ ಅಗ್ನಿಗಳಂತೆ ವಿಶೇಷ ವರ್ಣವುಳ್ಳ ಪತಾಕೆಗಳಾಗಿ ಪ್ರಕಾಶಿಸಿದವು. ಹೀಗೆ ತಮ್ಮ ಪ್ರಯತ್ನದಿಂದ ಸಿದ್ಧವಾಗಿರುವ ಆ ರಥವನ್ನು ದೇವತೆಗಳು ನೋಡಿ ಆಶ್ಚರ್ಯಪಟ್ಟರು ॥ ೩೧ ॥ ೩೨ ॥ ಎಲೈ ಬ್ರಾಹ್ಮಣರುಗಳಿರಾ, ದೇವತೆಗಳು ಹೀಗೆ ಸರ್ವ ಲೋಕಗಳ ತೇಜಸ್ಸುಗಳು ಒಂದೇ ಕಡೆಯಲ್ಲಿ ಕೂಡಿರುವವನ್ನು ನೋಡಿ ಸಿದ್ಧವಾದ ಆ ರಥವನ್ನು ಮಹನೀಯನಾದ ಆ ಪರಮಾತ್ಮನಿಗೋಸ್ಕರ ಒಪ್ಪಿಸಿದರು ॥ ೩೩ ॥ ಎಲೈ ಮಹರ್ಷಿ ಶಾರ್ದೂಲರಾದ ಮುನಿಶ್ರೇಷ್ಠರುಗಳಿರಾ, ದೇವತೆಗಳಿಂದ ಶತ್ರುಗಳ ನಿಗ್ರಹದ ವಿಷಯದಲ್ಲಿ ರಥೋತ್ತಮವು ಸಿದ್ಧಪಡುತ್ತಿರಲಾಗಿ ॥ ೩೪ ॥ ಶ್ರೀ ಪರಮೇಶ್ವರನು ಆ ರಥದಲ್ಲಿ ಮುಖ್ಯಗಳಾದ ತನ್ನ ಆಯುಧಗಳನ್ನು ಇಟ್ಟನು. ಮತ್ತು ಧ್ವಜಸ್ತಂಭಗಳನ್ನು ಆಕಾಶಕ್ಕೆ ತಾಗುವಂತೆ ಎತ್ತರಮಾಡಿ ಅದರಲ್ಲಿ ಗೋಪತಿಯಾದ ವೃಷಭವನ್ನು ಸ್ಥಾಪಿಸಿದನು॥೩೫॥ ದುಷ್ಟರನ್ನು ನಿಗ್ರಹಿಸುವ ವೇದಮಂತ್ರರೂಪವಾದ ಬ್ರಾಹ್ಮಣ ಶಾಪ

ರುದ್ರದಂಡಸ್ತಥಾಜ್ವರಾಃ ॥ ಪರಿಸ್ಪಂದಾ ರಥಸ್ಯಾಸನ್ಸರ್ವತೋದಿ
ಶಮುದ್ಯತಾಃ ॥ ೩೬ ॥ ಅಥರ್ವಾಂಗಿರಸಾವಾಸ್ತಾಂಚಕ್ರರಕ್ಷೇ
ಮಹಾತ್ಮನಃ ॥ ಋಗ್ವೇದಃಸಾಮವೇದಾಶ್ಚ ಪುರಾಣಾಶ್ಚ ಪುರಸ್ಸರಾಃ॥
॥೩೭॥ಇತಿಹಾಸಯಜುರ್ವೇದೌಪೃಷ್ಠರಕ್ಷೇಬಭೂವತುಃ ॥ ದಿವ್ಯಾವಾ
ಚಶ್ಚ ವಿದ್ಯಾಶ್ಚ ಪರಿಪಾರ್ಶ್ವಚರಸ್ಥಿತಾಃ ॥ ೩೮ ॥ ಸ್ತೋತ್ರಾದಯ
ಶ್ಚ ಮೌನೀಂದ್ರವಷಟ್ಕಾರಸ್ತಥೈವಚ ॥ ಓಂಕಾರಶ್ಚ ಮುಖೇವಿಪ್ರಹ್ಯ
ತಿಶೋಭಾಕರೋಭವತ್ ॥ ೩೯ ॥ ವಿಚಿತ್ರಮೃತುಭಿಃಷಡ್ಭಿಃಕೃತ್ವಾ
ಸಂವತ್ಸರಂಧನುಃ ॥ ಛಾಯಾಮೇವಾತ್ಮನಃಶ್ಚಕ್ರೇಧನುರ್ಜ್ಯಾಮಿಹ
ಯಾಂರಣೇ ॥ ೪೦ ॥ ಕಾಲೋಯಂಭಗವಾನ್‌ರುದ್ರಸ್ತಸ್ಯಸಂವತ್ಸ
ರೋಧನುಃ॥ ತಸ್ಮಾದ್ರೌದ್ರೀಕಾಲರಾತ್ರೀರ್ಜ್ಯಾಕೃತಾಧನುಷೋಜರಾ॥

ಶಕ್ತಿಯೂ, ಸಮಯವರಿತು ಪ್ರಾಣಿಗಳನ್ನು ನಿಗ್ರಹಿಸುವ ಕಾಲರೂಪ
ವಾದ ಮೃತ್ಯು ಶಕ್ತಿಯೂ, ಪ್ರಳಯದಲ್ಲಿ ಸಕಲವನ್ನೂ ನಿಗ್ರಹಿಸುವ
ರುದ್ರರೂಪವಾದ ಈಶ್ವರ ಶಕ್ತಿಯೂ, ಮತ್ತು ನಾನಾ ಜ್ವರಗಳು
ಸಹಾ ಆ ರಥಕ್ಕೆ ಎಲ್ಲಾ ಭಾಗದಲ್ಲಿಯೂ ಸಿದ್ಧವಾದ ಪರಿವಾರವಾಗಿದ್ದ
ವು ॥ ೩೬ ॥ ಅಥರ್ವಣವು, ಆಂಗೀರಸರು, ಆ ರಥದ ಚಕ್ರರಕ್ಷಕರಾ
ದರು. ಋಗ್ವೇದ, ಯಜುರ್ವೇದ, ಪುರಾಣಗಳು ಪುರುಷರೂಪದಿಂದ ಆ
ರಥದ ಮುಂಭಾಗದಲ್ಲಿದ್ದವು. ಇತಿಹಾಸ, ಯಜುರ್ವೇದಗಳು, ಹಿಂಭಾಗ
ದಲ್ಲಿ ರಕ್ಷಕಗಳಾಗಿದ್ದವು. ವ್ಯಾಕರಣಾದಿ ಶಾಸ್ತ್ರಗಳು,ಆ ರಥದ ಮಗ್ಗು
ಲಲ್ಲಿದ್ದವು ॥೩೭॥ ೩೮॥ ಸ್ತೋತ್ರಾದಿಗಳು, ವಷಟ್ಕಾರ, ಓಂಕಾರಗಳು,
ಆ ರಥದ ಮುಂದೆ ಅಲಂಕಾರವಾಗಿದ್ದವು ॥ ೩೯ ॥ ಋತುಗಳಿಂದ ವಿಚಿ
ತ್ರವಾಗಿರುವ ಸಂವತ್ಸರದಿಂದ ಧನಸ್ಸನ್ನು ಮಾಡಿಕೊಂಡು, ತನ್ನ
ಛಾಯೆಯನ್ನು ಆ ಧನುವಿನ ಹಗ್ಗವಾಗಿ ಮಾಡಿಕೊಂಡಿದ್ದನು ॥೪೦॥
ಕಾಲವೇ ಭಗವಂತನಾದ, ರುದ್ರನು, ಅದಕ್ಕೆ ಸಂವತ್ಸರವೇ ಧನುಸ್ಸು,
ಆ ಧನುವಿಗೆ ಭಯಂಕರವಾಗಿಯೂ, ಕಾಲರಾತ್ರಿಯಾಗಿಯೂ ಇರುವ
ಮುಪ್ಪು ಎಂಬುದೇ ಬಿಲ್ಲಿನ ಹಗ್ಗವು. ಬಾಣವು ವಿಷ್ಣು, ಅಗ್ನಿ, ಚಂದ್ರ,

ಇಷುಶ್ಚಾಪ್ಯಭವದ್ವಿಷ್ಣುರ್ಜ್ವಲನಸ್ಸೋಮಏವಚ ॥ ೪೧ ॥ ತಸ್ಮಾ
ದ್ಧನುರ್ಜ್ಯಾಸಂಸ್ಪರ್ಶನವಿಷೇಹುರ್ಹರಸ್ಯತೇ ॥ ತಸ್ಮಿನ್‌ಶರೇತಿಗ್ಮ
ಮನ್ಯುಂಮುಮೋಚಾಸಹ್ಯಮೀಶ್ವರಃ ॥ ೪೨ ॥ ಭೃಗ್ವಂಗಿರೋ
ಮನ್ಯುಭವಂಕ್ರೋಧಾಗ್ನಿಮತಿದುಸ್ಸಹಂ ॥ ಸನೀಲಲೋಹಿತೋಧೂ
ಮ್ರಃಕೃತ್ತಿವಾಸಾಭಯಂಕರಃ ॥೪೩॥ ಆದಿತ್ಯಾಯುತಸಂಕಾಶಸ್ತೇ
ಜೋಜ್ವಾಲಾವೃತೋಜ್ಜ್ವಲನ್ ॥ ದುಸ್ಸಾಧ್ಯಸಾಧಕೋಜೇತಾಹಂ
ತಾಬ್ರಹ್ಮದ್ವಿಷಾಂವರಃ ॥೪೪॥ ನಿತ್ಯಂತ್ರಾತಾಚಹಂತಾಚಧರ್ಮಾ
ಧರ್ಮಾಶ್ರಿತಾನ್ನರಾನ್ ॥ ಪ್ರಮಾಥಿಭಿರ್ಭೀಮಬಲೈರ್ಭೀಮರೂ
ಪೈರ್ಮನೋಹರೈಃ ॥ ೪೫ ॥ ವಿಭಾತಿಭಗವಾನ್‌ಸ್ಥಾಣುಸ್ತೈ
ರ್ಯೇವಾತ್ಮಗುಣೈರ್ವೃತಃ ॥ ತಸ್ಯಾಂಗಾನಿಸಮಾಶ್ರಿತ್ಯಸ್ಥಿತಂವಿಶ್ವಮಿ

ಇವರಿಂದ ನಿರ್ಮಿತವಾದುದು ॥ ೪೧ ॥ ಆದುದರಿಂದ ಆ ದೈತ್ಯರು ಈಶ್ವ
ರನ ಆ ಬಿಲ್ಲಿನ ಝೇಂಕಾರಶಬ್ದವನ್ನು, ಕೇಳಿ ತಲ್ಲಣಿಸುತ್ತಿದ್ದರು ॥೧೪॥
ಭೃಗು, ಆಂಗೀರಸರು, ಯಜ್ಞದಲ್ಲಿ ಉದ್ಭವಿಸಿದ ಅತಿ ದುಸ್ಸಹವಾದ
ತೀಕ್ಷ್ಣವಾದ ಕ್ರೋಧರೂಪವಾದ ಅಗ್ನಿಯನ್ನು ಈಶ್ವರನು ಆ ಬಾಣ
ದಲ್ಲಿ ಇಟ್ಟಿದ್ದನು ॥೪೨॥ ಕಪ್ಪುಕೂಡಿದ ತಾಮ್ರವರ್ಣವುಳ್ಳ,ಹೊಗೆಯಂತೆ
ವರ್ಣವುಳ್ಳ ಭಯಂಕರನಾದ ಸಂಸ್ಕರಿಸಿದ ಚರ್ಮಧರಿಸಿರುವ ॥೪೩॥
ಹತ್ತುಸಾವಿರ ಸೂರ್ಯರಂತೆ ಪ್ರಕಾಶಿಸುವ ಪ್ರಭೆಗಳ ಸಮೂಹದಿಂದ
ಕೂಡಿ ಜಾಜ್ವಲ್ಯಮಾನನಾದ, ಅಸಾಧ್ಯಗಳನ್ನಾದರೂ ಸಾಧಿಸುವ ಜಯ
ಶೀಲನಾದ, ಬ್ರಹ್ಮದ್ವೇಷಿಗಳನ್ನು ಸಂಹರಿಸುವ, ಶ್ರೇಷ್ಠನಾದ ॥೪೪॥
ನಿತ್ಯದಲ್ಲಿಯೂ ವೇದನಿಂದಾದಿ ಅಧರ್ಮಗಳನ್ನು ಕೊಲ್ಲುವ, ವೈದಿಕಾ
ಚಾರ ಧರ್ಮಪರರನ್ನು ರಕ್ಷಿಸುತ್ತಿರುವ, ಆ ಪರಮಾತ್ಮನಾದ, ಮಹಾ
ಬಲಶಾಲಿಗಳಾದ ಸ್ಥೂಲರೂಪಿಗಳಾದ ಮನಃ ಪ್ರೀತಿರೂಪಿಗಳಾದ ಪ್ರಮ
ಥಗಳಿಂದಲೂ ॥೪೫॥ ಮತ್ತು ತನ್ನ ಸದೃಶವಾದ ಕೆಲವು ಗುಣವುಳ್ಳ ಗಣಗ
ಳಿಂದಲೂ ಕೂಡಿದ ಶಾಶ್ವತನಾದ, ಷಡ್ಗುಣೈಶ್ವರ್ಯಯುಕ್ತನಾದ,
ಶ್ರೀಪರಮೇಶ್ವರನು ಪ್ರಕಾಶಿಸಿದನು. ಅಂಥಾ ಪರಮಾತ್ಮನ ಶರೀರವನ್ನು

ದುಂಜಗತ್॥೪೬॥ಜಂಗಮಾಜಂಗಮಂವಿಪ್ರಶುಶುಭೇದ್ಭುತದರ್ಶನಂ॥
ದೃಷ್ಟ್ವಾಸಿದ್ಧಂರಥಂಯುಕ್ತಂಕವಚೀಸಶರಾಶನಃ॥೪೭॥ ಬಾಣಂ
ಸಮಾದಧೇದಿವ್ಯಂಸೋಮವಿಷ್ಣ್ವಗ್ನಿಸಂಭವಂ ॥ ತಸ್ಯಶಂಭೋ
ಸ್ತಥಾದೇವಾಃಕಲ್ಪಯಾಂಚಕ್ರಿರೇಪ್ರಭೋಃ ॥ ೪೮ ॥ ಪುಣ್ಯಗಂಧವ
ಹಂವಿಪ್ರಶ್ವಸನಂದೇವಸತ್ತಮಾಃ॥ ಸಮಾಸ್ಥಾಯಮಹಾದೇವಸ್ತ್ರಾ
ಸಯುರ್ದೈವತಾನ್ಯಪಿ ॥ ೪೯ ॥ ಆರುರೋಹ ರಥಾಯಾತಃಕಂಪಯ
ನ್ನಿವಮೇದಿನೀಂ ॥ ತಮಾರುರುಕ್ಷುಂದೇವೇಶಂತುಷ್ಟುವುಃ ಪರಮ
ರ್ಷಯಃ ॥ ೫೦ ॥ ಗಂಧರ್ವಾದೇವಸಂಘಾಶ್ಚ ತಥೈವಾಪ್ಸರಸಾಂಗ
ಣಾಃ ॥ ಬ್ರಹ್ಮರ್ಷಿಭಿಃ ಸ್ತೂಯಮಾನೋವಂದ್ಯಮಾನಶ್ಚ ಬಂಧು

ಈ ಪ್ರಪಂಚವು ಆಶ್ರಯಿಸಿಕೊಂಡಿರುವದು ॥೪೬॥ ಸೂತನು ಶೌನಕರಿಗೆ ಹೇಳುವನು. ಎಲೈ ವೇದಜ್ಞನಾದವನೇ, ಹೀಗೆ ಚರಾಚರ ಜಗನ್ಮಯ ವಾದ ಆ ರಥವು ಪ್ರಕಾಶಿಸುತ್ತಿತ್ತು. ಶ್ರೀ ಭಗವಂತನು ಸಿದ್ಧವಾಗಿದ್ದ ರಥವನ್ನು ಕಂಡು ಕವಚಧಾರಿಯಾಗಿ ಧನುಸ್ಸಹಿತನಾಗಿ ॥ ೪೭ ॥ ಸೋಮ ವಿಷ್ಣು ಅಗ್ನಿಮಯವಾದ ಆ ಬಾಣವನ್ನು ತೆಗದುಕೊಂಡನು. ಆಗ ದೇವತೆಗಳು ಸುಖಪ್ರದನಾದ ಒಡೆಯನಾದ ಆ ಭಗವಂತನಿಗೆ ಪರಿಮಳವುಳ್ಳ ಗಾಳಿಯನ್ನು ಕಲ್ಪಿಸಿದರು. ಎಲೈ ವೇದಜ್ಞನಾದ ಶೌನಕನೇ ಅದನ್ನು ಸ್ವೀಕರಿಸಿ ದೇವತೆಗಳನ್ನಾದರೂ ಭಯಪಡಿಸುವ ಮಹಿಮೆ ಯುಳ್ಳ ಆ ಪರಮಾತ್ಮನು ಆ ರಥವನ್ನು ಹತ್ತಲು ಅಪೇಕ್ಷಿಸಿ ರಥದ ಸವಿಾಪವನ್ನು ಕುರಿತು ಬಿಜಯಿಸಿದರು. ಬರುವ ನಡಿಗೆಯಿಂದ ಭೂ ಮಿಯನ್ನು ಅಲಗಿಸುವವನಂತೆ ಬರುತ್ತಿರುವ ಆ ಭಗವಂತನು ಸಿದ್ಧವಾದ ಆ ರಥವನ್ನು ಆರೋಹಣ ಮಾಡಿದನು. ಈ ಪ್ರಕಾರ ರಥವನ್ನು ಆರೋ ಹಣಮಾಡುವ ಆ ಪರಮೇಶ್ವರನನ್ನು ಕುರಿತು ಮಹರ್ಷಿಗಳು ಗಂಧ ರ್ವರು ಸಮಸ್ತ ದೇವಸಮೂಹಗಳು ಸ್ತುತಿಸಿದರು ॥೪೮॥ ॥೪೯॥ ॥ ೫೦ ॥ ಹೀಗೆ ಬ್ರಹ್ಮರ್ಷಿಗಳಿಂದ ಸ್ತೋತ್ರ ಮಾಡಿಸಿಕೊಳ್ಳುತ್ತ

ಭಿಃ ॥೫೧॥ ತಥೈವಾಪ್ಸರಸಾಂಬೃಂದೈರ್ನೃತ್ಯದ್ಭಿರ್ನೃತ್ಯಕೋವಿದೈಃ॥ ಸಂಶೋಭಮಾನೋವರದಃಖಡ್ಗೀಬಾಣೀಶರಾಸನೀ ॥೫೨॥ ಹಸನ್ನಿವಾಬ್ರವೀದ್ದೇವಃಸಾರಥಿಃಕೋಭವಿಷ್ಯತಿ ॥ ತಮಬ್ರುವನ್ದೇವಗಣಾಯಂಭವಾನ್ಸನ್ನಿಯೋಕ್ಷ್ಯತೇ ॥೫೩॥ ಸಭವಿಷ್ಯತಿದೇವೇಶಸಾರಥಿಸ್ತೇನಸಂಶಯಃ ॥ ತಾನಬ್ರವೀತ್ಪುನರ್ದೇವೋನಪೃಥಗ್ಯೋಮದಾತ್ಮನಃ॥೫೪॥ ತಂಸಾರಥಿಂಕುರುಧ್ವಂವೈಸ್ವಯಂಸಂಚಿಂತ್ಯಮಾಚಿರಂ! ಏತಚ್ಛ್ರುತ್ವಾತತೋದೇವಾವಾಕ್ಯಮುಕ್ತಂಮಹಾತ್ಮನಾ ॥ ೫೫ ॥ ಗತ್ವಾಪಿತಾಮಹಂದೇವಾಃ ಪ್ರಸಾದ್ಯೇದಂವಚೋಬ್ರುವನ್ ॥ ಯು

ಬಂದವರುಗಳಿಂದ ನಮಸ್ಕರಿಸಿಕೊಳ್ಳುವ, ॥ ೫೧ ॥ ನರ್ತನದಲ್ಲಿ ಬುದ್ಧಿಶಾಲಿಗಳಾಗಿ ನಾಟ್ಯಮಾಡುತ್ತಿರುವ ಅಪ್ಸರೋಗಣಗಳಿಂದ ಪ್ರಕಾಶಮಾನನಾದ, ಇಷ್ಟಪ್ರದನಾದ ಖಡ್ಗ ಬಾಣ ಧನುಸ್ಸುಗಳನ್ನು ಧರಿಸಿದ ಆ ಭಗವಂತನು ॥ ೫೨ ॥ ನಗುತ್ತ ದೇವತೆಗಳನ್ನು ಕುರಿತು ಯಾವಾತನು ಸಾರಥಿ ಆಗುವನು ಎಂದು ಕೇಳಿದನು. ದೇವತೆಗಳು ಎಲೈ ಸರ್ವೇಶನೇ ಯಾವನನ್ನು ನೀನು ಆಜ್ಞಾಪಿಸುತ್ತೀಯೋ ಆತನು ಸಾರಥಿಯಾಗಲುಳ್ಳವನು. ಅನುಮಾನವಿಲ್ಲ ಎಂದರು. ಮತ್ತು ಆ ದೇವತೆಗಳನ್ನು ಕುರಿತು ಶ್ರೀ ಪರಮಾತ್ಮನು ನನ್ನ ಸ್ವರೂಪದ ದೆಸೆಯಿಂದ ಯಾವನು ಭಿನ್ನನಲ್ಲವೋ ಅವನು ಸಾರಥಿಯಾಗಲುಳ್ಳವನು ॥೫೩॥೫೪॥ ಎಲೈ! ದೇವತೆಗಳಿರಾ ನೀವೇ ಆಲೋಚಿಸಿ ಜಾಗ್ರತೆಯಾಗಿ ಅವನನ್ನು ಸಾರಥಿಯನ್ನಾಗಿ ಮಾಡಿ. ಹೀಗೆ ಭಗವಂತನಾಡಿದ ಮಾತನ್ನು ಕೇಳಿ ದೇವತೆಗಳು ॥ ೫೫ ॥ ಹೋಗಿ ಬ್ರಹ್ಮದೇವನನ್ನು ಕುರಿತು ಪ್ರಾರ್ಥಿಸಿ ಹೇಳಿಕೊಂಡರು. ಅದೆಂತೆನೆ. ಎಲೈ ಬ್ರಹ್ಮದೇವನೆ ! ನಿನ್ನ ಅಪ್ಪಣೆಯು ದೇವತೆಗಳಾದ ನಮ್ಮ ಶತ್ರುಗಳ ನಿಗ್ರಹ ವಿಷಯದಲ್ಲಿ ಹೇಗಾಗಿತ್ತೋ ಹಾಗೆ ಮಾಡಿದೆವು. ವೃಷಧ್ವಜನಾದ ಶ್ರೀ ಭಗವಂತನು ಪ್ರಸನ್ನನಾಗಿದ್ದಾನೆ; ಮತ್ತು "ನಮ್ಮಿಂದ ನಾನಾಪ್ರಕಾರವಾಗಿ ಯುದ್ಧಕ್ಕೆ ಬೇಕಾದ

ಥಾತ್ವತ್ಕಥಿತಂದೇವಚಾಸ್ಮಚ್ಛತ್ರುವಿನಿಗ್ರಹೇ ॥ ೫೬ ॥ ತಥಾಚಕೃತ ಮಸ್ಮಾಭಿಃಪ್ರಸನ್ನೈರ್ವೃಷಭಧ್ವಜಃ ॥ ರಥಶ್ಚ ವಿಹಿತೋಸ್ಮಾಭಿರ್ವಿ ಚಿತ್ರಾಯುಧಸಂವೃತಃ ॥೫೭॥ ಸಾರಥಿಂಚನಜಾನೀಮಃಕಃಸ್ಯಾತ್ತ ಸ್ಮಿನ್ರಥೋತ್ತಮೇ ॥ ತಸ್ಮಾದ್ವಿಧೀಯತಾಂಕಶ್ಚಿತ್ಸಾರಥಿರ್ದೇವಸತ್ತ ಮ॥ ೫೮ ॥ ಸಫಲಾಂತಾಂಗಿರಂದೇವಕರ್ತುಮರ್ಹಸಿನೋವಿಭೋ ॥ ಏವಮಸ್ಮಾಸುಹಿಪುರಾಭಗವನ್ನುಕ್ತವಾನಸಿ ॥ ೫೯ ॥ ಹಿತಂಕರ್ತಾ ಸ್ಮಿಭವತಾಮಿತಿತತ್ಕರ್ತುಮರ್ಹಸಿ ॥ ಸದೇವಯುಕ್ತೋರಥಸತ್ತ ಮೋನೋದುರಾಧರ್ಷೋದ್ರಾವಣಶ್ಯಾತ್ರವಾಣಾಂ॥ ಪಿನಾಕಪಾಣಿರ್ವಿ ಹಿತೋತ್ರಯೋದ್ಧಾವಿಭೀಷಯನ್‌ದಾನವಾನುದ್ಯತೋಸೌ ॥ ೬೦ ॥ ತಥೈವವೇದಾಶ್ಚತುರೋಹಯಾಗ್ರ್ಯಾಧರಾಸಶೈಲಾಚರಥೋ ಮಹಾ

ಆಯುಧದಿಂದ ಕೂಡಿದ ರಥವು ಕಲ್ಪಿಸಲ್ಪಟ್ಟಿತು || ೫೬ || ೫೭ || ಆ ಉತ್ತಮವಾದ ರಥದಲ್ಲಿ ಯಾವಾತನು ಸಾರಥಿಯಾಗುವನೋ ಅಂಥವ ನನ್ನು ನಾವು ತಿಳಿದುಕೊಳ್ಳಲಿಲ್ಲ. ಆದುದರಿಂದ ದೇವಶ್ರೇಷ್ಠವಾದ ಯಾ ವನುಸಾರಥಿಯಾಗತಕ್ಕವನೋ ಅವನು ನಿನ್ನಿಂದ ಕಲ್ಪಿಸಲ್ಪಡಲಿ ||೫೮|| ಎಲೈ ದೇವನೆ, ಭಗವಂತನೇ ನಮ್ಮ ಮಾತನ್ನು ಸಫಲವಾಗಿ ಮಾಡು ಏಕೆಂದರೆ, ಮೊದಲು ನಮ್ಮಲ್ಲಿ ನಿಮಗೆ ಹಿತವಾದುದನ್ನು ಮಾಡುವೆನು. ಎಂದು ಅನುಗ್ರಹಿಸಿದ್ದೇ. ಆದುದರಿಂದ ಈಗ ಇದೇ ಹಿತವಾಗಿರುವುದರಿಂದ ಇದನ್ನು ಮಾಡಲು ಸಮರ್ಥನಾಗಬೇಕು || ೫೯ || ಮತ್ತು ದೇವಸಾನ್ನಿ ಧ್ಯವುಳ್ಳ, ನಮ್ಮ ಶತ್ರುಗಳನ್ನು ಓಡಿಸುವುದಕ್ಕೆ ಯೋಗ್ಯವಾದ, ಇತರರಿಂದ ತಿರಸ್ಕರಿಸಲಸಾಧ್ಯವಾದ, ಆ ರಥೋತ್ತಮವು ಸಿದ್ಧವಾಗಿರುವದು. ಆ ರಥ ದಲ್ಲಿ ಪಿನಾಕಧರನಾದ ಆ ಪರಮಾತ್ಮನು ದೈತ್ಯರನ್ನು ಭಯಪಡಿಸುವವ ನಾಗಿ ಸಿದ್ಧನಾಗಿ ಪ್ರಸನ್ನನಾಗಿದ್ದಾನೆ||೬೦||ಹಾಗೆಯೇ ಮಹಾತ್ಮನಾದ ಶ್ರೀ ಪರಮಾತ್ಮನಿಗೆ ನಾಲ್ಕು ವೇದಮಯಗಳಾದ ಉತ್ತಮಾಶ್ವಗಳೂ ಪರ್ವತ ಸಹಿತವಾದ ಪೃಥ್ವೀಮಯವಾದ ರಥವೂ ಇರುವುವು. ತಾರಾಮಯ ವಾದ ರಥದ ರಕ್ಷಣೆಯ ಸ್ಥಾನವಿರುವದು. ಈಶ್ವರನು ಯುದ್ಧಮಾಡುವ

ತ್ಮನಃ ॥ ನಕ್ಷತ್ರವಂಶಾನುಗವರತೋಽಥೋಹರೋಯೋದ್ಧಾಸಾರ
ಥಿರ್ನಾಭಿಲಕ್ಷ್ಯತೇ ॥ ೬೧ ॥ ತತ್ರಸಾರಥಿರೇಷ್ಟವ್ಯಃಸರ್ವೈರೇತೈರ್ವಿಶೇ
ಷವಾನ್ । ತತ್ಪ್ರತಿಷ್ಠೋರಥೋದೇವಹಯಾಯೋದ್ಧಾತಥೈವಚ ॥
॥ ೬೨ ॥ ಕವಚಾನಿಸಶಸ್ತ್ರಾಣಿಕಾರ್ಮುಕಂಚಪಿತಾಮಹ॥ತ್ವಾಮೃ
ತೇಸಾರಥಿಂತತ್ರನಾನ್ಯಂಪಶ್ಯಾಮಹೇವಯಂ ॥ ೬೩ ॥ ತ್ವಂಹಿಸ
ರ್ವಗುಣೈರ್ಯುಕ್ತೋದೈವತೇಭ್ಯೋಽಧಿಕಂಪ್ರಭೋ॥ಸರಥಂತರ್ಣ
ಮಾರುಹ್ಯಸಂಯಚ್ಛಪರಮಾನ್ಹಯಾನ್ ॥ ೬೪ ॥ ಜಯಾಯತ್ರಿ
ದಿವೇಶಾನಾಂವಧಾಯತ್ರಿದಶದ್ವಿಷಾಂ ॥ ಇತಿತೇಶಿರಸಾನತ್ವಾತ್ರಿ
ಲೋಕೇಶಂಪಿತಾಮಹಂ ॥ ೬೫ ॥ ದೇವಾಃಪ್ರಸಾದಯಾಮಾಸುಃ
ಸಾರಥ್ಯಾಯೇತಿನಶ್ಶ್ರುತಂ॥ಪಿತಾಮಹಃ॥ನಾತ್ರಕಿಂಚಿನ್ಮೃಷಾವಾ

ಭಟನಾಗಿರುವನು. ಯೋಗ್ಯನಾದ ಸಾರಥಿಯು ಇರುವದಿಲ್ಲ ॥ ೬೧ ॥
ಅಂಥಾದ್ದರಲ್ಲಿ ಇವೆಲ್ಲಕ್ಕೂ ಅಧಿಕನಾದವನೇ ಸಾರಥಿಯಾಗಿರಬೇಕು. ಎಲೈ
ದೇವನೇ ಅಂಥ ಸಾರಥ್ಯಧಿಷ್ಠಿತವಾದದ್ದೇ ರಥವು, ಕುದುರೆಗಳು, ರಥಿಕನು,
ಎಂದೆನ್ನಿಸಿಕೊಳ್ಳುವರು, ಮತ್ತು ಕವಚಗಳು ಬಾಣ ಸಹಿತವಾದ ಬಿಲ್ಲು
ಗಳು ಆಗಿರುವವು. ಆದ್ದರಿಂದ ನಿನ್ನನ್ನು ಬಿಟ್ಟು ಅಂಥ ರಥಕ್ಕೆ ಯೋಗ್ಯ
ನಾದ ಸಾರಥಿಯು ಬೇರೊಬ್ಬನು ನಮಗೆ ಕಾಣುವದಿಲ್ಲ ॥೬೨॥೬೩॥
ಎಲೈ ಪ್ರಭುವೇ ನೀನು ಸಕಲಗುಣಗಳಿಂದಲೂ ದೇವತೆಗಳಿಗೆಲ್ಲ ಅಧಿಕ
ನಾದುದರಿಂದ ಆ ರಥವನ್ನು ಜಾಗ್ರತೆಯಾಗಿ ಹತ್ತಿ ಉತ್ತಮವಾದ ಕು
ದುರೆಗಳನ್ನು ನಡೆಯಿಸಬೇಕು ॥೬೪॥ ದೇವತೆಗಳಿಗೆ ಜಯವಾಗುವುದ
ಕ್ಕೂ ಶತ್ರುಗಳ ಸಂಹಾರಕ್ಕೂ ನೀನು ಸಾರಥಿಯಾಗಬೇಕು. ಈ ಪ್ರಕಾ
ರವಾಗಿ ದೇವತೆಗಳೆಲ್ಲರೂ ಪಿತಾಮಹನಾದ ಬ್ರಹ್ಮದೇವನನ್ನು ಶಿರಸ್ಸಿನಿಂದ
ನಮಸ್ಕಾರಮಾಡಿ ಸಾರಥ್ಯಕ್ಕೋಸ್ಕರ ಅನುಮೋದಿಸುವ ಹಾಗೆ ಬೇಡಿ
ಕೊಂಡರು. ಹಾಗೆಯೇ ಬ್ರಹ್ಮದೇವನು ಹೇಳುತ್ತಾನೆ. ಎಲೈ ದೇವತೆಗ
ಳಿರಾ ನೀವು ಹೇಳಿದ ಮಾತಿನಲ್ಲಿ ಸ್ವಲ್ಪವಾದರೂ ಸುಳ್ಳಿರುವದಿಲ್ಲ ॥ ೬೫ ॥

ಕ್ಯಂಯದುಕ್ತಂತ್ರಿದಿವೌಕಸಃ ॥೬೬॥ ಸಂಯಚ್ಛಾಭಿಮಿಹಯಾಂಶ್ಚೇ ಮಾರ್ಗಯುದ್ಧ್ಯತೋಽಪ್ಯೈಕಪರ್ದಿನಃ ॥ ತತಸ್ಸಭಗವಾನ್ದೇವೋಲೋಕಸ್ರಷ್ಟಾಪಿತಾಮಹಃ ॥ ೬೭ ॥ ಸಾರಥ್ಯೇಕಲ್ಪಿತೋದೇವೈರೀಶಾನಸ್ಯಮಹಾತ್ಮನಃ ॥ ತಸ್ಮಿನ್ನಾರೋಹತಿಕ್ಷಿಪ್ರಂಸ್ಯಂದನೇಲೋಕಪೂಜಿತೇ ॥ ೬೮ ॥ ಶಿರೋಭಿರಗಮದ್ಭೂಮಿಂತೇಹಯಾವಾತರಂಹಸಃ ॥ ಆರುಹ್ಯಭಗವಾನ್ದೇವೋದೀಪ್ಯಮಾನಃಸ್ವತೇಜಸಾ॥ ೬೯ ॥ ಅಭೀಶೂನ್ಹಿಪ್ರತೋದಂಚಸಂಜಗ್ರಾಹಪಿತಾಮಹಃ ॥ ತತಉತ್ಥಾಪ್ಯಭಗವಾಂಸ್ತಾನ್ಹಯಾನನಿಲೋಪಮಾನ್ ॥೭೦॥ ಬಭಾಷೇಚತಥಾಸ್ಥಾಣೋಸ್ಸಾರೋಹೇತಿಸುರೋತ್ತಮಃ ॥ ತತಸ್ತಮಿಷುಮಾದಾಯವಿಷ್ಣುಸೋಮಾಗ್ನಿಸಂಭವಂ ॥ ೭೧ ॥ ಆರುರೋಹತದಾಸ್ಥಾಣುರ್ಧ

॥೬೬॥ ಶ್ರೀ ಪರಮೇಶ್ವರನು ಯುದ್ಧಮಾಡುವಾಗ ನಾನು ಸಾರಥಿಯಾಗಿ ಕುದುರೆಗಳನ್ನು ನಡೆಯಿಸುತ್ತೇನೆ. ಎಂಬದಾಗಿ ಹೇಳಿ ಆಮೇಲೆ ಎಲ್ಲಾ ದೇವತೆಗಳಿಂದ ಭಗವಂತನಾಗಿಯೂ, ದೇವನಾಗಿಯೂ ಲೋಕವನ್ನು ಸೃಜಿಸುವವನಾಗಿಯೂ ಇದ್ದ ಬ್ರಹ್ಮದೇವನು ಮಹಾತ್ಮನಾದ ಪರಮೇಶ್ವರನಸಾರಥ್ಯದಲ್ಲಿ ನಿಯಮಿಸಲ್ಪಟ್ಟನು. ಅಂಥ ಬ್ರಹ್ಮದೇವನು ಲೋಕವಂದ್ಯವಾದ ರಥವನ್ನುಹತ್ತಿದ ಮೇಲೆ ॥೬೭॥೬೮॥ ಆರಥದ ಕುದುರೆಗಳು ಗಾಳಿಯಷ್ಟು ವೇಗವೂ ಸಾಮರ್ಥ್ಯವೂ ಉಳ್ಳವುಗಳಾದರೂ ತಲೆಗಳಿಂದ ಭೂಮಿಯನ್ನು ಸೇರಿದವು. ತನ್ನ ಪರಾಕ್ರಮದಿಂದ ಪ್ರಕಾಶಿಸುವ ಭಗವಂತನಾದ ಆ ಬ್ರಹ್ಮದೇವನು ಹತ್ತಿಕೊಂಡು ಲಗಾಮನ್ನೂ ಕಸೆಯನ್ನೂ ತೆಗೆದುಕೊಂಡನು. ಆಮೇಲೆ ಗಾಳಿಯಂತಿರುವ ಆ ಕುದುರೆಗಳನ್ನು ಎಬ್ಬಿಸಿ ಷಡೈಶ್ವರ್ಯ ಯುಕ್ತನಾದ ದೇವೋತ್ತಮನಾದ ಬ್ರಹ್ಮದೇವನು ಶಾಶ್ವತನಾದ ಶ್ರೀ ಪರಮಾತ್ಮನನ್ನು ಬಿಜಯಿಸಬೇಕೆಂದು ಪ್ರಾರ್ಥಿಸಿದನು. ಆಗ ಶ್ರೀ ಪರಮೇಶ್ವರನು ವಿಷ್ಣುಸೋಮಅಗ್ನಿಮಯವಾದ ಆ ಬಾಣವನ್ನು ತೆಗೆದುಕೊಂಡು ॥೬೯॥೭೦॥೭೧॥ ನಿತ್ಯನಾದ ಭಗವಂತನು ಆಮೇಲೆ ಆ ಧನುಸ್ಸಿನಿಂದ ಶತ್ರುಗಳನ್ನು ಬೆದರಿ

ಸುಷಂಕಂಪಃಶರಾನ್ಪರಾನ್ ॥ ತಮಾರೂಢಂತುದೇವೇಶಂತುಷ್ಟು
ವುಃಪರಮರ್ಷಯಃ ॥ ೨೨ ॥ ಗಂಧರ್ವಾದೇವಸಂಘಾಶ್ಚ ತಥೈವಾ
ಪ್ಸರಸಾಂಗಣಾಃ ॥ ಸಶೋಭಮಾನೋವರದಃಖಡ್ಗೀಬಾಣೀಶರಾಸ
ನೀ ॥ ೨೩ ॥ ಪ್ರದೀಪಯನ್ರಥೇತಸ್ಥೌತ್ರಿಲೋಕಂಸ್ವೇನತೇಜಸಾ ॥
ತತೋಭೂಯೋಬ್ರವೀದ್ದೇವೋದೇವಾನಿಂದ್ರಪುರೋಗಮಾನ್ ೨೪॥
ನಹನ್ಯಾದಿತಿಕರ್ತವ್ಯೇನಶೋಕೋವಃಕಥಂಚನ ॥ ಹತಾನಿತ್ಯೇವಜಾ
ನೀತಬಾಣೇನಾನೇನಚಾಸುರಾನ್ ॥ ೨೫ ॥ ತೇದೇವಾಃಸತ್ಯಮಿತ್ಯಾ
ಹುರ್ನಿಹತಾಇತಿಚಾಬ್ರುವನ್ ॥ ನಚತದ್ವಚನಂಮಿಥ್ಯಂತದಾಹಭ

ಸುವವನಾಗಿ ಆ ದಿವ್ಯ ರಥವನ್ನು ಆರೋಹಣ ಮಾಡಿದನು. ಹೀಗೆ ರಥವನ್ನು ಕುರಿತು ಚಿತ್ರೈಸಿರುವ ಸಕಲ ದೇವಸ್ವಾಮಿಯಾದ ಶ್ರೀ ಭಗವಂತನನ್ನು ಬ್ರಹ್ಮಋಷಿಗಳು ಜಯಶಬ್ದಗಳಿಂದ ಸ್ತುತಿಸಿದರು ॥ ೨೨ ॥ ಹಾಗೆ ಸರ್ವದೇವ ಸಮೂಹಗಳು ಗಂಧರ್ವರು ಅಪ್ಸರೋಗಣಗಳು ಸ್ತುತಿಸಿದರು. ಆಗ ಪ್ರಕಾಶಿಸುತ್ತಿರುವ ಇಷ್ಟಾರ್ಥಪ್ರದನಾದ ಖಡ್ಗವನ್ನು, ಬಾಣವನ್ನು, ಧನುಸ್ಸನ್ನು ಧರಿಸಿರುವ ಶ್ರೀ ಭಗವಂತನು ॥೨೩॥ ತನ್ನ ಪ್ರಭಾವದಿಂದ ಮೂರು ಲೋಕವನ್ನು ವ್ಯಾಪಿಸುವವನಾಗಿ ರಥದಲ್ಲಿ ಪ್ರಕಾಶಿಸುತ್ತಿದ್ದನು. ಆಗ ದೇದೀಪ್ಯಮಾನನಾದ ಶ್ರೀ ಪರಮೇಶ್ವರನು ಇಂದ್ರ ಮೊದಲಾದ ದೇವತೆಗಳನ್ನು ಕರೆದು ಎಲೈ ದೇವತೆಗಳಿರಾ ನಿಮ್ಮಿಂದ ಪ್ರಾರ್ಥಿತವಾದ ಈ ಯುದ್ಧ ಮಧ್ಯದಲ್ಲಿ ಆ ತ್ರಿಪುರವಾಸಿ ದೈತ್ಯರನ್ನು ಸಂಹರಿಸಲು ಸಾಧ್ಯವಾದೀತೋ ಇಲ್ಲವೋ ಎಂಬ ಯಾವ ವಿಧವಾದ ಸಂಶಯವನ್ನೂ ಮಾಡಕೂಡದು. ಈ ಬಾಣದಿಂದ ಆ ತ್ರಿಪುರವಾಸಿಗಳೆಲ್ಲರನ್ನೂ ಸತ್ತವರನ್ನಾಗಿ ತಿಳಿದುಕೊಳ್ಳಿರಿ ॥ ೨೪ ॥ ೨೫ ॥ ಹೀಗೆ ಅನುಗ್ರಹಿಸಿದ ಭಗವದ್ವಾಕ್ಯವನ್ನು ಕೇಳಿ ಎಲೈ ಸ್ವಾಮಿಯೇ ವೇದವಾಕ್ಯವಾದ ನಿನ್ನ ಅಪ್ಪಣೆಯು ಸತ್ಯವೇ ಸರಿ. ತ್ರಿಪುರದ ಆ ದೈತ್ಯರು ಮೃತರಾದವರೇ ಸರಿ ಎಂದು ಪ್ರಾರ್ಥಿಸಿದರು. ಭಗವಂತನಾದ ಶ್ರೀ ಜಗತ್ಸ್ವಾಮಿಯು ಮಾತು ಸತ್ಯವೇ ಆಗಿರುವದು. ಅದು ಎಂದಿಗೂ

ಗವಾನ್‌ಪ್ರಭುಃ ॥ ೭೬ ॥ ಇತಿಸಂಚಿಂತ್ಯವೈದೇವಾಃಪರಾಂತುಷ್ಟಿ ಮವಾಪ್ನುವನ್॥ ತತಃಪ್ರಯಾತೋದೇವೇಶಃಸರ್ವೈರ್ದೇವಗಣೈರ್ವೃತಃ ॥ ೭೭ ॥ ರಥೇನಮಹತಾವಿಪ್ರಾ ಹ್ಯುಪಮಾನಾಸ್ತಿಯಸ್ಯಹ ॥ ಸ್ವಸ್ವಪಾರಿಷದೈರ್ದೇವಃಪೂಜ್ಯಮಾನೋಮಹಾಯಶಾ ॥ ೭೮ ॥ ನೃತ್ಯದ್ಭಿರಪ್ಸರೋಭಿಶ್ಚ ಮಾಂಸಭಕ್ಷೈರ್ದುರಾಸದೈಃ ॥ ಧಾವಮಾನೈಃ ಸಮಂತಾಚ್ಚ ತರ್ಜಮಾನೈಃಪರಸ್ಪರಂ ॥ ೭೯ ॥ ಋಷಯಶ್ಚ ಮಹಾಭಾಗಾಸ್ತಪೋಯುಕ್ತಾಮಹಾಗುಣಾಃ ॥ ಆಶಂಸುರ್ವಿಜಯಂದೇವಾಮಹಾದೇವಸ್ಯಸರ್ವಶಃ ॥ ೮೦ ॥ ಏವಂಪ್ರಯಾತೇದೇವೇಶೇ ಲೋಕಾನಾಮಭಯಂಕರೇ ॥ ತುಷ್ಟಮಾಸೀಜ್ಜಗತ್ಸರ್ವಂದೇವತಾಮುನಿಸತ್ತಮಾಃ ॥ ೮೧ ॥ ಋಷಯಃಸ್ತತ್ರದೇವೇಶಂಸ್ತುವಂತೋ

ಸಟಿಯಿಲ್ಲ. ಅಂಥಾದ್ದನ್ನೇ ಅಪ್ಪಣೆಯನ್ನು ಕೊಟ್ಟನು. ॥ ೭೬ ॥ ಹೀಗೆ ಇರುವ ಭಗವದ್ವಾಕ್ಯವನ್ನು ನೆನೆದುಕೊಂಡು ದೇವತೆಗಳು ಉತ್ತಮವಾದ ಸಂತೋಷವನ್ನು ಹೊಂದಿದರು. ಆ ಮೇಲೆ ಶ್ರೀ ದೇವೇಶ್ವರನು ಸಮಸ್ತ ದೇವಸಮೂಹಗಳಿಂದ ಕೂಡಿದವನಾಗಿ ಮಹೋತ್ತಮವಾದ ಆ ರಥದಿಂದ ಪ್ರಯಾಣಮಾಡಿದನು. ಈತನ ಪರಾಕ್ರಮ ಪ್ರಯಾಣಾದಿಗಳಿಗೆಸಾದೃಶ್ಯವೇ ಇಲ್ಲ. ಹಾಗೆ ತನ್ನ ಪಾರ್ಶ್ವದ ಸಮೂಹಗಳಿಂದ ಮಹಾಕೀರ್ತಿಶಾಲಿ ಎಂದು ಸ್ತುತಿಸಿಕೊಳ್ಳುತ್ತಿದ್ದನು ॥ ೭೭ ॥ ೭೮ ॥ ಮತ್ತು ಆ ರಥದ ಸುತ್ತಲೂ ಅಪ್ಸರೋಗಣಗಳು ನರ್ತನವನ್ನು ಮಾಡುತ್ತಿದ್ದರು. ಮಾಂಸ ಭಕ್ಷಕಗಳಾದ ಹದ್ದುಗಳೂ ರಣಹದ್ದುಗಳೂ ಕರಾಳಧ್ವನಿ ಮಾಡುತ್ತಾ ಅನ್ಯೋನ್ಯವಾಗಿ ಹೆದರಿಸುತ್ತಾ ಓಡಿ ಬರುತ್ತಿದ್ದವು ॥ ೭೯ ॥ ಸದ್ಗುಣಶಾಲಿಗಳಾದ, ತಪಸ್ಸಿನಲ್ಲಿ ಆಸಕ್ತರಾದ ಮಹರ್ಷಿಗಳು, ಮಹೈಶ್ವರ್ಯಶಾಲಿಗಳಾದ ದೇವತೆಗಳು ಶ್ರೀ ಮಹಾದೇವನ ವಿಜಯವನ್ನು ಹೊಗಳುತ್ತಿದ್ದರು ॥ ೮೦ ॥ ಈ ಪ್ರಕಾರವಾಗಿ ಸಕಲ ಲೋಕಗಳಿಗೆ ಅಭಯವನ್ನುಂಟುಮಾಡುವ ದೇವೇಶನಾದ ಶ್ರೀ ಭಗವಂತನು ಪ್ರಯಾಣ ಮಾಡುತ್ತಿರಲಿಕ್ಕಾಗಿ ಮುನಿಶ್ರೇಷ್ಠರೂ ದೇವತೆಗಳೂ ಸಮಸ್ತ ಜಗತ್ತೂ ಕೂಡ ಸಂತುಷ್ಟವಾಯಿತು ॥೮೧॥ ಆ ಸಮಯದಲ್ಲಿ ಈ ಪರಮೋ

ಬಹುಭಿಸ್ತುವೈಃ ॥ ತೇಜಶ್ಚಾಸ್ಯ ವರ್ಧಯಂತೋಮುನೇಆಶಸನ್ವಿನಃ ಪುನಃ ॥ ೮೨ ॥ ಗಂಧರ್ವಾಣಾಂಸಹಸ್ರಾಣಿಪ್ರಯುತಾನ್ಯರ್ಬುದಾನಿ ಚ ॥ ವಾದಯಂತಿಪ್ರಯಾಣೇಸ್ಯವಾದ್ಯಾನಿವಿವಿಧಾನಿಚ ॥ ೮೩ ॥ ತತೋಧಿರೂಢೇವರದೇಪ್ರಯಾತೇಚಾಸುರಾನ್ಪ್ರತಿ ॥ ಸಾಧುಸಾಧ್ವಿತಿ ವಿಶ್ವೇಶಃಸ್ಮಯಮಾನೋಭ್ಯಭಾಷತ ॥ ೮೪ ॥ ಯಾಹಿದೇವಯು ತೋದೈತ್ಯಾಚೋದಯಾಶ್ವಾನತಂದ್ರಿತಃ ॥ ಪಶ್ಯಬಾಹೋರ್ಬಲಂ ಮೇದ್ಯನಿಘ್ನತಃಶಾತ್ರವಾನ್ರಣೇ ॥೮೫॥ ತತೋಶ್ವಾಂಶ್ಚೋದಯಾ ಮಾಸಮನೋಮಾರುತರಂಹಸಾ ॥ ಯತ್ರತತ್ತ್ರಿಪುರಂವಿಪ್ರದೈತ್ಯ ದಾನವರಕ್ಷಿತಂ ॥ ೮೬ ॥ ಪಿಬದ್ಭಿರಿವಚಾಕಾಶಂಸುವಾಹೈರ್ಲೋಕ

ಶ್ವರನಿಗೋಸ್ಕರ ಉಲ್ಲಾಸವನ್ನು ಹೆಚ್ಚಿಸುವವರಾಗಿ ಆಗಾಗ ಬಹು ಪ್ರಕಾರ ಸ್ತೋತ್ರಗಳಿಂದ ಸ್ತುತಿಸುತ್ತಿದ್ದರು ॥ ೮೨ ॥ ಈ ಜಗದೀಶನ ಪ್ರಯಾಣದಲ್ಲಿ ಅಸಂಖ್ಯಾತರಾದ ಗಂಧರ್ವರು ಅನೇಕ ವಿಧವಾದ ವಾದ್ಯ ಗಳನ್ನು ನುಡಿಸಿದರು ॥ ೮೩ ॥ ಆಮೇಲೆ ಭಕ್ತಾಭೀಷ್ಟದಾಯಕನಾದ ಶ್ರೀ ಭಗವಂತನು ರಥಾರೂಢನಾಗಿ ಪ್ರಯಾಣ ಮಾಡುತ್ತಿರಲಾಗಿ ರಥವು ಆ ದೈತ್ಯರ ಬಳಿಗೆ ನಡೆಯುತ್ತಲೇ ಜಗದೀಶನು ಬ್ರಹ್ಮದೇವನ ಕೈ ಚಳಕವನ್ನು ನೋಡಿ ಶಾಭಾಸು! ಶಾಭಾಸು! ಎಂದು ನಗುತ್ತ ಮಾತನಾಡಿದನು ॥ ೮೪ ॥ ಎಲೈ! ಬ್ರಹ್ಮದೇವನೇ ಎಲ್ಲಿ ಆ ದೈತ್ಯರಿರು ವರೊ ಅಲ್ಲಿಗೆ ನಿರ್ಭೀತನಾಗಿ ಕುದುರೆಗಳನ್ನು ನಡೆಯಿಸು. ಯುದ್ಧದಲ್ಲಿ ಶತ್ರುಸಮೂಹಗಳನ್ನು ಕೊಲ್ಲುವ ನನ್ನ ಬಾಹು ಬಲವನ್ನು ನೋಡು ॥೮೫॥ ಎಲೈ ಶೌನಕ ಮುನೀಶ್ವರನೆ ಕೇಳು ಆ ಮೇಲೆ ಬ್ರಹ್ಮದೇವನು ವಾಯುವಂತೆ ಮನಸ್ಸಿನಂತೆ ವೇಗವುಳ್ಳ ಆ ಕುದುರೆಗಳನ್ನು ಎಲ್ಲಿ ದೈತ್ಯದಾನವರಿಂದ ರಕ್ಷಿಸಲ್ಪಟ್ಟ ಆ ತ್ರಿಪುರವಿರುವದೊ ಅಲ್ಲಿಗೆ ನಡೆಯಿಸಿ ದನು ॥ ೮೬ ॥ ಶ್ರೀಪರಮಾತ್ಮನು ಸ್ವರ್ಗವಾಸಿಗಳಿಗೆ ಜಯವಾಗುವ ದಕ್ಕೋಸ್ಕರ ಜಾಗ್ರತೆಯಾಗಿ ಆಕಾಶವನ್ನು ಕುಡಿಯುವಂತಿರುವ ಸಕಲ ಲೋಕ ಪೂಜ್ಯಗಳಾದ ಆ ಕುದುರೆಗಳಿಂದ ಬಿಜಯಮಾಡಿದನು.

ಪೂಜಿತೈಃ ॥ ಜಗಾಮಭಗವಾನ್ ಕ್ಷಿಪ್ರಂಜಯಾಯತ್ರಿದಿವೌಕಸಾಂ॥ ॥ ೮೭ ॥ ಪ್ರಯಾತೇರಥಮಾಸ್ಥಾಯತ್ರಿಪುರಾಭಿಮುಖೇಭವೇ॥ ನನಾದಸುಮಹಾನ್ನಾದಂವೃಷಭಃಪೂರಯನ್ದಿಶಃ ॥ ೮೮ ॥ ವೃಷಭಸ್ಯಾಸ್ಯನಿನದಂಶ್ರುತ್ವಾಭಯಂಕರಂಮಹತ್ ॥ ವಿನಾಶಮಗಮಂಸ್ತತ್ರತಾರಕಾಃಸುರಶತ್ರವಃ ॥೮೯॥ ಅಪರೇವಸ್ಥಿತಾಸ್ತತ್ರಯುದ್ಧಾಯಾಭಿಮುಖಾಸ್ತದಾ ॥ ತದಾಸ್ಥಾಣುರ್ಮಹಾತೇಜಾಶ್ಶೂಲಧೃಕ್ಕ್ರೋಧಮೂರ್ಛಿತಃ ॥ ೯೦ ॥ ಶರಂಧನುಷಿಸಂಧಾಯಪುರೇಷ್ವಸ್ತ್ರಂವ್ಯಮುಂಚತ॥ ತತೋಗ್ನಿವರ್ಣಾಇಷವಉತ್ಪೇತುಃಸೂರ್ಯಮಂಡಲಾತ್ ॥ ೯೧ ॥ ಯಥಾಮಯೂಖಸಂದೋಹಾನಾದೃಶ್ಯಂತಪುರೋಯತಃ ॥ ತೈಃಸ್ಪೃಷ್ಟಾವ್ಯಸವಃಸರ್ವೇನಿಪೇತುಃಪುರವಾಸಿನಃ ॥ ೯೨ ॥

॥ ೮೭ ॥ ಈ ಪ್ರಕಾರವಾಗಿ ಸಚ್ಚಿದಾನಂದಮಯನಾದ ಶ್ರೀ ಪರಮೇಶ್ವರನು ರಥಾರೂಢನಾಗಿ ಪ್ರಯಾಣ ಮಾಡುತ್ತಿರುವಾಗ ದಿಕ್ಕುಗಳನ್ನು ತುಂಬುವಂತೆ ವೃಷಭೇಶನು ಪ್ರಬಲವಾದ ಗರ್ಜಿತನಾದವನ್ನು ಮಾಡಿದನು ॥ ೮೮ ॥ ಆಗ ಆ ತ್ರಿಪುರವಾಸಿಗಳಾದ ದೇವಶತ್ರುಗಳಾದ ಆ ತಾರಕರೆಂಬ ಕೆಲವರು ದೈತ್ಯರು ಈ ವೃಷಭನ ಭಯಂಕರವಾದ ಪ್ರಬಲವಾದ ಧ್ವನಿಯನ್ನು ಕೇಳಿ ಅಲ್ಲಿಯೇ ನಾಶವನ್ನು ಹೊಂದಿದರು ॥ ೮೯ ॥ ಅಲ್ಲಿ ಕೆಲವು ಬಲಿಷ್ಠರಾದವರು ಯುದ್ಧಸನ್ನದ್ಧರಾಗಿ ಎದುರಾಗಿ ನಿಂತರು. ಆ ಕಾಲದಲ್ಲಿ ಶೂಲಧರನಾದ ಶಾಶ್ವತನಾದ ಶ್ರೀಭಗವಂತನು ಜಗತ್ತನ್ನೇ ದಹಿಸುವಂಥ ಕ್ರೋಧದಿಂದ ವಿವಶನಾಗಿ ॥ ೯೦ ॥ ಧನುಸ್ಸಿನಲ್ಲಿ ಬಾಣವನ್ನು ಜೋಡಿಸಿ ಸೂರ್ಯಮಂಡಲ ದ್ವಾರದಿಂದ ಆ ತ್ರಿಪುರಗಳಲ್ಲಿ ಪ್ರಯೋಗಿಸಿದನು. ಆ ಸೂರ್ಯಮಂಡಲದ ದೆಸೆಯಿಂದ ಉರಿಯುವ ಜೇಂಕಿಯಂತಿರುವ ಬಾಣಗಳು ಸುರಿದವು ॥ ೯೧ ॥ ಆ ಬಾಣಗಳು ಬಿಸಲಿನ ಕಿರಣಗಳಂತೆ ತ್ರಿಪುರರು ಕಾಣಿಸದಹಾಗೆ ಮುಚ್ಚಿದವು. ಆ ಬಾಣಸ್ಪರ್ಶ ಮಾತ್ರದಿಂದಲೆ ಆ ತ್ರಿಪುರವಾಸಿಗಳಾದ ದೈತ್ಯರೆಲ್ಲರೂ ಪ್ರಾಣರಹಿತರಾಗಿ ಬಿದ್ದರು. ॥೯೨॥

ತ್ರಾಸಾನೀಯಮಹಾಯೋಗೀಮಯಃಕೂಪರಸೇಕ್ಷಿಪತ್ ॥ ಸಿದ್ಧಾ
ಮೃತರಸಂಸ್ಪೃಷ್ಟಾವಜ್ರಸಾರಾಮಹೌಜಸಃ ॥ ೯೩ ॥ ಉತ್ತ
ಸ್ಥುರ್ಮೇಘದಳಸಾವೈದ್ಯುತಾಇವವಹ್ನಯಃ ॥ ವತ್ಸಆಸೀತ್ತದಾ
ಬ್ರಹ್ಮಾಸ್ವಯಂವಿಷ್ಣುರಯಂಹಿಗೌಃ ॥ ೯೪ ॥ ಪ್ರವಿಶ್ಯತ್ರಿಪುರಂ
ಕಾಲೇರಸಕೂಪಾಮೃತಂಪಪೌ ॥ ತೇಸುರಾಅಪಿಪಶ್ಯಂತೋನಶೇಕು
ಶ್ಚಿರಮೋಹಿತಾಃ ॥ ೯೫ ॥ ತದ್ವಿಜ್ಞಾಯಮಹಾಯೋಗೀರಸಪಾ
ಲಾನಿದಂಜಗೌ ॥ ಸ್ವಯಂವಿಶೋಕಃಶೋಕಾರ್ತಾನ್ಸ್ಮರನ್ದೈವಗ
ತಿಂಚತಾಂ ॥ ೯೬ ॥ ದೇವೋಸುರೋನರೋನ್ಯೋವಾನೇಶ್ವರೋ
ಸ್ತೀಹಕಶ್ಚನ ॥ ಆತ್ಮನೋನ್ಯಸ್ಯವಾದಿಷ್ಟಂದೈವೇನಾಪೋಹಿತುಂದ್ವ

ಈ ಅದ್ಭುತವನ್ನು ನೋಡಿ ಅಲ್ಲಿರುವ ಬಹು ಉಪಾಯವನ್ನು ತಿಳಿದ ಮಯನೆಂಬುವನು ಬಿದ್ದಿರುವ ಈ ದೈತ್ಯರೆಲ್ಲರನ್ನು ಎತ್ತಿಕೊಂಡು ಹೋಗಿ ಪೂರ್ವೋಕ್ತವಾದ ರಸದ ಬಾವಿಯಲ್ಲಿ ಹಾಕಿದನು. ವರದತ್ತವಾದ ಆ ಬಾವಿಯ ಸಿದ್ಧರಸ ಸ್ಪರ್ಶಮಾತ್ರದಿಂದ ಆ ರಕ್ಕಸರು ವಜ್ರದಂತಿರುವ ಶರೀರವುಳ್ಳವರಾಗಿ ॥ ೯೩ ॥ ಮೇಘಗಳನ್ನು ಸೀಳಿಕೊಂಡು ಬರುವ ಸಿಡಿಲಿನ ಬೆಂಕಿಯಂತೆ ಎದ್ದು ಪ್ರತಿಭಟಿಸುತ್ತ ಬರುತ್ತಿದ್ದರು. ಆ ಆಶ್ಚರ್ಯವನ್ನು ಕಂಡು ಮಹಾ ವಿಷ್ಣುವು ತಾನೆ ಗೋರೂಪವನ್ನು ಧರಿಸಿ ಆ ಬಾವಿಯ ಸಮೀಪಕ್ಕೆ ಹೋಗುವಾಗ ಬ್ರಹ್ಮದೇವನು ಕಂಡು ತಾನು ಕರುವಾಗಿ ಅವನೊಂದಿಗೆ ನಡೆದನು. ॥ ೯೪ ॥ ಆ ಸಮಯದಲ್ಲಿಯೇ ಇವರಿಬ್ಬರೂ ಸೇರಿ ಆ ಬಾವಿಯಲ್ಲಿರುವ ವಿಶಿಷ್ಟ ಅಮೃತ ರಸವನ್ನು ಪೂರೈಸಿ ಪಾನಮಾಡಿದರು. ಜಗದೀಶ ಮಾಯಾಮೋಹಿತರಾಗಿ ನೋಡುತ್ತಿದ್ದ ಆ ದೈತ್ಯರು ಇದನ್ನು ತಪ್ಪಿಸದೆ ಹೋದರು ॥ ೯೫ ॥ ಇದನ್ನು ತಿಳಿದುಕೊಂಡು ಬುದ್ಧಿಶಾಲಿಯಾದ ಮಯಾಸುರನು ತಾನು ಜ್ಞಾನವನ್ನು ಪಡೆದು ಶೋಕರಹಿತನಾಗಿ ದುಃಖದಿಂದ ವ್ಯಾಪ್ತರಾದ ಆ ರಸವನ್ನು ರಕ್ಷಿಸಿಕೊಂಡಿರುವ ದೈತ್ಯರನ್ನು ಕುರಿತು ಮನಸ್ಸಿನಲ್ಲಿ ಆ ದೈವಚೇಷ್ಟಿತವನ್ನು ತಿಳಿದವನಾಗಿ ಈ ಹೇಳತಕ್ಕ ಮಾತನ್ನು ಹೇಳಿದನು ॥ ೯೬ ॥

ಯೋಃ ॥ ೯೭ ॥ ಉಕ್ತ್ವೈವಂ ಸುರಾಂಶ್ಚಾಸೌಮಯೋಮಾ
ಯಾವಿನಾಂವರಃ ॥ ಜಗಾಮಶರಣಂದೇವಂಜಗದೀಶಂಪಿನಾಕಿನಂ ॥
॥೯೮॥ ಕೃತಾಂಜಲಿರುವಾಚೇತ್ಥಂಭಗವನ್‌ಜಗದೀಶ್ವರ ॥ ತ್ವಾಮ
ಹಂಶರಣಂಪ್ರಾಪ್ತಃಪಾಹಿಪಾಹಿಮಹೇಶ್ವರ ॥ ೯೯ ॥ ಅನಾಥನಾ
ಥಸರ್ವಜ್ಞ್ಞಮುಮುಕ್ಷುರಿಹಸಂಗತಃ ॥ ಪ್ರಸೀದಸರ್ವಭಾವೇನಮ
ಹೇಶಕರುಣಾನಿಧೇ ॥೧೦೦॥ ಇತಿತದ್ವಚನಂಶ್ರುತ್ವಾಕೃಪಾಸಾರಸ್ಸ
ತಾಂಗತಿಃಮಾಭೈಷೀರಿತಿತಂಪ್ರಾಹರಕ್ಷಿಷ್ಯೇತ್ವಾಮಿಹಾಗತಂ॥೧೦೧॥
ಮಯಯಾಹಿತಲಂಭೂಮೇರ್ಯತ್ರಾಸ್ತೇಹಾಟಕೇಶ್ವರಃ ॥ ಆಕಲ್ಪಾ

ಎಲೈ ತ್ರಿಪುರವಾಸಿಗಳಿರಾ ಕೇಳಿ, ಈಗ ಪ್ರತಿಭಟಿಸುವದಕ್ಕೆ ದೇವನಾ
ಗಲಿ, ದೈತ್ಯನಾಗಲಿ, ವರಾಕ್ರಮಿಯಾದ ಮನುಷ್ಯನಾಗಲಿ ಯಾವನೂ
ಶಕ್ತನಾಗಲಾರನು. ತನಗಾಗಲಿ, ಬೇರೆ ಯಾವನಿಗಾಗಲಿ ದೈವವಿಹಿತವಾದ
ಪ್ರಾರಬ್ಧದ ಅನುಭವವು ಅನುಭವಿಸದೆ ದಾಟಲಸಾಧ್ಯವಾಗಿರು
ವದು ॥ ೯೭ ॥ ಈ ಪ್ರಕಾರವಾಗಿ ಆ ದೈತ್ಯರನ್ನು ಕುರಿತು ಹೇಳಿ
ಮಾಯಾಚಾರ್ಯನಾದ ಈ ಮಯಾಸುರನು ಪಿನಾಕಧರನಾದ ಶ್ರೀ
ಜಗದೀಶನನ್ನು ಕುರಿತು ಬಂದು ಮರೆಯನ್ನು ಹೊಕ್ಕನು ॥ ೯೮ ॥
ಅಲ್ಲಿ ಕೈಜೋಡಿಸಿಕೊಂಡು ಈ ಪ್ರಕಾರ ಸ್ತುತಿಸಿದನು. ಎಲೈ ಷಡು
ಣೈಶ್ವರ್ಯ ಸಂಪನ್ನನೇ ಪ್ರಪಂಚಕ್ಕೊಡೆಯನೆ, ಮಹೇಶನೆ ನಿನ್ನನ್ನು
ನಾನು ಶರಣವನ್ನು ಸೇರಿದನು. ರಕ್ಷಿಸುವವನಾಗು ॥ ೯೯ ॥ ಗತಿಯಿ
ಲ್ಲದವರಿಗೆ ಗತಿಯಾದವನೆ, ಸರ್ವಜ್ಞನೆ, ನಿನ್ನಲ್ಲಿ ಮೋಕ್ಷಕಾಂಕ್ಷಿಯಾಗಿ
ಬಂದಿರುವೆನು. ಎಲೈ ಕೃಪಾಸಾಗರನೆ, ಮಹಾಸ್ವಾಮಿಯೆ, ಸಕಲ
ಭಾವದಿಂದ ಪ್ರಸನ್ನನಾಗು ॥೧೦೦॥ ಈ ಪ್ರಕಾರವಾದ ಮಯನ ಮಾತ
ನ್ನು ಕೇಳಿ ಸಾಧುಗಳಿಗೆ ಒಡೆಯನಾದ ಶ್ರೀ ಪರಮೇಶ್ವರನು ಹೆದರ
ಬೇಡ, ಶರಣಾಗತನಾದ ನಿನ್ನನ್ನು ಈಗಲೇ ರಕ್ಷಿಸುವೆನು. ಎಂದು
ಅನುಗ್ರಹಿಸಿದನು ॥ ೧೦೧ ॥ ಅದೇನೆಂದರೆ. ಎಲೈ ಮಯಾಸುರನೆ,
ಭೂಮಿಯ ತಳದಲ್ಲಿ ಎಲ್ಲಿ ಹಾಟಕೇಶ್ವರನಿರುವನೋ ಆ ಸ್ಥಳವನ್ನು

ಪುರಾಣಸ್ತತ್ರವಸಮತ್ಸನ್ನಿಧೌಮುದಾ ॥ ೧೦೨ ॥ ಇತ್ಯಾಜ್ಞಾಂಶಿ
ರಸಾಧಾರ್ಯಮಯಃಪಾತಾಳಮನ್ವಗಾತ್ ॥ ತತ್ರಾಪ್ಯಸುವರ್ಣವಿಶಾ
ಶಾನಂನತ್ವಾಸ್ತುತ್ವಾಚಸನ್ನಿಧೌ ॥೧೦೩॥ ಪರಿವಾರಯುತೋದ್ದೈ
ತ್ಯಶ್ಚಾವಸತ್ಸುಖಮನ್ವಹಂ ॥ ಅಥದೇವೇನಧನುಷೋಗುಣೇವಿಮೃಜಿ
ತೇಽಸತಿ ॥ ೧೦೪ ॥ ತ್ರಸ್ತಾನಿಸರ್ವಭೂತಾನಿತ್ರೈಲೋಕ್ಯೇಭೂಃ
ಪ್ರಕಂಪತೇ॥ನಿಮಿತ್ತಾನಿಚಘೋರಾಣಿತತ್ರಸಂದಧತಶ್ಶರಂ ॥೧೦೫॥
ತಸ್ಮಿನ್ ಸೋಮಾಗ್ನಿವಿಷ್ಣೂನಾಂಕ್ಷೋಭೇನಬ್ರಹ್ಮರುದ್ರಯೋಃ ॥
ಸರಥೋಧನುಷಃಕ್ಷೋಭಾದತಿವಾಹ್ಯಾವಸೀದತಿ॥೧೦೬॥ ತತೋನಾ
ರಾಯಣಸ್ತಸ್ಮಾಚ್ಛರಭಾಗಾದ್ವಿನಿರ್ಸೃತಃ॥ವೃಷರೂಪಂಸಮಾಸ್ಥಾ
ಯಹ್ಯುಜ್ಜಹಾರಮಹಾರಥಂ ॥ ೧೦೭ ॥ ಸೀದಮಾನೇರಥೇಚೈವನ

ಕುರಿತು ಹೋಗು. ಕಲ್ಪಾಂತನಾಗಿ ಮರಣವಿಲ್ಲದವನಾಗಿ ಆ ನನ್ನ ಸನ್ನಿಧಿಯಲ್ಲಿರು ॥ ೧೦೨ ॥ ಈ ಪ್ರಕಾರವಾದ ಭಗವಂತನ ಅಪ್ಪಣೆಯನ್ನು ಶಿರಸ್ಸಿನಿಂದ ವಹಿಸಿಕೊಂಡು ಮಯನು ಪಾತಾಳವನ್ನು ಹೊಂದಿದನು. ಅಲ್ಲಿರುವ ಹಾಟಕೇಶ್ವರನನ್ನು ಕಂಡು ನಮಸ್ಕರಿಸಿ, ಸನ್ನಿಧಿಯಲ್ಲಿ ಸ್ತುತಿಸಿ ॥ ೧೦೩ ॥ ತನ್ನ ಪರಿಜನಯುಕ್ತನಾಗಿ ಪ್ರತಿದಿನದಲ್ಲಿಯೂ ಸುಖವನ್ನು ಅನುಭವಿಸುತ್ತ ಇದ್ದನು. ಆ ಮೇಲೆ ಇಲ್ಲಿ ಶ್ರೀ ಮಹಾದೇವನು ಧನುಸ್ಸಿನ ಹೆದೆಯನ್ನು ತಿಕ್ಕುತ್ತಿರಲಾಗಿ ॥ ೧೦೪ ॥ ಸಮಸ್ತಪ್ರಾಣಿಗಳೂ ಹೆದರಿದವು. ಮೂರುಲೋಕಗಳೂ ನಡುಗಿದವು. ಭೂಮಿಯು ಸಹ ನಡುಗಿತು. ಅಂಥ ಬಾಣವನ್ನು ಆ ಬಿಲ್ಲಿಗೆ ಜೋಡಿಸುವಾಗ ಘೋರಗಳಾದ ನಿಮಿತ್ತಗಳಾದವು ॥೧೦೫॥ ಆ ಕ್ಷಣದಲ್ಲಿ ಸೋಮ, ಅಗ್ನಿ, ವಿಷ್ಣು ಎಂಬ ಬಾಣದ ದೇವತೆಗಳ ಶ್ರೀ ಪರಮೇಶ್ವರ ಬ್ರಹ್ಮದೇವರು ಇವರಿಬ್ಬರ ಗರ್ಜನೆಯಿಂದಲೂ ಬಿಲ್ಲನ್ನು ಚಾಚಿಕೊಂಡು ಒಗ್ಗಿಸುವದರಿಂದಲೂ ಆ ರಥವು ನೆಲದಲ್ಲಿ ಹೂಳಿತು ॥೧೦೬॥ ಆಗ ನಾರಾಯಣನು ಬಾಣದ ದಸೆಯಿಂದ ಇಳಿದು ವೃಷಭಾಕಾರವನ್ನು ತಾಳಿ ಆ ಮಹತ್ತ್ವವಾದ ರಥವನ್ನು ಮೇಲಕ್ಕೆ ಎತ್ತಿದನು ॥ ೧೦೭ ॥

ರ್ದಮಾನೇಷು ಶತ್ರುಷು ॥ ಸಸಂಭ್ರಮಾತ್ತು ಭಗವಾನ್ನಾದಂ ಚಕ್ರೇ ಮಹಾಬಲಃ ॥೧೦೮॥ ವೃಷಭಸ್ಯಸ್ಥಿತೋ ಮೂರ್ಧ್ನಿ ಹಯಸ್ಯ ಪೃಷ್ಠೇ ಚ ಮಾನದ ॥ ತದಾಸ ಭಗವಾನ್ರುದ್ರೋ ನಿರೈಕ್ಷದ್ದಾನವಂ ಪುರಂ ॥ ॥ ೧೦೯ ॥ ವೃಷಭಸ್ಯಸ್ಥಿತೋ ರುದ್ರೋ ಹಯಸ್ಯ ಚ ನರೋತ್ತಮ ॥ ಸ್ತನಾನ್ಪದಾ ಪಾತಯತ ಖುರಾಂಶ್ಚೈವ ದ್ವಿಧಾ ಕರೋತ್ ॥ ೧೧೦ ॥ ತತಃ ಪ್ರಭೃತಿ ಭದ್ರಂ ತೇ ಗವಾಂ ದ್ವೈಧೀಕೃತಾಃ ಖುರಾಃ ॥ ಹಯಾನಾಂ ಚ ಸ್ತನಶ್ಚೈವ ತದಾಪ್ರಭೃತಿ ನಾಭವತ್ ॥ ೧೧೧ ॥ ಪೀಡಿತಾನಾಂ ಬಲವತಾ ರುದ್ರೇಣಾದ್ಭುತಕರ್ಮಣಾ ॥ ತಥಾಧಿಜ್ಯಂ ಧನುಃ ಕೃತ್ವಾ ಶರ್ವಸ್ಸಂಧಾಯ ತಂ ಶರಂ ॥ ೧೧೨ ॥ ಯುಕ್ತ್ವಾ ಪಾಶುಪ

ರಥವು ಹೂಳಿದ್ದನ್ನು ಕಂಡು ಶತ್ರುಗಳು ಪ್ರತಿಭಟಿಸುತ್ತಿರಲಾಗಿ ಶ್ರೀ ಭಗವಂತನು ತನ್ನ ಮಹತ್ತಾದ ಬಲವನ್ನಾಶ್ರಯಿಸಿಕೊಂಡವನಾಗಿ ಗಂಭೀರವಾದ ಸಿಂಹನಾದವನ್ನು ಮಾಡಿದನು ॥೧೦೮॥ ಸಕಲ ದುಃಖನಾಶಕನಾದ ದೇವನು ವೃಷಭ ಕುದುರೆಗಳಿಂದ ವಹಿಸಿರುವ ಆ ರಥದಲ್ಲಿ ನಿಂತವನಾಗಿ ನೇತ್ರತ್ರಯದಿಂದ ಆ ತ್ರಿಪುರವನ್ನು ನೋಡಿದನು ॥೧೦೯॥ ಎಲೈ ಮನುಷ್ಯೋತ್ತಮನೇ ಕೇಳು. ಸಕಲ ದುರಿತಹರನಾದ ಶ್ರೀ ಪರಮೇಶ್ವರನು ವೃಷಭ ಹಯಗಳ ಮೇಲೆ ಆಕ್ರಮಣವನ್ನಿಡುವವನಾಗಿ ಎಂದರೆ, ಆವಶ್ಯಕವಾದಾಗ ರಥದ ದೆಸೆಯಿಂದ ವೃಷಭನಲ್ಲಿ ಬಿಜಯಂಗೆಯ್ಯುವಾಗ ಕ್ರೋಧಾಕ್ರಮಣ ಭಾರದಿಂದ ಆ ವೃಷಭದ ಕಾಲು ಗೊರಸು ಒಂದೇ ಆಗಿರುವದು ಸೀಳಿ ಎರಡು ಹೋಳಾಯಿತು. ಕುದುರೆಯ ಸ್ತನವು ಪದಾಘಾತಿಯಿಂದ ಬಿದ್ದವು. ಆಮೇಲೆ ಗೋಜಾತಿಗೆ ಕಾಲುಗುರು ಎರಡಾಯಿತು. ಗಂಡು ಕುದುರೆಗೆ ಸ್ತನದ ಗುರುತೇ ಇಲ್ಲವಾಯಿತು. ॥ ೧೧೦ ॥ ॥ ೧೧೧ ॥ ಸರ್ವನಿಯಾಮಕನಾದ ಶ್ರೀ ಭಗವಂತನಿಂದ ಆಚರಿತವಾದ ಅಪಾರಪರಾಕ್ರಮದಿಂದ ಈ ಎರಡು ಜಾತಿಯ ಪ್ರಾಣಿಗಳಿಗೆ ಈ ಗುರುತು ಶಾಶ್ವತವಾಯಿತು. ಸರ್ವವ್ಯಾಪಕನಾದ ಆ ಪರಮಾತ್ಮನು ಹಾಗೆ ಧನುಸ್ಸನ್ನು ಹೆದೆಯೇರಿಸಿ ಅದರಲ್ಲಿ ಆ ಪೂರ್ವೋಕ್ತ ಬಾಣವನ್ನು ಜೋಡಿಸಿ ॥ ೧೧೨ ॥ ಮತ್ತು ಅದಕ್ಕೆ

ತಾಸ್ತ್ರೀಣಿತ್ರಿಪುರಂಸಮಚಿಂತಯತ್॥ ತಸ್ಮಿನ್ಸ್ಥಿತೇಮುನಿಶ್ರೇಷ್ಠಾ
ರುದ್ರೇವಿಧೃತಕಾರ್ಮುಕೇ ॥ ೧೧೩ ॥ ಪುರಾಣಿತ್ರೀಣಿಕಾಲೇನಜ
ಗ್ಮುರೈಕ್ಯೈಕತಾಂತದಾ ॥ ಏಕೀಭಾವಂಗತೇಚೈವತ್ರಿಪುರೇಸಮುಪಾಗ
ತೇ ॥ ೧೧೪ ॥ ಬಭೂವತುಮುಲಃಶಬ್ದೋದೇವತಾನಾಂಮಹಾತ್ಮ
ನಾಂ॥ ತತೋದೇವಗಣಾಃಸರ್ವೇಸಿದ್ಧಾಶ್ಚಪರಮರ್ಷಯಃ ॥೧೧೫॥
ಜಯೇತಿವಾಚೋಮುಮುಚುಃಸಂಸ್ತುವಂತೋಮಹೇಶ್ವರಂ ॥ ತ
ತೋಗ್ನಿಃಪ್ರಾದುರಭೂತ್ತ್ರಿಪುರಂನಿಘ್ನತೋಸುರಾನ್ ॥ ೧೧೬ ॥

ಪಾಶುಪತಾಸ್ತ್ರವನ್ನು ಅಭಿಮಂತ್ರಿಸಿ ಕೂಡಿಸಿ ಸೂರ್ಯಾಗ್ನಿ ಚಂದ್ರಾತ್ಮಕಗಳಾದ ನೇತ್ರಗಳ ಕ್ರೂರದೃಷ್ಟಿಯಿಂದ ಆ ಮೂರು ಪಟ್ಟಣವು ಒಂದೇಕಡೆಸೇರಿ ಬಾಣದ ಲಕ್ಷ್ಯಕ್ಕೆ ಗುರಿಯಾಗುವಂತೆ ಯೋಜಿಸುತ್ತಿದ್ದನು. ಮಹಾ ಕ್ರೋಧವನ್ನಾಶ್ರಯಿಸಿದ ಶ್ರೀಭಗವಂತನು ಹಾಗೆ ಧನುರ್ಬಾಣವನ್ನು ಧರಿಸಿ ಆ ತ್ರಿಪುರವನ್ನು ಲಕ್ಷ್ಯವಾಗಿ ನೋಡುತ್ತಿರಲಾಗಿ ಕಾಲಸ್ವರೂಪನಾದ ಶ್ರೀ ಭಗವಂತನ ದೃಷ್ಟಿವ್ಯಾಪಿಸುತ್ತಿರುವ ಕಾಲದೊಡನೆ ಆ ಮೂರು ಪುರವು ಪರಸ್ಪರ ಒಂದರ ಮೇಲೆ ಒಂದರಂತೆಕೂಡಿ ಬಾಣಕ್ಕೆ ಲಕ್ಷ್ಯವಾಯಿತು. ಹೀಗೆ ಒಂದರ ಮೇಲೆ ಒಂದರಂತೆಕೂಡಿ ತ್ರಿಪುರ ಭಾವವನ್ನೈದುತ್ತಲೆ ॥೧೧೩॥೧೧೪॥ ಮಹಾ ಸಂತೋಷಿಗಳಾದ ದೇವತೆಗಳ ಕೋಲಾಹಲಶಬ್ದವಾಯಿತು. ಆಮೇಲೆ ಸಮಸ್ತ ದೇವತಾಗಣಗಳೂ ಸಿದ್ಧರೂ ಮಹರ್ಷಿಗಳೂ ॥೧೧೫॥ ಬಹು ಪ್ರಕಾರವಾಗಿ ಶ್ರೀ ಭಗವಂತನನ್ನು ಸ್ತುತಿಸಿ ಜಯಜಯವೆಂದರು. ಆಗ ಯಾರಿಂದಲೂ ಪ್ರತಿಭಟಿಸಲಸಾಧ್ಯನಾದ ಮಹಾ ಕ್ರೋಧಾವೇಶನಾದ ತ್ರಿಪುರನನ್ನು ಸಂಹರಿಸಲಪೇಕ್ಷಿತನಾದ ಶ್ರೀ ಭಗವಂತನ ಬಾಣವು ಹೊರಡುವ ಸಮಯದಲ್ಲಿ ಲೋಕವನ್ನು ಆಕ್ರಮಿಸುವಂತಿರುವ ಅಸದೃಶವಾದ ಮಹತ್ತ್ವವಾದ ಒಂದು ಜ್ವಾಲೆಯು ಮುಂದುಗಡೆಯಲ್ಲಿ ಹುಟ್ಟಿತು. ಆಕ್ಷಣವೇ ಸರ್ವೇಶ್ವರನಾದ ಶ್ರೀ ಪರಮಾತ್ಮನು ಧನುಸ್ಸನ್ನು ಆಕರ್ಣಾಂತವಾಗಿ ಸೆಳೆದು ತ್ರೈಲೋಕ್ಯಸಾರವಾದ ಆ ಬಾಣ

ಜ್ವಾಲಾಸಮೂಹೋಬಲವಾನ್ವ್ಯಾಪ್ತಲೋಕೋತಿದಾರುಣಃ॥ಅನಿ
ರ್ದೇಶ್ಯೋಗ್ರವಪುಷೋದೇವಸ್ಯಾಸಹ್ಯತೇಜಸಃ ॥ ಸತದ್ವಿಕೃಷ್ಯ
ಬಲವಾನ್‌ದಿವ್ಯಂಲೋಕೇಶ್ವರೋಧನುಃ ॥ ೧೧೭ ॥ ತ್ರೈಲೋಕ್ಯ
ಸಾರಂತಮಿಷುಂಮುಮೋಚತ್ರಿಪುರಂಪ್ರತಿ॥ ಉತ್ಕ್ಷಿಪ್ತೇನ್ವೈಮಹಾ
ಭಾಗತಸ್ಮಿನ್ನಿಷುವರೇತಸಾ ॥ ೧೧೮ ॥ ಮಹಾನಾರ್ತಸ್ವರೋ
ಹ್ಯಾಸೀತ್ಪುರಾಣಾಂಪತತಾಂಭುವಿ॥ ತಾನ್ಸೋಸುರಗಣಾಂದಗ್ಧ್ವಾ
ಪ್ರಾಕ್ಷಿಪಚ್ಚ ಮಹಾರ್ಣವೇ ॥ ೧೧೯ ॥ ಏವಂತುತ್ರಿಪುರಂದಗ್ಧಂ
ದಾನವಾಶ್ಚಾಪ್ಯಶೇಷತಃ ॥ ಮಹೇಶ್ವರೇಣಕ್ರುದ್ಧೇನತ್ರೈಲೋಕ್ಯ
ಸ್ಯಹಿತೈಷಿಣಾ ॥೧೨೦॥ ಸಚಾತ್ಮಕ್ರೋಧಜೋವಹ್ನಿರ್ಹಾಹೇತ್ಯು
ಕ್ತ್ವಾನಿವಾರಿತಃ॥ ಮಾಕಾರ್ಷೀದ್ಭಸ್ಮಸಾಲ್ಲೋಕಾನಿತಿತ್ರ್ಯಕ್ಷೋಗ್ನಿ

ವನ್ನು ತ್ರಿಪುರದಮೇಲೆ ಪ್ರಯೋಗಿಸಿದನು. ಎಲೈ ಶೌನಕಾದಿ ಮಹರ್ಷಿಗಳಿರಾ ಕೇಳಿ! ಆ ಲೋಕಪೂಜಿತವಾದ ಬಾಣವು ಬೀಳುತ್ತಿರಲಾಗಿ ಸುಟ್ಟು ಭಸ್ಮವಾಗಿ ಭೂಮಿಯಲ್ಲಿ ಬೀಳುವ ಆ ತ್ರಿಪುರಗಳ ಮಹತ್ತಾದ ದುಃಖಶಬ್ದವು ಕೇಳಿಸಿತು. ಹೀಗೆ ಆ ತ್ರಿಪುರವಾಸಿಗಳಾದ ದುಷ್ಟದೈತ್ಯರೆಲ್ಲರನ್ನು ಭಸ್ಮೀಕರಿಸಿದನು. ಆಗ ಉಂಟಾದ ಕ್ರೋಧವನ್ನು ಸಮುದ್ರ ಮಧ್ಯದಲ್ಲಿ ಹಾಕಿದನು ॥೧೧೬॥೧೧೭॥೧೧೮॥೧೧೯॥ ಈ ಪ್ರಕಾರವಾಗಿ ಮೂರು ಲೋಕವಾಸಿಗಳಾದ ಸಾಧುಗಳಿಗೆ ಕ್ಷೇಮವನ್ನು ಬಯಸುವ ಅದಕ್ಕಾಗಿ ದುಷ್ಟರಲ್ಲಿ ಕ್ರೋಧಿಯಾದ ಶ್ರೀ ಸರ್ವೇಶ್ವರನಿಂದ ತ್ರಿಪುರವು ಭಸ್ಮೀಕೃತವಾಯಿತು. ಅದರಲ್ಲಿರುವ ದುಷ್ಟದೈತ್ಯರೆಲ್ಲರೂ ನಿಶ್ಶೇಷವಾದರು ॥ ೧೨೦ ॥ ಮತ್ತು ಆ ತ್ರಿಪುರನಾಶಕ್ಕೋಸ್ಕರ ಹುಟ್ಟಿದ ಕ್ರೋಧಕ್ಕೆ ಆ ತ್ರಿಪುರವು ಲಕ್ಷ್ಯಕ್ಕೆ ಸಾಲದೆ ಹೋದುದರಿಂದ ಲೋಕವೆಲ್ಲವನ್ನೂ ಆಕ್ರಮಿಸುವಂತಿರುವದನ್ನು ನೋಡಿ ಸಮಸ್ತ ದೇವತೆಗಳೂ ಹಾ ಹಾ ಕಾರಮಾಡುತ್ತ (ಆ ಕ್ರೋಧಾಗ್ನಿಯು ಲೋಕವನ್ನು ಭಸ್ಮವಾಗಿ ಮಾಡಬಾರದಾಗಿ) ಈಶ್ವರನನ್ನು ಬೇಡಿಕೊಂಡುದರಿಂದ

ಮಾರುಣಾತ್ ॥೧೨೧॥ ತತಃಪ್ರಕೃತಿಮಾಪನ್ನಾದೇವಾಲೋಕಾಸ್ತ್ವ
ಥರ್ಷಯಃ ॥ ತುಷ್ಟುವುರ್ವಾಗ್ಭಿರಿಷ್ಟಾಭಿಃಸ್ಥಾಣುಮಪ್ರತಿಮೌಜ
ಸಂ ॥ ೧೨೨ ॥ ಜಯದೇವಮಹಾದೇವಜಯಶ್ರೀಚಂದ್ರಶೇಖರ ॥
ಜಯಮುಕ್ತಿಪ್ರದೇಶಾನಜಯಮೃತ್ಯುಂಜಯಾವ್ಯಯ ॥ ೧೨೩ ॥
ನಮೋನಮೋವಿಧಾತಸ್ತೇನಮೋವಿಷ್ಣೋಮಹೇಶ್ವರ ॥ ನಮಸ್ತ್ರಿ
ಮೂರ್ತಿರೂಪಾಯರೂಪಾತೀತಾಯತೇನಮಃ ॥೧೨೪॥ ಪಾಲಿತಾ
ದೇವನಿಚಯಾನಿಘ್ನತಾತ್ರಿಪುರಾಣಿಚ ॥ ರಕ್ಷಿತಂಜಗದೇತದ್ಧಿತ್ವಯಾ

ತ್ರಿಣೇತ್ರನಾದ ಶ್ರೀ ಭಗವಂತನು ಲೋಕಗಳನ್ನೆಲ್ಲ ಭಸ್ಮವಾಗಿ ಮಾಡ
ಬೇಡವೆಂದು ಅಗ್ನಿಯನ್ನು ನಿಲ್ಲಿಸಿದನು. ॥೧೨೧॥ ಅನಂತರ ಸಮಸ್ತ
ಲೋಕಗಳೂ ದೇವತೆಗಳೂ ಋಷಿಗಳೂ ಯುದ್ಧದ ಕ್ರೋಧಪರಾಕ್ರ
ಮಬಾಣ ಜ್ವಾಲಾ ವ್ಯಾಪಾರ ಮೊದಲಾದುದರಿಂದ ಏನೇನಾಗುವದೋ
ಎಂದು ಸಂಭ್ರಮಿಗಳಾದವರೆಲ್ಲರೂ ಸ್ವಸ್ಥಚಿತ್ತರಾದರು. ಇಷ್ಟಾರ್ಥದಾ
ಯಕಗಳಾದ ವಾಕ್ಯಗಳಿಂದ ಅಸಾದೃಶ್ಯಮಹಿಮನಾದ ಪರಮಾರ್ಥ
ನಾದ ಶ್ರೀ ಭಗವಂತನನ್ನು ಸ್ತುತಿಸಿದರು ॥ ೧೨೨ ॥ ಎಲೈ ಸರ್ವ
ಪ್ರಕಾಶನಾದ ಮಹಸ್ವಾಮಿಯೇ ಸರ್ವೋತ್ಕೃಷ್ಟನಾಗು. ಎಲೈ ಶ್ರೀ
ಚಂದ್ರಾರ್ಧಾಲಂಕಾರನೆ ಮೋಕ್ಷಪ್ರದನೆ ಸರ್ವಪ್ರೇರಕನೆ ಭಕ್ತಿಜ್ಞಾ
ನಾದ್ಯೈಶ್ವರ್ಯಪ್ರದನೆ ಸಕಲಮೃತ್ಯುವನ್ನೂ ಜಯಿಸುವನೆ ನಾಶರಹಿ
ತನೇ ಜಯಜಯವೆಂದರು ॥ ೧೨೩ ॥ ಎಲೈ ಸರ್ವಸೃಷ್ಟಿಕರ್ತನೇ ನಿನ
ಗೋಸ್ಕರ ನಮೋನಮಃ ವಿಷ್ಣುರೂಪನೇ ಜಗದೀಶ್ವರನೇ ನಮಸ್ಕಾರವು.
ತ್ರಿಮೂರ್ತಿರೂಪನಾಗಿ ರೂಪವೇ ಇಲ್ಲದವನಾಗಿರುವ ಶ್ರೀ ಭಗ
ವಂತನಿಗೋಸ್ಕರ ನಮಸ್ಕಾರವು ॥ ೧೨೪ ॥ ಎಲೈ ಸುಖದಾಯಕನಾದ
ಸ್ವಾಮಿಯೇ ಸಾಧುಪಾಲಕನಾದ ದುಷ್ಟತ್ರಿಪುರಗಳನ್ನು ನಾಶಪಡಿಸಿದ
ನಿನ್ನಿಂದ ದೇವಸಮೂಹಗಳು ರಕ್ಷಿಸಲ್ಪಟ್ಟಿತು. ಮತ್ತು ಒಡೆಯನಾದ
ನಿನ್ನಿಂದ ಈ ಜಗತ್ತು ರಕ್ಷಿಸಲ್ಪಟ್ಟಿತು. ಎಲೈ ದೇವದೇವನಾದ ದೇವ
ನೇ ಹೀಗೆ ಸಕಲ ಆಪತ್ತುಗಳಲ್ಲಿ ನಮ್ಮನ್ನು ಪಾಲಿಸು. ನೀನು ಸೇವ

ನಾಥೇನಶಂಕರ ॥೧೨೫॥ ಸರ್ವಾಪತ್ಸು ಜನೋದೇವಾ ಪರಿಪಾಹಿ ಸುರೇಶ್ವರ ॥ ಅನುಗೃಹ್ಣೀಷ್ವದೇವಾಂಸ್ತ್ವಂಕಿಂಕರಾನ್ಸಮುಪ ಸ್ಥಿತಾನ್ ॥ ೧೨೬ ॥ ಇತಿಪ್ರಗೃಹ್ಣತಸ್ತಾಂಸ್ತು ಪ್ರಹರ್ಸ ಚಂದ್ರ ಶೇಖರಃ ॥ ಉವಾಚಾನಂದಯನ್ದೇವೋಮೇಘಗಂಭೀರಯಾಗಿ ರಾ॥೧೨೭॥ಹತಂತ್ರಿಪುರಮೇತದ್ಧಿಯೂಯಂಸರ್ವೇಸುರೇಶ್ವರಾಃ॥ ಗಚ್ಛಧ್ವಂಸ್ವಾನಿಧಾಮಾನಿಸ್ವಸ್ಥಾಸ್ತಿಷ್ಠಂತುಶಾಸನೇ ॥ ೧೨೮ ॥ ಇತ್ಯಾಶ್ವಾಸ್ಯಸುರಾನ್ಶಂಭುಸ್ಸಗಣೋವೃಷಭಧ್ವಜಃ ॥ ಯಯೌಕೈ ಲಾಸನಗರಂಸ್ತುತಃಸುರಮುನೀಶ್ವರೈಃ ॥ ೧೨೯ ॥ ದೇವಾಃಪ್ರೀತಾ ಯಯುಃಸ್ವರ್ಗಂಮುನಯಃಸಿದ್ಧಚಾರಣಾಃ॥ ಏವಂಭಗವತಾವಿಪ್ರಾ ತ್ರಿಪುರಂನಿಹತಂಪುರಾ ॥೧೩೦॥ ಯಏತದ್ದೇವದೇವಸ್ಯಶಂಭೋರ

ಕರಾದ ದೇವತೆಗಳಾದ ನಮ್ಮನ್ನು ಕುರಿತು ಅನುಗ್ರಹಿಸು ॥ ೧೨೫ ॥ ಈ ಪ್ರಕಾರ ಸ್ತುತಿಸುತ್ತಿರುವ ಆ ದೇವತೆಗಳನ್ನು ಕುರಿತು ಮಂದ ಹಾಸವನ್ನು ಮಾಡುತ್ತಿದ್ದ ಶ್ರೀ ಪರಮೇಶ್ವರನು ಸಂತೋಷಿಸುವನಾಗಿ ಮೇಘದಂತೆ ಗಂಭೀರವಾದ ಧ್ವನಿಯಿಂದ ಮಾತನಾಡುತ್ತಿದ್ದನು॥೧೨೬॥ ॥ ೧೨೭ ॥ ಎಲೈ ದೇವತೆಗಳಿರಾ ಈ ತ್ರಿಪುರವು ದಹಿಸಲ್ಪಟ್ಟಿತು. ನೀವು ಸರ್ವರೂ ನಿಮ್ಮ ಸ್ಥಾನವನ್ನು ಕುರಿತು ಹೋಗಿ ಎಲ್ಲರೂ ಪೂರ್ವದಂತೆ ಅಪ್ಪಣೆ ಕೊಟ್ಟಿರುವ ಕೆಲಸದಲ್ಲಿ ಇರಬಹುದು ॥ ೧೨೮ ॥ ಈ ಪ್ರಕಾರ ವಾಗಿ ಶ್ರೀ ಭಗವಂತನು ದೇವತೆಗಳನ್ನು ಒಡಂಬಡಿಸಿ, ಆ ದೇವತೆಗಳು ಋಷಿಗಳಿಂದ ಸ್ತುತಿಸಲ್ಪಟ್ಟವನಾಗಿ, ವೃಷಭನಿಂದ ಅಲಂಕೃತವಾದ ಧ್ವಜವುಳ್ಳವನಾಗಿ, ಕೈಲಾಸ ನಗರವನ್ನು ಕುರಿತು ತೆರಳಿದನು ॥ ೧೨೯ ॥ ಇತ್ತಲಾ ದೇವತೆಗಳೂ, ಋಷಿಗಳೂ, ಸಿದ್ಧರೂ, ಚಾರಣರೂ. ಸಂತು ಷ್ಟರಾಗಿ ಸ್ವರ್ಗವನ್ನು ಸೇರಿ ಸುಖವಾಗಿದ್ದರು. ಎಲೈ ಬ್ರಾಹ್ಮಣರುಗಳಿರಾ ಈ ಪ್ರಕಾರವಾಗಿ ಮೊದಲು ಶ್ರೀ ಭಗವಂತನಿಂದ ತ್ರಿಪುರವು ಸಂಹರಿಸ ಲ್ಪಟ್ಟಿತು ॥ ೧೩೦ ॥ ಯಾವ ಮನುಷ್ಯನು ಅಪಾರ ಮಹಿಮೆಯುಳ್ಳ ದೇವಸ್ವಾಮಿಯಾದ ಶ್ರೀ ಪರಮಾತ್ಮನ ಈ ಚರಿತ್ರೆಯನ್ನು ಕೇಳುವ

ಮಿತತೇಜಸಃ॥ ಚರಿತ್ರಂಶೃಣುಯಾನ್ಮರ್ತ್ಯಃಸಜೇತಾಮೃತ್ಯುಸಂಗ ಮಂ ॥ ೧೩೧ ॥ ಶೃಣ್ವತೋಭಕ್ತಿಮತಃಶಾಮಿಃಪ್ರದಾಂಸಮಹೇಶ್ವರಃ॥ಪ್ರದಾಸ್ಯತ್ಯಚಲೈಶ್ವರ್ಯಂಸರ್ವಾಧ್ಯಕ್ಷಃಸತಾಂಗತಿಃ ॥೧೩೨॥

॥ ಇತಿ ಶ್ರೀ ತ್ರಿಪುರಸಂಹಾರೋನಾಮ ಚತುರ್ದಶೋಧ್ಯಾಯಃ ॥

॥ ಶ್ರೀ ಶ್ರೀ ಶ್ರೀ ॥

ನೋ ಅವನು ಮೃತ್ಯುವಿನ ಬಂಧವನ್ನು ಜಯಿಸುವನು ॥ ೧೩೧ ॥ ಸರ್ವಾಧ್ಯಕ್ಷನಾದ ಸಾಧುಗಳಿಗೆ ಆಶ್ರಯನಾದ ಆ ಪರಮಾತ್ಮನು ಈ ಚರಿತ್ರೆಯನ್ನು ಕೇಳಿದವನಿಗೆ ಇಷ್ಟಾರ್ಥದಾಯಕನಾದ ತನ್ನಲ್ಲಿ ವಿಶ್ವಾಸವನ್ನು ಅವನ ಅಭಿಪ್ರಾಯದಂತೆ ಕರುಣಿಸುವನು ॥ ೧೩೨ ॥ ಈ ಪ್ರಕಾರವಾಗಿ ಸ್ಕಂದಪುರಾಣದಲ್ಲಿ ತುಂಗಭದ್ರಾ ಖಂಡದಲ್ಲಿ ಶ್ರೀ ಕಲಶೇಶ್ವರ ಸ್ವಾಮಿಯವರ ಮಹಿಮೆಯಲ್ಲಿ ಪ್ರಸನ್ನವಾಗಿ ಬಂದ ತ್ರಿಪುರಾಖ್ಯಾನವೆಂಬ ಹದಿನಾಲ್ಕನೆಯ ಅಧ್ಯಾಯವು ಸಂಪೂರ್ಣವಾದುದು.

ಟೀಕಾಯಾಂ ಕನ್ನಡಾಖ್ಯಾಯಾಂ ರಾಮಜೋಯಿಸ ಶರ್ಮಣಾ॥
ಚತುರ್ದಶೋಭೂತ್ಸಂಪೂರ್ಣೋಮಯಾಧ್ಯಾ
ಯೋಧುನಾಮುದಾ ॥ ಶ್ರೀ ॥ ಶ್ರೀ ॥



ಸರ್ವಾಂಗ ಸುಂದರಿ

॥ ಶ್ರೀ ಸೂತಃ ॥ ಅಥದೇವಾಮಹಾದೇವಂವಿಮಾನೇಸ್ವರ್ಣ
ಶೋಭಿತೇ ॥ ವೃಷಸ್ಕಂಧಸ್ಥಿತಂಶಂಭುಂಫಲೈಃಪುಷ್ಪೈರಪೂಜ
ಯನ್ ॥ ೧ ॥ ತತಃಪ್ರದೋಷಸಮಯೇಪ್ರದೀಪಾವಳಿಭಿಸ್ತದಾ ॥
ಆಕಾಶದೀಪೈರ್ವಿಶ್ವೇಶಂಪೂಜಯಾಮಾಸುರಾದರಾತ್ ॥ ೨ ॥
ಮುನಯೋದೇವತಾಃಸ್ಕಂಧೇತದ್ವಿಮಾನಂದಧುರ್ಮುದಾ॥ಪುರತೋ
ದೇವಗಂಧರ್ವಾಸ್ತಾಳಸಂಗೀತಶೋಭಿತಾಃ ॥೩॥ ನೃತ್ಯದ್ಭಿರಪ್ಸರಃ
ಸಂಘೈರ್ವಾದ್ಯಘೋಷೈರ್ಮನೋಹರೈಃ ॥ ಮೂರ್ತಿಮದ್ಭಿಶ್ಚತು
ರ್ವೇದೈಃಸ್ವರ್ಣವೇತ್ರಧರೈಃಸುರೈಃ ॥ ೪ ॥ ಸಹಿತಾಃಪ್ರಯಯುಃಸ
ರ್ವೇಸ್ತುವಂತಃಕಲಶೇಶ್ವರಂ ॥ ಉತ್ತರಾಭಿಮುಖಾದೇವಾನಾಗ

೧೫ನೆಯ ಅಧ್ಯಾಯ ಪ್ರಾರಂಭ.

ಸೂತಪೌರಾಣಿಕನು ಋಷಿಗಳನ್ನು ಕುರಿತು ಹೇಳುತ್ತಾನೆ. ಋಷಿಗಳಿರಾ, ಆಮೇಲೆ ವಸಿಷ್ಠ ತೀರ್ಥದ ದಡದಲ್ಲಿ ಸೇರಿದ ಸಮಸ್ತ ದೇವತೆಗಳೂ ವೃಷಭನಿಂದ ಶೋಭಿತವಾದ ಭಂಗಾರದ ವಿಮಾನದಲ್ಲಿ ಮಹಾದೇವನಾದ ಶ್ರೀಕಲಶೇಶ್ವರನನ್ನು ಬಿಜಯಂಗೈಸಿ ಫಲ ಪುಷ್ಪಗಳಿಂದ ಪೂಜಿಸಿದರು ॥ ೧ ॥ ಅನಂತರ ಪ್ರದೋಷಕಾಲವು ಬರುತ್ತಲೆ ದೀಪಮಾಲೆಗಳಿಂದಲೂ ಆಕಾಶದೀಪಗಳಿಂದಲೂ ಶ್ರೀಜಗದೀಶ ನನ್ನು ಪ್ರೀತಿಪೂರ್ವಕವಾಗಿ ಸೇವಿಸಿದರು ॥ ೨ ॥ ಹೀಗೆ ಪೂಜಿಸಿ ಆಮೇಲೆ ದೇವತೆಗಳೂ ಋಷಿಗಳೂ ಸಂತೋಷದಿಂದ ಆ ವಿಮಾನವನ್ನು ಹೊತ್ತುಕೊಂಡರು. ಮುಂದುಗಡೆಯಲ್ಲಿ ತಾಳಸಂಗೀತಶೋಭಿತ ರಾದ ದೇವಗಂಧರ್ವರು ॥ ೩ ॥ ನಾಟ್ಯವಾಡುವ ಅಪ್ಸರಸ್ಸಮೂಹಗ ಳಿಂದ ಮನೋಲ್ಲಾಸಗಳಾದ ಅನೇಕ ವಾದ್ಯಧ್ವನಿಗಳಿಂದಲೂ ಆಕಾರ ವನ್ನು ಧರಿಸಿದ ನಾಲ್ಕು ವೇದಗಳಿಂದಲೂ, ಚಿನ್ನದ ಕೋಲನ್ನು ಹಿಡದುಕೊಂಡ ದೇವತೆಗಳಿಂದಲೂ ॥ ೪ ॥ ಕೂಡಿದವರಾಗಿ ಅಲ್ಲಿಂದ ಉತ್ತರಾಭಿಮುಖವಾಗಿ ನಾಗತೀರ್ಥದ ಸಮೀಪವಾಗಿ ಶ್ರೀಕಲ

ತೀರ್ಥಸಮೀಪತಃ ॥ ೫ ॥ ಶ್ರೀರಾಮಾದ್ರಿಂಸಮಾರುಹ್ಯಸಂತುಷ್ಟಾ
ವಿವಿಶುಸ್ತಟೇ ॥ ಚಕ್ರುರ್ವಿಭವತಃಪೂಜಾಂವನ್ಯೈಃಪುಷ್ಪಫಲಾದಿ
ಭಿಃ ॥ ೬ ॥ ಪೂಜಿತಃಕಲಶೇಶಸ್ತುತತ್ತೀರ್ಥತಟಸಂಶ್ರಿತಾನ್ ॥
ಪ್ರೋವಾಚಗಿರಿಜಾಕಿಂತುಶ್ರುತಾದೃಷ್ಟಾಮುನೀಶ್ವರಾಃ ॥ ೭ ॥
ಇತ್ಥಂಪ್ರಕುರ್ವತಃಪ್ರಶ್ನಂಕಲಶೇಶಸ್ಯನಾರದಃ ॥ ರಣಯನ್ಮಹ
ತೀಂವೀಣಾಮಾಜಗಾಮಯದೃಚ್ಛಯಾ ॥ ೮ ॥ ತ್ರಿಪುಂಡ್ರವಿಲಸ
ತ್ಫಾಲೋಕಂಠೇರುದ್ರಾಕ್ಷಭೂಷಣಃ॥ ವಿವೃಣ್ವನ್ನಕ್ಷಮಾಲಾಂಚಶಿವ
ನಾಮಾನಿಕೀರ್ತಯನ್ ॥ ೯ ॥ ತತಉತ್ಥಾಯತೇಸರ್ವೇದೇವಾಭಗ
ವತಾಸಹಾ ॥ ಪ್ರತ್ಯುದ್ಗಮ್ಯಾರ್ಚಯಾಮಾಸುರ್ಮಧುಪರ್ಕಾದಿ

ಶೇಶ್ವರನನ್ನು ಸ್ತುತಿಸುತ್ತ ನಡೆದರು ॥ ೫ ॥ ಹಾಗೆ ಶ್ರೀರಾಮಗಿರಿ
ಯನ್ನು ಸೇರಿ ಸಂತೋಷಚಿತ್ತರಾಗಿ ಆ ಪರ್ವತದ ದಡದಲ್ಲಿ ವಿಶ್ರಮಿಸಿ
ಕೊಳ್ಳುತ್ತಿದ್ದರು. ಹೀಗಿರುವಾಗ ಆ ಸಮೀಪದಲ್ಲಿರುವ ಅಂಬಾತೀರ್ಥ
ತೀರವಾಸಿಗಳಾದ ಋಷಿಗಳು ಚಿತ್ತೈಸಿದ ಶ್ರೀ ಕಲಶೇಶ್ವರನನ್ನು ವನೋ
ತ್ಪನ್ನಗಳಾದ ಪುಷ್ಪಫಲಾದಿಗಳಿಂದ ವಿಧವಿಧವಾಗಿ ಪೂಜೆಯನ್ನು ಮಾಡಿ
ದರು ॥ ೬ ॥ ಪೂಜಿಸಿಕೊಂಡ ಶ್ರೀ ಕಲಶೇಶ್ವರನು ಋಷಿಗಳಿರಾ,
ಗಿರಿಜಾದೇವಿಯನ್ನು ಯಲ್ಲಿಯಾದರೂ ಕಂಡಿದ್ದಿರಾ ಕೇಳಿದ್ದುಂಟೆಎಂದು
ಆ ತೀರ್ಥದ ತೀರವಾಸಿಗಳಾದ ಋಷಿಗಳನ್ನು ಕುರಿತು ಮಾತನಾಡಿದ
ನು ॥ ೭ ॥ ಹೀಗೆ ಮಾತನಾಡುತ್ತಿರುವ ಶ್ರೀ ಕಲಶೇಶ್ವರನ ಸಮ್ಮು
ಖವಾಗಿ ಸ್ವೇಚ್ಛೆಯಿಂದ ಮಹತಿಯೆಂಬ ವೀಣೆಯನ್ನು ನುಡಿಸು
ತ್ತ ॥ ೮ ॥ ತ್ರಿಪುಂಡ್ರದಿಂದ ಅಲಂಕೃತವಾದ ಹಣೆಯುಳ್ಳವನಾಗಿ, ಕಂಠ
ದಲ್ಲಿ ರುದ್ರಾಕ್ಷಮಾಲೆಯಿಂದೊಪ್ಪುವನಾಗಿ, ಶಿವಶಿವ ಎಂಬ ನಾಮಗಳನ್ನು
ಪಠಿಸುತ್ತ, ಜಪಸರದ ಮಣಿಯನ್ನು ಎಣಿಸುತ್ತ ನಾರದಋಷಿಯು
ಬಂದನು ॥ ೯ ॥ ಆ ಕ್ಷಣವೇ ಸಮಸ್ತ ದೇವತೆಗಳೂ ಶ್ರೀ ಭಗವಂತೆ
ನಿಂದ ಸಹಿತವಾಗಿ ಎದ್ದು ಎದುರಾಗಿ ಬಂದು ಆ ಋಷಿಯನ್ನು ಪಾದ್ಯಾ

ಭಿರ್ಮುನಿಂ ॥ ೧೦ ॥ ಸುಖಾಸೀನಂಮುನಿಂಶ್ರೀಮಾನ್ಕಲಶೇಶಸ್ತ
ಮಬ್ರವೀತ್ ॥ ಧನ್ಯೋಽಸ್ಮಿದರ್ಶನಾದ್ಬ್ರಹ್ಮನ್ಸಹವಿಷ್ಣುಮುಖ್ಯೈಃ॥
ಸುರೈಃ ॥ ೧೧ ॥ ವಿಶೇಷತಸ್ತೇಚರಣತೀರ್ಥಸಂಮಾರ್ಜನಾನ್ಮನೇ॥
ತವಾಗಮನಜೇನಾದ್ಯಹರ್ಷೇಣಮುನಿಪುಂಗವ ॥ ೧೨ ॥ ಚಿತ್ತಂ
ಚೇತಯತೇಪ್ರಷ್ಟುಂಸರ್ವಜ್ಞಂತ್ವಾಂಹಿಸರ್ವಸಂ ॥ ನವೋಢಾಗಿ
ರಿಜಾಕಿಂತುದೃಷ್ಟಾವಾಶ್ರುತಿಗೋಚರಾ ॥ ೧೩ ॥ ವದಸ್ವಕೃಪಯಾ
ವಿಪ್ರಮಯಿತ್ವಂಭಕ್ತಿಮಾನಸಿ ॥ ಇತಿತದ್ವಚನಂಶ್ರುತ್ವಾನತ್ವಾತಂ
ಚಂದ್ರಶೇಖರಂ ॥ ೧೪ ॥ ಉವಾಚಪ್ರಹಸನ್ದೇವಮುಮಾಪತಿಮ
ನಾಮಯಂ ॥ನಾರದಃ॥ ಸರ್ವಜ್ಞಭಗವನ್ಶಂಭೋತ್ರಿಪುರಘ್ನ

ರ್ಘ್ಯಮಧುಪರ್ಕಾದಿಗಳಿಂದ ಪೂಜಿಸಿದರು ॥ ೧೦ ॥ ಹೀಗೆ ಪೂಜಿಸಿ
ಕೊಂಡು ಸುಖವಾಗಿ ಕುಳಿತುಕೊಂಡ ಆ ಋಷಿಯನ್ನು ಕುರಿತು
ಬ್ರಹ್ಮಜ್ಞಾನಿಯೇ! ನಿನ್ನ ದರ್ಶನದೆಸೆಯಿಂದ ಮಹಾ ವಿಷ್ಣು ಮೊದ
ಲಾದ ದೇವತೆಗಳಿಂದ ಸಹಿತನಾಗಿ ನಾನು ಧನ್ಯನಾದೆನು ॥ ೧೧ ॥
ಮತ್ತು ಅತಿಶಯವಾದ ನಿನ್ನ ಚರಣತೀರ್ಥ ಮಾರ್ಜನೆ ಮಾಡಿಕೊಳ್ಳೋ
ಣವರ ದೆಸೆಯಿಂದ ನಾನು ಕೃತಾರ್ಥನಾದೆನು ॥ ೧೨ ॥ ಋಷಿ
ಶ್ರೇಷ್ಠನೇ ನಿನ್ನ ಬರುವಿಕೆಯಿಂದುಂಟಾದ ಆನಂದದಿಂದ ಈಗ
ಸರ್ವತ್ರ ಗಮನಶಾಲಿಯಾದ ಸರ್ವವನ್ನೂ ಬಲ್ಲ ನಿನ್ನನ್ನು ಕೇಳಲು
ನನ್ನ ಮನಸ್ಸು ಕುತೂಹಲಪಡುತ್ತಿದೆ ॥೧೩॥ ಮದವಣಿಗಿತ್ತಿ ಯಾದ
ಪಾರ್ವತೀದೇವಿಯು! ನಿನ್ನಿಂದ ನೋಡಲ್ಪಟ್ಟಿದ್ದಾಳೆಯೋ? ಅಥವಾ ಕೇಳ
ಲ್ಪಟ್ಟಿದ್ದಾಳೆಯೋ? ಏನು? ನೀನು ನನ್ನಲ್ಲಿ ಭಕ್ತಿಯುಳ್ಳವನಾಗಿದ್ದಿ.
ಎಲೈ ಬ್ರಾಹ್ಮಣನೇ! ಅನುಗ್ರಹವಿಟ್ಟು ಹೇಳು ಎಂದು ಕೇಳಿದನು ॥೧೪॥
ಈ ಪ್ರಕಾರವಾಗಿ ಆ ಕೆಳಶೇಶ್ವರನ ಮಾತನ್ನು ಕೇಳಿ ಚಂದ್ರಾರ್ಧಭೂ
ಷಿತನಾದ. ಯಾವ ದುರ್ಗುಣವೂ ಇಲ್ಲದ ಪಾರ್ವತೀಪತಿಯಾದ ಪ್ರಕಾಶಿ
ಸುವ ಶ್ರೀ ಕೆಳಶೇಶ್ವರನನ್ನು ನೋಡಿ ಸ್ವಲ್ಪ ನಗುವವನಾಗಿಮಾತನಾಡಿ
ದನು. ನಾರದನು ಸರ್ವಜ್ಞನಾದ, ಸುಖದಾಯಕನಾದ, ತ್ರಿಪುರಸಂಹಾರಿ

ಮಹೇಶ್ವರ ॥೧೫॥ ಶ್ರುತಿಗಮ್ಯಂಮಹತ್ವಂತೇಕೋವೇತ್ತಿಜಗತೀ
ತಳೇ ॥ ಕಿಂವರ್ಣಯೇತವವಿಭೋಯದುದೀರಿತೋಸುಸ್ಸಂಸ್ಪಂದ
ತೇತಮನುವಾಙ್ಮನಇಂಧ್ರಿಯಾಣಿ ॥ ೧೬ ॥ ಸ್ಪಂದಂತಿವೈತನು
ಭೃತಾಂಭಗವನ್ಮಹೇಶಸ್ವಸ್ಯಾನ್ಯಥಾಪಿ ಭಜತಾಮಸಿಭಾವಬಂಧುಃ ॥
ಮೂರ್ತಿರ್ವಿಭೋಭಗವತೋಭಗವಂಸ್ತ್ರಿಲೋಕ್ಯಾಃ ಕ್ಷೇಮಾಯತಾ
ಪವಿರಮಾಯಚಮೃತ್ಯುಜಿತ್ಯೈ॥೧೭॥ ನಾನಾಭಿಭಿಷ್ಯರ್ವಿತುಮನ್ಯ
ತನೂರ್ಯಥೇದಂದೃಷ್ಟ್ವಾಪುನರ್ಗ್ರಸಸಿಸರ್ವಮಿವೋರ್ಣನಾಭಿಃ ॥
ತಸ್ಯಾವಿತುಃ ಸ್ಥಿರಚರೇಶಿತುರಂಘ್ರಿಮೂಲಂಯತ್ರಸ್ತಕರ್ಮಗು

ಯಾದ ಸರ್ವಸ್ವಾಮಿಯಾದ ಶ್ರೀ ಭಗವಂತನೆ!॥೧೫॥ವೇದಗೋಚರವಾದ
ನಿನ್ನ ಅಪಾರ ಮಹಿಮೆಯನ್ನು ಈ ಭೂಲೋಕದಲ್ಲಿ ಯಾವಾತನು
ತಿಳಿದಿರುವನು ॥ ೧೬ ॥ ಎಲೈ ? ಜ್ಞಾನದಾಯಕನೆ! ನಿನ್ನ ಮಹಿಮೆ
ಯನ್ನು ಎಷ್ಟೆಂದು ವರ್ಣಿಸಲಿ. ಯಾವನಿನ್ನಿಂದ ಪ್ರೇರಿತವಾದ ಜೀವವು,
ಶರೀರಗಳನ್ನು ಹೊಂದಲು ಶಕ್ತವಾಗುವದು. ಆ ಜೀವವನ್ನಾಶ್ರಯಿಸಿ
ನುಡಿಯುವ ಮನಸ್ಸೂ ಇಂದ್ರಿಯಗಳೂ ಚಲಿಸುವುವು. ನಿನ್ನಂಗ
ವಾದರೂ; ಈ ಜೀವವೇ ಹೀಗಿದೆ. ಹಾಗಾದರೂ ಭಜಿಸುವ ಭಕ್ತರ
ಮನಸ್ಸಿಗೆ ಬಂಧುವಾಗಿದ್ದಿ ॥ ೧೭ ॥ ತತ್ವೋಪದೇಶಿಯಾದ ಭಗವಂ
ತನೇ! ನಿನ್ನ ಮಹಿಮೆಯಿಂದ ಕಲ್ಪಿತಗಳಾದ ಅನೇಕ ಪ್ರಕಾರಗಳಾದ
ಶರೀರಗಳನ್ನು ಮೂರು ಲೋಕಗಳ ಕ್ಷೇಮಕ್ಕೋಸ್ಕರವೂ, ಕಷ್ಟದ
ಆಯಾಸವನ್ನು ಹೋಗಿಸಿಕೊಳ್ಳುವದಕ್ಕೋಸ್ಕರವೂ ಮೃತ್ಯುವನ್ನು
ತೊಲಗಿಸಿಕೊಳ್ಳುವುದಕ್ಕೋಸ್ಕರವೂ ಧರಿಸುತ್ತಿದ್ದೀಯೆ. ಇಂಥವುಗಳಲ್ಲಿ
ಒಂದು ಶರೀರದಿಂದ ಮತ್ತೊಂದಾದ ಶರೀರವನ್ನು ಕಾಪಾಡುವುದಕ್ಕೋ
ಸ್ಕರ ಜಾಡವು ತಾನೇ ಬಲೆಯನ್ನು ಹರಡಿಕೊಂಡು, ತಾನೇ ಯಜಮಾ
ನನಾಗಿ ಆಟವಾಡಿ, ಸಮಯೋಚಿತ ಅದನ್ನೆಲ್ಲ ತಾನೇ ತಿಂದು ಸ್ವಸ್ಥವಾಗಿ
ರುವುದೋ,ಅದರಂತೆಯೇ ನೀನೂ ನಟಿಸುತ್ತಿದ್ದೀಯೇ ॥೧೮॥ ವೇದದ
ಅರ್ಥದಲ್ಲಿ ನಿಪುಣರಾದ ಋಷಿಗಳು ಯಾವ ಸ್ಥಾವರ ಜಂಗಮಾತ್ಮಕ

ಃಕಾಲರುಜಸ್ಸ್ಪೃಶಂತಿ॥ಯದ್ವೈಸ್ತ್ವಂತಿವಿನಮಂತಿಯಜಂತ್ಯಭೀಕ್ಷ್ಣಂಧ್ಯಾಯಂತಿವೇದಹೃದಯಾಮುನಯಸ್ತದಾಪ್ತ್ಯೈ ॥ ೧೯ ॥ ನಾನ್ಯಂತವಾಂಘ್ರ್ಯುಪನಯಾದಪವರ್ಗಮೂರ್ತೇಃ ಕ್ಷೇಮಂಜನಸ್ಯ ಪರಿತೋಭಿಯಈಶವಿದ್ಮಃ ॥ ಬ್ರಹ್ಮಾಬಿಭೇತ್ಯಲಮತೋದ್ವಿಪರಾರ್ಧಧಿಷ್ಣ್ಯಃಕಾಲಸ್ಯತೇಕಿಮುತತತ್ಕೃತಭೌತಿಕಾನಾಂ ॥ ೨೦ ॥ ತ್ವದ್ವೈಭವಾನ್ಯೃತಧಿಯಸ್ತ್ವಪಾದಮೂಲಂ ಹಿತ್ವೈದವಾತ್ಮಭವಿಮಾತ್ರಗುರೋಃಪರಸ್ಯ॥ ದೇಹಾದ್ಯಪಾರ್ಥಮಸದಂತ್ಯಮಭಿಜ್ಞಮಾತ್ರಂ ವಿಂದೇಮತೇನಹಿಮನೀಷಿಷುಖೇಪ್ಸಿತಾರ್ಥಂ॥೨೧॥ ಸತ್ವಂರಜಸ್ತಮ ಇತೀಶತವಾತ್ಮಬಂಧೋಮಾಯಾಮಯಾಃ ಸ್ಥಿತಿಲಯೋದಯಹೇತ

ವಾದ, ಪ್ರಪಂಚ ಪ್ರೇರಕನಾದ, ಪರಮಾತ್ಮನನ್ನು ನಿತ್ಯದಲ್ಲಿಯೂ ಆ ಕೈವಲ್ಯವನ್ನು ಹೊಂದುವದಕ್ಕೋಸ್ಕರ ನಮಸ್ಕರಿಸಿ ಯೋಗಿಸಿ, ಧ್ಯಾನಿಸುವರೋ ಅಂಥಾ ಸ್ಥಾವರ ಜಂಗಮಾರಕ್ಷನಾದ ದೇವನ ಚರಣಸಾನ್ನಿಧ್ಯವನ್ನು, ಕರ್ಮಗುಣಕಾಲಗಳೆಂಬ ರೋಗವ್ಯಾಪ್ತರಾದವರು ಭಜಿಸುವುದಿಲ್ಲ ॥ ೧೯ ॥ ಎಲೈ ಜಗತ್ಸ್ವಾಮಿಯೇ! ಯಾವ ನಾವು ಮೋಕ್ಷಸ್ವರೂಪನಾದ ನಿನ್ನ ಚರಣಾಶ್ರಯದ ದೆಸೆಯಿಂದ ಬೇರೆ ಯಾವ ಕ್ಷೇಮವನ್ನೂ ತಿಳಿಯಲಿಲ್ಲ. ದ್ವಿಪರಾರ್ಧವೆಂಬ ದೀರ್ಘಕಾಲ ಜೀವಿಯಾದ ಬ್ರಹ್ಮದೇವನಾದರೂ, ಮಹಾ ಕಾಲಸ್ವರೂಪನಾದ ನಿನ್ನ ಮಹಿಮೆಯಿಂದ ಭಯವನ್ನು ಹೊಂದುತ್ತಲಿದ್ದಾನೆ. ಹೀಗಿರುವಲ್ಲಿ ಆ ಬ್ರಹ್ಮನಿಂದ ಸೃಷ್ಟಗಳಾದ ಪ್ರಾಣಿಗಳ ಪಾಡನ್ನು ಏನೆಂದು ಹೇಳಬೇಕು॥೨೦॥ ಎಲೈ ಶ್ರೀ ಕಲಶೇಶ್ವರನೆ! ಸತ್ಯದಲ್ಲಿಯೇ ಬುದ್ಧಿಯುಳ್ಳ ನಾವು ವ್ಯರ್ಥವಾದ, ಸತ್ಯವಲ್ಲದ, ನಿಂದ್ಯವಾದ, ಗುರುತುಮಾತ್ರವಾದ, ಶರೀರಾದ್ಯಭಿಮಾನವನ್ನು ಬಿಟ್ಟು, ಸರ್ವೋತ್ತಮನಾದ, ತನಗೆ ತಾನೆ ಗುರುವಾದ ನಿನ್ನ, ಚರಣಾಶ್ರಯವನ್ನು ಭಜಿಸುವೆವು. ನಿನ್ನ ಅನುಗ್ರಹದಿಂದ ಸಕಲ ಇಷ್ಟಾರ್ಥವನ್ನೂ ಹೊಂದುವೆವು ॥ ೨೧ ॥ ಎಲೈ ಆತ್ಮಬಂಧುವೇ ! ಪರಮಾತ್ಮನೆ ! ನಿನ್ನ ಮಾಯಾವಿಕಾರಗಳಾದ ಸತ್ವರಜಸ್ತಮ ಸ್ವರೂ

ವ್ರೋಸ್ಯ ॥ ಲೀಲಾಧೃತಾಯುದಪಿಸತ್ವಮಯಾಪ್ರಶಾಂತ್ಯೈ ನಾನ್ಯೇಷು ಣಾಂವ್ಯಸನಮೋಹಭಿಯಶ್ಚಯಾಭ್ಯಾಂ॥೨೨॥ ತಸ್ಮಾತ್ತವೇಹಭಗವನ್ನಥತಾವಕಾನಾಂಶುಕ್ಲಾಂತನುಂಸ್ವದಯಿತಾಂಕುಶಲಾಭಜಂತಿ॥ಯತ್ಸಾತ್ವತಾಃ ಪುರುಷರೂಪಮುಶಂತಿಸತ್ವಂಲೋಕೋಯತೋಭಯಮುತಾತ್ಮಸುಖಂನಚಾನ್ಯತ್ ॥ ೨೩ ॥ ತಸ್ಮೈನಮೋಭಗವತೇಪುರುಷಾಯಭೂಮ್ನೇ ವಿಶ್ವಾಯ ವಿಶ್ವಗುರುವೇ ಪರದೈವತಾಯ ॥ ಸರ್ವೇಶ್ವರಾಯುಮುನಯೇ ಗಿರಿಜೇಶ್ವರಾಯ ಹಂಸಾಯ ಸಂಯಶಗಿರೇನಿಗಮೇಶ್ವರಾಯ ॥೨೪॥ ಯಂವೈನವೇದವಿತಥಾಕ್ಷಪಥೈರ್ಭ್ರ

ಮೆಗಳು, ಈ ಜಗತ್ತಿಗೆ ಬದುಕುವುದು, ಲಯವಾಗುವುದು, ಸೃಷ್ಟಿಯಾಗುವುದು ಎಂಬವುಗಳಿಗೆ, ಕಾರಣಗಳಾಗಿರುವವು. ಮಾಯಾವಿಲಾಸಮಾತ್ರದಿಂದ ಧರಿಸಿದಂಥವುಗಳಾಗಿವೆ. ಆದರೂ ಇವುಗಳಲ್ಲಿ, ಮನುಷ್ಯರಿಗೆ ಸತ್ವಮೂರ್ತಿಯು ಸುಖಪ್ರಾಪ್ತಿಗೋಸ್ಕರ ಕಾರಣವಾಗಿರುವದು. ಬೇರೆಯವುಗಳಿಂದ ಸುಖವು ಲಭಿಸಲಾರದು. ಉಳಿದ ರಜಸ್ತಮಗಳಿಂದ ವ್ಯಸನವು, ಅಜ್ಞಾನವು, ಭೀತಿಯು, ಉಂಟಾಗುವುದು ॥ ೨೨ ॥ ಅನಂತರ ಎಲೈ ಭಗವಂತನೇ! ಸಾತ್ವಿಕ ಪುರುಷರು ಯಾವ ಕಾರಣದ ದೆಸೆಯಿಂದ, ಈಗ ನಿನ್ನ ರೂಪುಗಳ ಮಧ್ಯದಲ್ಲಿ ಶ್ವೇತವರ್ಣವಾದ, ಇಷ್ಟಪ್ರದವಾದ ಶರೀರವನ್ನು ವಿಚಾರಕರ್ತರಾಗಿ ಭಜಿಸುವರು ಮತ್ತು ಅದನ್ನೇ ಪುರುಷಾಕಾರವಾದ ಸತ್ವರೂಪವೆನ್ನುವರು. ಅದರ ದೆಸೆಯಿಂದಲೇ ಜೀವಲೋಕವು ಮೊದಲು ಲೋಕದ್ವಯ ಸುಖವನ್ನೂ ಆಮೇಲೆ ತಾದಾತ್ಮ್ಯಸುಖವನ್ನೂ ಹೊಂದುವರು ಅಜ್ಞಾನದ ಕಷ್ಟವನ್ನು ಹೊಂದುವುದಿಲ್ಲ ॥ ೨೩ ॥ ಅಂಥ ಭಗವಂನಾದ, ಪುರುಷಾಕಾರನಾದ, ಪೂರ್ಣನಾದ, ಜಗದ್ರೂಪನಾದ, ಜಗತ್ಪ್ರೇರಕನಾದ, ಪರಮಾತ್ಮನಾದ, ಸರ್ವಶಕ್ತಿ ಒಡೆಯನಾದ, ಮನನಶೀಲನಾದ, ಪಾರ್ವತೀಪ್ರಾಣಕಾಂತನಾದ, ಸೋಹಂಭಾವನಾದ, ಮಿತವಾದ ಪ್ರಮಾಣವಾಕ್ಯವುಳ್ಳ, ವೇದವೇದ್ಯನಾದ ನಿನಗೋಸ್ಕರ ನಮಸ್ಕಾರವು ॥ ೨೪ ॥ ನಿನ್ನಿಂದಲೇ ಹುಟ್ಟಿರುವ, ನಿನ್ನ ಮಾಯೆಯಿಂದ ವ್ಯಾಪಿಸಿದ

ಮದ್ರಿನ್ನೀಃಸಂತಂಸ್ವಖೇಷ್ವಸುಷುಹೃದ್ಯಪಿ ದೃಕ್ಪಥೇಷು ॥ ತಸ್ಮಾಯ ಯಾವೃತಮತಿಃ ಖಲುಯಶ್ಚ ಸಾಕ್ಷಾದಾದಿಶ್ಯತೇಽಖಿಲಗುರೋರುಪಸಾದ್ಯವೇದಂ ॥ ೨೫ ॥ ಯದ್ದರ್ಶನಂನಿಗಮಆತ್ಮರಹಃ ಪ್ರಕಾಶಂ ಮುಹ್ಯಂತಿಯತ್ರಕವಯೋಽಜಪರಾಯತಂತಃ ॥ ತಂಸರ್ವವಾದವಿಷಯಪ್ರತಿರೂಪಶೀಲಂ ವಂದೇಮಹಾಪುರುಷಮಾತ್ಮ ನಿಗೂಢಬೋಧಂ ॥ ೨೫ ॥ ಅಥಾಪಿಭಗವನ್ ಶಂಭೋತ್ವದ್ವಾಗಮೃತಯಂತ್ರಿತಃ॥ ವಕ್ಷ್ಯೇಶ್ರುತಿಗತಾಂದೇವೀಂ ಸಚ್ಚಿದಾನಂದ ರೂಪಿಣೀಂ ॥ ೨೬ ॥ ಯಾಂನಜಾನಂತಿವಿಬುಧಾಃಸ್ವರ್ಗಸ್ಥಾ ಅಪಿಸರ್ವದಾ ॥ ತ್ವನ್ನಿಷ್ಠಾಂ ತಧಿಯಂದೇವಗಿರಿಜಾಖ್ಯಂಜಗನ್ಮಯೀಂ ॥ ೨೭ ॥ ಪಶ್ಯನ್ನಪಿದ

ಬುದ್ಧಿಯುಳ್ಳ, ನೀನೇ ಅವನಾದ, ಆದಿಪುರುಷನಾದ, ಚತುರ್ಮುಖನಾದ ಬ್ರಹ್ಮದೇವನು! ಇಂದ್ರಿಯಮಾರ್ಗದಿಂದ ಭ್ರಮಿಸಿದ ಬುದ್ಧಿಯುಳ್ಳವನಾಗಿ,ತನ್ನ ಇಂದ್ರಿಯಗಳೂ ಪ್ರಾಣಗಳೂ ಹೃದಯವೂ ದೃಷ್ಟಿಗೆ ಕಂಡ ವಸ್ತುಗಳು ಇವುಗಳಲ್ಲಿ ವ್ಯಾಪಿಸಿರುವ ಯಾವ ನಿನ್ನನ್ನು ತಿಳಿಯಲಿಲ್ಲವೋ ಅಂಥ ಸಕಲ ಗುರುವಾದ, ನಿನ್ನ ದೆಸೆಯಿಂದ ವೇದರೂಪವಾದ ಜ್ಞಾನವನ್ನು ಪಡೆದು ಅನಂತರ ತಿಳಿದನೋ ಅಂಥಾ ನಿನ್ನನ್ನು ಯಾರು ಸಂಪೂರ್ಣವಾಗಿ ತಿಳಿಯಬಲ್ಲರು ॥ ೨೫॥ ವೇದವು ಕೂಡ ಅಂತರಂಗ ಜ್ಯೋತಿಯೆಂಬ ನಿನ್ನ ದರ್ಶನವನ್ನು ಯಾವಾಗಲೂ ಅಪೇಕ್ಷಿಸುತ್ತದೆಯೋ ಬ್ರಹ್ಮದೇವನೇ ಮೊದಲಾದ ಸಮಸ್ತದೇವತೆಗಳೂ ಯಾವ ನಿನ್ನಲ್ಲಿ ಪ್ರಯತ್ನಿಸಿದವರಾದರೂ ತುದಿಮೊದಲು ಕಾಣದೆ ಭ್ರಮಿಸುವರೊ ಅಂಥಾ ಸಕಲ ಮೀಮಾಂಸ ಪ್ರಸಂಗಕ್ಕೂ ಪ್ರತಿ ಆಕಾರ ಸ್ವಭಾವನಾದ ತನ್ನಲ್ಲಿಯೇ ತುಂಬಿರುವ ಎಚ್ಚರಿಕೆಯುಳ್ಳ, ಪರಮ ಪುರುಷನಾದ ನಿನ್ನನ್ನು ನಮಸ್ಕರಿಸುವೆನು ॥ ೨೬ ॥ ಹಾಗಾದರೂ ಜ್ಞಾನಾದಿ ಸುಖಪ್ರದನಾದ ಶ್ರೀ ಭಗವಂತನೆ ನಿನ್ನ ವಾಕ್ಯವೆಂಬ ಅಮೃತಾಸ್ವಾದಿಯಾದ ನಾನು, ನಿನ್ನ ಆಜ್ಞಾನುಸಾರವಾಗಿ, ಜ್ಞಾನ ಸಂತೋಷರೂಪಳಾದ, ವೇದಮಯಳಾದ ಶ್ರೀದೇವಿಯನ್ನು ಕುರಿತು ಹೇಳುತ್ತಿದ್ದೇನೆ॥ ೨೭ ॥ ಎಲೈ ದೇವನೇ! ನಿನ್ನಲ್ಲಿಯೇ ನೆಲೆಗೊಂಡಿ

ದರ್ಶನಾಂನವಾಚಂಚಶುಶ್ರೂಣೋವಿ:ಚ ॥ ದೀನಾಂತ್ವಯ್ಯೇವ ವಿಶ್ವೇಶನವೊಢಾಂಪೋನಚಾಂವಿಭೋ ॥ ೨೮ ॥ ತಥಾಪಿತ್ವತ್ಸಹಾಯೇನರೂಪಿಣೀ ಜಗದಂಬಿಕಾ ॥ ಸೇವಿತಾಬಂಧುನಿಚಯೈಶ್ಚಂದ್ರರೇಖಾಂಚಿತಾಳಿಕಾ ॥೨೯॥ ಸಾಸರ್ವಮಂಗಲೋಪೇತಾಸರ್ವಾಲಂಕಾರಶೋಭಿತಾ ॥ ತ್ವತ್ಪಾದಕಮಲಧ್ಯಾನಪರಾಪರ್ವತನಂದಿನೀ ॥೩೦॥ ಪುರತೋಹಿಮವದ್ಗೇಹೇರತ್ನಮಂಟಪಮಧ್ಯಗೇ ॥ ಸಿಂಹಾಸನೇಸ್ಥಿತಾದ್ರಷ್ಟಾದೇವಸ್ತ್ರೀಭಿಃಸುಸೇವಿತಾ ॥ ೩೧ ॥ ತಾಂಪ್ರಣಮ್ಯಥಯಂದೇವೀಂವಿದ್ಯಾಂಪ್ರಾಣೇಶ್ವರೀಂತತಃ ॥ ಪ್ರೇಷಿತೋಹಂತಯಾದೇವ್ಯಾತತ್ಪಿತ್ರೇಹಸಮಂಗತಃ ॥೩೨॥ ವಾರ್ತಾಂವಿವಕ್ಷುರ್ಭಗವನ್

ರುವ ಬುದ್ಧಿಯುಳ್ಳ ಗಿರಿಜೆಯೆಂದು ಪ್ರಸಿದ್ಧಳಾದ, ಜಗದ್ರೂಪಳಾದ, ಬುದ್ಧಿರೂಪಳಾದ, ಯಾವ ದೇವಿಯನ್ನು ಸ್ವರ್ಗದಲ್ಲಿರುವ ದೇವತೆಗಳಾದರೂ ತಿಳಿಯಲಾರರೋ ॥ ೨೮ ॥ ಮತ್ತು ನೋಡಿದವನಾದರೂ ತಿಳಿಯಲಾರನೋ ಅಂತಹ ಮಾರ್ಗರೂಪಳಾದ ಈ ದೇವಿಯನ್ನು ಕೇಳಿದವನಾದರೂ ಕೇಳಿದಂತಿರಲಾರನು. ಎಲೈ ಜಗದೀಶನೇ! ನಿನ್ನನ್ನೇ ಆಶ್ರಯಿಸಿಕೊಂಡಿರುವ, ಮದವಣಗಿತ್ತಿಯಾದ, ಮೇನಕಾದೇವಿಯ ಮಗಳಾದ ಈ ದೇವಿಯನ್ನು ಹೇಗೆ ತಿಳಿಸಲಿ ॥ ೨೯ ॥ ಹಾಗಾದರೂ ನಿನ್ನ ಸಹಾಯದಿಂದ ಆಕಾರವನ್ನು ಧರಿಸಿದಂಥ ಲೋಕಮಾತೆಯಾದ, ಚಂದ್ರಾರ್ಧದಿಂದ ಸೇರಿರುವ ಹಣೆಯ ಮೇಲ್ಭಾಗದ ಕೂದಲುಳ್ಳ ದೇವಿಯೂ, ಸಕಲ ಮಂಗಲಗಳಿಂದ ಕೂಡಿದವಳಾಗಿ, ಸಮಸ್ತಾಲಂಕಾರ ಶೋಭಿತಳಾಗಿ, ಯಾವಾಗಲೂ ತಂದೆಯಾದ ಪರ್ವತರಾಜನಿಗೆ ಸಂತೋಷವನ್ನು ಕಲ್ಪಿಸುತ್ತಿರುವವಳಾಗಿ, ನಿನ್ನ ಚರಣಕಮಲ ಧ್ಯಾನದಲ್ಲಿ ಆಸಕ್ತಳಾಗಿರುವಳು ॥ ೩೦ ॥ ॥ ೩೧ ॥ ಮುಂದುಗಡೆಯಲ್ಲಿರುವ ಹಿಮವತ್ಪರ್ವತನ ಮನೆಯಲ್ಲಿ ರತ್ನಮಂಟಪದ ಮಧ್ಯೇ ಇರುವ ಸಿಂಹಾಸನದಲ್ಲಿ ಕುಳಿತಿರುವ, ದೇವಸ್ತ್ರೀಯರಿಂದ ಸೇವಿಸಿಕೊಳ್ಳುವ, ಶ್ರೀ ಗಿರಿಜಾದೇವಿಯು, ಕಾಣಿಸಿಕೊಂಡಳು ॥ ೩೨ ॥ ದರ್ಶನರೂಪವಾದ

ಕಲಶೇಶದಯಾನಿಧೇ ॥ ಅನುಜಾನೀಹಿಯುವಯೋಃ ಪ್ರೇಮದರ್ಶನಲಾಲಸಂ ॥ ೩೩ ॥ ಇತಿತದ್ವಚನಂ ಶ್ರುತ್ವಾಪ್ರಾಹಬ್ರಹ್ಮಾದಿಕಾನ್ಸುರಾನ್ ॥ ದೇವರ್ಷೇರ್ವಚನಂಸತ್ಯಮಿತೋಯಾಸ್ಯಾಮಹೇದ್ರುತಂ ॥೩೪॥ ಅನೇನಮುನಿವರ್ಯೇಣಸಹಿತಾಮುನಿಪುಂಗವಾಃ॥ ತಥೇತ್ಯುಕ್ತ್ವಾತುತೇಸರ್ವೇಹರ್ಷೇಣ ಮಹತಾಯುತಾಃ ॥ ೩೫ ॥ ದೇವೇಶೇನಪ್ರೀತಿಮತಾಪ್ರಯಯುರ್ಧೃತವಾಹನಾಃ ॥ ಹಿಮವದ್ರಾಜಭವನಂಕ್ಷಣೇನಪ್ರತಿಪೇದಿರೇ ॥ ೩೬ ॥ ತದಾತೂರ್ಯನಿನಾದೋಭೂದ್ಭೇರೀಕಳಹನಿಸ್ವನೈಃ ॥ ಮಂಗಲೈರ್ವೇದಘೋಷೈಶ್ಚಸ್ತುವ

ಅನುಗ್ರಹವನ್ನು ಪಾಲಿಸಿದ, ಬುದ್ಧಿರೂಪಳಾದ, ಸರ್ವ ಪ್ರಾಣಿಗಳಿಗೂ ಪ್ರೇರಕಳಾದ, ಜ್ಞಾನರೂಪಳಾದ ಆ ದೇವಿಯನ್ನು ನಮಸ್ಕರಿಸಿ ಅವಳಿಂದಲೂ ಅವಳ ತಂದೆಯಿಂದಲೂ, ಪ್ರೇರಿತನಾಗಿ ಆ ಮೇಲೆ ಇಲ್ಲಿ ಬಂದೆನು ॥ ೩೩ ॥ ಎಲೈ ದಯಾಸಮುದ್ರನಾದ ಶ್ರೀ ಕಲಶೇಶ್ವರನೇ! ಎಲೈ ಭಗವಂತನೆ! ಆ ವರ್ತಮಾನವನ್ನು ಹೇಳಲಪೇಕ್ಷಿತನಾಗಿ ಬಂದೆನು. ನಿಮ್ಮಿಬ್ಬರ ಪ್ರೀತಿದರ್ಶನವನ್ನು ನೋಡಲಿಚ್ಛಿಸುವವನನ್ನಾಗಿ ನನ್ನನ್ನು ತಿಳಿ ॥ ೩೪ ॥ ಶ್ರೀ ಕಲಶೇಶ್ವರನು ಈಪ್ರಕಾರವಾದ ಆ ನಾರದಮುನಿಯ ಮಾತನ್ನು ಕೇಳಿ, ಈ ದೇವಋಷಿಯಾದ ನಾರದನ ಮಾತು ಯಥಾರ್ಥವಾಗಿರುವದು. ಇಲ್ಲಿಂದ ಜಾಗ್ರತೆಯಾಗಿ ಹೋಗೋಣವೆಂದು ಬ್ರಹ್ಮಾದಿ ದೇವತೆಗಳನ್ನು ಕುರಿತು ॥ ೩೫ ॥ ಎಲೈ ಋಷಿಗಳಿರಾ, ಮುನಿಶ್ರೇಷ್ಠನಾದ ಈ ನಾರದನಿಂದ ಸಹಿತರಾಗಿ ಹೋಗುವ ಎಂದನು. ಈ ಪ್ರಕಾರ ಹೇಳಿಸಿಕೊಂಡ ಆ ದೇವತೆಗಳೂ ಋಷಿಗಳೂ ಬಹು ಸಂತೋಷದಿಂದ ಕೂಡಿದವರಾಗಿ ॥ ೩೬ ॥ ಪ್ರಿಯವನ್ನು ಪಾಲಿಸುವ ದೇವೇಶನಾದ ಶ್ರೀ ಕಲಶೇಶ್ವರನಿಂದ ಸಹಿತರಾಗಿ ಜಾಗ್ರತೆಯಾಗಿ ನಡಿಸಿಕೊಂಡ ವಾಹನಗಳುಳ್ಳವರಾಗಿ ಕ್ಷಣಮಾತ್ರದಿಂದ ಹಿಮವತ್ಪರ್ವತನ ರಾಜಮಂದಿರವನ್ನು ಸೇರಿದರು॥ ॥ ೩೭ ॥ ಹೀಗೆ ಮಹಾ ವೈಭವದಿಂದ ಬರುವ ಶ್ರೀ ಕಲಶೇಶ್ವರನ

ದ್ಭಿರ್ಬಂದಿಭಿಸ್ಸದಾ ॥ ೩೮ ॥ ಅಥೋತ್ಥಾಯಾದ್ರಿಜಾದೇವೀಹಾರ ನೂಪುರಶೋಭಿತಾ ॥ ಕಸ್ತೂರೀಕುಂಕುಮಾದೀನಿಬಿಭ್ರತೀವಿರಜಾಂ ಬರಾ ॥ ೩೯ ॥ ಕರಾಬ್ಜಾಭ್ಯಾಂಸಮಾದಾಯಸ್ವರ್ಣಮಾಲಾಂ ಮಹೇಶ್ವರೀ॥ ಸ್ತುವಂತೀಬಂದಿನಿವಹೈರ್ದದರ್ಶಾನಂದತುಂದಿಲಂ॥ ಕಾಂತಂಕಾಮಾಯುತಪ್ರಖ್ಯಂಕಿರೀಟಮಕುಟೋಜ್ವಲಂ ॥ ಅಲಂ ಚಕ್ರೇನಮಸ್ಕೃತ್ಯಮಾಲಯಾಪಾರ್ವತೀಪತಿಂ ॥ ೪೧ ॥ ತದಾ ದುಂದುಭಯೋನೇದುರ್ಮಂಗಲಾಃಪಟಹಸ್ವನಾಃ ॥ ಜಯದೇವಿ ಜಗದ್ಧಾತ್ರಿಜಯವಿಶ್ವಂಭರಾವ್ಯಯ ॥ ೪೧ ॥ ಇತಿಸಂಸ್ತುವತಾಂ ತತ್ರದೇವರ್ಷೀಣಾಂಮಹೌಜಸಾಂ ॥ ಸಾಧುವಾದೋಮಹಾನಾ

ಆಗಮನವನ್ನು ತಿಳಿದ ಪರ್ವತರಾಜನ ಮನೆಯಲ್ಲಿ ಆ ಕ್ಷಣವೇ ಭೇರಿ ಕಹ ಳೇಧ್ವನಿಗಳಿಂದ,ಮಂಗಲಸೂಕ್ತಗಳಾದ ವೇದಘೋಷಗಳಿಂದಲೂ ಹೊಗ ಳುತ್ತಿರುವ ಪಾಠಕರುಗಳಿಂದಲೂಸಹಿತವಾಗಿ ವಾದ್ಯಧ್ವನಿಯೂ ಆಯಿತು ॥ ೩೮ ॥ ಅನಂತರ ಕಸ್ತೂರಿ ಕುಂಕುಮಾದಿ ಮಂಗಲ ದ್ರವ್ಯಗಳನ್ನು ಧರಿಸಿರುವ, ನಿರ್ಮಲವಾದ ದುಕೂಲವನ್ನುಟ್ಟಿರುವ, ಪದಕ,ಸರ, ಕಡಗ ಕಾಲ್ಗಡಗಗಳಿಂದ ಅಲಂಕೃತಳಾದ ಶ್ರೀ ಗಿರಿಜಾದೇವಿಯೂ ಸಿಂಹಾಸ ನದಿಂದೆದ್ದು ॥ ೩೯ ॥ ಕಮಲದಂತೆ ಪರಿಮಳಿಸುತ್ತ ಹೊಳೆಯುತ್ತಿ ರುವ ಎರಡು ಕೈಗಳಿಂದಲೂ ಭಂಗಾರದ ಹಾರವನ್ನು ತೆಗದುಕೊಂಡು ಸಕಲ ಲೋಕೇಶ್ವರಿಯೆಂದು ದೇವ ಸ್ತ್ರೀಸಮೂಹದಿಂದ ಸ್ತುತಿಸಿ ಕೊಳ್ಳುವಳಾಗಿ ಹೊರಗೆ ಬಂದು, ಆ ದಿವ್ಯ ಮೂರ್ತಿಯಾದ ಹತ್ತು ಸಾ ವಿರ ಮನ್ಮಥರ ಸೌಂದರ್ಯವು ಒಂದೇ ಕಡೆಯಲ್ಲಿ ಬಂದಿರುವಂತೆ ಇದ್ದ ಕಿರೀಟಮಕುಟಗಳಿಂದ ಪ್ರಕಾಶಿಸುತ್ತಿರುವ ತನ್ನ ಪ್ರಾಣಕಾಂತನನ್ನು ಕಂಡಳು. ಪಾರ್ವತೀದೇವಿಯು ಕಂಡ ಕೂಡಲೆ ನಮಸ್ಕರಿಸಿ ಕೈಯ ಲ್ಲಿದ್ದ ಹಾರದಿಂದ ಪತಿಯನ್ನು ಅಲಂಕರಿಸಿದಳು ॥ ೪೦ ॥ ೪೧ ॥ ಆಗ ಶುಭಗಳಾದ ದುಂದುಭಿ ಮೊದಲಾದ ವಾದ್ಯಧ್ವನಿಗಳು ಮೊಳಗಿದವು. ಎಲೈಲೋಕಮಾತೆಯೇ! ಎಲೈ ನಾಶರಹಿತನಾದ ಜಗದ್ರಕ್ಷಕನೇ! ಎಂದು ಆ

ಸೀತ್ಪುಷ್ಪವೃಷ್ಟಿಶ್ಚ ಖಾಚ್ಚ್ಯುತಾ ॥ ೪೨ ॥ ಕಲಶೇಶೋದ್ವಿಜಾಂದೇ
ವೀಂಪ್ರೇಮ್ಣಾಪ್ರತಿನಿರೈಕ್ಷತ ॥ ತದಾದ್ವಿಜಾಶರೀರಾದ್ವ್ಯಾಜಾತಾಸ
ರ್ವಾಂಗಸುಂದರೀ ॥೪೩॥ ಅಸಾದೃಶ್ಯಸ್ವರೂಪಾಸಾಸಾಕ್ಷಾತ್ತ್ರಿ
ಪುರಸುಂದರೀ ॥ ಅಂಶತೋಭಗವತ್ಸೇವಾಂನಿತ್ಯಂಕರ್ತುಮಿವೋದ್ಯ
ತಾ ॥೪೪॥ ತಾಂದೃಷ್ಟ್ವಾಮುನಯೋದೇವಾದೈತೇಯಾಸ್ಸಿದ್ಧ
ಚಾರಣಾಃ॥ ವಿಸ್ಮಿತಾಅಭವನ್‌ಸರ್ವೇಅಸಕೃತ್ಪ್ರೀತಿಮಾಪ್ನುವನ್॥
॥ ೪೫ ॥ ಪ್ರಣಾಮಮಹಾದೇವಮಿಂದುಶೇಖರಮವ್ಯಯಂ ॥
ಸ್ತುತ್ವಾಸ್ತೋತ್ರೈರನೇಕೈಃಸಾಕೃತಾಂಜಲಿಪುಟಾಂಶಜಾ ॥೪೬॥

ನಂದವು ಸುವಾದ ದೇವತೆಗಳ ಮಹರ್ಷಿಗಳ ಸಂಬಂಧವಾದ ಶಾಭಾಸು ಸೈಸೈಯೆಂಬ ಸ್ತುತಿ ಶಬ್ದವೂ ಆಯಿತು. ಆಕಾಶದೆದ ಸೆಯಿಂದ ಪುಷ್ಪ ವೃಷ್ಟಿಯಾಯಿತು ॥ ೪೨ ॥ ಆಗ ಶ್ರೀ ಕಲಶೇಶ್ವರನು ಪ್ರೀತಿ ಯಿಂದ ಶ್ರೀ ಗಿರಿಜಾದೇವಿಯನ್ನು ಸಂಪೂರ್ಣದೃಷ್ಟಿಯಿಂದ ನೋಡಿದ ನು. ಆ ಕ್ಷಣದಲ್ಲಿಯೇ ಆ ಗಿರಿಜಾದೇವಿಯ ಶರೀರದ ದೆಸೆಯಿಂದ ಸರ್ವ ಸುಂದರಿಯಾದ ಸರ್ವಾಂಗಸುಂದರೀದೇವಿಯು ಹುಟ್ಟಿದ ಳು ॥ ೪೩ ॥ ಸಾದೃಶ್ಯವೇ ಇಲ್ಲದ ಸೌಂದರ್ಯವಾದ ಶರೀರವುಳ್ಳ ಪ್ರತ್ಯಕ್ಷ ತ್ರಿಪುರಸುಂದರಿಯೇ ಆದ ಆ ದೇವಿಯು ಅಂಶದಿಂದ ನಿತ್ಯದಲ್ಲಿಯೂ ಶ್ರೀಭಗತ್ಸೇವೆಯನ್ನು ಮಾಡುವುದಕ್ಕೋಸ್ಕರ ಉ ದ್ಯೋಗಿಸಿದಂತಿದ್ದಳು ॥ ೪೪ ॥ ಆಗ ಅಲ್ಲಿದ್ದ ಋಷಿಗಳ, ದೇವತೆ ಗಳು, ದೈತ್ಯರು, ಸಿದ್ಧರು, ಚಾರಣರು, ಆವಿರ್ಭವಿಸಿದ ಆ ಸರ್ವಾಂಗ ಸುಂದರಿದೇವಿಯನ್ನು ನೋಡಿ ಸರ್ವರೂ ಆಶ್ಚರ್ಯಪಟ್ಟರು. ಮತ್ತು ಕ್ಷಣೇಕ್ಷಣೇ ಪ್ರೀತಿಯನ್ನು ಹೊಂದುತ್ತಿದ್ದರು ॥ ೪೫ ॥ ಹೀಗೆ ಇರು ವಾಗ ಅಂಶೋದ್ಭವಳಾದ ಆ ಸರ್ವಾಂಗಸುಂದರೀದೇವಿಯು ಕರಸಂ ಪುಟವನ್ನು ಮಾಡಿಕೊಂಡವಳಾಗಿ, ನಾಶರಹಿತನಾದ, ಚಂದ್ರಶೇಖರನಾದ ಮಹಾದೇವನಾದ ಶ್ರೀ ಕಲಶೇಶ್ವರನನ್ನು ಅನೇಕ ಪ್ರಕಾರಗಳಾದ ಸ್ತೋತ್ರಗಳಿಂದ ಸ್ತುತಿಸಿ ನಮಸ್ಕಾರವನ್ನು ಮಾಡಿದಳು ॥ ೪೬ ॥

ತದಾಮಂದಮುವಾಚೈಷಾಮೂರ್ತಿಜಾಮದ್ರಿಸಂಭವಾ ॥ ಅಹಂ ಭಗವತಶ್ಶಂಭೋ(ರಾಜ್ಞಯೇಹಾವಸಂಶುಭೇ ॥ ೪೭ ॥ ಇಂಗಿತ ಜ್ಞಾಸ್ಮಿದೇವಸ್ಯಯಾಹಿತ್ವಂಕಲಶೇಶ್ವರಂ ॥ ತತ್ಪಾದಪದ್ಮಯೋಃ ಸೇವಾಸಂಸಕ್ತಾಭವಶಾಂಭವಿ ॥ ೪೮ ॥ ಇತಉತ್ಸವಕಾಲೇಷು ಮದ್ದತ್ತಾಂಪುಷ್ಪಮಾಲಿಕಾಂ॥ತುಭ್ಯಂದಾಸ್ಯತಿವಿಶ್ವೇಶಸ್ತ್ವಯಾಪ್ರೀ ತಾಭವಾನ್ವಹಂ ॥ ೪೯ ॥ ತಸ್ಯಾಸ್ತದ್ವಚನಂಶ್ರುತ್ವಾಪ್ರತ್ಯುವಾ ಚಸುರೇಶ್ವರೀಂ । ಕರಿಷ್ಯೇಶಿರಸಾದೇವೀತವಾಜ್ಞಾಂಜಗದಂಬಿಕೇ ॥ ॥ ೫೦ ॥ ಅನುಜಾನೀಹಿಮಾಂಯಾತಾಮದ್ಯೇಂದುಕಲಾಧರಂ ॥ ಇತ್ಯೇತಯೋರ್ವಚಶ್ಶ್ರುತ್ವಾ ಭಗವಾನ್ ಕಲಶೇಶ್ವರಃ ॥ ೫೧ ॥

ಆಗ ಈ ಗಿರಿಜಾದೇವಿಯೂ ತನ್ನ ಅಂಶದಿಂದಾವಿರ್ಭಾವಿಸಿದ ಸರ್ವಾಂಗಸುಂದರಿಯನ್ನು ಕುರಿತು ಮೆಲ್ಲನೆ ಮೃದುವಾಗಿ ಎಲೈ ಶೋಭನಾಂಗಿಯೆ, ನಾನು ಭಗವಂತನಾದ ಶ್ರೀ ಕಲಶೇಶ್ವರನ ಅನುಜ್ಞೆಯಿಂದ ಇಲ್ಲಿಯೇ ವರದಾನಕಲ್ಪಿತವಾದ ಇನ್ನೊಂದು ಉತ್ಸವ ಕಾಲ ಬರುವವರಿಗೂ ಇರುವೆನು. ಶ್ರೀ ಭಗವಂತನ ಚಿತ್ತದಲ್ಲಿರುವುದನ್ನು ಬಲ್ಲವಳಾಗಿದ್ದೇನೆ. ನೀನು ಶ್ರೀ ಕಲಶೇಶ್ವರನ ಸಂಗಡ ಹೋಗು. ಎಲೈ ಶಾಂಭವಿಯೇ, ಆ ದೇವನ ಚರಣಕಮಲಗಳ ಸೇವೆಯಲ್ಲಿ ಆಸಕ್ತಳಾಗಿರು. ಇನ್ನು ಮುಂದೆ ನಡೆಯುವ ಕಲ್ಯಾಣೋತ್ಸವ ಕಾಲದಲ್ಲಿ ನಾನು ಕೊಡುತ್ತಿರುವ ಭಂಗಾರದ ಪುಷ್ಪಗಳ ಹಾರವನ್ನು ಶ್ರೀ ಜಗದೀಶನು ನಿನಗೋಸ್ಕರ ಕೊಡುತ್ತಿರುವನು. ಆದ್ದರಿಂದ ನಿತ್ಯವೂ ಪ್ರೀತಿಯುಳ್ಳವಳಾಗಿರು ಎಂದು ನುಡಿದಳು ॥ ೪೭ ॥ ೪೮ ॥ ೪೯ ॥ ಆ ಮೇಲೆ ಆ ಸರ್ವಾಂಗ ಸುಂದರಿದೇವಿಯು ಆ ಗಿರಿಜಾದೇವಿಯ ಮಾತನ್ನು ಕೇಳಿ ಶಿರಸ್ಸಿನಿಂದ ವಂದಿಸಿ, ಓ ಗಿರಿಜಾದೇವಿಯೆ! ಎಲೈ ಜಗಜ್ಜನನೀಯೆ! ನಿನ್ನ ಆಜ್ಞೆಯನ್ನು ಅನುಸರಿಸಿ ಹಾಗೆ ಮಾಡುವೆನು ॥ ೫೦ ॥ ಮತ್ತು ನೀನು ಚಂದ್ರಕಲಾವತಂಸನಾದ ಶ್ರೀ ಕಲಶೇಶ್ವರನನ್ನು ಈಗಲೆ ಸೇರಿಕೊಂಡೆನೆಂದು ತಿಳಿ, ಎಂದಳು. ಇತ್ತಲಾ ಶ್ರೀ ಕಲಶೇಶ್ವರನು ಈ ದೇವಿ

ದೇವಾನ್ಪ್ರತ್ಯಬ್ರವೀತ್ಸರ್ವಾನ್ಯದಾಹಗಿರಿಜಾವಚಃ॥ತದಭಿಪ್ರಾಯಮ
ಖಿಲಂಜಾನೀಧ್ವಂಮುನಿಭಿಃಸಮಂ ॥೫೧॥ ತಥೇತ್ಯುಕ್ತ್ವಾಸುರಾಃ
ಸ್ಸರ್ವೇಸಮಾಲೋಚ್ಯಪರಸ್ಪರಂ ॥ ಪ್ರತ್ಯೂಚುರಥವಿಶ್ವೇಶಮದ್ರಿ
ಜಾವಚನಂವಿಭೋ ॥ ೫೩ ॥ ಹಿತಮಸ್ಮಾಕಮೇತಚ್ಚ ತವಾಜ್ಞಾಪಿ
ಯಥಾತಥಾ ॥ ತದೋವಾಚಮಹಾದೇವಶ್ಚ ತುರ್ವಕ್ತ್ರಮುಖಾನ್ಸು
ರಾನ್ ॥ ೫೪ ॥ ಯದ್ವಚಃಪ್ರಾಹಗಿರಿಜಾಭವಿಷ್ಯೇಮಂಗಲೋತ್ಸ
ವೇ ॥ ತಥೇತಿಮನಸಾಪೂರ್ವಂನಿಶ್ಚಿತಂತುಮತಂಮಮ ॥ ೫೫ ॥
ತಚ್ಛ್ರುತ್ವಾಮುನಯಸ್ಸರ್ವೇದೇವಾಸ್ಸಂತುಷ್ಟಚೇತಸಃ॥ಸಾಧು
ಸಾಧ್ವಿತಿತಂಪ್ರಾಹುಸ್ತ್ರಿಕಾಲಜ್ಞಾಮುನೀಶ್ವರಾಃ ॥೫೬॥ ಅಥಾ
ದ್ರಿರಾಜಮಾಮಂತ್ರ್ಯದೇವೀಂಸರ್ವಾಂಗಸುಂದರೀಂ ॥ ಸ್ವೀಯಂ
ವಿಮಾನಮಾರೋಪ್ಯಯಯೌಶ್ರೀಮಂದಿರಂಶಿವಃ॥೫೭॥ ಸಿಂಹಾ

ಯರಿರ್ವರ ಮಾತನ್ನು ಕೇಳಿ ತಾನು ಸರ್ವಜ್ಞನಾದರೂ ॥ ೫೧ ॥ ಸಮ
ಸ್ತ ದೇವತೆಗಳನ್ನೂ ಕುರಿತು ಎಲೈ ದೇವತೆಗಳಿರಾ ನೀವು ಋಷಿಗಳಿಂದ
ಕೂಡಿಕೊಂಡು ಈ ಗಿರಿಜಾದೇವಿಯು ಯಾವುದನ್ನು ಹೇಳಿದಳೊ ಆ ಮಾ
ತಿನ ಅಭಿಪ್ರಾಯವೆಲ್ಲವನ್ನೂ ಆಲೋಚಿಸಿ ಎಂದನು ॥ ೫೩ ॥ ಹಾಗೆಯೇ
ಆಗಲಿಯೆಂದೊಪ್ಪಿ ಸಮಸ್ತ ದೇವತೆಗಳೂ ಸರ್ವರೂ ಅನ್ಯೋನ್ಯವಾಗಿ
ಆಲೋಚಿಸಿ ಶ್ರೀ ಕಲಶೇಶ್ವರನನ್ನು ಎಲೈ ಸ್ವಾಮಿಯೆ! ಶ್ರೀ ಗಿರಿಜಾದೇ
ವಿಯ ಅಭಿಪ್ರಾಯವು ತಿಳಿಯಿತು. ಇದು ನಮಗೆ ಹಿತವಾಗಿಯೇ ಇರು
ವದು. ಇದರಮೇಲೆ ನಿನ್ನ ಅನುಗ್ರಹ ಹೇಗಾಗತಕ್ಕದ್ದು ಎಂದು ಪುನಃ
ಪ್ರಾರ್ಥಿಸಿದರು. ಆಗ ಶ್ರೀ ಮಹಾದೇವನು, ಬ್ರಹ್ಮನೇ ಮೊದಲಾದ
ದೇವತೆಗಳನ್ನು ಕುರಿತು ಗಿರಿಜಾದೇವಿಯು ಈ ಮುಂದೆ ನಡೆಯಬೇ
ಕಾದ ಕಲ್ಯಾಣೋತ್ಸವದ ವಿಷಯವಾಗಿ ಯಾವ ಮಾತನ್ನು ಹೇಳಿ
ದಳೋ ಹಾಗೆಯೇ ನಡೆಯತಕ್ಕದ್ದೆಂದು ಮೊದಲೇ ಮನಸ್ಸಿನಿಂದ ನಿಶ್ಚೈ
ಸಿತ್ತು. ಇದು ನನಗೆ ಸಮ್ಮತವಾಗಿದೆ ಎಂದನು ॥೫೪॥೫೫॥೫೬॥
ಆ ಮಾತನ್ನು ತ್ರಿಕಾಲಜ್ಞಾನಿಗಳಾದ ಮುನಿಗಳೂ ದೇವತೆಗಳೂ ಕೇಳಿ
ಸಂತೋಷಮನಸ್ಕರಾಗಿ ಆ ಶ್ರೀಕಲಶೇಶ್ವರನನ್ನು ಸ್ತುತಿಸಿದರು ॥ ೫೭ ॥

ಸನಂಸವಾರುಹ್ಯತಯಾರೇಜೇಸುರೇಶ್ವರಃ ॥ ಏತದ್ಭಗವತಶ್ಶಂ
ಭೋಶ್ಚರಿತ್ರಂಪಾಪನಾಶನಂ ॥ ೫೮ ॥ ಭಕ್ತ್ಯಾಶೃಣೋತಿಯೋ
ಮರ್ತ್ಯಃಸಂತತಿಂತಸ್ಯಶಂಕರಃ ॥ ಅವಿಚ್ಛಿನ್ನಾಂಕರೋತ್ಯೇವಭಜ
ತ್ರಾಮಿಷ್ಟದೋಹರಃ ॥ ... ... ॥ ೫೯ ॥

ಶ್ರೀ ಕಲಶೇಶ್ವರ ಮಾಹಾತ್ಮ್ಯೇ ಶ್ರೀ ಕಲ್ಯಾಣೋತ್ಸವ ಪ್ರಕರಣೇ
ಪುನರ್ದೇವೀದರ್ಶನ ಸರ್ವಾಂಗಸೌಂದರ್ಯುತ್ಪತ್ತಿ ಕಥನಂ ನಾಮ
ಪಂಚದಶೋಧ್ಯಾಯಃ ಶ್ರೀ ಶ್ರೀ ಶ್ರೀ.

ಅನಂತರದಲ್ಲಿ ಶ್ರೀ ಕಲಶೇಶ್ವರನು ಪರ್ವತರಾಜನನ್ನು ಬಹುಮಾನಿಸಿ ಸರ್ವಾಂಗಸುಂದರಿದೇವಿಯನ್ನು ತನ್ನ ವಿಮಾನದಲ್ಲಿ ಕುಳ್ಳಿರಿಸಿಕೊಂಡು ಮಂಗಲವಾದ ವಿವಾಹಮಂಟಪವನ್ನು ಕುರಿತು ಚಿತ್ತೈಸಿದನು ॥ ೫೮ ॥ ಮಂಟಪದ ಮಧ್ಯದಲ್ಲಿರುವ ಸಿಂಹಾಸನವನ್ನು ಆರೋಹಿಸಿ, ಆ ಸರ್ವಾಂಗ ಸುಂದರಿದೇವಿಯಿಂದ ಪೂರ್ಣಚಂದ್ರನಂತೆ ಪ್ರಕಾಶಿಸುತ್ತಲಿದ್ದನು. ಈ ಪ್ರಕಾರವಾದ ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀ ಕಲಶೇಶ್ವರ ಸ್ವಾಮಿಯ ವಿವಾಹೋತ್ಸವ ಸಮ್ಬಂಧವಾದ, ಪಾಪನಾಶಕವಾದ ಈ ಚರಿತ್ರೆಯನ್ನು ॥ ೫೯ ॥ ಯಾವ ಮನುಷ್ಯನು ಕೇಳುತ್ತಾನೋ ಆತನ ಸಂತತಿಯನ್ನು ವಿಚ್ಛಿನ್ನವಿಲ್ಲದುದಾಗುವುದು. ಭಜಿಸುವ ಭಕ್ತರಿಗೆ ಇಷ್ಟಾರ್ಥ ಕೊಡುವುದೇ ಆ ದೇವನ ಅಪಾರವಾದ ಮಹಿಮೆಯೂ ಆಗಿ ರುವದು. ಆದುದರಿಂದ ಶ್ರೀಕಲಶೇಶ್ವರನು ಇಷ್ಟಾರ್ಥದಾಯಕನೆಂದು ಪ್ರಸಿದ್ಧನಾಗಿಹನು ॥ .... ॥೬೦॥

ಈ ಪ್ರಕಾರವಾಗಿ ಸ್ಕಂದಪುರಾಣದಲ್ಲಿ ತುಂಗಭದ್ರಾ ಖಂಡದಲ್ಲಿ ಹೇಳಿದ
ಶ್ರೀ ಕಲಶೇಶ್ವರ ಸ್ವಾಮಿಯವರ ಮಹಿಮೆಯಲ್ಲಿ ಶ್ರೀ ಕಲ್ಯಾಣೋತ್ಸ
ವದ ಪ್ರಕರಣದಲ್ಲಿ ಪುನರ್ದೇವಿ ದರ್ಶನ ಸರ್ವಾಂಗಸುಂದರಿ
ದೇವಿಯ ಉತ್ಪತ್ತಿಯು ಸಂಪೂರ್ಣವಾಯಿತು.

ಹದಿನೈದನೆಯ ಅಧ್ಯಾಯ ಸಂಪೂರ್ಣವಾದುದು.

ಟೀಕಾಯಾಂ ಕನ್ನಡಾಖ್ಯಾಯಾಂ ರಾಮದೈವಜ್ಞಶರ್ಮಣಾ ॥
ಪೂರ್ಣಃಪಂಚದಶೋಧ್ಯಾಯಃ ಕಲಶೇಶ್ವರ ಸಿದ್ಧಯಾ॥ ಶ್ರೀ ಶ್ರೀ ॥

೧೬ನೆಯ ಅಧ್ಯಾಯ ಪ್ರಾರಂಭ.

ಅಥೋಽಪರೇದ್ಯುರ್ಭಗವಾನ್ದೇವರ್ಷೀನ್ದೇವತಾಅಪಿ ॥ ಶಿಶಿರಃಸ್ನಿಗ್ಧತಾರಾಕ್ಷಃಸಮೈಕ್ಷತಸಭಾಸದಃ ॥ ೧ ॥ ತತಉತ್ಥಾಯ ಮುನಿರಾಣ್ನಾರದಃಕಲಶೇಶ್ವರಂ ॥ ಕೃತಾಂಜಲಿಪುಟೋಭೂತ್ವಾ ಪ್ರೋವಾಚಾನಂದತುಂದಿಲಃ ॥೨॥ ಕೃತಾರ್ಥೋಽಸ್ಮಿಮನ್ಮಹಾದೇವ ಶ್ರೀಮತ್ಕಲ್ಯಾಣದರ್ಶನಾತ್ ॥ ಸ್ವರೂಪಸಂಸ್ಥಿತಸ್ಯಾಪಿಲೀಲಾಂವಿದಧತಃಪ್ರಭೋ ॥ ೩ ॥ ನಿರಸ್ತಾಜ್ಞಾನವಿಷಯನಾಪ್ತಭಕ್ತಿಶ್ರಿಯಃಶಿವ॥ ಕಿಂಕರಾನನುಜಾನೀಹಿಸದಾತ್ವದ್ದರ್ಶನೋತ್ಸುಕಾನ್ ॥೪॥ ಬ್ರುವಂತಮಿತ್ಥಂದೇವರ್ಷಿಂವಾನಯನ್ಕಲಶೇಶ್ವರಃ ॥ ರಾಜರಾಜ

ಇತ್ತಲಾ ಸೂತಪೌರಾಣಿಕನು ಶೌನಕಾದಿ ಋಷಿಗಳಿಗೆ ಮುಂದಿನ ಚರಿತ್ರೆಯನ್ನು ಹೇಳಲಾರಂಭಿಸಿದನು. ಕೇಳಿರೈ ಮುನಿಗಳಿರಾ! ಆಮೇಲೆ ಮೂರನೆಯ ದಿನದಲ್ಲಿ ಭಗವಂತನಾದ ಶ್ರೀ ಕಲಶೇಶ್ವರನು ನಿಬಿಡವಾದ ಶೀತಳವಾದ ದೃಷ್ಟಿಯುಳ್ಳವನಾಗಿ ದೇವಋಷಿಗಳನ್ನೂ ದೇವತೆಗಳನ್ನೂ ಶುಭದೃಷ್ಟಿಯಿಂದ ನೋಡಿದನು ॥ ೧ ॥ ಆ ಕೂಡಲೆ ಮುನಿಶ್ರೇಷ್ಠನಾದ ನಾರದನು ಎದ್ದು ಕೈ ಜೋಡಿಸಿಕೊಂಡು ಸಂತೋಷಭರಿತನಾಗಿ ಶ್ರೀ ಕಲಶೇಶ್ವರನನ್ನು ಕುರಿತು ॥೨॥ ಎಲೈ ಮಹಾಸ್ವಾಮಿಯೇ! ಮಂಗಲವಾದ ನಿನ್ನ ಕಲ್ಯಾಣೋತ್ಸವವನ್ನು ನೋಡೋಣದರದೆಸೆಯಿಂದ ನಾವು ಧನ್ಯರಾದೆವು. ಸ್ವರೂಪಸ್ಥನಾದರೂ ಲೀಲೆಯನ್ನು ಧರಿಸಿದ ನಿನ್ನ ಮಹಿಮೆಯು ಅಪಾರವಾಗಿದೆ ॥ ೩ ॥ ಎಲೈ ಮಂಗಲಸ್ವರೂಪನಾದ ಪರಮಾತ್ಮನೇ! ತಿರಸ್ಕೃತವಾದ ಅಜ್ಞಾನವುಳ್ಳ ಹೊಂದಲ್ಪಟ್ಟ ಸುಜ್ಞಾನರೂಪದ ಭಕ್ತಿಯೆಂಬ ಸಂಪತ್ತುಳ್ಳ ನಿನ್ನ ಸೇವಕರಾದ ನಿನ್ನ ದರ್ಶನವೆಂಬ ಆಶೆಯುಳ್ಳಿಯೇ ಆಸಕ್ತರಾದ ನಮ್ಮನ್ನು ಅನುಗ್ರಹಿಸಬೇಕು ॥ ೪ ॥ ಈ ಪ್ರಕಾರವಾಗಿ ಸ್ತುತಿಸುತ್ತಿರುವ ದೇವಋಷಿಯಾದ ನಾರದಮಹರ್ಷೀಶ್ವರನನ್ನು ಶ್ರೀ ಕಲಶೇಶ್ವರಸ್ವಾಮಿಯು ಮನ್ನಿಸಿ

ಮುಪಾಚೇದಂಕೃತಾಂಜಲಿಮುಪಸ್ಥಿತಂ ॥ ೫ ॥ ಮಹಾಧನೈಃಪಾರಿ
ಬರ್ಹೈರರ್ಹಯಸ್ವಮುನೀಶ್ವರಾನ ॥ಬಾದರಾಯಣಮುಖ್ಯಾಂಸ್ತು
ದೇವಾನ್ಬ್ರಹ್ಮಪುರೋಗಮಾನ್ ॥ ೬ ॥ ದೈತ್ಯೇಶ್ವರಾನ್ಕಾಶ್ಯಪೇ
ಯಾನ್ವೈರೋಚನಿಮುಖಾನಪಿ ॥ ತತೋಮುದಾಧನಾಧ್ಯಕ್ಷಂಚಿತ್ರ
ಲೇಖಾಸಮನ್ವಿತಃ ॥ ೭ ॥ ಕಸ್ತೂರೀಕುಂಕುಮಾದ್ಯೈಸ್ತ್ವನ್ಯೈ
ರ್ನವಣಾಂಬರೈಃಸುರಾನ್ ॥ ಸದಾರಾನ್ಮುನಿಮುಖ್ಯಾಂಶ್ಚದೈತೇ
ಯಾನಪಿಸಾದರಂ ॥ ೮ ॥ ಯಥಾರ್ಹಂಮಾನಯಾಮಾಸಮಾನಾ
ರ್ಹಾನ್ಭಗವದ್ಧಿಯಃ ॥ ತದಾಮಂಗಲತೂರ್ಯಾಣಿನೇದುರ್ಹರ್ಷ
ಸ್ವರಾನ್ಬಹೂನ್ ॥ ೯ ॥ ನೃತ್ಯಂತೋಪ್ಸರಸಃಸಂಘಾರಂಭಾದ್ಯಾ
ದೇವಸಂಸದಿ ॥ ಸ್ತುವಂತಿದೇವತಾಃಸ್ತತ್ರಸ್ತೋತ್ರೈಃಶ್ರುತಿಭಿರವ್ಯ

ಸಮಿಾಪದಲ್ಲಿ ಕೈಜೋಡಿಸಿಕೊಂಡು ನಿಂತಿದ್ದ ಸಕಲ ರಾಜರಿಗೂ ರಾಜನಾದ ಕುಬೇರನನ್ನು ಕುರಿತು ಅಪ್ಪಣೆ ಕೊಟ್ಟನು ॥೫॥ ವೇದವ್ಯಾಸರು ಮೊದಲಾದ ಮುನಿಶ್ರೇಷ್ಠರನ್ನೂ ಬ್ರಹ್ಮದೇವನೇ ಮೊದಲಾದ ದೇವತೆಗಳನ್ನೂ ಬಹು ಮೌಲ್ಯಗಳಾದ ಮರ್ಯಾದಾವಸ್ತುಗಳಿಂದ ಆದರಿಸು ॥ ೬ ॥ ಮತ್ತು ದೈತ್ಯೇಶ್ವರರಾದ ಕಶ್ಯಪ ಮುನಿಪುತ್ರರಾದ ಬಲಿಚಕ್ರವರ್ತಿಮುಖ್ಯರಾದವರನ್ನು ಕೂಡ ಆದರಿಸು. ಆ ಕ್ಷಣವೇ ಚಿತ್ರಲೇಖಾದೇವಿಯಿಂದೊಡಗೂಡಿದ ಕುಬೇರನು ॥ ೭ ॥ ಆ ಸಮಸ್ತ ದೇವತೆಗಳನ್ನೂ ಸಪತ್ನೀಕರಾದ ಋಷಿಶ್ರೇಷ್ಠರನ್ನೂ ದಿತೀದೇವಿಯ ಮಕ್ಕಳಾದದೈತ್ಯರನ್ನೂ, ಕಸ್ತೂರಿ ಗಂಧ ಮೊದಲಾದ ಪರಿಮಳ ದ್ರವ್ಯಗಳಿಂದಲೂ ಅರಸಿನ ಕುಂಕುಮ ಮೊದಲಾದ ಮಾಂಗಲ್ಯದ್ರವ್ಯಗಳಿಂದಲೂ ಭಂಗಾರದ ಜಲತಾರದ ದೋತ್ರ, ಸೀರೆ,ಕುಪ್ಪುಸ, ಮುಂಡಾಸುಗಳಿಂದಲೂ, ಪ್ರೀತಿಪೂರ್ವಕವಾಗಿ ॥ ೮ ॥ ಶ್ರೀ ಭಗವಂತನಲ್ಲಿಯೇ ನೆಲೆಗೊಂಡ ಬುದ್ಧಿಯುಳ್ಳ ಆ ದೇವದೈತ್ಯರನ್ನು ಪೂಜಿಸಿದನು. ಆ ಸಮಯದಲ್ಲಿ ಮಂಗಲಕರಗಳಾದ ವಾದ್ಯಗಳು ಸಂತೋಷಕರಗಳಾದ ಬಹುವಿಧ ಧ್ವನಿಗಳನ್ನು ಮಾಡಿದವು ॥ ೯ ॥ ರಂಭೆ ಮೊದಲಾದ ಅಪ್ಸರ ಸ್ತ್ರೀಯರು ನರ್ತನ

ಯಂ ॥ ೧೦ ॥ ಅಥಕುಂಭೋದ್ಭವೋಪಿಪ್ರಃಪ್ರಸಾದಕುಸುಮಾಕ್ಷತಾನ್॥ ಪ್ರದದೌಮುನಿಮುಖ್ಯೇಭ್ಯೋವ್ಯಾಸಾದಿಭ್ಯಃಪ್ರಹರ್ಷಿತಃ ॥ ॥೧೧॥ ವಿವಾಹದಕ್ಷಿಣಾಶ್ಚೈವಅನ್ಯೇಭ್ಯೋಭೂರಿದಕ್ಷಿಣಾಃ॥ದೇವತಾಭ್ಯಃಪ್ರಸಾದಂಚಸರ್ವೇಭ್ಯೋಮುನಿಪುಂಗವಃ ॥೧೨॥ ದತ್ವಾತಾಸರ್ಹಯಾಮಾಸಬ್ರಹ್ಮಾಣಾಂಕಮಲಾಪತಿಂ ॥ ಸುರೇಶ್ವರಮುಖಾನ್ದೇವಾನನ್ಯಾನಪಿಸಮಾಗತಾನ್ ॥೧೩॥ ಇದಂಸಂಮಾನಿತಾಸ್ಸರ್ವೇದೇವಾಃಬ್ರಹ್ಮರ್ಷಯಸ್ಸುರಾಃ ॥ ಇಯಾಸವಃಸಮುತ್ಥಾಯಪ್ರಣೇಮುಃಕಲಶೇಶ್ವರಂ ॥ ೧೪ ॥ ಭಗವನ್ನನುಜಾನೀಹಿಯಾಸ್ಯಾಂತೋಽಸ್ಮಾನ್ಸುರೇಶ್ವರ ॥ ಅನುಗ್ರಹೋಸ್ತು ವಿಶ್ವೇಶಸದಾತ್ವದ್ಭಕ್ತಿಲ

ಮಾಡಿದರು. ದೇವತೆಗಳು ಅಲ್ಲಿ ವೇದವಾಕ್ಯಗಳಿಂದಲೂ ಸ್ತೋತ್ರಗಳಿಂದಲೂ ಶಾಶ್ವತನಾದ ಶ್ರೀ ಕಲಶೇಶ್ವರನನ್ನು ಸ್ತುತಿಸಿದರು ॥ ೧೦ ॥ ಅನಂತರ ಕಲಶೋತ್ಪನ್ನನಾದ ಅಗಸ್ತ್ಯಮುನಿಯು ಸಂತೋಷಭರಿತನಾಗಿ ವೇದವ್ಯಾಸರೇ ಮೊದಲಾದ ಋಷಿಶ್ರೇಷ್ಠರಿಗೆ ಕಲ್ಯಾಣೋತ್ಸವದಲ್ಲಿ ಸ್ವಾಮಿಯವರಿಗೆ ಅರ್ಪಿಸಿದ ಪ್ರಸಾದ ಮಂಗಲಾಕ್ಷತೆಗಳನ್ನು ಕೊಟ್ಟನು ॥೧೧॥ ಅಗಸ್ತ್ಯಮುನಿಯು ಪುರೋಹಿತ ಮೊದಲಾದವರಿಗೆ ಕೊಡತಕ್ಕ ಸ್ವಾಮ್ಯ, ಜೋಯಿಸರ ಸ್ವಾಮ್ಯ ದಕ್ಷಿಣೆಗಳನ್ನೂ, ಉಳಿದವರಿಗೆ ಭೂರಿದಕ್ಷಿಣೆಯನ್ನೂ, ದೇವತೆಗಳಿಗೆ ಪ್ರಸಾದವನ್ನೂ ಕೊಟ್ಟನು ॥೧೨ ॥ ಈಪ್ರಕಾರವಾಗಿ ಕೊಟ್ಟು ಬ್ರಹ್ಮದೇವರನ್ನೂ, ಲಕ್ಷ್ಮೀಪತಿಯಾದ ಶ್ರೀ ಮಹಾವಿಷ್ಣುವನ್ನೂ, ದೇವೇಂದ್ರ ಮೊದಲಾದ ದೇವತೆಗಳನ್ನೂ ಇನ್ನೂ ಬಂದ ಸಮಸ್ತರನ್ನೂ ಆದರಿಸಿದನು ॥ ೧೩ ॥ ಈ ಪ್ರಕಾರ ಮರ್ಯಾದೆಯನ್ನು ಹೊಂದಿದ ಸಮಸ್ತ ದೇವತೆಗಳೂ, ಋಷಿಗಳೂ, ದೈತ್ಯರೂ ಕೂಡ ಪ್ರಯಾಣಾಭಿಮುಖರಾಗಿ ಎದ್ದು ಶ್ರೀ ಕಲಶೇಶ್ವರನನ್ನು ನಮಸ್ಕರಿಸಿದರು ॥ ೧೪ ॥ ಎಲೈ ದೇವೇಶನೆ, ಜಗದೀಶನೆ, ಶ್ರೀ ಭಗವಂತನೆ, ನಮ್ಮನ್ನು ಪ್ರಯಾಣಮಾಡುವವರನ್ನಾಗಿ ತಿಳಿ. ನಿನ್ನಲ್ಲಿ ಶಾಶ್ವತವಾದ ಭಕ್ತಿಯೋ ಗುರುತಾಗಿರುವ ಅನುಗ್ರಹವು ನಮ್ಮಲ್ಲಿ ಸ್ಥಿರ

ಕ್ಷಣಃ ॥೧೫॥ ಇತ್ಥಂ ಸಂಪ್ರಾರ್ಥಿತಃ ಶಂಭುರ್ಬಹುಮಾನಪುರಸ್ಸರಂ ॥
ಯಾಪಯಾಮಾಸ ತಾನ್ಸರ್ವಾನ್ ದೇವಾನ್ ಬ್ರಹ್ಮರ್ಷಿಕಾನಪಿ ॥ ೧೬ ॥
ನಮಸ್ಕೃತ್ಯ ಥ ಯಾಸ್ಯಂತಃ ಪ್ರಭುಂ ಶ್ರೀಕಲಶೇಶ್ವರಂ ॥ ಹರ್ಷೇಣ
ಮಹತಾ ಯುಕ್ತಾಸ್ಸ್ವಸ್ವಧಾಮಾನಿ ಭೇಜಿರೇ ॥ ೧೭ ॥ ಕೀರ್ತಯಂ
ತಸ್ತು ವಿಭವಂ ದೇವ್ಯಾಃ ಪ್ರಾದುರ್ಭವಾದಿಕಂ ॥ ಗತ್ವಾ ತೇ ಸ್ವಸ್ವಧಾ
ಮಾನಿ ಸದಾರಾ ಅಸ್ಯನಾಮುದನ್ ॥೧೮॥ ಇತ್ಥಂ ಭಗವತಶ್ಶಂಭೋ
ರದ್ರಿಜಾಯಾ ಮಹೋತ್ಸವಂ ॥ ಮಾಂಗಲ್ಯಂ ಸರ್ವಪಾಪಘ್ನಂ ಸ
ರ್ವಾಭೀಷ್ಟಪ್ರದಾಯಕಂ ॥ ೧೯ ॥ ಯಃ ಶೃಣೋತಿ ಸದಾ ಮರ್ತ್ಯಃ
ಸಕೃತ್ವಾ ಚರಿತಂ ಮಹತ್ ॥ ಯಶ್ಚ ಚಿಃಪ್ರಯತೋ ಭೂತ್ವಾ ಪಠೇ
ದಿದಮನನ್ಯಧೀಃ ॥ ೨೦ ॥ ತಸ್ಯಾಪಾನಿ ಲಯಂ ಯಾಂತಿ ತಮಾಂಸಿ

ವಾಗಿರಲಿ ಎಂದು ಪ್ರಾರ್ಥಿಸಿದರು ॥ ೧೫ ॥ ಈ ಪ್ರಕಾರವಾಗಿ ಪ್ರಾರ್ಥಿ
ಸಿಕೊಂಡ ಆ ಕಲಶೇಶ್ವರನು ಬಹುಮಾನಪೂರ್ವಕವಾಗಿ ಆ ದೇವತೆ
ಗಳು, ಋಷಿಗಳು ಮುಂತಾದವರನ್ನು ಕಳುಹಿಸಿಕೊಟ್ಟನು ॥ ೧೬ ॥
ಆ ಮೇಲೆ ಪ್ರಯಾಣಕಾಲದಲ್ಲಿ ಅವರೆಲ್ಲರೂ ಸ್ವಾಮಿಯಾದ ಶ್ರೀ ಕಲಶೇ
ಶ್ವರನನ್ನು ನಮಸ್ಕರಿಸಿ ಅಪಾರವಾದ ಸಂತೋಷಭರಿತರಾಗಿ ತಮ್ಮ ತಮ್ಮ
ಸ್ಥಾನವನ್ನು ಕುರಿತು ಚಿಟ್ಟೈಸಿದರು ॥ ೧೭ ॥ ಮಾರ್ಗದಲ್ಲಿ ಆಶ್ಚರ್ಯ
ಕರವಾದ ಶ್ರೀ ಸರ್ವಾಂಗಸುಂದರೀದೇವಿಯ ಪ್ರಾದುರ್ಭಾವ ಮೊದ
ಲಾದ ಚರಿತ್ರೆಯನ್ನು ಹೇಳುತ್ತ ಹೊಗಳುತ್ತ ತಮ್ಮ ತಮ್ಮ ಪುರ
ವನ್ನು ಸೇರಿ ಪತ್ನೀಸಮೇತರಾಗಿ ಆನಂದಭರಿತರಾಗಿರುತ್ತಿದ್ದರು ॥೧೮॥
ಎಲೈ ಶೌನಕಾದಿಋಷಿಗಳಿರಾ ಕೇಳಿ; ಈ ಪ್ರಕಾರವಾಗಿ ಭಗವಂತನಾದ
ಶ್ರೀ ಕಲಶೇಶ್ವರನ ಶ್ರೀ ಗಿರಿಜಾದೇವಿಯ ಕಲ್ಯಾಣೋತ್ಸವವೆಂಬ ಮಂ
ಗಲವಾದ ಸಮಸ್ತ ಪಾಪನಾಶಕವಾದ ಸಕಲ ಇಷ್ಟಾರ್ಥದಾಯಕವಾದ
ಈ ಮಾಹಾತ್ಮ್ಯೆಯನ್ನು ॥ ೧೯ ॥ ಯಾವಾತನು ಸರ್ವ ಕಾಲದಲ್ಲಿ
ಯಾಗಲಿ ಒಂದಾವೃತ್ತಿಯಾಗಲಿ ಕೇಳುತ್ತಾನೋ ಯಾವಾತನು ನಿತ್ಯ
ದಲ್ಲಿ ಶುಚಿರ್ಭೂತನಾಗಿ ಇದರಲ್ಲಿಯೇ ಆಸಕ್ತಚಿತ್ತನಾಗಿ ಈ ಮಾಹಾ
ತ್ಮ್ಯೆಯ ಪಾರಾಯಣವನ್ನು ಮಾಡುತ್ತಾನೋ ॥ ೨೦ ॥ ಅವನ ಸಕಲ

ಚಯುಥಾರವೇಶ॥ ಪಿತರಃಸ್ತೃಪ್ತಿಮಾಯಾಂತಿದಾಸ್ಯಂತಿಶುಭಸಂ
ತತಿಂ ॥ ೨೧ ॥ ಶ್ರುತಬಿಂದುಃಪುರಾಶ್ರುತ್ವಾವಿಪ್ರೇಭ್ಯಶ್ಚರಿತಂಶಿ
ವಂ ॥ ತತಾರದುಸ್ತರಾತ್ಪಾಪಾದಗಚ್ಛದ್ಗತಿಮುತ್ತಮಾಂ॥೨೨ ॥
ನಳರಾಮಾದಿಭೂಪಾಲಾಃಪಾಂಡವಾಅಪಿಕಾನನೇ॥ ವಿಚರಂತೋಮ
ಹದ್ದುಃಖಸ್ತುಶ್ರುತ್ವಾಮುಕ್ತಾಭವಂಸ್ಸದಾ ॥ ೨೩ ॥ ತಪಸ್ಯಂತಿ
ಮುನಯಃಇದಮೇವಸದಾವನೇ॥ಮೋಕ್ಷದಂಜಗದೀಶಾನಂಧ್ಯಾಯಂ
ತಸ್ತನ್ಮಯಾಭವನ್ ॥ ೨೪ ॥ ಅಪುತ್ರೋಲಭತೇಪುತ್ರಾನ್ನಿರ್ಧ
ನೋಧನಮಾಪ್ನುಯಾತ್ ॥ ಅಜ್ಞಸ್ಸುಜ್ಞಾನಮಾಪ್ನೋತಿಜ್ಞಾ
ನೀಮೋಕ್ಷಮವಾಪ್ನುಯಾತ್ ॥ ೨೫ ॥ ಚರಿತ್ರಂಶ್ರುತ್ವಾತೋದೇ

ಪಾಪಗಳೂ ಇಲ್ಲಿ ಸೂರ್ಯನು ಹೇಗೆ ಕತ್ತಲೆಯನ್ನು ಪರಿಹರಿಸುವನೋ
ಹಾಗೆ ಲಯವನ್ನು ಹೊಂದುವವು ಪಿತೃಗಳು ತೃಪ್ತಿಯನ್ನು ಹೊಂ
ದುವರು. ಶುಭವಾದ ಪುತ್ರ ಸಂತತಿಯನ್ನು ಕೊಡುವರು ॥ ೨೧ ॥
ಪೂರ್ವಿಕನಾದ ಶ್ರುತಬಿಂದು ಎಂಬ ಯಮುನಾನದೀ ತೀರದಲ್ಲಿರುವ
ಸುರಸಪಟ್ಟಣದ ಅರಸನು ಬ್ರಾಹ್ಮಣರ ದೆಸೆಯಿಂದ ಮಂಗಲವಾದ ಈ
ಚರಿತ್ರೆಯನ್ನು ಕೇಳಿದ ಮಾತ್ರದಿಂದಲೇ ಸಕಲ ಪಾಪಗಳಿಂದ ಮುಕ್ತ
ನಾಗಿ ಆ ಕ್ಷೇತ್ರೇಶ್ವರ ಸೇವೆಯಿಂದ ಒಳ್ಳೆಯ ಪದವಿಯನ್ನು ಹೊಂದಿ
ದನು ॥ ೨೨ ॥ ಮತ್ತು ನಳಚಕ್ರವರ್ತಿ, ಶ್ರೀರಾಮಚಂದ್ರ, ಪಾಂಡ
ವರು ಮೊದಲಾದ ಅರಸುಗಳು ಕಾನನದಲ್ಲಿ ಕಷ್ಟಪಡುತ್ತಿದ್ದ ಸಮಯ
ದಲ್ಲಿ ದೊಡ್ಡವರ ದೆಸೆಯಿಂದ ಈ ಕ್ಷೇತ್ರದ ಚರಿತ್ರೆಯನ್ನು ಕೇಳಿ
ಅದನ್ನು ನಿತ್ಯದಲ್ಲಿಯೂ ಸ್ಮರಿಸುತ್ತ ಸಕಲ ಕಷ್ಟಗಳನ್ನೂ ಕಳೆದು
ಸುಖವನ್ನು ಹೊಂದಿದರು ॥೨೩॥ ವನದಲ್ಲಿ ಋಷಿಗಳು ಮೋಕ್ಷದಾಯ
ಕನಾದ ಜಗದೀಶ್ವರನನ್ನು ಸ್ಮರಿಸುತ್ತ ಈ ಚರಿತ್ರೆಯನ್ನೇ ಜಪಿಸಿ
ತಪಸ್ಸನ್ನು ಮಾಡಿದರು. ಅದರಿಂದ ಪರಮೇಶ್ವರಮಯರಾದರು ॥೨೪॥
ಪುತ್ರರಿಲ್ಲದವನು ಪುತ್ರನನ್ನು ಹೊಂದುವನು. ದರಿದ್ರನು ಧನವನ್ನು
ಹೊಂದುವನು. ಜ್ಞಾನವಿಚಾರಕನು ಮುಕ್ತಿಯನ್ನು ಹೊಂದುವ
ನು ॥ ೨೫ ॥ ಕೃಪಾಸಮುದ್ರನಾದ, ಪ್ರಕಾಶಮಾನನಾದ ಶ್ರೀ ಕಲಶೇ

ವಶ್ಚಕಲಶೇಶಃ ಕೃಪಾನಿಧಿಃ ॥ ಭಕ್ತಿಂ ಜ್ಞಾನಂ ವಿರಕ್ತಿಂ ಚ ದದಾತಿ ಶ್ರಿಯಮುತ್ತಮಾಂ ॥ ... ... ॥ ೨೬ ॥

ಇತಿ ಶ್ರೀ ಕಲಶೇಶ್ವರ ಮಾಹಾತ್ಮ್ಯೇ ಶ್ರೀಮತ್ಕಲ್ಯಾಣ ಚರಿತ್ರ ಶ್ರವಣ ಫಲೋಕ್ತಿರ್ನಾಮ ಷೋಡಶೋಧ್ಯಾಯಃ.

ಶ್ವರನು ಭಕ್ತಿಯಿಂದ ಈ ಚರಿತ್ರೆಯನ್ನು ಕೇಳುವವನಿಗೆ ಭಕ್ತಿಯನ್ನೂ ಶ್ರೀಳಿವಳಿಕೆಯನ್ನೂ ರೂಪಜ್ಞಾನವನ್ನೂ ವೈರಾಗ್ಯವನ್ನೂ ಉತ್ತಮವಾದ ಸಂಪತ್ತನ್ನೂ ಕೊಡುವನು ॥ ...... ॥೨೬॥

ಈ ಪ್ರಕಾರವಾಗಿ ಸ್ಕಂದಪುರಾಣದಲ್ಲಿ ತುಂಗಭದ್ರಾಖಂಡದಲ್ಲಿ ಹೇಳಿರುವ ಶ್ರೀ ಕಲಶೇಶ್ವರ ಸ್ವಾಮಿಯವರ ಮಹಿಮೆಯಾದ ಶ್ರೀ ಗಿರಿಜಾ ಕಲ್ಯಾಣೋತ್ಸವದ ಚರಿತ್ರೆಯನ್ನು ಕೇಳಿದ ಫಲ ಪ್ರಾಪ್ತಿ ರೂಪವಾದ ಈ ಹದಿನಾರನೆಯ ಅಧ್ಯಾಯವು ಸಂಪೂರ್ಣವಾದುದು. ಶ್ರೀ॥ ಶ್ರೀ ॥

ಶ್ರೀಮುನಯಃ ॥ ಸೂತಪೂರ್ವಂತ್ವಯಾಪ್ರೋಕ್ತೋರಾಮಾದ್ರಿರಿತಿತತ್ರವೈ ॥ ತಸ್ಯಾಚಲಸ್ಯರಾಮಾದ್ರಿರಿತಿನಾಮಕಥಂವದ ॥೧॥ ಸೂತಃ ॥ ಸಾಧವಸ್ತತ್ರವಕ್ಷ್ಯಾಮಿಶ್ರೀರಾಮಚರಿತಂಶುಭಂ॥ ಶೃಣ್ವತಾಂಸರ್ವಪಾಪಘ್ನಂಮಂಗಲಾನಾಂಚಮಂಗಲಂ ॥ ೨ ॥ ಇಕ್ಷ್ವಾಕುವಂಶಪ್ರಭವೋರಾಜಾದಶರಥೋಮಹಾನ್ ॥ ಅನೇನಪ್ರಾರ್ಥಿತಶ್ರೀಶಶ್ಚತುರ್ಧಾಪುತ್ರತಾಮಗಾತ್ ॥ ೩ ॥ ರಾಮಲಕ್ಷ್ಮಣಶತ್ರುಘ್ನಭರತಾಇತಿಸಂಜ್ಞಯಾ ॥ ತಸ್ಯಾನುಚರಿತಂಬ್ರಹ್ಮನ್ನೃಷಿಭಿಸ್ತತ್ವದರ್ಶಿಭಿಃ ॥ ೪ ॥ ಶ್ರುತಂಹಿವರ್ಣಿತಂಭೂರಿಮಯಾಸೀತಾಪತೇರ್ಮುರ್

೧೭ ನೆಯ ಅಧ್ಯಾಯು ಪ್ರಾರಂಭ.

ನೈಮಿಶಾರಣ್ಯ ವಾಸಿಗಳಾದ ಶೌನಕಾದಿ ಋಷಿಗಳು ಸೂತಪೌರಾಣಿಕನನ್ನು ಕೇಳುತ್ತಾರೆ. ಎಲೈ ಸೂತನೆ, ನಿನ್ನಿಂದ ಆ ಕಲಶಕ್ಷೇತ್ರ ಮಾಹಾತ್ಮ್ಯಯಲ್ಲಿ ರಾಮಾದ್ರಿ ಎಂದು ಹೇಳಲ್ಪಟ್ಟಿತು. ಆ ಪರ್ವತಕ್ಕೆ ರಾಮಾದ್ರಿ ಸಂಜ್ಞೆಯು ಹೇಗೆ ಬಂತು, ಅದನ್ನು ಹೇಳು ಎಂದು ಕೇಳುತ್ತಲೆ ॥೧॥ ಸೂತನು ಹೇಳುತ್ತಾನೆ. ಎಲೈ ಸಾಧುಗಳಿರಾ, ಅದನ್ನು ಹೇಳುತ್ತೇನೆ ಕೇಳಿ. ಅದು ಶ್ರೀರಾಮ ಚರಿತ್ರವಾಗಿ ಶುಭವಾಗಿ ಮಾಂಗಲ್ಯಗಳಿಗೆಲ್ಲ ಮಂಗಲವಾಗಿರುವುದು. ಅದು ನಿನ್ನಿಂದ ಕೇಳೋಣವಾಗಲಿ ॥ ೨ ॥ ಇಕ್ಷ್ವಾಕುವಂಶದಲ್ಲಿ ಹುಟ್ಟಿದ ದಶರಥನೆಂಬ ಶ್ರೇಷ್ಠನಾದ ಅರಸನು ಇದ್ದನು. ಈ ಅರಸನಿಂದ ಪ್ರಾರ್ಥಿಸಿಕೊಂಡ ಶ್ರಿಯಃಪತಿಯು ನಾಲ್ಕು ಪ್ರಕಾರವಾಗಿ ॥೩॥ ರಾಮ, ಲಕ್ಷ್ಮಣ, ಭರತ, ಶತ್ರುಘ್ನರೆಂಬ ಸಂಜ್ಞೆಯಿಂದ ತಾನೊಬ್ಬನೆ ನಾಲ್ಕು ರೂಪವಾಗಿ ಆ ದೊರೆಗೆ ಮಕ್ಕಳಾಗಿ ಹುಟ್ಟಿದನು. ಎಲೈ ಶೌನಕನೇ ಅಂಥ ಸೀತಾಪತಿಯಾದ ಶ್ರೀರಾಮನ ಚರಿತ್ರವು, ತತ್ವಜ್ಞಾನಿಗಳಿಂದ, ಋಷಿಗಳಿಂದ ಬಹಳವಾಗಿ ಹೇಳಿದ್ದು ನನ್ನಿಂದ ಕೇಳಲ್ಪಟ್ಟಿತ್ತು. ನಾನು ಈಗ ಪವಿತ್ರವಾದ ರಘುವಂಶದ ಚರಿತ್ರೆಯನ್ನು ಸಂಕ್ಷೇಪವಾಗಿ

ಹುಃ॥ ಸನಾಮಸತೋತ್ರವಕ್ಷ್ಯೇಹಂಪುಣ್ಯಂರಘುಕುಲೋದ್ಭವಂ ॥೫॥ ವಿಶ್ವಾಮಿತ್ರಾಧ್ವರೇಯೇನಮಾರೀಚಾದ್ಯಾನಿಶಾಚರಾಃ ॥ ಪಶ್ಯತೋ ಲಕ್ಷ್ಮಣಸ್ಯೈವಹತಾಸ್ಸೈವೃತಪುಂಗವಾಃ ॥ ೬ ॥ ಯೋಲೋಕ ವೀರಸಮಿತೌ ಧನುರೈಶಮುಗ್ರಂ ಸೀತಾಸ್ವಯಂವರಗೃಹೇತ್ರಿಶ ತೋಪನೀತಂ ॥ ಆದಾಯಬಾಲಗಜಲೀಲಇವೇಕ್ಷುಯಷ್ಟಿಂಸಜ್ಜೀ ಚಕಾರಸುವಿಕೃಷ್ಯಬಭಂಜಮಧ್ಯೇ ॥೭॥ ಜಿತ್ವಾನುರೂಪಗುಣಶೀಲ ವಯೋಂಗರೂಪಾಂಸೀತಾಭಿಧಾಂಶ್ರಿಯಮುರಸ್ಯಭಿಲಬ್ಧವಾನ್ಯಃ ॥ ಮಾರ್ಗೇವ್ರಜನ್ರಘುಪತಿರ್ವ್ಯನಯತ್ಪ್ರರೂಢಂದರ್ಪಂಮಹೀಮಕೃತ ಯಸ್ತ್ರಿರರಾಜಬೀಜಾಂ ॥ ೮ ॥ ಯಃಸತ್ಯಪಾಶಪರಿವೀತಪಿತುರ್ನಿವೇ ಶಂಸ್ತ್ರೈಣಸ್ಯಚಾಪಿಶಿರಸಾಜಗೃಹೇಸಭಾರ್ಯಃ ॥ ರಾಜ್ಯಂಪ್ರಿಯಂ ಪ್ರಣಯಿನಃ ಸುಹೃದೋನಿವಾಸಂತ್ಯಕ್ತ್ವಾಯಯೌವನಮಸೂನಿವ

ಹೇಳುತ್ತೇನೆ ॥೪॥೫॥ ಯಾವ ಶ್ರೀರಾಮನಿಂದ ವಿಶ್ವಾಮಿತ್ರನ ಯಜ್ಞ ದಲ್ಲಿ ನೋಡುತ್ತಿರುವ ಲಕ್ಷ್ಮಣನ ಮುಂದೆ ಮಾರೀಚ ಮೊದಲಾದ ರಾಕ್ಷಸ ಶ್ರೇಷ್ಠರು ಹತರಾದರೋ ॥೬॥ ಯಾವಾತನು ಲೋಕದಲ್ಲಿರುವ ಸಮಸ್ತ ವೀರರೂ ಸೇರಿದ ಸೀತಾದೇವಿಯ ಸ್ವಯಂವರ ಮಂಟಪದಲ್ಲಿ ಮುನ್ನೂರು ಜನರು ತಂದ ಕಠಿನವಾದ ಶಿವ ಸಂಬಂಧವಾದ ಧನ ಸ್ಸಿನ ಹೆದೆಯನ್ನು ಏರಿಸಿದನೊ ಮತ್ತು ಕಬ್ಬಿನ ಕೋಲನ್ನು ಆನೆ ಯು ಮುರಿಯುವಂತೆ ಆ ಧನುಸ್ಸನ್ನು ಮಧ್ಯದಲ್ಲಿ ಮುರಿದನೊ ॥ ೭ ॥ ತನಗೆ ಸದೃಶವಾದ, ಸರ್ವಾಕಾರ ಸೌಂದರ್ಯವುಳ್ಳ ತನ್ನ ವಕ್ಷಸ್ಥಳದಲ್ಲಿ ಮಾನಿತಳಾದ ಸೀತೆ ಎಂಬ ಗುರುತಾದ ಲಕ್ಷ್ಮೀದೇವಿಯನ್ನು ಸ್ವಾ ಧೀನ ಮಾಡಿಕೊಂಡು ದಾರಿಯಲ್ಲಿ ಹೋಗುತ್ತಿದ್ದ ಶ್ರೀರಘುಪತಿಯು ಯಾವಾತನು ಏಳು ಮೂರು ಸಂಖ್ಯೆಯಲ್ಲಿ ಭೂಮಿಯನ್ನು ರಾಜರ ಬೀಜವಿಲ್ಲದಂತೆ ಮಾಡಿದನೊ ಅಂಥ ಪರಶುರಾಮನ ಪ್ರಬಲವಾದ ಗರ್ವ ವನ್ನು ಹೋಗಲಾಡಿಸಿದನೋ ॥೮॥ ಯಾವಾತನು ಸ್ತ್ರೀವಶನಾದರೂ

ಮುಕ್ತಸಂಘಃ ॥ ೯ ॥ ರಕ್ಷಸ್ಸ್ವಸುರ್ವಿಕೃತರೂಪವಿಶುದ್ಧಬುದ್ಧೇ ಸ್ತಸ್ಯಾಃ ಖರತ್ರಿಶಿರದೂಷಣಮುಖ್ಯಬಂಧೂನ್ ॥ ಜಘ್ನೇಚತುರ್ದಶಸಹಸ್ರಮರಣ್ಯಭೂಮೌ ಕೋದಂಡಪಾಣಿರಟಮಾನಉವಾಸಕೃಚ್ಛ್ರಂ ॥ ೧೦ ॥ ಸೀತಾಕಥಾಶ್ರವಣದೀಪಿತಹೃಚ್ಛಯೇನಸ್ಪಷ್ಟಂವಿಲೋಕ್ಯಚಮುನೇರ್ದಶಕಂಧರೇಣ ॥ ಜಘ್ನೇದ್ಭುತೈಣವಪುಷಾಶ್ರಮತೋಪಕೃಷ್ಟೋಮಾರೀಚನಾಶುವಿಶಿಖೇನಯಥಾಕಮುಗ್ರಃ ॥೧೧॥ ರಕ್ಷೋಧಮೇನವೃಕವದ್ವಿಪಿನೇಸಮಕ್ಷಂವೈದೇಹರಾಜದುಹಿತರ್ಯಪಯಾಪಿತಾಯಾಂ ॥ ಭ್ರಾತ್ರಾವನೇಕೃಪಣವತ್ಪ್ರಿಯಯಾವಿಯುಕ್ತಃ

ಸತ್ಯವೆಂಬ ಪಾಶಕ್ಕೆ ಬದ್ಧನಾದ ತನ್ನ ತಂದೆಯ ಅಪ್ಪಣೆಯನ್ನು ಪತ್ನೀ ಸಹಿತನಾಗಿ ತಲೆಬಗ್ಗಿಸಿಕೊಂಡು ಸ್ವೀಕರಿಸಿದನೋ ಮತ್ತು ಸಂಸಾರದಲ್ಲಿ ನಿರಪೇಕ್ಷನೂ ಪ್ರಾಣಗಳನ್ನು ಬಿಡುವಂತೆ ಹಿತವಾದ ರಾಜ್ಯವನ್ನೂ ಪ್ರಿಯರಾದ ಸ್ನೇಹಿತರನ್ನೂ ಮನೆಯನ್ನೂ ಬಿಟ್ಟು ಅಡವಿಯನ್ನು ಸೇರಿದನೋ ॥೯॥ ಮತ್ತು ಅಶುಚಿಯಾದ ಬುದ್ಧಿಯುಳ್ಳ ರಾವಣನ ತಂಗಿಯಾದ ಶೂರ್ಪನಖಿಯು ಆಕಾರವು ಕೆಡಿಸಲ್ಪಟ್ಟಿತೊ ಅಂಥವಳ ಮುಖ್ಯ ಬಾಂಧವರಾದ ಖರ,ತ್ರಿಶರ,ದೂಷಣರೇ ಮೊದಲಾದ ಹದಿನಾಲ್ಕು ಸಾವಿರ ರಾಕ್ಷಸರನ್ನು ಅಪಾರವಾದ ಧನುಸ್ಸುಳ್ಳವನಾಗಿ ಕೊಂದನೋ ಮತ್ತು ಕಷ್ಟತರವಾದ ವನವಾಸವನ್ನು ಅನುಭವಿಸುವನೋ॥೧೦॥ ಸೀತಾದೇವಿಯ ವೃತ್ತಾಂತವನ್ನು ಕೇಳಿದ ಭ್ರಾಂತಿಯುಳ್ಳ ದಶಕಂಠನಾದ ರಾವಣನಿಂದ ನಿರ್ಮಿತವಾದ ಹರಿಣೀಮೃಗದ ಆಕಾರದಿಂದ ಶ್ರಮವಾಗಿ ದೂರಹೋಗಿಸಿಕೊಂಡ ಆ ಶ್ರೀರಾಮನು ಹೇಗೆ ವೀರಭದ್ರದೇವನು ದಕ್ಷನನ್ನು ಸಂಹರಿಸಿದನೋ ಹಾಗೆ ಜಾಗ್ರತೆಯಾಗಿ ಮಾರೀಚನನ್ನು ಕೊಂದನು ॥ ೧೧ ॥ ಆಗ ಶ್ರೀರಾಮನು ಆಶ್ರಮದಲ್ಲಿ ಇರದಿದ್ದ ಸಮಯದಲ್ಲಿ ರಾಕ್ಷಸಾಧಮನಾದ ರಾವಣನು ತೋಳದಂತೆ ಅಡವಿಯಲ್ಲಿ ಸೀತಾದೇವಿಯನ್ನು ಅಪಹರಿಸಿಕೊಳ್ಳುತ್ತಿರಲಿಕ್ಕಾಗಿ ತಮ್ಮನಿಂದ ಕೂಡಿ ಕಾಡಿನಲ್ಲಿ ದೀನನೋಪಾದಿಯಲ್ಲಿ ಪ್ರಿಯಪತ್ನಿಯಿಂದ

ಸ್ತ್ರೀಸಂಗಿನಾಂಗತಿಮಿತಃಪ್ರಥಯಾಂಚಕಾರ ॥ ೧೨ ॥ ಇತ್ಥಂಸ
ದಂಡಕಾರಣ್ಯೇಚರನ್ರಘುಕುಲೋದ್ವಹಃ ॥ ವೀರಭೂಮಿಮಗಾತ್ಕಾ
ಲೇಪುಂಸಾಂಬಲವಿವರ್ಧಿನೀಂ ॥ ೧೩ ॥ ತದಾಪ್ರೋವಾಚಸೌಮಿತ್ರಿ
ಸ್ತದ್ಭೂವೀರ್ಯಾನ್ವಿತೋಗ್ರಜಂ ॥ ನಾಹಂಬಿಭರ್ಮಿತೇಚಾಪಮಿಷು
ಧಿಂಖಡ್ಗಮೇವಚ ॥ ೧೪ ॥ ಯದಿಚಾಪಾದಿಕೇಚಾಶುಗೃಹ್ಯತಾಂ
ತರ್ಹಿಪೂರ್ವಜ ॥ ಇತಿತದ್ವಚನಂಶ್ರುತ್ವಾಹಸನ್ಜಗ್ರಾಹರಾಘವಃ ॥
॥ ೧೫ ॥ ವೀರಭೂಮಿಕೃತಾಂಮತ್ವಾಧಿಯಂರಾಮನುಜನ್ಮನಃ ॥
ತನ್ಮೃತ್ತಿಕಾಂಚಜಗ್ರಾಹ ಧನುಷ್ಕೋಟ್ಯಾರಘೂದ್ವಹಃ ॥ ೧೬ ॥
ತತಃಪ್ರಯಾತೌತೌವೀರೌತ್ಯಕ್ತ್ವಾವೀರಭುವಂನೃಪೌ ॥ ತುಂಗ

ರಹಿತನಾಗಿ ಲೋಕದಲ್ಲಿ ಸ್ತ್ರೀಸಂಬಂಧವುಳ್ಳವರು ಇಂಥ ಅವಸ್ಥೆಯನ್ನು ಅನುಭವಿಸುವ ವಿಷಯವು ಸಾಧನವಾಗಿದೆ ಎಂಬುವನ್ನು ಪ್ರಕಟವಾಗಿ ತಿಳಿಸಿದನು ॥೧೨॥ ಈ ಪ್ರಕಾರವಾಗಿ ಆ ರಘುಕುಲಬಲಾಮನಾದ ಶ್ರೀರಾಮನು ದಂಡಕಾರಣ್ಯದಲ್ಲಿ ಸಂಚರಿಸುವನಾಗಿ ಒಂದಾನೊಂದು ಸಮಯದಲ್ಲಿ ಪುರುಷರಿಗೆ ಶಕ್ತಿಯನ್ನೂ ಗರ್ವವನ್ನೂ ಹೆಚ್ಚಿಸುತ್ತಿರುವ ಧಾರವಾಡ ಪ್ರದೇಶವನ್ನು ಕುರಿತು ಹೋದನು ॥೧೩॥ ಆಗ ಆ ನೆಲದ ಗಾಳಿಬಿಸಿಲಿನ ಹಟಯಿಂದ ಕೂಡಿದ ಸುಮಿತ್ರಾನಂದನನು ಅಣ್ಣನನ್ನು ನೋಡಿ ನಿನ್ನ ಬಿಲ್ಲನ್ನೂ ಬತ್ತಿಕೆಯನ್ನೂ ಶಕ್ತಿಯನ್ನೂ ಕೂಡ ಹೊರುವುದಿಲ್ಲ ಎಂದು ನುಡಿದನು ॥೧೪॥ ಎಲೈ ಅಣ್ಣನೆ ಬಿಲ್ಲು ಮೊದಲಾ ವರಲ್ಲಿ ಆಶೆ ಇದ್ದರೆ ತೆಗೆದುಕೊಳ್ಳೋಣವಾಗಲಿ. ಹೀಗೆಂಬ ಲಕ್ಷ್ಮಣನ ಮಾತನ್ನು ಕೇಳಿ ಶ್ರೀರಾಮನು ಮಂದಹಾಸ ಯುಕ್ತನಾಗಿ ಅದನ್ನೆಲ್ಲ ತೆಗೆದುಕೊಂಡನು ॥ ೧೫ ॥ ತಮ್ಮನಾದ ಲಕ್ಷ್ಮಣನಿಗೆ ವೀರಭೂಮಿಜನ್ಯವಾದ ಆ ಬುದ್ಧಿಯನ್ನು ತಿಳಿದು ಶ್ರೀರಾಮನು ಧನುಸ್ಸಿನ ತುದಿಯಿಂದ ಆ ಮೃತ್ತಿಕೆಯನ್ನು ತೆಗೆದುಕೊಂಡು ಬಂದನು ॥೧೬॥ ಅನಂತರ ಪರಾಕ್ರಮಿಗಳಾದ ಅವರಿಬ್ಬರೂ ಪ್ರಯಾಣಮಾಡುವವರಾಗಿ ಎಲ್ಲಿ ಶ್ರೀ ಕಲಶೇಶ್ವರನಿದ್ದಾನೆಯೋ ಅಂಥ ತುಂಗಭದ್ರಾ

ಭದ್ರಾತಟಂಪ್ರಾಪ್ತೌಯತ್ರಶ್ರೀಕಲಶೇಶ್ವರಃ ॥೧೭॥ ವೀರಭೂಮಿರ್ದಯಾವಿಪ್ರವ್ರಜತೋರಪಯಾಪಿತಾ ॥ ತದಾಕೃತಾಂಜಲಿಃಪ್ರಾಹ ಲಕ್ಷ್ಮಣಃಪೂರ್ವಜಂವಿಭೋ ॥ ಬಿಭರ್ಷಿಕಿಮಿದಂದೇವಚಾಪಂಖಡ್ಗಂತಥೇಷುಧಿಂ ॥ ೧೮ ॥ ಸ್ಥಿತೇಮಯಿಜಗನ್ನಾಥಸೇವಕೇಕಿಮಿದಂಕೃತಂ ॥ ತದಾಪ್ರತ್ಯರ್ಪಯದ್ರಾಮೋಲಕ್ಷ್ಮಣಾಯಾಖಿಲಂ ವಿಭುಃ ॥ ೧೯ ॥ ಈಶಸ್ಯವಾಯುದಿಗ್ಭಾಗೇ ಮೃದಂಸಂಸ್ಥಾಪ್ಯರಾಘವಃ ॥ ಲಕ್ಷ್ಮಣಾರುಹ್ಯಚಾತ್ರಾಪೀದೇವೀತೀರ್ಥಂವಿಲೋಕಯ ॥ ೨೦ ॥ ತದಾರುರೋಹಸೌಮಿತ್ರಿರಾಜ್ಞಯಾಪೂರ್ವಜನ್ಮನಃ ॥ ಪ್ರತ್ಯುವಾಚತದಾರಾಮಂಚಾಪಂತನ್ನಾಹಮುದ್ವಹೇ ॥ ೨೧ ॥ ಅಹಂದಾಶರಥಿಶ್ಚಾಸ್ಮಿನಭೃತ್ಯಃಕಸ್ಯಚಿನ್ನೃಪ ॥ ಇತ್ಯುಕ್ತ್ವಾಪ್ರಾಕ್ಷಿ

ನದಿಯ ದಡವನ್ನು ಸೇರಿದರು ॥೧೭॥ ಎಲೈ ವಿಪ್ರೋತ್ತಮನಾದ ಶೌನಕನೇ ಪ್ರಯಾಣಮಾಡುತ್ತಿರುವ ಆ ರಾಮಲಕ್ಷ್ಮಣರಿಗೆ ಯಾವಾಗ ಆ ವೀರ ಭೂಮಿಯು ಕಳೆಯಲ್ಪಟ್ಟಿತೋ ಆಗ ಕೈ ಜೋಡಿಸಿಕೊಂಡು ಲಕ್ಷ್ಮಣನು ಅಣ್ಣನನ್ನು ಎಲೈ ಸ್ವಾಮಿಯೆ, ಬಿಲ್ಲನ್ನೂ ಚಂದ್ರಾಯುಧವನ್ನೂ ಹಾಗೆಯೇ ಬತ್ತಳಿಕೆಯನ್ನೂ ಎಲೈ ದೇವನೆ, ಇದೇನು ನೀನೇ ಹೊತ್ತುಕೊಂಡೆ ॥೧೮॥ ಸೇವಕನಾದ ನಾನು ಇರುತಿರಲಿಕ್ಕಾಗಿ ಎಲೈ ಜಗತ್ಸ್ವಾಮಿಯೇ ಇದೇನು ಮಾಡಲ್ಪಟ್ಟಿತು. ಹೀಗೆಂದುದನ್ನು ಕೇಳಿ ಸ್ವಾಮಿಯಾದ ಶ್ರೀರಾಮನ, ಆವಾಗ ಆ ಎಲ್ಲವನ್ನೂ ತಿರುಗಿಕೊಟ್ಟನು ॥ ೧೯ ॥ ಶ್ರೀಕಲಶೇಶ್ವರಸ್ವಾಮಿಯ ವಾಯುವ್ಯದಿಕ್ಕಿನಲ್ಲಿ ಶ್ರೀ ರಾಮನು ಧನುಸ್ಸಿನ ಕೊನೆಯಲ್ಲಿರುವ ಮೃತ್ತಿಕೆಯನ್ನು ಇಟ್ಟು ಎಲೈ ಲಕ್ಷ್ಮಣನೇ ಈ ಮೃತ್ತಿಕೆಯ ಮೇಲೆ ಆರೋಹಿಸಿ ಇಲ್ಲಿರುವ ಅಂಬಾತೀರ್ಥವನ್ನು ನೋಡು ॥೨೦॥ ಆಗ ತನ್ನ ಹಿರಿಯನ ಅಪ್ಪಣೆಯಿಂದ ಸುಮಿತ್ರಾಪುತ್ರನು ಆರೋಹಿಸಿದನು. ಆ ಸಮಯದಲ್ಲಿ ಶ್ರೀರಾಮನನ್ನು ಕರೆದು ನಾನು ನಿನ್ನ ಧನುಸ್ಸನ್ನು ಹೊರತಕ್ಕವನಲ್ಲ ॥೨೧॥ ನಾನು ದಶರಥನ ಮಗನಾದವನು, ಯಾವಾತನಿಗೂ ನಾನು ಸೇವಕನಲ್ಲ. ಹೀಗೆಂದು ಲಕ್ಷ್ಮ

ಪದ್ಭ್ಯಾಮ್ಯಾಂಥನುರ್ಬಾಣಾಂಶ್ಚ ಲಕ್ಷ್ಮಣಃ ॥ ೨೨ ॥ ಅವರೋಹ ಯಸೌಮಿತ್ರ ಇತಿರಾಮೋಬ್ರವಿಚ್ಚ ತಂ ॥ ಅವರೋಪ್ಯಥಸೌಮಿತ್ರಿ ರ್ಲಜ್ಜಯಾಬಾಣಕಾರ್ಮುಕೇ ॥೨೩॥ ಜಗ್ರಾಹರಾಮಚರಸಾವಿಸ್ಮಿತೋಯುಗಪತ್ತ್ರಪ ॥ ಸೌಮಿತ್ರಿರಬ್ರವೀದ್ರಾಮಂಬುದ್ಧಿಭೇದೋ ಮಮಾಗ್ರಜ ॥ ೨೪ ॥ ಇತ್ಯುಕ್ತಃಪ್ರಾಹತಂರಾಮೋವೀರಭೂಮಿಕೃತಾಭಿದಾ ॥ ನದೋಷಸ್ತ್ವಯಿಸೌಮಿತ್ರೇಯಾಸ್ಯಾವಃಕಲಶೇಶ್ವರಂ॥೨೫॥ ಮನ್ನಾಮ್ನಾಸ್ಥಾನತಶ್ಚಾತ್ರವಮೃದ್ರಾಶಿಃಖ್ಯಾತಿಮೇಷ್ಯತಿ। ರಾಮಾದ್ರಿರಿತಿಸೌಮಿತ್ರೇಲೋಕೇಸ್ಥಾಸ್ಯತಿವಿಶ್ರುತಃ॥೨೬॥ ತಿಷ್ಠನ್ನತ್ರನದೀಂದೇವಶಿಖರಂಯಸ್ತುಪಶ್ಯತಿ ॥ ಸಯಾತಿಪರಮಂಸ್ಥಾನಂಮ

ಣನು ಬಾಣಗಳನ್ನೂ ಬಿಲ್ಲನ್ನೂ ನೆಲದಲ್ಲಿ ಹಾಕಿದನು॥೨೨॥ ಎಲೈ ಸುಮಿತ್ರಾದೇವಿಯ ಮಗನೇ, ಇಳಿಯೆಂದು ಶ್ರೀರಾಮನು ಲಕ್ಷ್ಮಣನನ್ನು ಕುರಿತು ಹೇಳಿದನು. ಆನಂತರ ಲಕ್ಷ್ಮಣನು ಇಳಿದವನಾಗಿ ಲಜ್ಜೆಯಿಂದ ಬಗ್ಗಿದವನಾಗಿ ಬಾಣ ಧನುಸ್ಸುಗಳನ್ನು ॥ ೨೩ ॥ ತೆಗೆದುಕೊಂಡು ಆಶ್ಚರ್ಯಪಟ್ಟವನಾಗಿ ಶ್ರೀರಾಮನನ್ನು ಕುರಿತು ಎಲೈ ಪೂರ್ವಜನೆ ನನಗೆ ಹೀಗೆ ಬುದ್ಧಿಭೇದವು ಯಾವಕಾರಣದಿಂದ ಉಂಟಾಗುವುದು ಅವನ್ನು ನೀನು ಹೇಳಬೇಕು ॥೨೪॥ ಹೀಗೆ ಕೇಳಿಸಿಕೊಂಡ ಶ್ರೀರಾಮನು ಎಲೈ ಲಕ್ಷ್ಮಣನೇ,ಇದು ವೀರಭೂಮಿಯ ಸಂಬಂಧವಾದ ಬುದ್ಧಿಭೇದವೇ ಹೊರತು ನಿನ್ನಲ್ಲಿ ದೋಷವಿಲ್ಲ. ಶ್ರೀ ಕಲಶೇಶ್ವರನನ್ನು ಕುರಿತು ಹೋಗೋಣ ಎಂದನು ॥೨೫॥ ಇಲ್ಲಿ ಹಾಕಲ್ಪಟ್ಟ ಈ ಮೃತ್ತಿಕೆಯ ರಾಶಿಯು ನನ್ನ ಹೆಸರಿನಿಂದ ಪ್ರಸಿದ್ಧಿಯನ್ನು ಹೊಂದುವುದು. ಎಲೈ ಲಕ್ಷ್ಮಣನೆ, ರಾಮಾದ್ರಿಯೆಂದು ಲೋಕದಲ್ಲಿ ಪ್ರಸಿದ್ಧವಾಗುವದು. ಈಗ ರಾಮನ ತಿಟ್ಟೆಂದು ರೂಢಿಯಲ್ಲಿದೆ. ಇಲ್ಲಿ ನಿಂತವನಾಗಿ ಯಾವನು ತುಂಗಭದ್ರಾ ನದಿಯನ್ನೂ ಶ್ರೀಕಲಶೇಶ್ವರ ದೇವಾಲಯ ಶಿಖರವನ್ನೂ ನೋಡುತ್ತಾನೋ ಅವನು ಉತ್ತಮಸ್ಥಾನವಾದ ನನ್ನ ಸಾಯುಜ್ಯವನ್ನೇ

ಮಸಾಯುಜ್ಯಮೇವಚ ॥ ೨೭ ॥ ಇತಿದತ್ವಾವರಂರಾಮಃಪ್ರಯ
ಯೌಕಲಶೇಶ್ವರಂ ॥ತೀರ್ಥೇಷುಪಂಚಸುಸ್ನಾತ್ವಾಪಿತೄನ್ಸಭ್ಯರ್ಚ್ಯ
ಶಾಶ್ವತಃ ॥೨೮॥ ಗಜರೂಪಂಗಣಾಧ್ಯಕ್ಷಂಮೋದಕೈರ್ನಾರಿಕೇರಕೈಃ॥
ಸಂಪೂಜ್ಯಕಲಶೇಶಂಚರಾವಣಸ್ಯವಧೋದ್ಯಮಂ ॥೨೯॥ ಲಬ್ಧ್ವಾವ
ವರಂಮಹೇಶಾಚ್ಚ ಮೃಗಯನ್ದಯಿತಾಂಮುದಾ ॥ ಸೌಮಿತ್ರಿಸಹಿ
ತೋರಾಮೋವನಾದ್ವನಮುದಾರಧೀಃ ॥೩೦॥ ದಗ್ಧ್ವಾತ್ಮಕೃತ್ಯಹ
ತಕೃತ್ಯಮಹಂಕಬಂಧಸಖ್ಯಂವಿಧಾಯಕಪಿಭಿರ್ದಯಿತಾಗತಿಂತ್ವೈಃ ॥
ಬುಧ್ವಾಥವಾಲಿನಿಹತೇಪ್ಲವಗೇಂದ್ರಸೈನ್ಯೈರ್ವೇಲಾಮಗಾತ್ಸುಮ

ಹೊಂದುವನು॥೨೭॥ ಈಪ್ರಕಾರವಾಗಿ ಶಾಶ್ವತರೂಪನಾದ ಶ್ರೀರಾಮನು
ಆ ಪರ್ವತಕ್ಕೆ ವರವನ್ನು ಕೊಟ್ಟು, ಹಾಗೆಯೇ ಪಂಚತೀರ್ಥಗಳಲ್ಲಿ ಸ್ನಾನವ
ನ್ನು ಮಾಡಿ ಪಿತೃಗಳನ್ನು ತರ್ಪಣ, ಬ್ರಾಹ್ಮಣ ಸಂತರ್ಪಣಾದಿಗಳಿಂದ
ಪೂಜಿಸಿ ಶ್ರೀಕಲಶೇಶ್ವರನ ಸಂದರ್ಶನಾರ್ಥವಾಗಿ ಹೋದನು॥ ಪ್ರಥಮದ
ಲ್ಲಿ ಗಜರೂಪಿಯಾದ ಶ್ರೀಗಣಪತಿದೇವನನ್ನು ತೆಂಗಿನಕಾಯಿಗಳಿಂದಲೂ
ಲಾಡು ಮೊದಲಾದ ಭಕ್ಷ್ಯಗಳಿಂದಲೂ ಪೂಜಿಸಿ ಶ್ರೀಕಲಶೇಶ್ವರನನ್ನು ವಿಧಿ
ಪ್ರಕಾರ ಪೂಜಿಸಿ ರಾವಣನ ವಧೋದ್ಯೋಗರೂಪವಾದ ಪ್ರಸಾದ
ವನ್ನು ॥ ೨೯ ॥ ಶ್ರೀ ಕಲಶೇಶ್ವರನ ದೆಸೆಯಿಂದ ಪಡೆದು ಗಂಭೀರ
ವಾದ ಬುದ್ಧಿಯುಳ್ಳ ಶ್ರೀರಾಮನು ತನ್ನ ಪತ್ನಿಯನ್ನು ಹುಡುಕು
ವವನಾಗಿ ವನದದೆಸೆಯಿಂದ ಮತ್ತೊಂದು ವನವನ್ನು ಕುರಿತು ಲಕ್ಷ್ಮ
ಣನಿಂದ ಸಹಿತನಾಗಿ ಪ್ರಯಾಣಮಾಡಿದನು ॥ ೩೦ ॥ ಹೀಗೆ ವನಗಳಲ್ಲಿ
ಸಂಚರಿಸುತ್ತ ಇರುವ ಕಾಲದಲ್ಲಿ ತನ್ನ ಚರಿತದಿಂದ ದುರ್ಗತಿಕನಾದ
ಕಬಂಧನನ್ನು ಸಂಹರಿಸಿ ಅವನಿಗೆ ಸದ್ಗತಿಯನ್ನು ಕಲ್ಪಿಸಿ, ಸುಗ್ರೀ
ವಾದಿ ಕಪಿಗಳಿಂದ ಸ್ನೇಹವನ್ನು ಹೊಂದಿ ಅವರಿಂದ ಸೀತಾದೇವಿಯ
ವೃತ್ತಾಂತವನ್ನು ಸ್ಪಷ್ಟವಾಗಿ ತಿಳಿದು ವಾಲಿಯನ್ನು ಸಂಹರಿಸಿ, ಕಪಿ
ನಾಯಕನಾದ ಸುಗ್ರೀವನ ಸೈನ್ಯಗಳಿಂದ ಕೂಡಿಕೊಂಡು ಬ್ರಹ್ಮ
ರುದ್ರಾದಿಗಳಿಂದ ಪೂಜಿತವಾದ ಪದಪಲ್ಲವವುಳ್ಳ ಮನುಷ್ಯಾವತಾರಿ

ನೋಽಬ್ಜಜಪೂಜಿತಾಂಘ್ರಿಃ॥೩೧॥ ಯದ್ರೋಷವಿಭ್ರಮವಿವೃತ್ತಕಟಾಕ್ಷಪಾತಸಂಭ್ರಾಂತನಕ್ರಮಕರೋಭಯಗೀರ್ಣಘೋಷಃ॥ ಸಿಂಧುಃಶಿರಸ್ಯರ್ಹಣಂ ಪರಿಗೃಹ್ಯರೂಪೀಪಾದಾರವಿಂದ ಮುಪಗಮ್ಯಬಭಾಷಏತತ್ ॥ ೩೨ ॥ ನತ್ವಾವಯಂಜಡಧಿಯೋನುವಿದಾಮಭೂಮನ್ಕೂಟಸ್ಥಮಾದಿಪುರುಷಂಜಗತಾಮಧೀಶಂ ॥ ಯತ್ಸತ್ವತಃಸುರಗಣಾರಜಸಃಪ್ರಜೇಶಾಮನ್ಯೋಶ್ಚಭೂತಪತಯಃಸಭವಾನ್ಗುಣೇಶಃ ॥ ೩೩ ॥ ಕಾಮಂಪ್ರಯಾಹಿಜಹಿವಿಶ್ರವಸೋವಮೇಹಂ ತ್ರೈಲೋಕ್ಯರಾವಣಮವಾಪ್ನುಹಿವೀರಪತ್ನೀಂ೦॥ ಬಧ್ನೀಹಿಸೇತುಮಿಹತೇಯಶಸೋವಿವ್ಯೆ

ಯಾದ ಶ್ರೀರಾಮನು ಸಮುದ್ರದ ದಡವನ್ನು ಸೇರಿದನು ॥ ೩೧ ॥ ಕೋಪದಿಂದ ಚಲಿಸಿ ವರ್ತುಳಾಕಾರವಾದ ಕಣ್ಣುಗಳ ದೃಷ್ಟಿ ಬೀಳೋಣದರಿಂದ ಭ್ರಮೆಗೊಂಡ ನೆಗಳು ಮೊಸಳೆಗಳಿಂದ, ಎರಡು ದಡಗಳಲ್ಲಿಯೂ ವ್ಯಾಪಿಸಿದ ಶಬ್ದವುಳ್ಳ ಸಮುದ್ರನು ಮನುಷ್ಯಾಕಾರವನ್ನು ಪಡೆದುಕೊಂಡು ತಾನೇ ತಲೆಯಮೇಲೆ ಉಪಾಯನವನ್ನು ತೆಗೆದುಕೊಂಡು ಶ್ರೀರಾಮನ ಚರಣ ಕಮಲವನ್ನು ಹೊಂದಿ ಈ ಮುಂದೆ ಹೇಳುವಂತೆ ಪ್ರಾರ್ಥಿಸುತ್ತಾನೆ ॥ ೩೨ ॥ ಎಲೈ ಪೂರ್ಣಗುಣಶಾಲಿಯೇ! ಮಂದಬುದ್ಧಿಯುಳ್ಳ ನಾವು ಕೂಟಸ್ಥನಾದ, ಆದಿ ಪುರುಷನಾದ, ಜಗತ್ತುಗಳಿಗೆ ಪ್ರೇರಕ ಒಡೆಯನಾದ ನಿನ್ನನ್ನು ತಿಳಿದವರಲ್ಲ. ಯಾವ ನಿನ್ನ ದೆಸೆಯಿಂದ ಉಂಟಾದ ಸತ್ವಗುಣದ ದೆಸೆಯಿಂದ ದೇವಸಮೂಹಗಳು ರಜೋಗುಣದ ದೆಸೆಯಿಂದ ಪ್ರಜಾಪತಿಗಳು ತಮೋರೂಪ ಕೋಪದ ದೆಸೆಯಿಂದ ಭೂತಾಧಿಪತಿಗಳೂ ಹುಟ್ಟಿದರೋ ಅಂಥಾ ನೀನು ಆ ಗುಣಗಳಿಗೆ ಆಶ್ರಯನಾಗಿದ್ದೀ ॥ ೩೩ ॥ ನಿನ್ನ ಇಷ್ಟವಿದ್ದಂತೆ ಪ್ರಯಾಣಮಾಡು. ವಿಶ್ರವಸು ಎಂಬ ಋಷೀಶ್ವರನ ಶರೀರದ ದೆಸೆಯಿಂದ ಹುಟ್ಟಿದರೂ ಅಮೇಧ್ಯದಂತಿರುವ ತ್ರೈಲೋಕ್ಯ ಕಂಟಕನಾದ ರಾವಣನನ್ನು ಜಯಿಸು. ಪತ್ನಿಯಾದ ಸೀತಾದೇವಿಯನ್ನು ಹೊಂದು. ಈ ನನ್ನಲ್ಲಿ ಸೇತುವನ್ನು ನಿನ್ನ ಕೀರ್ತಿಯು ಅಭಿವೃದ್ಧಿ

ತ್ಯೈರ್ಗಾಯಂತಿದಿಗ್ವಿಜಯಿನೋಯಮುಪೇತ್ಯಭೂಪಾಃ ॥ ೩೪ ॥ ಬಧ್ವೋದಧೌರಘುಪತಿರ್ವಿವಿಧಾದ್ರಿಕೂಟೈಃ ಸೇತುಂಕಪೀಂದ್ರಕರಕಂಪಿತಭೂರುಹಾಂಗ್ರೈಃ ॥ ಸುಗ್ರೀವನೀಲಹನುಮತ್ಪ್ರಮುಖೈರಖಿಲೈರನೀಕೈರ್ಲಂಕಾಂವಿಭೀಷಣದೃಶಾವಿಶದಪ್ರದಗ್ಧಾಂ ॥೩೫॥ ಸಾವಾನರೇಂದ್ರಬಲರುದ್ಧವಿಹಾರಕೋಷ್ಠ ಶ್ರೀದ್ವಾರಗೋಪುರಸದೋಪಲಭೀವಿಟಂಕಾ ॥ ನಿರ್ಭಜ್ಯಮಾನಧಿಷಣಧ್ವಜಹೇಮಕುಂಭಶೃಂಗಾಟಕಾಗಜಕುಲ್ಯೈರ್ಹ್ರದಿನೀವಘೂರ್ಣಾ ॥೩೬॥ ರಕ್ಷಃಪತಿಸ್ತದವಲೋಕ್ಯನಿಕುಂಭಕುಂಭಧೂಮ್ರಾಕ್ಷದುರ್ಮುಖಸುರಾಂತನರಾಂತಕಾದೀನ್ ॥

ಗೋಸ್ಕರ ಕಟ್ಟು. ಲೋಕದಲ್ಲಿರತಕ್ಕ ಅರಸರುಗಳು ನಿನ್ನ ಸೇತುವನ್ನು ನೋಡಿ ಸ್ತುತಿಸುತ್ತಿರಲಿ ॥ ೩೪ ॥ ರಘುಕುಲೋತ್ತಮನು ಹೀಗೆ ಹೇಳಿದ ಸಮುದ್ರನ ಸ್ತುತಿಯನ್ನು ಒಪ್ಪಿಕೊಂಡು ಕಪಿಗಳ ಕೈ ನಡುಗುತ್ತಿರುವಂತೆ ತಂದುಹಾಕುತ್ತಿರುವ ಮರಗಳ ತುಂಡುಗಳಿಂದಲೂ ಗುಡಿಗಳ ಶಿಖರಗಳಿಂದಲೂ ಸೇತುವನ್ನು ಕಟ್ಟಿ ಸುಗ್ರೀವ, ನೀಲ, ಹನುಮಂತ ಮೊದಲಾದ ಕಪಿ ಸೈನ್ಯಗಳಿಂದ ಮೊದಲು ಒಂದಾವೃತ್ತಿ ಹನುಮಂತನಿಂದ ಸುಟ್ಟಿರುವ ಕೋಟೆಗಳುಳ್ಳ ಲಂಕಾಪಟ್ಟಣವನ್ನು ಶರಣಾಗತನಾಗಿ ಬಂದು ಸೇರಿದ ವಿಭೀಷಣನ ಆಲೋಚನೆಯಿಂದ ಪ್ರವೇಶಿಸಿದನು ॥ ೩೫ ॥ ಆ ಲಂಕಾಪಟ್ಟಣವು ಕಪೀಶ್ವರರ ಸೈನ್ಯಗಳಿಂದ ತುಂಬಿ ತಡೆಯಲ್ಪಟ್ಟ ಕ್ರಿಡಾಸ್ಥಾನ ರಾಜದ್ವಾರಗಳು, ಅವುಗಳ ಗೋಪುರಗಳು, ಉಪ್ಪರಿಗೆಗಳ ಹರಿಗೆಗಳು, ಅದರ ತುದಿಗಳು ಉಳ್ಳದ್ದಾಗಿ ಹೆದರಿಕೊಂಡ ಅಲ್ಲಿನ ಭಟರ ಬುದ್ಧಿಗಳು ಮುರಿದು ಹುಡಿಮಾಡಿಸಿಕೊಂಡ ಬಂಗಾರದ ಕಲಶವುಳ್ಳದ್ದಾಗಿ, ಶೃಂಗಾರದ ತೋಟಗಳು ಚೂರ್ಣಗಳಾಗಿ ಇರುವುದಾಗಿಯೂ ಮದಾದನೆಗಳ ಸಮೂಹದಿಂದ ತೆರೆಗಳೋಪಾದಿಯಲ್ಲಿ ಕದಡಿರುವಂತಾಯಿತು ॥ ೩೬ ॥ ರಾಕ್ಷಸಾಧಿಪತಿಯಾದ ರಾವಣನು ಈ ಉಪಟಳವನ್ನು ನೋಡಿ ನಿಕುಂಭ, ಕುಂಭ, ಧೂಮ್ರಾಕ್ಷ, ದುರ್ಮುಖ, ದೇವಾಂತಕ, ನರಾಂತಕ ಮೊದ

ಪುತ್ರಂ ಪ್ರಹಸ್ತಮತಿಕಾಯವಿಕಂಪನಾದೀನ್ ಸರ್ವಾನುಗಾನ್ಸಮಹಿ
ನೋದಥಕುಂಭಕರ್ಣಂ ॥ ೩೭ ॥ ತಾಂಯಾತುಧಾನಪೃತನಾಮ
ಸಿಶೂಲಚಾಪಪ್ರಾಸೇಷುಶಕ್ತಿಶರತೋಮರಖಡ್ಗದುರ್ಗಾಂ ॥ ಸು
ಗ್ರೀವಲಕ್ಷ್ಮಣಮರುತ್ಸುತಗಂಧಮಾದನನೀಲಾಂಗದರ್ಕ್ಷಪನಸಾದಿಭಿರ
ನ್ವಿತೋಗಾತ್ ॥ ೩೮ ॥ ತೇನೀಕಪಾರಘುಪತೇರತಿಪತ್ಯಸರ್ವೇದ್ವ
ದ್ವಂವರೂಥಪತಿಪತ್ತಿರಥಾಶ್ವಯೋಧೈಃ ॥ ಜಘ್ನುರ್ದ್ರುಮೈರ್ಗಿ
ರಿಗದೇಷುಭಿರಂಗದಾದ್ಯಾಃಸೀತಾಭಿಮರ್ಶಹತಮಂಗಲ ರಾವಣೇಶಾ
ನ್ ॥ ೩೯ ॥ ರಕ್ಷಃಪತಿಃಸ್ವಬಲನಷ್ಟಮವೇಕ್ಷ್ಯರುಷ್ಟಆರುಹ್ಯಯಾ

ಲಾದ ಭಟರನ್ನೂ, ಮಗನಾದ ಅತಿಕಾಯು, ಮಂತ್ರಿಯಾದ ಪ್ರಹಸ್ತ ವಿಕಂಪನಮೊದಲಾದ ಸಮಸ್ತ ಸೈನ್ಯಗಳನ್ನೂ ಕ್ರಮವಾಗಿ ಕಳುಹಿಸುತ್ತ ಆಮೇಲೆ ಕುಂಭಕರ್ಣನನ್ನು ಕಳುಹಿಸಿದನು ॥೩೭॥ ಕತ್ತಿ, ತ್ರಿಶೂಲ ಧನುಸ್ಸು, ಸೈಂಗೋಲಿನಂತಿರುವ ಕಬ್ಬಿಣದ ದೊಣ್ಣೆಗಳು ಚೂಪಾಗಿರುವ ಶಕ್ತಿ ಬಾಣಗಳು ಹರಿತವಾದ ದಳಗಳುಳ್ಳ ಉಕ್ಕಿನ ಬಡಿಗೆಗಳು, ಬೀಸ ಕತ್ತಿಗಳು, ಇಂತಹುಗಳಿಂದ ಅತಿ ಅಸಾಧ್ಯವಾದ ಆ ರಾಕ್ಷಸ ಸೈನ್ಯವನ್ನು ನೋಡಿ ಶ್ರೀ ರಾಮನು ಸುಗ್ರೀವ, ಲಕ್ಷ್ಮಣ, ವಾಯುಪುತ್ರನಾದ ಹನುಮಂತ, ಗಂಧಮಾದನ, ನೀಲ, ಅಂಗದ, ಜಾಂಬವಂತ, ಪನಸ ಮೊದಲಾದ ನಾಯಕರುಗಳಿಂದ ಕೂಡಿಕೊಂಡವನಾಗಿ ಇದಿರಾಗಿ ಹೋದನು ॥ ೩೮ ॥ ರಘುಪತಿಯಾದ ಶ್ರೀರಾಮನ ಸೇನಾಧಿಪರಾದ ಅವರುಗಳ ಕಾಲಾಳುಗಳು, ರಥಗಳು, ಕುದುರೆಗಳು ಇಂತಹುಗಳಿಂದ ಯುದ್ಧ ಮಾಡುವ ಆ ರಾಕ್ಷಸರೊಡನೆ ಸರ್ವರೂ ಜೋಡು ಜೋಡಾಗಿ ಯುದ್ಧಕ್ಕೆ ತೊಡಗಿ ಅಂಗದ ಮೊದಲಾದ ಕಪಿನಾಯಕರು ಮರಗಳಿಂದಲೂ ಪರ್ವತಗಳಿಂದಲೂ ಗದೆಗಳಿಂದಲೂ ಬಾಣಗಳಿಂದಲೂ ಸೀತಾದೇವಿಯಲ್ಲಿ ಅಭಿಲಾಷೆ ಇಟ್ಟಿರುವುದರಿಂದ ಕೆಡಲ್ಪಟ್ಟ ಸಕಲಮಂಗಲವುಳ್ಳ ರಾವಣನು ಒಡೆಯನಾಗಿರುವ ಆ ರಾಕ್ಷಸರನ್ನು ಸಂಹರಿಸಿದರು ॥ ೩೯ ॥ ರಾವಣನು ತನ್ನ ಬಲದ ನಾಶವನ್ನು ಕಂಡು ಕೋಪಿಷ್ಠನಾಗಿ ವಿಮಾನವನ್ನು

ನಕಮಥಾಭಿಸುಸಾರವಾಮಂ । ಸ್ವಸ್ಪಂದನೇದ್ಯುಮತಿಮಾತಳಿನೋಪ
ನೀತೆವಿಭ್ರಾಜಮಾನಮಹನನ್ನಿತಿಶಿತೈಃಕ್ಷುರಪ್ರೈಃ ॥೪೦॥ ರಾಮಸ್ತು
ಮೋಹಪುರುಷಾದಪುರೀಷಯನ್ನಃ ಕಾಂತಾಸಮಕ್ಷಮಸತಾಪಹೃತಾ
ಶ್ವಮತ್ತೇ ॥ ತ್ಯಕ್ತತ್ರಪಸ್ಯಫಲಮದ್ಯಜುಗುಪ್ಸಿತಸ್ಯಯಚ್ಛಾಮಿಕಾಲ
ಇವಕರ್ತುರಲಂಘ್ಯವೀರ್ಯ್ಯಃ ॥ ೪೧ ॥ ಏವಂಕ್ಷಿಪನ್ಧನುಷಿಸಂ
ಧಿತಮುತ್ಸಸರ್ಜಬಾಣಂಸವಜ್ರಮಿವತದ್ಧೃದಯಂಬಿಭೇದ॥ ಸೋಽಸೃ
ಗ್ವಮಂದಶಮುಖೈರ್ನ್ಯಪತದ್ವಿಮಾನಾತ್ ಹಾಹೇತಿಜಲ್ಪತಿಜನೇಸು
ಕೃತೀವರಿಕ್ತಃ ॥೪೨॥ ತತೋಽನಿಷ್ಕ್ರಮ್ಯಲಂಕಾಯಾಯಾತುಧಾನ್ಯಃ

ಹತ್ತಿಕೊಂಡು ಮಾತಲಿಯಿಂದ ತಂದ ಸ್ವರ್ಗದ ರಥದಲ್ಲಿ ಪ್ರಕಾಶಿಸುತ್ತಿ
ರುವ ಶ್ರೀರಾಮನನ್ನು ಕುರಿತು ಬಂದನು. ಕೂಡಲೆ ಶಕ್ತಿಯುಂತೆ ಹರಿತ
ವಾದ ಬಾಣಗಳಿಂದ ಹೊಡೆಯಲಾರಂಭಿಸಿದನು ॥ ೪೦ ॥ ಶ್ರೀರಾಮ
ಚಂದ್ರನು ಆ ರಾವಣನನ್ನು ಕುರಿತು ಎಲೈ ರಾಕ್ಷಸರ ಅಮೋಘದಂತಿ
ರುವ ರಾವಣನೆ, ಯಾವ ಕಾರಣದಿಂದ ನಾನಿಲ್ಲವಿರುವ ಕಾಲದಲ್ಲಿ ನಾಯಿ
ಯು ಯಜ್ಞದ ಹವಿಸ್ಸನ್ನು ಮುಟ್ಟುವಂತೆ ನನ್ನ ಪತ್ನಿಯಾದ ಸೀತೆ
ಯನ್ನು ಅಪಹರಿಸಿದೆಯೋ ಅಂಥ ನಾಚಿಕೆಯಿಲ್ಲದ ನಿಂದ್ಯನಾದ ನಿನಗೆ
ಸರಿಯಾದ ಫಲವನ್ನು ದುಷ್ಕರ್ಮಕ್ಕೆ ಅನುಲ್ಲಂಘಿತ ಪರಾಕ್ರಮಿಯಾದ
ಯಮನಂತೆ ಕೊಡುತ್ತೇನೆ ॥೪೧॥ ಈ ಪ್ರಕಾರವಾಗಿ ನಿಂದಿಸುವನಾಗಿ
ಶ್ರೀರಾಮನು ಧನುಸ್ಸಿನಲ್ಲಿ ಜೋಡಿಸಿದ ವಜ್ರದಂತಿರುವ ಬಾಣವನ್ನು
ಬಿಟ್ಟನು. ಆ ಬಾಣವು ರಾವಣನ ಹೃದಯವನ್ನು ಭೇದಿಸಿತು. ಆಗ
ಆ ರಾವಣನು ಹತ್ತು ಮುಖಗಳಿಂದಲೂ ರಕ್ತವನ್ನು ಕಾರುತ್ತ ಸ್ವರ್ಗ
ವಾಸಿಯು ಪುಣ್ಯಕ್ಷೀಣನಾಗುತ್ತಲೇ ಕೆಳಕ್ಕೆ ವಿಮಾನದ ದೆಸೆಯಿಂದ
ಬೀಳುವಾಗ ಅಲ್ಲಿದ್ದ ಪುಣ್ಯಾತ್ಮರು ಹೋ ಹೋ ಎನ್ನುವಂತೆ ಬಿದ್ದನು.
॥೪೨॥ ಅನಂತರ ಲಂಕಾಪಟ್ಟಣದ ದೆಸೆಯಿಂದ ರಾವಣನ ಅಂತಃಪುರದ
ಸ್ತ್ರೀಯರು ಹೊರಟುಬಂದು ಸೀತಾದೇವಿಯ ಅಪಾರವಾದ ಮಹಿಮೆ
ಯನ್ನು ಸ್ಮರಿಸುತ್ತ ಯಾವಾಕೆಯ ಮಹಿಮೆಯಿಂದ ಈ ರಾವಣನು

ಸಹಸ್ರಶಃ ॥ ತೇಜೋಽನುಭಾವಂಶೀತ್ರಾಯಯಾಯೋಽನನೀತೋಽದಶಾವಿ
ಮಾಂ ॥ ೪೩ ॥ ಕೃತ್ತೈಷಾವಿಧವಾಲಂಕಾವಯಂಚಕುಲನಂದನ ॥
ದೇಹಃಕೃತೋಽನ್ನಂಗೃಧ್ರಾಣಾಮಾತ್ಮಾನರಕಹೇತವೇ ॥ ೪೪ ॥
॥ಶ್ರೀಸೂತಃ॥ ಸ್ವೈನಾಂವಿಭೀಷಣಶ್ಚಕ್ರೇಕೋಸಲೇಂದ್ರಾನುಮೋದಿ
ತಃ ॥ ಪಿತೃಮೇಧವಿಧಾನೇನಯದುಕ್ತಂಸಾಂಪರಾಯಿಕಂ ॥ ೪೫ ॥
ತತೋಽದದರ್ಶಭಗವಾನಶೋಕವನಿಕಾಶ್ರಮೇ ॥ ಕ್ಷಾಮಾಂಸ್ವವಿರಹ
ವ್ಯಾಧಿಂಶಿಂಶುಪಾಮೂಲಮಾಸ್ಥಿತಾಂ ॥ ೪೬ ॥ ರಾಮಃಪ್ರಿಯತ
ಮಾಂಭಾರ್ಯಾಂದೀನಾಂವೀಕ್ಷ್ಯಾನ್ವಕಂಪತ ॥ ಆತ್ಮಸಂದರ್ಶನಾಹ್ಲಾ

ಈ ಅವಸ್ಥೆಯನ್ನು ಹೊಂದಿದನೋ ಅದನ್ನು ಮೊದಲು ತಿಳಿಯದೆ ಹೋದೆವು. ಎಲೈ ಕುಲನಿಂದ್ಯನೇ, ನಾವೆಲ್ಲರೂ ಲಂಕಾಪಟ್ಟಣವೂ ಕೂಡ ವಿಧವೆಯರಾಗಿ ಮಾಡಿಸಿಕೊಂಡೆವು. ಶರೀರವು ಹದ್ದುಗಳಿಗೆ ಆಹಾರವಾಗಿ ಮಾಡಲ್ಪಟ್ಟಿತು. ಜೀವವು ನರಕ ಯಾತನೆಗೋಸ್ಕರ ಕಾರಣವಾಯಿತು ಎಂದು ಅನೇಕವಾಗಿ ಮೊರೆಯಿಡುತ್ತಿದ್ದರು ॥ ೪೩ ॥ ೪೪ ॥
ಇತ್ತಲಾ ಸೂತಪೌರಾಣಿಕನು, ಶೌನಕಾದಿ ಋಷಿಗಳಿಗೆ ಹೇಳುತ್ತಾನೆ. ಎಲೈ ಋಷಿಗಳಿರಾ ಕೇಳಿ, ಹೀಗಿರುವಾಗ ಶ್ರೀರಾಮನ ಅಪ್ಪಣೆಯಿಂದ ಆಜ್ಞಾಪ್ತನಾದ ವಿಭೀಷಣನು ಆ ದುಃಖಗಳನ್ನು ಒಡಂಬಡಿಸಿ ವಿಧಿಯಲ್ಲಿ ಏನು ಹೇಳಿದೆಯೋ ಸಂಪ್ರದಾಯವಾಗಿ ನಡೆದು ಬಂದಿದೆಯೋ ಅಂತಹ ಉತ್ತರ ಕೃತ್ಯವನ್ನು ರಣದಲ್ಲಿ ಮೃತಪಟ್ಟ ತನ್ನವರಿಗೆ ಮಾಡಿದನು. ॥ ೪೫ ॥ ಆ ನಂತರ ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀರಾಮನು ಅಶೋಕವನಗಳ ಮಧ್ಯದಲ್ಲಿ ತನ್ನ ವಿಯೋಗವೆಂಬ ರೋಗಪೀಡಿತಳಾದ, ಕೃಶಳಾದ ಶಿಂಶುಪಾವೃಕ್ಷದ ಮೂಲವನ್ನಾಶ್ರಯಿಸಿದ ಸೀತಾದೇವಿಯನ್ನು ಕಂಡನು. ॥ ೪೬ ॥ ಶ್ರೀರಾಮನು ದೀನಳಾದ ಪತ್ನಿಯನ್ನು ಕಂಡು ಅನುಕಂಪಿಸಿದನು. ತನ್ನ ದರ್ಶನದ ಸಂತೋಷದಿಂದ ಅರಳಿರುವ ಕಮಲದಂತಿರುವ ಮುಖಕಮಲವುಳ್ಳ ಸೀತಾದೇವಿಯನ್ನು

ದವಿಕಸನ್ಮುಖಪಂಕಜಾಂ ॥ ೪೭ ॥ ಆರೋಪ್ಯರುರುಹೇಯಾನಂಭ್ರಾ ತೃಭ್ಯಾಂಹನುಮದ್ಯುತಃ ॥ ವಿಭೀಷಣಾಯಭಗವಾನ್ ದತ್ವಾರಕ್ಷೋಗಣೇಶತಾಂ ॥ ೪೮ ॥ ಲಂಕಾಮಾಯುಶ್ಚಕಲ್ಪಾಂತಂಯಯೌಚೀರ್ಣವ್ರತಃಪುರೀಂ ॥ ಅವಕೀರ್ಯಮಾಣಃಕುಸುಮೈಃಲೋಕಪಾಲಾರ್ಪಿತೈಃಪಥಿ ॥೪೯॥ ಉಪಗೀಯಮಾನಚರಿತಃಶತಧೃತ್ಯಾದಿಭಿರ್ಮುದಾ ॥ ಗೋಮೂತ್ರಯಾವಕಂಶ್ರುತ್ವಾಭ್ರಾತರಂವಲ್ಕಲಾಂಬರಂ ॥ ॥ ೫೦ ॥ ಮಹಾಕರುಣಃಕೋಶಸ್ಯಜಟಿಲಂಸ್ಥಂಡಿಲೇಶಯಂ ॥ ಭರತಃಪ್ರಾಪ್ತಮಾಕರ್ಣ್ಯಪೌರಮಾತ್ಯಪುರೋಹಿತೈಃ ॥೫೧॥ ಅನ್ಯೈಃ ಸರ್ವೈಃ ಪರೀವಾರೈರನ್ವಿತಃಕೌತುಕಾನ್ವಿತಃ ॥ ಪಾದುಕೇಶಿರಸಿನ್ಯ

ಕಂಡು ಆನಂದಿಸಿದನು. ॥ ೪೭ ॥ ಆಮೇಲೆ ಸೀತಾದೇವಿಯನ್ನು ವಿಮಾನದಲ್ಲಿ ಆರೋಹಣಮಾಡಿಸಿ ಸುಗ್ರೀವ,ಲಕ್ಷ್ಮಣರಿಂದಲೂ ಮತ್ತು ಹನುಮಂತನಿಂದಲೂ ಕೂಡಿದವನಾಗಿ ವಿಭೀಷಣನಿಗೋಸ್ಕರ ರಾಕ್ಷಸಪಟ್ಟವುಳ್ಳ ಲಂಕಾಧಿಪತ್ಯವನ್ನೂ ಕಲ್ಪಾಂತಾಯುಷ್ಯವನ್ನೂ ಕೊಟ್ಟು ತಾನೂ ವಿಮಾನವನ್ನು ಆರೋಹಣಮಾಡಿ, ಮುಗಿಸಲ್ಪಟ್ಟ ವನವಾಸವ್ರತವುಳ್ಳವನಾಗಿ ದಾರಿಯಲ್ಲಿ ಲೋಕಪಾಲಕರಿಂದ ಸಮರ್ಪಿಸಲ್ಪಟ್ಟ ಪುಷ್ಪಗಳಿಂದ ಪೂಜಿಸಿಕೊಳ್ಳುವವನಾಗಿ ಅಯೋಧ್ಯಾಪುರಿಯನ್ನು ಕುರಿತು ಪ್ರಯಾಣಮಾಡಿದನು. ॥ ೪೮ ॥ ೪೯ ॥ ಮತ್ತು ಬ್ರಹ್ಮದೇವ ಮೊದಲಾದವರಿಂದ ಸ್ತುತಿಸಿಕೊಳ್ಳುತ್ತಿದ್ದನು. ಇತ್ತಲಾ ತಮ್ಮನಾದ ಭರತನು ಗೋಮೂತ್ರದಿಂದ ಪಾಕಾಶಿನಿಯಾಗಿರುವುದನ್ನೂ ನಾರಮುಗುಟಿಯನ್ನುಟ್ಟಿರುವುದನ್ನೂ ಕೇಳಿ ॥ ೫೦ ॥ ಮತ್ತು ಜಟಾಧಾರಿಯಾಗಿ ಭೂಮಿಯಲ್ಲಿಯೇ ಮಲಗಿಕೊಳ್ಳುತ್ತಿರುವದನ್ನೂ ತಿಳಿದು ಕೃಪಾಸಮುದ್ರನಾದ ಶ್ರೀರಾಮನು ಅನುಕಂಪಿಸಿದನು. ಅತ್ತಲಾ ಭರತನು ಶ್ರೀರಾಮನ ಆಗಮನವನ್ನು ಕೇಳಿ ಪುರವಾಸಿಗಳು, ಮಂತ್ರಿಗಳು, ಪುರೋಹಿತರುಗಳಿಂದಲೂ ॥೫೧॥ ಉಳಿದ ಸಕಲ ಪರಿವಾರಗಳಿಂದಲೂ ಕೂಡಿದವನಾಗಿ ಮಂಗಲಭರಿತನಾಗಿ ಶ್ರೀ ಪಾದುಕೆಗಳನ್ನು ಶಿರಸ್ಸಿನಲ್ಲಿಟ್ಟುಕೊಂಡು

ಸ್ಯರಾಮಂಪ್ರತ್ಯುದ್ಗತೋಗ್ರಜಂ ॥೫೨॥ ನಂದಿಗ್ರಾಮಾತ್ಸ್ವಶಿಬಿ
ರಾತ್ಗೀತವಾದಿತ್ರನಿಸ್ವನೈಃ॥ ಬ್ರಹ್ಮಘೋಷೇಣಚಮುಹುಃಪಠದ್ಭಿಃ
ಬ್ರಹ್ಮವಾದಿಭಿಃ ॥ ೫೩ ॥ ಸ್ವರ್ಣಕಕ್ಷಪತಾಕಾಭಿಃಹೈಮೈಶ್ಚಿತ್ರಧ್ವ
ಜೈರಥೈಃ। ಸದಶ್ವೈರುಕ್ಮಸನ್ನಾಹೈರ್ಭಟೈಸ್ಸರಥವರ್ತ್ಮಭಿಃ ॥೫೪॥
ಶ್ರೇಣಿಭಿರ್ವಾರಮುಖ್ಯಾಭಿಃನೃತ್ಯೈಶ್ಚೈವಪದಾನುಗೈಃ ॥ ಪಾರಮೇ
ಷ್ಠ್ಯಾನ್ಯುಪಾದಾಯಪಣ್ಯಾನ್ಯುಚ್ಚಾವಚಾನಿಚ ॥೫೫॥ ಪಾದಯೋ
ರ್ನ್ಯಪತತ್ಪ್ರೇಮ್ಣಾ ಪ್ರಕ್ಲಿನ್ನಹೃದಯೇಕ್ಷಣಃ ॥ ಪಾದುಕೇನ್ಯಸ್ಯಪು
ರತಃಪ್ರಾಂಜಲಿರ್ಬಾಷ್ಪಲೋಚನಃ ॥೫೬॥ ತಮಾಶ್ಲಿಷ್ಯಚಿರಂದೋ
ರ್ಭ್ಯಾಂಸ್ನಪಯೋನ್ನೇತ್ರಜೈರ್ಜಲೈಃ॥ರಾಮೋಲಕ್ಷ್ಮಣಸೀತಾಭ್ಯಾಂ

ಅಣ್ಣನಾದ ಶ್ರೀರಾಮನನ್ನು ಕುರಿತು ಎದುರಾಗಿ ಬಂದನು ॥ ೫೨ ॥
ತನ್ನ ಬಿಡಾರವಾದ ನಂದಿಗ್ರಾಮದ ದೆಸೆಯಿಂದ ಹೊರಟು ಬರುವಾಗ
ಸಂಗೀತವಾದ್ಯಧ್ವನಿಗಳಿಂದಲೂ ಆಗಾಗ ಬ್ರಾಹ್ಮಣರಿಂದ ಉಚ್ಚರಿಸುತ್ತಿ
ರುವ ಮಂಗಲಸೂಕ್ತ ವಾಕ್ಯಗಳಿಂದಲೂ ॥೫೩॥ ಭಂಗಾರದ ಹಲಗೆಗ
ಳು,ಪತಾಕೆಗಳು, ಚಿನ್ನದ ಸಂಭಾರವಿರುವ ಧ್ವಜಗಳುಳ್ಳ ರಥಗಳಿಂದಲೂ
ರತ್ನಾಲಂಕಾರಿಗಳಾದ ಉತ್ತಮಾಶ್ವಗಳಿಂದ ಭವ್ಯಮಾರ್ಗಗಾಮಿಗಳಾದ
ಪಟುಭಟರುಗಳಿಂದಲೂ ॥೫೪॥ ಸಾಲಾಗಿ ಬರುತ್ತಿರುವ ನಾಟ್ಯಸ್ತ್ರೀಯ
ರುಗಳ ನರ್ತನಗಳಿಂದಲೂ ಕಾಲಾಳುಗಳಿಂದಲೂ ಸಹಿತನಾಗಿ ಉತ್ತಮ
ವಾದ ಮತ್ತು ಕ್ರಯ। ಬಾಳತಕ್ಕ ಕೈಗಾಣಿಕೆಯು ಹೆಚ್ಚಾದ ವಸ್ತು
ಗಳನ್ನು ತಗೆದುಕೊಂಡು ॥ ೫೫ ॥ ಹೋಗುತ್ತ ದಾರಿಯಲ್ಲಿ ಶ್ರೀರಾಮ
ನನ್ನು ಕಂಡಕೂಡಲೇ ತನ್ನ ಶಿರಸ್ಸಿನಲ್ಲಿದ್ದ ಪಾದುಕೆಗಳನ್ನು ಮುಂ
ದಿಟ್ಟು ಆನಂದಾಮೃತ ಲೋಚನನಾಗಿ, ಸ್ವಲ್ಪ ಚೆವರಿದ ಹೃದಯನೇತ್ರ
ವುಳ್ಳವನಾಗಿ ಕೈಮುಗಿದು ಪ್ರೀತಿಯಿಂದ ಶ್ರೀರಾಮನ ಚರಣಗಳಲ್ಲಿ ಬಿದ್ದು
ಬಿಸುಸುಯ್ದನು ॥ ೫೬ ॥ ಅನಂತರ ಶ್ರೀರಾಮನು ಅವನನ್ನು ಬಹಳ
ವಾಗಿ ಆಲಿಂಗಿಸಿ ನೇತ್ರೋದಕಗಳಿಂದ ಸೇಚಿಸುವವನಾಗಿ ಸಂತೋಷಿ
ಸಿದನು. ಮತ್ತು. ಸೀತಾಲಕ್ಷ್ಮಣರಿಂದ ಕೂಡಿ ಯೂರು ದೊಡ್ಡವರೋ

ವಿಪ್ರೇಭ್ಯೋಯಮರ್ಷಿಸತ್ತಮಾಃ ॥ ೫೭ ॥ ತೇಭ್ಯಃಸ್ವಯಂನಮ
ಶ್ಚಕ್ರೇಪ್ರಜಾಭಿಸ್ಸಮಸ್ಕೃತಃ ॥ ಧುನ್ವಂತ್ಯುತ್ತರಾಸಂಗಾನ್‌ಪತಿಂವೀ
ಕ್ಷ್ಯೈಚಿರಾಗತಂ ॥ ೫೮ ॥ ಉತ್ತರಾಕೋಸಲಾಮಾಲ್ಯೈಃಕಿರಂತೋ
ಮಮೃಶನ್‌ಮುದಾ ॥ ಪಾದುಕೇಭರತೋಕೃಷ್ಣೇಚಾಮರವ್ಯಜನೋ
ತ್ತಮೇ ॥೫೯॥ ವಿಭೀಷಣಃಸಸುಗ್ರೀವಃಶ್ವೇತಚ್ಛತ್ರಂಮರುತ್ಸು
ತಃ ॥ ಧನುರ್ನಿಷಂಗಾಂಛತ್ರುಘ್ನಃಸೀತಾತೀರ್ಥಕಮಂಡಲುಂ ॥೬೦॥
ಅಬಿಭ್ರದಂಗದಃಖಡ್ಗಂಹೈಮಂಚರ್ಕ್ಷರಾಡ್ವಿಜ ॥ ಪುಷ್ಪಕಸ್ಥೋನ್ವಿ
ತಃಸ್ತ್ರೀಭಿಃಸ್ತೂಯಮಾನಶ್ಚಬಂದಿಭಿಃ ॥ ೬೧ ॥ ವಿರೇಜೇಭಗವಾನ್

ಅವರೆಲ್ಲರಿಗೋಸ್ಕರ ನಮಸ್ಕರಿಸಿದನು. ॥ ೫೭ ॥ ಪ್ರಜೆಗಳಿಂದ ತಾನು ನಮಸ್ಕರಿಸಿಕೊಂಡನು. ಉತ್ತರ ಕೋಸಲ ವಾಸಿಗಳು ಬಹುಕಾಲದಿಂದ ಬಂದ ಪಾಲಕನಾದ ಶ್ರೀರಾಮನನ್ನು ಕಂಡು ಧೋತ್ರದ ಸೆರಗುಗಳನ್ನು ಕುಣಿದಾಡಿಸುವವರಾಗಿ ಪುಷ್ಪಗಳಿಂದಾಪತಿಯನ್ನು ಪೂಜಿಸುತ್ತ ಕುಣಿದಾಡಿದರು. ಆಮೇಲೆ ಶ್ರೀರಾಮನು ಪ್ರಯಾಣ ಬೆಳಸುತ್ತಲೆ ಭರತನು ಪಾದುಕೆಗಳನ್ನು ಶಿರಸ್ಸಿನಲ್ಲಿ ಧರಿಸಿದನು. ಚಾಮರ ಬೀಸಣಿಗೆಗಳನ್ನು ॥ ೫೮ ॥ ೫೯ ॥ ಸುಗ್ರೀವ ಸಹಿತನಾದ ವಿಭೀಷಣನು ಧರಿಸಿದನು. ವಾಯುಪುತ್ರನಾದ ಹನುಮಂತನು ಶ್ವೇತಚ್ಛತ್ರವನ್ನೂ ಶತ್ರುಘ್ನನು ಧನುಸ್ಸು ಬತ್ತಳಿಕೆಗಳನ್ನೂ ಸೀತಾದೇವಿಯು ತೀರ್ಥೋದಕ ಪೂರಿತವಾದ ಕಲಶವನ್ನೂ ॥ ೬೦ ॥ ಅಂಗದನು ಚಂದ್ರಾಯುಧವನ್ನೂ ಜಾಂಬವಂತನು ಚಿನ್ನದ ವರಕುಳ್ಳ ಡಾಲನ್ನೂ ಧರಿಸಿದನು. ಇಷ್ಟು ವೈಭವಗಳಿಂದ ಸೇವಿಸಿಕೊಳ್ಳುತ್ತಿದ್ದ ವಿಮಾನಾರೂಢನಾದ ಶ್ರೀರಾಮನು ಸ್ತ್ರೀಯರುಗಳಿಂದಲೂ ಪಾಠಕರುಗಳಿಂದಲೂ ಸ್ತುತಿಸಿಕೊಳ್ಳುತ್ತಿದ್ದನು ॥ ೬೧ ॥ ಮತ್ತು ಗ್ರಹಗಳ ಮಧ್ಯದಲ್ಲಿ ಉದಯಿಸಿದ ಚಂದ್ರನಂತೆ ಪ್ರಕಾಶಿಸಿದನು. ಸಹೋದರರಿಂದ ಸಂತೋಷಿಸಿಕೊಂಡವನಾಗಿ ಸುಮುಹೂರ್ತದಲ್ಲಿ ಅಲಂಕಾರಶೋಭಿತವಾಗಿ ಮಂಗಲಕರವಾದ ಪಟ್ಟಣವನ್ನು ಪ್ರವೇಶಿಸಿದನು ॥

ವಿಪ್ರಗೃಹ್ಯೈಶ್ಚಂದ್ರಇವೋದಿತಃ॥ ಭ್ರಾತೃಭಿರ್ನಂದಿತಸ್ಸೋಽಪಿಸೋಽಕ್ಷ್ನ ವಃಪ್ರಾವಿಶತ್ಪುರೀಂ ॥೬೨॥ ಪ್ರವಿಶ್ಯರಾಜಭವನಂಗುರುಪತ್ನೀಂಸ್ಸ್ವಮಾತರಂ ॥ ಗುರೂನ್ವಯಸ್ಯಾವರಜಾನ್ಪೂಜಿತಃಪ್ರತ್ಯಪೂಜಯತ್ ॥೬೩॥ ವೈದೇಹೀಲಕ್ಷ್ಮಣಶ್ಚೈವಯಥಾವತ್ಸಮುಪೇಯತುಃ ॥ ಪುತ್ರಾನ್ಸಮಾತರಸ್ತಾಸ್ತುಪ್ರಾಣಾಂಸ್ತನುರಿವೋದಿತಾಃ ॥ ೬೪ ॥ ಆರೋಪ್ಯಾಂಕೇಽಭ್ಯಷಿಂಚಂಸ್ತಾಬಾಷ್ಪೌಘೈಃವಿಶದೈಶ್ಚಸಃ ॥ ೬೫ ॥ ಜಟಾನಿರ್ಮುಚ್ಯವಿಧಿವತ್ಕುಲವೃದ್ಧೈಃಸಮಂಗುರುಃ ॥ ಅಭ್ಯಷಿಂಚದ್ಯಥೈವೇಂದ್ರಂಚತುಃಸಿಂಧುಜಲಾದಿಭಿಃ ॥ ೬೬ ॥ ಏವಂಕೃತಶಿರ

ಹಾಗೆಯೇ ರಾಜಮಂದಿರವನ್ನು ಪ್ರವೇಶಿಸಿ ಗುರುಪತ್ನಿಯರು, ರಾಜಪತ್ನಿಯರು ತನ್ನ ತಾಯಿ ಇವರಿಗೆ ನಮಸ್ಕರಿಸಿ ಅವರಿಂದ ಆಶೀರ್ವಾದವನ್ನು ಹೊಂದಿದನು. ಮತ್ತು ಗುರುಗಳನ್ನು ನಮಸ್ಕರಿಸಿ ಸ್ನೇಹಿತರನ್ನು ಆಲಂಗಿಸಿ, ಕಿರಿಯವರಿಂದ ನಮಸ್ಕರಿಸಿಕೊಂಡು ಈಪ್ರಕಾರ ಪೂರ್ವಾಚಾರದಂತೆ ವಿಧೇಯನಾಗಿ ನಡಿಸಿದನು ॥೬೩॥ ಹಾಗೆಯೇ ಸೀತಾದೇವಿಯೂ ಲಕ್ಷ್ಮಣದೇವನೂ ಶ್ರೀರಾಮನ ಆಜ್ಞಾನುಸಾರವಾಗಿ ಮಾತೃಗಳನ್ನು ವಂದಿಸಿದರು. ಹೀಗೆ ಬಂದು ಬಂದು ಮಕ್ಕಳನ್ನು ಕಂಡ ತಾಯಂದಿರು ಪ್ರಾಣಗಳನ್ನು ಕಂಡ ಶರೀರಗಳಂತೆ ॥೬೪ ॥ ತೊಡೆಯಲ್ಲಿ ಕುಳ್ಳಿರಿಸಿಕೊಂಡು ಸಂತೋಷ ಜನ್ಯಗಳಾದ ನೇತ್ರೋದಕಗಳಿಂದ ಅಭಿಷೇಚಿಸುವವರಾಗಿ ದುಃಖಗಳನ್ನು ದಾಟಿದರು ॥ ೬೫ ॥ ಆ ಮೇಲೆ ಗುರುವಾದ ವಸಿಷ್ಠರೂ ಋಷೀಶ್ವರರೂ ಶ್ರೀರಾಮನಿಗೆ ಜಡೆಗಳನ್ನು ಸುಕೇಶವಾಗುವಂತೆ ಶುಚಿಮಾಡಿಸಿ ಪಟ್ಟಾಭಿಷೇಕಕ್ಕೆ ಅನುಕೂಲವಾದ ಸಮಸ್ತ ರಾಜಸನ್ನಾಹಗಳನ್ನೂ, ಜೊತೆಗೂಳಿಸಿ ಬ್ರಾಹ್ಮಣ ಋತ್ವಿಜರಿಂದ ಕ್ಷತ್ರಿಯ ಕುಲದಲ್ಲಿ ವಯೋವೃದ್ಧರಾದವರಿಂದ ಸಮಸ್ತ ಪ್ರಜಾ ಪರಿವಾರಗಳಿಂದ ಕೂಡಿಕೊಂಡು ಶಾಸ್ತ್ರೋಕ್ತಪ್ರಕಾರವಾಗಿ ಬೃಹಸ್ಪತ್ಯಾಚಾರ್ಯನು ದೇವೇಂದ್ರನನ್ನು ಹೇಗೆ ಅಭಿಷೇಕಮಾಡಿದನೋ ಹಾಗೆ ನಾಲ್ಕು ಸಮುದ್ರದ ತೀರ್ಥಗಳಿಂದಲೂ ಪಟ್ಟಾಭಿಷೇಕವನ್ನು ಮಾಡಿದನು ॥ ೬೬ ॥ ಈ

ಸ್ನಾನೈಃಸುವಾಸಾಸ್ರಗಲಂಕೃತಃ ॥ ಸ್ವಲಂಕೃತೈಃಸುವಾಸೋಽಭಿಭ್ರಾತೃಭಿರ್ಭಾರ್ಯಯಾಬಭೌ ॥ ೬೭ ॥ ಅಗ್ರಹೀದಾಸನಂಭ್ರಾತಾ ಪ್ರಾಣಿಪತ್ಯಪ್ರಸಾದಿತಃ ॥ ಪ್ರಜಾಃಸ್ವಧರ್ಮನಿರತಾಃವರ್ಣಾಶ್ರಮಗುಣಾನ್ವಿತಾಃ ॥ ೬೮ ॥ ಜುಗೋಪಪಿತೃವದ್ರಾಮೋಮೇನಿರೇಪಿತರಂಚತಂ ॥ ತ್ರೇತಾಯಾಂವರ್ತಮಾನಾಯಾಂಕಾಲಃಕೃತಸಮೋಽಭವತು ॥ ೬೯ ॥ ರಾಮೇರಾಜನಿಧರ್ಮಜ್ಞೇಸರ್ವಭೂತಸುಖಾವಹೇ ॥ ವನಾನಿನದ್ಯೋಗಿರಯೋವರ್ಷಾಣಿದ್ವೀಪಸಿಂಧವಃ ॥ ೭೦ ॥ ಸರ್ವೇಕಾಮದುಘಾಆಸನ್ಪ್ರಜಾನಾಂದ್ವಿಜಸತ್ತಮ ॥ ಆಧಿವ್ಯಾಧಿಜರಾಗ್ಲಾನಿದುಃಖಶೋಕಭಯಕ್ಲಮಾಃ ॥೭೧॥ ಮೃತ್ಯುಶ್ಚಾನಿಚ್ಛತಾಂ

ಪ್ರಕಾರವಾಗಿ ಪಟ್ಟಾಭಿಷಿಕ್ತನಾದ ಶ್ರೀರಾಮನು ಸರ್ವಾಲಂಕಾರಮಂಡಿತನಾಗಿ ತಮ್ಮಂದಿರಿಂದಲೂ ಪತ್ನಿಯಿಂದಲೂ ಪ್ರಕಾಶಿಸುತ್ತಿದ್ದನು ॥ ॥೬೭॥ತಮ್ಮನಾದ ಭರತನಿಂದ ಪ್ರಾರ್ಥಿಸಿಕೊಂಡವನಾಗಿ ಸಿಂಹಾಸನವನ್ನು ಸ್ವೀಕರಿಸಿದನು. ಆಯಾ ಜಾತಿಧರ್ಮಗಳಂತೆ ನಡೆದುಕೊಳ್ಳುತ್ತಿರುವ ಸಮಸ್ತಪ್ರಜೆಗಳನ್ನೂ ॥೬೮॥ತಂದೆಯಂತೆ ರಕ್ಷಿಸುತ್ತಿದ್ದನು. ಪ್ರಜೆಗಳು ಆ ರಾಮಚಂದ್ರನನ್ನು ತಂದೆಯಂತೆ ಭಾವಿಸಿಕೊಂಡಿದ್ದರು. ಆಗ ತ್ರೇತಾಯುಗವಾದರೂ ಸಕಲ ಧರ್ಮವೂ ಕೃತಯುಗಕ್ಕೆ ಸಮವಾಗಿ ಪ್ರವರ್ತಿಸಿತು ॥ ೬೯ ॥ ಸರ್ವಪ್ರಾಣಿಗಳಿಗೂ ಸುಖವನ್ನೇ ಕಲ್ಪಿಸುವ ಶ್ರೀರಾಮನು ಅರಸನಾಗುತ್ತಿರಲಾಗಿ ವನಗಳೂ ನದಿಗಳೂ ಪರ್ವತಗಳೂ ವನಗಳೂ ದ್ವೀಪಗಳೂ ಸಮುದ್ರಗಳೂ ಇಂತಹ ಸಮಸ್ತಗಳೂ ಅವರವರು ಅಪೇಕ್ಷಿಸಿದಂತೆ ಇದ್ದುವು. ಪ್ರಜೆಗಳಿಗೆ ಮನೋವ್ಯಥೆ, ರೋಗವು, ಮುದಿತನ, ಆಯಾಸ, ದುಃಖಗಳು, ವ್ಯಸನ, ಭೀತಿ, ಬೆವರಿಕೆ ಸಹ ಇರಲಿಲ್ಲ ॥೭೦॥ ೭೧ ॥ ಅತೀಂದ್ರಿಯನಾದ ಶ್ರೀರಾಮನು ಅರಸನಾಗಿ ಭೂಮಿಯನ್ನು ಆಳುತ್ತಿರಲಾಗಿ ಯಾರು ಮರಣವನ್ನು ಬಯಸದಿದ್ದರೋ ಅವರನ್ನು ಆ ಮೃತ್ಯುವು ಬಾಧಿಸುತ್ತಲೇ

ನಾಸೀತ್ರಾಮೋರಾಜನ್ಯಧೋಕ್ಷಜೇ ॥ ಏಕಪತ್ನೀವ್ರತಧರೋರಾಜ
ರ್ಷಿಚರಿತಶ್ಶುಚಿಃ ॥೨೨॥ ಸ್ವಧರ್ಮಂಗೃಹಮೇಧೀಯಂಶಿಕ್ಷಯಂ
ಸ್ವಯಮಾಚರನ್ ॥ ಪ್ರೇಮ್ಣಾನುವೃತ್ತ್ಯಾಶೀಲೇನಪ್ರಶ್ರಯಾವನತಾ
ಸತೀ॥ ಧಿಯಾಹ್ರಿಯಾಚಭಾವಜ್ಞಾ ಭರ್ತುಸ್ಸೀತಾಹರನ್ಮನಃ ॥೨೩॥
ಇತ್ಯೇತದ್ರಾಮಚರಿತಂಸಸೌಮಿತ್ರಕೃತಂಮಹತ್ ॥ ಪಠತಾಂಶೃ
ಣ್ವತಾಂಚೈವಕಲಿಕಲ್ಮಷನಾಶನಂ॥೨೪॥ ಆಯುರ್ವೃದ್ಧಿಕರಂಚೈವ
ವಿಷ್ಣೋಸ್ಸದ್ಭಕ್ತಿದಾಯಕಂ ॥ ಅಧ್ಯಾಯಮೇನಂಪಠತೋಮಧ್ಯಾ
ಹ್ನೇನಿತ್ಯದಾದ್ವಿಜ ॥ ೨೫ ॥ ಪಿತರಸ್ತೃಪ್ತಿಯಾಯಾಂತಿಶಾಪಾ
ತ್ತೇಷಾಂಪ್ರಮುಚ್ಯತೇ ॥ ಮಾತೃಶಾಪಾದಿಶಾಪೇಭ್ಯೋಮುಚ್ಯತೇ
ನಾತ್ರಸಂಶಯಃ ॥೨೬॥ ಪ್ರೀಯತೇರಾಮಚಂದ್ರೋಪಿಸೀತಯಾ

ಇರಲಿಲ್ಲ. ರಾಜಋಷಿಯಾಗಿ ಪರಿಶುದ್ಧ ಸ್ವಭಾವನಾದ ಶ್ರೀರಾಮನು ಏಕಪತ್ನೀವ್ರತನಾಗಿದ್ದನು ॥ ೨೨ ॥ ಸಹಜವಾದ ಗೃಹಸ್ಥಾಶ್ರಮವನ್ನು ತಾನು ನಡೆಯಿಸುತ್ತ ಪರರಿಗೂ ಉಪದೇಶಿಸುತ್ತಿದ್ದನು. ಭಕ್ತಿಯಿಂದ ಬಾಗಿರುವ ಪತಿವ್ರತೆಯಾದ ಸೀತಾದೇವಿಯು ಪ್ರೇಮದಿಂದಲೂ ಅನುಸರಣೆಯಿಂದಲೂ ಸ್ವಭಾವವಾದ ಲಜ್ಜೆಯಿಂದಲೂ ಬುದ್ಧಿಯಿಂದಲೂ ಶ್ರೀರಾಮನ ಮನೋಗತವನ್ನು ಬಲ್ಲವಳಾಗಿ ಪತಿಯ ಮನಸ್ಸನ್ನು ಅನುಸರಿಸಿ ನಡೆಯುತ್ತಿದ್ದಳು॥೨೩॥ ಈ ಪ್ರಕಾರವಾದ ಲಕ್ಷ್ಮಣ ಸಹಿತನಾದ ಶ್ರೀರಾಮನ ಚರಿತ್ರೆಯು ಹೇಳುವವರಿಗೂ ಕೇಳುವವರಿಗೂ ಕಲಿದೋಷನಾಶಕವಾಗಿರುವುದು ॥೨೪॥ ಆಯುಷ್ಯಾಭಿವೃದ್ಧಿಕರವಾಗಿಯೂ ಶ್ರೀ ಮಹಾವಿಷ್ಣುವಿನಲ್ಲಿ ಭಕ್ತಿಕರವಾಗಿಯೂ ಇರುವುದು. ಮಧ್ಯಾಹ್ನ ಸಮಯದಲ್ಲಿ ಈ ಅಧ್ಯಾಯವನ್ನು ಕೇಳುವವರ ಪಿತೃಗಳು ತೃಪ್ತಿಯನ್ನು ಹೊಂದುತ್ತಾರೆ. ಅವರು ಪಾಪದ ದೆಸೆಯಿಂದ ಮುಕ್ತರಾಗುವರು. ಮಾತೃ [illegible] ಶಾಪಗಳ ದೆಸೆಯಿಂದ ಮುಕ್ತನಾಗುವನು. ಅನುಮಾನವಿಲ್ಲ ॥೨೫॥ ೨೬ ॥ ಎಲೈ ಶೌನಕಋಷಿಯೇ ಕೇಳು, ಈ

ಭ್ರಾತೃಭಿಃಸಹ ॥ ಜ್ಞಾನಂವಿರಕ್ತಿಮದ್ವಿಪ್ರಾ ಜಾಯತೇತಸ್ಯಶಾಶ್ವತಂ ॥೭೭॥

ಇತಿ ಶ್ರೀ ಕಲಶೇಶ್ವರ ಮಾಹಾತ್ಮ್ಯೇ ಸಪ್ತದಶೋಽಧ್ಯಾಯಃ ॥

॥ ಶ್ರೀ ಕಲಶೇಶ್ವರಾರ್ಪಣಮಸ್ತು ಶ್ರೀ ಶ್ರೀ ॥

ಅಧ್ಯಾಯವನ್ನು ಓದುವವನಿಗೆ ಶ್ರೀರಾಮಚಂದ್ರನು ಸೀತಾದೇವಿಯಿಂದಲೂ, ತಮ್ಮಂದಿರಿಂದಲೂ ಸಹಿತನಾಗಿ ಸಂತುಷ್ಟನಾಗುವನು. ಮತ್ತು ವೈರಾಗ್ಯಕ್ರಿಯವೂ ಶಾಶ್ವತವೂ ಆದ ಜ್ಞಾನವುಲಭಿಸುತ್ತದೆ ॥ ೭೭ ॥

ಈ ಪ್ರಕಾರವಾಗಿ ಸ್ಕಂದಪುರಾಣದಲ್ಲಿ ತುಂಗಭದ್ರಾಖಂಡದಲ್ಲಿರುವ ಶ್ರೀ ಕಲಶೇಶ್ವರನ ಮಹಿಮೆಯಲ್ಲಿ ರಾಮಗಿರಿ ವರ್ಣನೆ ಎಂಬ ಹದಿನೇಳನೆಯ ಅಧ್ಯಾಯವು ಸಂಪೂರ್ಣವಾದುದು.

ಋಷಯ ಊಚುಃ ॥ ಸೂತಸೂತಮಹಾಪ್ರಾಜ್ಞಪುರಾಣಾರ್ಥವಿಶಾರದ ॥ ಗಜರೂಪೀತ್ವಯಾಪ್ರೋಕ್ತೋವಿಘ್ನರಾಟ್ಛಂಕರಾತ್ಮಜಃ॥ ೧ ॥ ಗಜಾಸ್ಯೋಭಗವಾನ್ದೇವೋಗಜರೂಪೀತಥಾವಿಭುಃ॥ ತದ್ವದಸ್ವಾನುಪೂರ್ವ್ಯೇಣಭಕ್ತೇಭ್ಯಃಶಿವನಂದನೇ॥೨॥ ಇತಿತದ್ವಚನಂಶ್ರುತ್ವಾಪ್ರೋವಾಚೋಗ್ರಶ್ರವಾಸ್ತದಾ॥ ಮಾಹಾತ್ಮ್ಯಂಗಜರೂಪಸ್ಯವಿಘ್ನೇಶಸ್ಯಮಹಾತ್ಮನಃ ॥೩॥ ಸೂತಃ॥ ಶೃಣುಧ್ವಮೃಷಯಃ ಸರ್ವೇಸರ್ವಾಭೀಷ್ಟಫಲಪ್ರದಂ॥ ಕಾರಣಂಗಜರೂಪಸ್ಯಚಾಖ್ಯಾನಂ ಜಗದೀಶಿತುಃ॥೪॥ ಷಡಾನನೇನಸಂಪೃಷ್ಟೋಯದಾಹಭಗವಾನ್ಭವಃ॥ ತದ್ವೋಹಂಸಂಪ್ರವಕ್ಷ್ಯಾಮಿಗಣನಾಥಸ್ಯವೈಭವಂ ॥೫॥ ಸ್ಕಂದಃ ॥

೧೮ನೆಯ ಅಧ್ಯಾಯ ಪ್ರಾರಂಭ.

ಶ್ರೀ ಶೌನಕಾದಿ ಋಷಿಗಳು ಸೂತಪೌರಾಣಿಕನನ್ನು ಕುರಿತು ಎಲೈ ಪುರಾಣಗಳ ಅರ್ಥದಲ್ಲಿ ವಿಸ್ತಾರಬುದ್ಧಿಯುಳ್ಳ ಸೂತನೆ, ನಿನ್ನಿಂದ ಶ್ರೀ ವಿಘ್ನರಾಜನು ಗಜರೂಪಿಯಾಗಿದ್ದನೆಂದು ಹೇಳಲ್ಪಟ್ಟಿತಲ್ಲಾ, ಗಜಮುಖನೆಂದು ಪ್ರಸಿದ್ಧನಾದ ದೇವನು ಗಜಾಕಾರನಾಗಿರುವುದರ ಕಾರಣವೇನು, ಆ ಚರಿತ್ರೆಯನ್ನು ಆ ಮಹಾಗಣಪತಿದೇವನಲ್ಲಿ ಭಕ್ತರಾದ ನಮಗೋಸ್ಕರ ಹೇಳು ಎಂದು ಉಪಚರಿಸಿಕೊಂಡ ಸೂತನು ಋಷಿಗಳನ್ನು ಕುರಿತು ಎಲೈ ಮಹಾಋಷಿಗಳಿರಾ ಕೇಳಿ. ಅದು ಶ್ರೀ ಪರಮೇಶ್ವರನ ಚರಿತ್ರವಾಗಿ ಇಷ್ಟಾರ್ಥದಾಯಕವಾಗಿರುವುದು. ಪೂರ್ವದಲ್ಲಿ ಪುರಾಣ ಕೇಳುತ್ತಿದ್ದ ಕುಮಾರಸ್ವಾಮಿಯು ಕೇಳಿದುದಕ್ಕೆ ಪರಮಾತ್ಮನು ಹೇಳಿದ ಗಣಪತಿಯ ಚರಿತ್ರೆಯನ್ನು ಹೇಳುವೆನು, ಸಾವಧಾನವಾಗಿ ಕೇಳಿ ॥೧॥೨॥೩॥೪॥೫॥ ಷಣ್ಮುಖಸ್ವಾಮಿಯು ತಂದೆಯನ್ನು ಕುರಿತು, ಮನೋಹರವಾದ ತುಂಗಭದ್ರಾನದೀತೀರದಲ್ಲಿ ಶ್ರೀಕಲಶೇಶ್ವರಸ್ವಾಮಿಯವರ ಸಮೀಪದಲ್ಲಿ ಜಗನ್ಮಯನಾದ ಗಣಪತಿ ದೇವನು ಗಜರೂಪನಾಗಿ ನಿತ್ಯದಲ್ಲಿಯೂ ದೇವತೆಗಳಿಂದ ಪೂಜಿಸಲ್ಪಡುತ್ತಿರುವನು.

ತುಂಗಭದ್ರಾತಟೇರಮ್ಯೇಕಲಶೇಶಸ್ಯಸನ್ನಿಧೌ ॥ ಸಂಸೇವ್ಯಸ್ತ್ವಸುರೈ
ರ್ನಿತ್ಯಂಗಜರೂಪೀಜಗನ್ಮಯಃ ॥ ೬ ॥ ಕಿಮರ್ಥಂಗಜರೂಪೇಣಗ
ಜಾನನಇತಿಸ್ಮೃತಃ ॥ ತನ್ನೋಬ್ರೂಹಿಮಹಾದೇವಕೃಪಯಾಭಕ್ತ
ವತ್ಸಲ ॥ ೭ ॥ ಶ್ರೀಮಹಾದೇವಃ ॥ ಪುರಾತಾಳಾಸುರೋನಾಮ
ರಾಕ್ಷಸೇಂದ್ರೋಮಹಾಬಲಃ॥ ದೇವಾನ್ವಂಚಯಿತುಂದೈತ್ಯೋವೃಕ್ಷ
ರೂಪಮಗಾತ್ಪುರಾ ॥ ೮ ॥ ಏವಂಭೂತೋಸುರೋಬಾಲ್ಯಾನ್ಮೃ
ತ್ಯುರೂಪೇದಿವೌಕಸಃ ॥ ಬ್ರಹ್ಮಾಣಂಚತಪಸ್ತೇಪೇದೇವಾನಾಂವತ್ಸ
ರಾಯುತಂ ॥ ೯ ॥ ತಾಳಾಸುರಸ್ಯತಪಸಾದೇವಾಇಂದ್ರಪುರೋಗ
ಮಾಃ ॥ ಭೀತಾಸ್ತೇಶರಣಂಜಗ್ಮುರ್ಬ್ರಹ್ಮಾಣಂಲೋಕನಾಯಕಂ॥
॥ ೧೦ ॥ ಸ್ತುತ್ವಾತುವಾಗ್ಭಿರಿಷ್ಟಾಭಿಃಪ್ರಣಪತ್ಯಯಥಾಕ್ರಮಂ ॥

ಎಲೈ ಭಕ್ತರಲ್ಲಿ ಪ್ರೀತಿಯಿಟ್ಟಿರುವ ಮಹಾದೇವನಾದ ತಂದೆಯೆ! ಆ ವಿಘ್ನೇಶ್ವರನು, ಗಜ ರೂಪನಾಗಿ ಗಜಾನನನೆಂದು ಏಕೆ ಪ್ರಸಿದ್ಧಿಯಾದನು? ಈ ವಿಷಯುವನ್ನು ದಯವಿಟ್ಟು ಶಿಷ್ಯರಾದ ನಮಗೆ ತಿಳುಹಿಸಬೇಕು ಎಂದು ಪ್ರಾರ್ಥಿಸಿದನು ॥೬॥೭॥ ಶ್ರೀಭಗವಂತನು ಕುಮಾರ ಸ್ವಾಮಿಯನ್ನು ಕುರಿತು ಎಲೈ ಷಣ್ಮುಖನೇ ಕೇಳು. ಪೂರ್ವದಲ್ಲಿ ದೇವತೆಗಳನ್ನು ವಂಚಿಸುವುದಕ್ಕೆ ಮಹಾಬಲಿಷ್ಠನಾದ ರಾಕ್ಷಸ ಶ್ರೇಷ್ಠನಾದ ತಾಳಾಸುರನೆಂಬ ದೈತ್ಯನು ತಾಳೆಯ ಮರದ ಆಕಾರವನ್ನು ಹೊಂದಿಕೊಂಡಿದ್ದನು ॥ ೮ ॥ ಹೀಗಿರುವ ಆ ದೈತ್ಯನು ದೇವತೆಗಳಿಗೆ ತನ್ನ ಬಾಲ್ಯವಯಸ್ಸಿನ ಕಾಲದಿಂದಲೇ ಮೃತ್ಯುರೂಪವಾಗಿ ಇದ್ದನು. ಅಂತಹ ದೈತ್ಯನು ಅಧಿಕವಾದ ಸಂಪತ್ತನ್ನು ಹೊಂದಲಪೇಕ್ಷಿತನಾಗಿ ಬ್ರಹ್ಮದೇವರನ್ನು ಕುರಿತು ದೇವ ಸಂವತ್ಸರಗಳ ಹತ್ತು ಸಾವಿರ ವರ್ಷ ಪರ್ಯಂತವಾಗಿ ತಪಸ್ಸನ್ನು ಮಾಡಿದನು ॥೯॥ ಈ ತಾಳಾಸುರನ ತಪೋಜ್ವಾಲೆಯಿಂದಲೂ ಇವನಮನಸ್ಸಂಕಲ್ಪದಿಂದಲೂ ಭೀತರಾದ ದೇವೇಂದ್ರ ಮೊದಲಾದ ದೇವತೆಗಳು, ಲೋಕಸ್ವಾಮಿಯಾದ ಬ್ರಹ್ಮದೇವನ ಮರೆಯನ್ನು ಹೊಂದಿದರು ॥೧೦॥ ಅನೇಕ ಪ್ರಕಾರ ಸ್ತೋತ್ರಗ

ತತೋವಿಜ್ಞಾಪಯಾಮಾಸುರ್ಭಗವಂತಂಪಿತಾಮಹಂ ॥ ೧೧ ॥
ದೇವಾಃ ॥ ತಾಳಾಸುರಸ್ಯತಪಸಾಭೀತಾಸ್ತ್ವಾಂಶರಣಂಪ್ರಭೋ ॥
ಆ ತಾಸ್ಸ್ವಹಿನಸ್ತಸ್ಮಾತ್ಸುಖದೋಭವಪದ್ಮಜ ॥೧೨॥ ಬ್ರಹ್ಮಾ ॥
ಶೃಣುಧ್ವಮಮರಾಃಸರ್ವೇಭವಧ್ವಂವಿಗತಜ್ವರಾಃ ॥ ಯದ್ಧಿತಂಭ
ವತಾಂನೂನಂತತ್ಕರಿಷ್ಯಾಮಿಸಾಂಪ್ರತಂ ॥೧೩॥ ಬ್ರಹ್ಮಣೋವಚ
ನಂಶ್ರುತ್ವಾದೇವಾಸ್ಸ್ವಸ್ಥಾನಮಾಯಯುಃ ॥ ತತಸ್ತತ್ತಪಸಾಪ್ರೀ
ತೋಬ್ರಹ್ಮಾಗತ್ವಾಬ್ರವೀಚ್ಚತಂ ॥೧೪॥ ವರಂವೃಣೀಷ್ವದಾಸ್ಯಾಮಿ
ಯತ್ತೇಭಿಲಷಿತಂಶುಭಂ ॥ ಇತ್ಯುದೀರಿತಮಾಕರ್ಣ್ಯರಾಕ್ಷಸೇಂದ್ರಃ
ಪಿತಾಮಹಂ ॥೧೫॥ ತ್ರೈಲೋಕ್ಯೇದೇಹಿಮೆಬ್ರಹ್ಮನ್ನವಧ್ಯತ್ವಂಸು

ಳಿಂದ ಸ್ತುತಿಸಿ, ವಿಧಿ ಪ್ರಕಾರ ನಮಸ್ಕರಿಸಿ, ಅನಂತರ ಷಡ್ಗುಣೈಶ್ವರ್ಯ ಸಂಪನ್ನನಾದ ಬ್ರಹ್ಮದೇವನನ್ನು ಕುರಿತು, ಎಲೈ ಜಗತ್ತಿಗೆ ಅಧಿಪತಿಯಾದ ಕಮಲಜನಾದ ಸ್ವಾಮಿಯೇ, ತಾಳಾಸುರನ ತಪಸ್ಸಿನಿಂದ ಭೀತರಾಗಿ ನಿನ್ನ ಶರಣವನ್ನು ಹೊಂದಿದೆವು. ಆ ಭೀತಿಯ ದೆಸೆಯಿಂದ ನಮ್ಮನ್ನು ರಕ್ಷಿಸಿ ಸುಖಪ್ರದನಾಗು ಎಂದು ಪ್ರಾರ್ಥಿಸಿದರು ॥೧೧॥ ೧೨॥ ಬ್ರಹ್ಮದೇವನು ದೇವತೆಗಳನ್ನು ಕುರಿತು ಎಲೈ ಸಮಸ್ತ ದೇವತೆಗಳಿರಾ ಕೇಳಿ. ನೀವು ವ್ಯಸನವಿಲ್ಲದವರಾಗಿರಿ. ನಿಮಗೆ ಯಾವುದು ಹಿತವೋ ಅದನ್ನೇ ಈಗ ಆಲೋಚನೆ ಮಾಡುವೆನು ॥೧೩॥ ಹೀಗೆಂದ ಬ್ರಹ್ಮದೇವನ ಮಾತನ್ನು ಕೇಳಿ ದೇವತೆಗಳು ತಮ್ಮತಮ್ಮ ಸ್ಥಾನವನ್ನು ಹೊಂದಿದರು. ಆಮೇಲೆ ಇತ್ತಲು ದೈತ್ಯನ ತಪಸ್ಸಿನಿಂದ ಸಂತುಷ್ಟನಾದ ಬ್ರಹ್ಮದೇವನು ಅವನ ಆಶ್ರಮವನ್ನು ಕುರಿತು ಬಂದು ಅವನನ್ನು ಕರೆದು ಹೇಳಿದನು ॥೧೪॥ ಎಲೈ ದೈತ್ಯನೆ, ನಿನ್ನ ಪ್ರಾರ್ಥನೆಯೇನು ಕೇಳು. ನೀನು ಅಪೇಕ್ಷಿಸಿದ ಶುಭವಾದ ವರವನ್ನು ನಾನು ಕೊಡುವೆನು. ಹೀಗೆಂದ ದೇವರ ಮಾತನ್ನು ಕೇಳಿ ಆ ರಾಕ್ಷಸ ರಾಜನು ಬ್ರಹ್ಮದೇವನನ್ನು ಕುರಿತು॥೧೫॥ ಎಲೈ ಬ್ರಹ್ಮದೇವನೆ, ಮೂರು ಲೋಕದಲ್ಲಿ ದೇವಾಸುರರಿಂದ ಅವಧ್ಯತ್ವವನ್ನು ಕೊಡು,ಎಂಬು ಕೇಳುತ್ತಲೇ ಹಾಗಾಗುವುದಿಲ್ಲ, ಯುಕ್ತಿಯನ್ನು

ರಾಸುರ್ಯಃ ॥ ಯದಾಹಿಭಗವಾನ್ಸ್ವಸ್ಯಗಜೋಭೂಯಾತ್ಸದುದ್ಭವಃ ॥
॥ ೧೬ ॥ ಮಮೇಷ್ಟಮೃತ್ಯುರ್ದೇವೇಶಭೂಯಾದ್ಭಗವತೀಸುತಃ ॥
ತಥಾಸ್ತ್ವಿತಿವರಂತಸ್ಮೈದತ್ವಾಬ್ರಹ್ಮಾಜಗಾಮಸಃ ॥ ೧೭ ॥ ವರ
ದಾನಮದಾಂಧಸ್ತುವಶೀಕೃತ್ಯತ್ರಿವಿಷ್ಟಪಂ॥ ಭೂಲೋಕಂನಾಗಲೋ
ಕಂಚಲೋಕಪಾಲಾನ್ಮಹಾಬಲಾನ್ ॥ ೧೮ ॥ ಲೋಕಾನ್ಸರ್ವಾನ್ಸ್ವ
ತೇಸ್ವಾಪ್ಯಸ್ವೇಸ್ವಚಿತ್ತೋಭವತ್ತದಾ॥ ದೇವಾಃಪಲಾಯಿತಾಸ್ತೇನರಾ
ಕ್ಷಸೇನಬಲೀಯಸಾ ॥೧೯॥ ದೇವಾನಾಂಯೋಷಿತೋಯಾಶ್ಚಬಲಾ
ದಪಹೃತಾಶ್ಚತಾಃ ॥ ತತಃಪರಾಜಿತಾಸ್ಸರ್ವೇಶಕ್ರಾದ್ಯಾಃಪ್ರಥಿತೌಜ
ಸಃ ॥೨೦॥ ಬೃಹಸ್ಪತಿಂಪುರೋಧಾಯಬ್ರಹ್ಮಾಣಂತ್ರಿದಶೇಶ್ವರಂ॥

ತಿಳಿದು ಕೇಳು ಎಂದು ಹೇಳುತ್ತಲೇ ಯಾವಾಗ ಶ್ರೀ ಭಗವಂತನು ಕಾಡಾನೆಯ ರೂಪನಾದಾನೋ ಆಗ ಅವನಿಂದ ಹುಟ್ಟಿದವನು ॥೧೬॥ ನನಗೆ ಇಷ್ಟವಾದ ಮೃತ್ಯುವು ಆಗಲಿ. ಮತ್ತು ಆತನು ಶ್ರೀ ಗಿರಿಜಾ ದೇವಿಯಲ್ಲಿಯೇ ಹುಟ್ಟಿದಂಥವನಾಗಿರಬೇಕು. ಹೀಗೆಂದ ಮಾತನ್ನು ಕೇಳಿ ಬ್ರಹ್ಮದೇವನು ಹಾಗೆಯೇ ಆಗಲಿ ಎಂದು ವರವನ್ನು ಕೊಟ್ಟು ಪ್ರಯಾಣಮಾಡಿದನು ॥೧೭॥ ಇತ್ತಲಾ ದೈತ್ಯನು ವರ ಪ್ರದಾನದಿಂದ ಗರ್ವಿಷ್ಠನಾಗಿ ಸ್ವರ್ಗಲೋಕವನ್ನು ಸ್ವಾಧೀನಪಡಿಸಿಕೊಂಡು ಭೂ ಲೋಕ, ನಾಗಲೋಕಗಳನ್ನೂ ಬಲಿಷ್ಠರಾದ ಲೋಕಪಾಲರನ್ನೂ ॥೧೮॥ ಮತ್ತು ಸಮಸ್ತ ಲೋಕಗಳನ್ನೂ ಸ್ವಾಧೀನ ಪಡಿಸಿಕೊಂಡು ಮತ್ತ ನಾಗಿದ್ದನು. ಹೀಗಿರುವ ಬಲಿಷ್ಠನಾದ ಆ ದೈತ್ಯನಿಂದ ದೇವತೆಗಳು ಪಲಾಯನಸೂಕ್ತ ಪಾರಾಯಣಮಾಡಿದರು ॥೧೯॥ ದೇವಾಪ್ಸರ ಸ್ತ್ರೀಯರು ಅಪಹರಿಸಲ್ಪಟ್ಟರು. ಆ ಮೇಲೆ ಪ್ರಸಿದ್ಧ ಕೀರ್ತಿಗಳಾದ ಇಂದ್ರಾದಿ ದೇವತೆಗಳು ಹೀಗೆ ಪರಾಜಿತರಾಗಿ ॥೨೦॥ ಬೃಹಸ್ಪತಿ ಯನ್ನು ಮುಂದಿಟ್ಟುಕೊಂಡು ದೇವಸ್ವಾಮಿಯಾದ ಬ್ರಹ್ಮದೇವನನ್ನು ಹೊಂದಿ ಭಕ್ತಿಯಿಂದ ನಮಸ್ಕರಿಸಿ, ವಿನಯದಿಂದ ಪ್ರಾರ್ಥಿಸಿದರು. ಬಂದ ದೇವತೆಗಳನ್ನು ಕರುಣದಿಂದ ನೋಡಿ ಆ ಮೇಲೆ ಕಮಲೋದ್ಭ

ಗತ್ವಾಭಕಾಲೇನಮುಶ್ಚ ಕ್ಷೀರಸ್ತುವಂಶ್ಚಾನತಾನನಾಃ ॥ ಆಗತಾಂಶ್ಚ
ಸುರಾನ್ ದೃಷ್ಟ್ವಾ ತತಃಪ್ರೋವಾಚಪದ್ಮಜಃ ॥ ೨೧ ॥ ಬ್ರಹ್ಮಾ ॥
ಯಸ್ಮಾದ್ಯೂಯಂಸುರಾಸ್ಸರ್ವೇಆಗತಾಸ್ಥ ಮಮಾಂತಿಕಂ॥ಬುಧ್ವಾ
ತತ್ಸಕಲಂದೇವಾಉಪಾಯಾವಚ್ಮಿಸಾಂಪ್ರತಂ ॥ ೨೨ ॥ ದೇವಾಃ ॥
ತಾಳಾಸುರಭಯಾದ್ದೇವಶರಣಂತ್ವಾಮಿಹಾಗತಾಃ ॥ ಯಥಾಮೃ
ತ್ಯೋರ್ಭಯಂದೇವತಸ್ಮಾತ್ರಾತುಮಿಹಾರ್ಹಸಿ॥೨೩॥ ಅಪಿಕ್ಷಣಂ
ಜಗದ್ಯೋನೇಸುಖಂನಾಸ್ತಿತತಃಪ್ರಭೋ ॥ ಶ್ರಿಯಃಪತೇಃಸಹಸ್ರಾಣಿ
ಹರೇಸ್ತಸ್ಯಾಸುರಸ್ಯಚ॥೨೪॥ ಅಹರ್ನಿಶಂಚಾಬ್ದಶತಂಯುದ್ಧಮಾ
ಸೀತ್ಸುದಾರುಣಂ॥ ತಥಾಪಿನಜಿತಸ್ತೇನದೇವದೇವೇನಚಕ್ರಿಣಾ॥೨೫॥
ಅವಧ್ಯೋಯಮಿತಿಜ್ಞಾತ್ವಾಯಯೌತ್ಯಕ್ತ್ವಾಮಹೋದಧಿಂ ॥

ವನಾದ ಆ ದೇವನು ॥ ೨೧ ॥ ಎಲೈ ಸಮಸ್ತ ದೇವತೆಗಳಿರಾ, ಯಾವ ಕಾರಣದ ದೆಸೆಯಿಂದ ನನ್ನ ಸಮೀಪಕ್ಕೆ ಬಂದಿರೋ ಆ ಎಲ್ಲವನ್ನೂ ತಿಳಿದು ಈಗ ಒಂದುಪಾಯವನ್ನು ಹೇಳುವೆನು. ॥ ೨೨ ॥ ಆಗ ದೇವತೆಗಳು ಎಲೈ ಸ್ವಾಮಿಯೇ, ಮೃತ್ಯುವಿನ ದೆಸೆಯಿಂದ ಹೇಗೆ ಭೀತಿಯೋ ಹಾಗಿರುವ ತಾಳಾಸುರನ ಭಯದ ದೆಸೆಯಿಂದ ನಿನ್ನಲ್ಲಿ ಬಂದಿದ್ದೇವೆ. ಎಲೈ ದೇವನೇ, ಆ ಭಯದ ದೆಸೆಯಿಂದ ರಕ್ಷಿಸಲು ನೀನೇ ಶಕ್ತನಾಗಿದ್ದ. ॥೨೩॥ ಎಲೈ ಜಗತ್ಕಾರಣನಾದ ಒಡೆಯನೇ, ಅವನ ದೆಸೆಯಿಂದ ಒಂದು ಕ್ಷಣವಾದರೂ ಸುಖವಿಲ್ಲ. ಇನ್ನೂ ಒಂದು ಪ್ರಾರ್ಥನೆಯನ್ನು ಹೇಳುವೆವು. ಆ ದೈತ್ಯನಿಗೂ ಲಕ್ಷ್ಮೀಪತಿಯಾದ ಶ್ರೀ ಮಹಾವಿಷ್ಣುವಿಗೂ ॥ ೨೪॥ ನೂರು ವರ್ಷ ಹಗಲು ರಾತ್ರಿಯಲ್ಲಿ ಕಠಿನವಾದ ಯುದ್ಧವು ನಡೆದಿತ್ತು. ಹಾಗಾದರೂ ದೇವೇಶನಾದ ಚಕ್ರಧರನಿಂದ ಜಯಿಸಲು ಆ ದೈತ್ಯನು ಅಸಾಧ್ಯನಾದನು ॥ ೨೫ ॥ ಇವನು ತನ್ನಿಂದ ಅವಧ್ಯನು ಎನ್ನುವುದನ್ನು ತಿಳಿದು ಇವನನ್ನು ಬಿಟ್ಟು ಈ ದೈತ್ಯನು ಮಹಾಬಲನು ಹೇಗಾದನು ಎಂಬ ಆಶ್ಚರ್ಯವನ್ನು ನೆನೆಯುತ್ತ ಕ್ಷೀರಸಮುದ್ರ

ತತ್ಪಪ್ಯನ್ಮಹದಾಶ್ಚರ್ಯಂಕಥಮೇಷಮಹಾಬಲಃ ॥೨೬॥ ವಯ
ಮಪ್ಯೇವಮೇವಂಹಿಭೀತಾಸ್ತ್ವಾಂಶರಣಂಗತಾಃ॥ ಪಾಹಿನೋದೇವ
ದೇವೇಶತಸ್ಮಾದ್ದೈತ್ಯಾಜ್ಜಗದ್ಗುರೋ ॥೨೭॥ ಬ್ರಹ್ಮಾ ॥ ಶೃಣುಧ್ವ
ಮಮರಾಃಸರ್ವೇಯುಷ್ಮಾಕಂಸುಖದಂಮಹತ್ ॥ ಯೋಸೌತಾಳಾ
ಸುರೋದೈತ್ಯಸ್ತಪಪರಮಂತಪಃ ॥೨೮॥ ತತೋದೈತ್ಯಸ್ಯತಪಸಾ
ದಹ್ಯಮಾನಂಚರಾಚರಂ ॥ ದೃಷ್ಟ್ವಾಹಂವರದಾನಾರ್ಥಮಾಗತೋ
ಸ್ಮೀತಿಚಾಬ್ರುವಂ ॥೨೯॥ ಉಕ್ತಂಮಯಾವಚಶ್ಶ್ರುತ್ವಾತದೋ
ತ್ಥಾಯಮಹಾಬಲಃ ॥ ಅಬ್ರವೀದ್ದೈತ್ಯರಾಜೋಮಾಮಭಿವಾದ್ಯಕೃ
ತಾಂಜಲಿಃ॥೩೦॥ತಾಳಾಸುರಃ॥ಅವಧ್ಯೋಹಂಸುರೈಸ್ಸರ್ವೈರ್ದಾನವೈ
ರಿತರೈರಪಿ॥ಭವಾಮಿಚಯಥಾದೇವತಥಾಭೋದೇಹಿಮೇವರಂ ॥೩೧॥

ನನ್ನು ಕುರಿತು ಪ್ರಯಾಣಮಾಡಿದನು ॥೨೬॥ ಎಲೈದೇವದೇವನೇ, ಜಗ
ದ್ಗುರುವೇ, ನಾವು ಕೂಡ ಅದನ್ನು ಕಂಡು ಭೀತರಾಗಿ ನಿನ್ನ ಶರಣ
ವನ್ನು ಹೊಂದಿದೆವು. ಆ ದೈತ್ಯನ ದೆಸೆಯಿಂದ ನಮ್ಮನ್ನು ಕಾಪಾಡು
॥೨೭॥ ಆಗ ಬ್ರಹ್ಮದೇವರು ದೇವತೆಗಳನ್ನು ಕುರಿತು ಹೇಳುತ್ತಾನೆ.
ಎಲೈ ಸಮಸ್ತದೇವತೆಗಳಿರಾ, ಕೇಳಿ ಅದು ನಿಮಗೆ ಸುಖವಾಗಿರುವು
ದು. ಈ ತಾಳಾಸುರನೆಂಬ ದೈತ್ಯನು ಉತ್ತಮವಾದ ತಪಸ್ಸನ್ನು
ಮಾಡಿದನು. ॥೨೮॥ ಆ ಮೇಲೆ ಆ ದೈತ್ಯನ ತಪಸ್ಸಿನಿಂದ ಸ್ಥಾವರ
ಜಂಗಮವಾದ ಈ ಜತ್ತನ್ನು ಸುಡುತ್ತಿರುವುದನ್ನು ಕಂಡು ಇಷ್ಟಾ
ರ್ಥವನ್ನು ಕೊಡುವುದಕ್ಕೆ ಬಂದಿದ್ದೇನೆ ಎಂದು ಆ ದೈತ್ಯನನ್ನು ಕುರಿ
ತು ಹೇಳಿದೆನು ॥ ೨೯ ॥ ನಾನು ಹೇಳಿದ ಆ ಮಾತನ್ನು ಕೇಳಿ ಮಹಾ
ಬಲಿಷ್ಠನಾದ ಆ ದೈತ್ಯನು ಎದ್ದು ನನ್ನನ್ನು ನಮಸ್ಕರಿಸಿ ಕೈಮುಗಿದು
ಕೊಂಡವನಾಗಿ ಪ್ರಾರ್ಥಿಸಿದನು ॥ ೩೦ ॥ ಎಲೈ ದೇವನೇ ! ಸಮಸ್ತ
ದೇವತೆಗಳಿಂದಲೂ ದಾನವರುಗಳಿಂದಲೂ ಇತರರಾದವರಿಂದಲೂ ಅವ
ಧ್ಯನು ಹೇಗೆ ಆದೇನೋ ಹಾಗೆ ವರವನ್ನು ಕೊಡು ॥ ೩೧ ॥ ಹೀಗೆ

ಏವಮಸ್ತ್ವಿತ್ಯಹಂತಸ್ಮೈವರಂದತ್ವಾಸುರೋತ್ತಮಾಃ ॥ ಪುನರು
ಕ್ತೋಹಿತಾರ್ಥಂವಃಕಸ್ಮಾದ್ವಧ್ಯೋಸಿತಂವದ॥೩೨॥ ನಾಸ್ತಿಸರ್ವ
ಸುರತ್ವಂತೇಮಯಾದತ್ತಂಜಗತ್ರಯೇ ॥ ಇತಿಮದ್ವಚನಂಶ್ರುತ್ವಾ
ಮಾಮಾಹದಿತಿನಂದನಃ ॥ ೩೩ ॥ ಯೋಯಂದೇವಾಧಿದೇವೇಶಃ
ಕಪರ್ದೀನೀಲಲೋಹಿತಃ॥ಕ್ರೀಡಿಷ್ಯತಿಗಜೋಭೂತ್ವಾರುದ್ರಾಣೀಂಗ
ಜರೂಪಿಣೀಂ ॥೩೪॥ಭವಿಷ್ಯತಿತತೋಜಾತೋಮೃತ್ಯುರಿಷ್ಟೋನಚಾ
ನ್ಯತಃ ॥ ತಥಾಸ್ತ್ವಿತಿವಚಶ್ರುತ್ವಾಗತೋಹಂಮೇರುಮೂರ್ಧ
ನಿ ॥೩೫॥ ಗಚ್ಛಧ್ವಂಶರಣಂತಸ್ಮಾಚ್ಛರಣ್ಯಂಸರ್ವದೇಹಿನಾಂ॥ ವಿ

ಅವನಿಂದ ಪ್ರಾರ್ಥಿಸಿಕೊಂಡ ನಾನು ಹಾಗಾಗಲಿ ಎಂದು ಹೇಳಿ ವರವನ್ನು ಕೊಟ್ಟು ನಿಮಗೆ ಹಿತಕ್ಕೋಸ್ಕರ ತಿರುಗಿ ನೀನು ಯಾರ ದೆಸೆಯಿಂದ ವಧ್ಯನಾಗುವೆ ಅವನನ್ನು ಹೇಳು ಎಂದು ಕೇಳಿದೆನು. ॥ ೩೨ ॥ ಮೂರುಲೋಕದಲ್ಲಿಯೂ ನಿನಗೆ ಸರ್ವರಿಂದಲೂ ಸರ್ವಥಾ ಅವಧ್ಯತ್ವವು ನನ್ನಿಂದ ಕೊಡಲ್ಪ ಡುವುದಿಲ್ಲ. ಹೀಗೆಂದ ನನ್ನ ಮಾತನ್ನು ಕೇಳಿ ಆದಿತಿ ದೇವಿಯ ಮಗ ನು ನನ್ನನ್ನು ಕುರಿತು ಹೀಗೆ ಹೇಳಿದನು. ॥ ೩೩ ॥ ಯಾವ ಈ ಸಕಲ ದೇವತೆಗಳಿಗೆ ಆದಿಕರ್ತನಾದ ನೀಲಲೋಹಿತ ವರ್ಣನಾದ ಕೆಂಜೆಡೆಗ ಳುಳ್ಳ ಶ್ರೀಭಗವಂತನು ಕಾಡಾನೆಯ ರೂಪನಾಗಿ ಹಾಗೆಯೇ ಆಗಿರುವ ಶ್ರೀಗಿರಿಜಾ ದೇವಿಯನ್ನು ಕ್ರೀಡಿಸುವನೋ ॥ ೩೪ ॥ ಅವರಿಬ್ಬರ ದೆಸೆ ಯಿಂದ ಹುಟ್ಟಿದವನು ನನಗೆ ಇಷ್ಟನಾಗಿರುವ ಮೃತ್ಯುವು ಬೇರೆ ಯವರ ದೆಸೆಯಿಂದ ಇಲ್ಲ ಅಂದದ್ದನ್ನು ಕೇಳಿ ಹಾಗೆ ಆಗಲಿ ಎಂದು ನಾನು ಮೇರು ಶಿಖರದಲ್ಲಿ ಇರುವ ನನ್ನ ಸ್ಥಾನವನ್ನು ಕುರಿತು ಹೋದೆ ನು ॥ ೩೫ ॥ ಆ ದೈತ್ಯನು ಈ ವಿಷಯವು ಯಾವಾಗಲೂ ನಡೆಯಲಾ ರದು ಎಂದು ಆಲೋಚಿಸಿ ಹೇಳಿದುದಾಗಿರುವುದು. ಎಲೈ ದೇವತೆಗಳಿರಾ ಆ ಕಾರಣದ ದೆಸೆಯಿಂದ ಆಶ್ರಯ ಪೋಷಕನಾದ ಜಗದೀಶನಾದ ಉಮಾಪತಿಯಾದ ಸರ್ವಲೋಕ ಸುಖದಾಯಕನಾದ ಮುತ್ತಿನ ಹಾರ

ಶ್ವೇಶ್ವರಮುಮಾತಾತಂಶಂಕರಂಲೋಕಶಂಕರಂ॥೩೬॥ಮುಕ್ತಾಹಾ
ರಾನ್ವಿತಂದೇವಂಯೇನವ್ಯಾಪ್ತಂಚರಾಚರಂ ॥ ತತಃಪತ್ಯಾವಿಭೋ
ದೇವಾಸತ್ತಳಾಖ್ಯಂಯೋವಧಿಷ್ಯತಿ ॥೩೭॥ ಬ್ರಹ್ಮಣೋವಚನಂಶ್ರು
ತ್ವಾಸಹಸ್ರಾಕ್ಷಶ್ಶಚೀಪತಿಃ ॥ ಕಥಂಭವಿಷ್ಯತೀತ್ಯೇವಮಾಲೋಚ್ಯಮ
ನಸಾದ್ವಿಜಾಃ ॥ ೩೮ ॥ ಗುರುಣಾದ್ಯೈವತ್ಯೈಃಸಾರ್ಧಂಪುನರಭ್ಯೇತ್ಯ
ದೇವತಾಃ ॥ ಹರಸ್ಯಾಂಗಾತ್ಸಮುತ್ಪತ್ತಾವುಪಾಯಶ್ಚಿಂತ್ಯತಾಂ
ಸುರಾಃ ॥ ೩೯ ॥ ಇತ್ಯುಕ್ತ್ವಾಪ್ರಯಯುರ್ದೇವಾಶ್ಶಕ್ರಾದ್ಯಾಬ್ರಹ್ಮ
ಣಾಸಹ॥ಮೇರುಪೃಷ್ಠಂತತೋಗತ್ವಾಯತ್ರತಿಷ್ಠತಿಶಂಕರಃ॥೪೦॥

ಗಳಿಂದ ಅಲಂಕೃತನಾದ ಪ್ರಕಾಶಮಾನನಾದ ಯಾವಾತನಿಂತ ಸ್ಥಾವರ ಜಂಗಮಾತ್ಮಕ ಪ್ರಪಂಚವು ವ್ಯಾಪಿಸಿಕೊಂಡಿರುವುದೋ ಅಂಥಾ ಪರಮಾತ್ಮನ ಮರೆಯನ್ನು ಹೊಂದಿ ಅವನ ದೆಸೆಯಿಂದ ತಾಳಾಸುರನನ್ನು ಯಾವಾತನು ಕೊಲ್ಲುವನೋ ಅವನು ಹುಟ್ಟುವನು ಎಂದು ನಾನು ತಿಳಿದಿದ್ದೇನೆ. ॥ ೩೬ ॥ ೩೭ ॥ ಎಲೈ ಶೌನಕಾದಿ ಋಷಿಗಳಿರಾ ಕೇಳಿ, ಆ ಬ್ರಹ್ಮದೇವರ ಮಾತನ್ನು ಕೇಳಿ ಶಚೀದೇವಿಯ ಪತಿಯಾದ ಸಹಸ್ರನೇತ್ರವುಳ್ಳ ದೇವೇಂದ್ರನು ಈ ಕಾರ್ಯವು ಹೇಗಾಗುವುದೋ ಎಂದು ಮನಸ್ಸಿನಲ್ಲಿ ಆಲೋಚಿಸಿ ॥ ೩೮ ॥ ಆ ದೇವರಾಜನು ದೇವತೆಗಳಿಂದ ಗುರುವಾದ ಬೃಹಸ್ಪತಿ ದೇವರಿಂದ ಕೂಡಿ ತಿರುಗಿ ಆಲೋಚಿಸಿ ಎಲೈ ದೇವತೆಗಳಿರಾ ಶ್ರೀ ಪರಮೇಶ್ವರನ ಶರೀರದದೆಸೆಯಿಂದ ಆ ದೈತ್ಯಾಂತಕನು ಹುಟ್ಟುವ ಯುಕ್ತಿಯು ಆಲೋಚಿಸಲ್ಪಡಲಿ ॥ ೩೯ ॥ ಹೀಗೆಂದ ದೇವೇಂದ್ರನ ಮಾತನ್ನು ಕೇಳಿ ಇದಕ್ಕಾಗಿ ಪುನಃ ಬ್ರಹ್ಮದೇವರನ್ನು ಕಂಡು ಆ ಬ್ರಹ್ಮದೇವರಿಂದ ಆಲೋಚಿಸಿ ಆತನಿಂದ ಸಹಿತರಾದ ಇಂದ್ರಾದಿ ದೇವತೆಗಳು ಎಲ್ಲಿ ಸ್ತುತಿಸಿದರೆ ದರ್ಶನವಾದೀತೋ ಎಂದು ತಿಳಿದು ಮೇರುಪರ್ವತದ ದಡವನ್ನು ಹೊಂದಿ ಸುಖದಾಯಕನಾದ ॥೪೦॥ ಭಗವಂತನಾದ ಮಂಗಲನಾದ ಧ್ಯಾನಗೋಚರನಾದ ಶಾಶ್ವತನಾದ ಮಹೇಶ್ವರನಾದ ಶ್ರೀ ಪರಮೇಶ್ವರನು ತನ್ನ ನಿಜಭಾವದಿಂದ ತನ್ನನ್ನೇ ಸ್ಮರಿ

ಯತ್ರಾಸ್ತೇಭಗವಾನ್‌ಶಂಭುರ್ಧ್ಯಾನದೃಷ್ಟಃಸನಾತನಃ ॥ ನಿಷ್ಕ್ರಿಯಾ ಸ್ವಾತ್ಮನಾತ್ಮಾನಂಚಿಂತಯಾನೋಮಹೇಶ್ವರಃ॥ ೪೧ ॥ ಪ್ರಾಪ್ಯಶಂಭೋರಾಯತನಮಪಶ್ಯನ್‌ವೃಷಭಧ್ವಜಂ॥ಅದ್ರೇಃಪುರಸ್ಯದ್ವಾರೇತು ಮೇರುಶೃಂಗಮಿವೋನ್ನತಂ ॥ ೪೨ ॥ ಸರ್ವಾಭರಣಸಂಯುಕ್ತಂಸಹಸ್ರಾದಿತ್ಯವರ್ಚಸಂ ॥ ಸ್ಥೂಲವಕ್ತ್ರಂತ್ರಿನೇತ್ರಂಚಚಂದ್ರಾರ್ಧಕೃತಭೂಷಣಂ ॥ ೪೩ ॥ ವಜ್ರಪಾಣಿಂಚತುರ್ಬಾಹುಂದ್ವಿತೀಯಮಿವಶಂಕರಂ॥ ತಮೂಚುರಾನತಾದೇವಾವಹತ್ವಂಶಂಕರಪ್ರಭೋ॥೪೪॥ ತಥೇತಿಚಪ್ರತಿಶ್ರುತ್ವಾಪ್ರವಿಶ್ಯಾಂತಃಪುರಂವಿಭೋಃ॥ಕೃತಾಂಜಲಿಪುಟೋದೇವಮುವಾಚಾನತಕಂಧರಃ ॥ ೪೫ ॥ ಬ್ರಹ್ಮಾದ್ಯಾಃಸಕಲಾದೇವಾಭಗವನ್ಪಾರ್ವತೀಪತೇ॥ ಆಗತ್ಯಾಸ್ತೇಬಹಿರ್ದ್ವಾರಸಂಸ್ಥಿತಾವಶನೇಚ್ಛಯಾ ॥೪೬॥ ಉವಾಚಮಾಚಿರಂದೇವಸಮಾನಯಸುರೇಶ್ವ

ಸುತ್ತಿರುವನು ॥ ೪೧ ॥ ಆಗ ಶ್ರೀ ಭಗವಂತನ ಆಸ್ಥಾನವನ್ನು ಹೊಂದಿ ಆ ಗಿರಿಪಟ್ಟಣದ ಬಾಗಿಲಿನಲ್ಲಿ ಮೇರುಶಿಖರದಂತೆ ದೊಡ್ಡವನಾದ ವೃಷಭಧ್ವಜನಂತಿರುವನನ್ನು ಕಂಡರು ॥ ೪೨ ॥ ಸಮಸ್ತಾಲಂಕಾರಯುಕ್ತನಾದ, ಸಹಸ್ರ ಸೂರ್ಯನಂತೆ ಪ್ರಕಾಶಿಸುವ, ದೊಡ್ಡದಾದ ಮುಖವುಳ್ಳ, ಮೂರು ಕಣ್ಣುಳ್ಳ, ಅರ್ಧ ಚಂದ್ರಾಲಂಕೃತನಾದ, ॥ ೪೩ ॥ ವಜ್ರಾಯುಧವನ್ನು ಹಿಡಿದು, ಚತುರ್ಭುಜನಾದ, ಶ್ರೀ ಪರಮೇಶ್ವರನೋ ಎಂಬಂತಿರುವ, ದೇವನನ್ನು ಕಂಡು, ನಮಸ್ಕಾರವನ್ನು ಮಾಡಿದ ದೇವತೆಗಳು, ಎಲೈ! ಶಂಕರಪ್ರಭುವೆ! ನೀನು ಬಂದಿರುವ ನಮ್ಮನ್ನು, ಒಳಗೆಹೋಗಿ, ಅರಿಕೆಮಾಡು ಎಂದು, ಪ್ರಾರ್ಥಿಸಿದರು ॥ ೪೪ ॥ ಹೀಗೆ ಪ್ರಾರ್ಥಿಸಿಕೊಂಡ ಆ ದೇವನು ಹಾಗಾಗಲಿ ಎಂದು ಸ್ವಾಮಿಯ ಅಂತಃಪುರವನ್ನು ಪ್ರವೇಶಿಸಿ ತಲೆಯನ್ನು ಬಗ್ಗಿಸಿದವನಾಗಿ ಕೈ ಮುಗಿದವನಾಗಿ ಅರಿಕೆಮಾಡುತ್ತಾನೆ ॥ ೪೫ ॥ ಎಲೈ ಭಗವಂತನೇ, ಎಲೈ ಪಾರ್ವತೀಪತಿಯೇ, ಬ್ರಹ್ಮಾದಿ ಸಮಸ್ತ ದೇವತೆಗಳೂ ಹೊರಬಾಗಿಲಿನಲ್ಲಿ ಬಂದಿದ್ದಾರೆ ನಿನ್ನ ಸಂದರ್ಶನಾಪೇಕ್ಷೆಯಿಂದ ನಿಂತಿದ್ದಾರೆ ॥ ೪೬ ॥ ಆಗ್ಯ ಭಗವಂ

ರಾನ್ ।ಓಮಿತ್ಯುಕ್ತ್ವಾ ಬಿಡಾಲ್ಯಾಗಂಗತ್ವಾಪ್ರಾಸಾಖ್ಯದ್ವಾರಯಾತ್॥
॥ ೪೭ ॥ ತತಃಪ್ರವಿಶ್ಯಸದನಮಾನಂದರಸಸಂಭೃತಂ ।। ರತ್ನಮಂ
ಟಪಮಧ್ಯೇತುವಜ್ರಸ್ಫಟಿಕವೇದಿಕೇ। ಶುಕ್ಲಾಂಬರಧರಂದೇವಂಕಿರೀಟ
ಮಕುಟೋಜ್ವಲಂ ॥ ೪೮ ॥ ದಿವ್ಯಾಂಬರಧರಂಶಂಭುಂಮುಕ್ತಾ
ಹಾರವಿಭೂಷಿತಂ।। ಕಾಂಚೀನೂಪುರರತ್ನಾಢ್ಯಂವೇದವೇದ್ಯಂಶಿವಂ
ಹರಂ ॥ ೪೯ ॥ ದದೃಶುರ್ದೇವದೇವೇಶಂಕೋಟಿಸೂರ್ಯಸಮಪ್ರಭಂ
ತಂ ।। ಸಹಸ್ರನಯನಂದೇವಂಸಹಸ್ರತನುಮೀಶ್ವರಂ ॥ ೫೦ ॥ ನೀ
ಲಕಂಠಂಸುಧಾಭಾಸಂಶುಭ್ರಾಂಖಂಡೇಂದುಭೂಷಣಂ ।। ಜಗದುತ್ಪ
ತ್ತಿಸಂಹಾರಸ್ಥಿತ್ಯನುಗ್ರಹಕಾರಣಂ ॥ ೫೧ ॥ ಶುದ್ಧಸ್ಫಟಿಕಸಂಕಾಶಂ

ತನು ಎಲ್ಲ ದೇವನೇ ತಡಮಾಡದೆ ಕರೆದುಕೊಂಡು ಬಾ ಎಂದು ಕರು
ಣಿಸಿದನು. ಅಪ್ಪಣೆ ಎಂದು ಹೊರಬಾಗಿಲನ್ನು ಕುರಿತು ಬಂದು ಆ ದೇವ
ತೆಗಳನ್ನು ಕುರಿತು ತಿಳಿಸಿದನು ॥ ೪೭ ॥ ಆ ಮೇಲೆ ಆ ದೇವತೆಗಳು
ಸಂತೋಷವೆಂಬ ಅಮೃತದಿಂದ ತುಂಬಿರುವ ಸಭೆಯನ್ನು ಪ್ರವೇಶ
ಮಾಡಿ ವಜ್ರಸ್ಫಟಿಕಗಳ ಮೆಟ್ಟಲುಗಳುಳ್ಳ ನವರತ್ನದ ಮಂಟಪಮಧ್ಯದ
ಪೀಠದಲ್ಲಿ ಬೆಳ್ಳಯವಸ್ತ್ರವನ್ನುಟ್ಟಿರುವ ದೇವನಾದ ಕಿರೀಟಮಕುಟಗ
ಳಿಂದ ಪ್ರಕಾಶಿಸುತ್ತಿರುವ ॥ ೪೮ ॥ ಜಲತಾರದ ವಸ್ತ್ರವನ್ನುಟ್ಟಿರುವ
ಮಂಗಲನಾದ ಮುತ್ತಿನಸರಗಳಿಂದ ಭೂಷಿತನಾದ ಡಾಬು ಕಾಲುಗಡಗ
ಗಳ ರತ್ನಗಳುಳ್ಳ ವೇದಗಳಿಂದ ವೇದ್ಯನಾದ ಶುಭನಾದ ಪಾಪಹರನಾದ ॥
॥ ೪೯ ॥ ದೇವತೆಗಳಿಗೂ ಬ್ರಹ್ಮದೇವನಿಗೂ ಒಡೆಯನಾದ ಕೋಟಿ
ಸೂರ್ಯನಂತೆ ಪ್ರಕಾಶಿಸುವ ಸಹಸ್ರಕಣ್ಣುಗಳುಳ್ಳ ಸಹಸ್ರ ಶರೀರವುಳ್ಳ
ಜಗತ್ಪ್ರೇರಕನಾದ ಶ್ರೀಭಗವಂತನನ್ನು ಕಂಡರು ॥ ೫೦ ॥ ಮತ್ತು
ಕಪ್ಪಾದ ಕುತ್ತಿಗೆಯುಳ್ಳ ಅಮೃತದಂತೆ ಹೊಳೆಯುತ್ತಿದ್ದ ಶುಭ್ರನಾದ
ಅರ್ಧ ಚಂದ್ರನನ್ನು ಧರಿಸಿರುವ ಪ್ರಪಂಚದ ಉತ್ಪತ್ತಿ ನಾಶ ಪಾಲನೆ
ಅನುಗ್ರಹವೆಂಬಿವುಗಳಿಗೆ ಕಾರಣನಾದ ॥ ೫೧ ॥ ಅಚ್ಛಸ್ಫಟಿಕದಂತಿರುವ
ಹೊಗೆಯಿಲ್ಲದ ಯಜ್ಞೇಶ್ವರನಂತಿರುವ ಪುಷ್ಪಮಾಲೆಗಳಿಂದ ಕೂಡಿರುವ

ವಿಧೂಮಮಿವಪಾವಕಂ || ಪುಷ್ಪಮಾಲಾನ್ವಿತಂಸೂರ್ಯಮಾಲಯಾ ಚವಿಭೂಷಿತಂ || ೫೨ || ಅನೌಪಮ್ಯಮಸಾದೃಶ್ಯಮಪ್ರಮೇಯಮನಾಕುಲಂ||ಜಗಚ್ಚಕ್ಷುರ್ಜಗದ್ಬಾಹುಃಜಗಚ್ಛೇಷಂಜಗನ್ಮಯಂ||೫೩|| ಜಗತ್ಪಾದಂಜಗನ್ನೇತ್ರಂಮೂಲಂಸೂಕ್ಷ್ಮಂಪರಾತ್ಪರಂ । ರುದ್ರಂ ಪಶುಪತಿಂಚೋಗ್ರಂಭೀಮಂಶರ್ವಂಭವಂದ್ವಿಜಾಃ ||೫೪|| ಮಹಾದೇವಂಮಹೇಶಾನಮಷ್ಟಮೂರ್ತಿಂಜಗತ್ಪತಿಂ || ವ್ಯಕ್ತಾವ್ಯಕ್ತಂ ತ್ರಿಲೋಕೇಶಂಪೂಜಿತಂಚಸುರಾಸುರೈಃ || ೫೫ || ಅಥದೃಷ್ಟ್ವಾ ಮಹಾದೇವಂಪ್ರಹೃಷ್ಟಾಸ್ಸ್ಯುಸ್ಸುರಾಸ್ತದಾ || ಸ್ತುತ್ವಾತುವಾಗ್ಭಿರಿಷ್ಟಾಭಿಃಪ್ರಣಿಪತ್ಯಾಬ್ರುವಂಚ್ಛಿವಂ ||೫೬|| ದೇವಾಃ|| ತ್ರಾಳಾಸುರಭಯಾದ್ದೇವಪಾಹಿನಃಶರಣಾಗತಾನ್ ದೇವಾನಾಂವಚನಂಶ್ರು

ಸೂರ್ಯರ ಮಾಲೆಗಳಿಂದ ಅಲಂಕೃತನಾದ || ೫೨ || ಉಪಮಾನವೇ ಇಲ್ಲದಿರುವ ಅಸದೃಶನಾದ ಪ್ರಯೋಜನರಹಿತನಾದ ವ್ಯಾಕುಲವಿಲ್ಲದಿರುವ ಜಗತ್ತೇ ನೇತ್ರವಾದ ಜಗತ್ತೇ ಬಾಹುವಾದ ಜಗನ್ಮಾತ್ರವೇ ಉಳಿದು ಜಗನ್ಮಯನಾದ ||೫೩|| ಜಗತ್ತೇ ಪಾದವಾದ ಜಗನ್ನಿಯಾಮಕನಾದ ಮೂಲಕಾರಣನಾದ ಸೂಕ್ಷ್ಮನಾದ ಸರ್ವೋತ್ತಮನಾದ ದುಃಖವಾರಕನಾದ ಸಾಧುಪಾಲನಾದ ಕ್ರೂರನಾದ ಭಯಂಕರನಾದ ಶರ್ವನಾದ ಮಂಗಲನಾದ||೫೪|| ಮಹಾದೇವನಾದ ಮಹಾಸ್ವಾಮಿಯಾದ ಪೃಥಿವ್ಯಾದಿ ಅಷ್ಟಮೂರ್ತಿಯಾದ ಜಗತ್ಪಾಲನಾದ ಕಂಡು ಕಾಣದಿರುವ ಸ್ವರೂಪನಾದ ಲೋಕತ್ರಯಸ್ವಾಮಿಯಾದ ದೇವರಾಕ್ಷಸರಿಂದ ಪೂಜ್ಯನಾದ || ೫೫ || ಶ್ರೀಭಗವಂತನನ್ನು ಕಂಡು ದೇವತೆಗಳು ಸಂತುಷ್ಟರಾದರು. ಅನಂತರ ವೇದಮಯಸ್ತೋತ್ರಗಳಿಂದ ಸ್ತುತಿಸಿ ನಮಸ್ಕರಿಸಿ ದೇವನನ್ನು ಕುರಿತು ಅರಿಕೆಮಾಡಿದರು || ೫೬ || ಎಲೈ ದೇವನೇ ಮರೆಯನ್ನು ಹೊಂದಿದ ನಮ್ಮನ್ನು ತಾಳಾಸುರನ ಭಯದ ದೆಸೆಯಿಂದ ರಕ್ಷಿಸು. ಹೀಗೆಂದ ದೇವತೆಗಳ ಮಾತನ್ನು ವೃಷಭಧ್ವಜನಾದ ಪರಮೇಶ್ವರನು

ತ್ವಾಪ್ರತ್ಯುವಾಚವೃಷಧ್ವಜಃ ॥ ೫೭ ॥ ಮಾಭಯಂರಾಕ್ಷಸಾದ್ದೇ
ವಾಃಶ್ರುತಂತ್ರದಖಿಲಂಮಯಾ ॥ ಕಾರಯಿಷ್ಯಾಮಿತನ್ನಾಶಂಗಚ್ಛ
ಧ್ವಂವಿಗತಜ್ವರಾಃ॥೫೮॥ ಇತಿಶಂಭೋರ್ವಚಶ್ಶ್ರುತ್ವಾಪ್ರಣಿಪತ್ಯ
ಸುರೇಶ್ವರಂ ॥ ಸಂತುಷ್ಟಮನಸಃಸರ್ವೇದೇವಾಃಸ್ವಸ್ಥಾನಮಾಯ
ಯುಃ ॥ ೫೯ ॥ ಏಕದಾಸಹಪಾರ್ವತ್ಯಾಶಂಕರಃಪೃಥಿವೀತಳೇ॥ಸಂ
ಚಚಾರಮಹಾರಣ್ಯೇಸೂರ್ಯಜೋಕ್ತಂನಚಿಂತಯನ್ ॥೬೦॥ ಚಿಂ
ತಯನ್ದೇವತ್ರಾಕಾರ್ಯಂತ್ರಾಳಾಸುರವಧಾಧಿಕಂ॥ತತ್ರತ್ರಿಪಥಗಾ
ಯಾಂತುಕ್ರೀಡಂತೌಮತ್ತವಾರಣೌ ॥೬೧॥ವಿಲೋಕ್ಯಸ್ವಸತೀಂ
ಪ್ರಾಹಪಶ್ಯದೇವೋದ್ಯಮಾಂಪ್ರಿಯೇ।ಇತ್ಯುಕ್ತಾಸಾಜಗನ್ಮಾತಾ
ಜ್ಞಾತ್ವಾದೇವೇಂಗಿತಂಶಿವಾ ॥ ೬೨ ॥ ಪಶ್ಯಂತೀಚತಥಾಕ್ರೀ

ಕೇಳಿ ॥ ೫೭ ॥ ದೇವತೆಗಳನ್ನು ಕುರಿತು ಎಲೈ ದೇವತೆಗಳಿರಾ ರಾಕ್ಷ
ಸನ ದೆಸೆಯಿಂದ ಭಯವು ಬೇಡ. ಅವನ ಚರಿತ್ರವೂ ನನ್ನಿಂದ ಕೇಳ
ಲ್ಪಟ್ಟಿದೆ. ಅವನ ಸಂಹಾರವನ್ನು ಮಾಡಿಸುತ್ತೇನೆ. ನೀವು ನಿರ್ಭೀತ
ರಾಗಿ ಸ್ವಸ್ಥಾನವನ್ನು ಸೇರಿ ॥ ೫೮ ॥ ಈಪ್ರಕಾರವಾದ ಶ್ರೀಭಗವಂ
ತನ ಮಾತನ್ನು ಕೇಳಿ ದೇವನನ್ನು ನಮಸ್ಕರಿಸಿ ದೇವತೆಗಳು ಸಂತೋ
ಷಿತರಾಗಿ ತಮ್ಮ ಸ್ಥಾನಗಳನ್ನು ಸೇರಿದರು ॥೫೯॥ ಹೀಗೆ ಕೆಲವು ಕಾಲ
ಕಳೆಯುತ್ತಲೆ ಶ್ರೀಪರಮೇಶ್ವರನು ಪಾರ್ವತೀದೇವಿಯಿಂದೊಡಗೂಡಿ
ಭೂಲೋಕದಲ್ಲಿ ವನದಲ್ಲಿ ಸೂರ್ಯಸಮನಾದ ಶನ್ಯೈಶ್ಚರನ ಮಾತನ್ನು
ಆಲೋಚಿಸದೆ ಸಂಚರಿಸುತ್ತಿದ್ದನು ॥ ೬೦ ॥ ತಾಳಾಸುರ ವಧೆ ಮೊದ
ಲಾದ ದೇವಕಾರ್ಯವನ್ನು ಸ್ಮರಿಸುತ್ತ ಇರುವಾಗ ಅಲ್ಲಿ ಭಾಗೀರಥೀ
ನದಿಯಲ್ಲಿ ಕ್ರೀಡಿಸುತ್ತಿರುವ ಮದಿಸಿದ ಕಾಡಾನೆಗಳೆರಡನ್ನು ॥ ೬೧ ॥
ಕಂಡು ತನ್ನ ಪತ್ನಿಯನ್ನು ಕುರಿತು ಎಲೈ ಪ್ರಿಯಳೇ ದೇವತೆಗಳ
ಪ್ರಯತ್ನವನ್ನು ನೋಡು. ಹೀಗೆ ತಿಳಿಸಿಕೊಂಡ ಜಗನ್ಮಾತೃಳಾದ ಆ
ದೇವಿಯೂ ಭಗವಂತನ ಅಭಿಪ್ರಾಯವನ್ನು ತಿಳಿದು ॥ ೬೨ ॥ ಹಾಗೆ
ಕ್ರೀಡಿಸುವುದನ್ನು ನೋಡಿದವಳಾಗಿ ಲಜ್ಜೆಯಿಂದ ಬಗ್ಗಿರುವ ಸಿರಸ್ಸುಳ್ಳ

ಡಾಂಲಜ್ಜಿತಾನತಕಂಧರಾ ॥ ಸ್ತುತ್ವಾತುವಾಗ್ಭಿರೀಶಾನಂಸಂಸ್ಥಿ ತಾಶಿವಸನ್ನಿಧೌ ॥ ೬೩ ॥ ಸ್ತೋತ್ರೈಃಸಂತುಷ್ಟಹೃದಯಃಕೃಪ ಯಾತಾಮುವಾಚಹ ॥ ಶ್ರೀಭಗವಾನುವಾಚ ॥ ಕಿಂಲಜ್ಜಿತಾಸಿರು ದ್ರಾಣಿಯತ್ತೇಮನಸಿವರ್ತತೇ ॥೬೪॥ ದಾಸ್ಯಾಮಿತ್ವನ್ಮನೋಭೀ ಷ್ಟಂವೃಣೀಷ್ವವರಮುತ್ತಮಂ ॥ ಶ್ರೀದೇವ್ಯುವಾಚ ॥ ಆವಾಂಹಿಗ ಜರೂಪೇಣಕ್ರೀಡಾಃಕುರ್ವಃಸದಾಶಿವಃ ॥೬೫॥ ಆಜ್ಞಾಂಮೇದೇಹಿ ದೇವೇಶಮಯಿಪ್ರೀತ್ಯಾಸುರೇಶ್ವರ॥ ತಥಾಸ್ತ್ವಿತಿಮಹಾದೇವೋಗ ಜೋಭೂತ್ವಾಹಿಮಾದ್ರಿಜಾ ॥ ೬೬ ॥ ಉಭೌಚಕ್ರೀಡತುಸ್ತತ್ರದಿ ವ್ಯಂದ್ವಾದಶವತ್ಸರಂ॥ಸಂಜಜ್ಞೇಚಶಿವಾಭ್ಯಾಂಸವಿಕಟೋಗಜರೂಪ ಧೃಕ್ ॥೬೭॥ ತದಾದುಂದುಭಯೋನೇದುಃಪುಷ್ಪವೃಷ್ಟಿಃಸುರೇ ರಿತಾ ॥ ಶಿವಂಬಭೂವಸರ್ವತ್ರದಿವಿಭುವ್ಯಂತರಿಕ್ಷಕೇ ॥೬೮॥ ತತಃ

ಳಾಗಿ ಭಗವಂತನನ್ನು ಸ್ತೋತ್ರಗಳಿಂದ ಸ್ತುತಿಸಿ ಶ್ರೀಸನ್ನಿಧಿಯಲ್ಲಿ ಸ್ಥಿರವಾಗಿ ನಿಂತಿದ್ದಳು ॥೬೩॥ ಸ್ತುತಿಗಳಿಂದ ಪ್ರೀತನಾದ ದೇವನು ಆ ದೇವಿಯನ್ನು ಕುರಿತು ಏಕೆ ಲಜ್ಜಾಭರಿತಳಾಗಿದ್ದೀಯೆ ಮನಸ್ಸಿನಲ್ಲಿ ಏನು ಇದೆ ॥ ೬೪ ॥ ನಿನ್ನ ಮನೋಭಿಪ್ರಾಯವನ್ನು ಹೇಳು ಕೊಡುತ್ತೇನೆ. ಇಷ್ಟವನ್ನು ಕೇಳು ಅನ್ನುತ್ತಲೇ ದೇವಿಯು ಎಲೈ ಸರ್ವಮಂಗಲನೇ ನಾವು ಹೀಗೆ ಗಜರೂಪದಿಂದ ಕ್ರೀಡೆಯನ್ನು ಮಾಡಲು ಅನುಗ್ರಹಿಸು॥೬೫॥ನನಗೆ ಪ್ರೀತಿಯಿಂದ ಅಪ್ಪಣೆಯನ್ನು ಕೊಡು ಎಂದು ಪ್ರಾರ್ಥಿಸುತ್ತಲೇ ಹಾಗಾಗಲಿ ಎಂದು ಒಪ್ಪಿ ಉಭಯರೂ ಗಜರೂಪಿಗಳಾದರು॥೬೬॥ ಇಬ್ಬರೂ ದಿವ್ಯದ್ವಾದಶವರ್ಷಕಾಲವೂ ಕ್ರೀಡಿಸಿದರು. ಕ್ರೀಡಾ ಸಮಾಪ್ತಿಯಾದ ಕೂಡಲೆ ಆ ಗರ್ಭದ ದೆಸೆಯಿಂದ ಶ್ರೀ ಮಹಾ ಗಣಪತಿ ದೇವನು ದೇವಕಾರ್ಯಕ್ಕೋಸ್ಕರ ಅದೇ ಗಜರೂಪವನ್ನು ಭಗವದಿಚ್ಛಾನುಸಾರವಾಗಿ ಧರಿಸಿ ಆವಿರ್ಭವಿಸಿದನು ॥ ೬೭ ॥ ಆಗ ಸ್ವರ್ಗಭೇರಿಗಳೂ ಮೊಳಗಿದವು, ದೇವಪ್ರೇರಿತಪುಷ್ಪವೃಷ್ಟಿಯೂ ಆಯಿತು, ಸ್ವರ್ಗ ಮರ್ತ್ಯ ಪಾತಾಳದಲ್ಲಿ ಸರ್ವತ್ರ ಶುಭಸೂಚನೆಯೇ ಆಯಿತು ॥೬೮॥

ಸ್ವರೂಪಮಾಪನ್ನೌ ಜಗತಾಂ ಪಿತರೌಶಿವೌ ॥ ದೇವಕಾರ್ಯಸಮು
ದ್ಭೂತಗಜರೂಪಿಣಮಾತ್ಮಜಂ ॥ ೯ ॥ ವಿಘ್ನರಾಜೇತಿನಾಮಾ
ನಂಚಕ್ರೇತಂಸ್ಥಾಣುರವ್ಯಯಃ । ಮಹಾಜಿಹ್ವಂ ಮಹಾಕಾಯಂ
ಮಹಾರೂಪಂ ಮಹಾಬಲಂ ॥೨೦॥ ದೃಷ್ಟ್ವಾಪ್ರಶಂಭುಃ ಸುತಂ
ಪ್ರಾಹಶಿವಂತಾಳಾಸುರಂಜಹಿ । ತಥೆತ್ಯುಕ್ತ್ವಾಪ್ರಣಮ್ಯೇಶಂತಾ
ಳಾಸುರವಧೇಚ್ಛಯಾ ॥ ೨೧ ॥ ಗಚ್ಛಂತಂಪಾರ್ವತೀಪುತ್ರಂಪ್ರ
ಮಥಾಶ್ಚಮಹಾಬಲಾಃ ॥ ಜಂಭಾರಿಪ್ರಮುಖಾದೇವಾಶ್ಚತುರಂಗ
ಬಲೈರ್ಯಯುಃ ॥ ೨೨ ॥ ತಾಳಾಸುರಪುರಂದೃಷ್ಟ್ವಾವಿಂಧ್ಯ
ಪರ್ವತಮೂರ್ಧನಿ ॥ ಗಿರಿದುರ್ಗೇತಿವಿಖ್ಯಾತಂ ದೇವರಾಜಪುರೋ
ಪಮಂ ॥ ೨೩ ॥ ವಿಘ್ನರಾಟ್ತತ್ಪುರದ್ವಾರಂ ಸೈನ್ಯೈರುಪರುರೋ

ಆಮೇಲೆ ಜಗದೀಶ್ವರರಿಬ್ಬರೂ ಸ್ವರೂಪವನ್ನು ಹೊಂದಿದವರಾಗಿ ದೇವ ಕಾರ್ಯಕ್ಕೋಸ್ಕರ ಗಜರೂಪಿನಿಂದ ಆವಿರ್ಭವಿಸಿದ ಮಗನನ್ನು॥೯॥ ವಿಘ್ನರಾಜನೆಂಬ ಹೆಸರುಳ್ಳವನನ್ನಾಗಿ ಶಾಶ್ವತನಾದ ನಾಶರಹಿತನಾದ ಶ್ರೀ ಭಗವಂತನು ಮಾಡಿದನು. ದೊಡ್ಡನಾಲಗೆಯುಳ್ಳ ಸ್ಥೂಲ ಶರೀರವುಳ್ಳ ಒಳ್ಳೆಯ ಆಕಾರವುಳ್ಳ ಅತಿಬಲನಾದ ॥೨೦॥ ಮಗನನ್ನು ಕಂಡು ಶ್ರೀ ಪರಮೇಶ್ವರನು ಮಂಗಲವಾಗಲಿ, ತಾಳಾಸುರನನ್ನು ಜಯಿಸು ಎನ್ನುತ್ತಲೇ ಹಾಗೆಯೇ ಆಗಲಿ ಎಂದು ಶ್ರೀ ಭಗವಂತನನ್ನು ನಮಸ್ಕರಿಸಿ ತಾಳಾಸುರನನ್ನು ಕೊಲ್ಲುವ ಇಚ್ಛೆಯಿಂದ ॥೨೧॥ ಪ್ರಯಾಣಮಾಡುತ್ತಿರುವ ಶ್ರೀ ಪಾರ್ವತೀದೇವಿಯ ಮಗನನ್ನು ಕುರಿತು ಮಹಾ ಬಲಿಷ್ಠರಾದ ಪ್ರಮಥರೂ ದೇವೇಂದ್ರ, ಮೊದಲಾದ ದೇವತೆಗಳೂ ಚತುರಂಗಬಲದೊಡನೆ ನಡೆದರು॥೨೨॥ ಹೋಗಿ ವಿಂಧ್ಯಪರ್ವತ ತುದಿಯಲ್ಲಿರುವ ದೇವೇಂದ್ರನ ಪಟ್ಟಣದಂತಿರುವ ಗಿರಿದುರ್ಗವೆಂಬ ತಾಳಾಸುರನ ಪಟ್ಟಣವನ್ನು ನೋಡಿ ॥೨೩॥ ಶ್ರೀ ವಿಘ್ನೇಶ್ವರನು ಸೈನ್ಯಗಳಿಂದ ಆ ಪಟ್ಟದ ಬಾಗಿಲನ್ನು ತಡೆ

ಧಹ ॥ ಸ್ಕಂದೂತಂಪ್ರೇಷಯಾಮಾಸಮಯೂರಂಗಿರಿಜಾಸುತಃ॥

ಇತಿ ಶ್ರೀ ವಿಘ್ನೇಶ್ವರೋತ್ಪತ್ತಿರ್ನಾಮಾಷ್ಟಾದಶೋಧ್ಯಾಯಃ ॥

ಶ್ರೀ ಶ್ರೀ ಶ್ರೀ

ದನು. ಶ್ರೀ ಪಾರ್ವತೀದೇವಿಯುಮಗನು ತನ್ನ ತಮ್ಮನ ವಾಹನವಾದ ಮಯೂರನೆಂಬ ದೂತನನ್ನು ಒಳಗೆ ಕಳುಹಿಸಿದನು ॥೭೪॥

ಈ ಪ್ರಕಾರವಾಗಿ ಸ್ಕಂದಪುರಾಣ ತುಂಗಭದ್ರಾಖಂಡದಲ್ಲಿ ಹೇಳಿರುವ ಶ್ರೀ ಕಲಶೇಶ್ವರ ಮಹಿಮೆಯಲ್ಲಿ ಗಜರೂಪನಾದ ವಿಘ್ನೇಶ್ವರನ ಉತ್ಪತ್ತಿ ಎಂಬ ಹದಿನೆಂಟನೆಯ ಅಧ್ಯಾಯವು ಸಂಪೂರ್ಣವಾದದು.

ಶ್ರೀ ॥ ಶ್ರೀ ॥

ಸೂತಃ ॥ ವಜ್ರಸಾರಮಯಃಪಕ್ಷೀಪ್ರವಿಶ್ಯಾಸುರಮಂದಿರಂ॥ ಆಲೋಕಯತ್ಪುರೀಂರಮ್ಯಾಂ ತಾಳಾಸುರಭುಜಾರ್ಜಿತಾಂ ॥ ೧ ॥ ಸ್ವರ್ಣಪ್ರಾಕಾರವಿಹಿತಾಂ ರತ್ನಸ್ತಂಭವಿರಾಜಿತಾಂ ॥ ಗೃಹಗಾಢಾಮವಿಚ್ಛಿದ್ರಾಂರಾಕ್ಷಸೈರ್ಬಹುಭಿರ್ವೃತಾಂ ॥ ೨ ॥ ಗಚ್ಛನ್ಸರಾಜಮಾರ್ಗೇತುದದರ್ಶಭವನಂಮಹತ್ ॥ ಸ್ವರ್ಣಸ್ತಂಭಶತೋಪೇತಂ ಭಟೈರ್ಗುಪ್ತಂಸುವಿಸ್ತರಂ ॥ ೩ ॥ ಮಯನಿರ್ಮಾಣವಿಹಿತಂದುರಾಧರ್ಷಂಸುರೈರಪಿ॥ ತಾದೃಶಂರಾಜಭವನಂ ಪ್ರವಿಶಂತ್ಯಂವಿಪುಂಗವಂ ॥೪॥ ದ್ವಾರಸ್ಥಾವಾರಯಾಮಾಸುಃ ಕಸ್ತ್ವಮಿತ್ಯಧಿಚಿಕ್ಷಿಪುಃ॥ ಇತ್ಯಾಕ್ಷಿಪ್ತಸ್ತುತುಂಡೇನ ತಚ್ಛಿರಾಂಸಿವ್ಯದಾರಯತ್ ॥೫॥ ವಿವೇ

೧೯ನೆಯ ಅಧ್ಯಾಯ ಪ್ರಾರಂಭ.

ಸೂತಪೌರಾಣಿಕನು ಹೇಳುವನು. ಈ ಪ್ರಕಾರ ಕಳುಹಿಸಲ್ಪಟ್ಟ ವಜ್ರದಂತೆ ಶರೀರ ಬಲವುಳ್ಳ ಆ ಪಕ್ಷಿಯು ಆ ದೈತ್ಯನ ನಗರವನ್ನು ಹೊಕ್ಕು ಬೀದಿಯಲ್ಲಿ ಹೋಗುತ್ತ ತಾಳಾಸುರನ ಭುಜಬಲದಿಂದ ಸಂಪಾದಿಸಿದ ರಮ್ಯವಾದ ॥ ೧ ॥ ಚಿನ್ನದ ಉಪ್ಪರಿಗೆಗಳಿಂದ ಕೂಡಿದ ರತ್ನಕಂಭಗಳಿಂದ ಶೋಭಿಸುವ ಸ್ಥಳಬಿಡದೆ ಮನೆಗಳಿಂದ ತುಂಬಿರುವ ಬಹು ರಾಕ್ಷಸರಿಂದ ಕೂಡಿರುವ ॥ ೨ ॥ ಪಟ್ಟಣವನ್ನು ನೋಡುತ್ತ ಹೋಗುತ್ತಿರುವ ಪಕ್ಷಿಯು ಅನೇಕ ಚಿನ್ನದ ಕಂಭಗಳಿಂದ ಕೂಡಿ ರಾಜಭಟರಿಂದ ರಕ್ಷಿಸಲ್ಪಡುತ್ತಿರುವ ವಿಸ್ತಾರವಾದ ರಾಜಮಂದಿರವನ್ನು ಕಂಡನು ॥ ೩ ॥ ಮಯನ ಕಾರ್ಯದಿಂದ ರಚಿಸಿದ ದೇವತೆಗಳಿಂದಲೂ ಹೊಗಲಸಾಧ್ಯವಾದ ಆ ಅರಮನೆಯನ್ನು ಪ್ರವೇಶಿಸುತ್ತಿರುವ ಆ ಪಕ್ಷಿಶ್ರೇಷ್ಠವನ್ನು ॥ ೪ ॥ ಬಾಗಲಿನಲ್ಲಿರುವವರು ತಡೆದರು. ನೀನು ಯಾರು ಎಂದು ಆಕ್ಷೇಪಿಸಿದರು. ಹೀಗೆ ಆಕ್ಷೇಪಿಸಿಕೊಂಡ ಪಕ್ಷಿಯು ಅವರ ಶಿರಸ್ಸನ್ನು ಸೀಳಿದನು ॥ ೫ ॥ ಬಿಲ್ಲು ಕತ್ತಿಗಳನ್ನು ಧರಿಸಿದ ರಾಕ್ಷಸರು ಎಲ್ಲಾ ಕಡೆಯಲ್ಲಿಯೂ ಕಾಯುತ್ತಿದ್ದ ಅಲಂಕಾರವಾದ ಆ ರಾಜ

ಶದ್ದೈತ್ಯರಾಜಸ್ಯರಾಜಧಾನೀಮಲಂಕೃತಾಂ ॥ ಧನುಃಖಡ್ಗಧರೈರ್ದೈತ್ಯೈಃಸರ್ವತಃಪರಿರಕ್ಷಿತಾಂ ॥೬॥ ಅಮಾತ್ಯೈರ್ಮಂತ್ರಿಭಿಶ್ಚಾನ್ಯೈಃ ಶೋಭಿತಾಂ ದೈತ್ಯಪುಂಗವೈಃ ॥ ಮಧ್ಯೇಸಿಂಹಾಸನೇತತ್ರಕಿರೀಟಮಕುಟೋಜ್ವಲಂ ॥ ೭ ॥ ದಂಷ್ಟ್ರಾಕರಾಳವದನಂಹಾರನೂಪುರಶೋಭಿತಂ ॥ ವೀರಾಸನಸ್ಥಂದೈತ್ಯೇಂದ್ರಂದೃಷ್ಟ್ವಾಪಕ್ಷೀಸ್ಯವಿಸ್ಮಯತ್ ॥ ೮ ॥ ನಿಷಸಾದಾಗ್ರತಃತಸ್ಯಸರ್ವತಃ ಪ್ರವಿಲೋಕಯನ್ ॥ ದೃಷ್ಟ್ವೋಪಸೀನಂ ದ್ವಿಜವರಂ ತನ್ಮಂತ್ರೀನಯಕೋವಿದಃ ॥ ೯ ॥ ಉವಾಚ ॥ ಪಕ್ಷಿನ್ಕುತ್ರತ್ಯಃಕಿಮಿಹಾಭ್ಯಾಗತೋವದ ॥ ಇತಿತದ್ವಚನಂಶ್ರುತ್ವಾಪಕ್ಷೀಪ್ರತ್ಯಬ್ರವೀದ್ವಚಃ ॥ ೧೦ ॥ ವಿಘ್ನರಾಟ್ಪಾರ್ವತೀಕಾಂತಸಂಭವಃಸಗಣೇಶ್ವರಃ । ಆಗತೋತ್ರಬಹಿರ್ದ್ವಾರಿರಾಜತೇದೈವತೈಃ ಸಹ ॥ ೧೧ ॥ ತಸ್ಯದೂತಃಸಮಾಯಾತಸ್ತಾಳಾಸುರ

ಧಾನಿಯನ್ನು ಪ್ರವೇಶಿಸಿತು ॥೬॥ ದೈತ್ಯಶ್ರೇಷ್ಠರಿಂದಲೂ ಮಂತ್ರಿಗಳಿಂದಲೂ ಶೋಭಿತವಾದ ಸಭೆಯನ್ನು ಮತ್ತು ಆ ಮಧ್ಯ ಸಿಂಹಾಸನದಲ್ಲಿ ಕಿರೀಟ ಮಕುಟಗಳಿಂದ ಪ್ರಕಾಶಿಸುವ ॥೭॥ ಕೋರದಾಡೆಗಳಿಂದ ಕೂಡಿದ ಕಪ್ಪಾದ ಮುಖವುಳ್ಳ ಹಾರ ಕಡಗಗಳಿಂದ ಅಲಂಕೃತನಾದ, ವೀರಾಸನದಲ್ಲಿ ಕುಳಿತಿದ್ದ ಆ ದೈತ್ಯರಾಜನನ್ನು ಕಂಡು ಆಶ್ಚರ್ಯಪಡದೆ ॥ ೮ ॥ ಎಲ್ಲಾ ಕಡೆಯಲ್ಲಿಯೂ ನೋಡುತ್ತ ಅವನ ಮುಂದುಗಡೆಯಲ್ಲಿ ಕುಳಿತುಕೊಂಡಿತು. ಕುಳಿತಿರುವ ಆ ಪಕ್ಷಿಶ್ರೇಷ್ಠವನ್ನು ನೀತಿವಂತನಾದ ಆತನ ಮಂತ್ರಿಯು ಕಂಡು ॥ ೯ ॥ ಎಲೈ ಪಕ್ಷಿಯೇ ನೀನು ಎಲ್ಲಿ ಹುಟ್ಟಿದವನು, ಇಲ್ಲಿಗೆ ಏತಕ್ಕೆ ಬಂದೆ ಹೇಳು, ಎಂದು ಮಾತನಾಡಿಸಿದನು. ಆಗ ಅವನ ಮಾತನ್ನು ಕೇಳಿ ಪಕ್ಷಿಯು ಉತ್ತರವನ್ನು ಹೇಳಿತು ॥ ೧೦ ॥ ಎಲೈ ಮಂತ್ರಿಯೇ, ಪಾರ್ವತೀ ಪತಿಯಾದ ಶ್ರೀ ಪರಮೇಶ್ವರನಿಂದ ಆವಿರ್ಭವಿಸಿದ ವಿಘ್ನರಾಜನಾದ ಆ ಮಹಾಗಣಪತಿದೇವನು ದೇವತೆಗಳಿಂದೊಡಗೂಡಿ ಹೊರಬಾಗಿಲಿನಲ್ಲಿ ಬಂದು ಪ್ರಕಾಶಿಸುತ್ತಿದ್ದಾನೆ ॥ ೧೧ ॥ ಆ ದೇವನ ದೂತನಾದ ನಾನು ತಾಳಾಸುರ

ವಿವಕ್ಷಯಾ ॥ ಕಿಂವದಿಷ್ಯತಿತದ್ಬ್ರೂಹಿಶ್ರುತ್ವಾತದ್ದೇವಶಾಸನಂ ॥೧೨॥ಅನೇನರಕ್ಷಸಾವುಂತ್ರಿರ್ಕ್ಷ ಸ್ವರ್ಗೀಯಾನಿ ಬಹೂನ್ಯಪಿ। ರತ್ನಾನಿಯೋಷಿತಸ್ತೇಷಾಂ ಪೀಡಿತಾ ಆಹೃತಾ ಅಪಿ ॥ ೧೩ ॥ ತೇಭ್ಯೋದತ್ವಾಪುನಃ ಸರ್ವಂ ಶರಣಂಯಾತುಶಂಕರಂ । ನೋಚೇದ್ಧನಿಷ್ಯತೀಶಾನೋಗಜರೂಪೀಜಗನ್ಮಯಃ ॥ ೧೪ ॥ ಅಸ್ಯರೂಪದ್ವಯಂ ಚೇತಿಸವೇದಗಿರಿಜಾಸುತಃ । ತಾಳೀತರುಸ್ವರೂಪಂಚಸ್ಪರ್ಶನಾದಸ್ಯ ಜಂತವಃ ॥ ೧೫ ॥ ಪಶುಪಕ್ಷಿಮೃಗಾಶ್ಚೈವಮ್ರಿಯಂತೇ ಮಾನುಷಾಅಪಿ ॥ ಘೋರಂಹಿತದ್ವಪುಶ್ಚಾನ್ಯದಿವಂವೇತ್ತಿಸದೇವರಾಟ್ ॥೧೬॥ ಇತಿತತ್ಪಕ್ಷಿವಚನಂಶ್ರುತ್ವಾದೈತ್ಯೇಶ್ವರಃ ಸ್ವಯಂ ॥ ಚತು

ನನ್ನು ಕುರಿತು ಮಾತನಾಡಲಪೇಕ್ಷೆಯಿಂದ ಬಂದೆನು. ಆ ದೇವರ ಅಪ್ಪಣೆಯನ್ನು ಕೇಳಿ ಏನು ಹೇಳುತ್ತಾನೋ ಅದನ್ನು ಹೇಳು ॥೧೨॥ ಅದೇನೆಂದರೆ— ಈ ರಾಕ್ಷಸನಿಂದ ದೇವತೆಗಳ ಸ್ವರ್ಗದಲ್ಲಿರುವ ಅನೇಕ ಉತ್ತಮಗಳಾದ ರತ್ನಗಳೂ ಪದಾರ್ಥಗಳೂ ಅಪಹರಿಸಲ್ಪಟ್ಟಿವೆ. ಅವರ ಸ್ತ್ರೀಯರುಗಳು ಸೆರೆಹಿಡಿಯಲ್ಪಟ್ಟಿದ್ದಾರೆ ॥ ೧೩ ॥ ಅದನ್ನೆಲ್ಲವನ್ನೂ ಪುನಃ ಅವರಿಗೆ ಕೊಟ್ಟು ಶ್ರೀ ಭಗವಂತನ ಮಗನಾದ ಗಣಪತಿ ದೇವನ ಶರಣವನ್ನು ಹೊಂದಲಿ. ಹಾಗಿಲ್ಲದಿದ್ದರೆ ಜಗತ್ಸ್ವೀರಕನಾದ ಜಗನ್ಮಯನಾದ ಗಜರೂಪಿಯಾದ ಆ ದೇವನು ಸಂಹರಿಸುವನು ॥೧೪॥ ಶ್ರೀಪಾರ್ವತೀ ದೇವಿಯ ಮಗನಾದ ಆ ದೇವನು ಈ ದೈತ್ಯನಿಗೆ ಎರಡು ರೂಪಾದುದನ್ನು ತಿಳಿದಿದ್ದಾನೆ. ಇವನ ತಾಳೆಯ ಮರದ ರೂಪವನ್ನು ಬಲ್ಲನು. ಇದನ್ನು ಮುಟ್ಟೋಣದರಿಂದಲೇ ಪ್ರಾಣಿಗಳು ॥ ೧೫ ॥ ಪಶು, ಪಕ್ಷಿ, ಮೃಗ, ಮನುಷ್ಯರೂ ಕೂಡ ಸಾಯುವುವು. ಭಯಂಕರವಾದ ಆ ರೂಪವನ್ನೂ ಈಗ ಕಾಣುವ ದೈತ್ಯರೂಪವನ್ನೂ ಆ ದೇವನ್ನು ಬಲ್ಲನು ॥ ೧೬ ॥ ಹೀಗೆಂದಾ ಪಕ್ಷಿಯ ಮಾತನ್ನುದೈತ್ಯರಾಜನು ತಾನೇ ಕೇಳಿ ಗಜರೂಪಳಾದ ಪಾರ್ವತಿಯಲ್ಲಿ ಗಜರೂಪನಾದ ಪರಮೇಶ್ವರನಿಂದ ಜನಿಸಿದ ಮಗನಿಂದ ತನಗೆ

ಮುಖವಚಃ ಸ್ಮೃತ್ವಾದೈತ್ಯಭಾವೋದ್ಧತಸ್ತದಾ ॥ ೧೭ ॥ ತ್ರಿತಿ ಖಾಂಭೃಕೃಟೀಂಕೃತ್ವಾ ಶಿಖಿನಂಪ್ರತ್ಯುವಾಚಹ ॥ ಕಿಂವದಿಷ್ಯಸಿ ಮಂದಾತ್ಮನ್ ಮಮಾಜ್ಞಾಂಕಃ ಕರಿಷ್ಯತಿ ॥ ೧೮ ॥ ತಂಹನಿಷ್ಯಾಮಿಸಬಲಃ ಸಂಯುಗೇನಿಶಿತೈಃ ಶರೈಃ । ಇತ್ಯುಕ್ತ್ವಾರೋಷತಾಮ್ರಾಕ್ಷಃ ಖಡ್ಗಮಾದಾಯಪಕ್ಷಿಣಂ ॥ ೧೯ ॥ ಹಂತುಂತದೋತ್ಥಿತೋದೈತ್ಯೋವಾರಿತೋಮಂತ್ರಿಣಾದ್ವಿಜಃ। ಉತ್ಥಾಯತುಂಡಪಕ್ಷೈಸ್ತಂಮರ್ದಿತ್ವಾಪುನರಾಯಯೌ ॥ ೨೦ ॥ ಪ್ರಣಮ್ಯಪಾರ್ವತೀಪುತ್ರಮುವಾಚವಿನಯೇನತತ್। ತಚ್ಛ್ರುತ್ವಾ ಪ್ರಹರ್ಸ ದೇವಃ ಶಂಖಂದಧ್ಮೌಪ್ರತಾಪವಾನ್ ॥ ೨೧ ॥ ತತಃ ಕಹಳನಾದೈಶ್ಚ ಭೇರೀವಾದ್ಯರವೈಃಸಹ । ಪೂರಯಾಮಾಸತದ್ದೈತ್ಯಗರ್ಭಾನ್‌ಭಿಂದನ್ನಿವಪ್ರ

ಮರಣವು ಎಂಬ ಬ್ರಹ್ಮದೇವರ ಮಾತನ್ನು ಸ್ಮರಿಸುತ್ತ ದೈತ್ಯಭಾವದಿಂದ ಮತ್ತನಾಗಿ ಆಗ ॥ ೧೭ ॥ ಹುಬ್ಬನ್ನು ಗಂಟಿಕ್ಕಿ ಆ ಮಯೂರನನ್ನು ಕುರಿತು ಮಾತನಾಡಿದನು. ಎಲೈ ಮಂದಮತಿಯಾದ ಪಕ್ಷಿಯೇ ಏನು ಬಗುಳುತ್ತೀಯೆ ನನಗೆ ಅಪ್ಪಣೆಯನ್ನು ಕೊಡುವವನು ಯಾವಾತನು ॥೧೮॥ ಅವನನ್ನು ಯುದ್ಧದಲ್ಲಿ ಬಲಸಹಿತವಾಗಿ ಬಾಣಗಳಿಂದ ಕೊಲ್ಲುವೆನು, ಹೀಗೆಂದು ಸಿಟ್ಟಿನಿಂದ ಕೆಂಪಾದ ಕಣ್ಣುಳ್ಳವನಾಗಿ ಕತ್ತಿಯನ್ನುಹಿಡಿದು ಆ ಪಕ್ಷಿಯನ್ನು ॥ ೧೯ ॥ ಕೊಲ್ಲಲೋಸುಗ ಎದ್ದು ತನ್ನ ಮಂತ್ರಿಯಿಂದ ತಡೆಯಲ್ಪಟ್ಟನು. ಅಷ್ಟರಲ್ಲಿಯೇ ಆ ಪಕ್ಷಿಯು ಎದ್ದು ಕೊಕ್ಕಿನಿಂದಲೂ ರೆಕ್ಕೆಗಳಿಂದಲೂ ಅವನನ್ನು ಕುಕ್ಕಿ ಹೊಡೆದು ತಿರುಗಿಬಂದಿತು ॥೨೦॥ ಶ್ರೀ ಪಾರ್ವತಿಯ ಮಗನನ್ನು ನಮಸ್ಕರಿಸಿ ನೀತಿಯಿಂದ ಆ ವೃತ್ತಾಂತವನ್ನು ಅರಿಕೆಮಾಡಿದನು. ಶ್ರೀ ಮಹಾಗಣಪತಿಯು ಅದನ್ನು ಕೇಳಿ ಹಸನ್ಮುಖನಾಗಿ ತಾರಧ್ವನಿಯಿಂದ ಶಂಖವನ್ನು ನುಡಿಸಿದನು ॥೨೧॥ ಆ ಮೇಲೆ ಖಹಳೆ ಭೇರೀವಾದ್ಯ ಧ್ವನಿಗಳಿಂದ ಸಹಿತವಾಗಿ ಆ ಧ್ವನಿಯು ಆ ದೈತ್ಯಸ್ತ್ರೀಯರ ಗರ್ಭವನ್ನು ಭೇದಿಸುವವನಂತೆ

ಭುಃ ॥ ೨೨ ॥ ತಚ್ಛಂಖನಿನದಂಶ್ರುತ್ವಾನಿರ್ಯಯುರ್ದೈತ್ಯಪುಂಗವಾಃ ॥ ಪ್ರತಿಪ್ರಥ್ಮಾಯುಜಿಜಾಗ್ ಖಡ್ಗಶೂಲಧನುರ್ಧರಾಃ ॥ ॥೨೩॥ ಖರಾನಶ್ವಾನ್ರಥಾಂಶ್ಚೈವಸಮಾರುಹ್ಯಮಹೌಜಸಃ । ಸರ್ವಸಾಂಗ್ರಾಮಿಕೋಪೇತಾಯುದ್ಧಾಯಕೃತನಿಶ್ಚಯಾಃ॥೨೪॥ ದೈತ್ಯೇಂದ್ರಸ್ತರುರೂಪೇಣಪಾರ್ಶ್ವಯೋಃ ಪರಿಕಂಪಯನ್ । ನಿರ್ಜಗಾಮಸುರಾನ್ಸರ್ವಾನ್ಭೀಷಯನ್ತಾಲಸಂಜ್ಞಿತೈಃ ॥೨೫॥ ಅಥಾನ್ಯೇನ್ಸ್ವೈವರೂಪೇಣ ರಥಂ ಖರಶತೋದ್ವಹಂ। ವ್ಯಾಘ್ರಚರ್ಮಪರೀವಾರಂ ನಾನಾ ಪ್ರಹರಣಾನ್ವಿತಂ ॥ ೨೬ ॥ ಆರುಹ್ಯಸ್ವರಥಂದೈತ್ಯಃಪ್ರಣಮ್ಯೋಶನಸಂಗುರುಂ । ಯುದ್ಧಾಭಿಲಾಷಿಪ್ರಯಯೌಸೈನ್ಯೇನಮಹತಾವೃತಃ ॥೨೭॥ ತತೋಯುದ್ಧಮಭೂದ್ಘೋರಂ ಸೈನ್ಯಯೋ

ಭೂನಭೋಂತರಗಳನ್ನು ತುಂಬಿದನು ॥ ೨೨ ॥ ಆ ದೇವನ ಶಂಖಧ್ವನಿಯನ್ನು ಕೇಳಿ ಕತ್ತಿ, ತ್ರಿಶೂಲ, ಧನುಸ್ಸುಗಳನ್ನು ಧರಿಸಿರುವ ದೈತ್ಯಶ್ರೇಷ್ಠರು ತಮ್ಮ ಶಂಖಗಳನ್ನೂದುತ್ತ ತಿರುಗಿ ಕೂಗಿ ಹೊರಟುಬಂದರು ॥ ೨೩ ॥ ಯುದ್ಧಕ್ಕೆ ನಿಶ್ಚೈಸಿದ ಸಮಸ್ತ ರಣಸನ್ನಾಹಯುಕ್ತರಾದ, ಮಹಾ ಶಕ್ತರಾದ ಆ ದೈತ್ಯರು ಹೇಸರಕತ್ತೆ, ಕುದುರೆ, ರಥ ಇವುಗಳನ್ನು ಹತ್ತಿಕೊಂಡು ಬಂದರು ॥ ೨೪ ॥ ಆ ದೈತ್ಯರಾಜನು ತಾಳೆಯ ಮರದ ರೂಪದಿಂದ ಎಡಬಲಕ್ಕಿರುವ ದೇವತೆಗಳನ್ನು ಕೊನೆಗಳೆಂಬ ಹೆಡೆಗಳಿಂದ ಅಲುಗಿಸುವವನಾಗಿ ಮತ್ತು ಹೆದರಿಸುವವನಾಗಿ ಹೊರಟು ಬಂದನು ॥೨೫॥ ಹಾಗೆ ದೈತ್ಯರಾಜ ರೂಪದಿಂದಲೂ ಗುರುವಾದ ಶುಕ್ರಾಚಾರ್ಯನನ್ನು ವಂದಿಸಿ ನೂರು ಹೇಸರ ಕತ್ತೆಗಳನ್ನು ಕಟ್ಟಿದ ಹುಲಿಯ ಚರ್ಮಗಳಿಂದ ಅಲಂಕೃತವಾದ ಅನೇಕ ಆಯುಧಗಳಿಂದ ಕೂಡಿರುವ ॥ ೨೬ ॥ ತನ್ನ ರಥವನ್ನು ಹತ್ತಿಕೊಂಡು ಅಪಾರ ಸೇನೆಯಿಂದೊಡಗೂಡಿದವನಾಗಿ ಯುದ್ಧದಲ್ಲಿ ಆಸೆಯುಳ್ಳವನಾಗಿ ಹೊರಟು ಬಂದನು ॥೨೭॥ ಆಮೇಲೆ ಎರಡು ಸೈನ್ಯಗಳಿಗೂ ಎಲ್ಲಾ ಕಡೆಯಲ್ಲಿಯೂ ಗದೆ,

ರುಭಯೋರಪಿ । ಗದಾಭಿರ್ಮುದ್ಗರೈಶ್ಚೈವ ಬಾಣೈಃ ಖಡ್ಗೈಃ ಸಮಂತತಃ ॥ ೨೮ ॥ ಗಜೈ ರಶ್ವೈ ರಥೈಶ್ಚೈವ ಪದಾತಿಭಿಸ್ತ್ರಸ್ತತಃ । ಚರದ್ಭಿಶ್ಚ ರಣೋದ್ಧೂತರಜಸಾಚಾವೃತಂನಭಃ ॥ ೨೯ ॥ ದ್ವಂದ್ವೇನೈವ ಸಮಾಹತ್ಯ ದೇವಾದೈತ್ಯಾನ್ ಪ್ರಜಘ್ನಿರೇ । ಇಂದ್ರೋ ಜಂಭೇನ ದೈತ್ಯೇನ ಸ್ಕಂದಸ್ತು ಮಂತ್ರಿಣಾ ಸಹ ॥೩೦॥ ಅನ್ಯೈರನ್ಯೇ ಸಮಾಹತ್ಯ ದ್ವಂದ್ವಯುದ್ಧಂ ಪ್ರಚಕ್ರಮುಃ । ತತಸ್ತದ್ದೇಹ ಸಂಭೂತಾ ಶೋಣಿತಾಖ್ಯಾ ಮಹಾನದೀ ॥೩೧॥ ಉದ್ಧೂತಂ ಶಮಯಾಮಾಸ ವ್ಯೋಮವ್ಯಾಪಿ ಮಹದ್ರಜಃ । ಜಂಭಂಚ ವಾರಯಾಮಾಸ ದೇವೇಂದ್ರಃ ಸ್ವಶತ್ರುಂ ಶಸ್ತ್ರೈಃ ॥ ೩೨ ॥ ಸ್ಕಂದಸ್ತು ಮಂತ್ರಿಪ್ರವರಂ ಶರೇಣಾಹತ್ಯ ವಕ್ಷಸಿ । ಸನಾದ ಬಲವನ್ನಾದಂ ಕ್ಷೋಭಯನ್ ದೈತ್ಯವಾಹಿನೀಂ ॥ ೩೩ ॥

ಒನಕೆ, ಬಾಣ, ಕತ್ತಿಗಳಿಂದ ಭಯಂಕರವಾದ ಯುದ್ಧವು ಆಯಿತು ॥೨೮॥ ಆನೆ, ಕುದುರೆ, ತೇರು, ನಡೆದಾಡುತ್ತಿರುವ ಕಾಲಾಳುಗಳು ಎಂಬಿವುಗಳಿಂದೆಬ್ಬಿಸಿದ ಧೂಳಿಯಿಂದ ಆಕಾಶವು ಮುಚ್ಚಲ್ಪಟ್ಟಿತು ॥೨೯॥ ಜೋಡಿಯಾಗಿ ದೇವತೆಗಳು ದೈತ್ಯರೊಡನೆ ಕೂಡಿ ಹೊಡೆದಾಡಿದರು. ದೇವೇಂದ್ರನು ಜಂಭನೊಡನೆಯೂ ಕುಮಾರಸ್ವಾಮಿಯು ತಾಳಾಸುರನ ಮಂತ್ರಿಯೊಡನೆಯೂ ಯುದ್ಧಮಾಡಿದರು ॥ ೩೦ ॥ ಉಳಿದ ಸೈನಿಕರು ಜೋಡಾಗಿ ಯುದ್ಧವನ್ನು ಮಾಡಿದರು. ಆಮೇಲೆ ಇವರ ಶರೀರದಿಂದ ರಕ್ತ ಹೊಳೆಯು ಒಂದು ಹುಟ್ಟಿತು ॥೩೧॥ ಆ ನದಿಯು ಆಕಾಶಕ್ಕೆ ವ್ಯಾಪಿಸಿದ ಆ ಧೂಳಿಯನ್ನು ಅಡಗಿಸಿತು. ದೇವೇಂದ್ರನು ತನ್ನ ಶತ್ರುವಾದ ಜಂಭನನ್ನು ಹಿಮ್ಮೆಟ್ಟಿಸಿದನು ॥ ೩೨ ॥ ಕುಮಾರಸ್ವಾಮಿಯು ಆ ಮಂತ್ರಿಶ್ರೇಷ್ಠನ ಎದೆಗೆ ಬಾಣದಿಂದ ಹೊಡೆದು ಆ ದೈತ್ಯಸೈನ್ಯವನ್ನು ಭಯಪಡಿಸುವವನಾಗಿ ಸಿಂಹನಾದವನ್ನು ಮಾಡಿದನು॥೩೩॥ ಆ ಮಂತ್ರಿಯು ಪರಾಕ್ರಮಿಯಾದ ಕುಮಾರಸ್ವಾಮಿಯಿಂದ ಹೊಡೆಯಿಸಿಕೊಂಡವನಾಗಿ ಶತ್ರು ಶರೀರವನ್ನು ಸೀಳುತ್ತಿರುವ ತೀಕ್ಷ್ಣವಾದ

ಸೋತಿವಿದ್ಧೋಬಲವತಾಕುಮಾರೇಣಾಮಿತೌಜಸಾ । ಜಗ್ರಾಹಬಾಣಂನಿಶಿತಂ ಶತ್ರುಕಾಯಾವದಾರಣಂ ॥ ೩೪ ॥ ಚಿಕ್ಷೇಪಸಹಸಾದೈತ್ಯಃ ಸ್ಕಂದಂ ಪ್ರತಿಮಹಾರಥಃ । ತದ್ಬಾಣಾಭಿಹತಃಶೂರಃಕ್ರೋಧಾಜ್ಜಜ್ವಾಲಶಾಂಕರಃ ॥ ೩೫ ॥ ಸ್ವೀಯಾಂಶಕ್ತಿಂ ಪ್ರಜಗ್ರಾಹಸ್ಫುರಂತೀಂದೈತ್ಯನಾಶನೀಂ । ತಾಂಕ್ಷೇಪ್ತುಕಾಮಮನುಜಂದೃಷ್ಟ್ವಾಪ್ರವ ವಿಘ್ನೇಶ್ವರಸ್ತದಾ ॥ ೩೬ ॥ ಮಾಕಾರ್ಷೀರ್ಭಸ್ಮಸಾದ್ವತ್ಸಮಂತ್ರಿಣಂನಯಕೋವಿದಂ । ಪ್ರಹರಾನ್ಯತರೇಣೈನಂಯಥಾತೇಜಃಪ್ರಹೀಯತೆ ॥ ೩೭ ॥ ಇತಿದೇವವಚಃ ಶ್ರುತ್ವಾಕುಮಾರಃಕನಕಪ್ರಭಃ। ಮೋಹನಾಸ್ತ್ರೇಣಸಂಮುಹ್ಯಸಿಂಹವದ್ವ್ಯನದದ್ಬಲೀ ॥ ೩೮ ॥ ಮುಹ್ಯಂತಂರಥಿನಂದೃಷ್ಟ್ವಾಸಾರಥಿರ್ನ್ಯಾಯಕೋವಿದಃ । ಅಪೋವಾ

ಒಂದು ಬಾಣವನ್ನು ಹಿಡಿದನು ॥೩೪॥ ಮಹಾರಥಿಕನಾದ ಆ ದೈತ್ಯನು ಕುಮಾರಸ್ವಾಮಿಯನ್ನು ಕುರಿತು ಆ ಬಾಣವನ್ನು ಬಿಟ್ಟನು. ಆ ಬಾಣದಿಂದ ತಾಡಿತನಾದ ಕುಮಾರಸ್ವಾಮಿಯು ಕೋಪೋದ್ರೇಕದಿಂದ ಬೆಂಕಿಯಂತೆ ಉರಿಯುತ್ತಿದ್ದನು ॥ ೩೫ ॥ ಆಮೇಲೆ ಕುಮಾರಸ್ವಾಮಿಯು ತನ್ನದಾದ ಸರ್ವ ದೈತ್ಯನಾಶಕವಾದ ಜ್ವಲಿಸುವ ಶಕ್ತಿಯನ್ನು ಹಿಡಿದನು. ಆಗ ಶ್ರೀ ವಿಘ್ನೇಶ್ವರನು ಆ ಪ್ರಧಾನಶಕ್ತಿಯನ್ನು ಬಿಡಲಪೇಕ್ಷಿಸಿದ ತಮ್ಮನನ್ನು ನೋಡಿ ॥೩೬॥ ಎಲೈ ಮಗುವೇ, ನೀತಿವಂತನಾದ ಮಂತ್ರಿಯನ್ನು ಸುಟ್ಟುಹಾಕಬೇಡ. ಇವನ ಪರಾಕ್ರಮವು ಹೇಗೆ ಕಡಮೆಯಾದೀತೋ ಹಾಗೆ ಬೇರೆ ಬಾಣದಿಂದ ಹೊಡೆಯೆಂದನು॥೩೭॥ ಭಂಗಾರದಂತೆ ಪ್ರಕಾಶಿಸುವ ಬಲಿಷ್ಠನಾದ ಕುಮಾರಸ್ವಾಮಿಯು ಆ ದೇವದೇವನ ಮಾತನ್ನು ಕೇಳಿ ಮೋಹನಾಸ್ತ್ರದಿಂದ ಆ ಮಂತ್ರಿಯನ್ನು ಎಚ್ಚರತಪ್ಪಿಸಿ ಸಿಂಹದಂತೆ ಅಟ್ಟಹಾಸವನ್ನು ಮಾಡಿದನು ॥೩೮॥ ಆಗ ಆತನ ನೀತಿವಂತನಾದ ಸಾರಥಿಯು ಎಚ್ಚರವಿಲ್ಲದೆ ಸಂಕಟಪಡುತ್ತಿರುವ ಆ ದೈತ್ಯನನ್ನು ನೋಡಿ ಕುಮಾರಸ್ವಾಮಿಯ ದೆಸೆಯಿಂದ ರಕ್ಷಿಸುವವನಾಗಿ ಯುದ್ಧದ ದೆಸೆಯಿಂದ ಆತನ ರಥವನ್ನು ಹಿಂದಿರುಗಿಸಿಕೊಂಡು

ಹರಣಾದ್ದೈತ್ಯಂ ಕುಮಾರಾತ್ಪರಿರಕ್ಷಯನ್ ॥ ೩೯ ॥ ದೃಷ್ಟ್ವಾ ವಿ
ನಿರಸ್ತಂಸ್ವಾಮಾತ್ಯಂದೈತ್ಯರಾಜಃಪ್ರತಾಪವಾನ್ । ಅಭಿದುದ್ರಾವ
ಸೇನಾನೀಂಶರವೃಷ್ಟಿಂವಿಮುಂಚಯನ್ ॥ ೪೦ ॥ ತಿಷ್ಠ ತಿಷ್ಠಾದ್ಯ
ಮಂದಾತ್ಮನ್ ಸ್ಥಿರೋಭವಷಡಾನನ । ತ್ವಾಮದ್ಯನಿಶಿತೈರ್ಬಾಣೈ
ರ್ನಯಾಮಿಯಮಸಂಸದಂ ॥೪೧॥ ಉಕ್ತ್ವೈವಮಸುರಃಶೂರೋ
ಬಾಣವೃಷ್ಟಿಂ ಮುಮೋಚಹ । ಅರ್ಧಚಂದ್ರೇಣ ಬಾಣೇನಧನು
ರ್ಜ್ಯಾಂಚಿಚ್ಛಿದೇಸ್ವರಾಟ್ ॥೪೨॥ ತದಪಾಸ್ಯಧನುರ್ವೀರೋಶಕ್ತಿಂ
ಜಗ್ರಾಹಭೈರವೀಂ । ಮಂತ್ರಿತಾಂಭಾರ್ಗವೇಣೇವಸರ್ವಶತ್ರುವಿನಾ
ಶಿನೀಂ ॥ ೪೩ ॥ ಭ್ರಾಮಯಾಮಾಸತಾಂವೀರೋವೋಕ್ತ್ವಾಕಾಮಃ
ಪ್ರತಾಪವಾನ್ । ಅನನ್ಯಸಹ್ಯಾಂತಾಂಶಕ್ತಿಂವೀನೆವಿಘ್ನೇಶ್ವರಃಸ್ವ

ಹೋದನು ॥ ೩೯ ॥ ಪರಾಕ್ರಮಿಯಾದ ದೈತ್ಯರಾಜನು ಹಿಂದಿರುಗಿದ
ತನ್ನ ಮಂತ್ರಿಯನ್ನು ಕಂಡು ಬಾಣದಮಳೆಯನ್ನು ಸುರಿಯುವನಾಗಿ
ಆ ಕುಮಾರಸ್ವಾಮಿಯನ್ನು ಅಡರಿಸಿಕೊಂಡು ಬಂದನು ॥ ೪೦ ॥
ಎಲೋ ಮಂದಬುದ್ಧಿಯಾದ ಷಣ್ಮುಖನೇ ನಿಲ್ಲು ನಿಲ್ಲು. ಈಗ ನಿನ್ನನ್ನು
ಕ್ರೂರಗಳಾದ ಬಾಣಗಳಿಂದ ಯಮನ ಸಭೆಯನ್ನು ಕುರಿತು ಕಳುಹಿ
ಸುವೆನು ॥ ೪೧ ॥ ಈಪ್ರಕಾರ ಹೆದರಿಸುತ್ತ ಶೂರನಾದ ಆ ದೈತ್ಯನು
ಬಾಣದ ಮಳೆಯನ್ನು ಸುರಿದನು. ಅನಂತರ ಕುಮಾರಸ್ವಾಮಿಯು
ಅರ್ಧಚಂದ್ರನಂತಿರುವ ಬಾಣದಿಂದ ಅವನ ಬಿಲ್ಲನ್ನೂ ಹೆದೆಯನ್ನೂ
ಕತ್ತರಿಸಿದನು ॥ ೪೨ ॥ ಪರಾಕ್ರಮಿಯಾದ ಆ ದೈತ್ಯನು ಮುರಿದ ಬಿಲ್ಲ
ನ್ನುಬಿಟ್ಟು ತನ್ನ ಗುರುವಾದ ಶುಕ್ರಾಚಾರ್ಯರಿಂದ ಮಂತ್ರಿಸಿದ ಮಹಾ
ಭಯಂಕರವಾದ ಸರ್ವ ಶತ್ರುನಾಶಕವಾದ ಮಹಾ ಶಕ್ತಿಯನ್ನು ಹಿಡಿದ
ನು ॥ ೪೩ ॥ ಶೂರನಾದ ಪ್ರತಾಪಶಾಲಿಯಾದ ತಾಳಾಸುರನು ಇನ್ನೊ
ಬ್ಬರಿಂದ ಸೈರಿಸಲಶಕ್ಯವಾದ ಆ ಶಕ್ತಿಯನ್ನು ಬಿಡಲಪೇಕ್ಷಿಸಿ ಗಿರ
ಗಿರನೆ ತಿರುಗಿದನು. ಶ್ರೀ ಗಣೇಶ್ವರನು ಆ ದೈತ್ಯನ ಶಕ್ತಿಯು ಇತರ

ಯಂ ॥ ೪೪ ॥ ನಿರ್ಯಯೌಪುರತಃಸಂಖ್ಯೇಕುಮಾರಂ ಪರಿರಕ್ಷ
ಯನ್ । ಗತ್ವಾತಂದೈತ್ಯಮತುಳಮುವಾಚಭಗವಾನ್ಸ್ವಯಂ॥೪೫॥
ತಾಳಾಸುರಕ್ಷಣಂತಿಷ್ಠಯಾವತೇಶಕ್ತಿರೀದೃಶೀ ॥ ವಿನಾಶ್ಯತ್ರಾಮ
ಹಂಪೂರ್ವಂವಧಿಷ್ಯೇತ್ವಾಂಸುರದ್ವಿಷಂ ॥ ೪೬ ॥ ಇತ್ಯುಕ್ತಸ್ತುತ
ದಾದೈತ್ಯಸ್ತಸ್ಮೈದೇವಾಯಚಿಕ್ಷಿಪೇ । ಪ್ರಜ್ವಲಂತೀಂಚತಾಂಶಕ್ತಿಂ
ಕುಮಾರಾಯೋದ್ಯತಾಂತದಾ ॥ ೪೭ ॥ ಸಾದೈತ್ಯಕರನಿರ್ಮುಕ್ತಾ
ಪ್ರಸ್ಫುರಂತೀದಿಶೋದಶ । ವಿಘ್ನೇಶಮಾಯಯೌಶಕ್ತಿಃಪ್ರದಹಂ
ತೀಜಗತ್ತ್ರಯಂ ॥ ೪೮ ॥ ದೃಷ್ಟ್ವಾತಾಂಸಗಣಾಧ್ಯಕ್ಷೋಹೂಂ
ಕಾರಮಕರೋತ್ತದಾ । ತತ್ಕ್ಷಣೇಭಸ್ಮಸಾದ್ಭೂತ್ವಾಪಪಾತಧರಣೀ
ತಳೇ ॥೪೯॥ ಶಕ್ತಿಂತಥಾವಿಧಾಂದೃಷ್ಟ್ವಾತರುಗರೂಪೇಣ ದೈತ್ಯರಾ

ರಿಂದ ತಡೆಯುಲು ಸಾಧ್ಯವಾದುದೆಲ್ಲವೆಂಬುದನ್ನು ತಾನೇ ತಿಳಿದಿದ್ದನು॥೪೪॥
ಆಗ ಕುಮಾರಸ್ವಾಮಿಯು ಮುಂದುಗಡೆ ಯುದ್ಧದಲ್ಲಿ ತಮ್ಮನನ್ನು
ರಕ್ಷಿಸುವನಾಗಿ ತಾನೇ ನಿಂತನು. ಆ ಅಸದೃಶನಾದ ದೈತ್ಯನನ್ನು ಕುರಿ
ಕು ಶ್ರೀ ಗಣೇಶ್ವರನು ತಾನಾಗಿಯೇ ಮಾತನಾಡಿದನು ॥ ೪೫ ॥ ಎಲೈ
ತಾಳಾಸುರನೇ ಸ್ವಲ್ಪಹೊತ್ತು ನಿಲ್ಲು. ಅದ್ಭುತವಾದ ಈ ನಿನ್ನ ಶಕ್ತಿ
ಯನ್ನು ಮೊದಲು ಹಾಳುಮಾಡಿ ದೇವ ದ್ವೇಷಿಯಾದ ನಿನ್ನನ್ನು
ಆಮೇಲೆ ಕೊಲ್ಲುವೆನು ॥ ೪೬ ॥ ಹೀಗೆ ಹೇಳಲ್ಪಟ್ಟ ಆ ದೈತ್ಯನು
ಕುಮಾರಸ್ವಾಮಿಗೋಸ್ಕರ ಬಿಡುವುದಕ್ಕೆ ಎತ್ತಿದ ಉರಿಯುತ್ತಿ
ರುವ ಆ ಶಕ್ತಿಯನ್ನು ಆ ಶ್ರೀಗಣೇಶ್ವರ ದೇವನಿಗೋಸ್ಕರ ಬಿಟ್ಟನು॥೪೭॥
ತಾಳಾಸುರನ ಕೈಯಿಂದ ಬಿಡಲ್ಪಟ್ಟಿರುವ ಹತ್ತು ದಿಕ್ಕುಗಳನ್ನೂ ಬೆಳ
ಗುತ್ತಿರುವ ಆ ಶಕ್ತಿಯು ಮೂರು ಲೋಕಗಳನ್ನೂ ಸುಡುವುದಾಗಿ ಶ್ರೀ
ವಿಘ್ನೇಶ್ವರನ ಬಳಿಗೆ ಬಂದಿತು ॥ ೪೮ ॥ ಆಗ ಶ್ರೀ ಗಣೇಶ್ವರನು ಆ ಶಕ್ತಿ
ಯನ್ನು ನೋಡಿ ಹೂಂಕಾರವನ್ನು ಮಾಡಿದನು. ಆ ಕ್ಷಣದಲ್ಲಿಯೇ
ಆ ಶಕ್ತಿಯು ಬೂದಿಯಾಗಿ ನೆಲದಲ್ಲಿ ಬಿತ್ತು ॥೪೯॥ ಆ ದೈತ್ಯರಾಜನು

ಟ್। ಯುಯೋಧಸಮರೇತತ್ರತ್ರಾಳಪತ್ರೈಃಸಶಬ್ದಕೈಃ॥೫೦॥ ವೃಕ್ಷ ರೂಪಂಸಮಾಯಾತಂದೃಷ್ಟ್ವಾದೇವೋಗಣೇಶ್ವರಃ । ಅತುಳಂಬೃಂ ಹಿತಂಚಕ್ರೇದೈತ್ಯರಾಜಭಯಾವಹಂ ॥೫೧॥ ಬೃಂಹಿತಂತಂಧ್ವನಿಂ ಶೃತ್ವಾತ್ರಾಳಾಸುರಸಮಾಹೃತಾಃ। ಪ್ರಪೇದಿರೇತದಾಹರ್ಷಂಯೋ ಷಿತಸ್ತ್ರಿದಿವೌಕಸಾಂ ॥ ೫೨ ॥ ಅಥೇಶ್ವರಃಸ್ವಶುಂಡೇನತಮಾಕೃಷ್ಯ ಸುರದ್ವಿಷಂ ॥ ವಿಶಾಖಂಕೃತವಾನ್ದೇವೋತತ್ಪತ್ರೈರ್ಜರ್ಜರೀಕೃ ತೈಃ ॥ ೫೩ ॥ ಸ್ತಂಭಮಾತ್ರಂಗೃಹೀತ್ವೈನಂಚೂರ್ಣೀಚಕ್ರೇಮ ಹಾಬಲಃ॥ ತತಶ್ಚುಕೋಪಧದೈತ್ಯೇಂದ್ರಶ್ಚೂರ್ಣೀತೇತರುವಿಗ್ರಹೇ ॥ ॥೫೪॥ ಸ್ವರಥಂಚೋದಯಾಮಾಸಗಣೇಶಾಭಿಮುಖಂಬಲೀ । ತತಃ ಪ್ರವವೃತೇಯುದ್ಧಂದೇವಸ್ಯದಿತಿಜೇನಹಿ ॥ ೫೫ ॥ ಅಪ್ರಧೃಷ್ಯಮ

ಹಾಗಾಗಿರುವ ಶಕ್ತಿಯನ್ನು ಕಂಡು ತಾಳೆಯು ಮರದಾಕಾರದಿಂದ ಧ್ವನಿಯಾಗುತ್ತಿರುವ ಹೆಡೆಗಳಿಂದ ಆ ಯುದ್ಧದಲ್ಲಿ ಯುದ್ಧ ಮಾಡಿದ ನು ॥ ೫೦ ॥ ಆಗ ಶ್ರೀ ಗಣೇಶದೇವನು ವೃಕ್ಷಾಕಾರನಾಗಿ ಬರುವ ಆ ದೈತ್ಯನನ್ನು ನೋಡಿ ಆ ದೈತ್ಯಾಧಿಪತಿಗೆ ಭೀತಿ ಹುಟ್ಟುವ ಬೃಂಹಿತವೆಂಬ ಗಜಧ್ವನಿಯನ್ನು ಮಾಡಿದನು ॥ ೫೧ ॥ ಆ ಕಾಲದಲ್ಲಿ ಈ ತಾಳಾ ಸುರನು ಅಪಹರಿಸಿ ತಂದ ದೇವಸ್ತ್ರೀಯರುಗಳು ಆ ಧ್ವನಿಯನ್ನು ಕೇಳಿ ಸಂತೋಷವನ್ನುಹೊಂದಿದರು॥೫೨॥ ಆಮೇಲೆ ಜಗದೀಶನಾದ ಆ ದೇವನು ತನ್ನ ಸುಂಡಲಿನಿಂದ ದೇವದ್ವೇಷಿಯಾದ ಆ ದೈತ್ಯನನ್ನು ಎಳೆದು ಹೆಡೆಗಳನ್ನು ಹುಡಿಹುಡಿಯಾಗಿ ಅವನನ್ನು ರಂಬೆಯಿಲ್ಲದ ಮುಂಡಮರದಂತೆ ಮಾಡಿದನು ॥ ೫೩ ॥ ಬಲಶಾಲಿಯಾದ ಆ ದೇವನು ದಿಂಡುಮಾತ್ರನಾದ ಇವನನ್ನು ಹಿಡಿದು ಚೂರ್ಣವಾಗಿ ಮಾಡಿದನು. ಆ ಕಾಲದಲ್ಲಿ ದೈತ್ಯೇಶ್ವರನು ತನ್ನ ವೃಕ್ಷಾಕಾರವು ನಾಶವಾಗುತ್ತಲೇ ಬಹಳ ಕೋಪಿಷ್ಠನಾದನು ॥ ೫೪ ॥ ಮತ್ತು ಶ್ರೀಗಣೇಶನ ಎದುರಿಗೆ ತನ್ನ ರಥವನ್ನು ಹಾಚಿ ನಿಲ್ಲಿಸಿದನು. ಆ ಮೇಲೆ ದೇವನಾದ ಶ್ರೀ ಗಣೇ ಶನಿಗೆ ಆ ದೈತ್ಯನೊಡನೆ ಯುದ್ಧವು ನಡೆಯಿತು॥೫೫॥ ಆ ಯುದ್ಧವು ತಡೆ

ನೌಪಮ್ಯಂಜಗದ್ವಿಸ್ಮಾಪನಂಮಹತ್ ॥ ತದ್ಬಲಾತಿಶಯಂದೃಷ್ಟ್ವಾವಿ
ಕ್ರುದ್ಧೋವಿಘ್ನೇಶ್ವರಸ್ತದಾ ॥ ೫೬ ॥ ರಥಮಾಕೃಷ್ಯಶುಂಡೇನಚ
ಕಾರತಿಲಶಸ್ತದಾ। ಚೂರ್ಣಿತೇಸ್ವರಥೇದೈತ್ಯೋಧನುರಾದಾಯಸತ್ವ
ರಂ ॥ ೫೭ ॥ ಅರ್ಧಚಂದ್ರೇಣಬಾಣೇನತತ್ಕರಂಪ್ರಜಘಾನಚ ।
ತೇನಸಂತ್ರಾಡಿತೋದೇವಃಪ್ರಗೃಹ್ಯಮಹತೀಂಗದಾಂ ॥೫೮॥ ಭ್ರಾಮ
ಯರ್ನ್ದೇವತ್ರಾಕಾರ್ಯಂವಿಚಿಂತ್ಯಮನಸಾವಿಭುಃ ॥ ಜಘಾನಸಮರೇ
ದೈತ್ಯಂತ್ರಿಪುರಂಶೂಲಭೃದ್ಯಥಾ ॥೫೯॥ ಪ್ರಪಾತಸಹಸಾಭೂಮೌ
ಗಗನಾದಿವತ್ರಾರಕಂ ॥ ಜರ್ಝರೀಕೃತದೇಹಸ್ತುವಮನ್ರಕ್ತಂಮು
ಮೋಹವೈ ॥ ೬೦ ॥ ದೈತ್ಯೇಂದ್ರಂಪತಿತಂದೃಷ್ಟ್ವಾಯೇಚತತ್ಸ್ಯಾ

ಯಲಸಾಧ್ಯವಾಗಿಯೂ ಅಸದೃಶವಾಗಿಯೂ ಲೋಕಕ್ಕೆ ಆಶ್ಚರ್ಯಕರವಾಗಿ
ಯೂ ಶ್ರೇಷ್ಠವಾಗಿಯೂ ಇತ್ತು. ಆಗ ಆ ದೈತ್ಯನ ಬಲಾಧಿಕ್ಯವನ್ನು
ಶ್ರೀ ಗಣೇಶನು ಕಂಡು ಕ್ರೋಧಯುಕ್ತನಾಗಿ॥೫೬॥ ಸುಂಡಲಿನಿಂದ ಅವ
ನು ಹತ್ತಿದ ರಥವನ್ನು ಎಳೆದು ಎಳ್ಳಿನಂತೆ ಪುಡಿಪುಡಿಮಾಡಿದನು. ತನ್ನ
ರಥವು ಪುಡಿಯಾದುದನ್ನು ಕಂಡು ಜಾಗ್ರತೆಯಾಗಿ ಧನುಸ್ಸನ್ನು ತೆಗದು
ಕೊಂಡನು ॥೫೭॥ ಅರ್ಧಚಂದ್ರಾಕಾರವಾದ ಬಾಣದಿಂದ ಆ ದೇವನ
ಸುಂಡಲವನ್ನು ನೋಯಿಸಿದನು. ಆ ಬಾಣದಿಂದ ತಾಡಿತನಾದ ಶ್ರೀ
ದೇವನು ಮಹತ್ತಾದ ಗದೆಯನ್ನು ಹಿಡಿದು ॥೫೮॥ ತಿರುಗಿಸುತ್ತ ದೇವ
ತೆಗಳ ಕಾರ್ಯವನ್ನು ಮನಸ್ಸಿನಲ್ಲಾಲೋಚಿಸಿ ಯುದ್ಧದಲ್ಲಿ ಆ ತಾ
ಳಾಸುರನನ್ನು ತ್ರಿಶೂಲಧರನಾದ ಶ್ರೀ ಪರಮೇಶ್ವರನು ತ್ರಿಪುರವನ್ನು
ಹೇಗೆ ಸಂಹರಿಸಿದನೋ ಹಾಗೆ ಹೊಡೆದನು ॥ ೫೯ ॥ ಆಗ ಆ ದೈ
ತ್ಯೇಶ್ವರನು ಗದಾಪ್ರಹಾರದಿಂದ ಆಕಾಶದ ಕಡೆಯಿಂದ ಬೀಳುವ ನಕ್ಷತ್ರ
ದಂತೆ ನೆಲದಲ್ಲಿ ಬಿದ್ದನು. ಹುಡಿಹುಡಿಯಾದ ಶರೀರವುಳ್ಳವನಾಗಿ ರಕ್ತ
ವನ್ನು ಕಾರುತ್ತ ಮೂರ್ಛಿತನಾದನು ॥ ೬೦ ॥ ಹೀಗೆ ಬಿದ್ದ ಆ ಸೈ
ನ್ಯಾಧಿಪತಿಯನ್ನು ನೋಡಿ ಅವನ ಕಡೆಯಲ್ಲಿ ಎಷ್ಟು ಸೈನಿಕರಿದ್ದರೋ

ನುಯಾಯಿನಃ ॥ ಪಲಾಯನಪರಾಃಸರ್ವೇ(ಸ್ವಸ್ವಪ್ರಾಣಪರೀಪ್ಸವಃ ॥೬೧॥ ಅಥವಿಘ್ನೇಶ್ವರೋದೈತ್ಯಂ ಶುಂಡೇನಾಕೃಷ್ಯಲೀಲಯಾ ॥ ಸ್ವಪಾದಪಲ್ಲವತಟಮಾನೀಯ ವಿಬುಧರ್ಷಭಃ ॥ ೬೨ ॥ ನೇತ್ರಾಭ್ಯಾಮಶ್ರುಮುಂಚಂತಂದೃಷ್ಟ್ವಾಸೀತ್ಕರುಣಾರ್ದ್ರಧೀಃ ॥ ತಸ್ಮಿನ್ ಕ್ಷಣೇತಸ್ಯದಾರಾಃ ಪುತ್ರಭೃತ್ಯಸಮನ್ವಿತಾಃ ॥ ೬೩ ॥ ಪ್ರೋಚುಃ ಪ್ರಾಂಜಲಯಃಸರ್ವಾಃಸ್ವಾಮಿನ್ರಕ್ಷಸ್ವನಃಪತಿಂ॥ ಹಂತುಂನಾರ್ಹಸಿದೇವೇಶತ್ವಾಂವಯಂಶರಣಂಗತಾಃ ॥೬೪॥ ಶ್ರುತ್ವಾತದ್ದೈನ್ಯವಚನಂ ದೃಷ್ಟ್ವಾದೈತ್ಯಂತಥಾವಿಧಂ। ಕೃಪಾನಿಧಿರ್ಗಣಾಧ್ಯಕ್ಷೋಮಾಭೈಷ್ಟೇತ್ಯಭಯಂದದೌ ॥೬೫॥ ದತ್ವ್ವಾಭಯಂತುದೇವೇಶ ಉವಾಚ ದಿತಿನಂದನಂ । ಕಿಮಿಚ್ಛಸಿವದಸ್ವಾದ್ಯತತ್ತಥೈವಕರೋಮ್ಯಹಂ

ಅವರೆಲ್ಲ ಜನರೂ ತಮ್ಮ ತಮ್ಮ ಪ್ರಾಣರಕ್ಷಣೆಯ ಇಚ್ಛೆಯಿಂದ ಓಡಿದರು ॥ ೬೧ ॥ ಆಮೇಲೆ ದೇವೋತ್ತಮನಾದ ಶ್ರೀ ವಿಘ್ನೇಶ್ವರನು ಸೊಂಡಿಲಿನಿಂದ ಆ ದೈತ್ಯಾಧಿಪನನ್ನು ತನ್ನ ಚರಣಕಮಲದ ಸನ್ನಿಧಿಗೆ ಸಂತೋಷದಿಂದ ಎಳೆತಂದು ॥೬೨॥ ಎರಡು ಕಣ್ಣುಗಳಿಂದ ನೀರನ್ನು ಸುರಿಸುತ್ತಿರುವ ಆ ದೈತ್ಯನನ್ನು ನೋಡಿ ಕರುಣದಿಂದ ಕೂಡಿರುವ ಬುದ್ಧಿಯುಳ್ಳವನಾದನು. ಆಕ್ಷಣದಲ್ಲಿಯೇ ಆತನ ಮಕ್ಕಳೂ, ಸೇವಕರೂ ತರಾದ ಹೆಂಡಿರುಗಳೂ ಬಂದು ॥೬೩॥ ಎಲೈ ದೇವೇಶನೇ, ಸ್ವಾಮಿಯೇ ನಮ್ಮ ಪತಿಯನ್ನು ರಕ್ಷಿಸು, ಕೊಲ್ಲುವುದಕ್ಕೆ ಇಚ್ಛಿಸಬೇಡ. ನಾವು ಎಲ್ಲರೂ ನಿನ್ನನ್ನು ಮರೆಹೊಕ್ಕೆವು ಎಂದು ಕೈ ಜೋಡಿಸಿದವರಾಗಿ ಬೇಡಿದರು ॥ ೬೪ ॥ ಆಗ ಶ್ರೀ ಗಣೇಶನು ಅವರ ದೈನ್ಯವಚನವನ್ನು ಕೇಳಿ ಹಾಗಿರುವ ಆ ದೈತ್ಯನನ್ನು ನೋಡಿ ದಯಾಶೀಲನಾಗಿ ಹೆದರಬೇಡಿ ಎಂದು ಅಭಯವನ್ನು ಪಾಲಿಸಿದನು ॥ ೬೫ ॥ ಹೀಗೆ ಆ ಸ್ತ್ರೀಯರಿಗೆ ಅಭಯವನ್ನು ಕೊಟ್ಟು ಆ ದೇವನು ಆ ದೈತ್ಯನನ್ನು ಕುರಿತು ಈಗ ನೀನು ಏನನ್ನು ಬಯಸುವೆ ಹೇಳು ಅದನ್ನೆಲ್ಲಾ ಕೊಡುವೆನು,

॥೧೬॥ ಇತ್ಯುಕ್ತ್ವಾ ವಿಸಸರ್ಜಾಥದೈತ್ಯೇಂದ್ರಂ ಗಣನಾಯಕಃ॥ ವಿಸರ್ಜಿತಸ್ತದಾ ದೈತ್ಯಃಪ್ರಾಂಜಲಿರ್ದೇವಮಬ್ರವೀತ್ ।೧೭॥ ಧನ್ಯೋಸ್ಮಿದೇವವಿಘ್ನೇಶನಯಾಸ್ಯೇಭವಸಾಗರಂ। ಯದಾಶುಂಡಗೃಹೀತೋಹಮನುಭೂತಂತದೈವಯತ್ ॥೧೮॥ ಬ್ರಹ್ಮಾನಂದಸುಖಂವಕ್ತುಂ ಬ್ರಹ್ಮಣಾಪಿನಶಕ್ಯತೇ । ಯದಾಸ್ಪೃಷ್ಟಸ್ತುದೇವೇಶ ಶುಂಡೇ ನರಣಾಮೂರ್ಧನಿ ॥೧೯॥ ತದೈವವಿಸ್ಮೃತೋದೇವದೈತ್ಯಭಾವಃಸ್ವಪಾಪಜಃ। ಯೋಜಿತೋಬ್ರಹ್ಮಸದನಂಯದ್ಯೋಗಿಧ್ಯಾನಮಂಗಲಂ ॥ ೨೦ ॥ ತತ್ರದೇವಂ ಚತುರ್ಬಾಹುಂಶ್ವೇತವಕ್ತ್ರಂಜಗನ್ಮಯಂ । ಪೀತಾಂಬರಧರಂಶಾಂತಂಶೇಷಪರ್ಯಂಕಶಾಯಿನಂ ॥೨೧॥ ಶ್ರಿಯಾಜ್ವಲಂತ

ಎಂದು ಕರುಣಿಸಿದನು ॥ ೧೬ ॥ ಹೀಗೆ ದಯಪಾಲಿಸಿದ ಶ್ರೀಗಣೇಶನು ಆ ದೈತ್ಯೇಂದ್ರನನ್ನು ಬಿಟ್ಟುಬಿಟ್ಟನು. ಬಿಡಿಸಿಕೊಂಡ ಆ ತಾಳಾಸುರನು ಅಂಜಲಿಯನ್ನು ಜೋಡಿಸಿ ಶ್ರೀಭಗವಂತನನ್ನು ಪ್ರಾರ್ಥಿಸುತ್ತಾನೆ ॥೧೭॥ ಎಲೈ ದೇವನಾದ ವಿಘ್ನೇಶ್ವರನೇ ಈಗ ಧನ್ಯನಾಗಿದ್ದೇನೆ. ಇನ್ನು ಸಂಸಾರಸಮುದ್ರವನ್ನು ಸೇರಲಾರೆನು. ಯಾವಾಗ ಸೊಂಡಲಿನಿಂದ ಹಿಡಿಸಿಕೊಂಡೆನೋ ಆ ಮೊದಲು ಅನುಭವಿಸಿದ ಸುಖವು ಯಾವುದೋ ಅದನ್ನು ನಾನು ಹೇಳಲಸಾಧ್ಯವು ॥೧೮॥ ಮತ್ತು, ಆ ಬ್ರಹ್ಮಾನಂದ ಸುಖವನ್ನು ಚತುರ್ಮುಖನಿಂದಲೂ ಹೇಳಲಸಾಧ್ಯವಾಗಿರುವುದು. ಎಲೈ ದೇವೇಶ್ವರನೇ ಯಾವಾಗ ಯುದ್ಧದಲ್ಲಿ ಸೊಂಡಲಿನಿಂದ ಮುಟ್ಟಿಸಿಕೊಂಡೆನೋ ॥ ॥ ೧೯ ॥ ಆ ಕ್ಷಣದಲ್ಲಿಯೇ ನಿನ್ನ ಪ್ರಭಾವದಿಂದ ದೈತ್ಯಭಾವವೂ ದಾಟಿ ನಿರರ್ಥಕವಾಯಿತು. ಕೂಡಲೆ ಯೋಗಿಗಳಿಂದ ಧ್ಯಾನಿಸುವುದಕ್ಕೆ ಯೋಗ್ಯವಾಗಿ ಮಂಗಲವಾದ ಪರಬ್ರಹ್ಮ ಸ್ಥಾನವನ್ನು ಸೇರಿಸಿಕೊಂಡವನಾದೆನು ॥೨೦॥ ಅಲ್ಲಿ ದೇವನಾದ ನಾಲ್ಕು ಕೈಯುಳ್ಳ, ನಗೆಮೊಗನಾದ, ಜಗನ್ಮಯನಾದ, ಅರಿಸಿನ ಬಣ್ಣದ ಪಟ್ಟೆಗಳನ್ನು ಧರಿಸಿರುವ ಶಾಂತನಾದ ಮಹಾಶೇಷನೆಂಬ ಮಂಚದಲ್ಲಿ ಮಲಗಿರುವ ॥ ೨೧ ॥ ಶ್ರೀ ಲಕ್ಷ್ಮೀದೇವಿಯಿಂದ ಹೊಳೆಯುತ್ತಿರುವ, ಕಾಣಿಸಿಕೊಳ್ಳದಿರುವ

ಮವ್ಯಕ್ತಂಜಗತ್ಕಾರಣಕಾರಣಂ । ಸಂಸ್ತುತಂಸನಕಾದ್ಯೈಶ್ಚ ಬ್ರಹ್ಮರುದ್ರಾದಿಭಿರ್ಮುದಾ ॥ ೨೨ ॥ ಯದಾದದರ್ಶವರದಂತದಾಸೌ ಪ್ರೀತಚೇತನಃ । ಆಗಚ್ಛವತ್ಸೋಪವಿಶಚೇತ್ಥಂಪ್ರಾಹದಯಾನಿಧಿಃ ॥ ೨೩ ॥ ಇತಿಬ್ರುವಂತಂತಂದೇವಂವಿವಕ್ಷುರಿಹಸಂಗತಃ ॥ ಕೇನಚಿತ್ಕಾರಣೇನೈವನಜಾನೇತದ್ಗಣೇಶ್ವರ ॥ ೨೪ ॥ ಸೋಽಸಿತ್ವಮೇವವಿಶ್ವಾತ್ಮನ್ನತ್ವಾಂತ್ಯಕ್ತುಮಿಹೋತ್ಸಹೇ ॥ ಇಹತಿಷ್ಠತುಮೇಪುತ್ರಸ್ತಸ್ಮಾತ್ಸಜ್ಞಾತಿಬಾಂಧವಃ ॥ ಅಸ್ಯಾಪಿತೇಪದದ್ವಂದ್ವಭಕ್ತಿರವ್ಯಭಿಚಾರಿಣೀ ॥ ಇತಿಪ್ರಸೀದದೇವೇಶತ್ವಾಮಹಂಶರಣಂಗತಃ ॥೨೫॥ ॥೨೬॥ ತಚ್ಛ್ರುತ್ವಾದೈತ್ಯವಚನಂತತ್ಪುತ್ರಂನಿಧಿಸಂಜ್ಞಿತಂ॥ ತನ್ಮಂ

ಪ್ರಪಂಚದಕಾರಣಗಳಿಗೆ ಕಾರಣನಾದ, ಸನಕಾದಿ ಋಷಿಗಳಿಂದ ಬ್ರಹ್ಮದೇವನಿಂದ, ಏಕಾದಶ ರುದ್ರರಿಂದ, ಸಂತೋಷದಿಂದ ಸ್ತುತಿಸಿಕೊಳ್ಳುತ್ತಿರುವ ॥ ೨೨ ॥ ಇಷ್ಟಾರ್ಥ ಕೊಡುವ ಆ ದೇವನನ್ನು ಯಾವಾಗ ಕಂಡೆನೋ ಆಗ ಈತನೇ ಶ್ರೀ ಪತಿಯಾದ ದಯಾಳುವಾದ,ದೇವನು, ಬಾ ಮಗನೇ ಕೂತುಕೋ ಎಂದು ನನ್ನನ್ನು ಅನುಗ್ರಹಿಸಿದನು. ॥ ೨೩ ॥ ಈ ಪ್ರಕಾರವಾಗಿ ಕರುಣಿಸುತ್ತಿರುವ ಆ ದೇವನನ್ನು ಕುರಿತು ಏನೋ ಹೇಳಬೇಕು ಎನ್ನುವಷ್ಟರಲ್ಲಿ ಯಾವಕಾರಣದಿಂದಲೋ ಇಲ್ಲಿಬಂದೆನು. ಅದನ್ನು ನಾನರಿಯೆ ॥ ೨೪ ॥ ಅಲ್ಲಿ ಕಂಡ ದೇವನೇ ನೀನಾಗಿದ್ದೀಯೆ. ಎಲೈ ವಿಶ್ವರೂಪಿಯೇ ನಿನ್ನನ್ನು ಈಗ ಬಿಡಲಾರೆನು. ನನ್ನ ಮಗನಾದರೋ ಅವನ ತಾಯಿ ಬಂಧುಜ್ಞಾತಿಗಳನ್ನೊಡಗೂಡಿ ಅಲ್ಲಿಯೇ ಇರಲಿ ॥ ೨೫ ॥ ಈ ನನ್ನ ಮಗನಿಗೂ ನಿನ್ನ ಚರಣ ಕಮಲ ಯುಗ್ಮದಲ್ಲಿ ಶಾಶ್ವತ ಭಕ್ತಿಯೂ ಇರಲಿ. ಎಲೈ ಜಗದೀಶನೇ ಪ್ರಸನ್ನನಾಗು. ನಿನ್ನನ್ನು ಮರೆಯುನ್ನು ಹೊಕ್ಕೆನು ॥ ೨೬ ॥ ಹೀಗೆಂದ ಆ ದೈತ್ಯನ ಮಾತನ್ನು ಕೇಳಿ ನಿಧಿಯೆಂಬ ಅವನ ಮಗನನ್ನೂ ಅವನ ಮಂತ್ರಿಯನ್ನೂ ಕರೆದು ಈ ಕುಮಾರನಿಂದೊಡ

ತ್ರಿಣಾಂಸಮಾಹೂಯಪ್ರಾಹಾನೇನಪುರಂವ್ರಜ ॥ ೭೭ ॥ ಪಾಲಯ ಸ್ವಯಥಾನ್ಯಾಯಮಿತ್ಯುಕ್ತಸ್ತೇನವಂದಿತಃ ॥ ಸಂಸ್ಥಾಪ್ಯವಿಂಧ್ಯಶಿಖರೇರಮಣೇಪತ್ತನೇವಿಭುಃ ॥ ೭೮ ॥ ತತಸ್ತಾಳಾಸುರಂಪ್ರಾಹ ಮತಿಸ್ತೇವಿಮಲಾಯತಃ ॥ ಏಷತೇಮುಕ್ತಿಪದವೀಸದೇಹಾಮತ್ಕರಾಗ್ರಗಾ ॥ ೭೯ ॥ ತಥಾಸ್ತ್ವಿತಿವದಂತಂತಮನುಗೃಹ್ಯಸಲೀಲಯಾ ॥ ಶೂಷೇನದೇವಪ್ರವರಃಪರಿವಾರಗಣೈಸ್ಸಹ ॥ ೮೦ ॥ ಗಂತುಂಪ್ರಚಕ್ರಮೇತತ್ರಬ್ರಹ್ಮಾದ್ಯಾಸ್ಸಕಲಾಮರಾಃ । ಬದ್ಧಾಂಜಲಿಪುಟಾನೇಮುಸ್ತದ್ದೈತ್ಯವಧತೋಷಿತಾಃ ॥ ೮೧ ॥ ತುಷ್ಟುವುರ್ಹೃಷ್ಟಮನಸೋದೇವಂತ್ರೈಲೋಕ್ಯವಂದಿತಂ । ಸದಾಶಿವಾಂಗಸಂಭೂತಂ ವೈಕುಂಠಪುರವಾಸಿನಂ ॥ ೮೨ ॥ ದೇವಾಃ ॥ ನಮೋನಮೋಗಣಾ

ಗೂಡಿ ಪುರವನ್ನು ಕುರಿತು ಹೋಗು ॥ ೭೭ ॥ ನ್ಯಾಯವಾಗಿ ಪುರವನ್ನು ಕಾಪಾಡು ಎನ್ನುತ್ತಲೇ ಆ ಮಂತ್ರಿಯು ನಮಸ್ಕರಿಸಿದನು. ಅವರನ್ನು ವಿಂಧ್ಯಪರ್ವತದ ತಲೆಯಲ್ಲಿದ್ದ ರಮಣ ಪಟ್ಟಣದಲ್ಲಿ ನಿಲ್ಲಿಸಿ ॥ ೭೮ ॥ ಸ್ವಾಮಿಯಾದ ಶ್ರೀ ಗಣಪತಿ ದೇವನು ಆಮೇಲೆ ತಾಳಾಸುರನನ್ನು ನಿನ್ನ ಮನಸ್ಸು ನಿರ್ಮಲವಾದುದರಿಂದ ಶರೀರ ಸಹಿತವಾದ ನನ್ನ ಸೊಂಡಲ ತುದಿಯಲ್ಲಿ ನೀನು ಇರು, ಇದೇ ನಿನಗೆ ಮುಕ್ತಿಸ್ಥಾನವು ಆಗಿರುವುದು ॥ ೭೯ ॥ ಹಾಗಾಗಲಿ ಎಂದು ಒಪ್ಪಿದ ಅವನನ್ನು ಸೊಂಡಲಿನಿಂದ ಹಿಡಿದುಕೊಂಡು ಪರಿವಾರಗಳಿಂದ ಕೂಡಿ ॥ ೮೦ ॥ ಪ್ರಯಾಣೋನ್ಮುಖನಾದನು. ಅಲ್ಲಿ ಬ್ರಹ್ಮಾದಿ ಸಮಸ್ತ ದೇವತೆಗಳೂ ಆ ದೈತ್ಯವಧೆಯಿಂದ ತುಷ್ಟರಾಗಿ ಕೈಮುಗಿದವರಾಗಿ ವಂದಿಸಿದರು. ॥ ೮೧ ॥ ಸಂತೋಷ ಮನಸ್ಕರಾಗಿ ತ್ರಿಲೋಕ ಪೂಜಿತನಾದ ವೈಕುಂಠ ಪುರವಾಸಿಯಾದ ಶ್ರೀಪರಮೇಶ್ವರನ ಶರೀರದಿಂದ ಸಂಭವಿಸಿದ ಶ್ರೀ ಮಹಾಗಣಪತಿಯನ್ನು ಸ್ತುತಿಸಿದರು ॥ ೮೨ ॥ ದೇವತೆಗಳು ಎಲ್ಲಾ ಗಣಗಳಿಗೆ ಒಡೆಯನೆ, ಗಜ ರೂಪಿಯೆ, ದೇವೇಶ್ವರನೆ

ಧ್ಯಕ್ಷಗಜರೂಪಿನ್ಸುರೇಶ್ವರ । ನಮೋಲಕ್ಷ್ಮೀಪತೇವಿಷ್ಣೋಪರಮಾ ತ್ಮನ್ನಮೋಸ್ತುತೇ ॥ ೮೩ ॥ ತಾಳಾಸುರಸ್ಯದಮನಾದ್ರಕ್ಷಿತಾಃಸ್ಮವ ಯಂಹರೇ ॥ ಕಾತೇಕೃಪಾದ್ರ್ಗತಿಃದೇವದೈತ್ಯೇಹ್ಯಘಕೃತೀಶ್ವರ ॥ ॥ ೮೪ ॥ ಸೋಪಿತೇಮುಕ್ತಿಪದವೀಂಪ್ರಾಪಿತಃಕರುಣಾನಿಧೇ । ಮಹಿ ಮ್ನಸ್ತವದೇವೇಶಕೋವಾಜಾನಾತಿವೈಭವಂ ॥ ೮೫ ॥ ಪ್ರಸೀದಸರ್ವ ಭಾವೇನಕಿಂಕರೇಭ್ಯೋಜಗತ್ಪತೇ ॥ ಇತಿಸ್ತುತೋಂಬಿಕಾಪುತ್ರ ಉವಾ ಚಸುರಪುಂಗವಾನ್ ॥೮೬॥ ಮಾಭೈಷ್ಟಯಾತಭದ್ರಂವಃಸ್ವಸ್ಥಾನಂ ವಿಗತಜ್ವರಾಃ ॥ ಸ್ಥೀಯತಾಂಸ್ವಾಧಿಕಾರೇಷು ಮಯಿಸದ್ಭಾವಸಂ ಯುತಾಃ ॥೮೭॥ ಇತ್ಯಾಜ್ಞಾಪ್ಯತತೋದೈತ್ಯ ಪುರಾದಾನಾಯ್ಯ ಯೋಷಿತಃ ॥ ಬಹೂನಿಸ್ವರ್ಗರತ್ನಾನಿಪುನಸ್ತೇಭ್ಯಃಪ್ರದಾಪಯನ್॥ ॥೮೮॥ದಾಪಿತಾನಿಗೃಹೀತ್ವೈವಯೋಷಿದ್ಭಿಃಸಹಿತಾಃಸುರಾಃ॥ ಪ್ರಣ

ನಿನಗೆ ನಮೋನಮಃ. ಎಲೈ ಲಕ್ಷ್ಮೀದೇವಿಗೆ ಪತಿಯಾದವನೆ ನಮಸ್ಕಾ ರವು. ಎಲೈ ಮಹಾ ವಿಷ್ಣುವೆ, ಪರಮಾತ್ಮನೇ ನಿನಗೋಸ್ಕರ ನಮಸ್ಕಾ ರವು ॥ ೮೩ ॥ ಎಲೈ ಹರಿಯೆ, ದೇವನೇ ತಾಳಾಸುರನನ್ನು ಮರ್ದಿಸಿ ದುದರಿಂದ ನಾವು ರಕ್ಷಿತರಾದೆವು. ದ್ರೋಹವನ್ನು ಮಾಡಿದವನಾದರೂ ಈ ದೈತ್ಯನಲ್ಲಿ ಎಂತಹ ಅನುಗ್ರಹವನ್ನು ಮಾಡಿದೆ. ಎಲೈ ಸ್ವಾಮಿಯೆ, ॥೮೪॥ ಎಲೈ ಕೃಪಾಸಮುದ್ರನೇ ಅವನು ಕೂಡ ಮುಕ್ತಿಸ್ಥಾನವನ್ನು ಹೊಂದಿದನು. ಇಂತಹ ನಿನ್ನ ಮಹಿಮೆಯನ್ನು ಯಾವನು ಬಲ್ಲನು ॥೮೫॥ ಎಲೈ ಜಗತ್ಸ್ವಾಮಿಯೆ, ಸೇವಕರಾದ ನಮಗೋಸ್ಕರ ಪ್ರಸನ್ನ ನಾಗು ಎಂದು ಸ್ತೋತ್ರಮಾಡಿದರು. ಹೀಗೆ ಸ್ತುತಿಸಲ್ಪಟ್ಟ ಶ್ರೀ ಗಿರಿಜಾ ದೇವಿಯ ಮಗನು ಆ ದೇವಶ್ರೇಷ್ಠರನ್ನು ಕುರಿತು ಹೆದರಬೇಡಿ. ನಿಮ್ಮ ಸ್ಥಾನವನ್ನು ಕುರಿತು ವ್ಯಸನ ರಹಿತರಾಗಿ ಹೋಗಿ ನನ್ನಲ್ಲಿ ಭಕ್ತಿ ಯುಳ್ಳವರಾಗಿ ನಿಮ್ಮ ಅಧಿಕಾರಗಳಲ್ಲಿ ಇರೋಣವಾಗಲಿ ॥೮೬॥ ಹೀಗೆ ಅಪ್ಪಣೆ ಮಾಡಿ ಆಮೇಲೆ ಆ ದೈತ್ಯನ ಪಟ್ಟಣದ ದೆಸೆಯಿಂದ ದೇವಸ್ತ್ರೀ ಯರನ್ನು ಕರೆಯಿಸಿ ಬೇಕಾದಷ್ಟು ಸ್ವರ್ಗದ ರತ್ನಗಳನ್ನು ಆದೇವತೆಗ ಳಿಗೋಸ್ಕರ ಕೊಡಿಸಿದನು ॥ ೮೮ ॥ ಕೊಡಿಸಿದ ರತ್ನಗಳನ್ನು ತೆಗೆದು

ವ್ಯತಂಜಗದ್ವಂದ್ಯಂ ಜಗ್ಮುಃಸ್ವಂಸ್ವಂನಿಕೇತನಂ ॥ ೮೯ ॥ ಅಥ ವಿಘ್ನೇಶ್ವರೋದೇವಃ ಶುಂಡೇನದಿತಿನಂದನಂ ॥ ಗೃಹೀತ್ವೈವಯಯೌಸೈನ್ಯೈಃ ಕುಮಾರಾದಿಭಿರನ್ವಿತಃ ॥ ೯೦ ॥ ಯತ್ರಾಸ್ತೇಭಗವಾನ್ದೇವಃ ಶ್ರೀಕಂಠಸ್ಸಕಲೇಶ್ವರಃ ॥ ಆಗತ್ಯಸ್ವಪಿತುಃಪಾದಾವವಂದತಗಣೇಶ್ವರಃ ॥ ೯೧ ॥ ಆಗತಂಜಯಿನಂಪುತ್ರಮವಲೋಕ್ಯಮಹೇಶ್ವರಃ ॥ ಶ್ರುತ್ವಾಭಿನಂದ್ಯವೃತ್ತಾಂತಂವಿಕಟಂ ಪರಿಷಸ್ವಜೇ ॥ ೯೨ ॥ ಅಥದೇವೀಮಹಾದೇವಃ ಸಮಾಲೋಚ್ಯವಿನಿಶ್ಚಯಂ । ಸಿದ್ಧಿಂಬುದ್ಧಿಂಸಮಾಹೂಯಪ್ರೋಚತುಃಪರಮೇಶ್ವರೌ ॥ ೯೩ ॥ ಯುವಾಂದ್ವಿರದತಾಂಪ್ರಾಪ್ಯಚಾಸ್ಯಭೂಯಾಸ್ತಮಂಗನಾ ॥ ಇತ್ಯುಕ್ತೇತೇ

ಕೊಂಡು ಸ್ತ್ರೀಯರಿಂದ ಸಹಿತರಾದ ದೇವತೆಗಳು ಜಗದೀಶನಾದ ಆ ದೇವನನ್ನು ನಮಸ್ಕರಿಸಿ ತಮ್ಮ ತಮ್ಮ ಸ್ಥಾನವನ್ನು ಹೊಂದಿದರು ೮೯॥ ಆ ಮೇಲೆ ಶ್ರೀ ಮಹಾ ವಿಘ್ನೇಶ್ವರನು ಸೊಂಡಲಿನಿಂದ ಆ ದಿತಿಪುತ್ರನನ್ನು ಹಿಡಿದುಕೊಂಡು ಕುಮಾರಸ್ವಾಮಿ ಮೊದಲಾದ ಸೈನ್ಯಗಳಿಂದ ಕೂಡಿದವನಾಗಿ ಅಲ್ಲಿಂದ ಹೊರಟು ಎಲ್ಲಿ ಭಗವಂತನಾದ ಸರ್ವಸ್ವಾಮಿಯಾದ ನೀಲಕಂಠನಾದ ಶ್ರೀ ಪರಮೇಶ್ವರನು ಇದ್ದನೋ ಅಲ್ಲಿ ಬಂದು ತನ್ನ ತಂದೆಯ ಪಾದಗಳಿಗೆ ನಮಸ್ಕರಿಸಿದನು ॥೯೦॥೯೧॥ ಶ್ರೀ ಮಹೇಶ್ವರನು ವಿಜಯವನ್ನು ಹೊಂದಿ ಬಂದಿರುವ ಮಗನನ್ನು ನೋಡಿ ವಾರ್ತೆಯನ್ನು ಕೇಳಿ ಸಂತೋಷಿಸಿ ಆಲಿಂಗನೆಯನ್ನು ಮಾಡಿದನು ॥೯೨॥ ಅನಂತರ ಕೆಲವು ಕಾಲ ಕಳೆಯುತ್ತಲೆ ಒಂದು ಸಮಯದಲ್ಲಿ ಮಹಾದೇವನು ದೇವಿಯೊಡನೆ ಆಲೋಚಿಸಿ ನಿಶ್ಚಯ ಮಾಡಿಕೊಂಡು ಸಿದ್ಧಿ, ಬುದ್ಧಿಯೆಂಬ ಸ್ತ್ರೀ ದೇವತೆಯರನ್ನು ಕರೆಸಿ ಅಪ್ಪಣೆಯನ್ನು ಮಾಡಿದರು ॥ ೯೩ ॥ ನೀವಿಬ್ಬರೂ ಈ ಗಜ ರೂಪನಾದ ಗಣಪತಿಗೆ ಅದೇ ಆಕಾರವನ್ನು ಹೊಂದಿ ಪತ್ನಿಯಾಗಿರತಕ್ಕದ್ದು ಎಂದು ಅಪ್ಪಣೆಯನ್ನು ಹೊಂದಿದ ಅವರಿಬ್ಬರೂ ಐಕ್ಯದಿಂದ ಅಸದೃಶವಾದ ಒಂದು ಆಕಾರವನ್ನು ಹೊಂದಿ ಗಜರೂಪಿ

ತಥೇತ್ಯುಕ್ತ್ವಾಬಭೂವತುರನೂಪಮಾ ॥ ೯೪ ॥ ಸರ್ವಸೌಭಾಗ್ಯನಿಲಯಾಗಜರೂಪಮನೋಹರಾ । ತಯೋರ್ವಿವಾಹಮಕರೋನ್ಮಹೇಶಃಸಕಲಾಮರೈಃ ॥ ೯೫ ॥ ಮಹಾವಿಭವಸಂಯುಕ್ತಮವಭೃತ್ಯಂ ಯಥಾವಿಧಿ ॥ ವವಂದೇಪಿತರೌದೇವೋಗಣನಾಥಸ್ತ್ರಿಯಾಸಹ ॥೯೬॥ ತದಾಸ್ವಪುತ್ರಮಾಭಾಷ್ಯಪ್ರೋವಾಚ ಗಿರಿಜಾಪತಿಃ ॥ ಪ್ರಯಾಹಿ ಭಾರ್ಯಯಾಸಾರ್ಧಂಭೂಕೈಲಾಸಂ ಸುವಿಸ್ತರಂ ॥೯೭॥ ತುಂಗಭದ್ರಾತಟಸ್ಥಂತತ್ಕಲಶಕ್ಷೇತ್ರಸಂಜ್ಞಿತಂ। ತ್ರೈಲೋಕ್ಯಶಿಖರೀಭೂತಂಕಲಶಂತದ್ಭುವಾಂಧ್ರುವಂ ॥೯೮॥ ಕಲಶೇಪರಿಪೂರ್ಣೇಸ್ಮಿತುಂಗಭದ್ರಾತಟೇಶುಭೇ। ತಂಹತ್ವಾಯೇನರೂಪೇಣ ಹ್ಯಾಗತೋಸಿಮಮಾಂತಿಕಂ ॥೯೯॥ ತೇನೈವತಿಷ್ಠ ಪುತ್ರತ್ವಂಭದ್ರೇಕಲಶಜಾಂಗಲೆ॥

ಣಿಯಾದರು ॥೯೪॥ ಸಕಲ ಶುಭಗಳಿಗೆ ಆಶ್ರಯುಳಾದ, ಮನೋಹರಳಾದ ಗಜರೂಪಿಣಿಯಾದ, ಆ ಸ್ತ್ರೀಗೂ ಹಾಗೆಯೇ ಇದ್ದ ಮಗನಿಗೂ ಇವರಿಬ್ಬರಿಗೆ ಸಮಸ್ತದೇವತೆಗಳಿಂದ ಸಹಿತನಾದ ಶ್ರೀ ಪರಮೇಶ್ವರನು ಮಹಾ ವೈಭವ ಪೂರ್ವಕವಾಗಿ ವಿವಾಹೋತ್ಸವನ್ನೂ ಅವಭೃತವೆಂಬ ಚತುರ್ಥಿ ಪ್ರಸ್ತವನ್ನು ಕೂಡ ಕ್ರಮವಾಗಿ ನೆರವೇರಿಸಿದನು. ತಂದೆಯಿಂದ ಹೀಗೆ ಸಂತೋಷಿಸಲ್ಪಟ್ಟ ಆ ಗಣಪತಿ ದೇವನು ತನ್ನ ಪತ್ನಿಯಿಂದ ಸಹಿತನಾಗಿ ತಂದೆಯ ಚರಣಗಳನ್ನು ನಮಸ್ಕರಿಸಿದನು ॥೯೫॥೯೬॥ ಆಗ್ಯೆ ಶ್ರೀ ಪಾರ್ವತೀ ಪತಿಯು ಮಗನನ್ನು ಕರೆದು ತುಂಗಭದ್ರಾ ತಟದಲ್ಲಿರುವ ಮೂರು ಲೋಕಕ್ಕೂ ಶಿಖರದಂತಿರುವ ಭೂಪ್ರದೇಶಕ್ಕೆ ಕಲಶವಾಗಿರುವ ವಿಸ್ತಾರವಾದ ಭೂಕೈಲಾಸವೆಂಬ ಕಲಶಕ್ಷೇತ್ರವನ್ನು ಕುರಿತು ಪತ್ನಿಯಿಂದ ಸಹಿತನಾಗಿ ಪ್ರಯಾಣಮಾಡು ಎಂದು ಅಪ್ಪಣೆಕೊಟ್ಟರು ॥೯೭॥೯೮॥ ತುಂಗಭದ್ರಾ ತಟದಲ್ಲಿದ್ದ ಮಂಗಲವಾದ ಕಲಶದಲ್ಲಿ ನಾನು ಸಂಪೂರ್ಣ ಸಾನ್ನಿಧ್ಯನಾಗಿದ್ದೇನೆ. ಆ ತಾಳಾಸುರನನ್ನು ಕೊಂದು ಯಾವ ರೂಪದಿಂದ ನನ್ನ ಸನ್ನಿಧಿಯನ್ನು ಕುರಿತು ಬಂದೆಯೋ ॥ ೯೯ ॥ ಆ ರೂಪದಿಂದಲೇ ಶುಭವಾದ ಕಲಶವೆಂಬ

ತತ್ರಸ್ಥಿತ್ವಾವಿಘ್ನರಾಜಭಕ್ತಾನಾಮಿಷ್ಟದೋಭವ ॥ ೧೦೦ ॥ ಯಂ ಯಂಕಾಮಯತೇಲೋಕಸ್ತತ್ತತ್ಕಾರ್ಯವದಸ್ವಹ । ತತ್ರಗಚ್ಛಸ ಭಾಗ್ಯಸ್ತ್ವಂಸರ್ವೇಷಾಂಹಿತಕಾಮ್ಯಯಾ ॥ ೧೦೧ ॥ ದೇವಾದಯ ಸ್ತ್ವಾಂಸಂಪೂಜ್ಯಪರಿಪೂರ್ಣಮನೋರಥಾಃ ॥ ಅಹೋತ್ವಾಮ ಚ್ಯಪಶ್ಚಾನ್ಮಾಂಯೇಪಶ್ಯಂತಿನರಾದಯಃ ॥ ೧೦೨ ॥ ತೇಷಾಂ ದದ್ಯಾಮಿಷ್ಟಸಿದ್ಧಿಮಿಹಲೋಕೇಪರತ್ರಚ ॥ ಅಹೋತ್ವಾಂವಿಘ್ನ ಹರ್ತಾರಮಸಂಪೂಜ್ಯನರಾದಯಃ ॥ ೧೦೩ ॥ ಮಾಂಪೂಜಯಂ ತಿಚೇಷ್ಟಾರ್ಥಾನ್ನದಾಸ್ಯಾಮಿನಸಂಶಯಃ ॥ ಉತ್ತರೇಕಲಶೇಶಸ್ಯ ದ್ವಾರದೇಶೇಸ್ಥಿರೋಭವ ॥೧೦೪॥ ಅಷ್ಟೋತ್ತರಶತೈರ್ವತ್ಸದೂ ರ್ವಾಯುಗ್ಮೈಸ್ಸಚಂದನೈಃ । ಯೇಪೂಜಯಂತಿ ಮನುಜಾಸ್ತೇ

ಅರಣ್ಯಪ್ರದೇಶದಲ್ಲಿ ಇರು. ಎಲೈ ವಿಘ್ನರಾಜನೇ ಅಲ್ಲಿಯೇ ಇದ್ದುಕೊಂಡು ಸೇವಕರಿಗೆ ಇಷ್ಟಾರ್ಥದಾಯಕನಾಗು ॥ ೧೦೦ ॥ ಜನರು ಯಾವುದ ನ್ನು ನಿನ್ನಲ್ಲಿ ಬಯಸುವರೋ ಅದೂ ಇಷ್ಟಾರ್ಥವನ್ನು ಕೊಡುವವ ನಾಗು. ಸರ್ವರಿಗೂ ಹಿತವಾಗುವ ಇಚ್ಛೆಯಿಂದ ಪತ್ನೀ ಸಹಿತನಾಗಿ ಅಲ್ಲಿ ಗೆ ಹೋಗು ॥೧೦೧॥ ದೇವತೆಗಳು ಮೊದಲಾದವರು ನಿನ್ನನ್ನು ಪೂಜಿಸಿ ಮನೋರಥ ಪೂರ್ತಿಯನ್ನು ಹೊಂದಿದವರಾಗಲಿ. ಎಲೈ ವಿಘ್ನಕರ್ತನೇ ಮನುಷ್ಯ ಮೊದಲಾದವರು ಯಾರು ನಿನ್ನನ್ನು ಪೂಜಿಸಿ ಆ ಮೇಲೆ ನನ್ನನ್ನು ನೋಡುವರೋ ॥ ೧೦೨ ॥ ಅಂಥವರಿಗೆ ಇಹ ಪರ ಲೋಕದಲ್ಲಿ ಇಷ್ಟಾರ್ಥವನ್ನು ಕೊಡುವೆನು. ವಿಘ್ನನಾಶಕನಾದ ನಿನ್ನ ನ್ನು ಯಾವ ಮನುಷ್ಯ ಮೊದಲಾದವರು ಪೂಜಿಸದ ॥ ೧೦೩ ॥ ನನ್ನ ನ್ನು ಪೂಜಿಸುವರೋ ಅವರಿಗೆ ಇಷ್ಟಾರ್ಥವನ್ನು ಕೊಡುವುದಿಲ್ಲ ನಿಶ್ಚಯವು. ಶ್ರೀಕಲಶೇಶ್ವರದೇವನ ಉತ್ತರದ ಬಾಗಿಲಲ್ಲಿ ಸ್ಥಿರನಾಗಿರು ॥೧೦೪॥ ಎಲೈ ಮಗನೇ, ಯಾವ ಮನುಷ್ಯರು ಚಂದನ ಯುಕ್ತವಾದ ನೂರೆಂಟು ದೂರ್ವಾಯುಗ್ಮಗಳಿಂದ ಪೂಜಿಸುವರೋ ಅವರಿಗೋ

ಭ್ಯೋದೇಯಃಶ್ರಿಯಃಸ್ಥಿರಾಃ ॥೧೦೫॥ ಪಿತೃಶಾಪವಿಮುಕ್ತ್ಯರ್ಥಂ ಬಿಲ್ವಪತ್ರೈಸ್ಸಕೋಮಲೈಃ॥ ಯೇರ್ಚಯಂತಿನರಾಸ್ತೇಷಾಂಶಾಪೋನಶ್ಯತುತತ್ಕ್ಷಣೇ ॥ ೧೦೬ ॥ ಮಾತೃಶಾಪಾದಿಶಾಪೇಭ್ಯಃ ಪೀಡಿತಾಯೇನರಾಭುವಿ। ತೇತ್ರಚಾಪವಿನಾಶಾಯಮೋದಕೈರ್ಘೃತಪಾಚಿತೈಃ ॥೧೦೭॥ ಶರ್ಕರಾಸಹಿತೈಸ್ತ್ವಾಂತುಪೂಜಯಂತ್ರುಶುಭಾರ್ಥಿನಃ। ಋಣಭಾರಯುತೋಯಸ್ತುಮಾಸಮೇಕಂನಿರಂತರಂ ॥ ೧೦೮ ॥ ಘೃತಪಕ್ವಪೂರಿಕೈರೇವಮೇಕವಿಂಶತಿಭಿರ್ನರಃ॥ ಪ್ರತ್ಯಹಂಪೂಜಯೇತ್ಜ್ಞಾತ್ವಾಋಣಭಾರೋವಿನಶ್ಯತಿ ||೧೦೯|| ದ್ವಾದಶೈಃಶ್ರೀಫಲೈರ್ಯಸ್ತ್ವಾಂಪೂಜಯಿಷ್ಯತಿಭಕ್ತಿತಃ ॥ ತಸ್ಯತತ್ಕಾಲಸಿದ್ಧಿಸ್ಸ್ಯಾದರ್ಥನಾನುಗುಣಾನ್ನೃಣಾಂ||೧೧೦|| ಪುತ್ರಾರ್ಥೀ

ಸ್ಕರ ಶಾಶ್ವತವಾದ ಸಂಪತ್ತನ್ನು ಕೊಡು ॥ ೧೦೫ ॥ ಯಾವ ಮನುಷ್ಯರು ಪಿತೃಶಾಪಗ್ರಸ್ತರಾಗಿರುವರೋ ಅವರು ಮೃದುಗಳಾದ ನೂರೆಂಟು ಬಿಲ್ವಪತ್ರಗಳಿಂದ ಪೂಜಿಸುವರೋ ಅವರಿಗೆ ಆ ಕ್ಷಣವೇ ಶಾಪದ ದೆಸೆಯಿಂದ ಬಿಡುಗಡೆಯಾಗುವುದು ॥ ೧೦೬ ॥ ಯಾರು ಭೂಲೋಕದಲ್ಲಿ ಮಾತೃ ಶಾಪ ಮೊದಲಾದ ಶಾಪಗಳ ದೆಸೆಯಿಂದ ಪೀಡಿತರಾಗಿರುವರೋ ಅಂಥವರು ಆ ಶಾಪ ಪರಿಹಾರಕ್ಕೋಸ್ಕರ ತುಪ್ಪದಿಂದ ಕರಿದ ಸಕ್ಕರೆಯಿಂದ ಕೂಡಿದ ಕಡುಬುಗಳಿಂದ ನಿನ್ನನ್ನು ಪೂಜಿಸಲಿ. ಶುಭವನ್ನು ಬಯಸುವರು ಶುಭವನ್ನು ಹೊಂದುವರು. ಯಾವಾತನು ಸಾಲದಿಂದ ಪೀಡಿತನಾಗಿರುವನೋ ಅಂಥವನು ಬಿಡದೆ ಒಂದು ತಿಂಗಳು ||೧೦೭ ||೧೦೮ || ತುಪ್ಪದಿಂದ ಕರಿದ ಇಪ್ಪತ್ತೊಂದು ಪೂರಿಗಳಿಂದ ಪ್ರತಿನಿತ್ಯವೂ ಪೂಜಾಕ್ರಮ ತಿಳಿದು ಪೂಜಿಸುವನೋ ಅವನಿಗೆ ಅಪಾರವಾದ ಸಾಲವಿದ್ದರೂ ಪರಿಹಾರವಾಗುವುದು || ೧೦೯ || ಯಾವಾತನು ಏನನ್ನು ಬಯಸಿ ಹನ್ನೆರಡು ಬೇಲದ ಹಣ್ಣುಗಳಿಂದ ನಿನ್ನನ್ನು ಪೂಜಿಸುವನೋ ಅವನಿಗೆ ಅಪೇಕ್ಷೆಯಂತೆ ಆ ಕಾಲಾನುಗುಣವಾದ ಸಿದ್ಧಿಯೂ ಆಗಲಿ ||೧೧೦|| ಪುತ್ರಾಪೇಕ್ಷೆಯಾದ ಬ್ರಾಹ್ಮಣನು ನೂರೆಂಟು ತೆಂಗಿನ

ನಾಳಿಕೇರಾದ್ಯೈ ರಷ್ಟೋತ್ತರ ಶತೈರ್ದ್ವಿಜಃ || ಯಥಾವಿಧಿಹುನೇ
ದ್ವಹ್ನಾವಷ್ಟದ್ರವ್ಯೈರ್ಮನೋಹರೈಃ || ೧೧೧ || ಸುಪುತ್ರೋ
ಜಾಯತಾಂ ತಸ್ಯದೀರ್ಘಾಯುಃ ಕುಲನಂದನ । ಯಂಯಂಕಾ
ಮಾಯತೇಮರ್ತ್ಯ ಇಹಲೋಕೇಪರತ್ರಚ || ೧೧೨ || ತತ್ತತ್ಸೇವಾ
ನುಗುಣಿಕಾಮಿಷ್ಟಸಿದ್ಧಿಂಪ್ರದಾಸ್ಯಸಿ । ಇತಿದತ್ವಾವರಂಶಂಭುರ್ಗ
ಮಯಾಮಾಸಚಾತ್ಮಜಂ || ೧೧೩ || ತತೋವಿಘ್ನೇಶ್ವರಃಪ್ರೀತೋ
ಜಗದೀಶೌಪ್ರಣಮ್ಯಚ । ಯಯೌಸ್ವಭಾರ್ಯಯಾಸಾರ್ಧಂಕಲಶ
ಕ್ಷೇತ್ರಮುತ್ತಮಂ || ೧೧೪ || ಮುದಾಪರಮಯಾಯುಕ್ತಃಪ್ರಾ
ಪ್ಯಶ್ರೀಕಲಶೇಶ್ವರಂ || ಪ್ರಣಮ್ಯಚಾಜ್ಞಯಾತಸ್ಯಕೌಬೇರಂದ್ವಾರ
ಮಾಶ್ರಿತಃ || ೧೧೫ || ರಾಜತೇಭುವಿವಿಘ್ನೇಶೋಭಕ್ತಾನಾಮಿಷ್ಟ

ಕಾಯಿಗಳಿಂದ ಶಾಸ್ತ್ರಾನುಸಾರವಾಗಿ ಅಗ್ನಿಯಲ್ಲಿ ಉತ್ತಮವಾದ
ಅಷ್ಟದ್ರವ್ಯಗಳಿಂದ ಹೋಮವನ್ನು ಮಾಡಲಿ || ೧೧೧ || ಅಂತಹವನಿಗೆ
ವಂಶೋದ್ಧಾರಕನಾದ ದೀರ್ಘಾಯುಷ್ಯವುಳ್ಳ ಮಗನು ಹುಟ್ಟು
ವನು. ಮನುಷ್ಯನು ಇಹಪರಗಳಲ್ಲಿ ಯಾವ ಯಾವ ಅಪೇಕ್ಷೆ
ಯನ್ನು ಬಯಸುವನೋ || ೧೧೨ || ಆಯಾ ಸೇವೆಯ
ಅನುಸಾರವಾದ ಇಷ್ಟಾರ್ಥವನ್ನು ಕೊಡುತ್ತಿರು. ಹೀಗೆ ಪರಮೇಶ್ವ
ರನು ವರವನ್ನು ಕೊಟ್ಟು ಮಗನನ್ನು ಕಳುಹಿಸಿದನು ||೧೧೩|| ಅನಂ
ತರ ಶ್ರೀಗಣೇಶನು ಪ್ರೀತನಾಗಿ ತಂದೆ ತಾಯಿಗಳಾದ ಆ ಪಾರ್ವತೀಪರ
ಮೇಶ್ವರರನ್ನು ನಮಸ್ಕರಿಸಿ ಉತ್ತಮವಾದ ಕಲಶ ಕ್ಷೇತ್ರವನ್ನು
ಕುರಿತು ತನ್ನ ಪತ್ನಿಯಿಂದೊಡಗೂಡಿ ಪ್ರಯಾಣ ಮಾಡಿದನು ||೧೧೪||
ಬಹಳ ಸಂತೋಷದಿಂದ ಕೂಡಿದವನಾಗಿ ಶ್ರೀ ಕಲಶೇಶ್ವರನನ್ನು
ಹೊಂದಿ ನಮಸ್ಕರಿಸಿ ಆ ದೇವನ ಅಪ್ಪಣೆಯಿಂದ ಉತ್ತರ ದ್ವಾರ
ವನ್ನು ಆಶ್ರಯಿಸಿಕೊಂಡಿದ್ದಾನೆ || ೧೧೫ || ಇಂಥಾ ವಿಘ್ನೇಶ್ವರ
ದೇವನು ಸಿದ್ಧಿ ಬುದ್ಧಿ ಎಂದು ಪ್ರಸಿದ್ಧರಾದ, ಗಜರೂಪಿಣಿಯಾದ

ದಾಯಕಃ ॥ ಸಿದ್ಧಿಬುದ್ಧ್ಯಾಖ್ಯಯಾದೇವ್ಯಾಭಾರ್ಯಯಾಗಜರೂ
ಪಯಾ ॥ ೧೧೬ ॥ ಯಇದಂಶೃಣುಯಾನ್ನಿತ್ಯಂಶ್ರಾವಯೇದ್ವಾ
ಸಮಾಹಿತಃ । ತಸ್ಯೇಷ್ಟಸಿದ್ಧಿರ್ಭವತಿಗಣನಾಥಪ್ರಸಾದತಃ॥೧೧೭॥
ವಿದ್ಯಾರ್ಥೀಲಭತೇವಿದ್ಯಾಂಧನಾರ್ಥೀಲಭತೇಧನಂ। ಜ್ಞಾನಾರ್ಥೀ
ಲಭತೇಜ್ಞಾನಂಮೋಕ್ಷಾರ್ಥೀಮೋಕ್ಷಮಾಪ್ನುಯಾತ್ ॥ ೧೧೮ ॥
ಗುಹ್ಯಾದ್ಗುಹ್ಯತಮಂಚೈತದ್ಗಣನಾಥಸ್ಯವೈಭವಂ ॥ ಸರ್ವಪಾಪಪ್ರ
ಶಮನಮಾಯುರಾರೋಗ್ಯವರ್ಧನಂ ॥೧೧೯॥ ಯಃಪಠೇಚ್ಛೃಣು
ಯಾದ್ವಾಪಿಸಧನ್ಯೋಮಾನವೋಭುವಿ । ತಸ್ಯಾನಿಷ್ಟವಿನಾಶೇಚಹೇ
ತುರಿಷ್ಟಾರ್ಥಸಾಧನೇ ॥ ೧೨೦ ॥ ಭವತ್ಯೇವಗಣಾಧ್ಯಕ್ಷೋಗಜ

ಪತ್ನಿಯಿಂದ ಕೂಡಿ ಭಕ್ತರಿಗೆ ಇಷ್ಟಾರ್ಥದಾಯಕನಾಗಿ ಈ ಭೂಲೋಕದಲ್ಲಿ ಪ್ರಕಾಶಿಸುತ್ತಿರುವನು ||೧೧೬|| ಈ ಪ್ರಕಾರವಾದ ಶ್ರೀಗಣೇಶಸ್ವಾಮಿಯ ಮಹಿಮೆಯಾದ ಈ ಚರಿತ್ರವನ್ನು ಯಾವನು ಕೇಳುವನೋ ಯಾವನು ಓದುವನೋ ಅವನ ಇಷ್ಟಾರ್ಥ ಸಿದ್ಧಿಯು ಶ್ರೀಮಹಾಗಣಪತಿದೇವನ ಅನುಗ್ರಹದ ದೆಸೆಯಿಂದ ಆಗುವುದು ॥ ೧೧೭ ॥ ಓದಿ ಕೇಳಿದವನು ವಿದ್ಯಾರ್ಥಿಯಾದರೆ ವಿದ್ಯವನ್ನೂ ಧನಾಪೇಕ್ಷಿಯಾದರೆ ಧನವನ್ನೂ ಜ್ಞಾನಾಪೇಕ್ಷಿಯಾದರೆ ಜ್ಞಾನವನ್ನೂ ಮುಕ್ತಿಅಪೇಕ್ಷಿತವಾದರೆ ಮುಕ್ತಿಯನ್ನೂ ಹೊಂದುವನು ||೧೧೮|| ಈ ಗಣೇಶ ಚರಿತ್ರವು ಗೋಪ್ಯವಾದುದರ ದೆಸೆಯಿಂದಲೂ ಗೋಪ್ಯವಾಗಿರುವುದು. ಸಮಸ್ತಪಾಪವನ್ನೂ ನಾಶಿಸುವುದು. ಆಯುಷ್ಯವನ್ನೂ ಆರೋಗ್ಯವನ್ನೂ ಹೆಚ್ಚಿಸುವುದು ||೧೧೯|| ಯಾವಾತನು ಹೇಳುವನೋ ಕೇಳುವನೋ ಅವನು ಈ ಭೂಲೋಕದಲ್ಲಿ ಧನ್ಯನಾಗಿರುವನು ಮತ್ತು ಅವನ ಅನಿಷ್ಟನಾಶವಾಗುವುದರಲ್ಲಿಯೂ ಇಷ್ಟಾರ್ಥಸಿದ್ಧಿಯಾಗುವುದರಲ್ಲಿಯೂ ಶ್ರೀ ಮಹಾ ಗಣಪತಿ ದೇವನು ಕಾರಣನಾಗಿರುವನು ||೧೨೦|| ಇಂತಹ ಜಗನ್ಮಯನಾದ ಶ್ರೀ ಮಹಾಗಣಪತಿ ದೇವನು ಪ್ರತ್ಯಕ್ಷನಾದ ಶ್ರೀ ಕಲಶೇಶ್ವರ

ರೂಪೀಜಗನ್ಮಯಃ । ಸಾಕ್ಷಾಚ್ಛ್ರೀಕಲಶೇಶಸ್ಯ ಚೋತ್ತರದ್ವಾರ ಮಾಶ್ರಿತಃ ॥ ೧೨೧ ॥

ಇತೀ ಶ್ರೀ ಕಲಶೇಶ್ವರ ಮಾಹಾತ್ಮ್ಯೇ ಶ್ರೀ ವಿಘ್ನೇಶ್ವರ ಮಹಿಮಾನು ವರ್ಣನಂ ನಾಮೈಕೋನವಿಂಶೋಧ್ಯಾಯಃ.

॥ ಶ್ರೀ ॥ ಶ್ರೀ ॥

ಸ್ವಾಮಿಯುವರ ಉತ್ತರದ್ವಾರವನ್ನು ಆಶ್ರಯಿಸಿ ಇರುವನು ॥೧೨೧॥

ಈ ಪ್ರಕಾರವಾಗಿ ಸ್ಕಂದ ಪುರಾಣ ತುಂಗಭದ್ರಾ ಖಂಡದಲ್ಲಿ ಹೇಳಿರುವ ಶ್ರೀಕಲಶೇಶ್ವರ ಮಹಿಮೆಯಲ್ಲಿ ಶ್ರೀ ವಿಘ್ನೇಶ್ವರ ಮಹಿಮೆಯಾದ ಹತ್ತೊಂಬತ್ತನೆಯ ಅಧ್ಯಾಯವು ಸಂಪೂರ್ಣವಾದುದು.

ಟೀಕಾಯಾಂ ಕನ್ನಡಾಖ್ಯಾಯಾಂ ರಾಮದೈವಜ್ಞಶರ್ಮಣಾ ।
ಏಕೋನವಿಂಶಸ್ಸಂಪೂರ್ಣೋಧ್ಯಾಯಶ್ಚ್ಯಾವ್ರತಾಧುನಾಮುದಾ ॥
ಶ್ರೀಃ ಶ್ರೀಃ.

ಶ್ರೀಋಷಯಊಚುಃ॥ ಸೂತಯದ್ಭವತಾಪೂರ್ವಮುಕ್ತಂ ದೇವಸ್ಯವೈಭವಂ । ಸೂರ್ಯಜೋಕ್ತಮಿತೀಶಸ್ಯತನ್ನೋಬ್ರೂಹಿವಿಚಕ್ಷಣ ॥ ೧ ॥ ಕಿಂವಿಸ್ಮೃತಂಭಗವತಾಸರ್ವಜ್ಞೇನಾಪಿಶಂಭುನಾ। ಸುರಾರ್ಥಂವಾದ್ವಿಜಾರ್ಥಂವಾಕೇನೈವಾರೋಪಿತಂಶಿವೇ ॥ ೨ ॥ ಸೂತಃ ॥ ಶೃಣುಧ್ವಮೃಷಯಃಸರ್ವೇಶಿವಚಿಚ್ಛಕ್ತಿವೈಭವಂ। ಸರ್ವಪಾಪಪ್ರಶಮನಂಗ್ರಹಪೀಡಾವಿನಾಶನಂ ॥ ೩ ॥ ಏಕದಾಸಮಹಾದೇವಃಕೈಲಾಸಶಿಖರೇವಿಭುಃ। ರತ್ನಸ್ತಂಭಶತಾಕೀರ್ಣೇಮುಕ್ತಾಮಾಲಾವಿರಾಜಿತೇ॥೪॥ಮಂದಿರೇಸ್ವರ್ಣರಜಿತೇಮಂಟಪೇಭಗವಾಂಚ್ಛಿವಃ। ರತ್ನಸಿಂಹಾಸನಾಸೀನೋಬ್ರಹ್ಮೋಪೇಂದ್ರಾದಿಭಿರ್ಯುತಃ ॥ ೫ ॥

೨೦ನೆಯ ಅಧ್ಯಾಯ ಪ್ರಾರಂಭ.

ನೈಮಿಶಾರಣ್ಯವಾಸಿಗಳಾದ ಮುನಿಗಳು ಸೂತನನ್ನು ಕೇಳುತ್ತಿದ್ದಾರೆ. ಎಲೈ ಸೂತನೆ, ಹಿಂದೆ ನಿನ್ನಿಂದ ಸೂರ್ಯಪುತ್ರನು ಹೇಳಿದನ್ನು ಜ್ಞಾಪಕಕ್ಕೆ ತಾರದೆ ನಡೆಯಿಸಿದ ಶ್ರೀ ಪರಮೇಶ್ವರನ ಚರಿತ್ರೆಯು ಹೇಳಲ್ಪಟ್ಟಿತು. ಎಲೈ ವಿಚಕ್ಷಣನೇ ॥ ೧ ॥ ಸರ್ವಜ್ಞನಾದ ಪರಮಾತ್ಮನಿಂದ ಯಾವುದು ಮರೆಯಲ್ಪಟ್ಟಿತೋ ಇದು ದೇವಕಾರ್ಯಕ್ಕೋಸ್ಕರವೋ ಬ್ರಾಹ್ಮಣ ಕಾರ್ಯಕ್ಕೋಸ್ಕರವೋ ಯಾವ ಕಾರಣದಿಂದ ಭಗವಂತನಲ್ಲಿ ಇಂಥಾ ವಿಸ್ಮರಣವು ಆರೋಪಿಸಿತು ॥ ೨ ॥ ಸೂತನು, ಎಲೈ ಸಮಸ್ತ ಋಷಿಗಳಿರಾ, ಸರ್ವಪಾಪನಾಶಕವಾಗಿ ನವಗ್ರಹಪೀಡಾ ಪರಿಹಾರಕನಾದ, ಭಗವಂತನ ಜ್ಞಾನಶಕ್ತಿಯ ವೈಭವವನ್ನು ಕೇಳಿ ॥೩॥ ಒಂದಾನೊಂದು ದಿನದಲ್ಲಿ ಸ್ವಾಮಿಯಾದ, ಭಗವಂತನಾದ, ಮಂಗಳಸ್ವರೂಪನಾದ ಶ್ರೀ ಪರಮೇಶ್ವರನು ಅನೇಕ ರತ್ನಸ್ತಂಭಗಳಿಂದ ಕೂಡಿರುವ ಮುತ್ತಿನ ಸರಗಳಿಂದ ಪ್ರಕಾಶಿಸುವ ಕೈಲಾಸದಲ್ಲಿರುವ ॥ ೪ ॥ ದಿವ್ಯಭವನದಲ್ಲಿ ಸುವರ್ಣ ನಿರ್ಮಿತವಾದ ಮಂಟಪದಲ್ಲಿ, ರತ್ನಮಯವಾದ ಸಿಂಹಾಸನದಲ್ಲಿ ಕುಳಿತವನಾಗಿ ಬ್ರಹ್ಮ ಮಹಾವಿಷ್ಣು ಮೊದಲಾದವರಿಂದ ಕೂಡಿದವನಾಗಿದ್ದನು ॥೫॥ ಮಹರ್ಷಿಗಳಿಂದ, ಸಿದ್ಧ ಸಮೂಹಗಳಿಂದ,

ಮಹರ್ಷಿಭಿಃಸಿದ್ಧಸಂಘೈಸ್ಸ್ತೂಯಮಾನೋಗಣೇಶ್ವರೈಃ ॥ ಆಸ್ತೇದೇ
ವ್ಯಾಮಹೇಶಾನೇಸಾಕ್ಷಾದ್ದೇವಸಭಾಪತಿಃ ॥ ೬ ॥ ವಿಭವಂದೇವ
ದೇವಸ್ಯದ್ರಷ್ಟುಕಾಮಾಃಸುರೇಶ್ವರಾಃ । ಆಶಾಪಾಲಾಗ್ರಹೈಃಸಾರ್ಧ
ಮಾಯಯುರ್ಭಕ್ತಿಸಂಯುತಾಃ ॥೭॥ ದೃಷ್ಟ್ವಾಪ್ರಣೇಮುಸ್ತೇ
ಸರ್ವೇವಿಭುಂಸರ್ವೋತ್ತಮಂಶಿವಂ । ಕಟಾಕ್ಷವೀಕ್ಷಿತಾಸ್ತೇತುನಿಷೇ
ದುಶ್ಚಯಥಾರ್ಹತಃ ॥೮॥ ಸಂಮುಖೇರವಿಚಂದ್ರಾದ್ಯಾಇಂದ್ರಾ
ದ್ಯಾಅಪಿದೇವತಾಃ । ವಿಮುಖಃಸೂರ್ಯತನಯೋನಿಷಸಾದತಳೇಕ್ಷ
ಣಃ ॥ ೯ ॥ ಉಪವಿಷ್ಟೇಷುಸರ್ವೇಷುವಿಭುಃಶ್ರೀಚಂದ್ರಶೇಖರಃ ।
ದೃಷ್ಟ್ವಾಸೌರಿಂತಥಾಭೂತಮುವಾಚಪ್ರಹಸನ್ನಿವ ॥ ೧೦ ॥ ಭಾ
ಸ್ಕರೇವಿಮುಖಃಕಿಂನುತಳಮೇವನಿರೀಕ್ಷಸೇ ॥ ನಾಲೋಕಯಸಿಮಾಂಕ

ಗಣೇಶ್ವರರುಗಳಿಂದ ಸ್ತುತಿಸಿಕೊಳ್ಳುವವನಾಗಿ ಶ್ರೀ ಮಹಾದೇವಿಯಿಂದೊಡಗೂಡಿ ದೇವಸಭಾಪತಿಯಾದ, ಸರ್ವನಿಯಾಮಕನಾದ, ಪ್ರತ್ಯಕ್ಷನಾದ ಭಗವಂತನು ಆನಂದಮಯನಾಗಿ ಬಿಜಯಂಗೈದಿದ್ದನು ॥ ೬ ॥ ಆಗ ದಿಕ್ಪಾಲಕರು ನವಗ್ರಹರಿಂದ ಕೂಡಿದವರಾಗಿ ಭಕ್ತಿಪೂರ್ವಕವಾಗಿ ಭಗವಂತನ ದರ್ಶನವನ್ನು ಬಯಸುವವರಾಗಿ ಬಂದರು॥೭॥ಬಂದ ಸರ್ವರೂ ಪ್ರತ್ಯಕ್ಷನಾದ, ಸರ್ವೋತ್ತಮನಾದ, ಮಂಗಲಮೂರ್ತಿಯಾದ ಪರಮಾತ್ಮನನ್ನು ಕಂಡು ಸಾಷ್ಟಾಂಗ ನಮಸ್ಕಾರವನ್ನು ಮಾಡಿದರು. ಶುಭದೃಷ್ಟಿಯಿಂದ ಅನುಗ್ರಹವನ್ನು ಹೊಂದಿ ಯಥಾ ಯೋಗ್ಯವಾದ ಸ್ಥಾನದಲ್ಲಿ ಕುಳಿತರು ॥೮॥ ಶ್ರೀ ಭಗವಂತನ ಸಮ್ಮುಖದಲ್ಲಿ ದೇವಾಭಿಮುಖರಾಗಿ ಸೂರ್ಯ, ಚಂದ್ರ ಮೊದಲಾದ ಗ್ರಹರಗಳೂ ಇಂದ್ರಾದಿ ದೇವತೆಗಳೂ ಕುಳಿತಿದ್ದರು. ಬದಿಯಲ್ಲಿ ಅಡ್ಡಮುಖನಾಗಿ ಕೆಳಗೆ ನೋಟವುಳ್ಳವನಾಗಿ ಸೂರ್ಯನ ಮಗನಾದ ಶನೈಶ್ಚರನು ಕುಳಿತಿದ್ದನು ॥ ೯ ॥ ಕಿರೀಟದಲ್ಲಿ ಅರ್ಧ ಚಂದ್ರಾಲಂಕೃತನಾದ ಶ್ರೀ ಪರಮೇಶ್ವರನು ಹಾಗಿರುವ ಶನಿಯನ್ನು ನೋಡಿ ಮಂದಹಾಸವನ್ನು ಮಾಡುವವನೋ ಪಾದಿಯಲ್ಲಿ ಮಾತನಾಡಿದನು ॥ ೧೦ ॥ ಎಲೈ ಸೂರ್ಯಪುತ್ರನೇ, ಅಡ್ಡ ಮುಖ

ಸ್ಮಾಚ್ಛ್ರಿಯಃಪತಿಮುಖಾನ್ಸುರಾನ್ ॥೧೧॥ ತಚ್ಛ್ರುತ್ವಾಭಗವದ್ವಾ
ಕ್ಯಮುತಸ್ಥಯಾಧೋಮುಖಃಶನಿಃ ॥ ಕರಾಂಜಲಿಪುಟೋಭೂತ್ವಾ
ಪ್ರೋವಾಚಪರಮೇಶ್ವರಂ ॥ ೧೨ ॥ ಕ್ರೂರದೃಷ್ಟಿರಹಂಸ್ವಾಮಿ
ನ್ನೇಕದಾಹರಿಮಂದಿರಂ ॥ ಗತಸ್ತತ್ರಸುಖಾಸೀನಂಲಕ್ಷ್ಮೀಕಾಂತಮ
ಕಲ್ಮಷಂ ॥ ೧೩ ॥ ವಿಲೋಕ್ಯತಂಪ್ರಣಮ್ಯೈವಯಾತೋಹಂಸ್ವಂ
ನಿಕೇತನಂ ॥ ತಸ್ಮಿನ್ನೇವದಿನೇದೇವಃಕೇನಚಿತ್ಕಾರಿಣೇವಹಿ ॥೧೪॥ ಆ
ರುಹ್ಯಗರುಡಂಶ್ರೀಮಾಂಛ್ರಿಯಾಸಹವಿಹಾಯಸಿ । ಸಂಚಚಾರಜಗ
ನ್ನಾಥಸ್ತದ್ವೈವೋಗ್ರತಪಾಮುನಿಃ ॥೧೫॥ ದೂರ್ವಾಸಾಸ್ತವಪಾದಾ
ಬ್ಜಮಭಿವಂದ್ಯಾಯಯೌಪಥಿ ॥ ತ್ವತ್ಪಾದಾಬ್ಜಾರ್ಚಿತಾಂಬಿಲ್ವಮಾ

ನಾಗಿ ನೆಲವನ್ನೇ ಏಕೆ ನೋಡುತ್ತಿದ್ದೀಯೆ. ಯಾವ ಕಾರಣದಿಂದ ನನ್ನನ್ನೂ ಲಕ್ಷ್ಮೀಕಾಂತ ಮೊದಲಾದ ದೇವತೆಗಳನ್ನೂ ನೋಡುವು ದಿಲ್ಲ ॥೧೧॥ ಹೀಗೆ ಅನುಗ್ರಹಿಸಿದ ಭಗವಂತನ ಮಾತನ್ನು ಕೇಳಿ ಅಧೋ ಮುಖನಾಗಿ ಶನೈಶ್ಚರನು ಎದ್ದು ಕೈಜೋಡಿಸಿಕೊಂಡವನಾಗಿ ಶ್ರೀ ಪರ ಮೇಶ್ವರನನ್ನು ಕುರಿತು ಮಾತನಾಡಿದನು ॥ ೧೨ ॥ ಎಲೈ ಸ್ವಾಮಿಯೇ, ನಾನು ಕ್ರೂರವಾದ ದೃಷ್ಟಿಗಳುಳ್ಳವನು. ಒಂದಾನೊಂದು ದಿನ ಹರಿಯ ಮನೆಯನ್ನು ಕುರಿತು ಹೋಗಿದ್ದೆನು. ಅಲ್ಲಿ ಸುಖವಾಗಿ ಬಿಜಯನಾದ ಪಾಪರಹಿತನಾದ ಲಕ್ಷ್ಮೀಪತಿಯ ॥೧೩॥ ದರ್ಶನವನ್ನು ಹೊಂದಿ ನೋಡಿ ನಮಸ್ಕರಿಸಿಯೇ ನನ್ನ ಸ್ಥಾನವನ್ನು ಹೊಂದಿದೆನು. ಅದೇ ದಿನದಲ್ಲಿ ಯಾವುದೋ ಒಂದು ಕಾರಣದಿಂದ ಜಗತ್ಸ್ವಾಮಿಯಾದ ಆ ವೈಕುಂಠ ಮೂರ್ತಿಯು ॥ ೧೪ ॥ ಶ್ರೀ ದೇವಿಯಿಂದ ಸಹಿತನಾಗಿ ಗರುಡನನ್ನು ಆರೋಹಣಮಾಡಿ ಗಗನದಲ್ಲಿ ಸಂಚರಿಸುತ್ತಿದ್ದನು. ಅದೇ ಸಮಯದಲ್ಲಿ ಉಗ್ರತಪಸ್ವಿಯಾದ ಮುನಿಯಾದ ॥೧೫॥ ದೂರ್ವಾಸನು ನಿನ್ನ ಚರಣ ಕಮಲನ್ನು ನಮಸ್ಕರಿಸಿ ಆ ದಾರಿಯಲ್ಲಿಯೇ ಬಂದನು. ನಿನ್ನ ಚರ ಣಾಬ್ಜದಲ್ಲಿ ಪೂಜಿಸಿ ಪ್ರಸಾದವಾಗಿ ನಿನ್ನಿಂದ ಅನುಗ್ರಹಿಸಿದ ಬಿಲ್ವ

ಲಾಂಸ್ವೀಕೃತ್ಯತಾಪಸಃ॥೧೬॥ ಶ್ರೀಪತಿಂಗರುಡಾರೂಢಂದೃಷ್ಟ್ವಾ ವಿ
ಹರ್ಷಮವಾಪಸಃ ॥ ಸರ್ವಸಂಪತ್ಪ್ರದಾಂಬಿಲ್ವಮಾಲಾಂತಸ್ಮೈನ್ಯ
ವೇದಯತ್ ॥ ೧೭ ॥ ಗೃಹೀತ್ವಾಂಜಲಿನಾದೇವಸ್ತಾಂಮಾಲಾಮ
ಭಿನಂದ್ಯಚ । ಯಯೌವಿಹಾಯಸಾಚಕ್ರೀಮುನಿರಪ್ಯಾಶ್ರಮಂ
ಸ್ವಕಂ ॥ ೧೮ ॥ ಶಿರಸಾಪೂಜನೀಯಾಂತಾಂಗರುಡೇಸವಿನಿಕ್ಷಿಪತ್॥
ತತಃಸಾಯಾಹ್ನಸಮಯೇಸ್ವಾಶ್ರಮಾಭ್ಯಾಶತೋಮುನಿಃ ॥೧೯॥
ಪತಿತಾಂ ನಭಸೋಮಾಲಾಂ ದೃಷ್ಟ್ವಾ ತಾಮೇವಶಾಂಕರೀಂ ॥ ತತ
ಸ್ತಾಂತಾದೃಶಂದೃಷ್ಟ್ವಾ ದೂರ್ವಾಸಾಃ ಕ್ರೋಧಮೂರ್ಛಿತಃ ॥
॥೨೦॥ಹರಿಂಶಶಾಪಬಹುಧಾಧಿಗ್ಜನ್ಮೇತಿಚಸಂವದನ್ ॥ ಮಯಾತಿ

ಮಾಲೆಯನ್ನು ತೆಗೆದುಕೊಂಡು ತಪಸ್ವಿಯಾದ ಆ ಮುನಿಯು ॥ ೧೬ ॥
ಗರುಡನನ್ನು ಆರೋಹಣಮಾಡಿಕೊಂಡು ಬರುತ್ತಿರುವ ಲಕ್ಷ್ಮೀಪತಿ
ಯನ್ನು ನೋಡಿ ಸಂತೋಷವನ್ನು ಹೊಂದಿದನು. ಹಾಗೆ ಸಕಲೈಶ್ವ
ರ್ಯದಾಯಕವಾದ ಆ ನಿನ್ನ ಪ್ರಸಾದ ರೂಪವಾದ ಬಿಲ್ವಮಾಲೆಯನ್ನು
ಆತನಿಗೋಸ್ಕರ ಕೊಟ್ಟನು ॥ ೧೭ ॥ ಚಕ್ರಪಾಣಿಯಾದ ಆ ದೇವನು
ಕೈಯೊಡ್ಡಿ ತೆಗೆದುಕೊಂಡು ಆ ಮಾಲೆಯನ್ನು ಬಹುಮಾನಿಸಿ ಆಕಾಶ
ಮಾರ್ಗದಿಂದ ಪ್ರಯಾಣ ಮಾಡಿಸಿದನು. ಆ ಮುನಿಯೂ ಕೂಡ ತನ್ನ
ಆಶ್ರಮಕ್ಕೆ ಪ್ರಯಾಣ ಮಾಡಿಸಿದನು ॥೧೮॥ ಶಿರಸ್ಸಿನಿಂದ ಧರಿಸಿ ಪೂಜ್ಯ
ವಾದ ಆ ಮಾಲೆಯನ್ನು ಆ ವಿಷ್ಣುವು ಗರುಡನಲ್ಲಿ ಇರಿಸಿದನು. ಆ ಮೇಲೆ
ಆ ದೂರ್ವಾಸನು ಸಾಯಂಕಾಲ ಸಮಯದಲ್ಲಿ ತನ್ನ ಆಶ್ರಮದ ಸಮೀ
ಪದಲ್ಲಿ ॥ ೧೯ ॥ ಆಕಾಶದೆಸೆಯಿಂದ ಬಿದ್ದಿರುವ ಶಿವಸಂಬಂಧವಾದ ಆ
ಮಾಲೆಯನ್ನು ಕಂಡು ಅದನ್ನು ತಾನು ಕೊಟ್ಟಿದ್ದ ಶಿವಪ್ರಸಾದ ಮಾಲೆ
ಯೆಂದು ತಿಳಿದುಕೊಂಡು ಶ್ರೀ ವಿಷ್ಣುವು ಅದನ್ನು ಭಕ್ತಿಯಿಂದ
ಧರಿಸಿಕೊಳ್ಳದೆ ತಾನು ಲಕ್ಷ್ಮೀಪತಿಯೆಂಬ ಗರ್ವದಿಂದ ಇದರಿಂದ ಬರು
ವ ಐಶ್ವರ್ಯವೆಷ್ಟೆಂದು ಅನಾದರಣೆಯಿಂದ ಇರಿಸಿದ ರೀತಿಯನ್ನು
ತಿಳಿದು ದೂರ್ವಾಸನು ಅಪಾರ ಕ್ರೋಧವನ್ನು ತಾಳಿದವನಾಗಿ ॥ ೨೦ ॥

ಮಾರ್ಪಿತಾಮಾಲಾದತ್ತಾತುಭ್ಯಮಘಾಪಹಾ ॥ ೨೧ ॥ ಸಾಕಥಂ ಗರುಡಸ್ಕಂಧೇವಿನಿಕ್ಷಿಪ್ತಾತ್ವಯಾಹರೇ ॥ ಸರ್ವಸ್ವಮೂಲಭೂತೇಯಂಲಕ್ಷ್ಮೀಸ್ತವವಿನಶ್ಯತು ॥ ೨೨ ॥ ಲಕ್ಷ್ಮೀಃಪತತುದುಗ್ಧಾಬ್ಧೌ ಗರುಡೋಪಿವಿನಶ್ಯತು । ವೈಕುಂಠಸ್ಯಾಧಿಕಾರೋಪಿತವಯಾತು ಮಮಾಜ್ಞಯಾ ॥೨೩॥ ನಿಸ್ತೇಜಸ್ಕೋವನೀಪೃಷ್ಠೇಸಂಚರಾದ್ಯಾವಧಿಧ್ರುವಂ । ಇತ್ಯುಕ್ತ್ವಾಸತುದೂರ್ವಾಸಾಯಯೌಯಾದೃಚ್ಛಿಕೋಮುನಿಃ॥೨೪॥ತತಃಪಪಾತದುಗ್ಧಾಬ್ಧೌಲಕ್ಷ್ಮೀರ್ವಿಷ್ಣುಮನೋಹರಾ ॥ ತತೋತಿದುಃಖಿತೋವಿಷ್ಣುಃಪ್ರಲಪನ್ವನಮಾಶ್ರಿತಃ॥೨೫॥ ಉವಾಸವಿಪಿನೇಘೋರೇಸ್ವಕೃತಂಕರ್ಮಸಂಸ್ಮರನ್ । ತತಃಕದಾಚಿ

ಜನ್ಮವನ್ನು ಸುಡು ಸುಡು ಎಂದು ಹೇಳುವನಾಗಿ ಬಹು ಪ್ರಕಾರವಾಗಿ ಹರಿಯನ್ನು ಬೈಯಲುದ್ಯೋಗಿಸಿದನು. ನನ್ನಿಂದ ಪಾಪನಾಶಕವಾದ ಮಾಲೆಯು ನಿನಗೋಸ್ಕರ ಕೊಡಲ್ಪಟ್ಟಿತು ॥ ೨೧ ॥ ಎಲೈ ಹರಿಯೆ, ಆ ಮಾಲೆಯು ಏತಕೆ ಗರುಡನ ಹೆಗಲಿನಲ್ಲಿ ನಿನ್ನಿಂದ ಇಡಲ್ಪಟ್ಟಿತು ? ನಿನಗೆ ಐಶ್ವರ್ಯರೂಪಳಾದ ಲಕ್ಷ್ಮಿಯು ಪತ್ನಿಯು, ಇದು ಕೊಡುವ ಐಶ್ವರ್ಯವು ಯಾರದೆಂಬ ಗಮನದಿಂದಲ್ಲವೆ? ನಿನಗೆ ಸಕಲೈಶ್ವರ್ಯ ಕಾರಣಳಾದ ಲಕ್ಷ್ಮಿಯೂ ನಾಶವಾಗಲಿ ॥ ೨೨ ॥ ಲಕ್ಷ್ಮಿಯೂ ಕ್ಷೀರಸಮುದ್ರದಲ್ಲಿ ಬೀಳಲಿ. ಗರುಡನು ನಷ್ಟವಾಗಲಿ. ನನ್ನ ಅಪ್ಪಣೆಯಿಂದ ವೈಕುಂಠದ ಅಧಿಕಾರವು ನಿನಗೆ ತಪ್ಪಿಹೋಗಲಿ ॥೨೩॥ ಕಾಂತಿರಹಿತನಾಗಿ ಭೂತಳದಲ್ಲಿ ಇನ್ನುಮೇಲೆ ನಿಶ್ಚಯವಾಗಿ ಸಂಚರಿಸು. ಹೀಗೆಂದು ಸ್ವೇಚ್ಛಾಗಮನಿಯಾದ ಆ ದೂರ್ವಾಸನು ನಡೆದನು ॥೨೪॥ ಆ ಕ್ಷಣವೇ ವಿಷ್ಣುಪ್ರಿಯಳಾದ ಲಕ್ಷ್ಮಿಯು ಕ್ಷೀರಸಮುದ್ರದಲ್ಲಿ ಬಿದ್ದಳು. ಗರುಡನು ನಾಶವಾದನು. ಆ ಮೇಲೆ ದುಃಖಿಯಾದ ಮಹಾವಿಷ್ಣುವು ವ್ಯಸನಿಸುತ್ತ ವನವನ್ನು ಆಶ್ರಯಿಸಿದನು ॥೨೫॥ ಕಷ್ಟವಾದ ಕಾಡಿನಲ್ಲಿ ತಾನು ಮಾಡಿದ ಕರ್ಮವನ್ನು ಸ್ಮರಿಸುತ್ತಿದ್ದನು. ಆಮೇಲೆ ಯಾವುದೋ ಒಂದು ವೇಳೆಯಲ್ಲಿ ವೈಕುಂಠನು ಮುನಿಶ್ರೇಷ್ಠನಾದ

ದ್ವೃಕುಂಭೋದದರ್ಶಮುನಿಪುಂಗವಂ ॥ ೨೬ ॥ ಗೌತ್ರಮಂಪೂಜ
ಯಾಮಾಸ ಬ್ರಹ್ಮಣ್ಯಃ ಶ್ರೀಹರಿಸ್ಸ್ವಯಂ । ಪೂಜಿತಸ್ತ್ವಬ್ರ
ವೀದ್ದೇವಂಕಿಂಚಿಕೀರ್ಷುರಿಹಾಗತಃ ॥ ೨೭ ॥ ಇತಿತದ್ವಚನಂಶ್ರು
ತ್ವಾಸರ್ವಂತದಿದಮೂಚಿವಾನ್ । ತಚ್ಛ್ರುತ್ವಾಸಮುನಿರ್ಜ್ಞಾತ್ವಾ
ಮದ್ದೃಷ್ಟಿವಿಷಯಂಹರಿಂ ॥ ೨೮ ॥ ಉವಾಚೇಂದ್ರಾನುಜಂದೇವ
ಮಿದಂತೇಶನಿದೃಷ್ಟಿಜಂ । ತದ್ದೃಷ್ಟಿಪರಿಹಾರಾರ್ಥಮುಪದೇಶಾ
ರ್ಥಮೇವಚ ॥ ೨೯ ॥ ಸರ್ವಜ್ಞಸ್ತ್ವಂಸುರಶ್ರೇಷ್ಠಕಿಮರ್ಥಂತು
ವಿಲಂಬಸೇ । ಉಮಾಮಹೇಶ್ವರಂಸೌಮ್ಯವ್ರತಾನಾಮುತ್ತಮಂ
ವ್ರತಂ ॥ ೩೦ ॥ ತದ್ಭಾದ್ರಪದಶುಕ್ಲೇಚಪೂರ್ಣಿಮಾಸಂಗವೇಸ್ಥಿ
ತಾ ॥ ತಸ್ಯಾಂಕುರುಹೃಷೀಕೇಶತತಃಶ್ರೇಯೋಭವಿಷ್ಯತಿ ॥ ೩೧ ॥

ಗೌತಮನನ್ನು ಕಂಡನು ॥ ೨೬ ॥ ಬ್ರಾಹ್ಮಣರಲ್ಲಿ ಪ್ರೀತಿಯುಳ್ಳ ಶ್ರೀ ಹರಿಯು ತಾನಾಗಿಯೇ ಆ ಬ್ರಾಹ್ಮಣನನ್ನು ಪೂಜಿಸಿದನು. ಪೂಜಿಸಿಕೊಂಡ ಮುನಿಯು ಏನುಮಾಡಲಿಚ್ಛೆಯಿಂದ ಇಲ್ಲಿ ಬಂದಿದ್ದೀಯೆ ಎಂದು ಅವನನ್ನು ಕೇಳಿದನು ॥ ೨೭ ॥ ಈ ಪ್ರಕಾರ ಆತನ ಮಾತನ್ನು ಕೇಳಿ ನಡೆದ ಎಲ್ಲಾ ವೃತ್ತಾಂತವನ್ನೂ ಹೇಳಿದನು. ಆ ಮುನಿಯು ಅದನ್ನು ಕೇಳಿ ನನ್ನ ದೃಷ್ಟಿಗೋಚರನಾದ ಹರಿಯನ್ನು ತಿಳಿದು ॥ ೨೮ ॥ ಉಪೇಂದ್ರನಾದ ಆ ದೇವನನ್ನು ಕುರಿತು ಇದು ನಿನಗೆ ಶನಿದೃಷ್ಟಿಯಿಂದ ಉಂಟಾದುದು ಎಂದು ಹೇಳಿದನು. ಆ ದೃಷ್ಟಿದೋಷಪರಿಹಾರಕ್ಕೋಸ್ಕರಲೂ ಮತ್ತು ಲೋಕಕ್ಕೆ ಉಪದೇಶಕ್ಕೋಸ್ಕರಲೂ ॥ ೨೯ ॥ ಎಲೈ ದೇವಶ್ರೇಷ್ಠನೇ, ನೀನು ಸರ್ವಜ್ಞನಾಗಿ ಏಕೆ ಸಾವಕಾಶಮಾಡುವೆ. ಎಲೈ ಪ್ರಸನ್ನನಾದವನೆ ಸರ್ವ ವ್ರತಕ್ಕೂ ಶ್ರೇಷ್ಠವಾದ ಉಮಾಮಹೇಶ್ವರ ವ್ರತವೆಂಬುದೊಂದು ವ್ರತವುಂಟು ॥ ೩೦ ॥ ಅದು ಭಾದ್ರಪದ ಶುಕ್ಲಪಕ್ಷ ಪೂರ್ಣಿಮಾದಲ್ಲಿ ಸಂಗಮಕಾಲ ವ್ಯಾಪ್ತಿಯುಳ್ಳದು. ಎಲೈ ಹೃಷೀಕೇಶನೆ, ಆ ತಿಥಿಯಲ್ಲಿ ಈ ವ್ರತವನ್ನು ಮಾಡು. ಅದರಿಂದ ಶ್ರೇಯಸ್ಸು ಆಗುವದು ॥ ೩೧ ॥ ಈ ಪ್ರಕಾರ ಹೇಳಿ ಆ ಮಹಾವಿಷ್ಣು

ಏವಮುಕ್ತ್ವಾ ತವಸಾಭಾಷ್ಯ ಗೌತಮಸ್ತು ಯಯಾವಥ ॥ ಯದಾ ಸಾ ಪೂರ್ಣಿಮಾ ಪ್ರಾಪ್ತಾ ತಿಥೌ ತಸ್ಯಾಂ ಹರಿಃ ಸ್ವಯಂ ॥ ೩೨ ॥ ಲಿಂಗಂ ತು ಪಾರ್ಥಿವಂ ಕೃತ್ವಾ ಪೂಜಯಾಮಾಸ ಶಂಕರಂ ॥ ಉಪಚಾರೈಃ ಷೋಡಶಭಿಃ ಪಂಚಾಮೃತಪುರಃಸರೈಃ ॥ ೩೩ ॥ ತ್ವರಿತೇನ ಚ ರುದ್ರೇಣ ಸ್ನಾಪ್ಯ ದೇವಂ ತ್ರಿಯಂಬಕಂ ॥ ಬಿಲ್ವೈಃ ಸಹಸ್ರೈಃ ಸಂಪೂಜ್ಯ ಷಡ್ರಸಾನ್ನಂ ನಿವೇದ್ಯ ಚ ॥ ೩೪ ॥ ತಾಂಬೂಲಾದ್ಯೈಸ್ತೋಷಯಿತ್ವಾ ನೀರಾಜ್ಯ ಬಹುದೀಪಕೈಃ । ನರ್ತನೈಃ ಕರತಾಳೈಶ್ಚ ತ್ವಾಂ ದೇವ ಗಿರಿಜಾಪತಿಂ ॥ ೩೫ ॥ ತದಾ ಪ್ರಸನ್ನಸ್ತ್ವಂ ದೇವ ತಸ್ಮೈ ವೈಕುಂಠವಾಸಿನೇ । ಸಂಯೋಜ್ಯ ದೇವದೈತ್ಯಾಂಶ್ಚ ಪ್ರಮಥ್ಯ ಕ್ಷೀರಸಾಗರಂ ॥ ೩೬ ॥ ತತ್ರ ಸಾಕ್ಷಾತ್ಸಮುತ್ಪನ್ನಾಂ ಶ್ರಿಯಂ

ವನ್ನು ಸಂಭಾಷಿಸಿ ಗೌತಮ ಋಷಿಯು ಪ್ರಯಾಣ ಮಾಡಿದನು. ಅನಂತರದಲ್ಲಿ ಯಾವಾಗ ಆ ಪೌರ್ಣಿಮಾ ದಿನವು ಬರುತ್ತದೆಯೆಂದಾಲೋಚಿಸುವ ಸಮಯದಲ್ಲಿ ಆ ದಿನವು ಪ್ರಾಪ್ತವಾಯಿತು. ಆ ತಿಥಿಯಲ್ಲಿ ಶ್ರೀ ಹರಿಯು ತಾನೆ ॥೩೨॥ ಶುಚಿಯಾಗಿ ಪಾರ್ಥಿವಲಿಂಗವನ್ನು ಮಾಡಿಕೊಂಡು ಶ್ರೀ ಪರಮೇಶ್ವರನನ್ನು ಪಂಚಾಮೃತ ಪೂರ್ವಕಗಳಾದ ಷೋಡಶೋಪಚಾರಗಳಿಂದ ಪೂಜಿಸಿದನು ॥ ೩೩ ॥ ತ್ವರಿತವೆಂಬ ರುದ್ರಾಧ್ಯಾಯದಿಂದ ಶಕ್ತಿತ್ರಯ ಯುಕ್ತನಾದ ಭಗವಂತನನ್ನು ಅಭಿಷೇಕಿಸಿ ಸಹಸ್ರಬಿಲ್ವಗಳಿಂದ ಪೂಜಿಸಿ ಷಡ್ರಸೋಪೇತವಾದ ನೈವೇದ್ಯವನ್ನು ಮಾಡಿಸಿ ॥ ೩೪ ॥ ತಾಂಬೂಲಾದಿಗಳಿಂದ ಸಂತೋಷಪಡಿಸಿ ಬಹಳ ಆರತಿಗಳಿಂದ ನೀರಾಜನವನ್ನು ಮಾಡಿ ಎಲೈ ಮಹಾದೇವನೆ! ಕೈ ಚಪ್ಪಳೆ ನರ್ತನಗಳಿಂದ ಗಿರಿಜಾಪತಿಯಾದ ನಿನ್ನನ್ನು ಪೂಜಿಸಿದನು ॥೩೫॥ ಎಲೈ ದೇವನೆ, ಪ್ರಸನ್ನನಾದ ನೀನು ಆ ವೈಕುಂಠನಿಗೋಸ್ಕರ ದೇವರಾಕ್ಷಸರನ್ನು ಕೂಡಿಸಿ ಕ್ಷೀರಸಾಗರವನ್ನು ಮಥಿಸಿ ॥ ೩೬ ॥ ಅಲ್ಲಿ ಹುಟ್ಟಿದ ಸರ್ವಮಂಗಳೆಯಾದ ಲಕ್ಷ್ಮೀದೇವಿಯನ್ನೂ ಗರುಡನನ್ನೂ ಕೀರ್ತಿವಂತನಾದ

ಸರ್ವಾಂಗ ಮಂಗಲಾಂ || ದದ್ಯಾಸ್ತ್ವಂಪಾರ್ವತೀಕಾಂತ್ರಗರುಡಂಚ ಯಶಸ್ವಿನೇ || ೩೭ || ಅಥತ್ವಾಂಚಪ್ರಣಮ್ಯೇಶಶ್ರಿಯಾದೇವ್ಯಾಸಮನ್ವಿತಃ || ಯಯೌವೈಕುಂಠನಗರಂ ಸರ್ವತ್ರಸುಖದಂಹರಿಃ|| ||೩೮|| ಗರುಡೇನಸ್ವವಾಹೇನಶ್ರಿಯಾದೇವ್ಯಾತ್ರಯಾಸಹ || ಆಸ್ತೇ ವೈಕುಂಠಭವನೇಶ್ರೀವಿಷ್ಣುಃಸಕಲೇಶ್ವರಃ ||೩೯|| ಪ್ರಾಪ್ತಸರ್ವಾಧಿಕಾರಸ್ತ್ವಪ್ರಸಾದಾತ್ತೇಮಹೇಶ್ವರ|| ಇತಿಮದ್ದೃಷ್ಟಿಸಂಪರ್ಕಾದ್ದೇವೇನಾಪಿಸುರೇಶ್ವರ || ೪೦ || ಅನುಭೂತಮತಸ್ತ್ವಾಂಚದೃಷ್ಟ್ಯಾಲೋಕನೇಕ್ಷ್ಯಾಮಿಶಂಕರ || ಇತ್ಯೇವಮುಕ್ತಃಶನಿನಾಪ್ರತ್ಯುವಾಚಮಹೇಶ್ವರಃ || ೪೧ || ಮಾಂಚಾಪಿಯದಿತೇದೃಷ್ಟಿರ್ಬಾಧತೇರವಿನಂದನ || ತದಾಸತ್ಯಮಿತಿಬ್ರೂಯಾಂಜಜ್ಞಾಸಾರ್ಥಮಿದಂವಚಃ || ೪೨ ||

ಆ ದೇವನಿಗೆ ಶ್ರೇಸ್ಕರ ಕೊಟ್ಟೆ || ೩೭ || ಆಮೇಲೆ ಈ ಮಹಾವಿಷ್ಣುವು ಲಕ್ಷ್ಮೀದೇವಿಯಿಂದ ಸಹಿತನಾಗಿ ನಿನ್ನನ್ನು ನಮಸ್ಕರಿಸಿ ಸರ್ವಕಾಲ ಸುಖಪ್ರದವಾದ ವೈಕುಂಠಪುರವನ್ನು ಕುರಿತು ಪ್ರಯಾಣಮಾಡಿದನು || ೩೮ || ಸಕಲಸ್ವಾಮಿಯಾದ ಶ್ರೀ ಮಹಾವಿಷ್ಣುವು ಲಕ್ಷ್ಮೀದೇವಿಯಿಂದಲೂ ತನ್ನ ವಾಹನವಾದ ಗರುಡನಿಂದಲೂ ಸಹಿತನಾಗಿ ವೈಕುಂಠನಗರದಲ್ಲಿ ಸುಖವಾಗಿದ್ದಾನೆ||೩೯||ಎಲೈ ಜಗದೀಶ್ವರನೆ! ನಿನ್ನ ಅನುಗ್ರಹದ ದೆಸೆಯಿಂದ ಹೊಂದಲ್ಪಟ್ಟ ಸರ್ವಾಧಿಕಾರವುಳ್ಳವನಾಗಿದ್ದ ದೇವನಿಂದಲಾದರೂ ಎಲೈ ದೇವಸ್ವಾಮಿಯೆ! ಈ ಪ್ರಕಾರವಾಗಿ ನನ್ನ ದೃಷ್ಟಿಸಂಪರ್ಕದ ದೆಸೆಯಿಂದ ವಿಧಿಯು ಅನುಭವಿಸಲ್ಪಟ್ಟಿತು||೪೦|| ಅದರಿಂದ ಎಲೈ ಸುಖಪ್ರದನಾದ ಸ್ವಾಮಿಯೆ, ನಿನ್ನನ್ನು ದೃಷ್ಟಿಯಿಂದ ನೋಡಲಪೇಕ್ಷಿಸಲಾರೆನು. ಹೀಗೆಂದು ಪ್ರಾರ್ಥಿಸಲ್ಪಟ್ಟ ಜಗದೀಶ್ವರನು ಪುನಃ ಮಾತನಾಡಿದನು || ೪೧ || ಎಲೈ ಸೂರ್ಯಪುತ್ರನೆ ನಿನ್ನ ದೃಷ್ಟಿಯು ನನ್ನನ್ನು ಕೂಡ ಬಾಧಿಸ ತ್ತದೆಯೋ. ಆದರೆ ಆಗ ಸತ್ಯವೆಂದು ಹೇಳುವೆನು. ಈ ಮಾತು ಜಗತ್ತಿನ ತಿಳುವಳಿಕೆಗೋಸ್ಕರವಾಗಿರುವುದು || ೪೨ || ಆ ಮಾತನ್ನು ಸೂರ್ಯಪುತ್ರನು ಕೇಳಿ

ತಚ್ಛ್ರುತ್ವಾಭಾಸ್ಕರಿರ್ದೇವಮುವಾಚಪ್ರಹಸನ್ಶಿವಂ ॥ ತ್ವಚ್ಛಾಸನ
ಸ್ಥಾ ಭಗವನ್ವಯಂಸರ್ವೇನವಗ್ರಹಾಃ ॥ ೪೩ ॥ ಮಿಥ್ಯಾಕಥಂತ
ದ್ಭವತಿಶಾಸನಂಶ್ರುತಿಗೋಚರಂ॥ ತ್ವದಾಜ್ಞಯೈವಪಶ್ಯಾಮಿಕಿಂ
ಚಿತ್ತ್ವಾಂಸಕಲೇಶ್ವರ ॥ ೪೪ ॥ ಇತ್ಯುಕ್ತ್ವಾಭಾಸ್ಕರೇರ್ದೇವಂ
ಕಿಂಚಿದ್ವೀಕ್ಷ್ಯಪ್ರಣಮ್ಯಚ ॥ ಯಯೌಮಕರರಾಶಿಂಸಶಿವದರ್ಶನಹ
ರ್ಷಿತಃ ॥ ೪೫ ॥ ಏವಂಗತೇಬಹುತಿಥೇಕಾಲೇವಿಶ್ವೇಶ್ವರಃಪ್ರಭುಃ ॥
ಸದಾಶಿವಸ್ತುಶಿವಯಾಪ್ರಾರ್ಥಿತಃಸಕಲಾಮರೈಃ ॥ ೪೬ ॥ ತಾಳಾ
ಸುರವಧಾರ್ಥಾಯಗಜೋಭೂದ್ವಿಪಿನೇಯದಾ॥ ತದಾರವಿಸುತಸ್ಯೇ
ವದೃಷ್ಟಿದೋಷಃಪ್ರವರ್ತಿತಃ ॥ ೪೭ ॥ ಅಥತಾಳಾಸುರೇಯುದ್ಧೇ
ನಿಹತೇಶಿವಸೂನುನಾ ॥ ಆಯಯೌಸಪುನರ್ದೇವಂಶನಿಶ್ಚೋಶನಸಾ

ಸ್ವಲ್ಪ ಹಾಸ್ಯವನ್ನು ತೋರಿಸುವನಾಗಿ ದೇವನೊಡನೆ ಮಾತನಾಡಿದನು. ಎಲೈ ಭಗವಂತನೆ! ಸಮಸ್ತ ನವಗ್ರಹರಾದನಾವು ನಿನ್ನ ಆಜ್ಞಾನುಸಾರವಾಗಿ ಇರತಕ್ಕವರು ॥ ೪೩ ॥ ಮತ್ತು ಆ ನಿನ್ನ ಅಪ್ಪಣೆಯು ವೇದಪ್ರಸಿದ್ಧವಾಗಿರುವುದು. ಅದು ಹೇಗೆ ಸುಳ್ಳಾಗುವದು. ಎಲೈ ಸರ್ವೇಶ್ವರನೆ, ನಿನ್ನ ಅಪ್ಪಣೆಯಿಂದಲೇ ನಿನ್ನನ್ನು ಸ್ವಲ್ಪ ನೋಡುವೆನು ॥ ೪೪ ॥ ಸೂರ್ಯಪುತ್ರನು ಹೀಗೆ ಹೇಳಿ ಸ್ವಲ್ಪ ನೋಡಿ ನಮಸ್ಕರಿಸಿ ಭಗವದ್ದರ್ಶನದಿಂದ ಸಂತುಷ್ಟನಾಗಿ ತನ್ನ ಸ್ಥಾನವಾದ ಮಕರರಾಶಿಯನ್ನು ಕುರಿತು ಹೋದನು ॥೪೫॥ ಹೀಗೆ ಬಹು ದಿವಸ ಕಳೆಯುತ್ತಿರಲಾಗಿ ಜಗದೀಶನಾದ, ಸ್ವತಂತ್ರನಾದ, ಯಾವಾಗಲೂ ಮಂಗಲಸ್ವರೂಪನಾದ ಪರಮೇಶ್ವರನು ಒಂದುವೇಳೆ ಸಮಸ್ತ ದೇವತೆಗಳಿಂದಲೂ ಪ್ರಾರ್ಥಿಸಿಕೊಂಡವನಾಗಿ ದೇವಿಯಿಂದೊಡಗೂಡಿ ॥ ೪೬ ॥ ತಾಳಾಸುರನ ವಧೆಗೋಸ್ಕರ ಅಡವಿಯಲ್ಲಿ ಗಜಾಕಾರನಾದಾಗ ಸೂರ್ಯಪುತ್ರನ ದೃಷ್ಟಿದೋಷವು ಉಂಟಾಯಿತು ॥ ೪೭ ॥ ಆಮೇಲೆ ಈಶಪುತ್ರನಿಂದ ಯುದ್ಧದಲ್ಲಿ ತಾಳಾಸುರನು ಕೊಲ್ಲಲ್ಪಟ್ಟಮೇಲೆ ಆ ಶನೈಶ್ಚರನು ಶುಕ್ರ

ಸಹ ॥೪೮॥ ಸ್ತೂಯಮಾನಂಸುರೈಃಸರ್ವೈರ್ಮುನಿಭಿಃಪರಮೇಶ್ವ
ರಂ ॥ ಅಥೋದೃಷ್ಟಿಃಪ್ರಣಮ್ಯೇಶಮುವಾಚರವಿನಂದನಃ ॥೪೯॥
ಸರ್ವಜ್ಞಭಗವಞ್ಶಂಭೋಮದ್ದೃಷ್ಟಿಜನಿತಂಫಲಂ॥ ಅನುಭೂತಂ
ತ್ವಯಾದೇವವನೇಗಜಶರೀರತಃ ॥ ೫೦ ॥ ಪ್ರಸೀದಸರ್ವಭಾವೇನಮ
ಹ್ಯಮಾಜ್ಞಾನುಪಾಲಿನೇ ॥ ಇತಿಶ್ರುತ್ವಾಶನೇರ್ವಾಕ್ಯಂಭವಾನೀಮ
ವಲೋಕ್ಯಚ ॥ ೫೧ ॥ ಜಗದ್ವಿಸ್ಮಾಪನೋಪ್ಯೇವಂವಿಸ್ಮಿತೋಭೂ
ತ್ಸದಾಶಿವಃ॥ ತದಾಶಶಂಸರವಿಜಂಕಲಿಸ್ತ್ವಂನಾತ್ರಸಂಶಯಃ ॥೫೨॥
ಪ್ರೀತೋಸ್ಮಿತೇವಚಃಸೌರೇಶ್ರುಣುಲೋಕಹಿತಂಮಮ ॥ ಯಏತತ್ಪ
ರಮಾಖ್ಯಾನಂಮಮಾಪಿಶ್ರಿಯಃಪತೇಃ ॥೫೩॥ ಶ್ರುಣುಯಾಚ್ಛ್ರ

ನಿಂದ ಸಹಿತನಾಗಿ ತಿರುಗಿ ಭಗವಂತನನ್ನು ಕರಿತುಬಂದನು॥೪೮॥ಆ ಸೂ
ರ್ಯಪುತ್ರನು ಸಮಸ್ತ ಋಷಿಗಳಿಂದಲೂ ದೇವತೆಗಳಿಂದಲೂ ಸ್ತುತಿಸ
ಲ್ಪಡುತ್ತಿರುವ ಜಗನ್ನಿಯಾಮಕನಾದ ಪರಾವರವಸ್ತುವಾದ ಶ್ರೀ ಪರ
ಮೇಶ್ವರನನ್ನು ನಮಸ್ಕರಿಸಿ ಕೆಳನೋಟವುಳ್ಳವನಾಗಿ ಪ್ರಾರ್ಥಿಸು
ತ್ತಿದ್ದಾನೆ ॥೪೯॥ ಎಲೈ ಸರ್ವಜ್ಞನೆ! ಭಗವಂತನಾದ, ಸುಖಪ್ರದ
ನಾದ ದೇವನೇ ನನ್ನ ದೃಷ್ಟಿದೋಷದಿಂದುಂಟಾದ ಫಲವು ಅಡವಿಯಲ್ಲಿ
ಗಜಶರೀರ ಹೊಂದಿದಕಾರಣ ನಿನ್ನಿಂದ ಅನುಭವಿಸಲ್ಪಟ್ಟಿತು ॥ ೫೦ ॥
ನಿನ್ನ ಅಪ್ಪಣೆಯನ್ನು ಅನುಸರಿಸಿ ನಡೆಯುವ ನನಗೋಸ್ಕರ ಪ್ರಸನ್ನ
ನಾಗು. ಭಗವಂತನು ಹೀಗೆಂದ ಶನಿಯ ಮಾತನ್ನು ಕೇಳಿ ಭವಾನೀ ದೇ
ವಿಯನ್ನು ನೋಡಿ ॥ ೫೧ ॥ ಜಗತ್ತನ್ನೇ ಆಶ್ಚರ್ಯಪಡಿಸುವ ಸರ್ವ
ಮಂಗಲನಾದ ಶ್ರೀ ಪರಮೇಶ್ವರನಾದರೂ ಈ ಪ್ರಕಾರವಾಗಿ ವಿಸ್ಮಿತ
ನಾದನು. ಆಗ ರವಿಸೂನವನ್ನು ಕುರಿತು ನೀನು ಕಲಿಯೆಂಬುದು ನಿಶ್ಚ
ಯವು ಅನುಮಾನವಿಲ್ಲ ಎಂದು ಹೊಗಳಿದನು ॥೫೨॥ ಎಲೈ! ಸೂರ್ಯಪು
ತ್ರನೆ, ನಿನಗೆ ಪ್ರಸನ್ನನಾಗಿರುವೆನು. ಲೋಕಕ್ಕೆ ಹಿತವಾದ ನನ್ನ ಮಾ
ತನ್ನು ಕೇಳು. ಯಾವಾತನು ನನ್ನಸಂಬಂಧವಾದ ಮತ್ತು ಲಕ್ಷ್ಮೀ
ಪತಿಯ ಸಂಬಂಧವಾದ ಉತ್ತಮವಾದ ಈ ಚರಿತ್ರೆಯನ್ನು ॥ ೫೩ ॥

ದ್ಧಯಾಯುಕ್ತೋದೇವೋವಾಮನುಜೋಪಿವಾ ॥ ತಸ್ಯತ್ವದ್ದೃಷ್ಟಿಜನಿತಂಕಷ್ಟಂಮಾಭೂದ್ಗ್ರಹೋತ್ತಮ ॥೫೪॥ ಮೃತ್ಯುಸ್ಥಾನಗತೋವಾಪಿದುಷ್ಟಸ್ಥಾನಸ್ಥಿತೋಪಿವಾ ॥ ತ್ವಂನಕುರ್ಯಾಸ್ತಸ್ಯಪೀಡಾಮಾಜ್ಞಯಾಮಮಭಾನುಜ ॥ ೫೫ ॥ ಇತಿದೇವವಚಃಶ್ರುತ್ವಾಶನಿಶ್ಚೋಶನಸಾಸಹ ॥ ತಥೇತ್ಯುಕ್ತ್ವಾಪ್ರಣಮ್ಯೇಶಂಪ್ರಯಯೌಗ್ರಹಮಂಡಲಂ ॥೫೬॥ ಸೂತಃ॥ ಇತೀವಕಥಿತಂವಿಪ್ರಶಿವಮಾಹಾತ್ಮ್ಯಮುತ್ತಮಂ ॥ ಸರ್ವೇಶ್ವರೋಪಿಭಗವಾನ್ಹರೋಹರಿರಪಿಸ್ವಯಂ ॥೫೭॥ ಸ್ವಸೃಷ್ಟಪಾಲನಾಯೈವಲೀಲಾಂವಿದಧತೇನಿಶಂ ॥ ಸರ್ವಜ್ಞೌಸರ್ವಕರ್ತಾರೌಜಗತ್ಕಾರಣಕಾರಣೌ ॥ ೫೮ ॥ ಮಾಧ

ದೇವನಾಗಲಿ, ಮನುಷ್ಯನಾಗಲಿ ಕೇಳುತ್ತಾನೋ ಅಂಥವನಿಗೆ ನಿನ್ನ ದೃಷ್ಟಿಯಿಂದುಂಟಾದ ತಪ್ಪು ಆಗದೆ ಹೋಗಲಿ ॥ ೫೪ ॥ ಭಾನುಪುತ್ರನೇ ಮೃತ್ಯುಸ್ಥಾನ, ದುಷ್ಟಸ್ಥಾನದಲ್ಲಿದ್ದವನಾದರೂ ನೀನು ನನ್ನ ಅಪ್ಪಣೆಯಿಂದ ಅವನಿಗೆ ಪೀಡೆಯನ್ನು ಮಾಡಬಾರದು ॥೫೫॥ ಇತ್ತಲಾ ಸೂತಪೌರಾಣಿಕನು, ಎಲೈ ಬ್ರಾಹ್ಮಣಶ್ರೇಷ್ಠರೇ ಕೇಳಿ. ಈ ಪ್ರಕಾರವಾದ ಭಗವಂತನ ಚರಿತ್ರೆಯನ್ನು ಹೇಳಿದುದಾಯಿತು. ಜಗತ್ಸ್ವಾಮಿಯಾದರೂ ಶ್ರೀ ಪರಮೇಶ್ವರನು, ಶ್ರೀ ಮಹಾವಿಷ್ಣುವಿನಿಂದ ಸೃಜಿಸಲ್ಪಟ್ಟ ಸೃಷ್ಟಿಯನ್ನು ಪಾಲಿಸುವುದಕ್ಕೋಸ್ಕರ ಹೀಗಿರುವ ನಾನಾಪ್ರಕಾರವಾದ ಲೀಲೆಗಳನ್ನು ಒಪ್ಪಿಕೊಳ್ಳುತ್ತಿರುವನು. ಆದರೆ ಈ ಪ್ರಸಿದ್ಧರಾದ ಜಗದೀಶ್ವರರಿಬ್ಬರೂ ಸರ್ವಜ್ಞರಾಗಿ ಸರ್ವಕ್ಕೂ ಕರ್ತೃತ್ವದಲ್ಲಿ ಅಧ್ಯಕ್ಷರಾಗಿ ಜಗತ್ತಿಗೆ ಕಾರಣವಾದ ಮಾಯಾಶಕ್ತಿಗೆ ಕಾರಣರಾಗಿ ॥ ೫೭ ॥ ೫೮ ॥ ಲಕ್ಷ್ಮೀದೇವಿ, ಪಾರ್ವತೀದೇವಿಗಳಿಗೆ ಪತಿಗಳಾದ ಆ ಇರ್ವರೂ ಪರಮಾತ್ಮರಾಗಿರುವರು. ಅಂಥವರಿಗೆ ಯಾವ ಶನಿಯು ಬಾಧಕವಾದೀತು. ಆ ಪರಮಾತ್ಮರ ದೃಷ್ಟಿ ಚಲನ ಮಾತ್ರದ ದೆಸೆಯಿಂದ ಸೃಷ್ಟಿಪಾಲನಾಶನಗಳು ಅನೇಕಾವೃತ್ತಿ ಆಗುತ್ತಿರುವವು. ಎಲೈ ಶೌನಕಾದಿಮುನಿಗಳಿರಾ, ಅಂತಹ ದೇವರಿಗೆ

ವ್ರೋಮಾಧವೌದೇವೌಕಾದೃಷ್ಟಿಸ್ತುಶನೇಸ್ತಯೋಃ ॥ ಯದ್ಭ್ರೂವಿ
ಚಲನಾದೇವಸೃಷ್ಟಿಸ್ಥಿತಿಲಯಾಅಪಿ ॥ ೫೯ ॥ ಭವಿಷ್ಯಂತ್ಯಸಕೃ
ದ್ವಿಪ್ರದೇವದೇವೇಶಯೋಸ್ತಯೋಃ। ಯಏತತ್ಪುಣ್ಯಮಾಖ್ಯಾನಂ
ಗ್ರಹಪೀಡಾನಿವಾರಣಂ ॥ ೬೦ ॥ ಶೃಣೋತಿಸತತಂಭಕ್ತ್ಯಾಶನಿ
ಸ್ತಂನೈವಬಾಧತೇ॥ಯದಾಚೋಶನಸಾಯುಕ್ತಶ್ಶನಿಃಪಾಪಸ್ವಭಾ
ವಜಂ ॥ ೬೧ ॥ ತ್ಯಕ್ತ್ವಾಶುಭಸ್ವಭಾವೇನಪ್ರಜಾಃಪಾಲಯತೇಸ
ದಾ॥ಅತಃಶುಕ್ರೇಣಸಹಿತೋಯಯೌದೃಷ್ಟ್ವಾಮಹೇಶ್ವರಂ॥೬೨॥
ಏತದಾಖ್ಯಾನಮಾಯುಷ್ಯಂಗ್ರಹಪೀಡಾನಿವಾರಣಂ ॥ ಯಃಶೃ
ಣೋತಿಗ್ರಹಾಸ್ತಸ್ಯಶುಭಸ್ಥಾನಫಲಪ್ರದಾಃ ॥೬೩॥ ಭವಿಷ್ಯಂತಿನಸಂ
ದೇಹಃಕೇಶವೇಶಪ್ರಸಾದತಃ। ತಸ್ಮಾತ್ಸರ್ವಪ್ರಯತ್ನೇನಸರ್ವದಾಯುಃ

ಶನಿಯುಬಾಧೆ ಎನ್ನುವುದು ಅವರ ವಿಲಾಸಮಾತ್ರವೇಹೊರತು ಬೇರೆ ಇಲ್ಲ. ಯಾವಾತನು ಪುಣ್ಯತಮವಾದ ಗ್ರಹಪೀಡಾ ನಾಶಕವಾದ ಈ ಚರಿತ್ರೆಯನ್ನು ಭಕ್ತಿಯಿಂದ ಕೇಳುವನೋ, ಅವನನ್ನು ಶನಿಯು ಬಾಧಿಸುವುದಿಲ್ಲ. ಯಾವಾಗ ಶುಕ್ರನಿಂದ ಶನಿಯು ಕೂಡಿರುವನೋ ಆಗ ಪಾಪಗ್ರಹ ಸ್ವಭಾವವನ್ನು ॥ ೫೮ ॥ ೫೯ ॥ ೬೦ ॥ ಬಿಟ್ಟು ಶುಭಗ್ರಹಭಾವದಿಂದ ಪ್ರಜೆಗಳನ್ನು ಪಾಲಿಸುವನು. ಆದರಿಂದಲೇ ಶುಕ್ರನಿಂದ ಕೂಡಿಕೊಂಡು ಶ್ರೀಪರಮೇಶ್ವರನನ್ನು ನೋಡುವುದಕ್ಕೆ ಹೋಗಿದ್ದನು ॥೬೧॥ ಆಯುಷ್ಯಾಭಿವೃದ್ಧಿಕರವಾದ, ಸರ್ವಗ್ರಹಪೀಡಾನಾಶಕವಾದ ಈ ಚರಿತ್ರೆಯನ್ನು ಯಾವನು ಕೇಳುವನೋ ಅವನಿಗೆ ಸರ್ವಗ್ರಹಗಳೂ ಶುಭಸ್ಥಾನ ಫಲವನ್ನು ಕೊಡುವರು ॥ ೬೨ ॥ ಶ್ರೀ ಮಹಾ ವಿಷ್ಣು ಪರಮೇಶ್ವರರ ಅನುಗ್ರಹದಿಂದ ಗ್ರಹಗಳು ಶುಭಫಲವನ್ನು ಕೊಡುವರು. ಆ ಕಾರಣದದೆಸೆಯಿಂದ ಯಾವಾತನು ಬಹು ಪ್ರಯತ್ನದಿಂದಲಾದರೂ ಓದುತ್ತಿರುವನೋ ಅವನು ಈ ಲೋಕದಲ್ಲಿ ಸುಖಿಯಾಗಿ ಆ ಮೇಲೆ

ಪರಿಷ್ಯತಿ॥೬೪॥ಇಹಲೋಕೇಸುಖೀಭೂತ್ವಾಶಿವಮೇವಪ್ರಜೇತ್ತತಃ॥

ಇತಿ ಶ್ರೀ ಸ್ಕಂದಪುರಾಣೇ ತುಂಗಭದ್ರಾ ಖಂಡೆ
ಶ್ರೀ ಕಲಶೇಶ್ವರ ಮಹಿಮಾನುವರ್ಣನ
ವಿಘ್ನೇಶ್ವರ ಚರಿತ್ರೆ ಶನೈಶ್ಚರ ಚರಿತ್ರಾನುವರ್ಣನಂ
ನಾಮವಿಂಶೋಧ್ಯಾಯಃ ॥

ಶ್ರೀ ಭಗವಂತನನ್ನೇ ಕುರಿತು ಹೋಗುವನು ...... ॥೬೩॥೬೪॥

ಈ ಪ್ರಕಾರವಾಗಿ ಸ್ಕಂದಪುರಾಣ ತುಂಗಭದ್ರಾಖಂಡದಲ್ಲಿ ಹೇಳಿರುವ
ಕಲಶೇಶ್ವರ ಮಹಿಮೆಯಲ್ಲಿ ಶನೈಶ್ಚರ ಚರಿತ್ರ ಯುಕ್ತವಾದ
ಶ್ರೀ ಭವಚ್ಚರಿತ್ರವೆಂಬ ಇಪ್ಪತ್ತನೆಯ ಅಧ್ಯಾಯವು
ಸಂಪೂರ್ಣವಾದುದು.
ಶ್ರೀ॥ ಶ್ರೀ॥ ಶ್ರೀ.

ಶ್ರೀಸೂತಃ ॥ ಕಲಶೇಶಸ್ಯಹೇವಿಪ್ರದಕ್ಷಿಣೇನೈರ್ಋತಾವಪಿ ॥ ಪಶ್ಚಿಮೇವಾಯುದಿಗ್ಭಾಗಈಶದಿಗ್ಭಾಗತಃಕ್ರಮಾತ್ ॥ ೧ ॥ ಲೋಕೇಖ್ಯಾತಾನಿತೀರ್ಥಾನಿಪಾವನಾನಿವಸಂತಿಹಿ ॥ ಕೋಶತೀರ್ಥಂಕೋಟಿತೀರ್ಥಂರುದ್ರತೀರ್ಥಂಮನೋಹರಂ ॥೨॥ ಮಾತೃಕಾನಿಲಯಂಚೈವನಾಗತೀರ್ಥಮಿತಿಕ್ರಮಾತ್ ॥ ಏತಾನಿಮುಖ್ಯತೀರ್ಥಾನಿತುಂಗಭದ್ರಾನ್ವಿತಾನ್ಯಪಿ ॥ ೩ ॥ ಏಷುಸ್ನಾನಂನರಃಕುರ್ಯಾದ್ಯಾತ್ರಾಕ್ರಮವಿಧಾನತಃ ॥ ವಿಧಿನಾಸ್ನಾನಮಾತ್ರೇಣಲೋಕದ್ವಯಸುಖೀಭವೇತ್ ॥ ೪ ॥ ಯಾತ್ರಾಕ್ರಮಂಪ್ರವಕ್ಷಾಮಿಮಾಹಾತ್ಮ್ಯಂಕಲಶೇತಿ

೨೧ನೆಯ ಅಧ್ಯಾಯ ಪ್ರಾರಂಭ.

ಸೂತಪೌರಾಣಿಕನು ಎಲೈ ವೇದಾಧ್ಯಯನಶೀಲರಾದ ಮಹನೀಯರೆ ಕೇಳಿ. ಶ್ರೀ ಕಲಶೇಶ್ವರ ಸ್ವಾಮಿಯ ದಕ್ಷಿಣ, ನೈರುತ್ಯ, ಪಶ್ಚಿಮ, ವಾಯುವ್ಯ, ಈಶಾನ್ಯದಿಕ್ಕುಗಳಲ್ಲಿ ಕ್ರಮವಾಗಿ ||೧|| ಲೋಕದಲ್ಲಿ ಪ್ರಸಿದ್ಧಗಳಾದ, ಪವಿತ್ರಗಳಾದ ಕೋಶತೀರ್ಥ, ಕೋಟಿತೀರ್ಥ, ರುದ್ರತೀರ್ಥ, ಅಂಬಾತೀರ್ಥ, ನಾಗತೀರ್ಥವೆಂದು ಐದು ತೀರ್ಥಗಳು ಬಹು ಶುಭಗಳಾಗಿ ಇವೆ. ಇಷ್ಟು ಮುಖ್ಯ ತೀರ್ಥಗಳ ಪೂರ್ವಕವಾಗಿ ತುಂಗಭದ್ರಾನದಿಯು ಪ್ರವಹಿಸುತ್ತದೆ || ೨ || ೩ || ಈ ತೀರ್ಥಗಳಲ್ಲಿ ಮನುಷ್ಯನು ಯಾತ್ರೆಯ ವಿಧಾನಕ್ರಮದಿಂದ ಸ್ನಾನ ಮಾಡಿದ ಮಾತ್ರದಿಂದಲೇ ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖಿಯಾಗುವನು || ೪ || ಶ್ರೀ ಕಲಶೇಶ್ವರಸ್ವಾಮಿಯ ಮಹಿಮೆಯಾದ ತೀರ್ಥಯಾತ್ರಾ ಕ್ರಮವನ್ನು ಹೇಳುತ್ತೇನೆ. ಇದನ್ನು ಕೇಳಿದರೆ ಸಮಸ್ತ ಪಾಪಗಳ ದೆಸೆಯಿಂದ ಬಿಡಿಸಿಕೊಳ್ಳುವನು. ಮತ್ತು ಎಷ್ಟು ಕಾಲ ಬದುಕಿರುವನೋ ಅಷ್ಟು ಕಾಲವೂ ಸುಖಿಯಾಗಿರುವನು. ಆಮೇಲೆ ಶರೀರಾಂತ್ಯದಲ್ಲಿ ಮೋಕ್ಷಕ್ಕೂ ಕಾರಣವಾಗಿರುವನು. ಹೀಗಿರುವ ಈ ಪಂಚತೀರ್ಥಯಾತ್ರೆಯನ್ನು

ತುಃ ॥ ಯುಚ್ಛ್ರುತ್ವಾಸರ್ವಪಾಪೇಭ್ಯೋವಿಮುಚ್ಯತೇನಾತ್ರಸಂಶಯಃ ॥೫॥ಯಾವಜ್ಜೀವತಿತಾವಚ್ಚ ಸುಖೀಮೋಕ್ಷಾದಿಕಾರಣಂ॥ ಪ್ರಭಾತೇ ಶಿಖರಂದೃಷ್ಟ್ವಾಮೌನೀಭೂತ್ವಾಸಮಾಹಿತಃ॥೬॥ ಕದಳೀನಾಳಿಕೇರಾಣಿದಶಸಂಖ್ಯಾಮಿತಾನ್ಯಪಿ॥ಅಕ್ಷತಾಂಶ್ಚತಿಲಾಂದರ್ಭಾನಾದಾಯಾಹತವಾಸಸೀ ॥೭॥ ಪ್ರಥಮಂಕೋಟಿತೀರ್ಥಾಖ್ಯಂಮಹಾಪಾತಕನಾಶನಂ॥ಗತ್ವಾತತ್ರಮಹಾತೀರ್ಥಂದೃಷ್ಟ್ವಾಭಕ್ತ್ಯಾಪ್ರಣಮ್ಯಚ॥೮॥ ಪ್ರಾಣಾಯಾಮಂವ್ಯಸಂಕಲ್ಪ್ಯಭಕ್ತಿಧ್ಯಾನಪುರಸ್ಸರಂ ॥ ಪ್ರವಾಹಾಭಿಮುಖಸ್ತತ್ರಪಾತೇಸ್ನಾಯೀವಿಶಿಷ್ಯತೇ ॥ ೯ ॥ ಸಪ್ತವಿಂಶತಿ ಸಂಖ್ಯಾಕೈರ್ಗೋಮುದ್ರೈಃಸ್ನಾನಮಾಚರೇತ್ ॥ ಏತೋನ್ವಿಂದ್ರಂಶುಚೀವಶ್ಚಹ್ಯಕ್ಷೀಭ್ಯಾಮಿತಿಸೂಕ್ತಕಂ ॥ ೧೦ ॥ ಜಪ್ತ್ವಾ

ಮಾಡುವ ಕ್ರಮವನ್ನು ಹೇಳುತ್ತೇನೆ. ಪ್ರಾತಃಕಾಲದಲ್ಲಿ ಎದ್ದು ಶರೀರಧರ್ಮವಾದ ಶೌಚಾಚಮನವನ್ನು ಮಾಡಿಕೊಂಡು ಶ್ರೀ ದೇವಾಲಯದ ಶಿಖರವನ್ನು ನೋಡಿ ದೇವರನ್ನು ಸ್ಮರಿಸಿ ಸ್ವಸ್ಥಚಿತ್ತನಾಗಿ ಮೌನವನ್ನುತಾಳಿ ॥ ೫ ॥ ೬ ॥ ಹತ್ತು ತೆಂಗಿನಕಾಯಿಗಳನ್ನೂ ಬಾಳೆಹಣ್ಣುಗಳನ್ನೂ ಅಕ್ಷತೆ, ತಿಲ, ದರ್ಭೆಗಳನ್ನೂ ಎರಡು ಹೊಸ ವಸ್ತ್ರಗಳನ್ನೂ ಸಹ ತೆಗೆದುಕೊಂಡು ॥೭॥ ಮಹಾ ಪಾಪವನ್ನು ಕೂಡ ನಾಶಮಾಡುವ ಮೊದಲನೆಯದಾದ ಕೋಟಿತೀರ್ಥವನ್ನು ಕುರಿತು ಹೋಗಿ ಅಲ್ಲಿ ಉತ್ತಮವಾದ ಆ ತೀರ್ಥವನ್ನು ನೋಡಿ ವಿಶ್ವಾಸದಿಂದ ನಮಸ್ಕರಿಸಿ ॥ ೮ ॥ ಭಕ್ತಿಯಿಂದ ಭಗವಧ್ಯಾನಪೂರ್ವಕವಾಗಿ ಪ್ರಾಣಾಯಾಮವನ್ನು ಮಾಡಿ ಅಲ್ಲಿ ಪ್ರವಾಹಾಭಿಮುಖನಾಗಿ ನದಿ ಬರುವ ಸ್ಥಳದಲ್ಲಿಯೇ ಸ್ನಾನವನ್ನು ಮಾಡಬೇಕು ॥ ೯ ॥ ಕೈಯಲ್ಲಿ ಸುರಭಿಮುದ್ರೆಯನ್ನು ಮಾಡಿಕೊಂಡು ಅವುಗಳಿಂದ ಇಪ್ಪತ್ತೇಳು ಸಂಖ್ಯೆಗಳಿಂದ ಮುಂದೆ ಹೇಳುವ ಮಂತ್ರಗಳನ್ನು ಹೇಳುತ್ತ ಸ್ನಾನವನ್ನು ಮಾಡಬೇಕು. ಏತೋನ್ವಿಂದಂ ಶುಚೀವೋಹವ್ಯಾಅಕ್ಷೀಭ್ಯಾಂತೇ. ಇವುಗಳನ್ನು ಪ್ರತಿತೀರ್ಥ ಸ್ನಾನದಲ್ಲಿಯೂ ಹೇಳಬೇಕು ॥ ೧೦ ॥ ಹೀಗೆ ಜಪಿಸಿ ಸ್ನಾನ

ಸ್ನಾತ್ವಾತತೋವಿಪ್ರೋಜಲಾದುತ್ತೀರ್ಯಭಕ್ತಿತಃ ॥ ಧೃತ್ವೈವ ನೂತನಂವಸ್ತ್ರಂಪರಿಧಾಯೋತ್ತರೀಯಕಂ ॥ ೧೧ ॥ ತ್ರಿಪುಂಡ್ರಂಭಸ್ಮನಾಧೃತ್ವಾನಿತ್ಯಕರ್ಮಾದಿಕಂಚರೇತ್ ॥ ಅಷ್ಟೋತ್ತರ ಶತಂಚೈವಪಂಚಾಕ್ಷರಮನುಂಜಪೇತ್ ॥ ೧೨ ॥ ತಿಲೇನತರ್ಪಣಂ ಕೃತ್ವಾಪಿತೄನ್‌ಭಕ್ತಿಸಮನ್ವಿತಃ ॥ ತೀರ್ಥಂಸಂಪೂಜ್ಯಚಾದ್ರಿಸ್ಥ ಕೋಶಾಂಶ್ಚೈವವಿಶೇಷತಃ ॥ ೧೩ ॥ ಗೋಪಾಲಂಪುರತೋಗಸ್ತ್ಯ ಚರಣಂಪೂಜಯೇತ್ತತಃ ॥ ಧ್ಯಾನಾದಿಪೂಜಾಂಕೃತ್ವೈವಪ್ರಾರ್ಥ ಯಿತ್ವಾಯಥಾಕ್ರಮಂ॥೧೪॥ದೇವಾಖ್ಯಪರ್ವತಸ್ಯೈವಕುರ್ಯಾದ್ದರ್ಶ ನಮುತ್ತಮಂ ॥ ತತ್ಪುರಸ್ತಾತ್ತತೋಗಚ್ಛೇತ್ಕೋಟಿತೀರ್ಥಂಮ ಹಾಫಲಂ ॥೧೫॥ ಭುಕ್ತಿಮುಕ್ತಿಪ್ರದಂನ್ರಾಣಾಂಸರ್ವರೋಗಪ್ರಣಾ

ಮಾಡಿದ ಬ್ರಾಹ್ಮಣನು ನೀರಿನ ದೆಸೆಯಿಂದ ಮೇಲಕ್ಕೆ ಬಂದು ಒರಸಿ ಕೊಂಡನಂತರ ಭಕ್ತಿಯಿಂದ ಭಸ್ಮತ್ರಿಪುಂಡ್ರವನ್ನು ಧರಿಸಿ ನಿತ್ಯಕರ್ಮ ಗಳನ್ನು ಮಾಡಿ ಭಸ್ಮಧಾರಣೆಗಿಂತ ಮೊದಲು ಹೊಸ ವಸ್ತ್ರವನ್ನುಟ್ಟು ಕೊಂಡು, ಹೊದ್ದುಕೊಂಡು ಆ ನಂತರ ಈ ಹೇಳಿದ ಕರ್ಮವನ್ನು ಮಾಡಿ ನೂರೆಂಟು ಪಂಚಾಕ್ಷರಿ ಮಂತ್ರವನ್ನು ಜಪಿಸಬೇಕು ॥೧೧॥ ॥ ೧೨ ॥ ಭಕ್ತಿಪೂರ್ವಕವಾಗಿ ಪಿತೃಗಳಿಗೆ ತಿಲೋದಕದಿಂದ ತರ್ಪಣವನ್ನು ಮಾಡಿ ತೀರ್ಥವನ್ನು ಸಮೀಪದಲ್ಲಿರುವ ಪರ್ವತದ ಗರ್ಭಗತೆಗಳಾದ ನಿಧಿಯನ್ನು ಪೂಜಿಸಿ ಪೂರ್ಣಫಲ ಸಮರ್ಪಣೆ ಮಾಡಿ ಹಣ್ಣುಕಾಯಿಗ ಳನ್ನು ಸಮರ್ಪಿಸಿ ॥ ೧೩ ॥ ಆ ಮೇಲೆ ಮುಂದೆ ಇರುವ ಶ್ರೀ ಗೋ ಪಾಲಮೂರ್ತಿಯನ್ನೂ ಅಗಸ್ತ್ಯಪಾದವನ್ನೂ ಧ್ಯಾನಿಸಿ ಪೂಜೆಯನ್ನು ಮಾಡಿ ಕ್ರಮವಾಗಿ ಪ್ರಾರ್ಥಿಸಿ ನವನಿಧಿಗಳನ್ನು ಸ್ಮರಿಸುತ್ತ ಸಮೀ ಪದ ಹಿಂಭಾಗದಲ್ಲಿರುವ ದೇವಪರ್ವತದ ದರ್ಶನವನ್ನು ಮಾಡಬೇಕು. ಅದು ಬಹು ಶ್ರೇಯಸ್ಕರವಾದದ್ದು. ಹೀಗೆ ಈ ತೀರ್ಥದ ಕಾರ್ಯವ ನ್ನು ಪೂರೈಸಿ ಮುಂದಿರುವ ಶುಭ ಫಲಪ್ರದವಾದ ಕೋಟಿತೀರ್ಥವನ್ನು ಕುರಿತು ಹೋಗತಕ್ಕದು ॥ ೧೪ ॥ ೧೫ ॥ ಆ ತೀರ್ಥವು ಮನುಷ್ಯ

ಶನಂ॥ತತ್ರತೀರ್ಥೇಮಹಾಪುಣ್ಯೇಸಂಕಲ್ಪಂಕಾರಯೇದ್ಬುಧಃ ॥೧೬॥ ಪೂರ್ವೋಕ್ತಕ್ರಮಮಾರ್ಗೇಣಸ್ನಾತ್ವಾಚಮ್ಯಯಥಾವಿಧಿ ॥ ಧೃತ್ವಾಭಸ್ಮಲಲಾಟೇಥಪಂಚಾಕ್ಷರಜಪಾದಿಕಂ ॥ ೧೭ ॥ ತಿಲೈಸ್ತುತರ್ಪಣಂಕೃತ್ವಾಹ್ಯಾಚಮ್ಯಪ್ರಣವಾದಿಕಂ॥ಅಗಸ್ತ್ಯಸ್ಥಾಪಿತಂಲಿಂಗಮಭಿಷಿಚ್ಯಯಥಾವಿಧಿ॥೧೮॥ ತಲ್ಲಿಂಗದರ್ಶನಾನ್ಮರ್ತ್ಯಃಶಿವಲೋಕಂಸಗಚ್ಛತಿ॥ದರ್ಶನಂನವಕನ್ಯಾಯಾಇಷ್ಟಕಾಮ್ಯಾರ್ಥಸಿದ್ಧಿದಂ॥೧೯॥ ವಾತಾಪಿರಿಲ್ವಲಶ್ಚೋಭೌದೈತ್ಯೌಲೋಕೋಪತಾಪನೌ ॥ ಪ್ರಜಾಪ್ರಾರ್ಥನಯಾಗಸ್ತ್ಯೋತಪಶ್ಶಕ್ತ್ಯಾನಿಹತ್ಯತೌ ॥೨೦॥ ತದ್ದೋಷ

ರಿಗೆ ಸಮಸ್ತ ರೋಗನಾಶಕನಾಗಿ ಇಹಲೋಕ, ಪರಲೋಕ ಸುಖಪ್ರದನಾಗಿರುವುದು. ಪುಣ್ಯತಮವಾದ ಆ ತೀರ್ಥದಲ್ಲಿ ಯಾತ್ರಾಕರ್ತನು ಸಂಕಲ್ಪವನ್ನು ಮಾಡತಕ್ಕದ್ದು ॥ ೧೬ ॥ ಹಿಂದೆ ಹೇಳಿದ ಕ್ರಮದೊಡನೆ ವಿಧಿಗನುಸಾರವಾಗಿ ಸ್ನಾನ ಮಾಡಿ, ಆಚಮನ ಮಾಡಿ, ಹಣೆಯಲ್ಲಿ ಭಸ್ಮವನ್ನು ಧರಿಸಿ, ಪಂಚಾಕ್ಷರಿ ಜಪ ಮೊದಲಾದುದನ್ನು ಮಾಡಿ ॥೧೭॥ ತಿಲ ತರ್ಪಣಗಳನ್ನು ಮಾಡಿ, ಆಚಮನವನ್ನು ಮಾಡಿ, ನೂರೆಂಟು ಪ್ರಣವವನ್ನು ಜಪಿಸಿ ಅಗಸ್ತ್ಯರಿಂದ ಸ್ಥಾಪಿಸಲ್ಪಟ್ಟ ಶಿವಲಿಂಗವನ್ನು ವಿಧಿಯಂತೆ ಶಕ್ತ್ಯನುಸಾರವಾಗಿ ಅಭಿಷೇಕಮಾಡಿ ॥ ೧೮ ॥ ಪೂಜಾದಿಗಳನ್ನು ಮಾಡತಕ್ಕದು. ಮನುಷ್ಯನು ಆ ಲಿಂಗದರ್ಶನದ ದೆಸೆಯಿಂದ ಭಗವಲ್ಲೋಕಕ್ಕೆ ಹೋಗಲರ್ಹನಾಗುವನು. ಮತ್ತು ಅಲ್ಲಿರುವ ನವದುರ್ಗಾದರ್ಶನವು ಇಷ್ಟಾರ್ಥದಾಯಕವಾದುದು. ಇದನ್ನು ಮಾಡಬೇಕು॥೧೯॥ ಪೂರ್ವಕಥೆ:-ವಾತಾಪಿ, ಇಲ್ವಲ ಎಂಬಿರ್ವರು ಕಶ್ಯಪ ವಂಶೀಯರಾದ ದೈತ್ಯರು. ಇವರು ಸಮಸ್ತ ಪ್ರಜೆಗಳಿಗೂ ಯಾವಾಗಲೂ ಕಷ್ಟವನ್ನು ಮಾಡುತ್ತಿದ್ದರು. ಅಗಸ್ತ್ಯರು ಅಲ್ಲಿಗೆ ಹೋದವೇಳೆ ಅಲ್ಲಿನ ಪ್ರಜೆಗಳು ಆ ಕಷ್ಟಪರಿಹಾರಕ್ಕೆ ಇವರನ್ನು ಪ್ರಾರ್ಥಿಸಿದ್ದರಿಂದ ಈ ಅಗಸ್ತ್ಯರು ತಪಶ್ಶಕ್ತಿಯಿಂದ ಅವರನ್ನು ಸಂಹರಿಸಿ ಆ ದೋಷ ಪರಿಹಾರಕ್ಕೋಸ್ಕರ ಶ್ರೀ ಕಲಶೇಶ್ವರ ಸ್ವಾಮಿಯ ಪಶ್ಚಿಮಭಾಗದಲ್ಲಿ ಶಿವಲಿಂಗವನ್ನು ಪ್ರತಿಷ್ಠೆ ಮಾಡಿ ಇಲ್ವಲೇಶ್ವರನೆಂದು ನಾಮವನ್ನು ಕಲ್ಪಿಸಿದರು ॥ ೨೦ ॥

ಪರಿಹಾರಾಯಕಲಶೇಶ್ವರನೈರ್ರೈತೇ ॥ ಶಿವಲಿಂಗಂಚಸಂಸ್ಥಾಪ್ಯನಾಮಚಕ್ರೇಲ್ವಲೇಶ್ವರಂ ॥ ೨೧ ॥ ಸಹಸ್ರಮೃಷಿಸಂಖ್ಯಾಂಶ್ಚಸಮೂಹಂಕೋಟಿಕೋಟಿಶಃ ॥ ಲಿಂಗಪ್ರತಿಷ್ಠಾಸಮಯೇಸಮೇತಂಬ್ರಹ್ಮವರ್ಚಸಂ ॥೨೨॥ ತಸ್ಮಾತ್ತತ್ಕೋಟಿತೀರ್ಥಂಹಿನಾಮ್ನಾಖ್ಯಾತಂಜಗತ್ರಯೇ ॥ ತತ್ರಸ್ನಾತ್ವನರೋಯಾತಿಮಮಲೋಕಂನಸಂಶಯಃ ॥೨೩॥ ತತ್ಪುರಸ್ತಾತ್ತಪಸ್ತೇಪೂರುದ್ರಾಏಕಾದಶೈವಯತ್ ॥ ಮಹಾದೇವಪ್ರಸಾದಾರ್ಥಮಬ್ದಾನಾಂತ್ರಿಸಹಸ್ರಕಂ ॥೨೪॥ ಪ್ರಸನ್ನಃ ಪಾರ್ವತೀಕಾಂತ್ರಸ್ತೇಷಾಮಿಷ್ಟವರಂದದೌ॥ವರಪ್ರದಾನಸಮಯೇಶಿಲಾಯಾಂತಸ್ಥಿವಾನ್‌ಶಿವಃ ॥ ೨೫ ॥ ತಸ್ಥುಷೋದೇವದೇವಸ್ಯ

॥೨೧॥ ಈ ಪ್ರತಿಷ್ಠೆಯು ಕಾಲದಲ್ಲಿ ಅನೇಕವಾದ ಬ್ರಹ್ಮ ತೇಜಸ್ವಿಗಳಾದ ಋಷಿ ಸಮೂಹವು ಕೋಟಿ ಗುಣಿತವಾಗಿ ಸೇರಿದುದರಿಂದ ಆ ಮಹಾತ್ಮರು ವಿಚಾರಿಸಿ ಕೋಟಿ ತೀರ್ಥವೆಂಬ ನಾಮವನ್ನು ಕಲ್ಪಿಸಿದರು ॥ ೨೨ ॥ ಅದರ ದೆಸೆಯಿಂದ ಮೂರು ಲೋಕದಲ್ಲಿಯೂ ಆ ಹೆಸರು ಪ್ರಸಿದ್ಧವಾಯಿತು. ಅಲ್ಲಿ ಮನುಷ್ಯನು ಸ್ನಾನಮಾಡಿ ಆ ಪುಣ್ಯದಿಂದ ನನ್ನ ಲೋಕವನ್ನು ಹೊಂದುವನು ಎಂದು ಭಗವದ್ವಾಕ್ಯವು ॥೨೩॥ ಆ ಕೋಟಿ ತೀರ್ಥದ ಮುಂದೆ ರುದ್ರತೀರ್ಥವಿರುವುದು. ಅಲ್ಲಿ ಪೂರ್ವದಲ್ಲಿ ಏಕಾದಶರುದ್ರರು ಶ್ರೀಭಗವಂತನ ಅನುಗ್ರಹವನ್ನು ಸಂಪಾದಿಸಿಕೊಳ್ಳುವುದಕ್ಕೋಸ್ಕರ ಮೂರು ಸಹಸ್ರ ವರ್ಷ ತಪಸ್ಸನ್ನು ಮಾಡಿದರು ॥ ೨೪ ॥ ಶ್ರೀ ಪಾರ್ವತೀಪತಿಯು ಅವರಿಗೆ ಪ್ರಸನ್ನನಾಗಿ ಇಷ್ಟಾರ್ಥವನ್ನು ಕೊಟ್ಟನು. ವರಪ್ರದಾನ ಕಾಲದಲ್ಲಿ ದೊಡ್ಡದಾದ ಅಲ್ಲಿರುವ ಕಲ್ಲಿನ ಮೇಲೆ ಆ ಮಂಗಲಮೂರ್ತಿಯು ನಿಂತಿದ್ದನು ॥ ೨೫ ॥ ತಾನು ವರಪ್ರದಾನ ಮಾಡಿದ ಸ್ಥಳದಲ್ಲಿ ಭಕ್ತರಿಗೆ ಭಕ್ತಿಯು ವೃದ್ಧಿಯಾಗಬೇಕೆಂಬ ಮತ್ತು ಗುರುತಾಗಿರಬೇಕೆಂಬ ಇಚ್ಛೆಯಿಂದ ಅಲ್ಲಿ ನಿಂತ ಶ್ರೀಭಗವಂತನ ಪಾದಪದ್ಮಗಳ ಗುರುತು ಶಿಲಾಪ್ರದೇಶದಲ್ಲಿ ಕಾಣುತ್ತದೆ. ಅದನ್ನು ನೋಡುವವರ ದೆಸೆಯಿಂದ ಸಮಸ್ತ

ಪಾದಚಿಹ್ನಾಶಿಲಾತಳೇ ॥ ದೃಶ್ಯತೇದರ್ಶನಾತ್ತಸ್ಯ ಸರ್ವಪಾಪಂ ಪ್ರಣಶ್ಯತಿ ॥೨೬॥ ದ್ವೇಶಿಲೇತೇಪ್ರಕಾಶೇತೇಶಿವಪಾದಾಂಕಿತೇಭುವಿ॥ ಏಕೋಪರ್ಯಾಗತಾಭದ್ರಸರ್ವಪಾಪಪ್ರಣಾಶಿನೀ ॥ ೨೭ ॥ ಪಶ್ಚಿಮಾಭಿಮುಖೀಭದ್ರಾತತ್ರಪ್ರವಹತೇನದೀ ॥ ಧೃಶ್ಯತೇಯತ್ರತತ್ರಾಪದಚಿಹ್ನಮಿಷ್ಟಾರ್ಥದಾಯಕಂ ॥ ೨೮ ॥ ಶಮೀಪತ್ರಪ್ರಮಾಣಂವಾ ಪಿಂಡಂ ಪಾರ್ವಣಲಕ್ಷಣಂ ॥ ಪಿತೄನುದ್ದಿಶ್ಯಯೋದದ್ಯಾತ್ಸಏವ ಕುಲನಂದನಃ ॥ ೨೯ ॥ ಪಿತರಸ್ತೃಪ್ತಿಮಾಪನ್ನಾಯಾವದಾಭೂತ ಸಂಪ್ಲವಂ ॥ ದಾಸ್ಯಂತಿ ಸಂತತಿಂತಸ್ಯಪುತ್ರಪೌತ್ರಪ್ರವರ್ಧಿನೀಂ ॥ ॥೩೦॥ ದಶದಾನಂತುಯಾದದ್ಯಾಚ್ಛ್ರಾದ್ಧಾಂತೇಪಿತೃತೃಪ್ತಯೇ॥ ಅಕ್ಷಯಾನ್ಲಭತೇಲೋಕಾನ್ಪಿತೃಭಿಃಸಹಮೋದತೇ॥೩೧॥ಅನ್ನಂದದಾ

ಪಾಪಗಳೂ ನಾಶವಾಗುವುವು ॥ ೨೬ ॥ ಶ್ರೀಭಗವಂತನ ಪಾದಗಳಿಂದ ಗುರುತಾದ ಕಲ್ಲುಗಳೆರಡು ಪ್ರಸಿದ್ಧವಾಗಿರುವುವು. ಅಲ್ಲಿ ಒಂದು ಶಿಲೆಯ ಮೇಲೆ ಸಮಸ್ತ ಪಾಪನಾಶಿನಿಯಾದ ಭದ್ರಾನದಿಯು ಪ್ರವಹಿಸುತ್ತಿರುವುದು ॥ ೨೭ ॥ ಅಲ್ಲಿ ಈ ಭದ್ರಾನದಿಯು ಪಶ್ಚಿಮಾಭಿಮುಖವಾಗಿ ಇಷ್ಟಾರ್ಥಪ್ರದವಾದ ಅಪಾದ ಚಿನ್ಹೆಯು ಎಲ್ಲಿರುವುದೋ ಅಲ್ಲಿ ಪ್ರವಹಿಸುವದು ॥ ೨೮ ॥ ಯಾವನು ಮೇಲಿರುವ ಶ್ರೀಪಾದದಲ್ಲಿ ಶಮೀಪತ್ರದಷ್ಟಾದರೂ ಅನ್ನಮಯವಾದ ಪಿಂಡವನ್ನು ಪಿತೃಗಳನ್ನು ಕುರಿತು ಕೊಡುವನೋ ಅವನು ಆ ಕುಲವನ್ನೆಲ್ಲಾ ಉದ್ಧರಿಸಿದವನು ॥೨೯॥ ಪಿತೃಗಳು ಈ ಪಿಂಡ ಪ್ರದಾನದಿಂದ ಮಹಾಪ್ರಳಯ ಪರ್ಯಂತ ತೃಪ್ತಿಯನ್ನು ಹೊಂದುವರು. ಮತ್ತು ಶ್ರಾದ್ಧಕರ್ತನಿಗೆ ಪುತ್ರಪೌತ್ರಾಭಿವೃದ್ಧಿಯಾದ ಸಂತಾನವನ್ನು ಕೊಡುವರು. ॥ ೩೦ ॥ ಯಾವನು ಶ್ರಾದ್ಧಾಂತ್ಯದಲ್ಲಿ ತೃಪ್ತಿಗೋಸ್ಕರ ದಶದಾನವನ್ನು ಕೊಡುವನೋ ಆತನ ಪಿತೃಗಳು ಶಾಶ್ವತಲೋಕವನ್ನೈದುವರು. ಆ ಮೇಲೆ ತಾನು ದೇಹಾಂತ್ಯದಲ್ಲಿ ಶಾಶ್ವತ ಲೋಕವನ್ನು ಹೊಂದುವನು ॥ ೩೧ ॥ ಅಲ್ಲಿ ಪಿತೃಗಳ,ವಿಶ್ವೇದೇವತೆಗಳ ಉದ್ದೇಶದಿಂದ

ತಿವಿಪ್ರೇಭ್ಯೋದ್ಯೈವಂಪ್ರೈತ್ರಂತುಭಕ್ತಿತಃ॥ ಭುಂಜತಾಂಬ್ರಾಹ್ಮಣಾನಾಂಚ ಕಬಳಾನಾಂಚಸಂಖ್ಯಯಾ ॥೩೨॥ ಏಕೈಕಸ್ಯಚಗೋದಾನ ಫಲಮಾಪ್ನೋತ್ಯಸಂಶಯಂ ॥ ತಸ್ಮಾತ್ತತ್ರಪ್ರಕುರ್ವೀತ ವಿಪ್ರಾಣಾಮನ್ನತರ್ಪಣಂ ॥೩೩॥ ಏವಂಪ್ರಭಾವಂತತ್ತೀರ್ಥಂರುದ್ರತೀರ್ಥಮಿತಿಶ್ರುತಂ ॥ ಸರ್ವಸಂಪತ್ಪ್ರದಂಚೈವಭಗವದ್ಭಕ್ತಿದಾಯಕಂ ॥೩೪॥ ಏವಂತೀರ್ಥಕ್ರಮಂಕೃತ್ವಾಮಾತೃಕಾನಿಲಯಂವ್ರಜೇತ್ ॥ ಅಂಬಾತೀರ್ಥಮಿತಿಖ್ಯಾತಂ ಸರ್ವಪಾಪಪ್ರಣಾಶನಂ ॥ ॥೩೫॥ ತತ್ರೈಕ ಸ್ನಾನಮಾತ್ರೇಣಶಿವಸಾಯುಜ್ಯಮಾಪ್ನುಯಾತ್॥ ಬ್ರಹ್ಮಹತ್ಯಾಸಹಸ್ರಾಣಿ ವೀರಹತ್ಯಾಶತಾನಿಚ ||೩೬॥ ಅತ್ಯುಗ್ರಾ

ಅನ್ನದಾನವನ್ನು ಬ್ರಾಹ್ಮಣರಿಗಳಿಗೋಸ್ಕರ ಭಕ್ತಿಯಿಂದ ಕೊಡುವನೋ ಅವನು ಆ ಬ್ರಾಹ್ಮಣರು ಭೋಜನ ಮಾಡುವ ಕಬಳಗಳ ಲೆಕ್ಕದಂತೆ ಒಂದು ಕಬಳಕ್ಕೆ ಒಂದು ಗೋದಾನ ಫಲವನ್ನು ಹೊಂದುವನು, ಅನುಮಾನವಿಲ್ಲವು. ಹಾಗೆ ಉತ್ತಮ ಸ್ಥಳವಾದ ದೆಸೆಯಿಂದಲೇ ಅಲ್ಲಿ ಬ್ರಾಹ್ಮಣರಿಗೆ ಅನ್ನಸಂತರ್ಪಣೆಯನ್ನು ಮಾಡಬೇಕು ||೩೨||೩೩|| ಈ ಪ್ರಕಾರ ಮಹಿಮೆಯುಳ್ಳ ಸಮಸ್ತ ಶ್ರೇಯಸ್ಸನ್ನೂ ಕೊಡುವ ಭಗವಂತನಲ್ಲಿ ಭಕ್ತಿಯನ್ನುಂಟುಮಾಡುವ ಆ ತೀರ್ಥವು ರುದ್ರತೀರ್ಥವೆಂದು ಪ್ರಸಿದ್ಧವಾಗಿರುವುದು || ೩೪ || ಹೀಗೆ ರುದ್ರತೀರ್ಥ ವಿಧಿಯನ್ನು ಪೂರೈಸಿಕೊಂಡು ಅಂಬಾ ತೀರ್ಥವನ್ನು ಕುರಿತು ಹೋಗತಕ್ಕುದು. ಆ ತೀರ್ಥವು ಮಾತೃಕಾ ನಿಲಯವೆಂಬ ಹೆಸರಿನಿಂದ ಇರುವುದು; ಸಮಸ್ತಪಾಪವನ್ನೂ ಪರಿಹರಿಸುವುದು || ೩೫ || ಅಲ್ಲಿ ಬಂದು ಸ್ನಾನಮಾಡಿದ ಮಾತ್ರದಿಂದಲೇ ಶಿವಸಾಯುಜ್ಯವನ್ನು ಹೊಂದುವನು. ಮತ್ತು ಅಲ್ಲಿ ಸ್ನಾನ ಮಾಡುವುದರಿಂದ ಅನೇಕ ವೀರಹತ್ಯಾ, ಬ್ರಹ್ಮಹತ್ಯಾ ಪಾಪಗಳು ಲಯವಾಗುವುವು ||೩೬|| ಮತ್ತು ಅತಿಕಠಿನ ಪಾಪಗಳು ಕ್ಷಣಕಾಲದಲ್ಲಿಯೇ ನಾಶವನ್ನು ಹೊಂದುವುವು. ಹೀಗಿರುವ ಆ ತೀರ್ಥದಲ್ಲಿ ಪ್ರಾಣಾಯಾಮ ಪೂರ್ವಕ

ಣಿಚಪಾಪಾನಿನಾಶಮಾಯಾಂತಿತತ್ಕ್ಷಣಾತ್॥ ಪ್ರಾಣಾನಾಯಮ್ಯ
ಸಂಕಲ್ಪ್ಯಭಕ್ತಿಭಾವಸಮನ್ವಿತಃ ॥ ೩೭ ॥ ಸ್ನಾತ್ವಾಚಮ್ಯಶುಚಿ
ರ್ಭೂತ್ವಾತರ್ಪಣಂಕುರುತೇದ್ವಿಜಃ ॥ ಅಷ್ಟಾಕ್ಷರೇಣಮಂತ್ರೇಣ
ಮೋಕ್ಷಸಿದ್ಧಿರ್ಭವಿಷ್ಯತಿ ॥ ೩೮ ॥ ಉಪರಿಷ್ಟಾಚ್ಚಪಾಷಾಣಾ
ತ್ಸ್ನಾನಂಮುಸಲವನ್ನರಃ ॥ ಯಃಕರೋತಿಸಸರ್ವೇಭ್ಯೋಪಾಪೇ
ಭ್ಯೋಮುಚ್ಯತೇಕ್ಷಣಾತ್ ॥ ೩೯ ॥ ಪುರಾದೇವಯುಗೇದೇವೋವೃ
ತ್ರಂಹತ್ವಾಶತಕ್ರತುಃ॥ ತದ್ಬ್ರಹ್ಮಹತ್ಯಾಪಾಪಸ್ಯಶಾಂತ್ಯೈಪ್ರಪೃಷ್ಟೋ
ಗುರುಸ್ತದಾ ॥೪೦॥ ಪ್ರೋವಾಚಮಾತೃನಿಲಯಂಬ್ರಹ್ಮಹತ್ಯಾನಿವಾ
ರಣಂ ॥ ತಚ್ಛ್ರುತ್ವಾತ್ವರಿತೋಭೂತ್ವಾಸಮಾಯಾತಸ್ತದಾಸ್ವ
ರಾಟ್ ॥೪೧॥ ದೃಷ್ಟ್ವಾತೀರ್ಥಸ್ಯವಿಭವಂತುಷ್ಟಾವುತ್ಪ್ಲುತ್ಯಚಾ

ಸಂಕಲ್ಪವನ್ನು ಮಾಡಿ ವಿಶ್ವಾಸದಿಂದ ಭಗವಧ್ಯಾನಪೂರ್ವಕನಾಗಿ॥೩೭॥
ಸ್ನಾನಮಾಡಿ ಆಚಮನಮಾಡಿ ಶುಚಿಯಾಗಿ ಬ್ರಾಹ್ಮಣನು ತರ್ಪಣ
ವನ್ನು ಮಾಡಿ ಅಲ್ಲಿ ಅಷ್ಟಾಕ್ಷರಿಮಂತ್ರ ಜಪ ಮಾಡುವುದರಿಂದ ಮೋ
ಕ್ಷ ಸಿದ್ಧಿಯು ಆಗುವುದು ॥೩೮॥ ಸ್ನಾನಕ್ರಮವು ಮೇಲಿರುವ ಕಲ್ಲಿನ
ದೆಸೆಯಿಂದ ಧುಮುಕಿ ಮೊಸಳೆಯಂತೆ ಯಾವನು ಸ್ನಾನವನ್ನು ಮಾಡು
ವನೋ ಅವನು ಆ ಕ್ಷಣದಲ್ಲಿಯೇ ಸಮಸ್ತ ಪಾಪಗಳ ದೆಸೆಯಿಂದ ಬಿಡಿಸಿ
ಕೊಳ್ಳುವನು ॥ ಪೂರ್ವಕಾಲದಲ್ಲಿ ದೇವಯುಗದಲ್ಲಿ ಶತಾಶ್ವಮೇಧವನ್ನು
ಮಾಡಿದ ದೇವೇಂದ್ರನು ವೃತ್ರಾಸುರನನ್ನು ಸಂಹರಿಸಿ ಅದರಿಂದ ಬಂದ
ಬ್ರಹ್ಮ ಹತ್ಯವನ್ನು ಹೊಂದಿ ಅದರ ಪರಿಹಾರಕ್ಕೋಸ್ಕರ ದೇವೇಂದ್ರ
ನಿಂದ ಪ್ರಾರ್ಥಿಸಿಗೊಂಡ ಬೃಹಸ್ಪತ್ಯಾಚಾರ್ಯನು ॥೪೦॥ ಬ್ರಹ್ಮ
ಹತ್ಯನಾಶಕವಾದ ಮಾತೃನಿಲಯವೆಂಬ ಕಲಶಕ್ಷೇತ್ರದಲ್ಲಿರುವ ಅಂಬಾ
ತೀರ್ಥವನ್ನು ಉಪದೇಶಿಸಿದನು. ಆಗ ಆ ದೇವಸಾರ್ವಭೌಮನು ಅದ
ನ್ನು ಕೇಳಿ ಜಾಗ್ರತನಾಗಿ ಬಂದನು ॥೪೧॥ ಆ ತೀರ್ಥ ಮಹಿಮೆಯನ್ನು
ಕಂಡು ಸಂತುಷ್ಟನಾಗಿ ಪ್ರೀತಿಯಿಂದ ನೆಗೆದು ಆ ತೀರ್ಥದ ಮಧ್ಯದಲ್ಲಿ ಕಳ

ದಾರಾತ್ರ್॥ಉತ್ಪಪಾತತತ್ರತಸ್ತೀರ್ಥಮಧ್ಯೇದೇವೇಶ್ವರೋವಿಭುಃ॥೪೨॥ ಉನ್ಮಜ್ಯಹರ್ಷಸಂಯುಃಕ್ತೋಪ್ಯೋತ್ತೀರ್ಯಸಲಲಾಂತಿಕೇ॥ಧೃಷ್ಟ್ವಾವಿ ನಷ್ಟಾಂಬ್ರಹ್ಮಹತ್ಯಾಮತೀವಮುಮುದೇಸ್ವರಾಟ್ ॥ ೪೩ ॥ ತತಃ ಸಂಕಲ್ಪ್ಯವಿಧಿವತ್ರಾಸ್ನಾನಂಚಕ್ರೇಸುರೇಶ್ವರಃ ॥ ಸಮಾಯಾತ್ರೈಃಸು ರೈಃಸಾರ್ಧಂತೀರ್ಥಂಸಂಪೂಜ್ಯಭಕ್ತಿತಃ ॥೪೪॥ ವರಂದದೌಸುರ ಶ್ರೇಷ್ಠೋಮಧ್ಯಾತ್ಸ್ನಾನಂಕರೋತಿಯಃ ॥ ಉತ್ಪ್ಲುತ್ಯೈವಚ ಪಾ ಷಾಣಾದುತ್ತರಾಭಿಮುಖೋನರಃ ॥೪೫॥ ಬಹ್ಮಹತ್ಯಾದಿಪಾಪಾನಿನ ಶ್ಯಂತ್ಯೇವಮಮಾಜ್ಞಯಾ ॥ ಅಶ್ವಮೇಧಾದಿಯಜ್ಞಾನಾಂಫಲಂ ಪ್ರಾಪ್ನೋತಿನಿತ್ಯಶಃ ॥೪೬॥ ಇತಿದತ್ವಾವರಂದೇವೋಯಯೌಸಂ ತುಷ್ಟಮಾನಸಃ॥ ತದಾಪ್ರಭೃತಿಲೋಕೇಷುಸ್ನಾನಂಮುಸಲವತ್ಸ್ಮೃತಂ ॥ ೪೭ ॥ ಮಿತ್ರಾವರುಣಶಾಪಾಂಚಯದಾಚಭುವನಂಗತಾ ॥

ನಾದ ಆ ದೇವಸ್ವಾಮಿಯು ಮೇಲಿನಿಂದ ಕುಪ್ಪಳಿಸಿ ಹಾರಿದನು॥೪೨॥ ಮುಳುಗಿ ಸಂತೋಷ ಭರಿತನಾಗಿ ನೀರಿನ ಮೇಲ್ಭಾಗದಲ್ಲಿ ಬಂದು ಆ ಕ್ಷಣವೇ ನಾಶವಾದ ಬ್ರಹ್ಮ ಹತ್ಯೆವನ್ನು ಕಂಡು ಆ ದೇವಸಾರ್ವಭೌಮ ನು ಸಂತೋಷಿಸಿದನು ॥ ೪೩ ॥ ಆ ಮೇಲೆ ಅಲ್ಲಿ ಬಂದ ಸಮಸ್ತ ದೇವ ತೆಗಳಿಂದ ಕೂಡಿಕೊಂಡು ಸಂಕಲ್ಪವನ್ನು ಮಾಡಿ ಶಾಸ್ತ್ರಪ್ರಕಾರ ಆ ದೇವಸ್ವಾಮಿಯು ಸ್ನಾನವನ್ನು ಮಾಡಿದನು. ವಿಶ್ವಾಸದಿಂದ ತೀರ್ಥವ ನ್ನು ಪೂಜಿಸಿ॥೪೪॥ ದೇವೇಂದ್ರನು ನನ್ನಂತೆ ಕಲ್ಲಿನ ದೆಸೆಯಿಂದ ಕುಪ್ಪ ಳಿಸಿ ಉತ್ತರಾಭಿಮುಖನಾಗಿ ಯಾವನು ಹಾರಿ ಸ್ನಾನವನ್ನು ಮಾಡುವ ನೋ॥೪೫॥ ಆ ಮನುಷ್ಯನಿಗೆ ನನ್ನ ಪ್ಪಣೆಯಿಂದ ಬಹ್ಮಹತ್ಯೆ ಮೊದಲಾದ ಪಾಪಗಳು ನಾಶವಾಗಲಿ ಮತ್ತು ಅವನು ಅಶ್ವಮೇಧಾದಿ ಯಜ್ಞಗಳ ಫಲವನ್ನು ನಿತ್ಯದಲ್ಲಿಯೂ ಪಡೆಯಲಿ॥೪೬॥ಎಂದು ವರವನ್ನು ಕೊಟ್ಟನು. ಆಮೇಲೆ ಸಂತೋಷದಿಂದ ಪ್ರಯಾಣ ಮಾಡಿದನು. ಆ ಮೊದಲು ಲೋಕ ಗಳಲ್ಲಿ ಮುಸಲದಂತೆ ಇಲ್ಲಿ ಸ್ನಾನವೆಂದು ಪ್ರಸಿದ್ಧವಾಯಿತು ॥೪೭॥

ತದಾಪುರೂರವಾರಾಜಾರಾಜ್ಯಭಾರವ ಥಾಕರೋತ್ ॥೪೮॥ ತಂ ಪ್ರಾಪ್ಯಸಮಯಂಕೃತ್ವಾರೇಮೇತೇನಸಮಾದಶ ॥ ನಿಸ್ತೀರ್ಣಸಮಯಾಸಾತುಮಾತೃಕಾಪಿಲಯಂಯಯೌ ॥೪೯॥ ತತ್ರಪ್ರಸೂಯಪುತ್ರಾಂಸ್ತುದಶಸಂಖ್ಯಾಂಸ್ತದಾನೃಪಃ ॥ ಉವಾಚಹ್ಯುರ್ವಶೀಂಭದ್ರೇವಸಮತ್ಸಂನಿಧೌನಿತಿ ॥ ೫೦ ॥ ನಾಯಾಸ್ಯೇನೃಪವರ್ಯಾದ್ಯಯಜಯಜ್ಞೈಃಸುರಾನಿಹ ॥ ಇತ್ಯುಕ್ತ್ವಾಸಾಯಯೌಸ್ವರ್ಗಂತಥಾಚಕ್ರೇನೃಪಃಸ್ವಯಂ ॥೫೧॥ ಪುತ್ರೇಷುರಾಜ್ಯಂನಿಕ್ಷಿಪ್ಯಯಯೌಸ್ವರ್ಗಮಿಹೈವತು ॥ ಅಂಬ ತೀರ್ಥಪ್ರಭಾವೇನಸ್ವರ್ಗೇದೇವಸುಖೀಭವೇತ್ ॥೫೨॥ ಏತತ್ತೀರ್ಥಸಮಂತೀರ್ಥಂನಭೂತಂನಭವಿಷ್ಯತಿ ॥

ಪೂರ್ವದಲ್ಲಿ ಹೇಳಿದ ಮಿತ್ರಾವರುಣರ ಶಾಪದದೆಸೆಯಿಂದ ಊರ್ವಶಿಯುಯಾವಾಗ ಭೂಲೋಕವನ್ನು ಹೊಂದಿದಳೋ ಆಗ ಪುರೂರವನೆಂಬ ರಾಜನು ರಾಜ್ಯಭಾರವನ್ನು ಮಾಡುತ್ತಿದ್ದನು ॥ ೪೮ ॥ ಇವಳು ಅವನನ್ನು ಸೇರಿ ಒಂದು ಸಂಕೇತವನ್ನು(ಗುರುತು)ಮಾಡಿಕೊಂಡು ಅವನಿಂದ ಕೂಡಿ ಹತ್ತು ವರ್ಷ ಕಾಲ ರಮಿಸುತ್ತಿದ್ದಳು. ಯಾವಾಗ ಗೊತ್ತು ಮಾಡಿದ ಗುರುತನ್ನು ತಪ್ಪಿದನೋ ಅಪ್ಪರಲ್ಲಿಯೇ ಇವಳು ಇವನನ್ನು ಬಿಟ್ಟು ಅಂಬಾ ತೀರ್ಥವನ್ನು ಸೇರಿದಳು ॥ ೪೯ ॥ ಪುರೂರವನಿಂದ ಧರಿಸಿದ ಹತ್ತು ಮಕ್ಕಳನ್ನು ಆ ದಡದಲ್ಲಿ ಹೆತ್ತಳು. ಆಗ ಪುರೂರವನು ಇನ್ನು ನನ್ನ ಸನ್ನಿಧಿಯಲ್ಲಿ ಕೆಲವು ದಿನ ಇರು ಎಂದು ಊರ್ವಶಿಯುನ್ನುಕುರಿತು ಎಂದನು ॥ ೫೦ ॥ ಎಲೈ ರಾಜಶ್ರೇಷ್ಠನೇ, ಈಗ ಬರುವುದಿಲ್ಲ. ಇಷ್ಟ ಇದ್ದರೆ ಇಲ್ಲಿ ದೇವತೆಗಳನ್ನು ಯಾಗಗಳಿಂದ ಪೂಜಿಸು. ಹೀಗೆ ಹೇಳಿ ಅವಳು ಸ್ವರ್ಗವನ್ನು ಸೇರಿದಳು. ಅರಸನು ಕೂಡ ಹಾಗೆಯೇ ಮಾಡಿದನು ॥೫೧॥ ಮಕ್ಕಳಲ್ಲಿ ರಾಜ್ಯಭಾರವನ್ನಿಟ್ಟು ಇಲ್ಲಿಯೇ ಸ್ವರ್ಗವನ್ನೈದಿದನು.ಅಂಬಾತೀರ್ಥದ ಪ್ರಭಾವದಿಂದ ಸ್ವರ್ಗದಲ್ಲಿ ದೇವತೆಗಳಂತೆ ಸುಖಿಯಾಗಿದ್ದನು॥೫೨॥ ಆದುದರಿಂದ ಈ ತೀರ್ಥಕ್ಕೆ ಸದೃಶವಾದ ತೀರ್ಥವು ಯಾವುದೂ ಇಲ್ಲ. ಇಲ್ಲಿ ಸ್ನಾನವನ್ನುಮಾಡಿ

ಅತ್ರಸ್ನಾತ್ವಾಶುಚಿರ್ಭೂತ್ವಾಪಿತೄನಭ್ಯರ್ಚ್ಯತರ್ಪಣೈಃ ॥ ೫೩ ॥ ಅಷ್ಟಾಕ್ಷರಂವೈಷ್ಣವಂತ್ರಂಜಪೇದಷ್ಟೋತ್ತರಂಶತಂ ॥ ವಿಭಾಂಡಕಮುನಿಸ್ತತ್ರತಪಸ್ತೇಪೇಪುರಾದ್ವಿಜಾಃ ॥೫೪॥ ಸರ್ವಪಾಪಾನಿನಶ್ಯಂತಿಚಾಶ್ರಮಸ್ಯಚದರ್ಶನಾತ್॥ ಈಶಾನ್ಯೇಚಮಹಾಮೇರೋರ್ದರ್ಶನಂಯಃಕರೋತಿವೈ ॥ ೫೫ ॥ ವೈಕುಂಠದರ್ಶನಫಲಂಲಭತೇಸನರೋಭುವಿ ॥ ಪುರಾಪುರಾರಿರ್ಭಗವಾನೇಕದಾಪಾರ್ವತೀಯುತಃ ॥ ೫೬ ॥ ಚತುರ್ವೇದವೃಷಾರೂಢಃಸಂಚಚಾರನಭೋಂಗಣೇ॥ಕೇನಚಿತ್ಕಾರಣೇನೈವತೃಷಾರ್ತಾಪರಮೇಶ್ವರೀ ॥ ೫೭ ॥ ಉವಾಚಕಾನ್ತಂಪ್ರಸ್ತುತ್ಯತೃಷಾಮಾಂಬಾಧತೇಶಿವ॥ ತಚ್ಛ್ರುತ್ವಾಪಾರ್ವತೀ

ಶುಚಿಯಾಗಿ ತಿಲತರ್ಪಣಗಳಿಂದ ಪಿತೃಗಳನ್ನು ಪೂಜಿಸಿ॥ ಮಹಾವಿಷ್ಣು ಸಂಬಂಧವಾದ ಅಷ್ಟಾಕ್ಷರ ಮಂತ್ರವನ್ನು ನೂರೆಂಟು ಸಾರಿ ಜಪಿಸತಕ್ಕದ್ದು. ಎಲೈ ಶೌನಕಾದಿ ಋಷಿಗಳಿರಾ, ಪೂರ್ವದಲ್ಲಿ ವಿಭಾಂಡಕಮುನಿಯು ಮಾರ್ಕಂಡೇಯನನ್ನು ಪಡೆಯುವದಕ್ಕೋಸ್ಕರ ತಪಸ್ಸನ್ನು ಮಾಡಿ ಇಷ್ಟಾರ್ಥವನ್ನು ಪಡೆದಿದ್ದನು॥೫೩॥೫೪॥ಆ ಆಶ್ರಮ ದರ್ಶನದ ದೆಸೆಯಿಂದ ಸಮಸ್ತ ಪಾಪಗಳೂ ನಾಶವಾಗುವುವು. ಈ ತೀರ್ಥದ ಈಶಾನ್ಯ ದಿಕ್ಕಿನಲ್ಲಿರುವ ಮಹಾಮೇರುಪರ್ವತದ ದರ್ಶನವನ್ನು ಯಾವನು ಮಾಡುವನೋ ॥ ೫೫ ॥ ಆ ಮನುಷ್ಯನು ಭೂಲೋಕದಲ್ಲಿಯೇ ವೈಕುಂಠ ದರ್ಶನಫಲವನ್ನು ಹೊಂದುವನು. ಪೂರ್ವದಲ್ಲಿ ಒಂದಾನೊಂದು ಕಾಲದಲ್ಲಿ ತ್ರಿಪುರಾಂತಕನಾದ ಶ್ರೀ ಪರಮೇಶ್ವರನು ಶ್ರೀ ಗಿರಿಜಾದೇವಿಯಿಂದೊಡಗೂಡಿದವನಾಗಿ ॥೫೬॥ ನಾಲ್ಕು ವೇದಮಯವಾದ ವೃಷಭವನ್ನು ಆರೋಹಿಸಿದವನಾಗಿ ತನ್ನ ಮಹಿಮೆಯಿಂದ ಆಕಾಶದಲ್ಲಿ ಸಂಚರಿಸುತ್ತಿದ್ದನು. ಯಾವುದೋ ಒಂದು ಲೋಕೋಪಕಾರವಾದ ಕಾರಣದಿಂದ ಶ್ರೀ ಪರಮೇಶ್ವರಿಯು ಬಾಯಾರಿಕೆಯುಳ್ಳವಳಾಗಿ ॥ ೫೭ ॥ ಪತಿಯಾದ ಪರಮೇಶ್ವರನನ್ನು ಕುರಿತು ಎಲೈ ಮಂಗಲಸ್ವರೂಪನಾದ ದೇವನೆ, ನನ್ನನ್ನು ತೃಷೆಯು ಬಾಧಿಸುತ್ತದೆ ಎಂದು ಸ್ತುತಿಸಿ ಪ್ರಾರ್ಥಿಸಿದಳು. ಪರ

ವಾಕ್ಯಂಶೂಲಮಾದಾಯಶಂಕರಃ ॥೫೮॥ ನಿಚಖಾನಭುವಂದೇವೋ ಪಾತಾಳಾಜ್ಜಲಮುದ್ವಹನ್ ॥ ಸ್ವರ್ಣಲಿಂಗಸಮೀಪಸ್ಥಂಗಂಗಾಯಾಃಪಾವನಂಶಿರಂ॥೫೯॥ ಪಾಪೌದೇವೀಜಗದ್ಧಾತ್ರೀಶುಚಿಸ್ನಾತ್ವಾ ಸುವಿಸ್ಮಿತಾ॥ಸಂತುಷ್ಟೇನೈವಮನಸಾತತ್ತೀರ್ಥಸ್ಯವರಂದದೌ॥೬೦॥ ಮನ್ನಿಮಿತ್ತಮಿದಂತೀರ್ಥಂಕೃತಂಭಗವತಾಯತಃ ॥ ಅತೋಮನ್ನಾಮಧಾತ್ರ್ಯಸ್ತುಬ್ರಹ್ಮ್ಯಾದ್ಯಾಃಸರ್ವಮಾತೃಕಾಃ ॥ ೬೧ ॥ ಕುರ್ವಂತುಸನ್ನಿಧಿಂತತ್ರಶುಭದಾಆಜ್ಞಯಾಮಮ ॥ ಅತ್ರಸ್ನಾತ್ವಾ ನರೋಯಸ್ತುಸ್ಮರತ್ಯೇತಾಸ್ತುದೇವತಾಃ ॥ ೬೨ ॥ ನಾಂದೀಮುಖಾಃಕ್ರಿಯಾಸರ್ವಾಃಸಂಭವಂತುದಿನೇದಿನೇ।ಪಿತೄನುದ್ದಿಶ್ಯಯಃಶ್ರಾ

ಮಹೇಶ್ವರನು ಆ ಪಾರ್ವತಿಯ ಮಾತನ್ನು ಕೇಳಿ ತ್ರಿಶೂಲವನ್ನು ತೆಗೆದುಕೊಂಡು ॥ ೫೮ ॥ ಪರಿಶುದ್ಧವಾದ, ಪಾತಾಳದ ಸುವರ್ಣೇಶ್ವರನ ಸಮೀಪದಲ್ಲಿರುವ ಗಂಗೆಯ ನೀರನ್ನು ತರುವವನಾಗಿ ಭೂಮಿಯನ್ನು ಸೇರಿಸಿದನು ॥ ೫೯ ॥ ಲೋಕಮಾತೆಯಾದ ಆ ಪಾರ್ವತೀ ದೇವಿಯೂ ಆ ಕ್ಷಣವೇ ಬಂದ ಪವಿತ್ರವಾದ ಪಾತಾಳ ಗಂಗಾಜಲವನ್ನು ನೋಡಿ ಆಶ್ಚರ್ಯಭರಿತಳಾಗಿ ಸ್ನಾನವಂಮಾಡಿ ಶುಚಿಯಾಗಿ ಆ ಜಲವನ್ನು ಪಾನಮಾಡಿದಳು ಮತ್ತು ಸಂತುಷ್ಟವಾದ ಮನಸ್ಸಿನಿಂದ ಆ ತೀರ್ಥಕ್ಕೆ ವರವನ್ನು ಕೊಟ್ಟಳು ॥ ೬೦ ॥ ನನ್ನ ಉದ್ದೇಶವಾಗಿ ಭಗವಂತನಿಂದ ಯಾವಾಗ ಈ ತೀರ್ಥವು ಮಾಡಲ್ಪಟ್ಟಿತೋ ಆದರಿಂದ ನನ್ನ ನಾಮಧಾರಿಗಳಾದ ಬ್ರಾಹ್ಮೀತ್ಯಾದಿ ಸಮಸ್ತ ಮಾತೃಗಣಗಳೂ ॥೬೧॥ ಇಲ್ಲಿ ನನ್ನ ಅಪ್ಪಣೆಯಿಂದ ಸನ್ನಿಧಿಯನ್ನು ಮಾಡಲಿ. ಇಲ್ಲಿ ಯಾವ ಮನುಷ್ಯನು ಸ್ನಾನಮಾಡಿ ಈ ದೇವತೆಗಳನ್ನು ಸ್ಮರಿಸುವನೋ ॥ ಅವನಿಗೆ ನಾಂದೀಯಜ್ಞದಲ್ಲಿ ಮಾಡತಕ್ಕ ಶುಭಕಾರ್ಯಗಳು ಪ್ರತಿದಿನದಲ್ಲಿಯೂ ವೃದ್ಧಿಗೊಳ್ಳಲಿ. ಪಿತೃಗಳ ಉದ್ದೇಶವಾಗಿ ಇಲ್ಲಿ ಭಕ್ತಿಯಿಂದ ಯಾವನು ಶ್ರಾದ್ಧಮಾಡುವನೋ ॥ ಅವನ ಪಿತೃಗಳಿಗೆ ಕಲ್ಪಾಂತವಾದ ತೃಪ್ತಿಯು

ದ್ಧಂವಮಾತೃಭಕ್ತ್ಯಾಕರೋತಿವೈ ॥೬೩॥ ಕಲ್ಪಾಂತತೃಪ್ತಿರಸ್ತ್ವೇಷಾಂ ಪಿತೄಣಾಂಚಮಮಾಜ್ಞಯಾ। ಕರ್ತುರಿಷ್ಟಾರ್ಥಸಿದ್ಧಿಸ್ಸ್ಯಾತ್ತೀರ್ಥಸ್ಯಾಸ್ಯಪ್ರಭಾವತಃ। ತೀರ್ಥಮೇತನ್ಮುನಿಗಣಾಮಾತೃಕಾಲಯಂ ವಿದುಃ॥ ಅಂಬಾತೀರ್ಥಮಿತಿಹ್ಯೇವಂಪ್ರಥಿತಂಸ್ಯಾದ್ಧರಾತಳೇ ॥೬೪॥ ಇತಿದತ್ವಾವರಂದೇವೀಯಯೌಭಗವತಾಸತೀ । ಇತ್ಯೇತತ್ತೀರ್ಥಮಾಹಾತ್ಮ್ಯಂವರ್ಣಿತಂಹಿಮುನೀಶ್ವರಾಃ ॥೬೫॥ ವಕ್ತಾರಂಶ್ರುಣ್ವತಾಂಚೈವಸರ್ವಾಭೀಷ್ಟಪ್ರದಾಯಕಂ। ಸರ್ವಪಾಪಹರಂಚೈತತ್ತೀರ್ಥಮಾಹಾತ್ಮ್ಯಮುತ್ತಮಂ ॥ ೬೬ ॥ ಶ್ರೀರಾಮಪರ್ವತಸ್ಯಾಧಃಪ್ರಥಿತಂ ಲೋಕಪೂಜಿತಂ । ತತ್ಪುರಸ್ತಾನ್ಮಹತ್ತೀರ್ಥಂನಾಗತೀರ್ಥಮಿತಿ ಸ್ಮೃತಂ ॥ ೬೭ ॥ ತತ್ತೀರ್ಥಸ್ನಾನಮಾತ್ರೇಣನರಃಸ್ವರ್ಗೇಮಹೀ

ನನ್ನ ಅಪ್ಪಣೆಯಿಂದ ಆಗಲಿ ಮತ್ತು ಈ ತೀರ್ಥದ ಮಹಿಮೆಯಿಂದ ಕರ್ತೃವಿಗೆ ಇಷ್ಟಾರ್ಥ ಸಿದ್ಧಿಯೂ ಆಗಲಿ ॥೬೩॥ ಸಮಸ್ತ ಋಷಿಗಳ ಸಮೂಹಗಳು ಮಾತೃಕಾನಿಲಯವೆಂದು ತಿಳಿಯುವರು. ಅಂಬಾತೀರ್ಥವೆಂದು ಭೂಲೋಕದಲ್ಲಿ ಪ್ರಸಿದ್ಧಿಯೂ ಆಗಲಿ ॥೬೪॥ ಈ ಪ್ರಕಾರವಾಗಿ ಪತಿವ್ರತೆಯಾದ ಆ ಪಾರ್ವತೀದೇವಿಯು ವರವನ್ನು ಕೊಟ್ಟು ಶ್ರೀ ಭಗವಂತನೊಡಗೂಡಿ ಇಷ್ಟಾನುಸಾರವಾಗಿ ಪ್ರಯಾಣ ಮಾಡಿಸಿದಳು. ಎಲೈ ಶೌನಕಾದಿ ಮುನಿಶ್ರೇಷ್ಠರಿರಾ, ಈ ಪ್ರಕಾರವಾದ ಈ ತೀರ್ಥದ ಮಹಿಮೆಯನ್ನು ನಿಮಗೋಸ್ಕರ ಹೇಳಿದೆನು॥ ಹೇಳುವವರಿಗೆ ಕೇಳುವವರಿಗೆ ಸಕಲಾಭೀಷ್ಟಪ್ರದವಾಗಿಯೂ ಸರ್ವಪಾಪನಾಶಕವಾಗಿಯೂ ಈ ತೀರ್ಥದ ಮಹತ್ವವು ಇರುವದು॥ ಇದು ಶ್ರೀ ರಾಮಗಿರಿಯ ಕೆಳಭಾಗದಲ್ಲಿರುವುದು. ಲೋಕದಲ್ಲಿ ಪೂಜ್ಯವಾಗಿಯೂ ಪ್ರಸಿದ್ಧವಾಗಿಯೂ ಇರುವುದು. ಅದರ ಪೂರ್ವಭಾಗದಲ್ಲಿ ನಾಗತೀರ್ಥವೆಂಬ ಪ್ರಖ್ಯಾತವಾದ ತೀರ್ಥವು ಇರುವುದು ॥ ೬೭ ॥ ಮನುಷ್ಯನು ಆ ತೀರ್ಥಸ್ನಾನ ಮಾತ್ರದಿಂದ ಸ್ವರ್ಗದಲ್ಲಿ ಸುಖಿಯಾಗುವನು. ವೇದಾಭ್ಯಾಸವು, ವೇದಿಕೆಯಲ್ಲಿ ಹೋಮವು ಇಲ್ಲದ

ಯತೇ । ವೇದವೇದಿವಿಹೀನೋಯಃಸರ್ವಕರ್ಮಬಹಿಷ್ಕೃತಃ ॥೬೮॥ ತತ್ತೀರ್ಥಸ್ನಾನಮಾತ್ರೇಣವೇದಯಜ್ಞಫಲಂಲಭೇತ್। ಕುಷ್ಠಲೂತಾದಿಗುಲ್ಮೇಭ್ಯೋರೋಗೇಭ್ಯೋಮುಚ್ಯತೇನರಃ ॥೬೯॥ ಮುಚ್ಯತೇಸರ್ವಪಾಪೇಭ್ಯಃಸ್ನಾನಶ್ರಾದ್ಧಾದಿನಾದ್ವಿಜಃ।ಪುರಾಕಲ್ಯಾಣಸಮಯಆಗತಾಯೇಫಣೀಶ್ವರಾಃ ॥ ೭೦ ॥ ತಕ್ಷಕಾದ್ಯಾಮಹಾಭಾಗಾಸ್ಮರ್ತುರ್ದುಃಖನಿವಾರಕಾಃ । ಮಹಾಶೇಷೇಣಸಹಿತಾಆಜ್ಞಪ್ತಾಃಶಂಕರೇಣತೇ ॥ ೭೧ ॥ ಕಲಶೇಶಸ್ಯಚೈಶಾನೇವಸಂತ್ಯತ್ರಧುರಾಸದಾಃ ॥ ತೇಷಾಂಸಾನ್ನಿಧ್ಯಮಾತ್ರೇಣತತ್ರತೀರ್ಥಮಭೂತ್ಕಿಲ ॥ ೭೨ ॥ ನಾಗತೀರ್ಥಮಿತಖ್ಯಾತಂದುಷ್ಟರೋಗನಿವಾರಣಂ ॥ ಆಯುರಾರೋಗ್ಯದಂಚೈವಪುತ್ರಪೌತ್ರಪ್ರದಾಯಕಂ ॥ ೭೩ ॥ ಅ

ವನಾರೂ ಸಕಲ ವೇದೋಕ್ತ ಕರ್ಮಗಳಿಲ್ಲದ ಪಾಪಿಯಾದರೂ ॥೬೮॥ ಆ ತೀರ್ಥದ ಸ್ನಾನಮಾತ್ರದಿಂದ ವೇದಾಭ್ಯಾಸ ವೇದಿಕೆಯಲ್ಲಿ ಹೋಮ ಮೊದಲಾದ ಸಕಲ ಕರ್ಮಫಲಗಳನ್ನೂ ಹೊಂದುವನು ಮತ್ತು ಕುಷ್ಠ ಮೊದಲಾದ ಗುಲ್ಮ ರೋಗಗಳ ದೆಸೆಯಿಂದ ಮನುಷ್ಯನು ಬಿಡಿಸಿಕೊಳ್ಳುವನು ॥೬೯॥ ಬ್ರಾಹ್ಮಣನಾದವನು ಇಲ್ಲಿ ಸ್ನಾನ, ತೀರ್ಥ, ಶ್ರಾದ್ಧಾದಿ ಕರ್ಮಗಳನ್ನು ಮಾಡುವುದರಿಂದ ಸರ್ವ ಪಾಪಗಳ ದೆಸೆಯಿಂದ ಬಿಡಿಸಿಕೊಳ್ಳುವನು. ಪೂರ್ವದಲ್ಲಿ ಶ್ರೀ ಗಿರಿಜಾಕಲ್ಯಾಣೋತ್ಸವದಲ್ಲಿ ಯಾವ ನಾಗರಾಜ ॥೭೦॥ ಮಹಾಶೇಷ, ತಕ್ಷಕ ಸಹಿತರಾದ ಸ್ಮರಿಸಿದವರ ದುಃಖವನ್ನು ಪರಿಹರಿಸತಕ್ಕವರು ಬಂದಿದ್ದರೋ ಆ ಫಣೀಶ್ವರರು ಶ್ರೀ ಕಲಶೇಶ್ವರನಿಂದ ಆಜ್ಞಪ್ತರಾಗಿ ॥೭೧॥ ಶ್ರೀ ಕಲಶೇಶ್ವರ ಸ್ವಾಮಿಯವರ ಈಶಾನ್ಯದಲ್ಲಿರುವ ಈ ನಾಗತೀರ್ಥದಲ್ಲಿ ಪ್ರಸಿದ್ಧರಾಗಿರುವರು. ಅವರ ಸಾನ್ನಿಧ್ಯ ಮಾತ್ರದಿಂದಲೇ ಅಲ್ಲಿ ಇದು ॥ ೭೨ ॥ ನಾಗತೀರ್ಥವೆಂದು ಪ್ರಸಿದ್ಧವಾಗಿ ರೋಗ ನಾಶಕವಾಗಿಯೂ ಆಯುಷ್ಯವನ್ನೂ ಆರೋಗ್ಯವನ್ನೂ ಕೊಡುವುದಾಗಿಯೂ ಪುತ್ರ, ಪೌತ್ರಪ್ರದವಾಗಿಯೂ ಇರುವದು ॥೭೩॥ ಈ ತೀರ್ಥದಲ್ಲಿ ಯಾವ ಮನು

ಸ್ಮಿನ್‌ತೀರ್ಥೇನರೋಯಸ್ತು ಶಿಲಯಾಶೇಷರೂಪಿಣಃ।ಜಿಹ್ನಂಕೃತ್ವಾ ಸ್ಥಾಪಯತಿತತ್ಕುಲಂಸಫಣೀಶ್ವರಃ ॥ ೭೪ ॥ ಆಚಂದ್ರತಾರಕಂದೇವಃಸ್ಥಾಪಯಿಷ್ಯತಿಭೂತಳೇ।ತಸ್ಮಾತ್ತತ್ರನರಃಕುರ್ಯಾತ್ಸ್ಥಾಪನಂಭೂಧರಸ್ಯಚ ॥ ೭೫ ॥ ಅಪುತ್ರೋವಾಮೃತಪುತ್ರೋವಾಲಭತೇಪುತ್ರ ಸಂತತಿಂ । ದೀರ್ಘಾಯುಷಿಮರೋಗಿಂಚನಾಗರಾಜಪ್ರಸಾದಃ ॥೭೬॥ಅತ್ರಸ್ನಾತ್ವಾಚವಿಧಿವತ್ಕೃತ್ವಾಕರ್ಮಾಣಿಭಕ್ತಿತಃ। ಇಷ್ಟಾರ್ಥಾಲ್ಲಭತೇಮರ್ತ್ಯಃಪೂತಾತ್ಮಾಸಭವಿಷ್ಯತಿ ॥ ೭೭ ॥ ಏವಂಯಃಪಂಚತೀರ್ಥೇಷುಸ್ನಾತ್ವಾಶಾಸ್ತ್ರವಿಧಾನತಃ । ದೇವಸ್ಯಾಭ್ಯರ್ಚನಂಕುರ್ಯಾತ್ಕಲಶೇಶಸ್ಯಭೂಸುರಾಃ ॥ ೭೮ ॥ ನಾಗತೀರ್ಥಾ

ಷ್ಯನು ಕಲ್ಲಿನಲ್ಲಿ ಮಹಾಶೇಷ ರೂಪಿಯಾದ ಪರಮಾತ್ಮ ಆಕಾರದ ಗುರುತನ್ನು ಮಾಡಿ ಸ್ಥಾಪಿಸುವನೋ ಅಂಥಾವನ ಕುಲವನ್ನು ಆ ನಾಗೇಂದ್ರನಾದ ॥೭೪॥ ದೇವನು ಭೂಲೋಕದಲ್ಲಿ ಸೂರ್ಯಚಂದ್ರರಿರುವವರಿಗೂ ಸುಖವಾಗಿ ನಿಲ್ಲಿಸುವನು. ಆದ್ದರಿಂದ ಅಲ್ಲಿ ಮಹಾಶೇಷನ ಪ್ರತಿಮೆಯನ್ನು ಯಥಾವಿಧಿಯಾಗಿ ಸ್ಥಾಪಿಸುವನು ॥ ೭೫ ॥ ಪುತ್ರ ನಿಲ್ಲದವನೂ ಮೃತ ಪುತ್ರನು ಆದರೂ ಕೂಡ ಈ ಕಾರ್ಯವನ್ನು ವಿಧಿಯಾಗಿ ಮಾಡಿದವನಾದರೆ ರೋಗವಿಲ್ಲದ ದೀರ್ಘಾಯುಷ್ಯವುಳ್ಳ ಪುತ್ರ ಸಂತತಿಯನ್ನು ಶ್ರೀ ಮಹಾಶೇಷದೇವನ ಕೃಪೆಯಿಂದ ಹೊಂದುವನು ॥೭೬॥ ಯಾವ ಮನುಷ್ಯನು ಈ ತೀರ್ಥದಲ್ಲಿ ಸ್ನಾನಮಾಡಿ ವಿಧ್ಯುಕ್ತ ಪ್ರಕಾರವಾಗಿ ಮಾಡತಕ್ಕ ಕರ್ಮಗಳನ್ನು ಭಕ್ತಿಯಿಂದ ಮಾಡುವನೋ ಅವನು ಇಷ್ಟಾರ್ಥವನ್ನು ಹೊಂದುವನು ಪರಿಶುದ್ಧನೂ ಆಗುವನು॥೭೭॥ ಎಲೈ ಶೌನಕಾದಿ ಋಷಿಗಳಿರಾ ಈ ಪ್ರಕಾರ ಯಾವನು ಪಂಚ ತೀರ್ಥಗಳಲ್ಲಿ ಯಾತ್ರಾಕ್ರಮದಿಂದ ಸ್ನಾನಮಾಡುವನೋ ಅವನು ಇದರ ಪರಿಪೂರ್ಣತೆಗೋಸ್ಕರ ಅವನು ಶ್ರೀ ಕಲಶೇಶ್ವರ ಸ್ವಾಮಿಯನ್ನು ಪೂಜಿಸ ಬೇಕು ॥೭೮॥ ಇಂತಹ ನಾಗತೀರ್ಥದ ದೆಸೆಯಿಂದ ಬಲಭಾಗದಲ್ಲಿ ಶ್ರೇಷ್ಠವಾಗಿಯೂ ಮಹತ್ತರವಾಗಿಯೂ ಈಸಿಷ್ಟಋಷೀಶ್ವರನ

ತ್ರತತಃಶ್ರೇಷ್ಠೋವಸಿಷ್ಠಸ್ಯಾಶ್ರಮೋಮಹಾನ್ । ತಜ್ಜನ್ಮಭೂಮಿರ
ತ್ರೈವತುಂಗಭದ್ರಾನದೀತಟೇ ॥ ೭೯ ॥ ತತ್ರವಸಿಷ್ಠತೀರ್ಥಂತು
ಪ್ರಥಿತಂಭುವಿಷಣ್ಮುಖ । ತತ್ರಾಪಿಶ್ರದ್ಧಯಾಯುಕ್ತಃಸ್ನಾತ್ವಾ
ಭ್ಯರ್ಚ್ಯಪಿತೄನ್ನರಃ ॥ ೮೦ ॥ ತತೋವಿಸೃಜ್ಯತದ್ವಸ್ತ್ರಯುಗ್ಮಂ
ಯಾತ್ರಾರ್ಥಮಾಹಿತಂ । ದದ್ಯಾದ್ವಿಪ್ರಾಯತತ್ಸರ್ವಂಗೃಹ್ಣೀ
ಯಾದಾಶಿಷಸ್ತತಃ ॥ ೮೧ ॥ ಸ್ವರ್ಣದಾನಂಚಗೋದಾನಂಯ
ಥಾಶಕ್ತ್ಯಸಮಾಚರೇತ್ । ತತ್ತೀರ್ಥಾಧಿಪತಿಂದೇವಂಕಾಲಭೈರವ
ಮವ್ಯಯಂ ॥ ೮೨ ॥ ಸಂಪೂಜ್ಯಪರಯಾಭಕ್ತ್ಯಾವಾಣಕಾನಾಂ
ಚಮಾಲಯಾ । ಪ್ರಣಮೇದ್ದಂಡವದ್ಭೂಮೌತೀರ್ಥಯಾತ್ರಾಫಲಂ

ಶ್ರಮವಿರುವುದು. ಆ ಮುನಿಯು ಬ್ರಹ್ಮದೇವನ ಪುತ್ರನಾಗಿ ನಿಮಿಚಕ್ರವರ್ತಿಯ ಶಾಪದ ದೆಸೆಯಿಂದ ಈ ಮಿತ್ರಾವರುಣ ಕ್ಷೇತ್ರದಲ್ಲಿ ಹುಟ್ಟಬೇಕಾಯಿತು. ಆದುದರಿಂದ ಆ ತುಂಗಭದ್ರಾ ನದಿಯ ತೀರವಾದ ಈ ಪ್ರದೇಶವೇ ಆತನ ಜನ್ಮಭೂಮಿಯಾಗಿರುವುದು ||೭೯|| ಎಲೈ ಷಣ್ಮುಖನೇ, ಅಲ್ಲಿ ವಸಿಷ್ಠ ತೀರ್ಥವೆಂದು ಭೂಲೋಕದಲ್ಲಿ ಪ್ರಸಿದ್ಧವಾಗಿರುವುದು. ಮನುಷ್ಯನು ಅಲ್ಲಿಯೂ ಸ್ನಾನಮಾಡಿ ಪಿತೃಕಾರ್ಯಗಳನ್ನು ಮಾಡಿ || ೮೦ || ಆ ಮೇಲೆ ಯಾತ್ರೆಗೋಸ್ಕರ ಎರಡು ವಸ್ತ್ರಗಳನ್ನು ಪುರೋಹಿತನಾದ ಬ್ರಾಹ್ಮಣನಿಗೆ ಕೊಡತಕ್ಕದ್ದು. ಆ ಬ್ರಾಹ್ಮಣನ ದೆಸೆಯಿಂದ ತೀರ್ಥಯಾತ್ರೆಯು ಸಂಪೂರ್ಣವಾಯಿತೆಂಬ ಆಶೀರ್ವಾದಗಳನ್ನು ಪಡೆಯಲಿ || ೮೧ || ಸುವರ್ಣದಾನ ಗೋದಾನವನ್ನು ಶಕ್ತ್ಯನುಸಾರವಾಗಿ ಮಾಡಿ ಆ ತೀರ್ಥಾಧಿಪತಿಯಾದ, ನಾಶರಹಿತನಾದ ಕಾಲಭೈರವ ದೇವನನ್ನು ಉತ್ತಮವಾದ ಭಕ್ತಿಯಿಂದ ಆಂಬೊಡೆ ಸರದಿಂದ ಪೂಜಿಸಿ ಭೂಮಿಯಲ್ಲಿ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ತೀರ್ಥಯಾತ್ರಾ ಫಲವನ್ನು ಈ ದೇವನ ಅನುಗ್ರಹದಿಂದ ಪಡೆದು ಅಲ್ಲಿಂದ ಬ್ರಾಹ್ಮಣಾಶೀರ್ವಚನವನ್ನು ಹೊಂದಬೇಕು || ೮೨ || ಪಂಚತೀರ್ಥದ ದೆಸೆಯಿಂದ ತಂದ ಜಲದಿಂದ ಶಾಸ್ತ್ರ

ಲಭೇತ್ ॥ ೮೩ ॥ ಪಂಚತೀರ್ಥಾನ್ಯತೋನ್ಯೇವ ಜಲೇನ ಕಲಶೇಶ್ವರಂ ।
ರುದ್ರಾಭಿಷೇಕವಿಧಿನಾ ಸಂಪೂಜ್ಯ ಚ ಯಥಾವಿಧಿ ॥ ೮೪ ॥ ತೀರ್ಥ-
ಯಾತ್ರಾಫಲಂ ತಸ್ಮೈ ಶಿವಾಯ ಚ ನಿವೇದಯೇತ್ । ತದ್ದಿನೇ ವಾ
ಪರೇದ್ಯುರ್ವಾ ಷಡ್ರಸೈಃ ಸೂಪಸರ್ಪಿಭಿಃ ॥ ೮೫ ॥ ಬ್ರಾಹ್ಮಣಾ
ನ್ಭೋಜಯೇತ್ತತ್ರ ಶತಮಷ್ಟೋತ್ತರಂ ತತಃ ॥ ತದರ್ಧಂ ವಾ ತದ
ರ್ಧಂ ವಾ ರುದ್ರಸಂಖ್ಯಾನಪಿ ದ್ವಿಜಾನ್ ॥೮೬॥ ಯಾತ್ರಾಸಾದ್ಗುಣ್ಯ
ತಾಂತೇಭ್ಯೋ ಗೃಣ್ಹೀಯಾದಾಶಿಷಂ ನರಃ । ಅಥವಾ ಪ್ರತಿತೀರ್ಥೇ
ಷು ಚೈಕೈಕಸ್ಮಿನ್ದಿನೇ ದ್ವಿಜಃ ॥ ೮೭ ॥ ಕುರ್ವನ್ ಸ್ನಾನಾದಿಕ
ರ್ಮಾಣಿ ತೀರ್ಥಂ ಸಂಗೃಹ್ಯ ಯತ್ನತಃ ॥ ಪಂಚಮೇ ವಾಥ ಷಷ್ಠೇ ವಾ

ನುಸಾರವಾಗಿ ಶ್ರೀ ಕಲಶೇಶ್ವರ ಸ್ವಾಮಿಯನ್ನು ರುದ್ರಾಭಿಷೇಕ ವಿಧಿ
ಯಿಂದ ಪೂಜಿಸಿ ॥೮೪॥ ಭೈರವದೇವನಿಂದ ಹೊಂದಿದ ತೀರ್ಥಯಾತ್ರಾ
ಫಲವನ್ನು ಮಂಗಲನಾದ ಆ ಕಲಶೇಶ್ವರಸ್ವಾಮಿಗೋಸ್ಕರ ಅರ್ಪಿಸಬೇಕು.
ಆ ದಿನವೇ ಆಗಲಿ, ಮಾರನೆಯ ದಿನವೇ ಆಗಲಿ ಷಡ್ರಸ ಪಾಕಗಳಿಂದ
ತೊವ್ವೆ, ತುಪ್ಪಗಳಿಂದ ॥ ೮೫ ॥ ನೂರೆಂಟು ಮಂದಿ ಬ್ರಾಹ್ಮಣರನ್ನು
ಭೋಜನ ಮಾಡಿಸಬೇಕು. ಅಸಾಧ್ಯವಾದರೆ ಐವತ್ತು ನಾಲ್ಕು ಜನರ
ನ್ನಾಗಲಿ ಅಥವಾ ಇಪ್ಪತ್ತೇಳು ಮಂದಿಯನ್ನಾಗಲಿ ಆದೂ ಅಸಾಧ್ಯವಾ
ದಲ್ಲಿ ಹನ್ನೊಂದು ಮಂದಿ ಬ್ರಾಹ್ಮಣರನ್ನಾದರೂ ಭೋಜನ ಮಾಡಿಸಬೇ
ಕು ॥ ೮೬ ॥ ತೀರ್ಥಯಾತ್ರೆ ಮಾಡಿದ ಮನುಷ್ಯನು ಆ ಬ್ರಾಹ್ಮಣರ
ದೆಸೆಯಿಂದ ಯಾತ್ರೆಯ ಫಲರೂಪವಾದ ಆಶೀರ್ವಾದವನ್ನು ಪರಿಗ್ರಹಿಸ
ತಕ್ಕದ್ದು ಅಥವಾ ಒಂದೇ ದಿನ ಪಂಚತೀರ್ಥಯಾತ್ರೆ ಮಾಡಲು ಸಾಧ್ಯ
ವಿಲ್ಲದಿದ್ದರೆ ಎಲ್ಲಾ ತೀರ್ಥಗಳಲ್ಲಿಯೂ ಒಂದೊಂದು ದಿನದಲ್ಲಿ ಬ್ರಾಹ್ಮ
ಣನು ॥ ೮೭ ॥ ಸ್ನಾನಾದಿ ಕರ್ಮಗಳನ್ನು ಮಾಡಿ ಪ್ರಯತ್ನದಿಂದ
ತೀರ್ಥೋದಕವನ್ನು ಸಂಗ್ರಹಿಸಿ ಶುಚಿಯಾಗಿ ಇಟ್ಟುಕೊಳ್ಳುತ್ತ
ಐದನೆಯ ದಿನದಲ್ಲಿ ಆಗಲಿ, ಆರನೆಯ ದಿನದಲ್ಲಿ ಆಗಲಿ ಶ್ರೀ ಕಲಶೇ

ದೇವಂ ಶ್ರೀಕಲಶೇಶ್ವರಂ ॥ ೮೮ ॥ ಪೂರ್ವೋಕ್ತವಿಧಿನಾಭ್ಯರ್ಚ್ಯ ಸಂಪ್ರಾರ್ಥ್ಯೇಷ್ಟಮವಾಪ್ನುಯಾತ್ । ಇತ್ಯೇತತ್ಕಥಿತಂವಿಪ್ರಾಃ ಕಲಶೇಶಸ್ಯವೈಭವಂ ॥ ೮೯ ॥ ಸರ್ವದುಃಖಪ್ರಶಮನಂಸರ್ವಸೌಭಾಗ್ಯದಾಯಕಂ । ಸುಖದಂಸರ್ವಪಾಪಘ್ನಮಾಯುರಾರೋಗ್ಯವರ್ಧನಂ ॥ ೯೦ ॥ ಯಏತದ್ದೇವದೇವಸ್ಯಮಾಹಾತ್ಮ್ಯಂ ಮಂಗಲಪ್ರದಂ । ಶುಚಿರ್ಭೂತ್ವಾತ್ರಿಸಂಧ್ಯಂತುಪಠತೇಭಕ್ತಿಪೂರ್ವಕಂ ॥೯೧॥ತಸ್ಮೈಶ್ರೀಕಲಶೇಶಸ್ತುಸರ್ವಕಾಮಾನ್ಪ್ರದಾಸ್ಯತಿ। ಪ್ರಥಮೇ ಕಲಶೇಶಸ್ಯಪ್ರಾದುರ್ಭಾವಉದೀರಿತಃ ॥ ೯೨ ॥ ದ್ವಿತೀಯೇಚತೃತೀಯೇಚಮಹಿಮಾಶ್ರುತಿಚೋದಿತಾ। ಚತುರ್ಥೇಗಿರಿಜೋತ್ಪತ್ತಿ

ಶ್ವರ ಸ್ವಾಮಿಯನ್ನು ॥ ೮೮ ॥ ಪೂರ್ವೋಕ್ತವಿಧಿಯಿಂದ ಪೂಜಿಸಿ ಇಷ್ಟಾರ್ಥವನ್ನು ಹೊಂದತಕ್ಕದ್ದು. ಎಲೈ ಶೌನಕಾದಿ ಮುನಿಗಳಿರಾ, ಈ ಪ್ರಕಾರವಾದ ಈ ಶ್ರೀ ಕಲಶೇಶ್ವರಸ್ವಾಮಿಯವರ ವಿಭವವು ಸಮಸ್ತ ದುಃಖನಾಶಕವಾದುದಾಗಿ ಸಕಲ ಸೌಭಾಗ್ಯದಾಯಕವಾದುದಾಗಿ ಹೇಳಲ್ಪಟ್ಟಿತು. ಸುಖಪ್ರದವಾದ ಸಕಲ ಪಾಪನಾಶಕವಾದ ಆಯುಷ್ಯಾರೋಗ್ಯಾಭಿವೃದ್ಧಿಕರವಾದ ॥ ೮೯ ॥ ೯೦ ॥ ಮಂಗಲಪ್ರದವಾದ ಸಮಸ್ತ ದೇವರಿಗೂ ದೇವನಾದ ಶ್ರೀ ಕಲಶೇಶ್ವರಸ್ವಾಮಿಯ ಸಂಬಂಧವಾದ ಈ ಚರಿತ್ರೆಯನ್ನು ಯಾವನು ಶುದ್ಧನಾಗಿ ತ್ರಿಸಂಧ್ಯದಲ್ಲಿಯೂ ಭಕ್ತಿಪೂರ್ವಕವಾಗಿ ಹೇಳುವನೋ ॥ ೯೧ ॥ ಅವನಿಗೆ ಶ್ರೀ ಕಲಶೇಶ್ವರಸ್ವಾಮಿಯು ಸಕಲ ಮನೋರಥಗಳನ್ನೂ ಕರುಣಿಸುವನು. ಒಂದನೆಯ ಅಧ್ಯಾಯದಲ್ಲಿ ಶ್ರೀ ಕಲಶೇಶ್ವರಸ್ವಾಮಿಯು ಈ ಕಲಶಕ್ಷೇತ್ರದಲ್ಲಿ ಪ್ರಾದುರ್ಭವಿಸಿದ ವಿಷಯವು ಹೇಳಲ್ಪಟ್ಟಿತು. ಎರಡನೆಯ ಮತ್ತು ಮೂರನೆಯದರಲ್ಲಿ ವೇದಪ್ರೋಕ್ತನಾದ ಆ ದೇವರ ಮಹಿಮೆಯೂ ನಾಲ್ಕನೆಯದರಲ್ಲಿ ಶ್ರೀ ಗಿರಿಜಾದೇವಿಯ ಉತ್ಪತ್ತಿಯೂ ತಪಸ್ಸುಮಾಡಿದುದೂ ಐದನೆಯದರಲ್ಲಿ ನಿಶ್ಚಿತಾರ್ಥವೂ ಆರನೆಯದರಲ್ಲಿ ಕನ್ಯಾವರಣವೂ ಏಳನೆಯದರಲ್ಲಿ ವಿವಾಹೋತ್ಸವಕ್ಕೋಸ್ಕರ ದೇವತೆಗಳ ಕರೆ

ತಪಶ್ಚರ್ಯಾದಿವರ್ಣನಂ ॥ ೯೩ ॥ ಪಂಚಮೇನಿಶ್ಚಿತಾರ್ಥಶ್ಚ ಕನ್ಯಾ ವರಣಮನ್ಯತಃ॥ ಸಪ್ತಮೇತುವಿವಾಹಾಯ ದೇವಾಹ್ವಾನಮಿಹೋದಿತಂ ॥ ೯೪ ॥ ಅಷ್ಟಮೇತ್ರುವಿವಾಹಸ್ಯಪ್ರಾರಂಭಃ ಸುಮುಹೂರ್ತಕೇ॥ನವಮೇದ್ವೈವತೈಃಸಾರ್ಧಂಮಂಟಪಸ್ಯವಿನಿರ್ಣಯಃ ॥೯೫॥ ದಶಮೇದೇವದೇವಸ್ಯವಿವಾಹೋತ್ಸವಉಚ್ಯತೇ ॥ ಏಕಾದಶೇತ್ರೀ ಗಿರಿಜಾಪಿತೃಗೇಹಂಯಯಾವಿತಿ ॥೯೬॥ ಕುಂಕುಮೋತ್ಸವ ಇತ್ಯುಕ್ತೋದ್ವಾದಶೇಥತ್ರಯೋದಶೇ॥ತ್ರಿಪುರಾಖ್ಯಾನಮಿತ್ಯುಕ್ತಂ ತ್ರಿಸ್ಸಂಹಾರಶ್ಚತುರ್ದಶೇ ॥ ೯೭ || ತಥಾಪಂಚದಶಾಧ್ಯಾಯೇಪುನರ್ದೇವ್ಯಾಶ್ಚದರ್ಶನಂ ॥ ಸರ್ವಾಂಗಸುಂದರೀದೇವೀಪ್ರಾದುರ್ಭಾವೇನಸಂಯುತಂ ॥೯೮॥ ಶ್ರೀಮತ್ಕಲ್ಯಾಣಚರಿತಫಲೋಕ್ತಿಷ್ಷೋಡಶೇ

ಯೋಣವ್ಯೂ ॥೯೩॥೯೪॥ ಎಂಟನೆಯುದರಲ್ಲಿ ಉತ್ತಮವಾದ ಮುಹೂರ್ತದಲ್ಲಿ ವಿವಾಹೋತ್ಸವಕ್ಕೆ ಪ್ರಾರಂಭವೂ, ಒಂಭತ್ತನೆಯುದರಲ್ಲಿ ದೇವತೆಗಳಿಂದೊಡಗೂಡಿ ಮಂಟಪಸ್ಥಾನ ನಿರ್ಣಯವೂ, ಹತ್ತನೆಯುದರಲ್ಲಿ ಶ್ರೀ ಸ್ವಾಮಿಯವರ ವಿವಾಹೋತ್ಸವವೂ ಹೇಳಲ್ಪಟ್ಟಿತು ॥ ೯೫ ॥ ಹನ್ನೊಂದನೆಯುದರಲ್ಲಿ ಶ್ರೀ ಗಿರಿಜಾದೇವಿಯು ವಿವಾಹ ಮಹೋತ್ಸವ ಮಧ್ಯವಾದ ದ್ವಾದಶೀ ದಿನ ಅರ್ಧರಾತ್ರಿಯಲ್ಲಿ ಶ್ರೀ ಭಗವಂತನನ್ನು ಸೇವಿಸಿ ಅವನ ಅಪ್ಪಣೆಯಿಂದ ಯಾರಿಗೂ ತಿಳಿಯದಂತೆ ತಂದೆಯ ಮನೆಗೆ ಪ್ರಯಾಣ ಮಾಡಿದ ಚರಿತ್ರವೂ॥೯೬॥ಹನ್ನೆರಡನೆಯುದರಲ್ಲಿ ಅವಭೃಥವೆಂಬ ಕುಂಕುಮೋತ್ಸವವೂ ಹದಿಮೂರರಲ್ಲಿ ತ್ರಿಪುರಾಖ್ಯಾನವೂ, ಹದಿನಾಲ್ಕರಲ್ಲಿ ತ್ರಿಪುರಸಂಹಾರವೂ ಹೇಳಲ್ಪಟ್ಟಿದೆ ॥ ೯೭ ॥ ಹಾಗೆಯೇ ಹದಿನೈದನೆಯುದರಲ್ಲಿ ಪುನಃ ಶ್ರೀ ಗಿರಿಜಾದೇವಿಯು ಕಾಣುವಿಕೆಯೂ, ಸರ್ವಾಂಗಸುಂದರೀದೇವಿಯು ಪ್ರಾದುರ್ಭವ ಮೊದಲಾದುವರಿಂದ ಕೂಡಿರುವುದು. ಹದಿನಾರರಲ್ಲಿ ಶ್ರೀ ಗಿರಿಜಾದೇವಿಯು

ಮತಾ ॥ ಶ್ರೀರಾಮಚರಿತಂ ಸಪ್ತದಶಾಧ್ಯಾಯೇಪ್ರಕೀರ್ತಿತಂ॥ ॥೯೯॥ಅಷ್ಟಾದಶೇಗಣೇಶಸ್ಯವಿಭವೋತ್ಪತ್ತಿರುಚ್ಯತೇ॥ಏಕೋನವಿಂ ಶೇದೇವೇನ ತಾಳಾಸುರವಧಾದಿಕಂ ॥೧೦೦॥ ವಿಂಶೇಶನೈಶ್ಚರಕಥಾ ವರದಾ ನಾದಿಸಂಯುತಾ । ಏಕವಿಂಶೇಪಂಚತೀರ್ಥಸ್ನಾನದಾನಾ ದಿಲಕ್ಷಣಂ ॥ ೧೦೧ ॥ ಇತ್ಯೇವಮೇಕವಿಂಶ್ಯಾಖ್ಯೈರಧ್ಯಾಯೈರ್ಮುನಿಸತ್ತಮಾಃ ॥ ಕಲಶಕ್ಷೇತ್ರಮಾಹಾತ್ಮ್ಯಂಕಲಶೇಶ್ವರವೈಭವಂ ॥ ॥೧೦೨॥ ಪ್ರೋಕ್ತಂಮಯಾಯಥಾಜ್ಞಾನಂಯಥಾಧೀತಂದ್ವಿಜೋತ್ತಮಾಃ । ಆಯುಷ್ಯಂಪುಷ್ಟಿದಂನೄಣಾಂ ಭಕ್ತಿಜ್ಞಾನಪ್ರದಾಯಕಂ ॥ ೧೦೩ ॥ ಸರ್ವಪಾಪಹರಂಚೈವತದ್ಭುಕ್ತಿಮುಕ್ತಿಪ್ರದಾಯಕಂ । ಯತ್ರೈವಪಠ್ಯತೇತತ್ರ ದೇವೇಶೋವೃಷಭಧ್ವಜಃ ॥೧೦೪॥

ಕಲ್ಯಾಣೋತ್ಸವ ಮೊದಲಾದ ಚರಿತ್ರೆಯ ಶ್ರವಣಫಲವೂ, ಹದಿನೇಳನೆಯದರಲ್ಲಿ ಶ್ರೀರಾಮ ಚರಿತ್ರೆಯೂ ಹದಿನೆಂಟರಲ್ಲಿ ಗಜರೂಪಿಯಾದ ಶ್ರೀ ಗಣಪತಿ ದೇವನ ಉತ್ಪತ್ತಿಯೂ ಮಹಿಮೆಯು, ಹತ್ತೊಂಬತ್ತರಲ್ಲಿ ಶ್ರೀ ಗಜರೂಪಿಯಾದ ಗಣಪತಿದೇವನಿಂದ ತಾಳಾಸುರನ ಸಂಹಾರ ಮೊದಲಾದ ಚರಿತ್ರವೂ ॥೧೦೦॥ ಇಪ್ಪತ್ತರಲ್ಲಿ ಶನೈಶ್ಚರ ಕಥೆಯೂ, ಶ್ರೀ ಭಗವಂತನ ವರಪ್ರದಾನವೂ ಇಪ್ಪತ್ತೊಂದನೆಯದರಲ್ಲಿ ಪಂಚತೀರ್ಥಯಾತ್ರೆ, ಸ್ನಾನದಾನಾದಿಗಳ ಲಕ್ಷಣವೂ ॥೧೦೧॥ ಈ ಪ್ರಕಾರ ಇಪ್ಪತ್ತೊಂದು ಅಧ್ಯಾಯಗಳಿಂದ ಶ್ರೀ ಕಲಶೇಶ್ವರಸ್ವಾಮಿಯ ಮಹಿಮೆಯೂ ಕಲಶಕ್ಷೇತ್ರ ಮಾಹಾತ್ಮ್ಯೆಯೂ ॥೧೦೨॥ ಎಲೈ, ಬ್ರಾಹ್ಮಣೋತ್ತಮರುಗಳಿರಾ! ನನ್ನಿಂದ ಎಷ್ಟು ತಿಳುವಳಿಕೆ ಇದೆಯೋ ಅಷ್ಟರಮಟ್ಟಿಗೆ ಹೇಳಲ್ಪಟ್ಟಿತು. ಈ ಚರಿತ್ರೆಯ ಶ್ರವಣವು ಆಯುಷ್ಯಾಭಿವೃದ್ಧಿಕರವಾಗಿಯೂ, ಆರೋಗ್ಯಕರವಾಗಿಯೂ ಭಕ್ತಿಜ್ಞಾನಪ್ರದವಾಗಿಯೂ, ಇರುವುದು ॥ ಈ ಚರಿತ್ರ ಶ್ರವಣಪಠನವು ಸಮಸ್ತ ಪಾಪನಾಶಕವಾಗಿ ಇಹ

ಭಗವಾನ್‌ಪಾರ್ವತೀಯುಕ್ತಸ್ಸನ್ನಿಧತ್ತೇಮರೈಸ್ಸಹ॥ಪುಸ್ತಕಸ್ಯಚ
ಪೂಜಾಂತೇಪಿಪ್ರಾಶೀರ್ವಚನೇಕೃತೇ ॥೧೦೫॥ ತಥಾಸ್ತ್ವಿತಿವರಂದ
ತ್ವಾಪ್ಯಯಾಸ್ಯತಿಮಹೇಶ್ವರಃ ॥ ತಸ್ಮಾದವಶ್ಯಂಶ್ರೋತ್ರವ್ಯಂಪಠಿತ
ವ್ಯಂಬುಧೈಃಸದಾ ॥ ೧೦೬ ॥ ಮಾಂಗಲ್ಯಂ ಮಂಗಲಾನಾಂಚಪವಿ
ತ್ರಾಣಾಂಪವಿತ್ರದಂ । ಭೂತಪ್ರೇತಪಿಶಾಚಾನಾಂ ನಾಶನಂಪಾಠ
ಮಾತ್ರತಃ ॥ ೧೦೭ ॥ ಭಗವದ್ಭಕ್ತಿಜನಕಂಸ್ತ್ರೀಬಾಲಾನಾಂ
ಚ ರಕ್ಷಕಂ । ಯತ್ರೈತತ್ಪುಸ್ತಕಂತಿಷ್ಠೇತ್ತತ್ರಶ್ರೀಕಲಶೇಶ್ವರಃ
॥೧೦೮॥ ಗಣಾಧ್ಯಕ್ಷಕುಮಾರಾಭ್ಯಾಂತ್ರಿದೇವ್ಯಾಸಹಿತಃಶಿವಃ। ಇಷ್ಟಾ

ದಲ್ಲಿ ಸುಖಪ್ರದವಾಗಿರುವುದು. ಯಾವ ಸ್ಥಳದಲ್ಲಿ ಈ ಚರಿತ್ರೆಯು ಹೇಳಲ್ಪಡುತ್ತದೆಯೋ ಅಲ್ಲಿ ವೃಷಭಧ್ವಜನಾದ ಶ್ರೀ ಭಗವಂತನನ್ನು ಶ್ರೀ ಪಾರ್ವತಿಯಿಂದಲೂ ದೇವತೆಗಳಿಂದಲೂ ಸಹಿತನಾಗಿ ಸಾನ್ನಿಧ್ಯವನ್ನು ಮಾಡುವನು. ಈ ಪುಸ್ತಕ ಪೂಜೆಮಾಡಿದ ಅನಂತರದಲ್ಲಿ ಬ್ರಾಹ್ಮಣಾ ಶೀರ್ವಾದವು ಮಾಡುತ್ತಿರಲಾಗಿ ||೧೦೫|| ಆಶೀರ್ವಾದದಂತಾಗಲಿ ಎಂದು ಹರಸಿ ಭಗವಂತನು ಅಂತರ್ಧಾನವಾಗುವನು. ಆದುದರಿಂದ ಅವಶ್ಯವಾಗಿ ಕೇಳತಕ್ಕದ್ದು. ಸರ್ವಕಾಲದಲ್ಲಿಯೂ ವಿದ್ವಾಂಸರಿಂದ ಓದತಕ್ಕದ್ದು ಮತ್ತು ಮಂಗಲಗಳಿಗೆ ಮಂಗಲಗಳಾಗಿ ಶುದ್ಧಿಗಳಿಗೆ ಶುದ್ಧಿಯಾಗಿ ಓದಿ ದಮಾತ್ರದಿಂದಲೇ ಈ ಚರಿತ್ರೆಯು ಭೂತ ಪ್ರೇತ ಪಿಶಾಚಗಳಿಗೆ ನಾಶನಕರವಾಗಿರುವದು ||೧೦೭|| ಮತ್ತು ಶ್ರೀ ಭಗವಂತನಲ್ಲಿ ಭಕ್ತಿ ಯನ್ನು ಹೆಚ್ಚಿಸುವುದು. ಸ್ತ್ರೀಯರಿಗೂ ಬಾಲಕರಿಗೂ ರಕ್ಷಾಕರ ವಾಗಿರುವುದು. ಎಲ್ಲಿ ಈ ಪುಸ್ತಕವಿರುವುದೋ ಅಲ್ಲಿ ಶ್ರೀ ಕಲಶೇಶ್ವರ ಸ್ವಾಮಿಯು || ೧೦೮ || ಗಣಾಧ್ಯಕ್ಷ, ಕುಮಾರಸ್ವಾಮಿ ಇವರಿಂದ ಶ್ರೀ ಪಾರ್ವತೀದೇವಿ ಸಹಿತನಾಗಿ ಇಷ್ಟಾರ್ಥವನ್ನು ಕೊಡಲುದ್ಯುಕ್ತನಾಗಿ ಸಾನ್ನಿಧ್ಯವನ್ನು ಮಾಡುವನು. ಎಲೈ ಶೌನಕಾದಿ ಮುನಿಗಳಿರಾ! ಕೇಳಿ

ರ್ಥದಾನಸುಮುಖಃ ಸಾನ್ನಿಧ್ಯಂಕುರುತೇದ್ವಿಜಾಃ ॥೧೦೯॥ ಸ್ವಪಾದಕಮಲೇಭಕ್ತಿಮಚಲಾಂಸಂಪ್ರದಾಸ್ಯತಿಜಾಯತೇಭಗವದ್ಜ್ಞಾನಂಭಕ್ತ್ಯಾದೇವೇಮಹೇಶ್ವರೇ ॥೧೧೦॥ ಅಥಾತ್ರವಕ್ಷ್ಯೆಮುನಯಃ ಅಷ್ಟಾವಕ್ರತಪೋದ್ಭವಂ । ಗಂಗಾದಿಸರಿದುತ್ಪತ್ತಿಕಾರಣಂಬಹುಪುಣ್ಯದಂ ॥ ೧೧೧ ॥ ಅಷ್ಟಾವಕ್ರೋನಾಮಮುನಿಃ ಪುರಾಶ್ರೀಗಿರಿಜಾಂಬಿಕಾಂ । ತಪಸ್ತೇಪೇನಿರಾಹಾರೋವರ್ಷತ್ರಯಮತಂದ್ರಿತಃ ॥೧೧೨॥ದೃಷ್ಟ್ವಾತಪಶ್ಚರಂತಂತಂಪ್ರಾದುರ್ಭೂತ್ವಾಮಹೇಶ್ವರೀ। ಪ್ರೋವಾಚಕಿಂಮುನೇಭೂರಿಸಷ್ಟೇನಕ್ಲೇಶಿತಂವಪುಃ ॥ ೧೧೩ ॥ ಶ್ರೋತುಮಿಚ್ಛಾಮಿತದ್ಬ್ರೂಹಿದಾಸ್ಯಾಮಿ ಮನಸೇಪ್ಸಿತಂ । ಇತಿಶ್ರೀಗಿರಿಜಾದೇವ್ಯಾವಚಶ್ಶ್ರುತ್ವಾಮುನೀಶ್ವರಃ ॥೧೧೪॥ ಪ್ರಾಹಾಂಜಲಿ

॥ ೧೦೯ ॥ ಮತ್ತು ಶ್ರೀ ಭಗವಂತನು ತನ್ನ ಚರಣಕಮಲದಲ್ಲಿ ದೃಢವಾದ ಭಕ್ತಿಯನ್ನು ಕೊಡುವನು, ಎಲೈ ಮುನಿಗಳಿರಾ, ಪರಮಾತ್ಮನಾದ ಶ್ರೀ ಪರಮೇಶ್ವರನಲ್ಲಿ ಸ್ಥಿರವಾದ ಭಕ್ತಿಯನ್ನು ಕಲ್ಪಿಸುವ ಜ್ಞಾನವು ಭಕ್ತಿಯಿಂದಲೇ ಉಂಟಾಗುತ್ತದೆ ॥ ೧೧೦ ॥ ಎಲೈ ಮುನಿಗಳಿರಾ, ಈ ಚರಿತ್ರೆಯಲ್ಲಿ ಅಷ್ಟಾವಕ್ರನೆಂಬ ಮುನಿಯು ತಪಶ್ಚರಿತ್ರೆಯಿಂದ ಗಂಗಾನದಿಗಳಲ್ಲಿ ಉತ್ಪತ್ತಿ ಕಾರಣವಾದ ಪುಣ್ಯತಮವಾದ ಒಂದು ಚರಿತ್ರೆ ಇದೆ. ಅದನ್ನು ಹೇಳುವೆನು ॥೧೧೧॥ ಅಷ್ಟಾವಕ್ರನೆಂಬ ಮುನಿಯು ಕಲಃಕ್ಷೇತ್ರದಲ್ಲಿ ನೆಲಸಿರುವ ಈ ಗಿರಿಜಾದೇವಿಯನ್ನು ಕುರಿತು ನಿಶ್ಚಲನಾಗಿ ಮೂರು ವರ್ಷ ಆಹಾರವಿಲ್ಲದೆ ತಪಸ್ಸನ್ನು ಮಾಡಿದನು॥೧೧೨॥ ಆಮೇಲೆ ಪ್ರತ್ಯಕ್ಷಳಾದ ಶ್ರೀಭಗವತಿಯು ಎಲೈ ಮುನಿಯೇ,ಏನುಕಾರಣದಿಂದ ಇಷ್ಟುಕಷ್ಟವಾದ ತಪಸ್ಸಿನಿಂದ ಶರೀರವನ್ನು ಕಷ್ಟಪಡಿಸಿದೆ॥೧೧೩॥ ಅದನ್ನು ಹೇಳು, ಕೇಳುತ್ತೇನೆ. ನಿನ್ನ ಮನೋಭೀಷ್ಟವನ್ನು ಕೊಡುವೆನು. ಹೀಗೆಂದ ಗಿರಿಜಾದೇವಿಯ ಮಾತನ್ನು ಆ ಮುನೀಶ್ವರನು ಕೇಳಿ ॥೧೧೪॥ ಜೋಡಿಸಲ್ಪಟ್ಟ ಕರ ಸಂಪುಟವುಳ್ಳವನಾಗಿ ಆ ದೇವಿಯು ಅ

ಪುಟಸ್ತಾಂತುಪ್ರಣಾಮಾಮಪುನಃಪುನಃ। ಹರ್ಷಗದ್ಗದಯಾವಾಚಸ್ತು ತ್ಯೋವಾಚಮಹೇಶ್ವರೀಂ ॥ ೧೧೫ ॥ ಕಾಶೀಯಾತ್ರಾನಶಕ್ತಾಮೇ ವಕ್ರದೇಹಸ್ಯಶಂಕರಿ । ತ್ರಿವೇಣೀಸಂಗಮಸ್ನಾನಮರ್ಥಿತಂಯನ್ಮ ಯಾಶಿವೇ ॥ ೧೧೬ ॥ ೧೧೭ ॥ ತಥಾಪ್ರಸಾದಯಸ್ವಾಂಬದಯಾ ಸ್ತಿಯದಿತೇಮಯಿ । ತಥೇತಿದೇವದೇವೇಶ್ಯಾಸ್ವರ್ಣದ್ಯಾದಿಸರಿತ್ರ ಯಂ ॥೧೧೮॥ ಸ್ವತಂತ್ರಶಕ್ತ್ಯಾಜಾನೀಯಶಿವಭಾಗೇನಿವೇಶ್ಯತತ್। ಅಷ್ಟಾವಕ್ರಮುವಾಚಾಥಮುನೇಸ್ನಾನಂಸಮಾಚರ॥೧೧೯॥ ಪ್ರತ್ಯ ಹಂಭಕ್ತಿಯುಕ್ತೋಸಿತಪಸ್ವಿಶುದ್ಧೋಸಿವೈದ್ವಿಜ । ವರಂದದಾಮಿತೇ

ಗಡಿಗೆ ನಮಸ್ಕರಿಸಿದನು. ಮತ್ತು ಆ ದೇವಿಯನ್ನು ಸಂತೋಷಭರಿತವಾದ ನುಡಿಯಿಂದ ಸ್ತುತಿಸಿ ಹೇಳಿದನು ॥ ೧೧೫ ॥ ಎಲೈ ಸುಖಪ್ರದಳಾದ ದೇವಿಯೇ, ವಕ್ರ ಶರೀರಿಯಾದ ನನಗೆ ಕಾಶೀಕ್ಷೇತ್ರ ಯಾತ್ರೆಯು ಅಸಾಧ್ಯವಾಗಿರುವುದು. ಎಲೈ ಪರಮೇಶ್ವರಿಯೇ! ನನ್ನಿಂದ ತ್ರಿವೇಣಿ ಸಂಗಮದಲ್ಲಿ ಸ್ನಾನವು ಅಪೇಕ್ಷಿಸಲ್ಪಟ್ಟಿದೆ. ಎಲೈ ತಾಯಿಯೆ! ನಿನಗೆ ನನ್ನಲ್ಲಿ ದಯವಿದ್ದುದಾದರೆ ಅವನ್ನು ಇಲ್ಲಿ ಕಲ್ಪಿಸು. ಹಾಗೆ ಆಗಲೆಂದು ದೇವೇಶ್ವರಿಯು ಭಾಗೀರಥಿ, ಯಮುನಾ, ಸರಸ್ವತಿ ಎಂಬ ಮೂರು ನದಿಗಳನ್ನೂ ॥೧೧೬॥ ತನ್ನ ಶಕ್ತಿಯಿಂದ ತಂದು ತಾನಿರುವ ಸ್ಥಳದ ಈಶಾನ್ಯ ದಿಕ್ಕಿನಲ್ಲಿ ಸ್ಥಾಪಿಸಿ ಅನಂತರ ಅಷ್ಟಾವಕ್ರಮುನಿಯನ್ನು ಕುರಿತು ಎಲೈ ಮುನಿಯೇ, ಈ ಮೂರು ತೀರ್ಥಗಳಲ್ಲಿ ಸ್ನಾನವನ್ನು ಮಾಡು ಎಂದಳು॥೧೧೭॥ ಪ್ರತಿದಿನದಲ್ಲಿ ನೀನು ಭಕ್ತಿಯುಕ್ತನಾಗಿದ್ದಿ. ಪವಿತ್ರವಾದ ತಪಸ್ಸುಳ್ಳವನಾಗಿದ್ದಿ. ಎಲೈ ಬ್ರಾಹ್ಮಣನೇ, ಈ ತೀರ್ಥದ ವಿಷಯದಲ್ಲಿ ಸಮಸ್ತ ಲೋಕಗಳಿಗೆ ಕ್ಷೇಮಕರವಾದ ವರವನ್ನು ಕೊಡುತ್ತಲಿದ್ದೇನೆ ॥ ೧೧೮ ॥ ಯಾವನು ನಿತ್ಯದಲ್ಲಿಯೂ ಸಂಕಲ್ಪ ಪೂರ್ವಕವಾಗಿ ಸ್ನಾನವನ್ನು ಮಾಡುವನೋ, ನನ್ನಲ್ಲಿರುವ

ರ್ಥೇಸ್ಮಿನ್ ಲೋಕಾನುಗ್ರಹಯಾಗಿರಾ ॥ ೧೨೦ ॥ ಯಸ್ತ್ವತ್ರತೀರ್ಥತ್ರಿತಯೇನಿತ್ಯಂಸಂಕಲ್ಪಪೂರ್ವಕಂ ॥ ಶುಕ್ರವಾರೇವಿಶೇಷೇಣಸ್ನಾತ್ವಾಸಂತರ್ಪ್ಯದೇವತಾಃ ॥ ೧೨೧ ॥ ಋಷೀನ್‌ಪಿತೄಂಶ್ಚಮುದ್ಬಧ್ಯಾತಸ್ಯಾಭೀಷ್ಟಂದದಾಮ್ಯಹಂ । ತೃಪ್ತಾಶ್ಚಪಿತರಃಸರ್ವೇಯಾಂತಿವೈಕುಂಠಮಂದಿರಂ ॥೧೨೨॥ ಅಮಂಗಲನಿವೃತ್ತಿಶ್ಚವೃದ್ಧಿಃಕಲ್ಯಾಣಸಂಪದಾಂ।ಭೂಯಾದಿತಿವರೋದತ್ತಃಸ್ವಸ್ತೀತ್ಯುಕ್ತ್ವಾಯಯೌಶಿವಾ ॥ ೧೨೩ ॥ ಇತ್ಯೇವಂಕಲಶಕ್ಷೇತ್ರಮಾಹಾತ್ಮ್ಯಂಶುಭದಂದ್ವಿಜಾಃ। ವೇದಾರ್ಥಸಹಿತಂಶುದ್ಧಂಪಠತಾಂಚೈವಶೃಣ್ವತಾಂ ॥ ೧೨೪ ॥

ಭಕ್ತಿಯಿಂದ ದೇವತೆಗಳನ್ನೂ ಋಷಿಗಳನ್ನೂ ಪಿತೃಗಳನ್ನೂ ಕುರಿತು ತರ್ಪಣವನ್ನು ಮಾಡುವನೋ ಅಂತಹವನಿಗೆ ಇಷ್ಟಾರ್ಥವನ್ನು ಕೊಡುವೆನು. ಸಮಸ್ತ ಪಿತೃಗಳೂ ಸಂತುಷ್ಟರಾಗಿ ವೈಕುಂಠ ಪದವಿಯನ್ನು ಹೊಂದುವರು ॥ ಮತ್ತು ಅಮಂಗಲವು ತೊಲಗುವುದು. ಶುಭಸಂಪದಗಳ ವೃದ್ಧಿಯೂ ಆಗಲಿ, ಎಂದು ಶ್ರೀ ಗಿರಿಜಾದೇವಿಯಿಂದ ವರವು ಕೊಡಲ್ಪಟ್ಟಿತು; ಆ ಶ್ರೀ ಭಗವತಿಯೂ ನಿನಗೆ ಮಂಗಲವು ಆಗಲೆಂದು ಹೇಳಿ ಅಂತರ್ಧಾನಳಾದಳು ॥ ಎಲೈ ಶೌನಕನಾದಿ ಬ್ರಾಹ್ಮಣರುಗಳಿರಾ! ಈ ಪ್ರಕಾರವಾಗಿ ಕಳಶಕ್ಷೇತ್ರ ಮಾಹಾತ್ಮ್ಯೆಯು ಶುಭಕರವಾಗಿರುವುದು ಮತ್ತು ವೇದಗಳ ತಾತ್ಪರ್ಯಗಳಿಂದ ಕೂಡಿರುವದರಿಂದಲೇ ಪರಿಶುದ್ಧವಾದ ಈ ಮಾಹಾತ್ಮ್ಯೆಯನ್ನು ಕೇಳುವ ಭಕ್ತಿಯುಳ್ಳ ಮಾನವರಿಗೆ ॥ ಸರ್ವವ್ಯಾಪಕನಾದ ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀ ಕಲಶೇಶ್ವರ ಸ್ವಾಮಿಯು ಸಂಪೂರ್ಣ ಇಷ್ಟಾರ್ಥವನ್ನು

ನೃಣಾಂಭಕ್ತಿಮುಕ್ತಾಂಚಾತ್ರ ಪರಮಾತ್ಮಾಮಾಹೇಶ್ವರಃ ॥ ದದ್ಯಾದಿ
ಷ್ಟಾರ್ಥಮಖಿಲಂಭಗವಾನ್ ಕಲಶೇಶ್ವರಃ ॥೧೨೫॥

ಇತಿ ಶ್ರೀ ಸ್ಕಂದಪುರಾಣೇ ತುಂಗಭದ್ರಾಖಂಡೇ ಶ್ರೀ ಕಲಶೇಶ್ವರ
ಮಾಹಾತ್ಮ್ಯೇ ಪಂಚತೀರ್ಥಯಾತ್ರಾ ಪುರಾಣ ಶ್ರವಣಫಲ
ಗಂಗಾದಿ ತೀರ್ಥಪ್ರಸಂಶನಮೇಕವಿಂಶೋಧ್ಯಾಯಃ
ಶ್ರೀ ಕಲಶೇಶ್ವರಾಯ ನಮೋನಮಃ.
॥ ಶ್ರೀ ॥ ಶ್ರೀ ॥ ಶ್ರೀ॥

ಕೊಡುವನೆಂದು ಸೂತ ಪೌರಾಣಿಕನು ನೈಮಿಶಾರಣ್ಯವಾಸಿಗಳಾದ
ಶೌನಕಾದಿ ಮಹರ್ಷಿಗಳಿಗೆ ನಿರೂಪಿಸಿದನು ॥೧೨೫॥

ಈ ಪ್ರಕಾರವಾಗಿ ಸ್ಕಂದ ಪುರಾಣದಲ್ಲಿ ತುಂಗಭದ್ರಾ ಖಂಡದಲ್ಲಿ ಹೇಳಿ
ರುವ ಕಲಶಕ್ಷೇತ್ರದ ಶ್ರೀ ಕಲಶೇಶ್ವರಸ್ವಾಮಿಯವರ ಮಹಿಮೆ
ಯಾದ ಕಲಶಕ್ಷೇತ್ರ ಮಾಹಾತ್ಮ್ಯೆಯಲ್ಲಿ ಕಥಾನುಕ್ರಮಣ,
ಶ್ರವಣ, ಫಲ, ಗಂಗಾ ತೀರ್ಥೋದ್ಭವ ಕಥನವೆಂಬ
ಈ ೨೧ ನೆ ಯ ಅ ಧ್ಯಾ ಯ ವು
ಸಂಪೂರ್ಣವಾದುದು.

ಶ್ರೀ ಕಲಶ ಕ್ಷೇತ್ರ ರುದ್ರಪಾದದ ಅಗ್ರಹಾರ ವಾಸಿಗಳಾದ ದೈವಜ್ಞಕುಲ
ಶಿಖಾಮಣಿ ಸಕಲ ನಿಗಮಾಗಮ ಪಾರಂಗತರಾದ ಶ್ರೌತ
ಕರ್ಮಾಧ್ವರ್ಯಾಂಗಿರಸ ಕುಲೋತ್ಪನ್ನರಾದ ಪುಟ್ಟರಾಮ
ಜೋಯಿಸರ ಪುತ್ರನಾದ

ರಾ ಮ ಜೋ ಯಿ ಸ ರಿಂ ದ

ರಚಿತವಾದ ಕನ್ನಡ ಭಾವಾರ್ಥ ಕಲ್ಪನೆಯಾದ ಈ ಗ್ರಂಥವು
ಸಂ ಪೂ ರ್ಣ ವಾ ದು ದು. ಶ್ರೀ ಶ್ರೀ ಶ್ರೀ.